ಮನುಷ್ಯ ಜಾತಿ
ತಾನೊಂದೆ ವಲಂ

ಸರ್ವಮಂಗಳಾ

ಚದುರಂಗ



ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ಸರ್ವಮಂಗಳಾ

ಚದುರಂಗ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦೦೧೮

Kannada Sahitya Parishattu Centenary Publication

ಸರ್ವಮಂಗಳಾ

ಚದುರಂಗ

ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : ರಾ. ಸೂರಿ

ಪುಟಗಳು : ೩೩೬

ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೧೬೦=೦೦

ಪ್ರಥಮ ಮುದ್ರಣ : ೧೯೫೦

ಪರಿಷತ್ತಿನಿಂದ ಮುದ್ರಣ : ೨೦೧೫

ಪ್ರತಿಗಳು : ೧೦೦೦

ಮುದ್ರಣ
ಗೀತಾಂಜಲಿ ಗ್ರಾಫಿಕ್ಸ್
ನಂ.ಬಿ–೭೧, ಹೊಸ ನಂ.೮೪
ಕೆ.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್
೬ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು – ೫೬೦ ೦೧೦.

SARVAMANGALA - A Novel in Kannada by Chaduranga

published by :

Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : R. Suri

Pages : 336

Paper : 80 G.S.M. N.S. Maplitho

Rs : 160=00

First Edition : 1950

Edition by Parishattu : 2015

Copies : 1000

printed at
Geetanjali Graphics
No.B-71, New No.84
K.S.I.D.C. Industrial Estate
6th Block, Rajajinagar
Bengaluru - 560010.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಮಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಡಾ. ರಾಜಶೇಖರ ಹತಗುಂದಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕಾರ್ಯಕಾರಿ ಸಮಿತಿ

೧

ಹೊಳೆ ಒಣಗಿ ಕೃಶವಾಗಿತ್ತು. ಅಡಿಯ ಮರಳು ಆಳವಿಲ್ಲದ ನೀರಿನಲ್ಲಿ ನಾಚಿ ನಾಚಿ ಹರಡಿದಂತೆ ತೋರುತ್ತಿತ್ತು. ನದಿಯ ಮಧ್ಯದವರೆಗೆ ಹೋದರೂ ಮೊಣಕಾಲು ಮೇಲೆ ನೀರೇ ಕಾಣದು.

ವೃದ್ಧ ದಂಪತಿಗಳಿಬ್ಬರೂ ಹೊಳೆಯ ಮಧ್ಯಕ್ಕೇ ಹೋಗಿ ಸ್ನಾನ ಮಾಡುತ್ತಿದ್ದರು. ಅಷ್ಟು ಮುಳುಗು ಹಾಕಿದಮೇಲೆ ಶಂಕರಯ್ಯ ಪೂರ್ವಾಭಿಮುಖವಾಗಿ ನಿಂತು ಮಂತ್ರಸಹಿತ ಸೂರ್ಯದೇವನಿಗೆ ಅರ್ಘ್ಯ ಕೊಡುವುದರಲ್ಲಿ ನಿರತನಾದ. ಗೌರಮ್ಮ ಕಣ್ಮುಚ್ಚಿ ಮೂಗು ಹಿಡಿದು ಮುಳುಗುಹಾಕುತ್ತಲೇ ಇದ್ದಳು.

ಎರಡು ಬೊಗಸೆ ಅರ್ಘ್ಯ ಕೊಟ್ಟಾಯಿತು. ಮೂರನೇ ಬೊಗಸೆ ನೀರು ಶಂಕರಪ್ಪನ ಜೋಡಿಸಿದ ಅಂಗೈಗಳಲ್ಲಿಯೇ ಇತ್ತು. ಹಠಾತ್ತಾಗಿ ಏನೋ ಅವನನ್ನು ಮೇಲೆತ್ತಿದಂತಾಯಿತು. ಚಕಿತನಾದ ಶಂಕರಪ್ಪ ದೃಷ್ಟಿಯನ್ನು ಹೊರಳಿಸಿದ. ಗೌರಮ್ಮನೂ ಸಹ ಮುಳುಗು ಹಾಕುವಾಗ, ಅನಿರೀಕ್ಷಿತವಾಗಿ ಏರಿಬಂದ ನೀರಿನ ಒತ್ತಡದಿಂದ ಆಯ ತಪ್ಪಿದುದರಿಂದ ತಬ್ಬಿಬ್ಬಾಗಿ ಮಗುಚಿಕೊಂಡು ಮರಳನ್ನು ಅಪ್ಪಿ, ಬಲು ಕಷ್ಟಪಡುತ್ತಾ ಎದ್ದು ನಿಲ್ಲುತ್ತಿದ್ದಳು.

"ಇದೇನೂಂದ್ರೆ ಹಾಳು. ಈ ಸಂಗಮದ ಒಳೆ ಹುಚ್ಚು ಒಳೆ ಅಂತ ಜನ ಆಡಿಕೊಳಾಕು, ತಕ್ಕ ಹಂಗೆ ನೀರು ಎಚ್ಚತ್ತಾ ಇರೊಹಂಗೆ ಕಾಣಿಸ್ತದೆ. ಯೇನೊ, ಯಂತೊ ನಡೀರಿ ಓಗಾವ" ಏದುತ್ತಾ ಏದುತ್ತಾ ಒಂದೇ ಉಸುರಿಗೆ ಹೇಳಿದಳು.

ಹೆಂಡತಿಯ ಮಾತು ಮುಗಿಯುವುದರೊಳಗೆ ನೀರು ಶಂಕರಯ್ಯನ ಸೊಂಟವನ್ನು ಹುಡುಕುತ್ತಿತ್ತು. ಆ ಕ್ಷಣಕ್ಕೆ ಶಂಕರಯ್ಯ ಕೊಂಚಮಟ್ಟಿಗೆ ಅಧೀರನಾದ. ಸಾಧಾರಣವಾಗಿ, ಒಳ್ಳೆಯ ಈಜುಗಾರನಾದ ಶಂಕರಯ್ಯ ಸಾಹಸದ ಪ್ರಕೃತಿಯವನೆಂದು ಹೇಳಬಹುದು. ಭಯಂಕರ ಪರಿಸ್ಥಿತಿ ಒದಗಿದಾಗ ಎದೆಗುಂದುವ ಸ್ವಭಾವವಲ್ಲ ಅವನದು. ಹಿಂದೆ ಅವನು ಒಂಭತ್ತು ಹತ್ತು ವಯಸ್ಸಿನವನಿರುವಾಗಲೇ ಗೆಳೆಯರಿಗೂ ಅವನಿಗೂ ಹಟ ಬಂದು ಅವನ ಹಳ್ಳಿಯ ಮನೆಯ ಮೇಲಿನ ಛಾವಣಿಯ ಮೇಲಿಂದ ಮುಂದಿನ ಬೀದಿಗೆ ನಿರ್ಭಯವಾಗಿ ನೆಗೆದಿದ್ದ. ಇನ್ನೊಂದು ಸಲ ಮನೆಯೊಳಗೆ ಭಾರಿ ಗೋಧಿ ನಾಗರಹಾವೊಂದು ಹರಿದುಬಂದು ನಡುಮನೆ ಸೇರಿ ತೀರ ಅವಾಂತರವಾಗಿತ್ತು. ಬೆಳೆದು ನಿಂತ ಅವನ ನೆಂಟರ ಹುಡುಗರು ಭಯಗ್ರಸ್ತರಾಗಿ ನಡುಗುತ್ತಾ ಹೆಂಗಸರೊಡನೆ ಬೀದಿಯನ್ನು ಸೇರಿದ್ದರು.

ಆಗ ಹೆದರದೆ ಅವನೊಬ್ಬನೇ ತನ್ನ ಮುದಿತಂದೆಯ ಊರುಗೋಲನ್ನು ಎತ್ತಿಕೊಂಡು ಹೋಗಿ ಆ ಭೀಕರ ಸರ್ಪವನ್ನು ಸಾಯಬಡಿದಿದ್ದ.

ಆದರೆ ಇಂದು ಅಷ್ಟು ನಿರ್ಭಯವಾಗಿ ಇರುವಂತಿರಲಿಲ್ಲ ಶಂಕರಯ್ಯ. ಏಕೆಂದರೆ, ಜೊತೆಗೆ ತನ್ನ ಗೌರಮ್ಮನೂ ಇದ್ದಳು.

ಶಂಕರಯ್ಯನ ಧೈರ್ಯದ ಕೋಟೆ ಅಲುಗಾಡಿತು. ಆದರೂ "ಎದರಬ್ಯಾಡ ಗೌರಾ. ನಾ ಇರೂಗಂಟ ಬಯ ಯಾಕೆ ನಿಂಗೇ?" ಎಂದು ತನ್ನ ಚಿತ್ತದೊಳಗೆ ಕಾಲಿಟ್ಟ ಭಯವನ್ನು ಅಟ್ಟುವುದಕ್ಕಾಗಿ ಸ್ವಲ್ಪ ಗಟ್ಟಿಯಾಗಿ ದನಿಯನ್ನು ಏರಿಸಿ ನುಡಿದ.

ಅಷ್ಟು ದೂರಕ್ಕೆ, ದಡಕ್ಕೆ ಸಮೀಪವಾಗಿ ಸ್ನಾನಮಾಡುತ್ತಿದ್ದ ಜನಸ್ತೋಮವನ್ನು ಶಂಕರಯ್ಯ ಒಂದು ಅರೆಕ್ಷಣ ವಿಷಾದದಿಂದ ನಿರೀಕ್ಷಿಸಿದ. ಅತಿ ದೂರವಿಲ್ಲದುದರಿಂದ ಆ ಜನರೆಲ್ಲಾ ಸುರಕ್ಷಿತವಾಗಿ ದಡವನ್ನು ಸೇರುವ ಭರವಸೆಯಿತ್ತು. ಆದರೆ ತಾನು?– ಅಬಲೆಯನ್ನು ಕಟ್ಟಿಕೊಂಡು ನಡುನೀರಿನಲ್ಲಿ ನಿಂತಿದಾನೆ ! .... ಎಂಥ ಮುಠ್ಠಾಳತನ ! ಎಂಥ ಮುಠ್ಠಾಳತನ !!

ಸಾವಿರ ಸಲ ತನ್ನನ್ನು ತಾನೇ ಶಪಿಸಿಕೊಂಡ ಶಂಕರಯ್ಯ ಕಡೆಗೆ ಮಿಂಚಿದ ಕಾರ್ಯವೆಂದು ನಿರ್ಧರಿಸಿ, ಅಂಗೈಯೊಳಗಿದ್ದ ಅರ್ಘ್ಯವನ್ನು ಬೇಗ ಬೇಗ ಬಿಟ್ಟು, ಹಿಂತಿರುಗುವುದರಲ್ಲಿದ್ದ. "ಬಾ ಗೌರ ಎದರಬ್ಯಾಡ," ಎಂದು ಅವನು ತಿರುಗುವಷ್ಟರಲ್ಲಿ ಗೌರಮ್ಮ ಚಿಂತಾಜನಕವಾಗಿ ಚೀರಿದ ಸದ್ದು ಕೇಳಿತು. ಹೆಂಡತಿಯ ದನಿಯನ್ನು ಗುರುತಿಸಿದ ಶಂಕರಯ್ಯ ಆ ಗಳಿಗೆಗೆ ತಲ್ಲಣಿಸಿಹೋದ. ಎತ್ತ ತಿರುಗಿದರೂ ಗೌರಮ್ಮ ಕಾಣದಿರಲು "ಎಲ್ಲಿದೀಯೇ ಗೌರ?" ಎಂದು ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಗಟ್ಟಿಯಾಗಿ ಅರಚಿಕೊಂಡ. ಅವನ ಕೂಗಿಗೆ ಉತ್ತರವಾಗಿ ಪ್ರವಾಹದ ಅಲೆಯೊಂದು ಮೊರೆಯುತ್ತಾ ಬಂದು ಅವನ ಎದೆಯ ಮೇಲೆ ಭೀಷಣವಾಗಿ ಅಪ್ಪಳಿಸಿತೇ ಹೊರತು ಗೌರಮ್ಮನ ಸುಳಿವೇ ಸಿಗಲಿಲ್ಲ.

ದಿಗ್ಭ್ರಾಂತನಾದ ಶಂಕರಯ್ಯ ಕಳವಳಗೊಂಡು ತನ್ನ ಸುತ್ತುಮುತ್ತು ದೃಷ್ಟಿಯನ್ನು ಚಾಚಿದ.

ಪ್ರವಾಹದಿಂದ ಮದಿಸಿದ ಹೊಳೆ ತುಂಬಿ ಹರಿಯುತ್ತಿತ್ತು. ಹಿಂದೆ ಅದರ ಮೈಯಗಲವೂ ಎದ್ದು ತೋರುತ್ತಿದ್ದ ಬಂಡೆಗಳು ಒಂದಾದರೂ ಈಗ ದೃಷ್ಟಿಗೆ ಬೀಳುತ್ತಿಲ್ಲ !

ಭಯವನ್ನೇ ಅರಿಯದ ಶಂಕರಯ್ಯನ ಮುಖ ಭೀತಿಯಿಂದ ಕಪ್ಪಿಟ್ಟಿತು. ಕಣ್ಣಿನ ಮುಂದೆ ಇದ್ದಕ್ಕಿದ್ದಂತೆ ಕಪ್ಪು ತೆರೆಯನ್ನು ಹಿಡಿದಂತಾಯಿತು. ಹೃದಯ ಪ್ರಚಂಡ ವೇಗದಲ್ಲಿ ಹೊಯ್ದುಕೊಳ್ಳಲು ಆರಂಭಿಸಿ ತನ್ನ ಸದ್ದಿನಿಂದ ಪ್ರವಾಹದ ಭೀಷಣ ರವ ಅವನ ಕರ್ಣಗಳಿಗೆ ಕೇಳದಂತೆ ಮಾಡಿತು.

ಕುಡಿತದಿಂದ ಇಂದ್ರಿಯಗಳ ಸ್ವಾಧೀನ ತಪ್ಪಿದ ವ್ಯಕ್ತಿಯಂತೆ, ಆತ ತನ್ನ ಸುತ್ತಲೂ ಮತ್ತೆ ಮತ್ತೆ ಹುಡುಕು ನೋಟವನ್ನು ಬೀರಿದನು. ಹಾಗೇ ಹುಡುಕುತ್ತಾ ಬಲಪಾರ್ಶ್ವಕ್ಕೆ ತಿರುಗಿದಾಗ ಅವನ ಬೆನ್ನಿಗೆ ದೂರವಾಗಿ, ಹಿಂದಿನಿಂದ ಯಾರೋ "ಅಮ್ಮಾ....." ಎಂದು ಚೀರಿದಂತಾಯಿತು. ಶಂಕರಯ್ಯನ ರಕ್ತದ ಚಲನೆ ವೇಗವಾಗಿ ಅವನ ಉಸಿರು ಕಟ್ಟಿದಂತಾಯಿತು.

ಗೌರಮ್ಮನ ಚೀತ್ಕಾರ ! ಅದರಲ್ಲಿ ಯಾವ ಸಂದೇಹವೂ ಇರಲಿಲ್ಲ ....
ದನಿ ಬಂದ ಕಡೆ ದಿಗಿಲಿನಿಂದ ನೋಡಿದ ಶಂಕರಯ್ಯ .....

ಗೌರಮ್ಮನ ಸ್ಥಿತಿ ಚಿಂತಾಜನಕವಾಗಿತ್ತು. ತಲೆಗೂದಲು ಬಿಚ್ಚಿಹೋಗಿ ಕೆಲವು ಕೂದಲು ಮುಖದಮೇಲೆ ಕವುಚಿಕೊಂಡಿದ್ದವು. ಕಣ್ಣುಗಳಲ್ಲಿ ಪ್ರಾಣಭಯ ಅಚ್ಚೊತ್ತಿದಂತೆ ಕಾಣುತ್ತಿತ್ತು. ನೀರಿನ ಮೇಲೆ ಅತ್ಯಂತ ರಭಸವಾಗಿ ಬಡಿಯುತ್ತಿದ್ದ ಆಕೆಯ ಕೈಗಳು ಅವಳ ಆಂತರ್ಯದ ಭೀತಿಯನ್ನೂ, ಕಾತರತೆಯನ್ನೂ ಸ್ಫುಟವಾಗಿ ತೋರುತ್ತಿದ್ದವು.

ಗೌರಮ್ಮನನ್ನು ನಿಟ್ಟಿಸಿದ ಶಂಕರಯ್ಯ "ಗೌರಾ" ಎಂದು ಸಂಕಟ ಬೆರೆತ ಸ್ವರದಲ್ಲಿ ಕೂಗಿಕೊಂಡ. ಅವನ ಆಗಿನ ಧ್ವನಿಯಲ್ಲಿ, ಚಿತ್ತಭೇದಕ ನರಳುವಿಕೆಯಿತ್ತು. ನಡುಗುವ ಹೃದಯದಿಂದ ಒಡನೆಯೇ ನೀರಿನಲ್ಲಿ ಮುಳುಗಿ, ಆಕೆಯ ಶಿರಸ್ಸು ಮತ್ತೆ ಜಲಗರ್ಭದಲ್ಲಿ ಮಾಯವಾಗುವ ವೇಳೆಗೆ ಮೀನಿನ ಚಟುವಟಿಕೆಯನ್ನು ಪ್ರದರ್ಶಿಸುತ್ತ ಈಜಿಹೋಗಿ ಆ ಸ್ಥಳವನ್ನು ಮಿಂಚಿನ ವೇಗದಲ್ಲಿ ಮುಟ್ಟಿದ್ದನಾತ.

ಯಾವ ಆಸರೆಯೂ ಇಲ್ಲದೆ ಮರಣಭಯದಲ್ಲಿ ಒದೆದಾಡುತ್ತಿದ್ದ ಗೌರಮ್ಮನ ಜೀವಕ್ಕೆ ಪತಿಯ ಮುಖ ಕಂಡಕೂಡಲೆ ಸಮಾಧಾನವಾಯಿತು; ಇನ್ನು ಚಿಂತೆ ಇಲ್ಲ ಎಂಬ ಧೈರ್ಯ ಬಂದಿತು. ಹಿಂದೆ, ಬಹಳ ಕಾಲ ಬೆಳೆದು ನಿಂತಿದ್ದ ತನ್ನನ್ನು ವಿವಾಹವಾಗಲು ಯಾರೂ ಮುಂದೆ ಬಾರದಿದ್ದಾಗ, "ನಾನು ಲಗ್ನವಾಗುತ್ತೇನೆ," ಎಂದು ಬಂದ ಶಂಕರಯ್ಯನ ದಾರ್ಷ್ಟ್ಯವನ್ನು ನೋಡಿ ಆಕೆಗೆ ಇದೇ ರೀತಿಯ ಸಮಾಧಾನವಾಗಿತ್ತು. ಜೀವನ ಪ್ರವಾಹದಲ್ಲಿ ನಿಸ್ಸಂದೇಹವಾಗಿ ಮುಳುಗಿಹೋಗುವುದರಲ್ಲಿ ಆಕೆಯನ್ನು ಶಂಕರಯ್ಯ ಪಾಣಿಗ್ರಹಣಮಾಡಿ ಉಳಿಸಿದ್ದ. ಗೌರಮ್ಮನಿಗೆ "ಇನ್ನು ಭಯವಿಲ್ಲ" ಎಂಬ ಧೈರ್ಯ ಉಂಟಾಯಿತು. ಪತಿ ತನ್ನ ಹತ್ತಿರ ಬಂದೊಡನೆಯೇ "ಬದುಕಿದೆಯಾ ಬಡಜೀವವೇ" ಎಂದು ತನ್ನ ಬಾಹುಗಳಿಂದ ಅವನನ್ನು ಬಾಚಿ ತಬ್ಬಿ ಬಲವಾಗಿ ಹಿಡಿದುಕೊಂಡಳು.

ಕೈಗಳನ್ನು ಬಿಡಿಸಿಕೊಳ್ಳಲು ಬಹಳವಾಗಿ ಸಾಹಸಪಟ್ಟ ಶಂಕರಯ್ಯ. ಆದರೆ ಅವನ ಸಕಲ ಪ್ರಯತ್ನಗಳೂ ಪೂರ್ಣವಾಗಿ ನಿರರ್ಥಕವಾದವು. ಸಾಧಾರಣವಾಗಿ ಒಂದು ಬಿಂದಿಗೆ ನೀರನ್ನೆತ್ತಲು ಮುಕ್ಕರಿಸುತ್ತಿದ್ದ ಗೌರಮ್ಮನ ಕೋಮಲ ಕಾಯಕ್ಕೆ ಅನಿರೀಕ್ಷಿತವಾಗಿ ಆನೆಯ ಬಲ ಬಂದಂತಿತ್ತು.

ಆಕೆಯ ಹಿಡಿತ ಧೃತರಾಷ್ಟ್ರನ ಬಾಹುಬಂಧನದಂತೆ ಬಲಿಷ್ಠವಾಗಿತ್ತು. ಶಂಕರಯ್ಯನ ಸಾಹಸ ಆ ಹಿಡಿತದ ಬಿಗಿಯಲ್ಲಿ ವಿಫಲವಾಗಿ, ಬರಬರುತ್ತಾ ಸಂಪೂರ್ಣವಾಗಿ ಉಡುಗಿಹೋಯಿತು.

ಹೊಳೆಯ ನೀರು ಕ್ಷಣಕ್ಷಣಕ್ಕೂ ಏರುತ್ತಿತ್ತು.

ಕೊನೆಯದಾಗಿ ಒದರಲು ಯತ್ನಿಸಿದ ಶಂಕರಯ್ಯ. ಆಗದೆ, ಪತ್ನೀಸಮೇತನಾಗಿ ಭೋರ್ಗರೆದು ಉರುಳುತ್ತಿದ್ದ ಆ ಅದಮ್ಯ ಮಹಾಪೂರದಲ್ಲಿ ನಿಸ್ಸಹಾಯನಾಗಿ ತೇಲಿಹೋದ. ಜೀವನದಲ್ಲಿ ಕೈ ಕೈ ಹಿಡಿದು ಒಟ್ಟಿಗೆ ಬಹುಕಾಲ ಬಾಳಿದ ದಂಪತಿಗಳು, ಜೀವನಾಂತ್ಯದಲ್ಲಿಯೂ ಒಟ್ಟಿಗೆ ಕೈ ಕೈ ಹಿಡಿದುಕೊಂಡೇ ನೀರಿನಲ್ಲಿ ನಿಶ್ಚಿಂತರಾಗಿ ಸಾಗುವಂತಿತ್ತು ಆ ದೃಶ್ಯ.

ದಡದಲ್ಲಿ ನಿಂತ ಜನ ಮೂಕರಾಗಿ ನೋಡುತ್ತಿದ್ದರು. ಕೆಲಕಾಲ ನೀರಿನ ತೆರೆಗಳಲ್ಲಿ ಅದೃಶ್ಯವಾದ ಎರಡು ಮುಖಗಳೂ ದೂರದಲ್ಲಿ ಒಂದೇ ಒಂದು ಬಾರಿ ನೀರಿನ ಮೇಲೆದ್ದು ಅರೆಗಳಿಗೆ ಗೋಚರಿಸಿದವು. ಪುನಃ ಕಾಣಲಿಲ್ಲ.

ಹುಚ್ಚು ಹೊಳೆ ಹುಚ್ಚುಹುಚ್ಚಾಗಿ, ನಿಷ್ಕರುಣಿಯಾಗಿ ಹರಿಯಿತು. ದಡದಲ್ಲಿ ನಿಂತವರ ಸಾಹಸ "ಅಯ್ಯೋ ಪಾಪ ಅಯ್ಯೋ ಪಾಪ," ಎಂದು ಒಣ ಸಹಾನುಭೂತಿಯನ್ನು ತೋರುವುದರಲ್ಲಿಯೇ ಮುಗಿದುಹೋಗಿತ್ತು.

ಇತ್ತ, ಮೂರು ನಾಲ್ಕು ವರ್ಷದ ಬಾಲಕನೊಬ್ಬ ದಡದಿಂದ ದೂರ ಕುಳಿತು, ತನಗಾದ ಅಪಾರ ನಷ್ಟದ ಅರಿವೇ ಇಲ್ಲದೆ ಕಪ್ಪೆಚಿಪ್ಪು, ಶಂಖ, ಗುಮಚಿಗಳನ್ನು ಅಂಗಿಯ ಮಡಿಲಲ್ಲಿ ತುಂಬಿಕೊಂಡು ಆಡುತ್ತಿದ್ದ.

ಹಾಗೆ ಆಡುತ್ತ ಕುಳಿತ ಮಗು, ಶಂಕರಯ್ಯ–ಗೌರಮ್ಮನ ಏಕಮಾತ್ರ ಪುತ್ರ–ನಟರಾಜ.

೨

ಶಂಕರಯ್ಯ ಕರ್ನಕುಪ್ಪೆಗೆ ಸೇರಿದವನು. ಶಿಲ್ಪಕಲೆಗೆ ಹೆಸರಾಂತ ಆಚಾರಿಗಳ ಮನೆತನ ಅವನದು. ಅವನ ಅಜ್ಜ ವಾಸಾಚಾರಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಮೈಸೂರು ಅರಮನೆಯಲ್ಲಿ ಶಿಲ್ಪಿಯಾಗಿ ಹೆಸರು ಗಳಿಸಿದ್ದ. ಆಗ ವಾಸಾಚಾರಿಗೆ ಇನ್ನೂ ಚಿಕ್ಕವಯಸ್ಸು. ಅರಮನೆಯ ಕೆಲಸಕ್ಕೆ ಹೊಸಬ. ಸೇರಿ ಸುಮಾರು ಆರು ತಿಂಗಳಾಗಿತ್ತು. ಆದರೂ ಅಷ್ಟು ಅಲ್ಪಕಾಲದಲ್ಲಿ ಅವನ ಹೆಸರು ಮಹಾಸ್ವಾಮಿಯವರೆಗೂ ಮುಟ್ಟಿತ್ತು. ಹಾಗೆ ಮುಟ್ಟಲು ಆತ ಮಾಡಿಕೊಟ್ಟ ಕಂಚಿನ ನಟರಾಜ ಪ್ರತಿಮೆ ಕಾರಣವಾಗಿತ್ತು. ಆ ಭಾರಿ ಪ್ರತಿಮೆಯನ್ನು ಅಂಬಾವಿಲಾಸದಲ್ಲಿ ಪರಾಂಬರಿಸಿದ ಮಹಾಸ್ವಾಮಿಯವರು ಬಹಳವಾಗಿ ಮೆಚ್ಚಿಕೊಂಡರು.

ಬಳಿಯಲ್ಲೇ ಇದ್ದ ಭಕ್ಷಿಯವರಿಗೆ "ಈ ಹೊಸ ಶಿಲ್ಪಿ ಕುಶಲಿಯಾಗಿ ಕಾಣುತ್ತಾನೆ. ಈತನ ಕೈಯಲ್ಲಿ ನಮ್ಮ ಪೂಜೆಗೆ ಭಂಗಾರದ ಚಾಮುಂಡೇಶ್ವರಿ ಅಮ್ಮನವರ ವಿಗ್ರಹವೊಂದನ್ನು ಮಾಡಿಸಿ" ಎಂದು ಅಪ್ಪಣೆ ಮಾಡಿದರು. ಹಸಾದವೆಂದು ಒಂದೇ ವಾರದಲ್ಲಿ ವಿಗ್ರಹವನ್ನು ನಿರ್ಮಿಸಿ ಒಪ್ಪಿಸಿದ ವಾಸಾಚಾರಿ. ವಿಗ್ರಹವನ್ನು ನೋಡಿ ಮಹಾಸ್ವಾಮಿಯವರು ವಿಸ್ಮಯ ಪಟ್ಟರು. "ಎಂತಹ ಕುಸುರಿ ಕೆಲಸಮಾಡಿದ್ದಾನೆ ನೋಡಿ ಭಕ್ಷಿಯವರೆ! ಜಕಣಾಚಾರಿ ಇದನ್ನು ನೋಡಿದ್ದರೆ ಖಚಿತವಾಗಿ ಅಸೂಯೆಪಟ್ಟುಕೊಳ್ಳುತ್ತಿದ್ದ" ಎಂದು ಪ್ರಶಂಸಿಸಿ ವಾಸಾಚಾರಿಗೆ ಒಂದು ಭಾರಿ ಕಲಾಪತ್ತಿನ ಶಾಲುಜೋಡಿಯನ್ನು ದಯಪಾಲಿಸಿದರು. ಇದರಿಂದ ಜಕಣಾಚಾರಿಗೆ ಅಸೂಯೆ ಬರುತ್ತಿತ್ತೋ, ಇಲ್ಲವೋ ಎನ್ನುವುದು ಊಹಾಲೋಕಕ್ಕೆ ಸೇರಿದ ವಿಚಾರವಾಯ್ತು. ವಾಸ್ತವವಾಗೇನೊ ಅರಮನೆಯಲ್ಲಿದ್ದ ಇತರ ಹಿರಿಯ ಶಿಲ್ಪಿಗಳಿಗೆ ತುಂಬ ಅವಮಾನವಾದಂತಾಗಿ ಅಸೂಯೆಗೆ ಎಡೆಕೊಟ್ಟಿತ್ತು.

ಸರಿ, ಅಸೂಯೆ ಹುಟ್ಟಿಕೊಂಡಮೇಲೆ ಯಾರನ್ನಾದರೂ ಸುಮ್ಮನೆ ಕೂರಲು ಬಿಡುತ್ತದೆಯೇ? ಹಿರಿಯ ಶಿಲ್ಪಿಗಳು 'ವಾಸಾಚಾರಿ ಅಮ್ಮನವರ ವಿಗ್ರಹ ಮಾಡುವಾಗ ಚಿನ್ನ ಹೊಡೆದಿದ್ದಾನೆ' ಎಂದು ಗುಲ್ಲೆಬ್ಬಿಸಿದರು. ಮೊದ ಮೊದಲು ಭಕ್ಷಿಯವರು ನಂಬಲಿಲ್ಲ. ಆದರೆ ಇತರ ಅಧಿಕಾರಿಗಳ ಒತ್ತಾಯದ ಮೇಲೆ, ವಾಸಾಚಾರಿಯ ಮನೆಯನ್ನು ಶೋಧಿಸಲು ಆಜ್ಞೆ ಮಾಡಿದರು. ಆಗ ವಾಸಾಚಾರಿ ಅರಮನೆಯ ಮೇಳದ ಭವಾನಿ ಎಂಬ ವೇಶ್ಯೆ, ಅಡ್ಡಿಕೆ ಮಾಡಲು ಕೊಟ್ಟಿದ್ದ ಒಂದು ಸೇರು ಚಿನ್ನವನ್ನು ಕರಗಿಸಲು ಮೂಸೆಗೆ ಹಾಕಿ ಕುಳಿತಿದ್ದ. ಅಧಿಕಾರಿಗಳು ಇತರ ಶಿಲ್ಪಿಗಳ ಪ್ರೇರಣೆಯಿಂದ ಆ ಚಿನ್ನವನ್ನು ವಶಪಡಿಸಿಕೊಂಡು ಭಕ್ಷಿಯವರಿಗೆ ದೂರುಕೊಟ್ಟರು. ಕುಪಿತರಾದ ಭಕ್ಷಿಯವರು ವಾಸಾಚಾರಿಯನ್ನು ಕೆಲಸದಿಂದ ತೆಗೆದುಹಾಕಿದರು. ಆದರೆ ಭವಾನಿಗೆ ಈ ವಿಷಯು ತಿಳಿಯಿತು. ಕೂಡಲೆ ಆಕೆ ಮಹಾರಾಣಿಯವರಲ್ಲಿಗೆ ಹೋಗಿ, ವಾಸಾಚಾರಿ ನಿರ್ದೋಷಿಯೆಂದೂ, ಅಡ್ಡಿಕೆ ಮಾಡಲು ಚಿನ್ನವನ್ನು ತಾನು ಕೊಟ್ಟುದುಂಟೆಂದೂ ಅರಿಕೆ ಮಾಡಿದಳು. ಮಹಾಸ್ವಾಮಿಯವರಿಗೆ ನಡೆದ ವಿಚಾರ ತಿಳಿದಾಗ ತೀರ ನೊಂದುಕೊಂಡರು. ವಾಸಾಚಾರಿಯನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಅಪ್ಪಣೆ ಮಾಡಿದರು.

ಆದರೆ ಕೆಲಸಕ್ಕೆ ಸೇರಲು ವಾಸಾಚಾರಿ ಅಲ್ಲಿರಲಿಲ್ಲ. ಅವನಿಗೆ ಮನಸ್ಸು ಮುರಿದುಹೋಗಿ "ಈ ದೊಡ್ಡವರ ಸಹವಾಸವೇ ಬೇಡ," ಎಂದು ರೋಸಿ, ಎಲ್ಲೆಲ್ಲೋ ಅಲೆದು ಕಡೆಗೆ ತನ್ನ ಚಿಕ್ಕಪ್ಪನಿದ್ದ ಕರ್ನಕುಪ್ಪೆಯನ್ನು ಸೇರಿದ್ದ. ಅಲ್ಲಿ ತನ್ನ ಕಡೆಗಾಲದವರೆಗೂ ಶಿಲಾವಿಗ್ರಹಗಳನ್ನು ನಿರ್ಮಿಸಿ ಸರಿಯಾದ ಪ್ರತಿಫಲ ದೊರೆಯದೆ ಬಡತನದಲ್ಲೇ ತೀರಿಕೊಂಡಿದ್ದ.

ಅವನು ಕೆತ್ತಿದ್ದ ಆ ಸುಂದರ ಶಿಲಾವಿಗ್ರಹಗಳಲ್ಲಿ ಯಾವುದನ್ನಾದರೂ ನೋಡಿದಾಗ ನೆರೆಹೊರೆಯ ಹಳ್ಳಿಯ ಜನ "ಏಟು ಸಂದಾಕಿ ಕೆತ್ತಿದ್ದೀ ವಾಸಪ್ಪ." ಎಂದು ವಿಸ್ಮಿತರಾದರೆ

ಹಿಂದು ಮುಂದು ನೋಡದೆ ಆ ವಿಗ್ರಹವನ್ನು ಅವರಿಗೆ ಕೊಟ್ಟು "ಈ ವಿಗ್ರಹಾನೇನೋ ನಿಮಗೆ ಬಿಟ್ಟುಕೊಟ್ಟಿದೀನಿ. ಆದರೆ ಅದು ಮಳೆಗಾಳಿಗೆ ನೆನೆಯದ ಹಾಗೆ ನೋಡಿಕೊಳ್ಳೋದು ನಿಮ್ಮ ಊರಿನವರೆಲ್ಲಂಗೂ ಸೇರಿದ್ದು. ಇದರ ಮೇಲೊಂದು ದೇವಸ್ಥಾನ ಏಳಿಸಿಬಿಟ್ಟರೆ ನನಗೆ ನೀವು ಉಪಕಾರ ಮಾಡಿದ ಹಾಗೆ ಆಗ್ತದೆ," ಎಂದು ಹೇಳಿಬಿಡುತ್ತಿದ್ದ. ಪ್ರತಿಯಾಗಿ ಹಣವನ್ನು ಕೊಟ್ಟರೆ ತೆಗೆದುಕೊಳ್ಳುವುದಿಲ್ಲವೆಂದು ಅರಿತ ಹಳ್ಳಿಗರು ರಾಗಿಯನ್ನೋ, ಅಕ್ಕಿಯನ್ನೋ ತಂದುಕೊಡುತ್ತಿದ್ದರು. ಅದರಲ್ಲೇ ಹೇಗೊ ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿದ್ದ ವಾಸಾಚಾರಿ. "ಈ ಕಲ್ಲು ಕೆಲಸದಲ್ಲಿ ಹೊಟ್ಟೆ ತಂಬಾಕಿಲ್ಲ ವಾಸು, ಸುಮ್ಮನೆ ಚಿನ್ನದ ಕೆಲ್ಸ ಮಾಡು" ಎಂದು ಚಿಕ್ಕಪ್ಪ ಆಗಾಗ್ಗೆ ಹೇಳಿದ್ದುಂಟು. ಅದಕ್ಕೆಲ್ಲಾ ವಾಸಾಚಾರಿಯದು ಒಂದೇ ಉತ್ತರ : "ಚಿನ್ನ ನಂಬಿ ಹಾಳಾದೆ, ಚಿಕ್ಕಯ್ಯ. ಆದರೆ ಕಲ್ಲನ್ನು ನಂಬಿ ಇದುವರೆಗೂ ಕೆಟ್ಟಿಲ್ಲ."

ವಾಸಾಚಾರಿಗೆ ಮೂರು ಮಕ್ಕಳಾದರು, ಮೊದಲನೆಯ ಮಗ ಯಾಲಕ್ಕಾಚಾರಿ ತಂದೆಯಂತೆ ಚಿನ್ನಗೆಲಸಕ್ಕೆ ಬೆನ್ನು ತಿರುಗಿಸಿದ್ದು ಮಾತ್ರವಲ್ಲ, ಶಿಲ್ಪಕಲೆಯ ಕಡೆಗೂ ಆಸಕ್ತಿ ತೋರಲಿಲ್ಲ. ಹಳ್ಳಿಗರ ವ್ಯವಸಾಯಕಾರ್ಯಗಳಲ್ಲಿ ಉಪಯುಕ್ತವಾದ ನೇಗಿಲು, ನೊಗ, ಕುಂಟೆ, ಹಲುಬೆ ಮುಂತಾದ ಉಪಕರಣಗಳನ್ನು ಮಾಡುತ್ತಿದ್ದ. ಎರಡನೆಯ ಮಗ ಶಿವಸ್ವಾಮಿ ಚಿನ್ನಗೆಲಸದಲ್ಲಿ ಅಭಿರುಚಿ ತೋರಿದನಾದರೂ ಹಳ್ಳಿಯಕ್ಷೇತ್ರ ತನ್ನ ಸಂಪಾದನೆಗೆ ಬಹಳ ಸಂಕುಚಿತವಾದುದ್ದೆಂದು ಭಾವಿಸಿ, ಊರೂರುಗಳಲ್ಲಿ ಅಲೆದು, ಶ್ರೀರಂಗಪಟ್ಟಣದಲ್ಲಿ ಕೆಲಕಾಲ ನಿಂತು, ಕಡೆಗೆ ಮೈಸೂರು ನಗರವನ್ನು ಸೇರಿದ್ದ. ವಾಸಾಚಾರಿಯ ಮೂರನೆಯ ಮಗು ಹೆಣ್ಣು. ಆಕೆಯನ್ನು ಮರೂರಿಗೆ ಕೊಟ್ಟಿತ್ತು. ಮಕ್ಕಳಿಲ್ಲದೆ ಆಕೆ ಮೃತಳಾಗಿದ್ದಳು.

ಶಂಕರಯ್ಯ ಯಾಲಕ್ಕಾಚಾರಿಯ ಪುತ್ರರಲ್ಲೊಬ್ಬ. ಯಾಲಕ್ಕಾಚಾರಿಗೆ ಇಬ್ಬರು ಮಕ್ಕಳು. ಇನ್ನೊಬ್ಬನ ಹೆಸರು ನಾಗಯ್ಯ. ಆದರೆ ಯಾಲಕ್ಕಾಚಾರಿಯ ಮುಂದೆ ನಾಗಯ್ಯನ ಹೆಸರೆತ್ತಿದರೆ ಆತ ಕಿಡಿಕಿಡಿಯಾಗುತ್ತಿದ್ದ. ಏಕೆಂದರೆ, ಗೋಣಿಕೊಪ್ಪಲಿಗೆ ಒಂದುಬಾರಿ ಕಾರ್ಯಾರ್ಥವಾಗಿ ಹೋಗಿದ್ದ ನಾಗಯ್ಯ ದೊಂಬರ ಚಿಕ್ಕಿಯಲ್ಲಿ ಅನುರಕ್ತನಾಗಿದ್ದ. ತನ್ನ ಹಿರಿಯ ಮಗನ ಮನಸ್ಸನ್ನು ತಿರುಗಿಸಲು ತುಂಬ ಪ್ರಯತ್ನಪಟ್ಟು ವಿಫಲನಾದ ಯಾಲಕ್ಕಾಚಾರಿ ಅವನನ್ನು ಮನೆಯಿಂದ ಹೊರಗೆ ಹಾಕಿದ್ದ.

ಶಂಕರಯ್ಯ ಮಾತ್ರ ತಂದೆಗೆ ಅಚ್ಚುಮೆಚ್ಚಾಗಿ ನೊಗ, ನೇಗಿಲುಗಳನ್ನು ಮಾಡಿಕೊಂಡೇ ಜೀವನವನ್ನು ಸಾಗಿಸುತ್ತಿದ್ದ. ಅತ್ತಿಗುಪ್ಪೆಯಿಂದ ಅವನಿಗೆ ಅನುಕೂಲವಾದ ಮಡದಿಯೂ ಬಂದಿದ್ದಳು. ಲಗ್ನವಾದ ಕೆಲಕಾಲದ ಬಳಿಕ ಆ ದಂಪತಿಗಳಿಗೆ ಹುಟ್ಟಿದ ಹೆಣ್ಣು ಮಗು ಪಾರ್ವತಮ್ಮ. ಆದರೆ ಪಾರ್ವತಮ್ಮನ ಬೆನ್ನಿಗೆ ಹುಟ್ಟಿದ ಒಂದು ಗಂಡುಮಗುವು ನಂದಿಹೋಗಿ ಶಂಕರಯ್ಯ ಮತ್ತು ಗೌರಮ್ಮನಿಗೆ ತುಂಬ ಕೊರತೆಯಾಗಿತ್ತು. ಆ ಕೊರತೆಯ ನಿವಾರಣೆಗಾಗಿ

ದಂಪತಿಗಳು ಕಂಡಕಂಡ ದೇವರಿಗೆ ಹರಕೆ ಹೊತ್ತರು. ಆದರೆ ಪಾರ್ವತಮ್ಮನ ವಿವಾಹವಾಗುವವರೆಗೂ, ಅವರಿಗೆ ಮಕ್ಕಳಾಗುವ ಚಿನ್ಹೆಯೇ ಕಂಡುಬರಲಿಲ್ಲ. ಕಡೆಗೆ ತಿರುಮಕೂಡಲಿನ ಅಗಸ್ತ್ಯೇಶ್ವರನಿಗೆ ಹರಸಿಕೊಂಡರೆ ಗಂಡುಸಂತಾನವಾಗುವುದು ಖಂಡಿತ ಎಂದು ಯಾರೋ ಹೇಳಿದುದರ ಮೇರೆಗೆ ಹಾಗೆ ಮಾಡಿದರು. ಆ ಮಾತನ್ನು ನಿಜ ಮಾಡುವಂತೆ ದಂಪತಿಗಳ ಇಳಿವಯಸ್ಸಿನಲ್ಲೂ ಗಂಡುಶಿಶುವೊಂದು ಜನಿಸಿತು.

ಆ ಶಿಶುವೇ ನಟರಾಜ !

ನಟರಾಜನ ಹರಕೆ ತೀರಿಸಲು ಹೋದಾಗಲೇ ಶಂಕರಯ್ಯ ಮತ್ತು ಗೌರಮ್ಮ ತಿರುಮಕೂಡಲು ಹೊಳೆಯಲ್ಲಿ ಅಪಮೃತ್ಯುವಿಗೆ ತುತ್ತಾದುದು !!

೩

ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾದ ನಟರಾಜನಿಗೆ ಅಕ್ಕನ ಮನೆಯೇ ಗತಿಯಾಯಿತು. ಪಾರ್ವತಮ್ಮನಿಗೂ ಮಕ್ಕಳಿಲ್ಲದ ಮನೆ ತೀರ ಬೇಸರವನ್ನುಂಟುಮಾಡಿತ್ತು. ತನ್ನ ಹೃದಯದ ಅಳಲನ್ನವಳು ಆಗಾಗ್ಗೆ ತನ್ನ ಪತಿಯೊಡನೆ ತೋಡಿಕೊಂಡುದೂ ಉಂಟು.

"ಮದುವೆ ಆಗಿ ಎಂಟು ವರುಸ ಆಯ್ತು. ಇನ್ನೂ ಮಕ್ಕಳೇ ಆಗ್ಲಿಲ್ಲವಲ್ಲಾ ?"

"ಯೇನು ಮಾಡ್ಬೇಕು ಅಂತೀ ಅದಕೇ?" ವಿಷಕಂಠಯ್ಯ ಸಹಜವಾಗಿಯೇ ಕೇಳುವನು.

"ಬ್ಯಾರೆ ಲಗ್ಣ ಮಾಡಿಕೊಳ್ಳಿ ಅಂತೀನಿ."

"ಯಾಕೆ, ನಿನ್ನೊಬ್ಬಳ ಕಾಟ ಸಾಲದು ಅಂತಲಾ?" ಎಂದು ಮಾತುಗಳನ್ನು ನಗುವಿನಲ್ಲಿ ತೇಲಿಸಿಬಿಡುತ್ತಿದ್ದ ವಿಷಕಂಠಯ್ಯ.

ನಾಗಜ್ಜಿಯಂತೂ ಸೊಸೆ ಆ ರೀತಿ ಮಾತಾಡುವುದನ್ನು ಕೇಳಿ ಕಿಡಿಕಿಡಿಯಾಗುತ್ತಿದ್ದಳು :

"ಯೇನು ಬೋ ವಯಸಾಗದೆ ಅಂತ ಹಂಗೆ ಮಾತಾಡಿ ಪಾರತಿ? ಅಮ್ಮಮ್ಮ ಅಂದರೆ ನಿಂಗೀಗ ಇಪ್ಪತ್ತಾರು ಇಪ್ಪತ್ತೇಳು ವರ್ಷ. ಇಸಕಂಟುs ಅಣ್ಣನ್ನ ನಾ ಹೆತ್ತಾಗ ನಂಗಾಗಲೇ ನಿನಗಿಂತ ವಯಸ್ಸಾಗಿತ್ತು ಕನಾ ...."

"ಅದಲ್ಲ ಕನತ್ತೆ, ಆಗ್ಲೆ ಎಲ್ಲುಸಲ ಬೊಸರಿ ಆದೆ, ಅದ್ರೂ ಉಳೀನಿಲ್ಲ, ಮುಕ್ಕ, ಹಣೇಲಿ ಬರೀನಿಲ್ಲ" ಎಂದು ಕಣ್ಣೀರು ತಂದುಕೊಳ್ಳುತ್ತಿದ್ದಳು,

ಆದರೆ ನಟರಾಜ ಕಲ್ಲಹಳ್ಳಿಗೆ ಕಾಲಿಟ್ಟ ಗಳಿಗೆ ಪ್ರಶಸ್ತವಾಗಿತ್ತು. ಮಕ್ಕಳಿಲ್ಲದೆ ಮೂದೇವಿ ಹಿಡಿದಂತಿದ್ದ ಪಾರ್ವತಮ್ಮನ ಮನೆ ನಗು, ಉಲ್ಲಾಸಗಳ ಆಗರವಾಯಿತು. ನಟರಾಜ

ಬಂದ ಆರೇ ತಿಂಗಳಲ್ಲಿ, ಎರಡು ಬಾರಿ ಗರ್ಭ ಧರಿಸಿ ವಿಫಲಳಾಗಿದ್ದ ಪಾರ್ವತಮ್ಮ ಹೆಣ್ಣು ಮಗುವೊಂದನ್ನು ಹೆತ್ತು ಜಯಭೇರಿ ಹೊಡೆದಿದ್ದಳು.

ಶಿಶುವನ್ನೆತ್ತಿ ಮುದ್ದಾಡುವಾಗಲೆಲ್ಲ ನಾಗಜ್ಜಿ,

"ನಮ್ಮ ನಟ್ರಾಜ ಹಟ್ಟೀಲಿ ಕಾಲಿಟ್ಟ ಗಳಿಗೆ, ಅಮುರ್ತಗಳಿಗೆ, ತೇಟ್ ಅಮುರ್ತಗಳಿಗೆ" ಎಂದು ಹೇಳಿ ಹೇಳುತ್ತಿದ್ದಳು.

ಮಕ್ಕಳಿಲ್ಲದೆ ಭಣಭಣಗುಡುತ್ತಿದ್ದ ಪಾರ್ವತಮ್ಮನ ಮನೆಯನ್ನು ನೋಡಿದ್ದ ಹಳ್ಳಿಯ ಇತರ ಹೆಂಗಸರೂ, ನಾಗಜ್ಜಿಯ ಈ ಮಾತುಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಿದ್ದರು.

ನಾಗಜ್ಜಿಗೆ ಅರವತ್ತು ವರ್ಷ ಕಳೆದಿತ್ತು. ಆದರೂ ಆಕೆಯ ಚಟುವಟಿಕೆ ಎಳೆಪ್ರಾಯದ ಹೆಣ್ಣುಗಳನ್ನು ನಾಚಿಸುವಂತಿತ್ತು. ಪಾರ್ವತಮ್ಮ ಬಾಣಂತಿಯಾದಂದಿನಿಂದ ಮನೆಗೆಲ್ಲ ದುಡಿಯುವುದು ಇದೊಂದೇ ಜೀವ. ಪುಳ್ಳೆಗಳನ್ನು ಆರಿಸಿ ತಂದು ಒಲೆ ಹಚ್ಚಿ ಅಡಿಗೆ ಮಾಡುವುದು, ಪಾತ್ರೆ ತಿಕ್ಕುವುದು, ಬಟ್ಟೆಯೊಗೆಯುವುದು, ಕಸಗುಡಿಸುವುದು–ಸಮಸ್ತ ಕಾರ್ಯಗಳನ್ನು ಒಬ್ಬಳೆ ನಿಭಾಯಿಸಿಕೊಂಡು ಹೋಗುತ್ತಿದ್ದಳು. ಅಡ್ಡೆಯಲ್ಲಿ (ಗಳುವಿನ ಪಟ್ಟಿಯ ಎರಡು ತುದಿಗಳಿಗೂ ಕಟ್ಟಿದ ಹಗ್ಗದ ಹೆಣಿಗೆಗಳಲ್ಲಿ ಕೊಡಗಳನ್ನಿಟ್ಟು ನೀರನ್ನು ಹೊತ್ತು ತರುವ ವಿಧಾನ) ವಿಷಕಂಠಯ್ಯ ನೀರು ತಂದು ತುಂಬದಿದ್ದ ದಿನ ಚೌರಿಗೆ ತೆಗೆದುಕೊಂಡು ತಾನೇ ನೀರಿಗೂ ಹೋಗುತ್ತಿದ್ದಳು. ಆಳವಾದ ಬಾವಿಯಲ್ಲಿ ನೀರು ಸೇದುವ ಹೊತ್ತಿಗೆ ಪ್ರಾಯದ ಹೆಣ್ಣುಗಳಿಗೂ ಸಾಕು ಸಾಕೆನಿಸುತ್ತಿತ್ತು. ಏಳೆಂಟು ಚೌರಿಗೆ ನೀರೆಳೆಯುವುದರಲ್ಲಿ ಹತ್ತಾರು ಸಲ 'ಅಸ್' 'ಉಸ್' ಎಂದು ನಿಟ್ಟುಸಿರ್ಗರೆಯುತ್ತಿದ್ದರು. ವಯಸ್ಸಾದ ಮುದುಕಿ, ನಾಗಜ್ಜಿ ತುಟಿಪಿಟಕ್ಕೆನ್ನದೆ ನೀರೆಳೆದುಕೊಂಡು ಹೋಗುವುದನ್ನು ನೋಡಿದಾಗ ಅವರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಅದನ್ನು ಕಂಡ ಒಬ್ಬಿಬ್ಬರು ಹುಡುಗಿಯರ ಗಂಡಂದಿರು ತಮ್ಮ ಹೆಂಡತಿಯರನ್ನು ಹೀಯಾಳಿಸದೆ ಬಿಡುತ್ತಿರಲಿಲ್ಲ.

"ನೋಡಿ, ಮುದುಕಿ ಹೆಂಗೆ ಕೆಲಸ ಮಾಡ್ತದೆ, ನೀವು ಇದ್ದೀರಿ ಹರೇದ ಹೆಣ್ಣುಗಳು, ಹಿಟ್ಟಿಗೆ ದಂಡವಾಗಿ. ಮುಕ್ಯ, ಈಗಿನ ಕಾಲದ ಹುಡುಗೀರೇ ಆಟು. ಹಿಂದಿನ ಕಾಲದೋರ ಜಪಾತಿ ಕೆಲಸ ಮಾಡಲಾರೊ."

ನಾಗಜ್ಜಿ ವಿಚಿತ್ರ ಜೀವ. ಯಾವುದಾದರೂ ಕೆಲಸ ಹಚ್ಚಿಕೊಂಡು ಮಾಡದಿದ್ದರೆ ಮನಸ್ಸಿಗೆ ನೆಮ್ಮದಿಯೆನ್ನುವದೇ ಇಲ್ಲ. ಗೀತೆಯ ನಿಷ್ಕಾಮಕರ್ಮ ಈ ಮುದುಕಿಯಲ್ಲಿ ಮೇಲ್ಪಂಕ್ತಿಯನ್ನು ಕಾಣುವಂತಿತ್ತು, ಆಕೆ ದುಡಿಯುವ ರೀತಿ. ಯಾವ ಆಸೆ 'ಆ ಸತ್ಕಾರ'ಗಳನ್ನಿಟ್ಟುಕೊಂಡೂ ಅವಳು ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ದುಡಿಮೆಯೇ ಅವಳ ಬಾಳುಸಿರು. ಇತರರ ತೃಪ್ತಿಗಾಗಲ್ಲ;

ತನ್ನ ಆತ್ಮತೃಪ್ತಿಗೆ. ತೇದಷ್ಟೂ ಹೆಚ್ಚು ಹೆಚ್ಚು ಗಂಧವನ್ನು ಹೊರಸೂಸುವ ಶ್ರೀಗಂಧದ ಕೊರಡಿನಂತೆ ಅವಳ ದೇಹ, ದುಡಿಮೆ ಹೆಚ್ಚಿದಷ್ಟೂ ಹೆಚ್ಚಿನ ಉತ್ಸಾಹ ತಾಳುತ್ತಿತ್ತು.

ಮುದುಕಿ ಹಾಗೆ ಕೆಲಸ ಮಾಡುವುದನ್ನು ನೋಡಿ ಸಹಿಸಲಾರದೆ ಪಾರ್ವತಮ್ಮ "ನಾ ಬೋ ಪಾಪಿ ಕನತ್ತೆ. ಈ ವಯಸ್ಸಿನಾಗೂ ನಿಮ್ಮ ಕೈಲಿ ಗೇಯಿಸ್ತಾ ಇವ್ನಿ" ಎಂದು ನೊಂದುಕೊಳ್ಳುವಳು.

ಅದರ ಬೆನ್ನಿಗೇ ಬರುತ್ತಿತ್ತು ನಾಗಜ್ಜಿಯ ಉತ್ತರ.

"ಯಾಕವ್ವ ಆ ಮಾತು ಆಡಿಯೆ? ಕೆಲಸ ಮಾಡಿದ್ರೆಲ್ಲಾರ ಕೆಟ್ಟೋದಾರಾ ....? ಹಿಟ್ಟು ತಿಂದಮ್ಯಾಗೆ ಕೆಲಸ ಮಾಡಲೇಬೇಕು. ಸುಮ್ಕ ಕುಂತಗಂಡರೆ, ಮೈಗಾದಾತವ್ವ .....?" ಎಂದು ಯಾವದೋ ಒಂದು ಸ್ಮರಣೆ ಬಂದಂತಾಗಿ ಕಣ್ಣುಹನಿಯೂಡುತ್ತಿರಲು "ನಿಮ್ಮವ್ವ ಇದ್ದಿದ್ದರೆ ಏಟು ಚೆಂದಾಗಿ ನೋಡಿಕೊಳ್ತಾ ಇದ್ದಲೊ? ನಾ ಯೇನು ಮಾಡೇನು ಮಹಾ," ಎನ್ನುವಳು.

ಮುದುಕಿಯ ಮಾತುಗಳು ಪಾರ್ವತಮ್ಮನ ಕಣ್ಣಿಗೆ ಕೃತಜ್ಞತೆಯ ಹನಿಗಳನ್ನು ತರುತ್ತಿದ್ದವು. ಹೃದಯ ಮನಸ್ಸಿಗೆ ಹೇಳಿಕೊಳ್ಳುತ್ತಿತ್ತು. "ನೀನು ಅತ್ತೆಯಲ್ಲ ನಾಗಜ್ಜಿ–ನನ್ನ ಹಡೆದವ್ವ!"

ವಾಸ್ತವವಾಗಿಯೂ ನಾಗಜ್ಜಿ ಸೊಸೆಯನ್ನು ಮಗಳಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಳು. ಬಾಣಂತಿಯ ಮೈ ಕೆಡದಿರಲೆಂದು ಹೊತ್ತು ಹೊತ್ತಿಗೆ ಮೆಣಸಿನ ಕುದಿಯನ್ನು ಮಾಡಿ ಬಡಿಸುತ್ತಿದ್ದಳು.

ಅತ್ತೆ ಸೊಸೆಯರ ಈ ಹೊಂದಾಣಿಕೆ ಸದಾ ಪರಸ್ಪರ ಕಚ್ಚಾಡುತ್ತಿದ್ದ ಹಳ್ಳಿಯ ಹೆಂಗಸರನ್ನು ಬೆರಗುಗೊಳಿಸಿತ್ತು. ಅತ್ತೆ ಸೊಸೆ ಅಂದರೆ ಹಾಗಿರಬೇಕು ಎಂದು ಹಳ್ಳಿಗೆ ಹಳ್ಳಿಯೇ ಮೆಚ್ಚಿ ಆಡುತ್ತಿತ್ತು.

ಶಿಶು ಹುಟ್ಟಿದುದು ವಿಷಕಂಠಯ್ಯನಿಗೂ ಸುಖವನ್ನು ತಂದಿತ್ತು. ಆದರೆ ತನ್ನ ಕಾಲು ಸೋತಾಗ ತನ್ನ ಮನೆಯನ್ನು ನಡೆಸಿಕೊಂಡು ಹೋಗಲು ಗಂಡುಮಗು ಬೇಕಾಗಿತ್ತು ಅವನಿಗೆ. ಅದು ತಪ್ಪಿ ಹೆಣ್ಣಾಯಿತಲ್ಲಾ ಎಂಬ ಚಿಂತೆ ಅವನನ್ನು ಕಾಡುವುದು.

ವಿಷಕಂಠಯ್ಯ ಹುಟ್ಟಿನಿಂದ ಆಚಾರಿಯಾದರೂ ವೃತ್ತಿಯಿಂದ ರೈತ. ಕೆರೆಯಾಚೆ ಗುಡ್ಡದ ಬದಿಗೆ ಅವನದೇ ಎರಡೆಕರೆ ಜಮೀನಿತ್ತು. ಅದರಲ್ಲಿ ವಿಶೇಷವಾಗಿ ಬೆಳೆದಿದ್ದ ಹುತ್ತಗಳನ್ನು ಪ್ರಯಾಸದಿಂದ ಉತ್ತು ಬೆಳೆ ತೆಗೆಯುತ್ತಿದ್ದ.

ಹೆಣ್ಣು ಹುಟ್ಟಿದ್ದು ಒಂದು ರೀತಿಯಲ್ಲಿ ಅಸಮಾಧಾನವಾಗಿದ್ದರೂ ಮಗುವನ್ನು ಎತ್ತಿಕೊಂಡಾಗ ಎಲ್ಲವನ್ನೂ ಆತ ಮರೆಯುತ್ತಿದ್ದ.

* * * *

ಶಿಶು ಜನಿಸಿ ಹನ್ನೊಂದು ದಿನಗಳಾಗಿವೆ. ಮಾರನೆಯ ದಿನವೇ ಅದಕ್ಕೆ ನಾಮಕರಣ.

ಆ ರಾತ್ರಿ ಬಾಣಂತಿ ಕೋಣೆಯಲ್ಲಿ ದೀಪ ಇನ್ನೂ ಸಣ್ಣದಾಗಿ ಉರಿಯುತ್ತಿತ್ತು. ಮಗು ಗಾರ್ ಗಾರ್ ಎಂದು ಅಳುತ್ತ ಹುಯಿಲೆಬ್ಬಿಸಿತು. ಹೊಟ್ಟೆಗೆ ಸಾಲದೇನೊ ಎನ್ನುತ್ತ ಪಾರ್ವತಮ್ಮ ಎದೆಯನ್ನು ಕಚ್ಚಿಸಿ ನೋಡಿದಳು. ಆದರೂ ಮಗು ಹಾಲನ್ನು ಕುಡಿಯದೆ ಒಂದೇ ಸಮನೆ ಚೆಂಡಿ ಹಿಡಿದಿತ್ತು. ತೊಡೆಯ ಮೇಲೆ ಮಲಗಿಸಿಕೊಂಡು ಮೆಲ್ಲನೆ ಚಿಮ್ಮಿ ಆಡಿಸುತ್ತ, ಪಾರ್ವತಮ್ಮ ನಯವಾಗಿ ಸ್ವರವೆತ್ತಿ ಹಾಡತೊಡಗಿದಳು.

ಕಂದಾ, ಜನ್ಮ ನಕ್ಷತ್ರವು ನಿನಗಿಂದು
ಮಂಗಳಸ್ನಾನವ ಮಾಡಿಬಂದು

ಉಂಡೂಟಲಂಕಾರದಿ ನಿಂದು
ಊಂಡಾಡಬಹುದ್ ಓಡಿಬಾ ಎನ್ನಪ್ಪ
ಊಟಕೆ ಬಾರೋ ಕೃಷ್ಣಪ್ಪ.

ಇಂದುs ನಿನಗಾಡುವುದಕೆ ಬೇಕೆಂದುs
ಚಿನ್ನದಾನೆಯ ಮಾಡಿಸಿ ತಂದುs
ಬಂದು ನೋಡು ಮನೆಯೊಳಗಿದೆಯೆಂದುs

ಉಂಡಾಡಬಹುದ್ ಓಡಿಬಾ ಎನ್ನಪ್ಪ
ಊಟಕೆ ಬಾರೋ ಕೃಷ್ಣಪ್ಪ
ನಿನಗಟ್ಟಿರಿಸಿದೆ ಎರಿಯಪ್ಪ
ನಿನಗ್ ಕಾಯ್ಸಿರಿಸಿದೆ ಹಾಲುತುಪ್ಪ
ಉಂಡಾಡುಬಹುದ್ ಓಡಿಬಾ ಎನ್ನಪ್ಪ
ಊಟಕೆ ಬಾರೋ ಕೃಷ್ಣಪ್ಪs

ಹಾಡು ಆರಂಭವಾದ ಕೊಂಚ ಹೊತ್ತಿನಲ್ಲಿಯೆ ಮಗುವಿನ ರೋದನ ಮಾಯವಾಗಿತ್ತು. ಬರಬರುತ್ತಾ ಮಂತ್ರಹಾಕಿದಂತೆ ಮಲಗಿ ನಿದ್ದೆ ಹೋಯಿತು. ತಾಯಿ ತೃಪ್ತಿಯ ನಿಟ್ಟುಸಿರುಬಿಟ್ಟಳು.

ವಿಷಕಂಠಯ್ಯ ಈ ಮಾಯೆಯನ್ನು ಅರೆತೆರೆದ ಬಾಗಿಲ ಬಳಿ ನಿಂತು ನೋಡುತ್ತಿದ್ದ. ಶಿಶುವಿನ ಅಳು ನಿಂತೊಡನೆಯೇ ಬಾಗಿಲನ್ನು ಸದ್ದಾಗದಂತೆ ಜೋಪಾನವಾಗಿ ಸರಿಸುತ್ತಾ ಕೋಣೆಯೊಳಗೆ ಪ್ರವೇಶಿಸಲು ಯತ್ನಿಸಿದ. ಆದರೆ ಮನುಷ್ಯ ಒಂದು ಕಾರ್ಯದಲ್ಲಿ ಅತ್ಯಂತ ಜಾಗರೂಕತೆ ವಹಿಸಿದಾಗ ಪೇಚಿಗೆ ಸಿಕ್ಕಿ ಬೀಳುವುದು ಎಲ್ಲರ ಸಾಮಾನ್ಯ ಅನುಭವ.

ಹಾಗೆಯೇ ಸದ್ದು ಮಾಡಬಾರದೆಂದು ವಿಷಕಂಠಯ್ಯ ಎಷ್ಟು ಜೋಕೆಯಾಗಿ ವರ್ತಿಸಿದರೂ ಬಾಗಿಲು 'ಕಿರ್' ಎನ್ನದೆ ಹೋಗಲಿಲ್ಲ. ಆ ಸದ್ದನ್ನು ಕೇಳಿದ ಮಗು ಒಂದು ಸಲ ಬೆಚ್ಚಿ ಮರಳಿ ನಿದ್ದೆ ಹೋಯಿತು. ಪಾರ್ವತಮ್ಮ ಬಾಯಿಯ ಮೇಲೆ ಬೆರಳಿಟ್ಟು ಸದ್ದಿಲ್ಲದ 'ಶ್' ಮಾಡಿದಳು. ವಿಷಕಂಠಯ್ಯ ಮತ್ತೂ ಹೆಚ್ಚಿನ ಜೋಪಾನದಿಂದ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಪಾರ್ವತಮ್ಮನ ಬಳಿ ಸಾರಿದ.

ಸ್ವಲ್ಪ ಹೊತ್ತಾದ ಬಳಿಕ, ಮೆತ್ತೆಯನ್ನೂ ಹಳೆಯ ಸೀರೆಯ ತುಂಡುಗಳನ್ನೂ ಹಾಕಿದ ಬಿದಿರು ತೊಟ್ಟಿಲಿನಲ್ಲಿ ಮಗುವನ್ನು ಸೂಕ್ಷ್ಮವಾಗಿ ಮಲಗಿಸಿ ಗಂಡನ ಕಡೆ ತಿರುಗಿದಳು ಪಾರ್ವತಮ್ಮ.

"ಏಟು ರಬ್ಬಗಾಲೆ ಮಾಡಿಬಿಡ್ತು ಕೂಸು, ಮೊದ್ಲೇ ತೊಟ್ಟಿಲೊಳಗೆ ಮನಗಿಸಬೇಕಾಗಿತ್ತು," ಸಮೀಪಕ್ಕೆ ಸರಿದು ಸಾಧ್ಯವಾದಷ್ಟು ತಗ್ಗಿದ ದನಿಯಲ್ಲಿ ನುಡಿದ ವಿಷಕಂಠಯ್ಯ.

"ಮನಗಿಸಿದ್ದೆ. ಹಂಗಾರೂ ಇಪರೀತ ಚಂಡಿ ತಗದುಬುಡ್ತು," ಮಗು ಎದ್ದೀತೆಂದು ಪಾರ್ವತಮ್ಮನೂ ಪಿಸುಮಾತಿನಲ್ಲಿಯೇ ಹೇಳಿದಳು.

"ಓಗ್ಲಿ ಬುಡು. ಸದ್ಯ ನಿಲ್ಲಸ್ತಲ್ಲಾ ಚಂಡೀಯ, ಅದೇ ಮುಕ್ಯ," ಎಂದು ಏನೋ ಯೋಚಿಸಿ "ಬೆಳಗಾಗೇ ಅವಳ್ಗೆ ಹೆಸರಿಡಾದು. ಹೆಚ್ಚುಗಟ್ಲೆ ಏನೇನು ಮನೇಲಿ?" ಎಂದು ವಿಚಾರಿಸಿದ.

"ಹುಳಿ ಅನ್ನ, ಸ್ಯಾವಿಗೆ, ಕಾಯಿಹಾಲು ಮಾಡ್ತೀನಿ ಅಂತಿದ್ರು ಅತ್ತಮ್ಮ," ಎಂದು ನಾಗಜ್ಜಿ ತನ್ನೊಡನೆ ಮಧ್ಯಾಹ್ನ ಆಡಿದ್ದನ್ನು ನೆನೆಸಿಕೊಳ್ಳುತ್ತಾ ಹೇಳಿದಳು ಪಾರ್ವತಮ್ಮ.

"ಪುಣ್ಯಾತ್ಗಿತ್ತಿ ಈ ವಯಸ್ಸಿನಲ್ಲೂ ಏಟು ಕೆಲ್ಸ ಮಾಡ್ತಾಳೆ?"

"ನಂಗೂ ಅದೇ ಚೋಜಿಗ," ಪಾರ್ವತಮ್ಮನೂ ಒಪ್ಪಿಗೆ ಸೂಚಿಸಿದಳು.

"ನಮ್ಮವ್ವ ಒಬ್ಬಳಿಲ್ಲದೆ ಇದ್ದರೆ ನಾ ಯೇನೇನ್ ಗತಿ ಆಯ್ತಿದ್ದೆನೊ," ಎಂದು ಆತ ಯೋಚಿಸುತ್ತ ಹೇಳಿದಾಗ ಪಾರ್ವತಮ್ಮ ತನ್ನಲ್ಲೇ "ಆ ಮಾತು ಸತ್ಯ" ಅಂದುಕೊಂಡಳು.

"ನಮ್ಮಯ್ಯ ತೀರಿಹೋದಾಗ ಇವಳು ನನ್ನ ತಾವೇ ಉಳಕೊಂಡಳು. ನಮ್ಮಣ್ಣ ಕೊತ್ತೇಗಾಲದಲ್ಲಿ ಲಗ್ನ ಮಾಡಿಕೊಂಡು ಒಂದಂಗಡಿ ತಗದಿದ್ದ. ಇವಳ್ನೂ ಒಂದಿಗೇ ಕರಕೊಂಡು ಹೋಗಾವ ಅಂತ ಬಲು ಪ್ರಯತ್ನ ಮಾಡಿದ. ಯೇನು ಮನಸ್ಸು ಬಂತೋ 'ನಾ ಅಲ್ಲಿಗೆ ಬರಾಕಿಲ್ಲ' ಅಂತ ಯೇಳಿ ಇಲ್ಲೇ ಉಳಕೊಂಡು ನನ್ನ ಒಬ್ಬ ಮನಸ ಅಂತ ಮಾಡಿದ್ಲು..... ನೀ ಹಟ್ಟೀಗೆ ಬರಾಕೆ ಮೊದ್ಲು ಇವ್ಳು ಒಬ್ಬಳೇ ಹಟ್ಟೀ ಕೆಲಸಾನೆಲ್ಲ ನಿಬಾಯಿಸಿಕೊಂಡು ಓಯ್ತಾ ಇದ್ಲು".

ಅನೇಕ ವೇಳೆ ಈ ಮಾತುಗಳನ್ನು ಕೇಳಿದ್ದರೂ ನಾಗಜ್ಜಿಯ ವಿಷಯವೆಂದರೆ ಆಸಕ್ತಿಯಿಂದಲೇ ಆಲಿಸುತ್ತಿದ್ದಳು ಪಾರ್ವತಮ್ಮ. ಇಷ್ಟರಲ್ಲಿ ಹಣತೆಯ ಬತ್ತಿ ಉರಿದುಹೋಗುತ್ತಾ ಬಂದು ಆರುವುದರಲ್ಲಿತ್ತು. 'ಕರಕಲ'ನ್ನು ಉದುರಿಸಿ ಬತ್ತಿಯ ಕುಡಿಯನ್ನು ಮಿಡಿದಳು ಪಾರ್ವತಮ್ಮ. ದೀಪ ದೊಡ್ಡದಾಗಿ ನಿದ್ರಾವಸ್ಥೆಯಲ್ಲಿದ್ದ ಕೂಸಿನ ಮುಖದ ಮೇಲೆ ಬಿದ್ದಿತು. ಆ ಹೊಂಬಣ್ಣದ ಬೆಳಕಿನಲ್ಲಿ ಮಗುವಿನ ಮುಖ ತನ್ನೆಲ್ಲ ಲಾವಣ್ಯವನ್ನೂ ಹೊರಸೂಸಿತು. ಮುದ್ದಾದ ಪುಟ್ಟಮುಖ, ಮುದ್ದಾದ ಪುಟ್ಟಬಾಯಿ, ಅದರಲ್ಲಿ ಸದಾ ಅರಳುವಂತಿರುವ ಹೂ ನಗು.

ಹೆಚ್ಚಿದ ಪ್ರಕಾಶದಲ್ಲಿ ದಂಪತಿಗಳಿಬ್ಬರೂ ತಮ್ಮೆದುರಿಗೆ ಮಲಗಿದ ಸೌಂದರ್ಯ ರಾಶಿಯನ್ನೇ ನಿಟ್ಟಿಸುತ್ತಾ ಕುಳಿತರು. ಮಗುವಿನ ಮುಖದಲ್ಲಿ ಆಗಾಗ ಅರಳುತ್ತಿದ್ದ ನಗುವಿನ ತೆರೆಗಳನ್ನು ನೋಡಿ ಪಾರ್ವತಮ್ಮನೇ ಮೊದಲು ಮಾತು ತೆಗೆದಳು.

"ಜನ ಆಡಿಕಳೊ ಹಂಗೆ ವಿಧಿಯಮ್ಮ ಚಕ್ಕಲಗುಲಿ ಆಡಸ್ತಾ ಇರಬೈದು ಮೊಗೀಗೆ. ಅದ್ಕೇ ಹಂಗೆ ಗಳಿಗ್ಗೊಂದು ಸರ್ತಿ ನಗ್ತಾ ಇರ್ತದೆ."

'ಹಾಲು ತುಟಿ'ಗಳ ಮೇಲೆ ಹರಿದಾಡುತ್ತಿದ್ದ ನಗುವನ್ನು ಕಂಡ ಆ ಕ್ಷಣಕ್ಕೆ ವಿಷಕಂಠಯ್ಯನಿಗೆ ಗಂಡುಮಕ್ಕಳಿಲ್ಲದ ಚಿಂತೆ ಅಳಿಸಿಹೋಗಿತ್ತು. ಸಂತೋಷದಿಂದ ಹಾಗೇ ಶಿಶುವನ್ನು ನಿರೀಕ್ಷಿಸುತ್ತಿದ್ದಂತೆ ಏನೋ ಹೊಳೆದಂತಾಗಿ ಕೇಳಿದ.

"ಮೋಗಿಗೆ ಯೇನ್ ಹೆಸರಿಡೋದಾ ಅಂತ ಯೋಚ್ಣೆ ಮಾಡಿದೆ?"

"ನಾ ಯೇನ್ ಯೋಚ್ಣೆ ಮಾಡ್ನಿಲ್ಲ."

"ನೀನೂ ಸರಿ, ನಾಳೀಕೇ ಅಲ್ಲವಾ ಮೊಗೀಗೆ ಹೆಸರಿಡೋದು?"

"ಹ್ಞೂ....."

"ಮಂತೆ?"

"ಅತ್ತೆಯೇನೋ ಅಂತಿದ್ದರು ...."

"ಯೇನಂತ?"

"ಸರ್ವಮಂಗಳಾ ಅಂತ ಕರಿಯುವಾ, ಹಿಂದೆ ನಮ್ಮ ಮುತ್ತಜ್ಜೀಗೆ ಅದೇ ಹೆಸರಿತ್ತು, ಅಂತ."

"ಒಳ್ಳೇ ಕೆಲಸ .... ಸರ್ವಮಂಗಳಾ ! ..... ಗೌರಮ್ಮನ ಹೆಸರು. ಅದ್ಕೇನಾ ಆಗಬೋದು."

ಗಂಡಹೆಂಡಿರ ಸಂವಾದ ಹೀಗೆ ಸಾಗಿದ್ದಾಗ ನಾಗಜ್ಜಿ ನಟರಾಜನನ್ನು ಕೂಡಿಕೊಂಡು ತೊಟ್ಟಿಯ ಒಂದು ಪಾರ್ಶ್ವಕ್ಕೆ ಮಲಗಿದ್ದಳು. ವಿಷಕಂಠಯ್ಯ ಎಷ್ಟು ಹೊತ್ತಾದರೂ ಬಾಣಂತಿ ಕೋಣೆಯನ್ನು ಬಿಟ್ಟು ಬಾರದಿದ್ದುದರಿಂದ ಅವಳು ತವಕಗೊಂಡಿದ್ದಳು. ಬಾಣಂತಿಯ ಮೈ ಎಲ್ಲಿ ಹದಗೆಡುವುದೊ ಎಂದು ದಿಗಿಲುಪಡುತ್ತಿದ್ದಳು, ಅಷ್ಟು ಹೊತ್ತು ಇಷ್ಟು ಹೊತ್ತು ನೋಡಿ ವಿಷಕಂಠಯ್ಯ ಏನಾದರೂ ಬಾರದಿರುವುದನ್ನು ಕಂಡು, ಕಡೆಗೆ ಮನಸ್ಸು ತಡೆಯದೆ "ಇಸಕಂಠೂ" ಎಂದು ಕೂಗೇಬಿಟ್ಟಳು !

ತಪ್ಪು ಮಾಡುವವನನ್ನು ಹಠಾತ್ತನೆ ಎಚ್ಚರಿಸಿದರೆ ಬೆಚ್ಚಿಬೀಳುವಂತೆ "ಏನವ್ವಾ" ಎನ್ನುತ ಬೆಚ್ಚಿದ ವಿಷಕಂಠಯ್ಯ.

"ಬಾಣಂತೀಗೆ ಕಣ್ಣು ಹತ್ತಗೊಡದೆ ಯೇನು ಮಾಡಿಯೋ ಅಲ್ಲಿ?" ಪುಟ್ಟಮಕ್ಕಳನ್ನು ಗದರಿಸಿಕೊಳ್ಳುವಂತೆ ಗದರಿದಳು ನಾಗಜ್ಜಿ. ಮಗು ಬೆಳೆದು ಎಷ್ಟೇ ದೊಡ್ಡವನಾದರೂ ಹಡೆದ ತಾಯಿಗೆ ಯಾವಾಗಲೂ ಚಿಕ್ಕಮಗುವೇ ಅಲ್ಲವೇ?

ಆ ಮಾತುಗಳು ಕಿವಿಗೆ ಬೀಳುತ್ತಲೂ ವಿಷಕಂಠಯ್ಯ ನಾಚಿ ಒಂದು ಹಿಡಿಯಾಗಿ ಬಾಣಂತಿ ಕೋಣೆಯಿಂದ ಹೊರಗೆ ಬಂದು ಮಾತಿಲ್ಲದೆ ಸರಸರನೆ ಜಗಲಿಗೆ ನಡೆದುಹೋಗಿ ಚಾಪೆಯನ್ನು ಬಿಡಿಸಿ ಉರುಳಿಕೊಂಡ. ನಿದ್ದೆ ಬೇಗ ಬರಲಿಲ್ಲ. ಸೆಕೆಯಲ್ಲಿ ಹಾಗೂ ಹೀಗೂ ಸ್ವಲ್ಪ ಹೊತ್ತು ಚಾಪೆಯ ಮೇಲೆ ಹೊರಳಾಡಿದ ನಂತರ ಎಲ್ಲೋ ಕೊಂಚ ನಿದ್ದೆ ಕಣ್ಣಿಗೆ ಹತ್ತಿತ್ತು .... ಇದ್ದಕ್ಕಿದ್ದಂತೆಯೇ ದೂರದಲ್ಲಿ ಗಂಟೆಗಳ ಜಣಜಣರವ ಕೇಳಿ ಎದ್ದು ಕುಳಿತ. ಸದ್ದು ಹತ್ತಿರ ಹತ್ತಿರ ಬಂದು ಇವರ ಮನೆಯ ಮುಂದೇ ನಿಂತಿತು.

"ಕೊತ್ತೇಗಾಲದಿಂದ ಗಾಡಿ ಬಂದಂಗದೆ ನೋಡೋ ಇಸಕಂಠೂ," ಎಂದು ದೀಪವನ್ನು ಹಚ್ಚುತ್ತಾ ಒಳಗಿನಿಂದ ಕೂಗಿದಳು ನಾಗಜ್ಜಿ.

ಬಾಣಂತಿ ಕೋಣೆಯಲ್ಲಿಯೂ ದೀವಿಗೆ ಹೊತ್ತಿಕೊಂಡಿತು.

ವಿಷಕಂಠಯ್ಯ ಬೇಗ ಹೋಗಿ ನೆಂಟರನ್ನು ಗಾಡಿಯಿಂದ ಕೆಳಗಿಳಿಸಿಕೊಂಡ. ಅತ್ತಿಗೆ ನರಸಮ್ಮ, ಅವಳ ಮಗಳು ಚೆಲುವಮ್ಮ, ಚೆಲುವಮ್ಮನ ಎರಡು ಮಕ್ಕಳು, ನರಸಮ್ಮನ ತಮ್ಮ ಸುಬ್ಬರಾಯ ಎಲ್ಲರೂ ಒಬ್ಬೊಬ್ಬರಾಗಿ ಇಳಿದರು. ತನ್ನ ಅಣ್ಣ ಕಾಳಯ್ಯ ಬಂದಿರದಿದ್ದುದನ್ನು ಕಂಡು ವಿಷಕಂಠಯ್ಯನ ಮುಖ ಚಿಕ್ಕದಾಯಿತು.

"ಅದೇನಾ ಅಣ್ಣ ಬರ್ನಿಲ್ಲ" ಎಂದು "ಹ್ಞೂ, ಬರಾರೆ ಏನ್ ನಿಸೂರು ..... ಗರೀಬರ ಗುಡಿಸಲು" ಎನ್ನುತ್ತಾ ಸುಮ್ಮನಾದ.

ಕತ್ತಲೆಯಲ್ಲಿಯೂ ಕೈಗಳಿಗೆ ಹಾಕಿದ ಚಿನ್ನದ ಪೌಚಿ ತಿರುವುತ್ತಾ ಅತ್ತಿಗೆ ನರಸಮ್ಮ,

"ಅವರವರು ಪಡಕಂಡು ಬಂದದ್ದು. ಐಶ್ವರ್ಯ ಬಾ ಅಂದರೆ ಬಂದಾತಾ? .... ಅವರು ತರ್ದೂದಾಗಿ ಹುಣಸೂರಿಗೆ ಹೋಗವ್ರೆ. ಆದ್ರೆ ಬೆಳಗ್ಗೆ ಬತ್ತೀನಿ ಅಂತ ಹೇಳೂ ಅಂದ್ರೂ," ಎಂದಳು.

೪

ಮಾರನೆಯ ದಿನ ವಿಷಕಂಠಯ್ಯನ ಚಿಕ್ಕಹಟ್ಟಿ, ಮಕ್ಕಳಾದ ಮನೆಯ ಉತ್ಸಾಹ ಸಂಭ್ರಮಗಳಲ್ಲಿ ಮೆರೆಯಿತು. ಹೊರಗೆ ಮಾವಿನಸೊಪ್ಪು, ಬಾಳೆಯ ಕಂದುಗಳ ಅಲಂಕಾರ, ಓಲಗದ ಮಂಗಳವಾದ್ಯ, ಹೋಗಿಬರುವವರ ಓಡಾಟ, ಒಳಗೆ ಮಕ್ಕಳು ಮರಿಯ ಗದ್ದಲ, ಹೆಂಗಸರ ಸಡಗರ.

ನಾಗಜ್ಜಿಯಂತೂ ನಾಲ್ಕು ಗಂಟೆಗೇ ಎದ್ದು ತಣ್ಣೀರು ಮಿಂದಿದ್ದಳು. ಕಸ, ಮುಸುರೆ ತೆಗೆದ ಬಳಿಕ ಮಡಕೆ 'ತೆಗೆ'ದಳು. ಅಲ್ಲಿಯತನಕ ಉಪಯೋಗಿಸುತ್ತಿದ್ದ ಹಳೆಯ ಮಡಕೆ ಕುಡಿಕೆಗಳು; ಹಿಟ್ಟಿನ ದೊಣ್ಣೆ, ಕವಗಡ್ಡಿಗಳು : ಎಸರು ಮಾಡುವ ಸೊಟಗ ಎಲ್ಲವನ್ನೂ ಹೊರಗೆಸೆದು ಹೊಸ ಮಡಿಕೆ, ಕುಡಿಕೆಗಳು : ಹಿಟ್ಟಿನ ದೊಣ್ಣೆ, ಕವೆಗಡ್ಡಿ, ಸೊಟಗಗಳನ್ನು ತಂದಿಟ್ಟಳು. ಹಳ್ಳಿಗಳಲ್ಲಿ ಸೂತಕ ಕಳೆಯಲು ಹೀಗೆ ಮಡಿಕೆ 'ತೆಗೆ'ಯುತ್ತಾರೆ.

ಮನೆಗೆ ನರಸಮ್ಮ ನಾಗಜ್ಜಿಯ ಕೆಲಸದಲ್ಲಿ ಎಳ್ಳಷ್ಟೂ ನೆರವು ನೀಡಲಿಲ್ಲ. ಬಂದು ಬಾಣಂತಿ ಕೋಣೆಯನ್ನು ಸೇರಿ ಓರಗಿತ್ತಿಯ ಮುಂದೆ ತನ್ನ ಸಿರಿತನವನ್ನು ಪ್ರದರ್ಶಿಸುವುದರಲ್ಲಿ ನಿರತಳಾದಳು. ತನ್ನ ಧರ್ಮಾವರದ ಸೀರೆಯ ನಿರಿಗೆಗಳನ್ನು ಕೊಡವಿಕೊಳ್ಳುತ್ತಾ,

"ಏಟು ಧೂಳವ್ವಾ ಈ ಹಟ್ಟೀಲಿ" ಎಂದು ಹುಸಿ ಬೇಸರಿಕೆಯನ್ನು ನಟಿಸಿದಳು.

ಹಟ್ಟಿ ಧೂಳಿಲ್ಲದೆ ಸ್ವಚ್ಛವಾಗಿಯೇ ಇತ್ತು. ಹಳ್ಳಿಯ ಜನರಂತೂ "ಹಂಗಲ್ಲವಾ ಹಟ್ಟಿ ಇಟ್ಟುಕಳೋದು ಅಂದ್ರೆ .... ಈ ಆಚಾರಿಗಳೇ ಹಿಂಗೆ–ಬೋ ಅಚ್ಚುಗಟ್ಟು, ಬೋ ಅಚ್ಚುಗಟ್ಟು–ಒಂದು ಕಡ್ಡಿ ಎಲ್ಲಾರಾ ಬೀಳಾಕುಂಟ ...." ಎಂದು ಮೆಚ್ಚಿಕೊಂಡಿದ್ದರು. ಆದರೂ ಪಾರ್ವತಮ್ಮನ ಒಳ್ಳೆಯ ಸ್ವಭಾವ, "ಬಡವರ ಹಟ್ಟಿ, ಯೇನ್ ಮಾಡೋದು," ಎಂದು ಮಾತ್ರ ಹೇಳಿಸಿತು. ಪಾರ್ವತಮ್ಮ ತನ್ನ ಮನೆಯನ್ನು "ಬಡವರ ಹಟ್ಟಿ" ಎಂದು ಕರೆದುಕೊಂಡುದು ನರಸಮ್ಮನಿಗೆ "ನೀ ಐಸ್ವರ್ಯವಂತೆ" ಎಂದು ಹೇಳಿದಂತಾಗಿ ಅವಳ ಚಿತ್ತ ಪ್ರಸನ್ನವಾಯಿತು. ಹಾಗೆಯೇ ಸೆರಗನ್ನು ಸರಿಸಿ, ತಾನು ಹೊಸದಾಗಿ ಮಾಡಿಸಿದ ಚಿನ್ನದ ಗುಂಡಿನ ಸರವನ್ನು ತೋರಿಸಿದಳು. ಆದರೆ ಆ ಆಭರಣವನ್ನು ನೋಡಿಯೂ

"ಅಯ್ಯೋ, ಏಟು ಚೆಂದಾಗದೆ! ಯಾರ ತಾವು ಮಾಡಿಸಿದಿರಿ? ನಿಮ್ಮ ಯಜಮಾನರೇ ಮಾಡಿದರಾ? ಏಟು ಬಂಗಾರ ಮುಟ್ಟಿತು..." ಎಂದು ಮುಂತಾಗಿ ಕೇಳದ ಪಾರ್ವತಮ್ಮನನ್ನು ಕಂಡು ನರಸಮ್ಮನ ಮನಸ್ಸು ರೋಸಿತು. "ಇವಳಿಗೆ ಹೊಟ್ಟೆಕಿಚ್ಚು" ಎಂದುಕೊಂಡಳು. ಇರಲಿ ಅನ್ನುತ್ತಾ,

"ಮೊಗೀಗೆ ಯೇನೇನ್ ಹೊಸಬಟ್ಟೆ ಹೊಲಿಸಿದ್ದೀರಿ ಪಾರತಿ?" ಎಂದು ಕೇಳಿದಳು.

"ಇವೇ ಹೊಸಬಟ್ಟೆ" ಎಂದು ಪಾರ್ವತಮ್ಮ ಕಪ್ಪು ಕುಲಾವಿಯೊಂದನ್ನು ಅಂಗಿಯೊಂದನ್ನೂ ಗೂಡಿನೊಳಗಿಂದ ತೆಗೆದು ತೋರಿಸಿದಳು.

ಅಂಗಿ, ಕುಲಾವಿ ಎರಡೂ ಹತ್ತಿಯ ಸಾಧಾರಣ ಬಟ್ಟೆ. ತಿರಸ್ಕಾರದಿಂದ ಮೂಗು ಮೇಲೇರಿಸಿ "ಇದೇಯಾ ತರೋದು?.... ದಿನಾ ಹುಟ್ಟಾತಾ ಮೊಗ?" ಎಂದು ಹೇಳಿ ತನ್ನ ತೊಡೆಯಮೇಲಿದ್ದ ಮೊಮ್ಮಗಳ ಬಟ್ಟೆಯನ್ನು ತೋರುತ್ತಾ,

"ಇದ್ನೋಡು ಅಪ್ಪಟ ರೇಸ್ಮೇದು, ಇಂತಾವು ಎಂಡು ಅವೆ ನನ್ನ ಮಗಳತ್ತರ" ಎಂದಳು. ಅಲ್ಲದೆ ಪಕ್ಕದಲ್ಲೇ ಆಡುತ್ತಿದ್ದ ಮೊಮ್ಮಗನ ಬಟ್ಟೆಯನ್ನೂ ಹೀಗೆಯೇ ಹೊಗಳಿ ತೋರಿದಳು.

ಹಾಗೆಯೇ ಮಗಳ ಸೀರೆಯನ್ನೂ ಪ್ರದರ್ಶಿಸಬೇಕೆಂದು ಆಸೆಯಾಯಿತು. "ಚೆಲುವೀ–ಚೆಲುವೀ" ಎಂದು ಕೂಗಿದಳು.

ಚೆಲುವಮ್ಮ ಅಡಿಗೆ ಮನೆಗೆ ಸೇರಿದ್ದುದರಿಂದ "ಬಂದೇಕಮ್ಮಾ" ಎಂದು ಹೇಳಿದರೂ ಕೂಡಲೇ ಬರಲಿಲ್ಲ. ನಾಗಜ್ಜಿಯೇ ಬಂದು "ಯೇನ್ ಮಾಡೋದು. ನಿನ್ನ ಮಗಳು ಬೋ ಹಟಮಾರಿ. ನಾನೂ ಏಟೋ ಹೇಳಿದೆ 'ಅಡಿಗೆ ಪಂಚಾತಿ ನಿಂಗೆ ಬ್ಯಾಡ' ಅಂತ ಇಂಕರನಾರೂ ಬಾವಣಿಸಬೇಕಲ್ಲ ನನ್ನ ಮಾತಾ ....? ತಾನೇ ಅಡುತ್ತಾ ಕುಂತವಳೆ," ಎಂದಳು.

"ಇನ್ನೇನಾ, ಅರೇದ ಎಣ್ಣು ಮಾಡದೆ ಅಣ್ಣು ಮುದುಕಿ ನೀ ಅಡಕ್ಕಾದಾತಾ, ಅಬ್ಬದ ಅಡಿಗೇಯಾ? ಸುಮ್ಮಕಿರು ನಾಗಜ್ಜಿ," ಎಂದು ಕುಳಿತುಕೊಳ್ಳುತ್ತಾ ಸಣ್ಣೇಗೌಡನ ಹೆಂಡತಿ ಮರಿನಿಂಗಿ ಹೇಳಿದಳು.

ನರಸಮ್ಮ ಹೊಸದನಿಯನ್ನು ಕೇಳಿ ಹೊರಳಿ ನೋಡಿದಳು. ಮರಿನಿಂಗಿ ದಪ್ಪಪಾತ್ರೆಯ ತುಂಬ ಬೆಣ್ಣೆ ತಂದಿದ್ದುದು ಅವಳ ಕಣ್ಣಿಗೆ ಬಿದ್ದಿತು. ಅಷ್ಟರಲ್ಲಿ ಒಳಗೆ ಹೋಗಲು ಕಾಲ್ತೆಗೆಯುತ್ತಿದ್ದ ನಾಗಜ್ಜಿಯನ್ನುದ್ದೇಶಿಸಿ ಮರಿನಿಂಗಿ ಹೇಳಿದ, ಮಾತುಗಳೂ ಅವಳ ಕಿವಿಗೆ ಬಿದ್ದವು. "ತಕ್ಕೊವ್ವಾ ಐದು ಸೇರು ಬೆಣ್ಣೆ ಅದೆ." ನಾಗಜ್ಜಿ ದುಡ್ಡು ತರಲು ಹೋಗುತ್ತಿರಲು "ದುಡ್ಡು ಬ್ಯಾಡ, ಯೇನೂ ಬ್ಯಾಡ ಬಾ ನನ್ನವ್ವ, ಇದು ಬೋ ಎಚ್ಚಾ?"

ನರಸಮ್ಮ ತನ್ನ ಕಿವಿಯನ್ನೇ ತಾನು ನಂಬದಾದಳು. ಬೆಳಗಿನಿಂದಲೂ ಅವಳು, ನೋಡುತ್ತಲೇ ಬಂದಿದ್ದಳು. ಮುಂಜಾವಿನಲ್ಲೇ ಬಂದ ಹಳ್ಳಿಯ ಜನ ಒಂದಲ್ಲ ಒಂದು

ಕೆಲಸದಲ್ಲಿ ನೆರವಾಗಿದ್ದರು. ಬಾಳೆಯ ಕಂದು ತಂದು ಬಾಗಿಲಿಗೆ ಕಟ್ಟುವುದು, ಮಾವಿನ ಎಲೆಗಳನ್ನು ಬಿಡಿಸಿ ಹೊರ ಬಾಗಿಲುಗಳನ್ನು, ಅಲಂಕಾರ ಮಾಡುವುದರಲ್ಲಿ ಗಂಡಸರು ಸಹಕರಿಸಿದರೆ ಅಕ್ಕಿ, ರಾಗಿ, 'ಮಾಡಿ' ಕೊಡುವುದು, ಬೀಸುವುದು ಮುಂತಾದ ಕಾರ್ಯಗಳಲ್ಲಿ ಹಳ್ಳಿಯ ಹೆಂಗಸರ ಮುತುವರ್ಜಿ ಬಹಳ ಇತ್ತು. ಬಡವನಾದರೂ ವಿಷಕಂಠಯ್ಯನಿಗೆ ಆ ಗ್ರಾಮದಲ್ಲಿ ದೊರೆಯುತ್ತಿದ್ದ "ಮರ್ಯಾದೆ" ಅನುಕೂಲಸ್ಥನಾದ ತನ್ನ ಪತಿಗೆ ಕೊತ್ತೇಗಾಲದಲ್ಲಿ ಸಿಗದಿದ್ದುದನ್ನು ಮನಸ್ಸಿನಲ್ಲಿಯೇ ಹೋಲಿಸಿಕೊಂಡಾಗ ನರಸಮ್ಮನಿಗೆ ಹೊಟ್ಟೆಯೊಳಗೆ ಏನೋ ಒಂದು ತರಹ ಆಗುತ್ತಿತ್ತು. ಅಷ್ಟರಲ್ಲಿ ನಟರಾಜ ತನಗಿಂತ ಮೂರು ನಾಲ್ಕು ವರ್ಷ ದೊಡ್ಡವನಾದ ನರಸಮ್ಮನ ತಮ್ಮ ಸುಬ್ಬರಾಯಿಯೊಡನೆ ಆಡುತ್ತ "ಅಜ್ಜಿ ತಾನಕ್ಕೆ ಕರೀತದೆ" ಎಂದು ಹೇಳಿದ.

ಚೆಲುವಮ್ಮನೇ ಬಾಣಂತಿಗೂ ಮಗುವಿಗೂ ಮಂಗಳಸ್ನಾನ ಮಾಡಿಸಿದಳು. ಹೊಸ ಅರಿವೆಗಳನ್ನು ಉಡಿಸಿದ್ದಾಯಿತು. ಆಮೇಲೆ ವಸ್ತ್ರ ಹೊದಿಸಿದ ಮಣೆಯ ಮೇಲೆ ಬಾಣಂತಿ ಮಗುವನ್ನು ತೊಡೆಯಮೇಲಿಟ್ಟು ಕುಳಿತಳು. ಎದುರಿಗೆ ಹಳ್ಳಿಯ ಮಠದ "ಉಪಾಧ್ಯ" ಆಯರಹಳ್ಳಿ ಅಯ್ಯ ಪೌರೋಹಿತ್ಯದ ಸಮಸ್ತ ಕಾರ್ಯಭಾರವನ್ನೂ ವಹಿಸಿ ಕುಳಿತಿದ್ದ.

ಸೆರಗನ್ನು ತಲೆಯಮೇಲೆ ಮುಸುಕಿನಂತೆ ಎಳೆದು ಕುಳಿತ ಪಾರ್ವತಮ್ಮನ ತೊಡೆಯಲ್ಲಿ ಕಣ್ಣಿಗೆ ಕಾಡಿಗೆ ಹಚ್ಚಿ, ಕಪ್ಪು ಬಣ್ಣದ ಕುಲಾವಿಯನ್ನು ಧರಿಸಿದ್ದ ಶಿಶುವಿನ ವದನ ಕಪ್ಪು ಮೋಡಗಳ ಮಧ್ಯೆ ಇಣುಕುವ ಚಂದ್ರಬಿಂಬದಂತೆ ಶೋಭಾಯಮಾನವಾಗಿತ್ತು. ಹಳ್ಳಿಯ ಹೆಂಗಸರ ಮಧ್ಯೆ ಮಂಡಿಸಿದ ಮರಿನಿಂಗಿಯಂತೂ "ದಿಷ್ಟಿ ಬಡಿಯೋ ಆಂಗೆ ಅದೆ ಮೊಗ" ಎಂದು ಅಕ್ಕಪಕ್ಕದವರೊಡನೆ ಹೇಳುತ್ತಿದ್ದಳು.

ಕಳಸದಲ್ಲಿಟ್ಟ ಶಕ್ತಿಪೂಜೆಯಾದ ಮೇಲೆ ಆಯರಹಳ್ಳಿ ಅಯ್ಯ ಲಿಂಗವನ್ನು ಶಿಶುವಿನ ಕಂಠಕ್ಕೆ ಮುಟ್ಟಿಸಿ ಕೆಳಗಿಟ್ಟು, ಅಕ್ಷತೆಯನ್ನು ಕೈಗೆ ತೆಗೆದುಕೊಂಡು "ಶಿಶುವಿಗೆ ನಾಮಕರಣ ಮಾಡಬೇಕು" ಎಂದು ಸುತ್ತಲೂ ನೋಡುತ್ತ ಕೇಳಿದ. ಒಳಬಾಗಿಲಿಗೆ ಒರಗಿ ನಿಂತ ನಾಗಜ್ಜಿ "ಸರ್ವಮಂಗಳಾ ಅಂತ ಕರೀರಿ ಅಯ್ನೋರೆ" ಎಂದಳು. ಅಕ್ಷತೆಯ ಕಾಳನ್ನು ಕಳಶದ ಮೇಲೂ, ಲಿಂಗದ ಮೇಲೂ ಕೂಸಿನ ಮೇಲೂ ಹಾಕುತ್ತಾ "ಸರ್ವಮಂಗಳಾ – ಸರ್ವಮಂಗಳಾ – ಸರ್ವಮಂಗಳಾ" ಎಂದು ಘೋಷಿಸಿದ ಆಯರಹಳ್ಳಿ ಅಯ್ಯ.

ಶ್ರೀ

ಈಗೀಗ ನಟರಾಜ ಕಲ್ಲಹಳ್ಳಿಯ ಹೊಸ ಜಾಗ, ಹೊಸ ವಾತಾವರಣಗಳಿಗೆ ಹೊಂದಿಕೊಳ್ಳುತ್ತಿದ್ದ. ಬಂದ ಹೊಸತರಲ್ಲಿ ಕೆಲಕಾಲ ಗತಿಸಿದ ತಂದೆ ತಾಯಿಯರನ್ನು ನೆನಸಿಕೊಂಡು, ಅದರಲ್ಲೂ ತಾಯಿಯನ್ನು ಸ್ಮರಿಸಿಕೊಂಡು ಬಹುವಾಗಿ "ಜರೆದು" ಹೋಗಿದ್ದ. ಪಾರ್ವತಮ್ಮನೂ, ನಾಗಜ್ಜಿಯೂ ಪರಿಪರಿಯಿಂದ ಉಪಚರಿಸಿದರೂ ಕಾಣದ ಅಮ್ಮನ

ಕೊರಗು ಹುಡುಗನನ್ನು ಕೃಶಗೊಳಿಸಿತ್ತು. ಆದರೆ, ಸರ್ವಮಂಗಳಾ ಮನೆಯಲ್ಲಿ ಕಾಣಿಸಿಕೊಂಡಂದಿನಿಂದ ನಟರಾಜನಲ್ಲಿ ಮಾರ್ಪಾಡಾಗುತ್ತಾ ಹೋಯಿತು. ಸರ್ವಮಂಗಳೆಯನ್ನು ಎತ್ತಿಕೊಳ್ಳುವುದು ಆಡಿಸುವುದರಲ್ಲಿ ಜಗತ್ತನ್ನೇ ಮರೆಯುತ್ತಿದ್ದ. ಈಚೀಚೆಗೆ ಮಂಗಳೆ ವಿಶೇಷ ಚಂಡಿಮಾಡಿದಾಗಲೆಲ್ಲಾ "ತಗೊಪ್ಪ ನಟ್ರಾಜ. ನಿನ್ನತ್ತರ ಆದ್ರೆ ಸುಮ್ಮಕಿರ್ತಾಳೆ. ಒಸಿ ಒರಗಡೆ ಎತ್ತಿಕಂಡೋಗಿ ಆಡಿಸು" ಎಂದು ಅವಳನ್ನು ಅವನ ಕೈಯಲ್ಲಿಟ್ಟು ನಿಶ್ಚಿಂತಳಾಗುತ್ತಿದ್ದಳು.

ಪಾರ್ವತಮ್ಮನಿಗೆ ಇನ್ನೂ ಪೂರ್ಣವಾಗಿ ಸುಧಾರಿಸಿರಲಿಲ್ಲ. ಸಣ್ಣಗೆ ಜ್ವರ ಬರುತ್ತಿತ್ತು. ನಾಗಜ್ಜಿಗೆ ಮನೆಗೆಲಸದ ಕಾಷ್ಟವ್ಯಸನದಲ್ಲಿ ಬಿಡುವೇ ಸಿಗದು. ಹೀಗಾಗಿ ಸರ್ವಮಂಗಳೆ ನಟರಾಜನ, ತೋಳತೊಟ್ಟಿಲಿನಲ್ಲಿಯೇ ಬೆಳೆಯುತ್ತ ಬಂದಳು.

ಅವನೇ ಎತ್ತಿಕೊಳ್ಳಬೇಕು. ಅವನೇ ಆಡಿಸಬೇಕು. ಹಾಗೆ ಆಡಿಸುವುದರಲ್ಲಿ ನಟರಾಜನಿಗೆ ಸ್ವಲ್ಪವೂ ಬೇಸರವಿಲ್ಲ. ಮೂರು ವರ್ಷದ ಮಂಗಳೆಗೆ ನಟರಾಜ ಕುದುರೆಯಾಗುವನು. ಅವನ ಬೆನ್ನಿನ ಮೇಲೆ ಹತ್ತಿ ಕುಳಿತ ಮಂಗಳೆ "ಹೇಯ್ .... ಕುದ್ರೆ ..... ಕುದ್ರೆ ....." ಎಂದು ಕೇಕೆ ಹಾಕುತ್ತಾ ಸವಾರಿ ಮಾಡುವಳು.

ನಟರಾಜನನ್ನು ಈಗ ಮಠಕ್ಕೆ ಹಾಕಿದ್ದರು. ಅವನು ಮಠಕ್ಕೆ ಹೊರಟಾಗಲೆಲ್ಲ ಮಂಗಳೆಯ ರಾದ್ಧಾಂತ ಹೇಳತೀರದು. ತುದಿಬಾಗಿಲಿನವರೆಗೂ ಅವನ ಕುತ್ತಿಗೆಗೆ ಜೋತುಬೀಳುತ್ತಿದ್ದಳು. ಪಾರ್ವತಮ್ಮ ಪುಸಿಮಾಡಿ ಚಕ್ಕಲಿ, ಕೋಡುಬಳೆ ಮಾಡಿಕೊಡುವೆನೆಂದು ಆಸೆ ತೋರಿಸಿ ಅತಿ ಕಷ್ಟದಿಂದ ಅವಳನ್ನು ಮನೆಯಲ್ಲೇ ಉಳಿಸಿಕೊಳ್ಳುತ್ತಿದ್ದಳು.

ಒಂದು ದಿನ ನಟರಾಜ ಹೊರ ಪಡಸಾಲೆಗೆ ಹೋದೊಡನೆಯೇ ಅಸಾಧ್ಯ ಗಲಾಟೆಗೆ ಆರಂಭಿಸಿದಳು ಮಂಗಳೆ. "ತಾಳು. ಒಳಗೋಗಿ ಕೊಮರಿ ಬೆಲ್ಲ ತಂದುಕೊಡ್ತೀನಿ, ನೀ ತಿನ್ನಾಕೆ" ಎಂದು ಪಾರ್ವತಮ್ಮ ಮುದ್ದಿಸಿ ಹೇಳಿ, ಅಡಿಗೆ ಕೋಣೆಯನ್ನು ಪ್ರವೇಶಿಸುತ್ತಾ "ಕೊಮರಿ ಯಾವ ಕುಕ್ಕೇಲಿ ಅದೆ ಅತ್ತೇ" ಎಂದಳು. ತೊಟ್ಟಿಯಲ್ಲಿ ಗೋಡೆಯನ್ನು ಆತು ಕುಳಿತ ಮಂಗಳೆ "ಊ ....ಊ...." ಎಂದು ಕಣ್ಣೀರಿಲ್ಲದ ಅಳುವನ್ನು ಅಳುತ್ತಾ ಮೆಲ್ಲನೆ ಬೀದಿಯ ಬಾಗಿಲಿಗೆ ಜಾರಿ ನೋಡಿದಳು. ನಟರಾಜ ಬಹಳ ದೂರ ಹೋಗಿರಲಿಲ್ಲ. ಒಳಗೆ ಒಂದು ಸಲ ಭಯದಿಂದ ನೋಡಿದಳು ಮಂಗಳೆ. ಪಾರ್ವತಮ್ಮ ಅಟ್ಟವನ್ನೇರಿ ಕೊಬ್ಬರಿ ಇಟ್ಟ ಕುಕ್ಕೆಯನ್ನು ಅರಸುವುದರಲ್ಲಿ ನಿರತಳಾಗಿದ್ದಳು. ಅದೇ ಸಮಯವನ್ನು ಸಾಧಿಸಿ ನಟರಾಜನ ಹಿಂದೆಯೇ ಹೊರಟಳು ಮಂಗಳೆ.

ಮಠ ದೂರವಿರಲಿಲ್ಲ. ಆದರೆ ಮಂಗಳೆ ತನ್ನ ಪುಟ್ಟಪುಟ್ಟ ಹೆಜ್ಜೆ ಇಡುತ್ತಾ ಸಾಗುವುದರಲ್ಲಿ ನಟರಾಜನಾಗಲೇ ಮಠವನ್ನು ಸೇರಿದ್ದ. ಮಂಗಳೆ ಮಠದ ಬಾಗಿಲಿಗೆ ಹೋಗಿ ನಿಂತಳು. ಒಳಗೆ ಮಕ್ಕಳು ದೇವತಾ ಪ್ರಾರ್ಥನೆ ಮಾಡುತ್ತಿದ್ದರು :

ಸ್ವಾಮಿದೇವನೆ ಲೋಕಪಾಲನೆ ತೇನಮಸ್ತು ನಮೋಸ್ತುತೆ
ಪ್ರೇಮದಿಂದಲಿ ಕಾವುದೆಮ್ಮನು ತೇನಮಸ್ತು ನಮೋಸ್ತುತೆ,
....

"ಅಟಾಜ" ಎಂದು ಮಧ್ಯದಲ್ಲೆ, ಬಾಯಿಹಾಕಿ ಮಂಗಳೆ ಕೂಗಿದಳು. ಪ್ರಾರ್ಥನೆ ನಿಲ್ಲಿಸಿ 'ಉಪಾದ್ಯ'ರೊಡನೆ ಶಿಷ್ಯವೃಂದವೂ ಮಠದ ಬಾಗಿಲೆಡೆಗೆ ದೃಷ್ಟಿ ಹೊರಳಿಸಿತು. ಹಿಂದಿನ ದಿನ ತಾಯಿ ಕೊಟ್ಟಿದ್ದ ಕೋಡುಬಳೆಯನ್ನು ಜೇಬಿನಿಂದ ಹೊರದೆಗೆದು ತೋರುತ್ತಾ "ಇಲ್ಲೋದುs–ಕೋದುಬಲೆ...." ಎಂದು ವಯ್ಯಾರದಿಂದ ಹೇಳಿದಳು. ನಟರಾಜ ಮುಖ ಕಿವುಚುತ್ತಾ ಅಲ್ಲಿಂದ ಅವಳು ಹೊರಟು ಹೋಗುವಂತೆ ಸನ್ನೆ ಮಾಡಿದ. ಆದರೂ ಅವಳು ಅಲ್ಲಿಂದ ಜಗ್ಗದೆ, ಕೋಡುಬಳೆಯನ್ನು ಮುರಿದು ಆ ತುಂಡನ್ನು ನಟರಾಜನಿಗೆ ಕೊಡುವಂತೆ ಎತ್ತಿ ಹಿಡಿದು, ಕಡೆಗೆ ದೂರದಿಂದಲೇ, "ಆಸೆ ಮೋಸ" ಮಾಡಿ, ಬಾಯಿಗೆ ಹಾಕಿಕೊಂಡಳು. ಮಕ್ಕಳೆಲ್ಲರೂ ಘೊಳ್ಳೆಂದು ನಕ್ಕರು. ಜತೆಗೆ ಉಪಾದ್ಯ ಆಯರಹಳ್ಳಿ ಅಯ್ಯನ ಮೀಸೆಯೂ ನಗುವಿನಿಂದ ಕುಣಿಯಿತು. ಕೂಡಲೇ ತಾನು ಮಠದ 'ಉಪಾದ್ಯ'ನೆಂಬ ವಿಚಾರವನ್ನು ಮನಸ್ಸಿಗೆ ತಂದುಕೊಂಡು ನಗುವನ್ನು 'ಬಂದ್' ಮಾಡಿ, ಬಿಗುವಿನಿಂದ "ನಟರಾಜ, ಅವಳ್ನ ಕರಕೊಂಡೋಗಿ ಮನೆ ಸೇರಿಸಿಬಿಟ್ಟು ಬಾ" ಎಂದು ಹೇಳಿದ ಅಯ್ಯ. ಮಠದ ಇತರ ಮಕ್ಕಳ ಕಡೆ ತಿರುಗಿ ದನಿಯನ್ನು ಎತ್ತರಿಸಿ "ಹ್ಞೂ..... ಪ್ರಾತ್ನೆ ನಡೀಲಿ" ಎಂದು ಆಜ್ಞೆ ಮಾಡಿದ.

ದಾರಿಯಲ್ಲಿ ಅವಳನ್ನು ನಡೆಸಿಕೊಂಡು ಹೋಗುವಾಗ ನಟರಾಜನಿಗೆ ವಿಪರೀತವಾಗಿ ಸಿಟ್ಟು ಬಂದಿತ್ತು. ಮಠಕ್ಕೆ ಬಂದು ತನ್ನನ್ನು ಅವಮಾನಗೊಳಿಸಿದಳೆಂದು. ಮಂಗಳೆಗೆ ಅವನ ಸಿಟ್ಟಿನ ಲಕ್ಷ್ಯವಿರಲಿಲ್ಲ. ಅವಳಿಗೆ ಆಡುವುದಕ್ಕೆ ನಟರಾಜ ಬೇಕಾಗಿತ್ತು. ಅವನು ಈಗ ದೊರೆತದ್ದರಿಂದ ಪ್ರಸನ್ನಳಾಗಿ "ತಕ್ಕ–ತಿನ್ನು–ಕೋಡುಬಲೆ" ಎಂದು ತಿನಿಸನ್ನು ಅವನ ಕೈಗಿತ್ತಳು. ತಿಂಡಿ ಕೈಗೆ ಬಿದ್ದೊಡನೆಯೇ ನಟರಾಜನ ಸಿಟ್ಟೂ ಮಾಯವಾಗಿತ್ತು.

ಹೀಗೆ ನಟರಾಜನ ಬಾಳಿನ ಉಡುಗೆಗೆ ಸೂಕ್ಷ್ಮವಾದ ಚೆಲುವಿನ ಎಳೆಯಾಗಿ ಹೆಣೆದು ಬೆಳೆಯುತ್ತಿದ್ದಳು ಮಂಗಳೆ.

ಇಷ್ಟರಲ್ಲಿ ಕರ್ನಕುಪ್ಪೆಯಿಂದ ಮೈಸೂರಿಗೆ ಹೋಗಿ ನೆಲೆಸಿದ್ದ ವಾಸಾಚಾರಿಯ 'ನಡುಕಲ' ಮಗ ಶಿವಸ್ವಾಮಿಗೆ ಅವಸಾನ ಕಾಲ ಸಮೀಪಿಸಿತು. ವಯಸ್ಸಿನಿಂದ ಹಣ್ಣಾಗಿದ್ದ ಆತ ಬಚ್ಚಲು ಮನೆಯಲ್ಲಿ ಜಾರಿಬಿದ್ದುದೇ ಕಾರಣವಾಗಿತ್ತು–ಹಣ್ಣೆಲೆ ಮರದಿಂದ ತೊಟ್ಟು ಕಳಚಿ ಬೀಳಲು ಸುಳಿಗಾಳಿ ಕಾರಣವಾಗುವಂತೆ !

ಸಾಯುವ ಕಾಲ ಸನ್ನಿಹಿತವಾದಂತೆ ತನ್ನ ಅಣ್ಣನ ಮಗ ಶಂಕರಯ್ಯನ ತಬ್ಬಲಿ ಮಕ್ಕಳನ್ನು ಸಂದರ್ಶಿಸಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದ ಶಿವಸ್ವಾಮಿ. ಅದರಂತೆ

ಅವನ ಮಗ ನಂಜುಂಡಸ್ವಾಮಿಯೇ ಕಲ್ಲಹಳ್ಳಿಗೆ ಬಂದು ಪಾರ್ವತಮ್ಮನನ್ನೂ, ನಟರಾಜನನ್ನೂ, "ನಾನೂ ಬತ್ತೀನಿ" ಎಂದು ಹಟಮಾಡಿ ಕುಳಿತ ಸರ್ವಮಂಗಳೆಯನ್ನೂ ಕರೆದುಕೊಂಡು ಹೋದ. ಪಾರ್ವತಮ್ಮನನ್ನೂ ನಟರಾಜನನ್ನೂ ನೋಡಿ ಶಿವಸ್ವಾಮಿ ಅದೇಕೋ ಗಳಗಳನೆ ಅತ್ತುಬಿಟ್ಟನು. ನಂಜುಂಡಸ್ವಾಮಿಯನ್ನು ಹತ್ತಿರ ಬರುವಂತೆ ಸನ್ನೆ ಮಾಡಿ ನಟರಾಜನನ್ನು ದೃಷ್ಟಿಯಿಂದಲೇ ಸೂಚಿಸುತ್ತಾ ಅತಿಕ್ಷೀಣ ಸ್ವರದಲ್ಲಿ "ಇ–ದು .... ದಿ–ಕ್ಕಿ–ಲ್ದ... ಎಂದು ತೀವ್ರವಾಗಿ ಏದುತ್ತಾ "ತ–ಬ್ಬ–ಲಿ....ಇ–ದ್ಕೆ....ನೀ....ನೇ...." ಎನ್ನುವಷ್ಟರಲ್ಲಿ ಕಣ್ಣು ತೇಲಿತ್ತು.

ಶವಸಂಸ್ಕಾರ ಮುಗಿದ ಮೇಲೆ ಪಾರ್ವತಮ್ಮ ನಟರಾಜ, ಮಂಗಳೆಯರೊಡಗೂಡಿ ಕಲ್ಲಹಳ್ಳಿಗೆ ಹಿಂದಿರುಗಿದ್ದಳು. ಮಕ್ಕಳ ಹೂಮನಸ್ಸಿನ ಮೇಲೆ ಶಿವಸ್ವಾಮಿಯ ಸಾವಿಗಿಂತ ತಾವು ತಮ್ಮ ಹಳ್ಳಿಯ ಸುತ್ತಮುತ್ತ ಕಾಣಲು ಸಿಗದ ಮೈಸೂರು ಪಟ್ಟಣದ ರೈಲುಗಾಡಿ ವಿಶೇಷ ಪರಿಣಾಮ ಮಾಡಿತ್ತು. ಮನೆಗೆ ಬಂದ ಕೆಲವು ದಿನವಂತೂ "ಚುಕು ಚುಕು–ಜುಗು ಜುಗು" ಹೇಳುತ್ತಾ ನಟರಾಜ ರೈಲುಗಾಡಿಯಾಗುವನು. ಅವನ ಅಂಗಿಯ ಅಂಚನ್ನು ಹಿಡಿದು ಮಂಗಳೆ ತಾನು "ಚುಕ್–ಚುಕ್" ಎನ್ನುತ್ತಾ ಹಿಂಬಾಲಿಸುವಳು. ಅಸಾಧ್ಯ ಬೊಬ್ಬೆಯಿಡುತ್ತ ಮನೆಯಲ್ಲೆಲ್ಲ ಹರಿದಾಡುವ ಈ ಜೊತೆ ರೈಲುಗಾಡಿಯನ್ನು ನಗೆಗಣ್ಣಿನಿಂದ ನೋಡುವ ನಾಗಜ್ಜಿ, "ನಿನ್ನ ರೈಲಿನಾಗೆ ನನ್ನೂ ಕರಕಂಡೋಯ್ತೀಯೇನೇ? ಮಂಗ್ಲೀ?" ಎಂದು ಕೇಳುವಳು.

ವೇಗವಾಗಿ ನಟರಾಜನ ಹಿಂದೆ ದಾಪುಗಾಲು ಹಾಕುತ್ತಾ, ಹಾಗೇ ಒಂದು ಬಾರಿ ತನ್ನ ಕುತ್ತಿಗೆಯನ್ನು ಬಿಂಕದಿಂದ ಕೊಂಕಿಸಿದ ಮಂಗಳೆ, "ಯಾತಾವಕೆ?" ಎನ್ನುವಳು.

"ಕಣ್ಣು ಮುಚ್ಚಿಕಳಾಕೆ ಮುಂಚೆ ಒಂದು ಸಲ ಮೈಸೂರು ಪಟ್ನಕ್ಕೋಗಿ ಘೋಜು ನೋಡಿಕೊಂಡು ಬರೂನಾ ಅನ್ನಸ್ತದ .... ಕಂಕಂಡೋದೀಯ ಮೈಸೂರ್ಗೆ?"

"ಓ....ಬಾ ಅಜ್ಜಿ."

"ಏಟು ದುಡ್ಡು ಮಡಗಬೇಕಾ ನಿನ್ನ ರೈಲಿನಾಗೆ ಹತ್ತಬೇಕಾರೆ?"

"ಅತ್ತು ರೂಪಾಯ್."

"ಅತ್ತು ರೂಪಾಯಿ ! ಅವ್ವೀ .... ಆಟು ಹಣ ನನ್ನತ್ತರ ಇಲ್ಲಾ ಕಾನವ್ವ" ಎನ್ನುತ್ತಾ, ಸೊಂಟದಿಂದ ಒಂದಾಣೆ ಬಿಲ್ಲೆಯನ್ನು ಹೊರತೆಗೆದು ಹಿಡಿಯುತ್ತ "ಇಕ .... ಇಲ್ನೋಡವ್ವಾ.... ಇದೇ ನನ್ನ ತಾವು ಇರೋದು. ಚಚ್ಚಿ ಆಕ್ತೀನಿ ಅಂದರೂ ಇನ್ನೊಂದು ದಮಡಿ ಕಾಸೂ ಸಿಕಾಕಿಲ್ಲ .... ಈಟರಲ್ಲೆ ಕರಕೊಂಡೋಯ್ತೀಯಾ?" ಎಂದು ಹುಸಿದೈನ್ಯದಿಂದ ಯಾಚಿಸುವಳು ನಾಗಜ್ಜಿ.

"ಉ ....ಹ್ಞು....ಆಯಕ್ಕಿಲ್ಲ" ನಿಷ್ಠುರವಾಗಿ ಬರುತ್ತಿತ್ತು ಮಂಗಳೆಯ ಉತ್ತರ.

ರೈಲು ನಿಲ್ಲದೆ ಮುಂದೆ ಹೋಗುತ್ತಿತ್ತು. ನಾಗಜ್ಜಿ ಬಿದ್ದು ಬಿದ್ದು ನಗುತ್ತಿದ್ದಳು. ಪಾರ್ವತಮ್ಮನ ಮುಖದಲ್ಲಿಯೂ ನಗು ತಾಂಡವವಾಡುತ್ತಿತ್ತು.

ಮಲಗುವಾಗಲೂ ಮಂಗಳೆ ನಟರಾಜನ ಮಗ್ಗಲನ್ನೇ ಸೇರುತ್ತಿದ್ದಳು. 'ಅಟಾಜ ಮಾವ'ನ ಮಗ್ಗಲನ್ನು ತಪ್ಪಿಸಿದರೆ ವಿಪರೀತ ಚಂಡಿ. ಒಂದು ರಾತ್ರಿ ಈ "ಕೆಟ್ಟ ಚಾಳಿ" ತಪ್ಪಿಸಲು ವಿಷಕಂಠಯ್ಯ ಅವಳನ್ನು ಗದರಿಸಿ ತಮ್ಮ ಪಕ್ಕದಲ್ಲೇ ಮಲಗಿಸಿಕೊಂಡನು. ಅಂದು ಮಂಗಳೆಯ "ಓಲಗ" ನಡುರಾತ್ರೆಯವರೆಗೂ ಊದಿತು. ಕಡೆಗೆ ನಾಗಜ್ಜಿ ಅವಳ ಗೋಳನ್ನು ಕೇಳಲಾರದೆ, "ಚಿಂತಿಲ್ಲ ಬುಡು ಇಸಕಂಠು. ಅವ್ಳ ಜೀವಕ್ಕೆ ನಟರಾಜನ ಮೊಗ್ಗಲೇ ಆಪ್ಯಾಯಮಾನ. ದ್ಯಾವರ ಮಾಯೆ, ಯಾರು ಕಂಡಿರೋರು?" ಎಂದು ತನ್ನ ಇಚ್ಛೆಗೆ ಭವಿಷ್ಯದ ಬಣ್ಣ ಕಟ್ಟಿ ನುಡಿದಳು. ವಿಧಿಯಿಲ್ಲದೆ ನಟರಾಜನ ಪಕ್ಕಕ್ಕೇ ಮಗಳನ್ನು ಬಿಡಬೇಕಾಯಿತು, ವಿಷಕಂಠಯ್ಯ.

೬

ದಿನಕಳೆದಂತೆ ಮಕ್ಕಳಿಬ್ಬರೂ ನಾಗಜ್ಜಿಯನ್ನು ಬಹಳವಾಗಿ ಒಗ್ಗಿಕೊಂಡು ಬೆಳೆದರು. ಹಾಗೆ ಅವರು ಒಗ್ಗಿಕೊಳ್ಳಲು ಅವಳು ಹೇಳುತ್ತಿದ್ದ ಕಥೆಗಳೇ ಕಾರಣವೆನ್ನಬಹುದು.

ರಾತ್ರಿ ಮಲಗುವಾಗ ಅಜ್ಜಿ ಕಥೆ ಹೇಳದಿದ್ದರೆ ಆ ಮಕ್ಕಳ ಕಣ್ಣಿಗೆ ನಿದ್ದೆಯೆನ್ನುವುದೇ ಹತ್ತುತ್ತಿರಲಿಲ್ಲ. ಅಜ್ಜಿ ಕಥೆ ಹೇಳಬೇಕು; ಅವರು 'ಹೂ' ಗುಟ್ಟಬೇಕು; ಹಾಗೇ ಕೇಳುತ್ತಿರುವಂತೆ ನಿದ್ದೆಹೋಗಬೇಕು–ಇದು ಇತ್ತೀಚೆಗೆ ಅವರಲ್ಲಿ ಬೆಳೆದು ಬಂದು ಪರಿಪಾಠವಾಗಿತ್ತು.

ನಾಗಜ್ಜಿ ತನಗೆ ತಿಳಿದ ಪುರಾಣ ಕಥೆಗಳನ್ನೆಲ್ಲಾ ಹೇಳುವಳು. ರಾಮಾಯಣದ ಕಥೆಗಳನ್ನಂತೂ ಆ ಮಕ್ಕಳು ಅತ್ಯಾದರದಿಂದ ಆಲಿಸುತ್ತಿದ್ದರು. ಒಂದು ರಾತ್ರಿ ಹನುಮಂತ ಹುಟ್ಟಿದ ಪ್ರಸಂಗವನ್ನು ಹೇಳುತ್ತಿದ್ದಳು ನಾಗಜ್ಜಿ– ಹುಟ್ಟಿದ ಕೂಡಲೇ ಹನುಮಂತ ಆಕಾಶದ ನೀಲಿಯಲ್ಲಿ ವಜ್ರದ ಆಭರಣದಂತೆ ಬೆಳಗುತ್ತಿದ್ದ ಸೂರ್ಯದೇವನನ್ನು ಕಂಡನಂತೆ. ಕಂಡಕೂಡಲೇ ಆ ಒಡವೆಯನ್ನು ವಶಪಡಿಸಿಕೊಳ್ಳುವ ಆಸೆಯಾಯಿತಂತೆ ಅವನಿಗೆ. ಆಸೆ ಅಂಕುರಿಸಿದ ಕೂಡಲೇ ಅದನ್ನೆಳೆದು ತರೋಣವೆಂದು ಅಂಬರಕ್ಕೆ ನೆಗೆದು ಸೂರ್ಯ ದೇವನನ್ನು ಹಿಡಿಯಲು ಯತ್ನಿಸಿದನಂತೆ. ಸೂರ್ಯದೇವನಿಗೆ ಕೋಪ ಬಂದು ಅವನ ಕೆನ್ನೆಗೆ ಬಲವಾಗಿ ಹೊಡೆದು ತಳ್ಳಿದನಂತೆ. ಅಂದಿನಿಂದ ಆಂಜನೇಯನ ಮುಖ ಒಂದು ಪಾರ್ಶ್ವಕ್ಕೆ ತಿರುಗಿಕೊಂಡಿತಂತೆ–

ಕಥೆಯನ್ನು ಕೇಳಿ ನಟರಾಜ ಮಂಗಳೆಯರಿಬ್ಬರೂ ಘೊಳ್ಳನೆ ನಕ್ಕರು. ಆ ನಗು ಹೊಲದಿಂದ ಕೆಲಸಮಾಡಿ ಬಂದು ಸಾಕಾಗಿ ಒಂದು ಕಡೆಗೆ ಮುದುರಿ ಅದೇ ತಾನೆ ನಿದ್ದೆ

ಹತ್ತಿದ್ದ ವಿಷಕಂಠಯ್ಯನನ್ನು ಚಾಟಿಯ ಏಟಿನಂತೆ ಎಬ್ಬಿಸಿತು. "ಈ ಮಕ್ಕಳಿಗೆ ಮಾಡಾಕೇನೂ ಕೇಮೆಯೇ ಇಲ್ಲ–ಜಿನಾ ಪರ್ಸಂಗ–ಪರ್ಸಂಗ" ಎಂದು ಗುಡುಗಿದ ವಿಷಕಂಠಯ್ಯ.

ಆದರೂ ಪ್ರತಿರಾತ್ರಿ ಅಜ್ಜಿಯ ಕಥೆಗಳು ತಪ್ಪದೆ ಸರಾಗವಾಗಿ ಸಾಗುತ್ತಿದ್ದವು. ಮಹಾಭಾರತದ ಕಥೆಗಳನ್ನು ಒಂದೊಂದಾಗಿ ಹೇಳುತ್ತಿದ್ದಳು ನಾಗಜ್ಜಿ. ಮಕ್ಕಳಿಗೆ ರಾಮಾಯಣಕ್ಕಿಂತಲೂ ಮಹಾಭಾರತದ ಕಥೆಗಳೇ ಹೆಚ್ಚು ಪ್ರಿಯವೆನಿಸಿದವು. ಮಹಾಭಾರತದ ಎಲ್ಲ ಪ್ರಸಂಗಗಳಲ್ಲಿ ನಟರಾಜನ ಚಿತ್ತವನ್ನು ಗಾಢವಾಗಿ ಸೆರೆಹಿಡಿದಿದ್ದ ಕಥಾವಿಭಾಗವೊಂದಿತ್ತು. ಅದು ವೀರ ಬಾಲಕ ಅಭಿಮನ್ಯುವಿಗೆ ಸಂಬಂಧಿಸಿದುದು! ..... ಆ ವೀರ ಬಾಲಕನ ಸಾಹಸದ ಕಥೆಯನ್ನು ಲಾಲಿಸುತ್ತಿದ್ದಂತೆ ನಟರಾಜನ ಎದೆ ಸ್ವಾಭಿಮಾನದಿಂದ ಉಬ್ಬಿಕೊಳ್ಳುತ್ತಿತ್ತು, ತಾನೇ ಆ ಗಳಿಗೆಗೆ ಅಭಿಮನ್ಯುವಾಗಿ ಶತ್ರುಸೇನೆಯನ್ನು ಮುತ್ತಿದಂತೆ ಅನಿಸುತ್ತಿತ್ತವನಿಗೆ!

ಲಹರಿ ತಿರುಗಿದಾಗ ಚಂದ್ರಹಾಸನ ಕಥೆಯನ್ನು ಹೇಳುವಳು ನಾಗಜ್ಜಿ. ತೀರ ಎಳೆಯವನಾಗಿದ್ದಾಗಲೇ ತನ್ನ ತಂದೆತಾಯಿಗಳಿಬ್ಬರನ್ನೂ ಕಳೆದುಕೊಂಡು ನಿರಾಧಾರನಾದ ಚಂದ್ರಹಾಸನ ಚರಿತ್ರೆಯನ್ನು ಹೇಳುವಾಗ ಮುದುಕಿಯ ನೆನಪು ಮರುಕಳಿಸುತ್ತಿತ್ತು. ಕಥೆ ಹೇಳುತ್ತ ಹೇಳುತ್ತ ಹಾಗೆಯೇ ಒಂದು ಸಲ ನಟರಾಜನನ್ನು ನಿಟ್ಟಿಸುವಳು. ಕೂಡಲೇ ಅವಳ ಹೊಟ್ಟೆಯೊಳಗೆ ದುಃಖದ ಪ್ರವಾಹವೇ ಉಕ್ಕುತ್ತಿತ್ತು. ತಿರುಮಕೂಡಲು ಸಂಗಮದ ಹುಚ್ಚು ಹೊಳೆಯಲ್ಲಿ ಮಗುವನ್ನು ತಬ್ಬಲಿಮಾಡಿ ತೇಲಿಹೋದ ಶಂಕರಯ್ಯ, ಗೌರಮ್ಮನ ಚಿತ್ರ ಅವಳ ಹೃತ್ಪಟಲದ ಮೇಲೆ ಹಾದು ಹೋಗುವುದು. ಆದರೆ ಮಕ್ಕಳಿಂದ ತನ್ನ ಸಂಕಟವನ್ನು ಮುಚ್ಚಲೋಸುಗ ಒಂದು ಪಕ್ಕಕ್ಕೆ ತಿರುಗಿ ಕಂಬನಿ ಮಿಡಿಯುವಳು. ಆದರೆ ಸೂಕ್ಷ್ಮಗ್ರಾಹಿಗಳಾದ ಮಕ್ಕಳು "ಅದ್ಯಾಕಜ್ಜಿ ಅತ್ತೀ?" ಎಂದು ಕೇಳುವರು. ಅದಕ್ಕುತ್ತರವಾಗಿ, "ನಾ ಯೆಲ್ಲಾ ಅತ್ತೆ?.... ಹಟ್ಟೀ ಮ್ಯಾಗಿನ ಹಂಚಿನಿಂದ ಇಂಕರ ಕಸ ಎಲ್ಲೊ ಬಿದ್ದಿರಬೋದು. ಕಣ್ಣು ಉರೀತು: ಅದ್ಕೆ ಅಂಗೇನೆ ಒಸಿ ಒರಸಿಕೊಂಡೆ ಕಣ" ಎಂದು ಹೇಳುತ್ತಾ ಬಲಾತ್ಕಾರದ ನಗುವನ್ನು ಮುಖದ ಮೇಲೆ ತಂದುಕೊಳ್ಳುವಳು ನಾಗಜ್ಜಿ ....

* * * *

ಈಗ ಮನೆಗೆಲಸದಲ್ಲಿ ಪಾರ್ವತಮ್ಮ ಹತ್ತು ಭುಜವಾಗಿ ನಿಂತಿದ್ದುದರಿಂದ ನಾಗಜ್ಜಿಯ ಹೊರೆ ಕೊಂಚ ಇಳುಹಿದಂತಾಯಿತು. ಹೊರಗೆ ಕಾಡಿನಲ್ಲಿ ಪುಳ್ಳೆಗಳನ್ನರಸುವುದರಲ್ಲಿಯೂ, ಹಸುವನ್ನು ಹೊಡೆದುಕೊಂಡು ಹೋಗಿ ಮೇಯಿಸುವುದರಲ್ಲಿಯೂ ಅವಳ ಹೆಚ್ಚು ಕಾಲ ವಿನಿಯೋಗವಾಗುತ್ತಿತ್ತು. ನಟರಾಜನೂ, ಇದೀಗ ಮಠಕ್ಕೆ ಸೇರಿದ್ದ. ಸರ್ವಮಂಗಳೆಯೂ ಅಜ್ಜಿಯ ಜತೆಯಲ್ಲಿ ಅಲೆದಾಡಲು ತವಕಪಡುತ್ತಿದ್ದಳು. ಮಠದ ರಜಾದಿನಗಳನ್ನೇ ಚಾತಕ ಗಳಂತೆ ಕಾಯುತ್ತಿದ್ದರು. ಬಿಡುವು ಸಿಕ್ಕಿತೆಂದರೆ ಅಜ್ಜಿಯ ಜೊತೆಗೆ ಕಾಡಿಗೆ ನೆಗೆಯುತ್ತಿದ್ದರು. ಆಗಾಗ ಪಾರ್ವತಮ್ಮನೂ ಹೋಗುವಳು.

ಒಂದು ಭಾನುವಾರ ಮಧ್ಯಾಹ್ನದ ಊಟ ಮುಗಿಸಿ ಪುಳ್ಳೆಗಾಗಿ ಹೊರಟಳು ಮುದುಕಿ, ಅವಳ ಜೊತೆಯಲ್ಲಿ ನಟರಾಜ, ಮಂಗಳೆಯರೂ ಹೊರಟಿದ್ದರು. ಮನೆಯನ್ನು ಬಿಟ್ಟ ಕೂಡಲೆ ಇಬ್ಬರು ಮಕ್ಕಳೂ ಪಂಜರದಿಂದ ಹೊರಗೆ ಬಿಟ್ಟ ಗಿಳಿಗಳಾಗುತ್ತಿದ್ದರು ಮನೆಯಲ್ಲಾದರೆ ವಿಷಕಂಠಯ್ಯನ ಬೆದರಿಕೆ. ವಿಷಕಂಠಯ್ಯ ಮನೆಯಲ್ಲಿಲ್ಲದಾಗ ವಿಪರೀತ ಗದ್ದಲ ಮಾಡಿದರೆ ಪಾರ್ವತಮ್ಮನೂ ತಾಳಲಾರದೆ ಒಂದೊಂದು ವೇಳೆ ಸಿಡುಕುವಳು. ಮನೆಯ ಹೊರಗೆ ಯಾರು ಕೇಳಬೇಕು?.... ಸಂಗಡಲೇ ನಾಗಜ್ಜಿ ಇದ್ದಳು, ದಿಟ. ಆದರೆ 'ಹುಡುಗಾಟ'ದಲ್ಲಿ ಅವಳು ಆ ಮಕ್ಕಳಿಬ್ಬರನ್ನೂ ಮೀರಿಸಿರಲಿಲ್ಲವೇ?

ಓಣಿಯನ್ನು ದಾಟಿ, ಕೆರೆ, ಏರಿಯ ಮೇಲೆ ಹಾಯ್ದುಹೋಗಿ ಕಾಡನ್ನು ಸೇರಿದ ಮೇಲಂತೂ ಅಜ್ಜಿಗೂ ಮಕ್ಕಳಿಗೂ ವ್ಯತ್ಯಾಸವೇ ಕಂಡುಬರುತ್ತಿರಲಿಲ್ಲ. ಮಕ್ಕಳನ್ನು ಕೂಡಿಕೊಂಡು ಕಾಡೆಲ್ಲಾ ಅಲೆಯುವಳು ಮುದುಕಿ, ಉದ್ದಕ್ಕೂ ಒಂದಲ್ಲ ಒಂದು ಕಥೆ ಹಾದಿ ಸಾಗಿಸುತ್ತಿತ್ತು. ಆ ಕುರುಚಲು ಕಾಡಿನ ಬೇಸಿಗೆ ಬಿಸಿಲಿನ ತಾಪವನ್ನು ಆ ಮಕ್ಕಳು ಮರೆಯುವಷ್ಟು ಸ್ವಾರಸ್ಯವಾಗಿರುವುದು ಕಥೆ.

ಕಥೆ ಹೇಳುವುದೆಂದರೆ ನಾಗಜ್ಜಿಗೆ ಬೇಸರವೇ ಆಗುತ್ತಿರಲಿಲ್ಲ. ಕಥೆ ಹೇಳುವ ಸಂಪ್ರದಾಯ ನಮ್ಮ ಹಳ್ಳಿಗಳಲ್ಲಿ ಪುರಾತನ ಕಾಲದಿಂದಲೂ ಅನೂಚಾನವಾಗಿ ಬೆಳೆದು ಬಂದಿದೆ. ನೂರಕ್ಕೆ ತೊಂಬತ್ತೈದು ಜನ ನಿರಕ್ಷರಕುಕ್ಷಿಗಳಿರುವ ನಮ್ಮ ದೇಶದಲ್ಲಿ ಧರ್ಮ, ಸಂಸ್ಕೃತಿಗಳು ಉಳಿದಿರುವುದು ಈ ಪುರಾಣ ಪುಣ್ಯಕಥೆಗಳಿಂದಲೇ ಎಂದು ಧಾರಾಳವಾಗಿ ಹೇಳಬಹುದು. ನಾಗಜ್ಜಿಯ ತಾತ ಹರಿಕಥೆ ಮಾಡುತ್ತಿದ್ದರಂತೆ. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿಯೇ ನಾಗಜ್ಜಿಗೆ ಭಾರತ, ಭಾಗವತ ಮುಂತಾದ ಪುರಾಣ ಕಥೆಗಳ ಪರಿಚಯವಾಯಿತು. ಇವಲ್ಲದೆ ಬಿಡುವಿದ್ದಾಗ ಹಳ್ಳಿಯ ಮುದುಕ, ಮುದುಕಿಯರು ಹೇಳುತ್ತಿದ್ದ ಅಡುಗೂಲಜ್ಜಿ ಕಥೆಗಳೂ ಅವಳ ಕಿವಿಗೆ ಬಿದ್ದಿದ್ದವು.

ಮಕ್ಕಳಿಗೆ ಅಡಗೂಲಜ್ಜಿ ಕಥೆಗಳಲ್ಲಿ ವಿಶೇಷ ಆಸಕ್ತಿ. ಆ ಕಥೆಗಳಲ್ಲಿ ಬರುವ ಅದ್ಭುತ ರಮ್ಯ ಸನ್ನಿವೇಶಗಳು ಮಕ್ಕಳ ವಯಸ್ಸಿಗೆ ಸರ್ವದಾ ಆಕರ್ಷಣೀಯ. ನಟರಾಜ, ಮಂಗಳೆಯರಿಗಂತೂ ಅಡಗೂಲಜ್ಜಿ ಕಥೆಗಳೆಂದರೆ ಪ್ರಾಣ. ಅವರಿಬ್ಬರೂ "ನಾಳೀಕೆ ಹೇಳ್ತೀನಿ ಅಂತ ರಾತ್ರಿ ಅಂತಿದ್ಯಲ್ಲಜ್ಜಿ. ಆ ಕಥೆ ಹೇಳಜ್ಜಿ" ಎಂದು ಪೀಡಿಸತೊಡಗಿದರು.

"ಯಾವುದಾ ಅದು ಕತೆ. ನಂಗೆ ನೆಪ್ಪೇ ಹೊಂಟೋಗದೆ" ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತ ಮುದುಕಿ ಹೇಳಿದಳು.

"ಅದೇ ಕನಜ್ಜಿ–ರಾಜಪುತ್ರಿ ಕಥೆ!" ಎಂದು ಸೂಚಿಸಿದರು ಮಕ್ಕಳು.

"ಓ! ನಗೆಮಲ್ಲಿಗೆ ಕತೆಯಾ?"

"ಹೂ, ಹೂ, ... ಅದೇ, ಅದೇ!" ಚಪ್ಪಾಳೆ ತಟ್ಟುತ್ತಾ ಕುಣಿದಾಡಿದರು ನಟರಾಜ, ಮಂಗಳೆಯರು.

"ತಡಕೊನ್ನಿ ಸಟೀಗೆ .... ಹಿಂಗೆ ಹೈಲಾಡಿಸಿದಿರೆ ನಾ ಹೇಳಕ್ಕೇ ಇಲ್ಲ" ಎಂದು ಹುಸಿ ಮುನಿಸು ತೋರಿದಳು ನಾಗಜ್ಜಿ.

ಮಕ್ಕಳಿಬ್ಬರೂ ಕುಣಿಯುವುದನ್ನು ನಿಲ್ಲಿಸಿ, ಸಪ್ಪೆಗೆ ಮುಖಮಾಡಿ, "ಇಲ್ಲ ಹೇಳಜ್ಜಿ" ಎಂದು ಗೋಗರೆಯುವ ದನಿಯಲ್ಲಿ ಅತಿ ದೈನ್ಯವಾಗಿ ಕೇಳಿಕೊಂಡರು.

"ಹಂಗಾರೆ ಬನ್ನಿ. ಆ ಹಲಸಿನಮರದ ಅಡೀಕೆ ಹೋಗಾನ. ಅದರ ನೆಳ್ಳಿನಲ್ಲಿ ಕುಂತುಕೊಂಡು ಹೇಳ್ತೀನಂತೆ."

ಮೂವರೂ ಉತ್ಸಾಹದಿಂದ ನಡೆದುಹೋದರು. ಹಲಸಿನ ಮರದ ಬುಡದಲ್ಲಿ ದಾರಿಯುದ್ದಕ್ಕೂ ತಾವು ಆರಿಸಿದ್ದ ಪುಳ್ಳೆಗಳ ಹೊರೆಗಳನ್ನಿಟ್ಟು ಕುಳಿತುಕೊಂಡರು. ವಿಶಾಲವಾಗಿ ಮರದ ಸುತ್ತಲೂ ಹರಡಿಕೊಂಡಿದ್ದ ಹಲಸಿನ ನೆರಳು ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಅಲೆದಾಡಿದವರಿಗೆ ತಂಪಾಗಿ ಸುಖದಾಯಕವಾಗಿತ್ತು.

ಮರದಡಿಯಲ್ಲಿ ಬಂದು ಕುಳಿತಾಗ ಸ್ವಲ್ಪ ಗಲಭೆಯಾದುದರಿಂದ ಆ ಮರವನ್ನು ಸುತ್ತಿಕೊಂಡಿದ್ದ ಮೌನವನ್ನವರು ಕಲಕಿದಂತಾಯಿತು. ತುದಿಯಲ್ಲಿ ಕುಳಿತ ಎರಡು ಸೋರೆ ಹಕ್ಕಿಗಳು ದಿಗಿಲುಗೊಂಡು ಮೇಲೆ ಹಾರಿ ಆಕಾಶದಲ್ಲಿ ಕೆಲಕಾಲ ಸುತ್ತು ಹಾಕುತ್ತಿದ್ದು, ಬಿಸಿಲಿನ ಝಳವನ್ನು ತಾಳಲಾರದಕ್ಕೆ, ಮತ್ತೆ ಬಂದು ಮರವನ್ನೇ ಸೇರಿಕೊಂಡವು. ನೀಲಿಯ ಬಾನಂಗಳದಲ್ಲಿ ಬಿಳಿ ಬಣ್ಣದ ಉಣ್ಣೆ ಮುಗಿಲುಗಳು ಅಲ್ಲೊಂದು ಇಲ್ಲೊಂದು ತೇಲುತ್ತಿದ್ದವು.

"ಹೇಳಜ್ಜಿ ....." ಎಂದು ಕಾಡಿದರು ಮಕ್ಕಳು. ಮರದ ಬುಡವನ್ನು ಆಶ್ರಯಿಸಿ ಕುಳಿತು ಮುದುಕಿ ಸಾವಧಾನವಾಗಿ ತನ್ನ ಸೊಂಟದಿಂದ ಬಟ್ಟೆಯ ಎಲೆ ಅಡಿಕೆ ಚೀಲವನ್ನು ಎಳೆದುಕೊಂಡಳು. ಆ ಚೀಲವನ್ನು ಕಂಡರೆ ಅವಳಿಗೆ ಬಹಳ ಪ್ರೇಮ. ಅದನ್ನವಳು ಹುಣಸೂರಿನ ಕಾಸಿಂ ಬೀ ಬೂಬಿಯಿಂದ ಅರ್ಧ ಸೇರು ರಾಗಿ ಕೊಟ್ಟು ಕೊಂಡಿದ್ದಳು. ಅಜ್ಜಿ ಚೀಲವನ್ನೆಳೆದು ಕುಳಿತಳೆಂದರೆ ತಾಂಬೂಲವನ್ನು ಆಮೂಲಾಗ್ರವಾಗಿ ಅವಳು ಮೆಲ್ಲುವವರೆಗೂ ಇತರ ವಿಚಾರಗಳಿಗೆ ಪ್ರಾಶಸ್ತ್ಯ ಕೊಡುತ್ತಿರಲಿಲ್ಲವೆನ್ನುವುದು ಮಕ್ಕಳಿಗೆ ಅನುಭವವೇದ್ಯವಾಗಿತ್ತು. ಅದಕ್ಕಾಗಿ ಮುದುಕಿ ಗೋಟಡಿಕೆಯನ್ನು "ಕಟುಂ ಕಟುಂ" ಎಂದು ಅಗಿಯುತ್ತಾ, ಒಣಗಿದ ವೀಳೆಯದೆಲೆಗೆ ಸುಣ್ಣ ಹಚ್ಚುವುದನ್ನೇ ಎವೆಯಿಕ್ಕದೆ ದಿಟ್ಟಿಸುತ್ತಾ ಕುಳಿತುಕೊಂಡರು ಅವರು.

ಮುದುಕಿ ಸಾವಕಾಶವಾಗಿ ಒಂದೊಂದು ಎಲೆಯಾಗಿ ಸುಣ್ಣಹಚ್ಚುತ್ತಿರುವಾಗ ಪಕ್ಕದ ಗೋಣಿಯ ಮರದಿಂದ ಒಂದು ಅಳಿಲು ಇಳಿದು ಬಂದು ನೆಲದ ಮೇಲೆ ಬಿದ್ದಿದ್ದ

ಹಣ್ಣೊಂದನ್ನು ಕಚ್ಚಿ ತಿನ್ನುವುದರಲ್ಲಿ ನಿರತವಾಗಿತ್ತು. ಅದನ್ನು ನೋಡಿ ನಟರಾಜನಿಗೆ ತಿವಿದು ತೋರುತ್ತಾ, ಪಿಸುಮಾತಿನಲ್ಲಿ ಮಂಗಳ ಹೇಳಿದಳು.

"ಅಟಾಜ ....ಅಲ್ಲೋಡು....ಅಳ್ಳಿಕುಂಚ !"

ನಟರಾಜನೂ ಅಳಿಲನ್ನೇ ಕುತೂಹಲದೃಷ್ಟಿಯಿಂದ ನೋಡಿದ. ಹಿಂಗಾಲುಗಳ ಮೇಲೆ ಕುಳಿತು, ಮುಂಗಾಲುಗಳೆರಡರಲ್ಲಿಯೂ ಗೋಣಿಯ ಹಣ್ಣನ್ನು ತನ್ನ ಮುದ್ದಾದ ಬಾಯಿಂದ ಕಚ್ಚಿ ಕಚ್ಚಿ ತಿನ್ನುತ್ತಿದ್ದ ಅಳಿಲು ಆ ಮಕ್ಕಳಿಗೆ ಆಕರ್ಷಕವಾಗಿ ತೋರಿತು. ನಟರಾಜನಿಗೆ ಅಜ್ಜಿ ಹೇಳುತ್ತಿದ್ದ ರಾಮಾಯಣದ ಕಥೆ ನೆನಪಾಯಿತು .... ಸುಗ್ರೀವ, ಆಂಜನೇಯ, ಅಂಗದ ಮೊದಲಾದ ಕಪಿಶ್ರೇಷ್ಠರು ಭಾರಿಭಾರಿ ಬೆಟ್ಟಗಳನ್ನೂ, ಬಂಡೆಗಳನ್ನೂ ಹೊತ್ತುತಂದು ಶ್ರೀರಾಮನಿಗಾಗಿ ಸಾಗರಕ್ಕೆ ಸೇತುವೆ ಹಾಕುತ್ತಿದ್ದಾರೆ. ಅಷ್ಟು ದೊಡ್ಡ ಕಾರ್ಯವನ್ನು ಮಾಡಲಾರದ ಅಳಿಲು ತನ್ನದೂ ಸೇವೆಯಿರಲೆಂದು ದಡದ ಮರಳಿನ ಮೇಲೆ ಹೊರಳಿ ಬಂದು ಮೈಗಂಟಿದ ಆ ಮರಳಿನ ಕಣಗಳನ್ನು ಸೇತುವೆಯ ಮೇಲೆ ಉದುರಿಸಿ ಸೇತುವೆಗೆ ಗಾರೆ ಹಾಕಿತು. ಅಳಿಲಿನ ಸೇವೆಯನ್ನು ಮೆಚ್ಚಿಕೊಂಡ ರಾಮಚಂದ್ರ ಅದರ ಬೆನ್ನಿನಮೇಲೆ ಪ್ರೀತಿಯಿಂದ ತನ್ನ ಕೈ ಬೆರಳುಗಳನ್ನಿಟ್ಟು ನೇವರಿಸಿದ. ಆಗ ಅವನ ಮೂರು ಬೆಟ್ಟುಗಳೂ ಅಚ್ಚೊತ್ತಿದಂತೆ ಅದೇ ಬೆನ್ನಿನ ಮೇಲೆ ಮೂಡಿತಂತೆ !.....

ಆ ವಿಚಾರವನ್ನು ಮಂಗಳೆಗೆ ಜ್ಞಾಪಿಸಿದ ನಟರಾಜ.

"ಅಲ್ನೋಡು, ಅಳ್ಳಿಕುಂಚನ ಬೆನ್ನಮೇಲೆ ರಾಮ ಬೆಟ್ಟೂರಿರೋದೂ."

"ಹೂ.... ಮೂರು ಬೆಟ್ಟು ಊರದೆ. ಓ ! ಏಟು ಚಂದಾಗದೆ !...." ತೀಕ್ಷ್ಣ ನೋಟದಿಂದ ಅತ್ತಿಂದಿತ್ತ ಬೆದರಿ ಬೆದರಿ ನೋಡುತ್ತ, ಅಲ್ಲಿಂದಿಲ್ಲಿಗೆ ಓಡಿಯಾಡುವ ಅಳಿಲನ್ನೇ ನಿಟ್ಟಿಸುತ್ತ ನುಡಿದಳು ಮಂಗಳೆ.

ಅಷ್ಟರಲ್ಲಿ ನಾಗಜ್ಜಿ ವೀಳೆಯವನ್ನು ಮೆದ್ದು ಮುಗಿದಿತ್ತು. ಆಗಾಗ ಹೊಗೆಸೊಪ್ಪಿನ ತುಂಡುಗಳನ್ನು ಬಾಯಿಗೆಸೆದುಕೊಳ್ಳುತ್ತಿದ್ದಳು. ಮಕ್ಕಳು ಅಳಿಲಿನ ಆಟದಲ್ಲಿ ಮಗ್ನರಾಗಿರುವುದನ್ನು ಕಂಡು, "ಹಂಗಾರೆ ಕತೆ ಬ್ಯಾಡವಾ?" ಎಂದು ಕಣ್ಣುಮುಚ್ಚಿ ತುಂಟತನದ ಬಿಂಕದಿಂದ ಹೇಳಿದಳು.

ಅಜ್ಜಿಯ ಮಾತುಗಳು ಕಿವಿಗೆ ಬಿದ್ದುದೇ ತಡ, ಮಕ್ಕಳ ಚಿತ್ತ ಅಳಿಲಿನಿಂದ ಕಥೆಯತ್ತ ಹರಿಯತೊಡಗಿತು.

"ಹೇಳಜ್ಜಿ .... ಕತೆ ಹೇಳಜ್ಜಿ" ಎಂದು ಅವಳನ್ನು ಪೀಡಿಸತೊಡಗಿದರು. ಎದುರಿನ ಪೊದೆಯಲ್ಲಿ ಒಂದು ಕಾಡುಹುಂಜ ಕಾಣಿಸಿಕೊಂಡು, ಮನುಷ್ಯ ಪ್ರಾಣಿಗಳನ್ನು ನೋಡಿಯೋ ಏನೋ 'ತೆಕ್-ತೆಕ್-ತೆಕ್' ಎಂದು ಚೀರುತ್ತಾ, ಮತ್ತೆ ಪೊದೆಯ ಗಹ್ವರದಲ್ಲಿ ಕಣ್ಮರೆಯಾಯಿತು.

ಆ ದೃಶ್ಯವನ್ನೇ ನಿಟ್ಟಿಸುತ್ತಿದ್ದು, ಆರಾಮವಾಗಿ ಮರವನ್ನು ಒರಗಿಕೊಳ್ಳುತ್ತಾ ಕತ್ತೆತ್ತಿ ಆಗಸದೆಡೆಗೆ ದೃಷ್ಟಿ ಹೊರಳಿಸಿದಳು ಅಜ್ಜಿ.

ನೋಟ ಮುಗಿಲಿನಲ್ಲಿದ್ದರೂ ಮುದುಕಿಯ ಮನಸ್ಸು ಮಕ್ಕಳಷ್ಟೇ ಕಾತರತೆಯಿಂದ ನಗೆಮಲ್ಲಿಗೆಯ ಕತೆಯಲ್ಲಿ ನಾಟಿಕೊಂಡಿತ್ತು.

ಆದರೆ ಅಷ್ಟು ಸುಲಭವಾಗಿ ಕಥೆ ಹೇಳಿಬಿಡುವಳೇ ಮುದುಕಿ?– 'ಹೇಳು–ಹೇಳು' ಎಂದು ಮಕ್ಕಳು ಕಾಡಬೇಕು, ಹಾಗೆ ಅವರು ಕಾಡಿದ ಬಹಳ ಹೊತ್ತಿನ ಮೇಲೆ ಅವಳು ಮೆಲ್ಲನೆ ಬಾಯಿಬಿಡಬೇಕು.

"ಹೇಳಜ್ಜಿ ....ಹೇಳಜ್ಜಿ ...."

ಮುದುಕಿ ಒಣಗಿದ ಹುಲ್ಲುಕಡ್ಡಿಯನ್ನು ಮುರಿದುಕೊಂಡು, ಹಲ್ಲುಗಳ ಮಧ್ಯ ಚುಚ್ಚಿಕೊಳ್ಳುತ್ತಾ 'ಏನೋ ಹೋಗಲಿ' ಎನ್ನುವಂತೆ ಆರಂಭಿಸಿದಳು ...

"ಅಮ್ರಾವತಿ, ಅಮ್ರಾವತಿ ಅನ್ನೋ ಪಟ್ನ, ಅಲ್ಲಿ ಅಮರಸೇಕರ, ಅಮರಸೇಕರ ಅನ್ನೋ ದೊರೆ ಇದ್ದ ...."

"ಹ್ಞೂ...." ಆತುರವಾಗಿ ಹೂಗುಟ್ಟಿದರು ಆ ಮಕ್ಕಳು.

"ಆ ದೊರೆಗೆ ಕುಲಸೇಕರ ಅನ್ನೋ ರಾಜಪುತ್ರ ಇದ್ದ ..."

"ಹ್ಞೂ...."

"ಅವ್ನು ಒಂಜಿನ ಬೇಟೇಗೆ ಹೊಂಟ ...."

"ಹ್ಞೂ...."

"ಹಂಗೇ ಗೊಂಡಾರಣ್ಯದಾಗೆ ಒಬ್ನೇ ಬತ್ತಾ ಇರಬೇಕಾದರೆ ಒಂದು ಭಾರಿ ಗಟಸರ್ಪ ಕಾಣಸ್ಕೊತ್ತುs ...."

"ಗಟಸರ್ಪ?"

"ಊ, ಗಟಸರ್ಪ ಕಾಣಸ್ಕಂದು 'ರಾಜಪುತ್ರ, ನಂಗೆ ಬಾರಿ ಜಿನದಿಂದ್ಲೂ ತಲೆನೋವು ಇಡಕೊಂಡುಬುಟ್ಟಿದೆ. ಅದು ಒಂಟೋಗೋ ಅಂಗೆ ನೀ ಸಾಯ ಮಾಡ್ಬೇಕು' ಅಂತ ಪ್ರಾರ್ತ್ನೆ ಮಾಡಕಂತುs ...." ಎಂದು ಅಷ್ಟಕ್ಕೆ ನಿಲ್ಲಿಸಿ, ತುಸು ಸಿಟ್ಟು ಬೆರೆತ ಸ್ವರದಲ್ಲಿ "ಹೋಗಿ ನಾ ಏಳಕ್ಕಿಲ್ಲ ಕತೇಯ. ನೀವು ಹೂಕೊತಾನೆ ಇಲ್ಲ" ಎಂದಳು.

ಸ್ವಾರಸ್ಯವಾದ ಕಥೆಯ ಓಟದಲ್ಲಿ ಮನಸ್ಸು ನಾಟಿ, ಹೂಗುಟ್ಟುವುದನ್ನು ಮರತೇಬಿಟ್ಟಿದ್ದರು ಮಕ್ಕಳು. ಆದರೆ ಅಜ್ಜಿ ಇಂತಹ ಸೂಕ್ಷ್ಮ ವಿಚಾರಗಳನ್ನು ಮರೆಯುತ್ತಿರಲಿಲ್ಲ. ಕಥೆಯ

ಹರಿಯುವಿಕೆಯನ್ನು ಅಜ್ಜಿ ಬೇಕೆಂದು ಅಡ್ಡಿಪಡಿಸಿದಳೆಂದು ಬೇಸರಗೊಂಡರೂ, ಮಾತನಾಡಿದರೆ ಮತ್ತೂ ಕೇಡು ಎಂದು ಬಗೆದ ಮಕ್ಕಳು, "ಇನ್ನು ಮ್ಯಾಗೆ ಹೂಕೊತ್ತೀವಿ ಹೇಳಜ್ಜಿ" ಎಂದು ಒತ್ತಾಯಪಡಿಸಿದರು. ನಾಗಜ್ಜಿ, ಕಥೆಯ ದಾರ ತನ್ನ ನೆನಪಿದಿಂದ ಕಡಿದುಹೋದವಳಂತೆ ನಟಿಸುತ್ತಾ, "ಮರೆತೇ ಓಯ್ತು .... ಹೂ, ಯೆಲ್ಲಿ ಯೇಳ್ತಾ ಇದ್ದೆ?" ಎಂದು ಪ್ರಶ್ನಿಸಿದಳು. ಅದಕ್ಕುತ್ತರವಾಗಿ ನಟರಾಜ ಬೇಗ ಬೇಗ, "ಅದೇ ಕನಜ್ಜೀ .... ಸರ್ಪ ರಾಜಪುತ್ರನ್ನs ಪ್ರಾತ್ನೆ ಮಾಡಿಕೊಂತು ಸಾಯಮಾಡಬೇಕು ಅಂತ ...." ಎಂದು ನೆನಪು ಮಾಡಿಕೊಟ್ಟ.

"ಹೂ ... ಸರ್ಪ ಪ್ರಾತ್ನೆ ಮಾಡಿಕೊಂತುs... ಅದ್ಕೆ ರಾಜಪುತ್ರ ಕೇಳಿದ, 'ನಿನ್ನ ತಲೇನೋವು ಓಗಬೇಕಾದರೆ ಯೇನ್ ಮಾಡ್ಬೇಕು' ಅಂತ."

"ಹ್ಞೂ"

"ಮೂಡಲ ದಿಕ್ಕಿನಾಗೆ ಬಂಗಾರಪುರ ಅಂತ ಒಂದೂರದೆ. ಅಲ್ಲಿ ನಗೆಮಲ್ಲಿಗೆ ಅಂತ ಒಬ್ಳು ರಾಜಪುತ್ರಿ ಅವ್ಳೆ. ಬಾಯ್ನಲ್ಲಿ ಮೂರು ಮಲ್ಲಿಗೆ ಊವು ಅರಳಿವೆ. ಅದರ ಮಧ್ಯದಲ್ಲಿರೋ ಊವ್ನ ತಕ್ಕೊಂಬಂದು ನಂಗೆ ಕೊಟ್ಟರೆ ನನ್ತಲೀನೋವು ಆ ಗಳಿಗೇಲಿ ಪುಸಕ್ಕನೆ ಒಂಟೋಯ್ತದೆ .... ಅಸ್ಟುಪಕಾರ ಮಾಡಿಯಾ ರಾಜಪುತ್ರ ಅಂತ ಕೇಳ್ತು ಆ ಹಾವು."

"ಹ್ಞೂ"

"ರಾಜಪುತ್ರ ಊವು ತಂದುಕೊಡಾಕೆ ಒಪ್ಪಿಕೊಂಡ" ಎಂದು ಹೇಳುತ್ತಾ ರಾಜಪುತ್ರ ಅಲ್ಲಿಂದ ತೆರಳಿ ದಾರಿಯಲ್ಲಿ ಇರುವೆಗಳಿಗೆ, ಇಲಿಗಳಿಗೆ, ಒಬ್ಬ ರಾಕ್ಷಸನಿಗೆ ಸಹಾಯ ಮಾಡಿದ್ದು, ಮುಂದೆ ಆತ ನಗೆಮಲ್ಲಿಗೆಯ ಪಟ್ಟಣವನ್ನು ಸೇರಿ ಅವಳೊಡ್ಡಿದ ಮೂರು ಸಾಹಸ ಕಾರ್ಯಗಳನ್ನೂ ತನ್ನಿಂದ ಸಹಾಯ ಪಡೆದಿದ್ದ ಇರುವೆ, ಇಲಿ, ರಾಕ್ಷಸರ ನೆರವಿನಿಂದ ಪೂರೈಸಿದ್ದು, ಆ ಮೇಲೆ ಆ ರಾಜಪುತ್ರಿ ಆತನನ್ನು ವರಿಸಿದ್ದು, ಅಲ್ಲಿಂದ ಅವಳ ಬಾಯಿಯಲ್ಲಿ ಅರಳಿದ್ದ ಮಲ್ಲಿಗೆಗಳಲ್ಲಿ ಮಧ್ಯದ ಕುಸುಮವನ್ನಾತ ಕಿತ್ತುತಂದು ಸರ್ಪಕ್ಕೆ ಕೊಟ್ಟು ಅದರ ತಲೆನೋವನ್ನು ಗುಣಪಡಿಸಿದ್ದು .... ಈ ಎಲ್ಲ ವಿಚಾರಗಳನ್ನೂ ಒಂದೊಂದಾಗಿ ಬಿಡಿಸಿ ಬಿಡಿಸಿ, ರಸವತ್ತಾಗಿ ಮಕ್ಕಳ ಬಾಯಲ್ಲಿ ನೀರೂರುವಂತೆ ನಿರೂಪಿಸಿದಳು ಮುದುಕಿ. ಆ ಮಕ್ಕಳು ಮುಗ್ಧರಾಗಿ, ತದೇಕಚಿತ್ತರಾಗಿ ಕಥೆಯ ಪ್ರವಾಹದಲ್ಲಿ ಕೊಚ್ಚಿಹೋದಂತಾಗಿದ್ದರು.

ಮುದುಕಿಯ ಮಾತು ನಿಂತಾಗಲೇ ಅವರಿಗೆ ಎಚ್ಚರ....ಕಟ್ಟು ಕತೆಯ ರಸಮಯ ಲೋಕದಿಂದ ಸಾರರಹಿತವಾದ ವಾಸ್ತವ ಜಗತ್ತಿಗೆ ಮರಳುವದೆಂದರೆ ಮಕ್ಕಳಿಗೆ ತುಂಬಾ ಹಿಂಸೆ. ನಟರಾಜ, ಮಂಗಳೆಯರಿಬ್ಬರೂ ಬಹಳ ಹೊತ್ತಿನವರೆಗೆ ನಗೆಮಲ್ಲಿಗೆಯ ಕಥೆಯನ್ನೇ ಚಪ್ಪರಿಸುತ್ತಿದ್ದರು. ಕಥೆ ಆಲಿಸಿದ ಅವರ ಮನಸ್ಸು ಬೆಲ್ಲ ಸವಿದ ಜಿಹ್ವೆಯಂತೆ ಸಿಹಿಸಿಹಿಯಾಗಿದ್ದಿತು.

ಕಥೆ ಹೇಳುವುದನ್ನು ಮುಗಿಸಿ ನಾಗಜ್ಜಿ ಮೇಲೆ ನೋಡಿದಳು. ಹೊತ್ತು ಆಗಲೇ ಇಳಿಯುತ್ತಿದ್ದಿತು. ಬಿಳಿ ಮುಗಿಲುಗಳು ನೀರಿನಿಂದ ಭಾರವಾಗಿ ಕಂದು ಬಣ್ಣಕ್ಕೆ ತಿರುಗಿದ್ದವು. "ಅವ್ವಿ! ಏಟೊತ್ತು ಕುಂತುಬುಟ್ನೋ .... ಅಟಾಜಾ ಮಂಗ್ಲಿ .... ಯೇಳಿ. ಒತ್ತಾಗದೆ ಓಗಾವಂತೆ, ಮಳೆ ಬ್ಯಾರೆ ಬರಾಅಂಗೆ ಕಾಣ್ತಾ ಅದೆ" ಎನ್ನುತ್ತಾ ಪುಳ್ಳೆ ಹೊರೆ ಹೊತ್ತು ಹೊರಡಲು ಸಿದ್ಧಳಾಗಿ ನಿಂತಳು. ಮಕ್ಕಳೂ ತಮ್ಮ ಪುಟ್ಟ ಪುಟ್ಟ ಕಂತೆಗಳನ್ನು ಎತ್ತಿಕೊಂಡರು. ಮೂವರೂ ಗೃಹಾಭಿಮುಖವಾಗಿ ಕಾಡು ಹಾದಿಯಲ್ಲಿ ಹೊರಟರು.

ಸ್ವಲ್ಪ ಹಾದಿ ಸಾಗುವುದರೊಳಗೆ ನಭದಲ್ಲಿ ಜರುಗುತ್ತಿದ್ದ ವಿಚಿತ್ರ ವ್ಯಾಪಾರವೊಂದು ಅವರ ದೃಷ್ಟಿಗೆ ಬಿದ್ದು, ಚಕಿತರಾಗಿ ನಿಟ್ಟಿಸುತ್ತ ನಿಂತರವರು.... ಒಂದು ಹದ್ದು ನಾಗರಹಾವನ್ನೆತ್ತಿಕೊಂಡು ಹಾರಲುಪಕ್ರಮಿಸಿತ್ತು. ಆದರೆ ಹಾವು ತನ್ನನ್ನು ಹಿಡಿದ ಕಾಲುಗಳಿಗೇ ಸುತ್ತಿಕೊಂಡು ಹದ್ದಿನ ಕುತ್ತಿಗೆ, ಹೊಟ್ಟೆ, ಪಕ್ಕೆಗಳಿಗೆ ಹೆಡೆಯಿಂದ ಅಪ್ಪಳಿಸುತ್ತಾ ಬಲವಾದ ಕದನವನ್ನೇ ಆರಂಭಿಸಿತ್ತು. ಹದ್ದೂ ಕೂಡ ಕಾಲುಗಳಿಂದ ಜಾಡಿಸುತ್ತ, ಪಾಶದಿಂದ ಬಿಡಿಸಿಕೊಳ್ಳಲು ಹೆಣಗುತ್ತಾ, ಮೊನೆಯಾದ ತನ್ನ ಕೊಕ್ಕಿನಿಂದ ಹಾವಿನ ಹೆಡೆ, ಮೈಗಳನ್ನು ಕಠೋರವಾಗಿ ಕುಕ್ಕುತ್ತಿತ್ತು.

ಸುಮಾರು ಅರ್ಧಗಂಟೆಯ ಕಾಲ ಈ ವಿಚಿತ್ರ ಕಾಳಗ ಜರುಗಿತು. ನಾಗಜ್ಜಿ ಮಕ್ಕಳೊಡನೆ ಮೂಕಳಾಗಿ ನಿಂತು ಅದನ್ನೇ ನಿಟ್ಟಿಸುತ್ತಿದ್ದಳು .... ಬರಬರುತ್ತಾ ಹಾವಿನ ಹೆಡೆಯ ಹೊಡೆತ ಹೆಚ್ಚಾಯಿತು. ಅದನ್ನು ತಾಳಿಕೊಳ್ಳಲಾರದೆ ಹದ್ದು ತನ್ನ ಕೊಕ್ಕಿನಿಂದ ಹಾವಿನ ಹೆಡೆಗೆ ತೀವ್ರವಾಗಿ ಕುಕ್ಕಿ, ಕಾಲುಗಳನ್ನು ಬಲವಾಗಿ ಝಾಡಿಸಿ, ಹಾವನ್ನು ತನ್ನ ಮೈಯಿಂದ ಒದರಿಬಿಟ್ಟಿತು. ಹಾವು ನಾಗಜ್ಜಿ, ಮಕ್ಕಳ ಮುಂದೆಯೇ ಸ್ವಲ್ಪ ದೂರದಲ್ಲಿ ರಪ್ಪನೆ ಬಂದು ಬಿದ್ದಿತು. ಅಷ್ಟರಲ್ಲಿ ಆಚೆಯ ಆಲದ ಮರದ ಮೇಲುಗಡೆ ಕುಳಿತ ಗರುಡಪಕ್ಷಿ ಸರ್‍ರನೆ ಇಳಿದುಬಂದು ಕ್ಷಣಾರ್ಧದಲ್ಲಿ ಆ ಹಾವನ್ನೆತ್ತಿಕೊಂಡು ಹಾರಿಹೋಯಿತು.

ಇದನ್ನೆಲ್ಲ ಭಯಬೆರೆತ ಕುತೂಹಲದಿಂದ ಮಕ್ಕಳೊಡನೆ ವೀಕ್ಷಿಸುತ್ತಿದ್ದ ಮುದುಕಿ "ಏಟೇ ಆದ್ರೂ ಗರುಡಾಳ ಗುರಾಡಾಳನೇ. ಹದ್ದು ಹದ್ದೇ ಎಂದು ಸೋತುಹೋದ ಹದ್ದನ್ನು ಕೀಳುಮಾಡಿ ನುಡಿದಳು. ಮಕ್ಕಳೂ ಅವಳ ಮಾತುಗಳನ್ನು ಪೂರ್ಣವಾಗಿ ಒಪ್ಪಿಕೊಂಡವು.

ನಡೆದ ಸಂಗತಿಯನ್ನೇ ಭಯದಿಂದ ನೆನೆಯುತ್ತ ಮೂವರೂ ಮತ್ತೆ ಹೆಜ್ಜೆ ಹಾಕತೊಡಗಿದರು. ಅದನ್ನೇ ಮೆಲಕು ಹಾಕುತ್ತಾ ಸಾಗಿದ್ದ ನಾಗಜ್ಜಿ "ಈ ಅಡವಿಯಾಗೆ ಇಂಗೇ ಏನಾರ ಒಂದು ಇಚಿತ್ರ ನಡೀತಾನೇ ಇರ್ತದೆ" ಎಂದು ತನಗೆ ತಾನೇ ಹೇಳಿಕೊಂಡಳು.

ಅಷ್ಟು ದೂರ ಹೀಗೆ ಸಾಗುವದರಲ್ಲಿ ಮೇಲೆ ಹೆಚ್ಚು ಹೆಚ್ಚು ಹೆಚ್ಚು ಕಾಳ ಸ್ವರೂಪ ತಳೆಯುತ್ತಿದ್ದ ಮೇಘಗಳು ಒಂದಕ್ಕೊಂದು ತೀವ್ರವಾಗಿ ಮಸೆಯುತ್ತಾ ಗುಡುಗು ಮಿಂಚು

ಕಾರುತ್ತಿದ್ದವು. ಮಳೆಯ ವಾಸನೆ ಸುಯ್ಯನೆ ಬೀಸುತ್ತಿದ್ದ ಗಾಳಿಯಲ್ಲೆಲ್ಲಾ ಬೆರೆತಿತ್ತು. ಮೂವರೂ ಹೆಜ್ಜೆಯನ್ನು ಬೇಗ ಬೇಗ ಹಾಕತೊಡಗಿದರು. ಊರು ಸಮೀಪಿಸುತ್ತಿದ್ದಂತೆ ಯಾವದೋ ಕಣ್ಣು ಕೋರೈಸುವ ಪ್ರಕಾಶ ಅಸಾಧ್ಯ ಅಬ್ಬರದೊಡನೆ ಅವರ ನೆತ್ತಿಯ ಮೇಲೆಯೇ ಹಾದು ಹೋದಂತಾಗಿ, ಮಕ್ಕಳ ಜೊತೆಗೆ ಅಜ್ಜಿಯೂ ನಡುಗಿ ನೋಡಿದಳು. ಹೆಚ್ಚೆಂದರೆ ನೂರು ಗಜ ದೂರವಿದ್ದ ಭಾರಿ ಹುಣಸೆ ಮರವೊಂದು ಹೊತ್ತಿ ಉರಿಯುತ್ತಿತ್ತು !... ಅನುಭವಸ್ಥಳಾದ ಅಜ್ಜಿಗೆ ಮಳೆಯಿಲ್ಲದಾಗಲೂ ಒಂದೊಂದು ವೇಳೆ ವರ್ಷಾಕಾಲದಲ್ಲಿ ಬಡಿಯುವ "ಬರಸಿಡಿಲು" ಅದು ಎಂದು ತಿಳಿಯಲು ಬಹಳ ಹೊತ್ತು ಹಿಡಿಯಲಿಲ್ಲ.

ನಟರಾಜ, ಮಂಗಳೆಯರಿಬ್ಬರೂ ಹೆದರಿ ಅಜ್ಜಿಯನ್ನೇ ತಬ್ಬಿಕೊಂಡಿದ್ದರು. ಗಾಳಿ ರಭಸವಾಗಿ ಬೀಸುತ್ತಿದ್ದರಿಂದ ಬೆಂಕಿ ತನ್ನ ರಕ್ತನಾಲಗೆಗಳನ್ನು ಮರದ ರೆಂಬೆ ರೆಂಬೆಗೆ ಚಾಚಿ ನೊಣೆಯುತ್ತಿತ್ತು. ಒಣಗಿದ ಹುಣಸೆ ಕಾಯಿಗಳು ಜ್ವಾಲೆಯ ಕಾವಿಗೆ 'ಛಟ್-ಪಟ್' ಎಂದು ಸಿಡಿಯುತ್ತಿದ್ದವು.

ಆ ರುದ್ರ ಭೀಕರ ದೃಶ್ಯವನ್ನು ಕಂಡು ಮಂಗಳೆಗಿಂತ ನಟರಾಜನೇ ಹೆಚ್ಚು ಹೆದರಿದಂತೆ ತೋರುತ್ತಿತ್ತು. ಪ್ರಾಯಶಃ ಅವನ ಬಾಲ್ಯದಲ್ಲಿ ಕರ್ನಕುಪ್ಪೆಯ ತಮ್ಮ ಮನೆಯ ಅಡಿಗೆ ಕೋಣೆಗೆ ತಾಯಿಯಿಲ್ಲದ ವೇಳೆಯಲ್ಲಿ ಅಂಬೆಗಾಲಿಕ್ಕಿ ಆಡುತ್ತ ಹೋಗಿ ಧಗಧಗನೆ ಉರಿಯುತ್ತಿದ್ದ ಒಲೆಯ ಬೆಂಕಿಗೆ ಕೈಯೊಡ್ಡಿ ಸುಟ್ಟುಕೊಂಡ ಅನುಭವ ಸುಪ್ತವಾದ ಕಾರಣವಾಗಿದ್ದರೂ ಇರಬಹುದು. ಅವನ ಮುಂಗೈ ಸುಟ್ಟ ಆ ಗುರುತು, ಈಗಲೂ ಪ್ರಖರವಾಗೇ ಇದೆ. ಅಂತೂ ದೂರದ ಬೆಂಕಿಗೆ ಭೀತನಾಗಿ ಇನ್ನೂ ನಡುಗುತ್ತಿದ್ದ ನಟರಾಜನನ್ನು ಮೂದಲಿಸುತ್ತಾ ಮಂಗಳೆ, "ಈಟು ಜಿನಾ ಅಭಿಮನ್ಯು ಆಗಿದ್ದೋನು ಈಗ ಉತ್ತರಕೊಮಾರ ಆದ" ಎಂದು ಕೊಂಕು ಮಾತು ತೆಗೆದು ಅಣಕವಾಡಿದಳು.

ಅಪಾಯದಿಂದ ದೂರವಿದ್ದೇನೆ ಎಂಬ ಅರಿವು ಇದೀಗ ಆಗಿದ್ದುದರಿಂದ ನಟರಾಜನ ಭೀತಿಯ ಮೊನೆ ಇಷ್ಟರಲ್ಲಿ ಸ್ವಲ್ಪ ಮೊಂಡಾಗಿತ್ತು. ಅವನೂ ಕೊಂಚ ಜಂಭದಿಂದಲೇ ಉತ್ತರವಿತ್ತ :

"ನೀ ಬೋ ಶೂರಿ .... ಗೊತ್ತದೆ ಬಾರೇ."

ಅಷ್ಟರಲ್ಲಿ ಸ್ಥಿಮಿತ ಸ್ಥಿತಿಗೆ ಬಂದಿದ್ದ ನಾಗಜ್ಜಿ ಮಕ್ಕಳ ಪೈಪೋಟಿಯನ್ನು ಕೇಳಿ ನಗುತ್ತಾ "ಇಬ್ಬರೂ ಬೋ ಶೂರರೇ .... ನಡೀರಿ ಹೋಗೂನಾ" ಎಂದಳು.

೭

ಹೀಗೆಯೇ ಎರಡು ವರುಷ ಕಳೆದಿತ್ತು. ನಟರಾಜನು ಹುಣಸೂರಿನ "ಮಿಡ್ಲಿಸ್ಕೂಲಿಗೆ" ಸೇರಿದ್ದ. ಬೆಳಿಗ್ಗೆ ಬೇಗ ಊಟ ಮುಗಿಸಿ ಒಂಬತ್ತು ಗಂಟೆಗೇ ಹಳ್ಳಿಯನ್ನು ಬಿಡುತ್ತಿದ್ದ.

ಜೊತೆಗೆ ಇವನ ಸಹಪಾಠಿಗಳಾದ ಉದ್ದಯ್ಯನ ಮಗ ಮರಿ ಮತ್ತು ತಟ್ಟೇಕೆರೆ ಕರಿಯಪ್ಪನ ಪುಟ್ಟ–ಇವರುಗಳೂ ಬರುತ್ತಿದ್ದರು. ಪಾರ್ವತಮ್ಮನು ಹೊತ್ತಿಗೆ ಮುಂಚೆ ಎದ್ದು ತಮ್ಮನ ಮಧ್ಯಾಹ್ನದ ತಿಂಡಿಗೆಂದು ಅಕ್ಕಿಯ ಉಪ್ಪಿಟ್ಟನ್ನೋ, ಕಲಸಿದ ಮೊಸರನ್ನವನ್ನೊ ಅಡಿಕೆಯ ಪಟ್ಟೆಯಲ್ಲಿ ಕಟ್ಟಿಕೊಡುತ್ತಿದ್ದಳು. ಮತ್ತೆ ಅವನು ಹುಣಸೂರಿನಿಂದ ಹಿಂತಿರುಗಬೇಕಾದರೆ ಸಾಯಂಕಾಲವಾಗುತ್ತಿತ್ತು.

ಇತ್ತ ಹಳ್ಳಿಯಲ್ಲಿ ಮಂಗಳೆಯ ಓದೂ ಆಯರಹಳ್ಳಿ ಅಯ್ಯ ಮರಳಿನ ಮೇಲೆ ಬರೆಸುತ್ತಿದ್ದ "ಶ್ರೀ ಓಂ ನಮಃ" ದಾಟಿ ಮುನ್ನಡೆದಿತ್ತು.

ಮತ್ತೆ ಬೇಸಿಗೆ ಬಂದಿದ್ದಿತು. ನಟರಾಜ, ಮಂಗಳೆಯರು ನಾಗಜ್ಜಿಯೊಡನೆಯೋ, ಪಾರ್ವತಮ್ಮನೊಡನೆಯೊ ಅಥವಾ ತಾವುಗಳೇ ದನ ಅಟ್ಟಿಕೊಂಡೋ ಕಾಡು ಅಲೆಯುವುದು ಪುನಃ ಪ್ರಾರಂಭವಾಯಿತು.

ಒಂದು ದಿನ ಇಡೀ ರಾತ್ರೆಯೆಲ್ಲಾ ಮಳೆ ಹೊಯ್ದಿತು. ಮಾರನೆಯ ಪ್ರಾತಃಕಾಲವೂ ಕುಟುಕಲು ಹನಿ ಇಡುತ್ತಿದ್ದು ನಟರಾಜ, ಮಂಗಳೆಯರನ್ನು ಮನೆಯಲ್ಲೇ ಸೆರೆ ಹಾಕಿತು. ನಾಗಜ್ಜಿಗೂ ಮೂರು ನಾಲ್ಕು ದಿನಗಳಿಂದ ಜ್ವರ ಬರುತ್ತಿದ್ದು ಅವಳೂ ಹೊರಗೆ ಬರುವಂತಿರಲಿಲ್ಲ. ಕುಟುಕಲು ಸ್ವಲ್ಪ ಕಡಿಮೆಯಾಗುವುದನ್ನೇ ಕಾದಿದ್ದು ಬೇಗಬೇಗ ಊಟ ಮುಗಿಸಿ ನಟರಾಜ, ಮಂಗಳೆಯರಿಬ್ಬರೂ ಮನೆಯಿಂದೋಡಿದರು. ಕೋಟೆಯ ಹತ್ತಿರ ಅವರು ಬರುವುದರೊಳಗೆ ಮಳೆಯ ಕುಟುಕಲು ಪೂರ್ಣವಾಗಿ ನಿಂತಿದ್ದಿತು.

ಕಲ್ಲಹಳ್ಳಿಯ ಕೋಟೆಯೆಂದರೆ ಅವಶೇಷದಂತಿರುವ ಕೆಲವು ಕಲ್ಲುಗಳು. ಹಿಂದೆ ಕವಿರಾಜ ಮಂಗರಸರು ರಾಜ್ಯವಾಳುವ ಕಾಲಕ್ಕೆ ಕೋಟೆ, ಪೇಟೆಗಳನ್ನೊಳಗೊಂಡು ವೈಭವದಿಂದ ಮೆರೆದಿದ್ದ ಆ ಊರು ಕೇವಲ ಅರವತ್ತು ಎಪ್ಪತ್ತು ಮನೆಗಳನ್ನುಳ್ಳ ಚಿಕ್ಕಹಳ್ಳಿ! ಈಗ ಊರಿರುವುದೆಲ್ಲಾ "ಕೋಟೆ"ಯ ಹೊರಗೆ. ಅದರೊಳಗೆ ಕೆಲವೇ ಮನೆಗಳು. ಆ ಕೋಟೆಯ ಮುಂದೆ ಮಕ್ಕಳನ್ನು ನಿಲ್ಲಿಸಿಕೊಂಡು ನಾಗಜ್ಜಿ ಹಿಂದಿನ 'ವೈಭೋಗ'ದ ದಿನಗಳ ಕಥೆಗಳನ್ನು ಹೇಳಿದ್ದಳು.

ಮಂಗರಸರ ಪ್ರತಾಪಗಳನ್ನು ಮೌನದಿಂದ ಉಸುರುತ್ತಿರುವಂತೆ ಕಾಣುವ ಆ ಕೋಟೆಯ ಕಲ್ಲುಗಳನ್ನೇ ನೋಡುತ್ತಾ ನಟರಾಜ ಮಂಗಳೆಯರು ಸಾಗಿದರು. ಕೋಟೆಯ ಮೇಲುಗಡೆ ಇರುವ ಮಾರಿ ಗುಡಿಯ ಬಳಿ ಕೆಲವು ಮಕ್ಕಳು ಆಡುತ್ತಿದ್ದರು. ನಟರಾಜ–ಮಂಗಳೆಯರಿಗೂ ಅಲ್ಲಿಯೇ ನಿಂತು ಆ ಮಕ್ಕಳನ್ನು ಕೂಡಿ ಆಡುವ ಮನಸ್ಸಾಯಿತು. ಆದರೆ ಕಾಡಿನ ಕರೆ ಅವರಿಬ್ಬರ ಹೃದಯದಲ್ಲಿ ಆ ಆಸೆಗಿಂತಲೂ ಪ್ರಬಲವಾಗಿದ್ದಿತು. ಮಕ್ಕಳಾಟವನ್ನೇ ನೋಡುತ್ತಾ ಓಣಿಯ ಕಡೆಗೆ ಸಾಗಿದರು.

ಕೆರೆಯ ಏರಿಯನ್ನು ದಾಟುತ್ತಿರುವಂತೆ ಕೆರೆಯಾಚೆ ಮೇಲುಗಡೆಗೆ ವಿಷಕಂಠಯ್ಯ ಆರು ಕಟ್ಟಿ ಎತ್ತುಗಳ ಬಾಲವನ್ನು ನುಲಿಯುತ್ತಾ 'ಹೇಯ್ ಹೇಯ್' ಎನ್ನುತ್ತಿದ್ದುದು ಕಾಣಿಸಿತು. ಮೆಲ್ಲನೆ ಅವನಿಗೆ ಕಾಣಿಸದಂತೆ ಉಣ್ಣೆ ಗಿಡಗಳ ಮರೆಯಲ್ಲಿ ಅವಿತುಕೊಳ್ಳುತ್ತಾ ಮುಂದೆ ಸಾಗಿದರು. ಮುತ್ತರಾಯನ ಬೆಟ್ಟದ ಅಷ್ಟು ಎತ್ತರವಿಲ್ಲದ ಬಲತುದಿಯನ್ನು ಏರಿ ಇಳಿದರು. ಆಗ ವಿಷಕಂಠಯ್ಯನ ಹೆದರಿಕೆ ಅವರಿಂದ ಪೂರ್ಣವಾಗಿ ಮಾಯವಾಗಿತ್ತು.

ರಾತ್ರಿಯೆಲ್ಲ ಮಳೆ ಹುಯ್ದ ಮರುದಿನ ಕೇಳಬೇಕೆ? ... ಕಾಡು ಮಿಂದ ತಾಯಿಯಂತೆ, ಮಕ್ಕಳಿಗೆ ಉಲ್ಲಾಸವನ್ನುಂಟುಮಾಡುತ್ತಿತ್ತು... ಮಳೆ ಈಗ ಪೂರ್ಣವಾಗಿ ನಿಂತಿದ್ದಿತು. ನಟರಾಜ–ಮಂಗಳೆಯರಿಬ್ಬರೂ ಕೈ ಕೈ ಹಿಡಿದು ಬೆರಳುಗಳಿಗೆ ಬೆರಳುಗಳನ್ನು ಹೆಣೆದು, ಆನಂದದಿಂದ ಮೈಮರೆತು ನಡೆಯುತ್ತಿದ್ದರು.

ನೆಲ ಹೊಗೆಯಾಡುತ್ತಿತ್ತು. ತೆಳುವಾದ ಹಬೆ ಮುಗಿಲಿಗೆ ಏರುತ್ತಿತ್ತು, ಸಣ್ಣ ಮಳೆಯ ಹನಿಗಳು ಹುಲ್ಲಿನ ಮೇಲೆ ಹೊಳೆಯುತ್ತಿದ್ದವು. ಒದ್ದೆಯಾದ ಮಣ್ಣಿನ ವಾಸನೆಯೂ, ಕುಸುಮಗಳ ಸುಗಂಧವೂ ಬೆರೆತ ಗಾಳಿ ಮಾದಕತೆ ಹೊತ್ತು ಬೀಸುತ್ತಿತ್ತು. ಎತ್ತೆತ್ತಲೂ ಅರಳಿದ ವನಸುಮಗಳ ಸುತ್ತಲೂ ಬಂಗಾರ ಜೇನುಗಳ ಒಂದು ತಂಡವೇ 'ಜೀ'ಕಾರ ಮಾಡುತ್ತಿತ್ತು.

ಪ್ರಕೃತಿ ಆ ಕಾಡಿನಲ್ಲಿ ನಾನಾ ಹೂವುಗಳ ಬಣ್ಣಬಣ್ಣದ ಸಂತೆಯನ್ನೇ ವಿರಚಿಸಿದಂತಿತ್ತು. ಉಣ್ಣೆಯ ಬಿಳಿ, ಹಳದಿ, ಕೆಂಪು ಗೊಂಚಲುಗಳು, ಮಾಣಿಕ್ಯದಂತೆ ವಿರಾಜಿಸುವ ಮುತ್ತುಗದ ವಿಶಾಲವಾದ ಸುಂದರ ಪುಷ್ಪ, ತನ್ನದೇ ವೈಶಿಷ್ಟ್ಯದಿಂದ ಮೆರೆಯುವ ಹಳದಿಯ ಬೆಟ್ಟದಾವರೆ ಹೂವು. ಅಲ್ಲಲ್ಲಿ ಶೋಭಿಸುವ ಕಾಡು ಮಲ್ಲಿಗೆ, ಇವಲ್ಲದೆ ಕಾಡಿನ ವಿವಿಧ ವೃಕ್ಷಗಳಲ್ಲರಳಿದ ವಿಧ ವಿಧ ವರ್ಣದ ಕುಸುಮಗಳು–ಎಲ್ಲವೂ ಸೇರಿ ನೋಡಿದ ನಯನಗಳಿಗೆ ಹಬ್ಬ ಮಾಡುತ್ತಿದ್ದವು.

ನಟರಾಜ–ಮಂಗಳೆಯರು ಉಬ್ಬಿದ ಹೃದಯದಿಂದ ಹೆಜ್ಜೆ ಹಾಕುತ್ತಿದ್ದಂತೆ, ಒಂದು ಜೇನು ಹಾರಿ ಬಂದು ಒರಟುತನದಿಂದ, ಮಳೆಯಿಂದ ಭಾರವಾದ ಮಾವಿನ ಹೊಗೊಂಚಲೊಂದನ್ನು ಅಪ್ಪಿ ಕುಳಿತು ಒಂದು ಪುಟ್ಟ ಮಳೆಯನ್ನೇ ಅವರ ಮೇಲೆ ಕರೆಯಿತು.

ಮೇಲೆ ನೋಡಿ ನಗುತ್ತಾ ಇಬ್ಬರೂ ಮುಂದುವರೆದರು.

ಗಿಡ ಮರಗಳ ರೆಂಬೆಗಳನ್ನು ಸುತ್ತಿ ಬಳಸಿ, ನೆಲದಲ್ಲಿ ಕುಸಿದು, ಕುಸಿದ ಕಾಲನ್ನೆತ್ತಿ ನಡೆಯುವಾಗ ನಗುತ್ತಾ ಸಾಗಿದರು. ತೇವವಾದ ಮರಗಳು ಅವರ ಮೇಲೆ ತಮ್ಮ ರೆಂಬೆಗಳನ್ನು ಅಲ್ಲಾಡಿಸಿದವು. ಮೆಲುಗಾಳಿ ಎಲೆಗಳ ಮಧ್ಯ ಮಧ್ಯೆ ಸುಳಿದು ಸುತ್ತುತ್ತಿದ್ದಿತು. ನಾನಾಜಾತಿಯ,

ನಾನಾವರ್ಣದ ಹಕ್ಕಿಗಳನ್ನು ಅವರು ನೋಡಿದರು. ಹಿಂದೆ ನೋಡಿದ್ದರೂ ಇಂದು ಅದೇಕೊ ಹೊಸದಾಗಿ ತೋರುತ್ತಿದ್ದವು ಅವು. ಮರಕುಟಕ ನೇರಳೆ ಮರದ ಮೇಲೆ ಕುಳಿತು ಕುಟುಕುತ್ತಿದ್ದರೆ ಅದನ್ನೇ ನೋಡುತ್ತಾ ನಿಲ್ಲುವರು. ನೆಲ್ಲಿಯ ಮರದಿಂದ ಅರಗಿಳಿ ಹಾರಿದರೆ ಅದನ್ನೇ ವೀಕ್ಷಿಸುತ್ತ ಮುಗ್ಧರಾಗುವರು. ಬೆಳ್ಳಕ್ಕಿಗಳ ಸಾಲು ಅಂತರಿಕ್ಷದ ನೀಲಿಯಲ್ಲಿ ಹೋಗುವುದನ್ನು ಒಬ್ಬರಿಗೊಬ್ಬರು ತೋರಿಸಿಕೊಂಡು ಹಿಗ್ಗುವರು.

ಮಕ್ಕಳು ಮುತ್ತುರಾಯನ ಬೆಟ್ಟವನ್ನಿಳಿದರು. ಆ ಸ್ಥಳದಲ್ಲಿ ಕಾಡು ಸ್ವಲ್ಪ ತೆಳುವಾಗಿ ಮುಂದೆ ನಿಬಿಡವಾಗುತ್ತ ಹೋಗಿತ್ತು. ಇದ್ದಕ್ಕಿದ್ದಂತೆ ನಟರಾಜ ಮಂಗಳೆಯನ್ನು ಸೆಳೆದು ನಿಲ್ಲಿಸಿ ತಗ್ಗಿದ ದನಿಯಲ್ಲಿ "ಮಂಗ್ಲೀ" ಎಂದ... ಮಂಗಳೆ ಬೆಚ್ಚಿ ನಿಂತಳು. ಪಕ್ಕದ ಬಯಲಿನಲ್ಲಿ ಹತ್ತು ಹನ್ನೆರಡು ನವಿಲುಗಳಿದ್ದುದು ಉಣ್ಣಿಯ ಮೆಳೆಯ ಸಂದಿಗಳಲ್ಲಿ ಕಾಣುತ್ತಿತ್ತು. ಒಬ್ಬರಿಗೊಬ್ಬರು ಬಾಯಿಗೆ ಬೆರಳಿಟ್ಟು "ಶ್" ಮಾಡುತ್ತಾ ಮೆಳೆಯ ಸಂದಿಗಳ ಹತ್ತಿರ ಸರಿದು ನೋಡಿದರು, ದೃಶ್ಯ ಅದ್ಭುತವಾಗಿತ್ತು. ಎರಡು ಗಂಡು ನವಿಲುಗಳು ಗರಿಗೆದರಿ 'ಜಾಗರ' ಆಡುತ್ತಿದ್ದವು. ಇತರ ಹೆಣ್ಣು ನವಿಲುಗಳು ಅವೆರಡರ ಸುತ್ತಲೂ ಸುತ್ತುತ್ತಿದ್ದವು. ಬಣ್ಣ ಬಣ್ಣದ ನವಿಲುಗಳ ಬಣ್ಣ ಬಣ್ಣದ 'ಕಣ್ಣು'ಗಳನ್ನು ನಟರಾಜ–ಮಂಗಳೆಯರು ಬಿಟ್ಟ ಕಣ್ಣು ಬಿಟ್ಟ ಬಾಯಿಯಾಗಿ ನಿಟ್ಟಿಸುತ್ತಿದ್ದರು. ಅಷ್ಟರಲ್ಲಿ ಹತ್ತಿರದ ಜಾಲದ ಮರದ ರೆಂಬೆಯೊಂದರ ಮೇಲೆ ಮೌನವಾಗಿ ಕುಳಿತಿದ್ದ ಮತ್ತೊಂದು ಗಂಡು ನವಿಲು ಕೇಕೆ ಹಾಕುತ್ತಾ ಹಾರಿ ಕೆಳಗೆ ಬಂದಿತು.

ಆ ನವಿಲಿನ ಕೇಕೆಗೆ ಮಕ್ಕಳಿಬ್ಬರೂ ನಸುಬೆಚ್ಚಿದರು. ಮರುಗಳಿಗೆಗೇ ಕುತೂಹಲ, ಆಸೆ–ಆ ನವಿಲಿನ ಗರಿ ಹೊದೆ ಹೊದೆಯಾಗಿ ಉದ್ದವಾಗಿತ್ತು. ಅದೂ ಜಾಗರವಾಡಿದರೆ ಎಷ್ಟು ಚೆನ್ನ, ಎಂಬ ಹಂಬಲ ಮಕ್ಕಳಿಗೆ. ಆದರೆ ಆ ನವಿಲಿಗೇಕೊ ಹಿಡಿಸಲಾರದಷ್ಟು ಜಂಭ. ನೆಲದ ಸಮಕ್ಕೇ ಸ್ವಲ್ಪ ಗರಿಗೆದರುವುದು, ಮತ್ತೆ ಮುಚ್ಚಿಕೊಳ್ಳುವುದು. ಮಂಗಳೆಗೆ ರೇಗಿ "ಜಂಭದ ಕೋಳಿ" ಎಂದು ಕರೆದೇ ಕರೆದಳು.

ಎಷ್ಟೋ ವೇಳೆ ಸಂದ ಬಳಿಕ, ಬಹಳ ಪ್ರಯಾಸದಿಂದ ಆ ನವಿಲು ಗರಿಗಳನ್ನು ಅಲ್ಲಾಡಿಸಿ ಜಲಿಜಲಿ ಎಂದು ಸದ್ದು ಮಾಡುತ್ತಾ ಬೀಸಣಿಗೆಯಾಕಾರದಲ್ಲಿ ತೆರೆಯಿತು. ಹಾಗೆಯೇ ತೆರೆದ ಗರಿಗಳನ್ನು ಮೇಲೆತ್ತಿ ನಿಂತಿತು. ಆ ನವಿಲನ್ನು ನೋಡಲು ಎರಡು ಕಣ್ಣೂ ಸಾಲದು. ಜಗತ್ತಿನ ಸೌಂದರ್ಯವೆಲ್ಲಾ ಆ ನವಿಲೊಂದರಲ್ಲಿ ಕ್ರೋಡೀಕರಿಸಿದಂತೆ ಕಾಣುತ್ತಿತ್ತು ....

ಅಷ್ಟರಲ್ಲಿ ಮಕ್ಕಳ ಎಡಗಡೆಗೆ ಬಯಲಿನಲ್ಲಿ ಏನೋ ಚಿಮ್ಮಿದ ಸದ್ದು ಕೇಳಿಬಂದಿತು. ನಟರಾಜ–ಮಂಗಳೆಯರಿಬ್ಬರೂ ಸರಕ್ಕನೆ ತಿರುಗಿ ನೋಡಿದರು. ಹುಲ್ಲೆ ಕರುಗಳ ಒಂದು ಗುಂಪು ಚಿಮ್ಮುತ್ತಾ ಹೋಗುತ್ತಿತ್ತು. ಒಂದು ಹೂ ಮರಿ ಮಾತ್ರ ನೆಗೆಯಲಾರದೆ ನಿಧಾನವಾಗಿ

ನಡೆದು ಹೋಗುತ್ತಿತ್ತು. ನಟರಾಜ–ಮಂಗಳೆಯರು ಅದರ ಹಿಂದೆಯೇ ಓಡಿಹೋದರು. ಸ್ವಲ್ಪ ದೂರ ಹೋಗುವುದರೊಳಗಾಗಿ ಆ ಹೂ ಮರಿ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಸಿಕ್ಕಿ ಬಿದ್ದಿತು.

ನಟರಾಜ ಮರಿಯನ್ನು ಎತ್ತಿ ಅಪ್ಪಿಕೊಂಡ. ಮರಿ ಸುಂದರವಾಗಿತ್ತು. ಅದರ ಕಣ್ಣುಗಳು ಹೆಣ್ಣಿನ ಕಣ್ಣಿನಂತೆ ಆಕರ್ಷಣೀಯವಾಗಿತ್ತು. ಮೈ ಚರ್ಮ ಮೃದುವಾಗಿ ರೇಷ್ಮೆಯನ್ನು ಮುಟ್ಟಿದಂತೆ ನುಣುಪಾಗಿತ್ತು. ಮಂಗಳೆ ಅದನ್ನು ಮುಟ್ಟಿ ಹಿಗ್ಗುತ್ತಿದ್ದಳು. ಅದನ್ನೇ ಆಸೆ ತುಂಬಿದ ನಯನಗಳಿಂದ ನೋಡುತ್ತಾ "ಅಟಾಜಾ. ಈ ಹುಲ್ಲೇಕರಾವಾ ನಮ್ಮ ಹಟ್ಟೀಗೆ ತಕ್ಕಂಡೋಗಿ ಸಾಕಿಕಳವಾ" ಎಂದು ಕೇಳಿದಳು. ನಟರಾಜನೂ ತನ್ನ ಒಪ್ಪಿಗೆಯನ್ನು ಸಂತೋಷವಾಗಿ ತಲೆಯಲ್ಲಾಡಿಸಿ ಸೂಚಿಸಿದ.

ಆದರೆ ಮರಿಯನ್ನೆತ್ತಿಕೊಂಡು ಎರಡು ಹೆಜ್ಜೆ ಹಾಕಿದಂತೆ ಅವನಿಗೆ ಹೇಗೆ ಹೇಗೊ ಆಯಿತು. ಮರಿ ಗಾಬರಿಯಾಗಿ ನಡುಗುತ್ತಾ, ಅವನ ಕೈಗಳಿಂದ ತಪ್ಪಿಸಿಕೊಳ್ಳುವ ಹಂಬಲದಿಂದ ಒದರಾಡುತ್ತಾ ಸಂಕಟಪಡುತ್ತಿತ್ತು. ಅಷ್ಟು ದೂರದಲ್ಲಿ ಬಂಡಿಯ ಪಕ್ಕದಲ್ಲಿ ಅದರ ತಾಯಿ ಹೃದಯ ಬಿರಿಯುವಂತೆ ಅರಚುವುದು ಕೇಳಿಸಿತು.

ನಟರಾಜನಿಗೆ ಇನ್ನು ತಾಳದಾಯಿತು. ಮರಿಯನ್ನು ಮೆಲ್ಲನೆ ಕೆಳಗಿಳಿಸಿ ಬಿಟ್ಟು ಬಿಟ್ಟ. ಲವಲವಿಕೆಯಿಂದ ಆ ಮರಿ ತನ್ನ ತಾಯಿಯ ಕೂಗು ಕೇಳಿ ಬರುತ್ತಿದ್ದ ದಿಸೆಯನ್ನೇ ಹಿಡಿದು ನಡೆಯಿತು.

ಮೊದಮೊದಲು ನಟರಾಜ ಮರಿಹುಲ್ಲೆಯನ್ನು ಬಿಟ್ಟುಬಿಟ್ಟನೆಂದು ಕುಪಿತಳಾದರೂ ತಾಯಿ–ಮರಿಗಳು ಸೇರಿ ಸಂತೋಷವಾಗಿ ಕುಣಿಯುತ್ತಾ ಹೋಗುವುದನ್ನು ನೋಡಿದಾಗ ಮಂಗಳೆಯ ಮುನಿಸೂ ಮಾಯವಾಯಿತು. ಅವೆರಡೂ ಒಟ್ಟಿಗೆ ಹಾಗಿರುವುದೇ ಚೆಂದ, ಎಂದೆನಿಸಿರಬೇಕು ಅವಳಿಗೆ.

ಇಬ್ಬರೂ ಆ ಹುಲ್ಲೆಗಳು ಕಣ್ಮರೆಯಾಗುವವರೆಗೂ ಅದನ್ನು ಹಿಂಬಾಲಿಸಿದರು. ಆದರೆ ನಟರಾಜ ಸ್ವಲ್ಪ ಮುಂದಾಗಿ ಅವನ ಜೊತೆಗೆ ನಡೆಯಲಾರದೆ ಮಂಗಳೆ ಅವನ ಹೆಸರು ಹಿಡಿದು ಕೂಗಿದಳು : "ಅಟಾಜಾ ..."

ನಟರಾಜ ತಿರುಗುವುದರೊಳಗೆ ನಟ್ಟಡವಿಯಿಂದ ಅದಾವದೋ ಬಂಡೆ ಮಾರ್ದನಿ ಕೊಟ್ಟಿತು .... "–ಟಾಜಾ"

ಮಾರ್ದನಿಯನ್ನು ಕೇಳಿ ನಟರಾಜನೂ ಅರಚಿಕೊಂಡ : "ಮಂಗ್ಲೀ ...." ಪುಟ ಹೊಡೆದಂತೆ ಬಂದಿತು ಉತ್ತರ .... "–ಅಂಗ್ಲೀ !"

ಮಾರ್ದನಿ ಮಕ್ಕಳ ಹುಡುಗಾಟದ ಸ್ವಭಾವಕ್ಕೆ ಕಚಗುಳಿ ಇಡುತ್ತಿತ್ತು. ಇಬ್ಬರೂ ಕೂಡಿಕೊಂಡು ಇನ್ನೂ ಕೊಂಚ ಮುಂದೆ ನಡೆದು ಕೂಗತೊಡಗಿದರು.

ನಟರಾಜ ಬೇಕಂತಲೇ "ಮಂಗೀ" ಎಂದು ಕೂಗಿದ. "–ಅಂಗೀ !" ಎಂದು ಬಂದಿತು ಉತ್ತರ. ಮಂಗಳೆಯೂ ನಸುಕೋಪದಿಂದ ಕೆನ್ನೆಗಳನ್ನು ಉಬ್ಬಿಸಿಕೊಂಡು "ಹುಚ್ಚಾ" ಎಂದು ಕರೆದಳು. ಮಾರ್ದನಿಯು "ಉಚ್ಚಾ!" ಎಂದು ಆರ್ಭಟಿಸಿತು.

ನಟರಾಜನ ಕಣ್ಣು ಕೆಂಪಾಯಿತು. ಇನ್ನೇನು ಸರಸ ವಿರಸವಾಗುವುದರಲ್ಲಿತ್ತು. ಅಷ್ಟರಲ್ಲಿ ಹಾಲುನೊರೆಯಂತೆ ಬೆಳ್ಳಗಿದ್ದ ಮೊಲವೊಂದು ಕಳ್ಳಿಯ ಪೊದೆಯಿಂದ ಸರಕ್ಕನೆ ಸುಳಿದು ಇವರ ಎದುರಿಗೇ ಓಡಿಹೋಯಿತು. ಮೊಲವನ್ನು ನೋಡುವ ಕುತೂಹಲದಲ್ಲಿ ಇನ್ನೇನು ಬೆಳೆಯುವುದರಲ್ಲಿದ್ದ ಮಕ್ಕಳ ಕಲಹ ಕರಗಿಹೋಯಿತು.

ಸಂಜೆಯ ಛಾಯೆಗಳು ಪೂರ್ವಾಭಿಮುಖವಾಗಿ ಗಿಡಮರಗಳಿಂದ ನೀಳವಾಗಿ ಬೀಳುತ್ತಿದ್ದವು. ಮುಳುಗುವ ಸೂರ್ಯ ಆ ವೃಕ್ಷಗಳ ಮೇಲ್ಭಾಗಕ್ಕೆಲ್ಲ ಗುಲಾಬಿ ಬೆಳಕಿನ ಸ್ನಾನ ಮಾಡಿಸಿದ್ದ. ನಟರಾಜ–ಮಂಗಳೆಯರಿಬ್ಬರೂ ಹೊತ್ತಾಯಿತೆಂದೆದ್ದು ಮನೆಯ ಕಡೆ ಹೊರಟರು. ಅವರು ಕಾಡನ್ನು ದಾಟಿ ಬರುತ್ತಿರುವಂತೆ ಪಕ್ಷಿಗಳ ವಿವಿಧ ಸ್ವರಗಳ ಆಲಾಪ ಸಂಜೆಯ ಗಾಳಿಯಲ್ಲಿ ಉಲಿಯುತ್ತಿತ್ತು. ಮಿಡತೆ, ಜೀರುಂಡೆಗಳ ಜೀಕಾರ ರವ ಜೋಗುಳದಂತೆ ಕೇಳುತ್ತಿತ್ತು.

ನಟರಾಜ–ಮಂಗಳೆಯರು ವಿಷಕಂಠಯ್ಯನ ಹೊಲಗಳಿಗೆ ಕಾಲಿಡುವಷ್ಟರಲ್ಲಿ ರಾತ್ರಿ ತನ್ನ ಕಪ್ಪುತೆರೆಯನ್ನು ಹಳ್ಳಿಯ ಮೇಲೆ ಹೊದಿಸುತ್ತಿತ್ತು. ಅವರ ಮುಖದೆದುರಿಗೇ ಚಂದ್ರ ಉದಯಿಸಿದ. ಬಾನಿನಲ್ಲೆಲ್ಲಾ ನಕ್ಷತ್ರಗಳು ಕಾಣಿಸಿಕೊಂಡವು. ಕೆರೆಯ ಏರಿಗೆ ಅವರು ಬಂದಾಗ ಐದಾರು ಹುಡುಗರು, ಒಂದು ಕುರಿಯ ಮಂದೆಯೂ ಅವರಿಗೆ ಕಾಣಿಸಿದವು. ಆ ಗುಂಪಿನಲ್ಲಿ ಒಬ್ಬ ಹುಡುಗ ರಾಗವಾಗಿ ರೋದಿಸುತ್ತಿದ್ದುದೂ, ಇತರರು ಸಮಾಧಾನ ಹೇಳುತ್ತಿದ್ದುದೂ ಅಸ್ಫುಟವಾಗಿ ಕಿವಿಗೆ ಬಿದ್ದು ಅವರ ಕುತೂಹಲ ಕೆರಳಿತು.

ಹತ್ತಿರ ಬಂದು ವಿಚಾರಿಸಿದರು. ಆಗ ಆ ಹುಡುಗ ಮುತ್ತುರಾಯನ ಬೆಟ್ಟದಲ್ಲಿ ಕುರಿ ಮೇಯಿಸಲು ಹೋಗಿದ್ದನೆಂದೂ, ಮೇಯಿಸಿಕೊಂಡು ಹಿಂದೆ ತಿರುಗುವಾಗ ಒಂದು ಕಿರುಬ ಹಿಂದಿನಿಂದ ಮಂದೆಯ ಮೇಲೆ ಬಿದ್ದು ಒಂದು ಕುರಿಯನ್ನು ಎತ್ತಿಕೊಂಡು ಹೋಯಿತೆಂದೂ ಅದನ್ನು ಅವರ ತಂದೆ ಐದು ರೂಪಾಯಿಗೆ ಬೆಟ್ಟದ ತುಂಗದಿಂದ ಕೊಂಡು ತಂದಿದ್ದನೆಂದೂ, ಈಗ ಆ ಕುರಿಯಿಲ್ಲದೆ ಮನೆಗೆ ಹೋದರೆ ತಂದೆ ಏನೆನ್ನುವನೋ ಎಂದು ಹೆದರಿ ಆ ಹುಡುಗ ಅಳುತ್ತಿರುವುದಾಗಿಯೂ ಇತರ ಬಾಲಕರು ಹೇಳಿದರು.

ಈ ಸಂಗತಿಯನ್ನು ಕೇಳಿ ನಟರಾಜ–ಮಂಗಳೆಯರು ನಡುಗಿದರು. ಒಂದು ಪಕ್ಷ ತಾವು ಹೋಗಿದ್ದ ಜಾಗದಲ್ಲಿ ಕಿರುಬ ಕಾಣಿಸಿಕೊಂಡಿದ್ದರೆ ಗತಿಯೇನು? ಎಂದು ಚಿಂತಿಸಿದಾಗ ಹೌಹಾರಿದಂತಾಯಿತು ಅವರಿಗೆ. ಮನೆಗೆ ಬರುವವರೆಗೂ ಅವರಿಗೆ ಅದೇ ಮಾತೇ! ಅದರಿಂದಾಗಿ ಮಕ್ಕಳಿಗೆ ತಾವು ನವಿಲು, ಜಿಂಕೆಗಳನ್ನು ನೋಡಿ ಉಂಟಾದ ಸಂತಸ ಮರೆತೇ ಹೋಯಿತು. ಅವರ ಹೃದಯದಲ್ಲಿ ಭೀತಿಯ ಪದಾರ್ಪಣವಾಗಿತ್ತು.

ಪ್ರಕೃತಿ ದೇವಿ ಎಷ್ಟು ರಮಣೀಯಳೊ ಅಷ್ಟೇ ರುದ್ರಳೂ ಹೌದು!

೮

ಪ್ರತಿ ಬೃಹಸ್ಪತಿವಾರ ಹುಣಸೂರಿನಲ್ಲಿ ವಿಶೇಷ ದಿನ. ಏಕೆಂದರೆ ಆ ದಿನ ಅಲ್ಲಿ ಸಂತೆ ಸೇರುತ್ತದೆ.

ಹುಣಸೂರಿನಲ್ಲಿ ಅದೇ ಹೆಸರಿನ ತಾಲ್ಲೂಕಿನ ಕೇಂದ್ರ. ಅದಕ್ಕೆ ತಕ್ಕಂತೆ ದೊಡ್ಡ ಊರು. ಅಲ್ಲಿ ಮುನ್‌ಸೀಫ್ ಕೋರ್ಟು ಸಹ ಇದೆ. ತಾಲ್ಲೂಕು ಅಮಲ್ದಾರರೂ ಹುಣಸೂರಿನಲ್ಲಿಯೇ 'ಮೊಕ್ಕಾಂ' ಮಾಡುತ್ತಾರೆ.

ಹುಣಸೂರಿನ "ಬೇಸ್ತಾರ ಸಂತೆ" ಆ ಸುತ್ತಿಗೆಲ್ಲಾ ಬಹಳ ಪ್ರಸಿದ್ಧಿ. ಆ ದಿನ ನೆರೆಹೊರೆಯ ಹಳ್ಳಿಗರೆಲ್ಲಾ ಹುಣಸೂರಿನಲ್ಲಿಯೇ ಹೆಚ್ಚು ಕಾಲ ಕಳೆಯುವುದು ಸಾಮಾನ್ಯ. ಹಳ್ಳಿಗರು ತಮ್ಮಲ್ಲಿದ್ದ ಸಾಮಾನುಗಳನ್ನು ಕೊಟ್ಟು ಇಲ್ಲದ ಸಾಮಾನುಗಳನ್ನು ಕೊಳ್ಳುವ ದಿನ ಅದು. ತಾವು ಬೆಳೆದ ರಾಗಿಯನ್ನೊ, ಹುರುಳಿಯನ್ನೊ, ಹರಳನ್ನೊ, ಮೆಣಸಿನಕಾಯನ್ನೊ, ತೋಟವಿರುವವರು ಬಾಳೆಯಕಾಯಿ, ಬಾಳೆಯ ಹಣ್ಣು, ಸೀಬೆ ಹಣ್ಣು, ಮಾವಿನಹಣ್ಣುಗಳನ್ನೊ, ಹುಣಸೆ ಮರವಿರುವವರು ಹುಣಸೇಹಣ್ಣನ್ನೋ, ದನಕರು ಸಾಕಿರುವವರು ಬೆಣ್ಣೆಯನ್ನೊ ತಂದು ಮಾರುತ್ತಾರೆ. ಬಂದ ಹಣಕ್ಕೆ ತಮಗೆ ಅಗತ್ಯವಾದ ಉಪ್ಪು, ಮೆಣಸು, ಜೀರಿಗೆ, ಸಾಸಿವೆ, ಸೀಮೆಯೆಣ್ಣೆ, ತಾವು ಆ ಸಾರಿ ಬೆಳೆಯದೆ ಇದ್ದ ಹೆಸರು, ಹಲಸಂದೆ ಮೊದಲಾದ ಕಾಳು ಕಡ್ಡಿಗಳು, ಮಕ್ಕಳಿಗೆ ಕಡಲೆಪುರಿ, ಮಿಠಾಯಿ, ಹೆಂಗಸರಿಗೆ ಹೂವು, ವೀಳೆಯದೆಲೆ–ಮುಂತಾದುವನ್ನು ಕೊಳ್ಳುತ್ತಾರೆ.

ಆ ದಿನ ಬೃಹಸ್ಪತಿವಾರವಾದ್ದರಿಂದ ಕಲ್ಲಹಳ್ಳಿಯಲ್ಲಿ ವಿಷಕಂಠಯ್ಯನ ಮನೆಯಲ್ಲಿ ಸಡಗರವೊ ಸಡಗರ. ಕೋಳಿ ಕೂಗುವುದಕ್ಕೆ ಮುನ್ನವೇ ನಾಗಜ್ಜಿಯೂ, ಪಾರ್ವತಮ್ಮನೂ ಎದ್ದಿದ್ದರು. ಆದರೆ ವಿಷಕಂಠಯ್ಯ ಮಾತ್ರ ಇಷ್ಟು ದಿನವೂ ಬೆಳಕು ಹರಿಯುವುದರೊಳಗೆ ಎದ್ದೇಳುತ್ತಿದ್ದವನು ಇಂದು ಸೂರ್ಯ ಉದಯಿಸಿ ಆಗಲೇ ಎಳೆಬಿಸಿಲು ಚುರುಗುಟ್ಟುವಷ್ಟು ತೀವ್ರವಾಗಿದ್ದರೂ, ಇನ್ನೂ ಹೊದೆದ [illegible] ತೆಗೆಯದೆ ಮಲಗಿಕೊಂಡೇ ಇದ್ದ. ಹಿಂದಿನ

ರಾತ್ರಿ ಪಂಚವಳ್ಳಿಗೆ ನ್ಯಾಯಕ್ಕೆ ಹೋಗಿ ಬರುವುದು ಸರಿರಾತ್ರಿಯಾದುದರಿಂದ ಅವನು ಬೇಗ ಏಳುವುದಕ್ಕಾಗಿರಲಿಲ್ಲ. ಪಾರ್ವತಮ್ಮನೇ ಊರ ಪಡುವಣ ಬಾವಿಗೆ ಹೋಗಿ ನೀರು ಹೊತ್ತು ತಂದಿದ್ದಳು. ನಾಗಜ್ಜಿ ಪುಳ್ಳೆಗಳನ್ನಿಟ್ಟು ನೀರು ಕಾಯಿಸುವುದರಲ್ಲಿ ದನದ ಕೊಟ್ಟಿಗೆಯ ಸಗಣಿ, ಗಂಜಲಗಳನ್ನು ತೊಡೆದು ಸ್ವಚ್ಛಗೊಳಿಸಿದ್ದಳು. ಅನಂತರ ನಾಗಜ್ಜಿ ಮೀಯುವುದರೊಳಗಾಗಿ ಮನೆಯ ಕಸ ಗುಡಿಸಿ, ಮುಸುರೆ ಮಡಕೆ ಪಾತ್ರೆಗಳನ್ನು ತೊಳೆದಿಟ್ಟು ಬೀದಿಯ ಬಾಗಿಲಿಗೆ ನೀರು ಚುಮುಕಿಸಿ ಸಗಣಿ ಸಾರಿಸಿ, ಓರಣವಾಗಿ ರಂಗವಲ್ಲಿಯಿಂದ ಚಿತ್ರಗಳನ್ನು ಬಿಡಿಸಿದ್ದಳು. ಪಾರ್ವತಮ್ಮನ ಅಚ್ಚುಕಟ್ಟು ಕಲ್ಲಹಳ್ಳಿಗೇ ಪ್ರಸಿದ್ಧವಾಗಿತ್ತು. ಹಳ್ಳಿಯ ಹೆಂಗಸರು ಎಷ್ಟೋ ವೇಳೆ ಪರಸ್ಪರ ಅಂದುಕೊಂಡದ್ದುಂಟು : "ಅಚ್ಚುಕಟ್ಟೂಂದ್ರೆ ಆ ಪಾರ್ವತಮ್ಮನ ಎಸರೇಳ್ಬೇಕು ಕನವ್ವ, ಮನೇಯ ಯಾವತ್ತೂ ಒಳ್ಳೆ ಕನ್ನಡಿ ಇಟ್ಟಂಗೆ ಇಟ್ಟವಳೆ," ಎಂದು ಒಬ್ಬಳೆಂದರೆ, ಇನ್ನೊಬ್ಬಳು "ಇಲ್ಲ ಕನಾ, ಈ ಆಚಾರಿಗೋಳೇ ಅಂಗೆ ಬೋ ಒಪ್ಪ, ವೈನ," ಎನ್ನುತ್ತಿದ್ದಳು.

ಹಿಂದೆ ಪಾರ್ವತಮ್ಮ ಬಾಣಂತಿಯಾಗಿದ್ದಾಗ ನಾಗಜ್ಜಿಯೇ ಹೋಗಿ ನೀರು ತರುತ್ತಿದ್ದಳು ! ಆದರೆ ಮುದುಕಿ ಆಳವಾದ ಬಾವಿಯಿಂದ ನೀರೆಳೆದು ತರುವದನ್ನು ಕಂಡಾಗ ಪಾರ್ವತಮ್ಮನಿಗೆ ಅತೀವ ಯಾತನೆಯಾಗುವುದು. ತನ್ನ ನಿಶ್ಶಕ್ತಿಯನ್ನು ತಾನೇ ಹಳಿದುಕೊಳ್ಳುವಳು. ಆದರೆ ಕೈಕಾಲುಗಳಿಗೆ ಸ್ವಲ್ಪ ಶಕ್ತಿ ಬಂದೊಡನೆಯೇ ಮುದುಕಿ ಆ ಕೆಲಸಮಾಡುವುದನ್ನು ನಿಲ್ಲಿಸಿದಳು. ಆಗ ಅವರಿಬ್ಬರಿಗೂ ನಡುವೆ ಒಂದು ಪುಟ್ಟ 'ಹಗರಣ'ವೇ ಆಗಿತ್ತು. "ನಿಂದು ಇನ್ನೂ ಹಸೀ ಮಯ್ಯಿ. ಸುಮ್ಮನೆ ಸಾಕು ಮಾಡಿಕಾಬ್ಯಾಡ" ಎಂದು ನಾಗಜ್ಜಿಯ ಹಾಡು ಹಟ. "ಆಯಕ್ಕಿಲ್ಲ ಕನತ್ತೆ, ನಾನಿದ್ದುಕೊಂಡು ನಿಮ್ಮ ನೀರು ತರಾಕೆ ಬಿಡವಲ್ಲೆ," ಎಂದು ಮುಷ್ಕರ ಹೂಡಿ, ಕಡೆಗೆ ಪಾರ್ವತಮ್ಮನೇ ಜಯಶೀಲಳಾಗಿದ್ದಳು.

ಆದರೆ ಅಡಿಗೆ ಒಲೆಯನ್ನು ಮಾತ್ರ ಈಗಲೂ ಒಂದೊಂದು ದಿನ ನಾಗಜ್ಜಿಯೇ ಬಿಡದೆ ಹೊತ್ತಿಸುವಳು.

ವಿಷಕಂಠಯ್ಯನಿಗೆ ಹೊಲಕ್ಕೆ ಹಿಟ್ಟು ತೆಗೆದುಕೊಂಡು ಹೋಗುವುದರಲ್ಲಿಯೂ, ಕಟ್ಟಿಗೆ ಆರಿಸಿ ತರುವುದರಲ್ಲಿಯೂ ನಾಗಜ್ಜಿಯೇ ಮುಂದಾಗುತ್ತಿದ್ದಳು. ಆದರೆ ಈಗೀಗ ಪಾರ್ವತಮ್ಮ ಆ ಕೆಲಸಗಳನ್ನೂ ತಾನೇ ಉಪಾಯದಿಂದ ಹಚ್ಚಿಕೊಂಡು ಮಾಡಿಬಿಡುತ್ತಿದ್ದಳು.

ಪಾರ್ವತಮ್ಮ ಏನೂ ಮಾಡಗೊಡಿಸದೆ ಮನೆಗೆಲಸಗಳನ್ನೆಲ್ಲಾ ತಾನೆ ಹಚ್ಚಿಕೊಂಡು ನಿರ್ವಹಿಸುತ್ತಿದ್ದುದು ಮುದುಕಿಗೆ ಸಹನವಾಗುತ್ತಿರಲಿಲ್ಲ. "ಇದ್ಯಾನ ನನ್ನವ್ವ, ಮೂಗು ಬಸವನ ಅಂಗೆ ಅಗಲಿಂದ ರಾತ್ರಿತನಕ ಒಂದೇ ಸಮಕೆ ದುಡಿದೀ?" ಎಂದು ನಿಟ್ಟುಸಿರು ಬಿಟ್ಟು, ಅದರಿಂದ ಒಂದು ಭಾರ ಕಳೆದವಳಂತೆ ನಟಿಸುತ್ತಾ "ನಂಗೇನಾ?..... ಕುಂತಿರ್ತೀನಿ

ಮೂಗುದೆವ್ವನಂಗೆ ಒಂದು ಕಡೆ. ಒಂದೀಟು ಇಟ್ಟು ಆಕಿಬುಡು. ತಿಂದಕತ್ತೀನಿ, ಬಿದ್ದಿರ್ತೀನಿ," ಎನ್ನುವಳು.

ಅದಕ್ಕುತ್ತರವಾಗಿ ಪಾರ್ವತಮ್ಮ ಎರಡು ಮೂರು ಬಳ್ಳ ರಾಗಿಯನ್ನು ಸುರಿದು "ಅದ್ಯಾಕಾ ಸುಮ್ಮನೆ ಕುಂತಕಂದೀರಿ....ತಗನ್ನಿ ಅತ್ತೆ-ರಾಗಿ ಮಾಡಿ", ಎನ್ನುತ್ತಾ ನಗುವಳು. ಆದರೆ ರಾಗಿಯನ್ನು ಮಾಡಲು ಮಾತ್ರ ನಾಗಜ್ಜಿ ಒಬ್ಬಳನ್ನೇ ಬಿಡುತ್ತಿರಲಿಲ್ಲ. ಜೊತೆಗೆ ತಾನೂ ಮೊರ ಹಿಡಿದು ತೂರುವಳು.

ಈ ಬೃಹಸ್ಪತಿವಾರ ನಾಗಜ್ಜಿಯೇ ಬೇಗ ಮಿಂದು ಮಡಿಯುಟ್ಟು, ಅಡಿಗೆ ಮನೆಯ ಕಸ ಗುಡಿಸಿ, ಒದ್ದೆ ಬಟ್ಟೆಯಲ್ಲಿ ಒದ್ದೆಯೊರಸಿಕೊಂಡು, ಅಡಿಗೆಯೊಲೆಯನ್ನು ಸೆಗಣಿಯಿಂದ ಸಾರಿಸಿ ಅದರ ಮೇಲೆ ರಂಗೋಲೆ ಬಿಟ್ಟಳು. ಆಮೇಲೆ ಒಲೆ ಹೊತ್ತಿಸಿ ಮಡಕೆಯಲ್ಲಿ ಸಾರಿಗೆ ಎಸರೆತ್ತಿದಳು. ಅಷ್ಟರಲ್ಲಿ ಪಾರ್ವತಮ್ಮ ಹಿತ್ತಲಿನಲ್ಲಿ ಸುಂಡೆಕಾಯಿಗಳನ್ನು ಬಿಡಿಸಿಕೊಂಡು ಬಂದಳು.

ಅಷ್ಟರಲ್ಲಿ ಎದ್ದ ವಿಷಕಂಠಯ್ಯನಿಗೂ, ನಟರಾಜ-ಮಂಗಳೆಯರಿಗೂ ರಾತ್ರಿ ಮುಚ್ಚಿಟ್ಟ ಹಿಟ್ಟು, 'ಅರೆಮೆಣಸಿನಖಾರ'ವನ್ನು ತಂಗಳಕ್ಕೆ ಕೊಟ್ಟಾಯಿತು. ಅನಂತರ ಹಿತ್ತಾಳೆ ತಂಬಿಗೆಯನ್ನು ತೆಗೆದುಕೊಂಡು ಕೊಟ್ಟಿಗೆಗೆ ಹೋಗಿ ಕುಳಿತಳು ಪಾರ್ವತಮ್ಮ. ನಟರಾಜ-ಮಂಗಳೆಯರಿಬ್ಬರೂ ಹಿತ್ತಲಿನ ಬೇಲಿಯಲ್ಲಿ ಹೇರಳವಾಗಿ ಬೆಳೆದಿದ್ದ ಕಾಚಿಕಾಯಿಗಳನ್ನು ಹಂಚಿಕಡ್ಡಿಗಳ ತುದಿಗೆ ಸಿಕ್ಕಿಸಿ ಬೀಸುವರು. ಅವರ ಬೀಸುವಿಕೆಯ ರಭಸಕ್ಕೆ ಕಾಚಿಕಾಯಿ ಕಡ್ಡಿಯಿಂದ ಕಳಚಿ ವೇಗವಾಗಿ ಹೋಗಿ ಬಹುದೂರ ಬೀಳುವುದು. ಅವರಿಬ್ಬರಿಗೂ ಆ ಬೆಳಗೆಲ್ಲಾ ಅದೇ ಆಟ.

ಪಾರ್ವತಮ್ಮ ಎಮ್ಮೆಗೂ 'ಗಿಡ್ಡಿಹಸ'ಕ್ಕೂ ಕಲಗಚ್ಚನ್ನು ಬಾಯಿ ಮಾಡಲು ಇಟ್ಟಳು. ಅನಂತರ ಕರು ಬಿಟ್ಟು, ಕೆಚ್ಚಲು ತೊಳೆದು ಹಾಲು ಕರೆದುಕೊಂಡಳು. ಆಮೇಲೆ 'ದೊಡ್ಡ ಹಸ'ಕ್ಕೂ ಕಲಗಚ್ಚಿಟ್ಟು ಅದರ ಕುತ್ತಿಗೆಯನ್ನು ತುರಿಸುತ್ತಾ. "ನನ್ನವ್ವ, ಈಗೊಸೀ ಜಿನ ನಮ್ಗೆ ಆಲು ಕೊಡದಿದ್ರೇನು ಕಡಿಮೆಯಾದದ್ದುs?.... ಚೆಂದಾಗಿ ಹಿಗ್ಗಿಲ್ವಾ ಓಟು ಜಿನದಿಂದಾ ನಿನ್ನ ತಾವು ಹಾಲ್ನಾ?.... ತಕ್ಕಾ ನನ್ನವ್ವಾ, ಕಲಗಚ್ಚು ಕುಡಿ," ಎಂದು ಹೇಳಿ ಪ್ರೀತಿಯಿಂದ ಅದರ ಬೆನ್ನು ನೇವರಿಸಿ, ಹಾಲಿನ ಚೆಂಬನ್ನೆತ್ತಿಕೊಂಡು ಒಳಗೆ ಬಂದಳು.

ಹಾಲಿನ ಪಾತ್ರೆಯನ್ನು ಈಸುಕೊಂಡು ನಾಗಜ್ಜಿ ಒಲೆಯ ಮೇಲೆ ಕಾಯುವದಕ್ಕಿಟ್ಟಳು. ಅತ್ತ ಪಾರ್ವತಮ್ಮ ಮಂತು ತೊಳೆದುಕೊಂಡು ಮೊಸರನ್ನು ಗೇರುಕೊಮ್ಮೆಗೆ ಬಗ್ಗಿಸಿಕೊಂಡು ಕಡೆಯಲು ಆರಂಭಿಸಿದಳು.

ಅಷ್ಟರಲ್ಲಿ ನಾಗಜ್ಜಿ ಸುಂಡೆಕಾಯಿ ಎಸರು ಮಾಡಿ, ರಾಗಿಹಿಟ್ಟು ತಿರುವಿ ಮತ್ತೆ ಒಲೆಯ ಮೇಲೆ ಇಡುತ್ತಾ ಪಾರ್ವತಮ್ಮನನ್ನುದ್ದೇಶಿಸಿ "ಏಟು ಬಂತವ್ವಾ.... ಬೆಣ್ಣೆ," ಎಂದು ಕೇಳಿದಳು. ಗೇರುಕೊಮ್ಮೆಯಿಂದ ಬೆಣ್ಣೆಯ ಉಂಡೆಯನ್ನು ಕಯ್ಯಿಂದೆತ್ತಿಕೊಂಡು, ಅದಕ್ಕಂಟಿದ ಮಜ್ಜಿಗೆಯನ್ನು ಸೋರಿಸಿ ನೆಲುವಿನ ಮಡಕೆಯಲ್ಲಿ ವಾರದಿಂದಲೂ ಕೂಡಿಟ್ಟ ಬೆಣ್ಣೆಗೆ ಇದನ್ನು ಸೇರಿಸುತ್ತಾ "ಏಡು ಸೇರು ಆಗದೆ ಕನತ್ತೆ," ಎಂದಳು ಪಾರ್ವತಮ್ಮ.

ಒಲೆಯ ಕೆಂಡಕ್ಕೆ ನೀರು ಚಿಮುಕಿಸಿ ಆರಿಸುತ್ತಾ "ಓಟೇಯಾ?" ಎಂದು ಕೇಳಿ ನಿಟ್ಟುಸಿರುಬಿಡುತ್ತಾ "ಹೂ. ನಮ್ಮ ದೊಡ್ಡಹಸು ಕೊಡ್ತಾ ಇದ್ದರೆ ಎಚ್ಚಾಗಿ ಬರಾದು. ಅದು ಬುಡಸಿಕಂದುಬುಡ್ತು.... ಈಗ ಬಾ ಅಂದರೆ ಯಾತಾವ್ಲಿಂದ ಬಂದಾತು" ಎಂದಳು ನಾಗಜ್ಜಿ.

ಕೈ ತೊಳೆದುಕೊಂಡು ಹರಿವಾಣಗಳನ್ನಿಟ್ಟು ಪಾರ್ವತಮ್ಮ ಬೀದಿಯ ಬಾಗಿಲಿನ ಕದದ ಮರೆಗೆ ನಿಂತು "ಹರವಾಣ ಇಟ್ಟಿವ್ನಿ...." ಎಂದಳು. ಪಡಸಾಲೆಯಲ್ಲಿ ಅಡಗನ ಹಳ್ಳಿ ಸಿಂಗಯ್ಯನೊಡನೆ ಮಾತಾಡುತ್ತ ಕುಳಿತಿದ್ದ ವಿಷಕಂಠಯ್ಯ "ಬಂದೇ...." ಎಂದು ಕುಳಿತಲ್ಲಿಂದಲೇ ಕೂಗಿ ಹೇಳಿ, ಮತ್ತೆ ಮಾತಿನಲ್ಲಿ ಮಗ್ನನಾಗಿಬಿಟ್ಟನು. ಇನ್ನೇನು ಬರುತ್ತಾರೆ, ಎಂದು ಒಳಗೆ ಹೋದ ಪಾರ್ವತಮ್ಮ ಪತಿ ಎಷ್ಟು ವೇಳೆಯಾದರೂ ಬಾರದಿರಲು "ಇವ್ರು ಯಾವತ್ತುs ಇಂಗೇ ಕಾನತ್ತೆ....ಎಲ್ಲಿಗಾರ ನಾವು ಹೊಂಟು ನಿಂತಾಗ ಅಡಜಂಬರ," ಎಂದು ಸಿಡಕಿದಳು. ನಾಗಜ್ಜಿ "ಇನ್ನೊಂದು ಸಲ ಓಗಿ ಕೂಗಿಬುಡವ್ವಾ.... ಏನ್ಮಾಡಾದು?–ಈ ಗಂಡಸರ ಅಣಪಾಡೇ ಈಟು. ನಮ್ಮೋರಿದ್ದಾರಲ್ಲಾ ಅವರೂ ಇಂಗೇಯಾ.... ಮಾತಿಗೆ ಕುಂತುಗೊಂಬುಟ್ಟರೆ ಜಪ್ಪಳಾ ಅಂದರುs ಏಳ್ತಾ ಇರನಿಲ್ಲ," ಎಂದು ಸಮಾಧಾನಪಡಿಸಿದಳು.

ಪುನಃ ಬೀದಿಯ ಬಾಗಿಲಿಗೆ ಬಂದು ಪಾರ್ವತಮ್ಮ ಹೇಳಿದಳು : "ಸಂತೆಗೆ ಒತ್ತಾಯ್ತದೆ...."

ಈಗ ವಿಷಕಂಠಯ್ಯನ ಮನಸ್ಸು ಸದ್ಯದ ಪರಿಸ್ಥಿತಿಯ ಕಡೆ ಗಮನ ಕೊಟ್ಟಂತೆ ಕಂಡಿತು. ಅದರಲ್ಲೂ ಸಾವಕಾಶವಾಗಿ ಏಳುತ್ತಾ, "ಅಂಗಾರೆ ಬತ್ತೀನಿ ಸಿಂಗಯ್ಯ, ಎಂಗಸರು ಸಂತೇಗೆ ಹೊಂಟವ್ರೆ ಒತ್ತಾಯ್ತದೆ. ಇನ್ನೂ ಉಂಡುಕೊಂಡು ಓಗಬೇಕು" ಎಂದ.

"ಅದ್ಯಾಕಾ ಬರೆ ಎಂಗಸರು ಒಂಟವ್ರೆ ಅಂದೀ....ನೀ ಬರಾಕಿಲ್ವ ಈವೊತ್ತು ಸಂತೇಗೇ?" ತಾನೂ ಏಳುತ್ತಾ ಕೇಳಿದ ಸಿಂಗಯ್ಯ.

"ನಾನೂ ಬಂದುಬುಟ್ರೆ ಹಟ್ಟಿತಾವು ಯಾರು ನೋಡಿಕಳೋರು? ನಾ ಯೇನು ನಿನ್ನಂಗೆ ಆಳು ತಡದಿದ್ದೇನಾ?" ಎಂದು ಕೇಳಿದ ವಿಷಕಂಠಯ್ಯನ ಸ್ವರದಲ್ಲಿ ಅಸೂಯೆ ಬೆರೆತಿತ್ತು.

ಸಿಂಗಯ್ಯ ಹೊರಟುಹೋದ ಬಳಿಕ ವಿಷಕಂಠಯ್ಯ ಪಾರ್ವತಮ್ಮ ನೀಡಿದ ನೀರಿನಿಂದ ಕಾಲು ತೊಳೆದುಕೊಂಡು ಊಟಕ್ಕೆ ಕುಳಿತ. ನಾಗಜ್ಜಿ ಹಿಟ್ಟಿನ ಮಡಕೆಯನ್ನು ಒಲೆಯ ಮೇಲಿನಿಂದ ಕೆಳಗಿಳಿಸಿ, ಕವೆಗಡ್ಡಿ ಕೊಟ್ಟು ಪುನಃ ಹಿಟ್ಟು ಬೆರಸಿ, ಮುದ್ದೆ ಕಟ್ಟಿದಳು. ನಾಗಜ್ಜಿ ಮುದ್ದೆ ಕಟ್ಟಿದಂತೆ ಪಾರ್ವತಮ್ಮ ಬಿಸಿಬಿಸಿಯಾಗಿ ಹಿಟ್ಟನ್ನೂ ಎಸರನ್ನೂ ವಿಷಕಂಠಯ್ಯನಿಗೂ ಮಕ್ಕಳಿಗೂ ಬಡಿಸಿದಳು.

ಹಿಟ್ಟನ್ನು ಮುರಿದು ಸುಂಡೇಕಾಯಿ ಎಸರಿನಲ್ಲಿ ಹೊರಳಿಸಿ ನುಂಗುತ್ತಾ, ವಿಷಕಂಠಯ್ಯ ಮುಖ ಸಿಂಡರಿಸಿ 'ಅಸ್ಸೀ' – ಎಂದ. ಆ ದಿನ ಸಂತೆಗೆ ಹೋಗುವ ಆತುರದಲ್ಲಿ ನಾಗಜ್ಜಿ ಹಿಟ್ಟನ್ನು ಗಂಟುಮಾಡಿ ಇಟ್ಟಿದ್ದಳು. "ಇದೇನಾ ಈ ಪಾಟಿ ಗಂಟಾಗದೆ ಇಟ್ಟುs?.... ತುತ್ತು ಗಂಟ್ಲಿಂದ ವಳೀಕೆ ಇಳೀನವಲ್ಲೆ ಅಂತದೆs...." ಎಂದು ಒದರಾಡಿದ. ರಾತ್ರಿ ನಿದ್ದೆ ಕೆಟ್ಟಿದ್ದುದೂ, ಊಟಕ್ಕೆ ಕೂರುವ ಮುನ್ನ ಸಿಂಗಯ್ಯ ಆಡಿದ "ನೀ ಬರಾಕಿಲ್ವ ಈವೊತ್ತು ಸಂತೇಗೆ?" ಎಂಬ ಸಹಜನುಡಿಗಳಲ್ಲಿ ಅವನಿಗೆ ಕಾಣಿಸಿದ ಕುಹಕವೂ ಮೊದಲೇ ವಿಷಕಂಠಯ್ಯನ ತಾಳ್ಮೆ ತಪ್ಪಿಸಿದ್ದವು.

"ತುತ್ತು ಗಂಟ್ಲಿಂದ ಒಳೀಕೆ ಇಳೀದೆ ಇದ್ರೆ ಒಸಿ ನೀರು ಕುಡಿ .... ಇಳೀತದೆ" ಎಂದಳು ನಾಗಜ್ಜಿ. ತಾನು ಮಾಡಿದ ಹಿಟ್ಟು ಹದಗೆಟ್ಟಿತಲ್ಲಾ ಎಂಬ ವ್ಯಥೆಯ ಜೊತೆಗೆ ಅದನ್ನು ಮಗ ಸೊಸೆಯ ಎದುರಿಗೆ ಎತ್ತಿ ಆಡಿದನಲ್ಲಾ ಎಂಬ ಕೋಪ ಮುದುಕಿಯನ್ನು ಸುಡುತ್ತಿತ್ತು.

"ಸಾಕು ಸುಮ್ಮಕಿರವ್ವಾ.... ಏಟು ಲೊಟ ಲೋಟ ಅಂತೀ" ಎಂದು ಗದರಿಸಿ "ನಿಂಗ್ಯಾಕಾ ಈ ಪಂಚಾತೀ ಅಂತೀನಿ?.... ಪಾರತಿ ಇಲ್ವಾ ಕುಂಡರಿಸು ಅವಳ್ನ, ಇಟ್ಟು ಉಡಿಯಾಕೆ," ಎಂದು ತಿಳುವಳಿಕೆ ಹೇಳಿದ ವಿಷಕಂಠಯ್ಯ.

"ಊ ಕುಂಡರಿಸು ಅವಳ್ನ! ಇನ್ನೇನಾರ ಕೇಮೆ ಇದ್ದಾಂತ ಅವಳ್ಗೆ–ಇಟ್ಟು ಉಡಿಯೋದು, ಕುಂತಿರೋದು," ಎಂದು ಮುದುಕಿಯಾಡಿದ ಮಾತಿನಲ್ಲಿ ಸೊಸೆಯ ಕೆಲಸದಲ್ಲಿ ಅವಳಿಗಿದ್ದ ಮೆಚ್ಚುಗೆ ಎದ್ದು ಕಾಣುತ್ತಿತ್ತು.

ಹಟಮಾರಿಯಾದ ತಾಯಿ ಮಾತಿನಲ್ಲಿ ಎಂದಿಗೂ ಸೋಲುವುದಿಲ್ಲವೆಂದು ಅನುಭವದಿಂದ ತಿಳಿದಿದ್ದ ವಿಷಕಂಠಯ್ಯ "ಎಚ್ಚು ಮಾತಾಡಿ ಫಲವೇನಾ?" ಎಂದು ಗೊಣಗುತ್ತಾ ಕೈತೊಳೆದುಕೊಂಡ.

ಆ ದಿನ ಯಾರೂ ಸರಿಯಾಗಿ ಊಟ ಮಾಡಲಿಲ್ಲ–ನಟರಾಜ, ಮಂಗಳೆಯರನ್ನು ಬಿಟ್ಟು! ಅವರಿಬ್ಬರು ಮಾತ್ರ ಹಿಟ್ಟು ಗಂಟಾಗಿದ್ದರೂ ಸಂತೆಗೆ ಹೋಗುವ ಸಂಭ್ರಮದಲ್ಲಿ ಸೊಗಸಾಗಿ ಚಪ್ಪರಿಸುತ್ತ ಊಟಮಾಡಿದ್ದರು.

ಮಂಗಳೆಗೆ ಆ ದಿನ ಮತವಿದ್ದರೂ, ವಿಷಕಂಠಯ್ಯ ಖಂಡಿತ ಹೋಗಕೂಡದೆಂದು ಹೇಳಿದ್ದರೂ, ಮಂಗಳೆ ನಾಗಜ್ಜಿಗೆ ಅಳುತ್ತಾ ಹೇಳಿಕೊಂಡು ತನ್ನ ಕಾರ್ಯ ಸಾಧಿಸಿದಳು. ನಟರಾಜ ಮಾತ್ರ ಈಗ ಸಂತೆಗೆ ಹೊರಟಿದ್ದ ಮನೆಯವರ ಜೊತೆಯಲ್ಲಿಯೇ. ಹುಣಸೂರಿಗೆ ಹೋಗಿ ಶಾಲೆ ಮುಗಿದ ಬಳಿಕ ಅವರನ್ನು ಸಂತೆಯ ಮಾಳದಲ್ಲಿ ಕೂಡಿಕೊಳ್ಳುವದೆಂದು ತೀರ್ಮಾನವಾಗಿತ್ತು–ನಾಗಜ್ಜಿಯಿಂದ !

ಊಟ ಮುಗಿದನಂತರ ನಾಗಜ್ಜಿಯೂ ಪಾರ್ವತಮ್ಮನೂ ಸಂತೆಗೆ ತಾವು ತೆಗೆದುಕೊಂಡು ಹೋಗಬೇಕಾದ ಸಾಮಾನುಗಳನ್ನು ಜೊತೆಮಾಡಿದರು. ನೆಲುವಿನ ಮಡಕೆಯಲ್ಲಿ ಆ ವಾರ ಶೇಖರವಾಗಿದ್ದ ಹತ್ತು ಸೇರು ಬೆಣ್ಣೆಯನ್ನು ತೆಗೆದು ಬೇರೆ ಪಾತ್ರೆಗೆ ಹಾಕಿ ಕುಕ್ಕೆಯೊಳಗಿಟ್ಟರು. ಆ ಸಲ ವಿಷಕಂಠಯ್ಯ ಬೆಳೆದಿದ್ದ ಹರಳಿನಲ್ಲಿ ಒಂದು ಕುಕ್ಕೆಯಷ್ಟು ತುಂಬಿದ್ದರು. ತಮ್ಮ ಮನೆಯ ಹಿತ್ತಲಿನ ಹುಣಿಸೇ ಮರದ ಹಣ್ಣಿನಲ್ಲಿ ಒಂದು ಚಕ್ಕೋತದ ಪ್ರಮಾಣದಲ್ಲಿ ಉಂಡೆ ಕಟ್ಟಿ ಬೆಣ್ಣೆಯ ಪಾತ್ರೆ ಇಟ್ಟ ಕುಕ್ಕೆಗೆ ತುರುಕಿದರು.

ಎಲ್ಲ ಮುಗಿದ ಬಳಿಕ ಹರಳೆಣ್ಣೆ ಹಾಕಿ ತಲೆ ಬಾಚಿ, ಚೌಲಿ ಗೋಣಸು ಹಾಕಿ ತುರುಬು ಹಾಕಿದಳು ಪಾರ್ವತಮ್ಮ. ಆಮೇಲೆ ಕಾಸಿನಗಲ ಕುಂಕುಮವಿಟ್ಟಳು. ಮಂಗಳೆಯ ಜೋಟುದ್ದ ಜಡೆಯನ್ನು ಹೆಣೆದುದಾಯಿತು. ನಾಗಜ್ಜಿಯ ತಲೆಗೆ ಹಸುವಿನ ತುಪ್ಪವನ್ನು ಸವರಿದುದಾಯಿತು. ಅಲ್ಲಲ್ಲಿ ಹರಿದಿದ್ದ ಹರಕಲು ಸೀರೆಗಳನ್ನೆಸೆದು ನಾಗಜ್ಜಿಯೂ ಪಾರ್ವತಮ್ಮನೂ ಕಳೆದ ಗೌರಿಯಲ್ಲಿ ವಿಷಕಂಠಯ್ಯ ಸಾಲಮಾಡಿ ಹುಣಸೂರಿನಿಂದ ತಂದಿದ್ದ ಕೊತ್ತಾಲು ಸೀರೆಗಳನ್ನು ಉಟ್ಟು ಸಿದ್ಧರಾದರು.

ಬೀದಿಯಲ್ಲಿ ಅವರನ್ನು ಅವರಂತೆಯೇ ಸಂತೆಗೆ ಹೊರಟ ಹಳ್ಳಿಯ ಹತ್ತೆಂಟು ಹೆಂಗಸರು ಕೂಡಿಕೊಂಡರು. ಮುಂದೆ ಗಂಡಸರ ತಂಡ ಹೊರಟಿತ್ತು. ಹಳ್ಳಿಯ ಹೆಂಗಸರು ಒಟ್ಟಿಗೇ ಸೇರಿ ನಡೆಯುವಾಗ ಕೇಳಬೇಕೇ? ಮಾತು ತಾನೇ ತಾನಾಗಿ ಹುಟ್ಟಿಕೊಳ್ಳುತ್ತದೆ. ಮರನಿಂಗಿ ಕೇಳಿದಳು. "ಯೇನಾ ಅಜ್ಜೀ, ಈ ಸಲ ಸಂತೇಗೆ ಯೇನೇನ್ ತಗೊಂಬಂದಿದೀರಿ?"

"ಯೇನವ್ವಾ ತರೋದುಽ? ಇರೋ ಯೇಡು ಯಕರೇಲಿ ಯೇನೇನ್ ಬೆಳೆದಾತು ಆ ನನ್ನ ಕಂದಽ?.... ಹಟ್ಟೀಗೆ ಒಂದೀಟು ರಾಗಿ ಆಗಿಬುಟ್ರೆ ಓಡಾಟ.... ಈ ಸಲ ಯೇನೋ ದೇವ್ರು ಒಸಿ ಕಣ್ಣು ಬುಟ್ಟು ನೋಡಿದ... ಅವ್ನ ದಯದಿಂದಽ ಓಟು ರಾಗಿ ಬರ್ಲಾಗಿ ಹಟ್ಟೀ ಜನ ಇಟ್ಟು ಕಾಣ್ತು .... ಯೇನೋ ಇಂಗೇಯಾ ನಡಕಂಡು ಓಯ್ತಾ ಅದೆ– ಇಸಕಂಟೂನೂ ಕಷ್ಟ ಮಾಡ್ತದೆ. ಭೋಗನ ಹೊಲ ವಾರ ಮಾಡ್ತದೆ. ಉದ್ದಯ್ಯನ ತೋಟದಾಗ ಆಗಾಗೋಗಿ ಏನಾರ ಕೂಲಿನಾಲಿ ಮಾಡ್ತದೆ. ಸುಮ್ಮನೆ ಕುಂತುಕಳೊ ಇಸಂ ಅಲ್ಲ...." ಎಂದು ನಿಧಾನಿಸಿ, ಪಾರ್ವತಮ್ಮನ ಕುಕ್ಕೆಯನ್ನು ತೋರಿಸುತ್ತ "ಅಕ್ಕಾ, ಅದರಲ್ಲಿ ಅತ್ತು

ಸೇರು ಬೆಣ್ಣೆ ಅದೇs..... ನಂ ಇತ್ತಲ ಹುಣಿಸೆ ಮರ ಓಟು ಹಣ್ಣು ಕೊಡ್ತು. ಅದ್ನೂ ಒಂದುಂಡೆ ತಂದೀವೀ .... ನನ್ನ ಕುಕ್ಕೇಲಿ ಈಟಿ ಹರಳದೆ," ಎಂದು ಸವಿವರವಾಗಿ ವರ್ಣಿಸಿದಳು ನಾಗಜ್ಜಿ.

"ನಿನ್ನ ತಾವು ಯೇನೇನದೆs...." ಎಂದು ಅವಳು ಮರಿನಿಂಗಿಯನ್ನು ಪ್ರಶ್ನಿಸುವದರಲ್ಲಿ ಹಳ್ಳಿಯ ಹಾದಿ ಕಳೆದು ಮಡಕೇರಿ–ಹುಣಸೂರಿನ ಮಾರ್ಗ ಸಿಕ್ಕಿತು.

ಮರಿನಿಂಗಿಯೂ, ಇತರ ಹೆಂಗಸರೂ ತಾವು ಸಂತೆಗೆ ಹೊತ್ತು ತಂದ ಸಾಮಾನುಗಳ ವಿವರಣೆ ಕೊಡುತ್ತಾ ಸಾಗಿದಂತೆ ಹುಣಸೂರಿನ ಕಡೆಯಿಂದ ಒಂದು ಬಸ್ಸು ಆರ್ಭಟಿಸುತ್ತಾ ಎದುರಿಗೇ ಬಂದಿತು. ಅವರೆಲ್ಲರೂ ರಸ್ತೆಯ ಒಂದು ಪಕ್ಕಕ್ಕೇ ಹೋಗುತ್ತಿದ್ದರೂ, ರಸ್ತೆ ವಿಶಾಲವಾಗಿದ್ದರೂ ಬಸ್ಸು ತನ್ನ ಭಾರೀ ದೇಹವನ್ನು ರಸ್ತೆಯಗಲಕ್ಕೂ 'ಅಡರಿಸಿಕೊಂಡು' ನಡಾರಸ್ತೆಯಲ್ಲಿ ಹರಿದು ಬಂದಿತು. ರಸ್ತೆಯಲ್ಲಿ ನಡೆಯಲು ಅವರಿಗೆ ಜಾಗವೇ ಇಲ್ಲ! ಗೊಣಗಿಕೊಳ್ಳುತ್ತಾ ಎಲ್ಲರೂ ಪಕ್ಕದ ಹಳ್ಳದಲ್ಲಿ ಇಳಿದು ಬಸ್ಸು ತೆರಳಿದ ಮೇಲೆ ರಸ್ತೆಗೆ ಹತ್ತಿದರು.

ರಸ್ತೆಗೆ ಬಂದ ನಂತರ ಮರಿನಿಂಗಿಯದೆ ಮೊದಲು ಮಾತು: "ಅವ್ವೀ! ಈ ಬಸ್ಸಿನೋರಿಗೇನವ್ವಾ ಬಂದಿರೋದು ಕೇಡು....ಒಳ್ಳೇ ಅಮಲೇರಿದಂಗೆ ಬುಡ್ತಾವ್ರಲ್ಲಾ. ಎಂಗಸ್ರು ಮಕ್ಳು ಹೋಯ್ತಾ ಅವ್ರೆ ಅಂತ ಈಟಾದರೂ ಪರಿಗ್ಯಾನವೇ ಇರಬ್ಯಾಡದಾ?.... ಚೆಂದಾಗಿದೆ." ಎಂದು ಗೊಣಗಿದಳು. ಇತರರೂ ಬಸ್ಸಿನವನಿಗೆ 'ಸಾಪಳ' ಹಾಕಿದರು, ಮನಃಪೂರ್ವಕವಾಗಿ.

ಇವರು ಹುಣಸೂರಿಗೆ ಬರುವ ಹೊತ್ತಿಗೆ ಸೂರ್ಯನಾಗಲೆ ನೆತ್ತಿಯ, ಸಮಯಕ್ಕೆ ಬಂದಿದ್ದ. ಲಕ್ಷ್ಮಣತೀರ್ಥಕ್ಕೆ ಹಾಕಿದ್ದ ಸೇತುವೆಯನ್ನು ದಾಟಿದ ಕೂಡಲೆ ನಟರಾಜ, ಮರಿ ಪುಟ್ಟರೊಡಗೂಡಿ ಶಾಲೆಗೆ ಹೊತ್ತಾಯಿತೆಂದು ಓಡಿದ. ಆದರೂ ಶಾಲೆಗೆ ಮೇಷ್ಟರು ಮೊದಲನೆ ಪಿರಿಯಡ್ ಮುಗಿಯುವ ವೇಳೆಗೆ ಬಂದ ಮೂರು ಹುಡುಗರನ್ನೂ ಬೆಂಚಿನ ಮೇಲೆ ನಿಲ್ಲಿಸುವುದು ತಪ್ಪಲಿಲ್ಲ. ಊರಿನೊಳಗೆ ಬಂದಂತೆ ಜನ ಬೀದಿಯಲ್ಲಿಯೇ ಈ ಹೆಂಗಸರು ತಂದಿದ್ದ ಬೆಣ್ಣೆಯನ್ನು ತೂಗಿಸಿ ತೆಗೆದುಕೊಂಡು ಹೋದರು....ಯಾವಾಗಲೂ ಹೀಗೇ! ಹುಣಸೂರಿನ ಜನಗಳು ಬೆಣ್ಣೆಯನ್ನೆಲ್ಲಾ ತಾವೇ ಕೊಂಡು ಗುಲಗಂಜಿ ಗಾತ್ರದ ಬೆಣ್ಣೆಯೂ ಸಂತೆಗೆ ಹೋಗದಂತೆ ಮಾಡುತ್ತಾರೆ.

ಕಲ್ಲಹಳ್ಳಿಯ ಹೆಂಗಸರು ಸಂತೆಯ ಮಾಳಕ್ಕೆ ಬರುವಷ್ಟರಲ್ಲಿ ಸಂತೆ ಆಗಲೇ ಬಹುಮಟ್ಟಿಗೆ ಕೂಡಿತ್ತು. ಕಡಲೆ ಪುರಿ, ಬಾಳೆಹಣ್ಣು, ತೆಂಗಿನಕಾಯಿ, ಮಿಠಾಯಿ, ವೀಳೆಯದೆಲೆ, ಹೂವು, ಬೀಡಿ, ಸಿಗರೇಟು ಮುಂತಾದವುಗಳನ್ನಿಟ್ಟು ಚಿಲ್ಲರೆ ಅಂಗಡಿಯವರು ಮಂಡಿಸಿದ್ದರು. ಒಂದು ಕಡೆಗೆ ಸೊಪ್ಪು, ಸೌತೇಕಾಯಿ, ಕುಂಬಳಕಾಯಿ, ಬದನೇಕಾಯಿ, ಹೀರೇಕಾಯಿ

ಮೊದಲಾದ ತರಕಾರಿಗಳನ್ನಿಟ್ಟ ಅಂಗಡಿಗಳೂ ತೆರೆದಿದ್ದವು. ದಿನಸಿ ಧಾನ್ಯಗಳ ಅಂಗಡಿಗಳೂ ತೆರೆದು ಪ್ರದರ್ಶಿಸಲ್ಪಟ್ಟಿದ್ದವು. ಒಂದು ಪಕ್ಕಕ್ಕೆ ಜವಳಿ ಅಂಗಡಿಗಳೂ ಇದ್ದವು. ಮತ್ತೊಂದು ಪಕ್ಕಕ್ಕೆ ಕೋಳಿಗಳ ವ್ಯಾಪಾರವೂ ಸಾಗಿದ್ದಿತು. ಕೋಳಿಯ ಮೊಟ್ಟೆಗಳೂ ಹೇರಳವಾಗಿ ಬಂದು ಬಿದ್ದಿದ್ದವು ....

ಮಾಳಕ್ಕೆ ಬಂದ ಕೂಡಲೆ ನಾಗಜ್ಜಿಯ ಮನೆಯವರೂ, ಹಳ್ಳಿಯ ಇತರ ಹೆಂಗಸರೂ ಬೇರೆಬೇರೆಯಾದರು. ನಾಗಜ್ಜಿಯೂ, ಪಾರ್ವತಮ್ಮನೂ ತಮ್ಮ ಹತ್ತಿರವಿದ್ದ ಹರಳನ್ನೂ, ಹುಣಸೇಹಣ್ಣನ್ನೂ ಬಿಕರಿ ಮಾಡಿದರು. ಮನೆಗೆ ಬೇಕಾದ ಉಪ್ಪು, ಮೆಣಸು, ಜೀರಿಗೆ, ಸೀಮೆಎಣ್ಣೆಗಳನ್ನು, ಬೆಲೆಯನ್ನು ಬಹಳವಾಗಿ ಅಳೆದು ಸುರಿದು ನೋಡಿ, ಅಸಾಧ್ಯ ಚೌಕಾಶಿ ಮಾಡಿ, ಹಿಂದೆ ಹೋಗಿ ಮುಂದೆ ಬಂದು ಕೊನೆಗೆ "ಹು–ಇನ್ನೇನಾ ಎಂಗಿದ್ದರೂ ಮಣ್ಣು ತಿಂದ್ರೊ," ಎಂದು ಮರುಗಿಕೊಂಡೇ ಕೊಂಡುಕೊಂಡರು. ತಡಗಣಿ, ಹುರುಳಿ ಮುಂತಾದ ಕಾಳು ಕಡ್ಡಿಗಳನ್ನು ಕೊಳ್ಳುವಾಗಲೂ ಇದೇ ಪ್ರಕಾರ. ಪಾರ್ವತಮ್ಮನಿಗೆ ಮರುಗ ಬೆರೆಸಿ ಕಟ್ಟಿದ ಮಲ್ಲಿಗೆ ಮಾಲೆಯನ್ನು ಕೊಳ್ಳುವಾಗಂತಲೂ ಅಂಗಡಿಯವನಿಗೂ ನಾಗಜ್ಜಿಗೂ ಒಂದು ಪುಟ್ಟ ಕುರುಕ್ಷೇತ್ರವೇ ನಡೆಯಿತು. ಕುಚ್ಚನ್ನು ತೋರಿಸಿದಷ್ಟು ಕತ್ತರಿಸಿ ಕೊಡಲಿಲ್ಲವೆಂದು ಮುದುಕಿ ರಂಪಮಾಡಿದಳು. ಪಾರ್ವತಮ್ಮ "ಈಗೇನಾ, ಓಟುದ್ದ ಊ ವುಳಿಸಿ ಅವ್ನೇ ಕಳಸ ಆಕಿಸಿ ಕಳ್ಳಿ. ಬಾ ಅತ್ತೆ ಹೋಗೂನಾ," ಎಂದು ಎಷ್ಟಾಗಿ ಕರೆದರೂ ಪ್ರಯೋಜನವಾಗಲಿಲ್ಲ. ಅಂಗಡಿಯವನ 'ಜನ್ಮ ಜಾಲಾಡುವವರೆಗೂ' ತನ್ನ ಬಾಯಿಗೆ ಹೆದರಿ ಅಂಗಡಿಯವನು ಬಾಯಿ ಮುಚ್ಚುವವರೆಗೂ, ಮುದುಕಿ ಅಲ್ಲಿಂದ ಕಾಲು ಕೀಳಲಿಲ್ಲ.

ತನಗೆ ವೀಳೆಯದೆಲೆ, ಅಡಿಕೆ ಕೊಳ್ಳುವಾಗಲೂ ಮುದುಕಿ ಗೊಣಗುತ್ತಲೇ ಇದ್ದಳು : "ಯಾಪಾರಾ ಅಂದರೆ ಇಂಗೂ ಉಂಟೇನಾ?.... ಧರ್ಮ ಕರ್ಮ ಇಂಕರಾನಾರೂ ಬ್ಯಾಡದಾ?.... ಇಂದೆ, ನಮ್ ಕಾಲದಲ್ಲಿ ಇಂಗಿರ್ನಿಲ್ಲ ಕಾನವ್ವ".

ಸಂತೆಯ ಮಾಳವನ್ನೆಲ್ಲಾ ಸುತ್ತುತ್ತಾ, ಪರಿಚಯಸ್ಥರೊಡನೆ ಹರಟುತ್ತಾ ಇರುವುದರಲ್ಲಿ ಹೊತ್ತು ಸಂಜೆಗೆ ತಿರುಗಿತ್ತು. ಅಷ್ಟರಲ್ಲಿ ಶಾಲೆಯಿಂದ ನಟರಾಜ ಬಂದು ಅವರನ್ನು ಕೂಡಿಕೊಂಡ. ತಾನು ಅಂಗಿಯ ಜೇಬಿನಲ್ಲಿಟ್ಟು ತಿನ್ನುತ್ತಿದ್ದ ಕಡಲೆಪುರಿಯನ್ನೂ ಮಿಠಾಯಿಯನ್ನೂ ಕಣ್ಣು ಮಿಟುಕಿಸುತ್ತಾ ನಟರಾಜನಿಗೆ ತೋರಿದಳು ಮಂಗಳೆ. ನಟರಾಜನೂ ಅಜ್ಜಿಯನ್ನು ಗೋಗರೆದು ದುಡ್ಡು ಕಿತ್ತು ತಾನೂ ತಿನಿಸನ್ನು ತಂದು ತಿನ್ನಲು ಆರಂಭಿಸಿದ. ಅಷ್ಟರಲ್ಲಿ ಮಂಗಳೆಯ ತಿಂಡಿ ಆಗಲೇ ಮುಗಿದು ಬಂದಿದ್ದುದು, ಸ್ವಲ್ಪ ಹೊತ್ತು ಸುತ್ತಾಡುವುದರಲ್ಲಿ ಎಲ್ಲಾ ಪೂರ್ತಿಯಾಗಿ ಅವಳ ಹೊಟ್ಟೆ ಸೇರಿತ್ತು. ಆಗ ಮಾತ್ರ ಮಂಗಳೆಗೆ ನಟರಾಜ ಇನ್ನೂ ಕಡಲೆಪುರಿ ತಿನ್ನುತ್ತಿರುವನೆಂದು ಹೊಟ್ಟೆಯುರಿ !..... "ನಂಗೊಸಿ ಕೊಡ್ರೊ" ಎಂದು ಅವನ ಅಂಗಿಯನ್ನು ಹಿಡಿದು ಬಹಳ ಪ್ರೀತಿಯನ್ನು ತೋರಿಸುತ್ತಾ ಬೇಡಿದಳು. ನಟರಾಜನೂ

ಹುಡುಗ. ಮುಯ್ಯಿಗೆ ಮುಯ್ಯಿ ಎಂದು ತಿನಿಸನ್ನ ಅವಳಿಗೆ ಕೊಡದೇಹೋದ. ಮಂಗಳೆಯ ಕೆನ್ನೆ ಕೋಪದಿಂದ ಉಬ್ಬಿಕೊಂಡಿತು.

ಹಾಗೇ ಇವರುಗಳು ಸಂತೆಯನ್ನು ಸುತ್ತುಹಾಕುತ್ತಾ ಬರುವಾಗ ಒಂದು ಮೂಲೆಗೆ ದೊಂಬರ ಕುಣಿತ ನಡೆಯುತ್ತಿತ್ತು. ಎಲ್ಲರೂ ಆ ಸ್ಥಳವನ್ನು ಸೇರಿ ಕುತೂಹಲದಿಂದ ನಿರೀಕ್ಷಿಸುತ್ತ ನಿಂತರು. ಸುತ್ತಲೂ ಜನ ನೆರೆದಿದ್ದುದರಿಂದ ಒತ್ತಾಯಪೂರ್ವಕ ಜಾಗ ಮಾಡಿಕೊಂಡಿದ್ದರು. ಮಧ್ಯದಲ್ಲಿ ದೊಂಬರು ಒಣಗಿದ ಅಡಿಕೆ ಮರವನ್ನು ಭೂಮಿಗೆ ನೆಟ್ಟಿದ್ದರು. ಮೇಲೆ ಅದಕ್ಕಡ್ಡಲಾಗಿ ಒಂದು ಮರವನ್ನು ಕಟ್ಟಿದ್ದರು. ಆ "ಗಣೆಮರ"ವನ್ನು ಹತ್ತಿ ನಡುಪ್ರಾಯದ ಒಬ್ಬಾತ ಕುಳಿತಿದ್ದ. ಅವನ ಕೈಯಲ್ಲಿ ಹಗ್ಗವಿತ್ತು. ಕೆಳಗೆ ಇನ್ನೊಬ್ಬನು ಡೋಲು ಬಡಿಯುತ್ತಿದ್ದ. ಕೆಲವು ದೊಂಬ ಹುಡುಗರೂ ಹುಡುಗಿಯರೂ ಅತ್ತಿಂದಿತ್ತಲಾಗಿ "ಲಾಗ" ಹಾಕುತ್ತಿದ್ದರು. ಸುತ್ತ ನಿಂತ ಜನರ ಮುಂಭಾಗದಲ್ಲಿ ಕುಳಿತ ಬಾಲಕರ ಗುಂಪು ಆಗಿಂದಾಗ ಚಪ್ಪಾಳೆ ತಟ್ಟುತ್ತಿದ್ದಿತು. ಒಂದು ಮೂಲೆಗೆ ಆ ದೊಂಬರ ಗುಂಪಿಗೇ ಸೇರಿದ ಕೆಲವರು ಗಂಡಸರೂ, ಹೆಂಗಸರೂ, ಹೆಂಗಸರ ಕೈಯಲ್ಲಿ ಒಂದೆರಡು ಪುಟ್ಟ ಮಕ್ಕಳೂ ಇದ್ದರು. ಗಣೆಮರದ ಮೇಲೆ ಕುಳಿತ ದೊಂಬ "ಅಹಂ" ಎಂದು ಒಂದು ಬಾರಿ ಕ್ಯಾಕರಿಸಿ, ಠೀವಿಯಿಂದ ಜನರನ್ನೆಲ್ಲಾ ಹಾಗೆ ನಿಟ್ಟಿಸಿ, ನಿಧಾನವಾಗಿ ಹಗ್ಗವನ್ನು ಬಿಡಲುಪಕ್ರಮಿಸಿದ, ಡೋಲು ಬಡಿಯುತ್ತಿದ್ದವನು "ಹೋ...ಹೋ...ಹೋ...ಹೋ" ಎಂದು ಕೂಗುತ್ತಾ, ಬಡಿಯುವುದನ್ನು ಜೋರು ಮಾಡಿದ. ಕೆಳಗೆ ನಿಂತ ಒಬ್ಬಳು ಹೆಂಗಸು ಸುಮಾರು ಒಂದು ವರ್ಷದ ಪುಟ್ಟ ಶಿಶುವಿನ ಸೊಂಟದ ಪಟ್ಟಿಗೆ ದೊಂಬ ಇಳಿಬಿಟ್ಟ ಹಗ್ಗದ ತುದಿಯನ್ನು ಕಟ್ಟಿದಳು. ದೊಂಬ ಹಗ್ಗವನ್ನು ಅತ್ತಿಂದಿತ್ತ ತೂಗಿದ. ಜೊತೆಗೆ ಶಿಶುವೂ ಅತ್ತಿಂದಿತ್ತ ತೂಗಿತು. ಡೋಲು ಬಡಿಯುವವನು "ಹೊ–ಹೋ–ಹೋ...ಆಯ್ತೊ–ಆಯ್ತೊ–ಯ್ತೊ" ಎಂದು ಅಬ್ಬರಿಸುತ್ತಾ ಅಲ್ಲಿಂದಿಲ್ಲಿಗೆ ತಿರುಗಾಡುತ್ತಾ ಡಬ ಡಬ ಡಬ ಎಂದು ಡೋಲು ಬಾರಿಸಿದ. ದೊಂಬ ಹುಡುಗ ಹುಡುಗಿಯರು ಆನಂದದಿಂದ "ಲಾಗ" ಹಾಕಿದರು. ಸುತ್ತ ಕುಳಿತ ಮಕ್ಕಳು ಸಂಭ್ರಮದಿಂದ ಚಪ್ಪಾಳೆ ತಟ್ಟಿದರು...ದೊಂಬ ಹಗ್ಗವನ್ನು ಪೂರ್ತಿಯಾಗಿ ಮೇಲೆಳೆದುಕೊಂಡು ಆ ಚಿಕ್ಕ ಮಗುವನ್ನು ಕೈಗೆತ್ತಿಕೊಂಡ. ಆಮೇಲೆ ಅದರ ಸೊಂಟದಿಂದ ಹಗ್ಗವನ್ನು ಕಳಚಿಟ್ಟು ಅದನ್ನೆತ್ತಿ ತನ್ನ ಎಡ ಹಸ್ತದ ಮೇಲೆ ಕುಳ್ಳಿರಿಸಿ ಕೈಚಾಚಿದ. ಅಂತರದಲ್ಲಿ ಏನನ್ನೂ ಹಿಡಿದುಕೊಳ್ಳದೆ, ದೊಂಬನ ಕೇವಲ ಹಸ್ತದ ಆಧಾರದ ಮೇಲೆ ಕುಳಿತಿದ್ದರೂ ಆ ಚಿಕ್ಕ ಮಗು ಧೈರ್ಯವಾಗಿ, ನಿಶ್ಚಿಂತೆಯಿಂದಿರುವಂತೆ ತೋರುತ್ತಿತ್ತು. ದೊಂಬ ಹಾಗೆಯೇ ಒಂದು ಸಲ ಜನರಿಗೆಲ್ಲಾ ವಂದಿಸಿ ಕೂಡಲೇ "ಹೋ–ಹೋ–ಹೋ.... ಆಯ್ತೋ–ಆಯ್ತೋ–ಆಯ್ತೋ...." ಎಂದು ಅಬ್ಬರಿಸುತ್ತಾ ಅತ್ತಿಂದಿತ್ತ ಆವೇಶ ಬಂದವನಂತೆ ಗುಡುಗಾಡುತ್ತಾ ಡೋಲಿನವನು ಬಾರಿಸಿದ, ದೊಂಬ ಹುಡುಗ ಹುಡುಗಿಯರು ಆನಂದದಿಂದ ಲಾಗ ಹಾಕಿದರು. ಸುತ್ತ ನೆರೆದ ಮಕ್ಕಳು ಎದ್ದು ನಿಂತು ಸಿಳ್ಳೆ ಹಾಕುತ್ತಾ, ಕೂಗುತ್ತಾ ಚಪ್ಪಾಳೆ

ತಟ್ಟಿದರು.... ದೊಂಬ ಚಾಚಿದ ಕಯ್ಯನ್ನು ಉಪಾಯವಾಗಿ ಹಿಂದೆ ಎಳೆದುಕೊಂಡು ಆ ಚಿಕ್ಕ ಮಗುವನ್ನು ಇಳಿಸಿ ತಬ್ಬಿಕೊಂಡ....

ಹೀಗೇ ದೊಂಬರಾಟ ನಡೆಯುತ್ತಿತ್ತು. ನಾಗಜ್ಜಿ ಊರಿಗೆ ಹೊತ್ತಾಯಿತೆಂದು ಹೊರಟು ನಿಂತಳು. ನಟರಾಜನಿಗೂ ಮಂಗಳೆಗೂ ಇನ್ನೂ ಕೊಂಚ ಕಾಲ ನೋಡಬೇಕೆಂಬ ಆಸೆ. ಅಜ್ಜಿಯ ಬಲತ್ಕಾರಕ್ಕೆ ಅತಿ ಪ್ರಯಾಸದಿಂದ ಆ ಜಾಗವನ್ನು ಬಿಟ್ಟು ಕದಲಿದರು. ಹೊಗೆಸೊಪ್ಪಿನ ತುಂಡನ್ನು ಬಾಯಿಗೆ ಎಸೆದುಕೊಳ್ಳುತ್ತಾ "ಪಾರತಿ....ಆ ಮುದುಕಿ ಯಾರು ಗೊತ್ತೇನಾ?" ಎಂದು ಕೇಳಿದಳು. ಯಾರನ್ನುದ್ದೇಶಿಸಿ ನಾಗಜ್ಜಿ ಹೇಳಿದಳೆಂದು ಅರ್ಥವಾಗದೆ "ಯಾವ ಮುದುಕೀನಾ ಅತ್ತೇ" ಎಂದು ಸಹಜವಾಗಿಯೇ ಕೇಳಿದಳು ಪಾರ್ವತಮ್ಮ.

"ಅದೇಕನಾ.... ಆ ದೊಂಬರ್ದು-ಮುದುಕೀ...."

"ಇಲ್ಲ ಕನತ್ತೇ."

"ಅಸ್ಸಿ. ಅವ್ಳು ನಿಮ್ಮ ದೊಡ್ಡಪ್ಪ ನಾಗಯ್ಯ ಓಡಿಸಿಕೊಂಡು ಓದೋಳಲ್ವೇನೆ?- ದೊಂಬರ ಚಿಕ್ಕಿ!"

"ಹಂಗಂತಾ ಆ ಸುದ್ದಿ ನಿನ್ನ ಬಾಯಿಂದ ಕೇಳಿದ್ದದ್ದೇ ಒರತುs ನಾ ಮಾತ್ರ ಕಂಡಿರ್ನಿಲ್ಲ ಅವಳಾ...." ಎಂದು ಆಶ್ಚರ್ಯಪಡುತ್ತಾ "ಇವಳೇಯಾ ಅತ್ತೇ....ದೊಂ-ಬ-ರ ಚಿ....ಕ್ಕಿs....?" ಎಂದು ರಾಗವಾಗಿ ಕೇಳಿದಳು, ಪಾರ್ವತಮ್ಮ.

"ಊ, ಇವಳೇಯಾ ಆ ಚಿಕ್ಕಿs! ನಿಮ್ಮ ದೊಡ್ಡಯ್ಯ ಸತ್ತೋದಮ್ಯಾಗೇ ಮಂತೆ ಅದೇ ಆಟ ಕಟ್ಟವ್ಳೆ.... ಗಣೆ ಮರೀನ ಮ್ಯಾಲಗಡೆ ಕುಂತಿದ್ನಲ್ಲಾ ಅವ್ನೇ ಅವಳ ತಮ್ಮ-ಬೋರ. ಅವನೆಡ್ತೀನೂ ಮಕ್ಕಳೂ ಕೆಳೀಕಿದ್ದರು.... ಆ ಚಿಕ್ಕ ಕೂಸು ಹಗ್ಗಕ್ಕೆ ಕಟ್ಟಿದ್ಲಲ್ಲಾ ಅವಳೇ ಚಿಕ್ಕ ಮಗಳು-ತಿಮ್ಮಿs...."

ಅತ್ತೆ ಮಾತು ಮುಗಿಸುವುದರೊಳಗೆ ಪಾರ್ವತಮ್ಮ, "ತಿಮ್ಮಿ ಅಂದ್ರೂ ಒಳ್ಳೇ ತಿಮ್ಮಿs ಅಂಗೇ ಅವ್ಳೆ ಕಾನತ್ತೆs" ಎಂದು ನಗೆಯಾಡಿದಳು.

ಸೊಸೆಯ ಮಾತಿಗೆ ನಾಗಜ್ಜಿಯೂ ನಕ್ಕಳು. ತಿಮ್ಮಿ ನಿಜವಾಗಿಯೂ "ತಿಮ್ಮಿ"ಯೇ ಆಗಿದ್ದಳು. ಕರ್ರಗೆ, 'ತಿವಿದು ತಟ್ಟಿಸಿದಂತಹ' ದೇಹ. ಸದಾ ಕೆಂಡದಂತಿರುವ ಕಣ್ಣುಗಳು ಸುಣ್ಣದಂತೆ ಬೆಳ್ಳಗಿರುವ ಹಲ್ಲುಗಳು. ಅವಳು ನಕ್ಕಾಗ ಕಪ್ಪು ಮೋಡಗಳ ಮಧ್ಯೆ ಮಿಂಚು ಸುಳಿದಂತಾಗುವುದು.... ಆದರೆ ಅವಳ ಮಗಳು ಚನ್ನಿ-ದೊಂಬ ಕಯ್ಯಲ್ಲೆತ್ತಿಕೊಂಡಿದ್ದ ಹೆಣ್ಣು-ಮಾತ್ರ ತಿಮ್ಮಿಗೆ ತದ್ವಿರುದ್ಧ ಎಣ್ಣೆಗೆಂಪು ಬಣ್ಣ. ಬಳಕುವ ಬಾಳೆಯಂತಹ ದೇಹ ಸಂಪತ್ತು. ದುಂಡಾದ ಮುಖ. ಆ ಮುಖಕ್ಕೆ ಸ್ವಲ್ಪ ವಿಶಾಲವೆಂದೇ ಹೇಳುವ ಹಾಗಿದ್ದ

ನಯನಗಳು. ಆ ನಯನಗಳಲ್ಲಿ, ಒಂದೆ ಕಡೆ ಸ್ಥಾಯಿಯಾಗಿ ನಿಲ್ಲದೆ ಮಿಂಚಿನಂತೆ ಚಲಿಸುವ ಚಂಚಲನೋಟ. ಪುಟ್ಟದಾಗಿ ಮುದ್ದಾಗಿ ಕಾಣುತ್ತಿದ್ದ ಗಲ್ಲ.... ಇಷ್ಟೆಲ್ಲ ಸೌಂದರ್ಯ ಪಡೆದಿದ್ದ ಆ ಚಿಕ್ಕ ಹುಡುಗಿಯಲ್ಲಿ, ಗಂಡಸರನ್ನು ತನ್ನಿಚ್ಛೆ ತಿರುಗಿದಂತೆ ಕುಣಿಸುವ ಸಾಮಗ್ರಿ ಆಗಲೇ ಸಿದ್ಧವಾದಂತಿತ್ತು. ಆ ಹುಡುಗಿಯನ್ನೇ ನೆನೆಯುತ್ತಾ ನಾಗಜ್ಜಿ, "ತಿಮ್ಮಿ ಅಂಗಿದ್ರೂ ಅವಳೆಣ್ಣು ಏಟು ಚೆಂದಾಗಿ ಹುಟ್ಟಿದೆ ನೋಡು" ಎಂದಳು.

"ಯೆಲ್ಲಾ ದೇವರ ತೃಷ್ಣೆ ಕಾನತ್ತೆ" ಎಂದಳು. ಪಾರ್ವತಮ್ಮ. ಅಷ್ಟರಲ್ಲಿ ಅವರನ್ನು ಬಂದು ಕೂಡಿಕೊಂಡ ಮರಿನಿಂಗಿ, "ಆದ್ರೂ ಬೋ ಒಳ್ಳೆ ಎಂಗಸು ಕನವ್ವಾ ಆ ಚಿಕ್ಕಿs" ಎಂದಳು.

"ಅದೇನಾ ಅಂಗಂತೀ?" ಎಂದು ಸಹಜವಾಗಿಯೇ ಕೇಳಿದಳು ಪಾರ್ವತಮ್ಮ.

"ನಿಮ್ಮ ದೊಡ್ಡಯ್ನ ಕಾಯ್ಲೇಲಿ ಆಗಾಗ ಹೋಯ್ತಿದ್ದೆ ಗೋಣಿಕೊಪ್ಪಲ್ಗೆ ನಾನು... ಅವ್ವೀ–ಅವಯ್ಯನ ಕಾಯ್ಲೇಲಿ ಇವ್ಳು ಆಗೋ ಹೊತ್ತಿಗೆ ಇಂಕರಾನು ಮ್ವಾರೆ ಸೊಟ್ಟಗೆ ಮಾಡಿಕೊಳ್ಳದೆ ಇಲಾಜು ಮಾಡಿದ್ಲು...."

"ಮಂತೆ? ಇಲಾಜ ಮಾಡದೆ?.... ಓಡಿಸಿಕೊಂಡು ಹೋಗಿರ್ನಿಲ್ವಾ?" ಸ್ವಲ್ಪ ಖಾರವಾಗೇ ನುಡಿದಳು ಪಾರ್ವತಮ್ಮ. ತನ್ನ ದೊಡ್ಡಪ್ಪ ನಾಗಯ್ಯನನ್ನು ಚಿಕ್ಕಿ ಹಾಳುಮಾಡಿದಳು ಎಂಬ ಕುದಿ ಅವಳ ನುಡಿಯಲ್ಲಿತ್ತು.

"ಐ ಬುಡವ್ವಾ, ಓಡಿಸಿಕೊಂಡು ಹೋದ್ರೇನಾ?.... ಲಗ್ಣ ಆದ ಹೆಂಡತಿ ಮಾಡಾಳಾ ಆ ಸುಸ್ರೂಸೆಯಾ?...." ಮರಿನಿಂಗಿ ಚಿಕ್ಕಿಯ ಶುಶ್ರೂಷೆಯನ್ನು ಮೆಚ್ಚಿ ದೊಡ್ಡದು ಮಾಡಿ ಆಡಿದಳು.

"ಊ..... ಅಂಗೇನಾ?" ಎಂದು ಆಶ್ಚರ್ಯ ಸೂಚಿಸಿದ ನಾಗಜ್ಜಿ "ಯಾನಾಗಿತ್ತs.... ಅವನ್ಗೇ?" ಎಂದು ಕೇಳಿದಳು.

"ಆಗೋದೇನವ್ವ?.... ಮಯ್ನೆಲ್ಲೆಲ್ಲ ಬೊಕ್ಕೆ ಅಂಗೆ ಎದ್ದು ಬುಟ್ಟಿದ್ವೊ. ದಾಕ್ತಾರು ಒಂದು ನೋಡಿ 'ಇದು ಸಕ್ಕರೆ ಕಾಯ್ಲೆ' ಅಂದ್ರಂತೆ. ಆ ದಾಕ್ತಾರಿಗೆ ಸುರಿಯಾಕೆಲ್ಲವ್ವ ತತ್ತಾಳೆ ಚಿಕ್ಕಿ ದುಡ್ನಾ.... ಇಂಗೇ ನಮ್ಮ ಹಳ್ಳಿ ವೈದ್ಯ ಮಾಡಿದ್ಲು.... ಯೇನೇನು ಮಾಡಿದ್ರೂವೆ ಅದು ವಾಸೀ ಆಗನೇ ಇಲ್ಲ. ಇಲ್ಲೊಂದು ಬೊಕ್ಕೆ ಎದ್ದು ಒಡದ್ರೆ ಅಲ್ಲೊಂದು ಕಾಣಿಸಿಕೊಳ್ಳೋದು. ಅವಯ್ಯನ ಮಯ್ಯೆಲ್ಲಾ ತತಾತೂತು ಆಗೋಯ್ತು....ಆಗs ಚಿಕ್ಕಿ ಆ ಗಾಯಗಳ ರಸಕನೆಲ್ಲ ತಾನೇ ತೊಳೆದು, ತುಪ್ಪ ಕಾಯ್ಸಿ ಅತ್ತೀಲಿ ಅದ್ದಿಕೊಂಡು ಆ ಗಾಯಗೊಳಿಗೆಲ್ಲಾ ಸವರೋಳು. ಪುಣ್ಯಾತ್ಗಿತ್ತಿ ಚಂದಾಗಿ ಸೇವೆ ಮಾಡಿದ್ಲು ಕನವ್ವ–ಅವಯ್ಯನಿಗೆ" ಎಂದು ಮರಿನಿಂಗಿ ಮಾತು ಮುಗಿಸುವುದರಲ್ಲಿ ಕಲ್ಲಹಳ್ಳಿಯ ಇತರ ಹೆಂಗಸರೂ ಗಂಡಸರೂ ಬಂದು ಅವರನ್ನು ಕೂಡಿಕೊಂಡರು.

೬

ಈಗೀಗೆ ಮಂಗಳೆಗೆ ಓದಿನಲ್ಲಿ ಆಸಕ್ತಿ ಹೆಚ್ಚುತ್ತಿದೆ. ಆ ಆಸಕ್ತಿಯ ಜತೆಗೆ ವಯಸ್ಸಿಗೆ ಸಹಜವಾದ ತುಂಟತನವೂ ಬೆಳೆಯುತ್ತಿದೆ.

ಒಂದು ಮಧ್ಯಾಹ್ನ, ಮಠದಲ್ಲಿ ಅವಳು ಕುಳಿತಿದ್ದಾಳೆ. ಆಯರಹಳ್ಳಿ ಅಯ್ಯ ಬೋರ್ಡಿನ ಮೇಲೆ ಮಗ್ಗಿ ಬರೆಯುತ್ತಿದ್ದಾನೆ. ಇತರ ಶಿಷ್ಯರೂ ಮೌನವಾಗಿದ್ದಾರೆ. ಆಗ ಇದ್ದಕ್ಕಿದ್ದಂತೆ 'ಉಪಾದ್ಯ'ರು ಮಠಕ್ಕೆ ಬರುವಾಗ ಆತುರದಲ್ಲಿ ಸುತ್ತಿದ್ದ ಪೇಟದ ತುದಿ ಹಿಂದುಗಡೆ ಕಳಚಿಕೊಂಡಿತು. ಅದನ್ನು ನೋಡಿ ಮಂಗಳೆ ಘೊಳ್ಳೆಂದು ನಕ್ಕಳು. ಅವಳ ನಗುವಿನ ಬೆನ್ನಿಗೇ ಇತರ ಬಾಲಕ ಬಾಲಕಿಯರ ನಗುವೂ ಉಕ್ಕಿತು.

ಕ್ಲಾಸಿಗೆ ಬೆನ್ನು ತಿರುಗಿಸಿ ನಿಂತಿದ್ದ ಅಯ್ಯ ಹುಡುಗರ ನಗುವನ್ನು ಕೇಳಿ, ಏಕೆಂದು ತಿಳಿಯದೆ ಕುಪಿತನಾಗಿ ಅವರ ಕಡೆ ಮುಖಮಾಡಿ ನಿಂತ. ಪೇಟದ ತುದಿ ಅವನು ತಿರುಗಿದ ರಭಸಕ್ಕೆ ಇನ್ನೂ ಬಿಚ್ಚಿಹೊಗಿ ಅಸ್ತವ್ಯಸ್ತವಾಯಿತು.

ಘೊಳ್--ಘೊಳ್--ಘೊಳ್ ಎಂದು ಪುಂಖಾನುಪುಂಖವಾಗಿ ಎದ್ದಿತು ಹುಡುಗರ ನಗು.

ನಾಚಿಕೆಯಿಂದ ವಿವರ್ಣನಾದ 'ಉಪಾದ್ಯ' ಬಿಚ್ಚಿಹೋದ ತುದಿಯನ್ನು ಪುನಃ ಸುತ್ತುತ್ತಾ ತನ್ನ ಪೇಟವನ್ನು ಮನಸ್ಸಿನಲ್ಲಿಯೇ ಶಪಿಸಿಕೊಂಡನು ಆ ಹಾಳು ರುಮಾಲು ಯಾವಾಗಲೂ ಹಾಗೆ! ತಾನು ಮಕ್ಕಳಿಗೆ ಬೆನ್ನು ಮಾಡಿದಾಗಲೇ ಬಿಚ್ಚಿ ಹೋಗುತ್ತಿತ್ತು.

ಅಯ್ಯ ತಮ್ಮನ್ನೇ ನೋಡುತ್ತಿದ್ದುದರಿಂದ ಹುಡುಗರು ಪ್ರಯಾಸದಿಂದ ಇನ್ನೂ ಉಕ್ಕುತ್ತಿದ್ದ ನಗುವನ್ನು ತಡೆದುಕೊಳ್ಳುತ್ತಿದ್ದರು. ಅದನ್ನು, ಕಂಡ ಅಯ್ಯನಿಗೆ ಮಕ್ಕಳ ಈ 'ಚ್ಯಾಷ್ಟೆ'ಯನ್ನು ಮೊಳಕೆಯಲ್ಲೇ ಮೊಟಕು ಮಾಡದಿದ್ದರೆ ತನ್ನ ಪ್ರತಿಷ್ಠೆಗೆ ಉಳಿಗಾಲವಿಲ್ಲವೆನಿಸಿತು. ಉಳಿದವರ ಮೇಲೆ ಪರಿಣಾಮವಾಗುವಂತೆ ಒಬ್ಬಿಬ್ಬರನ್ನು ಶಿಕ್ಷಿಸದಿದ್ದರೆ ಮಕ್ಕಳು ಹೀಗೆ ಹೆಚ್ಚಿಹೋಗುವರೆಂದು ಬಗೆದು ಎಲ್ಲರ ಮೇಲೂ ಕ್ರೂರವಾಗಿ ದೃಷ್ಟಿ ಹೊರಳಿಸಿದ ಅಯ್ಯ.

ಅಯ್ಯ ಹಾಗೆ ಕಣ್ಣು ಕೆಂಪಗೆ ಮಾಡಿಕೊಂಡಾಗ ಏನಾಗುವುದೆಂದು ಆ ಮಕ್ಕಳಿಗೆಲ್ಲಾ ಚೆನ್ನಾಗಿ ಗೊತ್ತು. ಹಗ್ಗದಿಂದ ತೊಲೆಗೆ ತೂಗುಹಾಕುವ 'ಕೋದಂಡ'ವೊ, ಅವನಿಗೆ ಸಿಟ್ಟು ಬಂದಾಗಲೆಲ್ಲಾ ಕಯ್ಯಲ್ಲಿ ಸಿದ್ಧವಾಗುವ ಉದ್ದನೆಯ ಬೆತ್ತವೊ--ಒಂದಲ್ಲ ಒಂದು ಶಿಕ್ಷೆ ಕಾದಿರುತ್ತಿತ್ತು.

ಅಯ್ಯ ಹಾಗೆ ನೋಡಿದ. ಮಂಗಳೆಯ ಪಕ್ಕದಲ್ಲಿ ಕುಳಿತ ಸ್ವಲ್ಪ ಬಲಿತ ವಯಸ್ಸಿನ ಕೆಂಚ ಅವನ ಗಮನವನ್ನು ಸೆಳೆದ. ಆ 'ಧಾಂಡಿಗ'ನನ್ನು ಬಲಿ ಹಾಕಿದರೆ ಉಳಿದವರೆಲ್ಲರೂ ಬುದ್ಧಿ ಕಲಿಯುವರೆಂದು ಇತ್ಯರ್ಥ ಮಾಡಿದ ಅಯ್ಯ.

ಮನಸ್ಸಿಗೆ ಬಂದದ್ದನ್ನು ಕೂಡಲೇ ಮಾಡುವ ಸ್ವಭಾವ ಅಯ್ಯನದು. ಆ ಘಳಿಗೆಗೇ ಹಗ್ಗವನ್ನು ತರಿಸಿ ಆ ಕೆಂಚನನ್ನು ಕೋದಂಡಕ್ಕೆತ್ತಿದ. ಅವನ ಕೆಳಗೆ ಮೆಣಸಿನಕಾಯಿ 'ಘಾಟು' ಹಾಕಿದ. ಆ ಹುಡುಗ ಲಬೊ–ಲಬೊ' ಎಂದು ಬಾಯಿ ಬಡಿಯುತ್ತಿದ್ದ. ಹುಡುಗನ ಪೇಚಾಟ ಅಧಿಕವಾದಂತೆ ಆಯರಹಳ್ಳಿ ಅಯ್ಯ "ಹಂಗೆ ಮಾಡೀಯಾ.... ಇನ್ನು ಮೇಲೆ ಹಂಗೆ ಮಾಡೀಯಾ" ಎಂದು ಅವನನ್ನು ಮೂದಲಿಸಿ, ಹಾಗೇ ಇತರ ಬಾಲಕರ ಕಡೆಗೂ ತಿರುಗಿ "ನೋಡಿ.... ಹಿಂಗೇನಾರಾ ತಿರುಗಿ ನಕ್ಕುಗಿಕ್ಕರೆ ಚಮ್ಮಡ ಸುಲಿದುಬುಡ್ತೀನಿ" ಎನ್ನುತ್ತಾ "ದಮ್ಮಯ್ಯ ಉಪಾದ್ಯರೇ ಇಳಿಸಕೊನ್ನಿ, ಇನ್ನುಮ್ಯಾಗೆ ನಿಮ್ಮಾಣೆಗೂ ನಗಕ್ಕಿಲ್ಲ" ಎಂದು ಒರಲುವ ಕೆಂಚನನ್ನು ಬಿಡುಗಡೆಮಾಡಿ ಇಳಿಸಿಕೊಂಡು "ಮಕ್ಕಳಿಗೆ ಹೈಲಾಟವಾಗಿ ಹೋಗಿದೆ !– ನನ್ನ ಹತ್ತಿರವಾ ಹೈಲಾಟ !" ಎಂದು ಘರ್ಜಿಸಿದ.

ಮಠದೊಳಗಿರುವವರೆಗೂ ಮಂಗಳೆ ಅಯ್ಯನ ಆರ್ಭಟಕ್ಕೆ ಹೆದರಿದ್ದರೂ ಬೀದಿಗೆ ಬಂದ ಕೂಡಲೆ ಉಪಾದ್ಯನ ಬಿಚ್ಚಿದ ಪೇಟ ನೆನಪಾಗಿ ತನ್ನೊಳಗೇ ನಗುವಿನಿಂದ ಕುಲುಕುತ್ತ ನಡೆಯುತ್ತಿದ್ದಳು.

ಮನೆಯನ್ನು ಸೇರಿದಾಗಲೂ ಅವಳ ಒಳನಗು ಅಳಿಸಿರಲಿಲ್ಲ. "ಒಳ್ಳೆ ಉಪಾದ್ಯರು" ಎಂದು ನಗುತ್ತಲೇ ಮನೆಯ ಹೊರಗಿನ ಮೆಟ್ಟಿಲಿನ ಮೇಲೆ ದೊಪ್ಪೆಂದು ಕುಳಿತುಬಿಟ್ಟಳು ಮಂಗಳೆ.

ಮನೆಯ ಮುಂದುಗಡೆ ಒಂದು ಪಕ್ಕಕ್ಕೆ ಹುಸೇನ್‌ಸಾಬಿ ತನ್ನಷ್ಟಕ್ಕೆ ತಾನು ಪಾರ್ವತಮ್ಮ ಕೊಟ್ಟ, ಪಾತ್ರೆಗಳಿಗೆ ಕಲಾಯಿ ಮಾಡುತ್ತಿದ್ದ. ಕೆಲಸಮಾಡುತ್ತಿದ್ದ ಆತನನ್ನು ಮಂಗಳೆಯಾಗಲೀ, ಮನೆಯ ಮುಂದೆ ಬಂದ ಮಂಗಳೆಯನ್ನು ಹುಸೇನನಾಗಲಿ ಪರಸ್ಪರ ನೋಡಲಿಲ್ಲ. ಮಂಗಳೆ ಕುಳಿತಾಗ ಆದ ಸದ್ದು ಹುಸೇನನ ಗಮನ ಸೆಳೆಯಿತು. ಅವಳನ್ನು ನೋಡುತ್ತಲೇ ಹುಸೇನ್ ತುಂಟಧ್ವನಿಯಲ್ಲಿ, "ನೀನಾ ಅಮ್ಮಣ್ಣೀs....? ನಾನು ಎಲ್ಲೋ ಆಕಾಸ ಕಸಗೊಂಡು ಬಿದ್ದು ಹೋಯ್ತೋ ಅಂತಿದ್ದೆ....?" ಎನ್ನುತ್ತಾ ದಾಡಿಯ ಮರೆಯಲ್ಲಿ ಹುಸಿನಗು ನಕ್ಕ.

ಮಂಗಳೆ ಮುನಿಸಿಕೊಂಡಳು. ಮುದುಕ ಹುಸೇನ್ ಯಾವಾಗಲೂ ಹಾಗೇ ! ಹಾಸ್ಯ ಅಂದರೆ ಹಾಸ್ಯ.... ಮಂಗಳೆ ಮುಖವನ್ನು ಚಾಚಿ ಅವನನ್ನು ಅಣಕಿಸಿದಳು. ಅವಳು ಹಾಗೆ ಅಣಕವಾಡುವಾಗ ಹುಡುಗಿಯ ಮುಖವನ್ನು ದಿಟ್ಟಿಸಿದಂತೆ ಹುಸೇನ್ ಸಾಬಿಗೆ ವಿಪರೀತವಾಗಿ ನಗು ಉಕ್ಕಿತು. ಆ ನಗು ಗಾಳಿಗೆ ಅಲುಗಾಡುವ ಅವನ ಗಡ್ಡದಲ್ಲಿ ಕೂಡಿ ತೆರೆತೆರೆಯಾಯಿತು. ನಗುನಗುತ್ತಲೇ ಗುಳಿಯ ಕೆಂಡವನ್ನು ಕೆದಕಿ ತಿದಿಯೊತ್ತಿದ ಹುಸೇನ್. ಛಟ ಛಟನೆ ಸಿಡಿಯಿತು ಕಿಡಿ. ಭುಗ್ ಭುಗ್ ಎಂದು ಎದ್ದಿತು ಉರಿ .....

ಕೈಗಳನ್ನು ಬಟ್ಟಲುಮಾಡಿ ಅದರಲ್ಲಿ ತನ್ನ ಮುಖವಿಟ್ಟು ಮಂಗಳೆ ಎವೆಯಿಕ್ಕದೆ ನೋಡುತ್ತಿದ್ದಳು. ಬಾಗಿ ಕುಳಿತ ಹುಸೇನನ, ಮುಖದ ಮೇಲೆ ಉರಿಯ ಕೆಂಪು ಛಾಯೆ

ಬೀಸಿತ್ತು. ವಿಶಾಲವಾದ ಮುಖ, ನಸು ನೀಳವಾಗಿ ತುದಿಯಲ್ಲಿ ಬಾಗಿದ ಮೂಗು, ಸುಮ್ಮನೆ ಕುಳಿತಾಗಲೂ ನಗುವಂತೆ ಕಾಣುವ ಕಣ್ಣು, ಕನ್ನಡಿಯಂತೆ ಬೋಳಾದ ತಲೆ, ಸುರಳಿ ಸುರಳಿಯಾಗಿ ಉದ್ದವಾಗಿ ಬೆಳ್ಳಿ ಎಳೆಗಳಂತೆ ಮೋಹಕವಾಗಿ ಬೆಳೆದ ಗಡ್ಡ–ಮಂಗಳೆ ಆ ಮುಖವನ್ನು ಬಹುವಾಗಿ ಪ್ರೀತಿಸುತ್ತಿದ್ದಳು. ಆ ದಾಡಿಯನ್ನೆಳೆದು ಮುದುಕನ ಬಾಯಿಂದ "ಆ....!" ಎಂದು ರಾಗ ಹೊರಡಿಸಿದರೆ ಅವಳಿಗೆ ಎಲ್ಲಿಲ್ಲ ಇಲ್ಲದ ಖುಷಿ. ಹುಣಸೂರಿನಿಂದ ಆಗಿಂದಾಗ್ಗೆ ಬರುತ್ತಿದ್ದ ಹುಸೇನನ "ಕಲಾಯಿ ಪಾತ್ರೇ–ೕ–ೕ..." ಎಂಬ ಸ್ವರ ಕಿವಿಗೆ ಬೀಳುವುದೇ ತಡ ಓಡಿಹೋಗಿ ಅವನ ಕುತ್ತಿಗೆಗೆ ಜೋತು ಬೀಳುತ್ತಿದ್ದಳು ಮಂಗಳೆ.

ಹುಸೇನ್ ಸಾಬಿಯೂ ಮಂಗಳೆಯನ್ನು ಅಷ್ಟೇ ಆಳವಾಗಿ ಪ್ರೀತಿಸುತ್ತಿದ್ದ. ಹಳ್ಳಿಯ ಕಡೆ ಬರುವಾಗಲೆಲ್ಲಾ ಪೆಪ್ಪರ್‌ಮೆಂಟ್, ಕಡಲೆಪುರಿ, ಬತ್ತಾಸು ಏನಾದರೂ ಹಿಡಿದುಕೊಂಡೇ ಬರುತ್ತಿದ್ದ.

ಮಂಗಳೆ ಮೆಲ್ಲಗೆ ಎದ್ದು ಬಂದು ಅವನ ಪಕ್ಕದಲ್ಲಿ ಕುಳಿತಳು.

ಇಕ್ಕಳದಲ್ಲಿ ಪಾತ್ರೆಯನ್ನು ಹಿಡಿದು ಬೆಂಕಿಗೆ ಒಡ್ಡುತ್ತಾ,

"ಏನು ಅಮ್ಮಣ್ಣಿ?" ಎಂದ ಹುಸೇನ್‌ಸಾಬಿ.

"ಪೆಪ್ಪರ್‌ಮೆಂಟ್?..." ಎಂದಳು ರಾಗವಾಗಿ.

"ಪೆಪ್ಪರ್‌ಮೆಂಟ್–?.... ಈವತ್ತು ಐತಲ್ಲಾ ಪೆಪ್ಪರ್‌ಮೆಂಟ್ ತರ್ನಿಲ್ಲಾ" ನಗುವನ್ನು ತಡೆಯುತ್ತಾ ಹೇಳಿದ ಹುಸೇನ್.

ಮಂಗಳೆಯ ಮುಖ ಸಪ್ಪೆಯಾಯಿತು. ಸ್ವಲ್ಪಕಾಲ ಸಾಬಿ ಕಲಾಯಿ ಮಾಡುವುದನ್ನು ಸುಮ್ಮನೇ ಮೌನದಿಂದ ನಿಟ್ಟಿಸುತ್ತ ಕುಳಿತಳು .... ಹಾಗೇ ಅವಳ ನೋಟ ಹುಸೇನನ ಉಬ್ಬಿದ ಜೇಬಿನ ಕಡೆ ಹರಿಯಿತು.

ಮಂಗಳೆಯ ಮುಖ ಸಂತಸದಿಂದ ಹೂವಿನಂತೆ ಅರಳಿತು.

"ಕಳ್ಳS...." ಎನ್ನುತ್ತಾ ಅವನ ಜೇಬಿಗೆ ಕೈ ಹಾಕಿ ದೋಚಿದಳು.... ಅವಳ ಲಂಗದ ಮಡಿಲು ತುಂಬ ಪೆಪ್ಪರ್‌ಮೆಂಟ್ !– ಕಿತ್ತಲೆ, ನಿಂಬೆ ಪೆಪ್ಪರ್‌ಮೆಂಟ್ !!

ಹುಸೇನ್‌ಸಾಬಿ ನಗುತ್ತಾ ಬೀದಿಯ ತಿರುವಿನಲ್ಲಿ ಕಾಣಿಸಿದ ನಟರಾಜನನ್ನು ತೋರಿ, "ತಾಳು ಅಮ್ಮಣ್ಣಿ, ಅಲ್ನೋಡು ನಿನ್ನ ಗಂಡ ಬತ್ತಾ ಅವ್ನೆ. ಅವನ್ಗೆ ಐತಲ್ಲಾ ಹೇಳಿ ನಿಂಗೆ ಚಂದಾಗಿ ಸಿಕ್ಸಿ ಮಾಡಿಸ್ತೀನಿ" ಎಂದು ಸುಳ್ಳುಕೋಪವನ್ನು ನಟಿಸುತ್ತಾ ಹೇಳಿದ.

ಸಾಬಿಯ ಮಾತುಗಳು ಮಂಗಳೆಯನ್ನು ನಾಚಿಸಿದವು. ಅವಳ ಹೂಗೆನ್ನೆಗಳಿಗೆ ನೆತ್ತರು ದುಮುದುಮಿಸಿ ಅವು ಮೋಹಕವಾದ ಗುಲಾಬಿ ವರ್ಣ ತಾಳಿದವು.

"ಕೆಟ್ಟ ಸಾಬೀ...." ಎಂದು ಕೋಪದಿಂದ ಸಿಡಿಯುತ್ತಾ ಮನೆಯೊಳಗೆ ಸರಕ್ಕನೆ ಎದ್ದೋಡಿದಳು ಮಂಗಳೆ.

ಅವಳು ಒಳಗೆ ನೆಗೆದ ವರಸೆಯನ್ನೇ ನೆನೆಯುತ್ತ ಮುದುಕ ಹುಸೇನ್ ದಾಡಿಯ ಮರೆಯಲ್ಲಿ ಹುಸಿನಗು ನಗುತ್ತಿದ್ದ.

೧೦

ಗುಡುಗುಡನೆ ಒಳಗೆ ಓಡಿದ ಮಂಗಳೆ ತಾಯಿಯೊಡನೆ ಚಾಡಿ ಹೇಳಿದಳು. ಪಾರ್ವತಮ್ಮ ಅವಳ ಬಲತ್ಕಾರಕ್ಕೆ ಎದ್ದು ಹೊರಗೆ ಬಂದಳು. ಅಷ್ಟರಲ್ಲಿ ನಟರಾಜನೂ ಬಂದು ಹುಸೇನನ ಪಕ್ಕದಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದ. ಪಾರ್ವತಮ್ಮ ಒಂದೊಂದಾಗಿ ಕಲಾಯಿ ಮಾಡಿದ ಪಾತ್ರೆಗಳನ್ನು ತೆಗೆದು ಜೋಡಿಸಿಕೊಳ್ಳುತ್ತಾ, "ಯೇನಾ ಸಾಹೇಬುಃ..... ನಮ್ಮುಡುಗೀನಾ ನೀ ಏನೇನೋ ಅಂದುಬುಟ್ಯಂತೇ?" ಎಂದು ಹುಸಿ ಸಿಟ್ಟನ್ನಭಿನಯಿಸುತ್ತಾ ಕೇಳಿದಳು.

ಅದಕ್ಕೆ ಹುಸೇನ್ "ನಾ ಯೇನ್ ಅಂದೆ ಥಯ್?.... ಕಲಯ್ ಮಾಡೋವಾಗ ಐತಲ್ಲಾ ಜೇಬಿನೊಳ್ಗೆ ಕೈಹಾಕಿ ಗಲಾಟೆ ಮಾಡಿದ್ಲು. ಅದ್ಕೆ ನಂಗೆ ಕೋಪ ಹತ್ತುಬುಟ್ಟಿಃ 'ನಿನ್ನ ಗಂಡನ್ಗೆ ಹೇಳ್ತೀನಿ ನೋಡು' ಅಂದೆ" ಎಂದ.

ಹುಸೇನನ ಮಾತುಗಳನ್ನು ಕೇಳಿದ ಪಾರ್ವತಮ್ಮ ತಡೆಯಲಾರದ ನಗುವನ್ನು ಪ್ರಯಾಸದಿಂದ ತಡೆಯುತ್ತಾ, "ಯಾವೋನಾ ಅವ್ನು-ಅವಳ ಗಂಡ?" ಎಂದು ಏನೂ ಅರಿಯದವಳಂತೆ ಪ್ರಶ್ನಿಸಿದಳು.

"ಇನ್ಯಾರು ಥಯ್, ಇಲ್ಲಿ ನನ್ನ ಬಾಜೂನಲ್ಲೇ ಕುಂತವ್ನಲ್ಲಾ. ಅವ್ನೇ...!" ಎಂದು ನಟರಾಜನ ಕಡೆ ತಿರುಗಿ ನೋಡುತ್ತಾ ಗಟ್ಟಿಯಾಗಿ ನಕ್ಕ.

ಪಾರ್ವತಮ್ಮ ಆ ಸಂದಿಗ್ಧದಿಂದ ಪಾರಾಗಲು, "ಓಟೇಯಾ-?" ಎಂದು ಮಾತು ತೇಲಿಸಿ, ಪಾತ್ರೆಗಳನ್ನೆತ್ತಿಕೊಂಡು ಒಳಗೆ ನಡೆದಳು.

ಹುಸೇನ್‌ಸಾಬಿ ಸಣ್ಣ ಕೈಹಾರೆಯ ತುದಿಗೆ ತನ್ನ ಸಾಮಾನುಗಳ ಚೀಲವನ್ನು ಸಿಕ್ಕಿಸಿ, "ಅಂಗಾರೆ ಹೋಗುಬುಟ್ಟು ಬತ್ತೀನಿ ಅಮ್ಮಣ್ಣಿ...." ಎಂದು ನಗುವನ್ನು ಮರೆಸುತ್ತಾ ಹೇಳಿದ.

ಹುಸೇನನ ಮಾತು ಉರಿಯುವ ಬೆಂಕಿಗೆ ತುಪ್ಪ ಹಾಕಿದಂತಾಯಿತು. ಸರ್ವಮಂಗಳೆ ಕೆನ್ನೆಗಳನ್ನು ಅಷ್ಟು ದಪ್ಪ ಊದಿಸಿ, ಮಾತಾಡದೆ ಬಿಗುವಿನಿಂದ ನಿಂತಳು.

"ಓ, ಅಮ್ಮಣ್ಣೀಗೆ ಕೋಪ ಇನ್ನೂ ಆರ್ನಿಲ್ಲಾ....?" ಹುಸೇನ ಮೃದುವಾಗಿ ಹಾಗೆಂದು ಹೇಳಿದಾಗ ಅವನ ಕಣ್ಣುಗಳು ನಗುತ್ತಲೇ ಇದ್ದವು.

ಅವನ ನಟನೆ ಹುಡುಗಿಗೆ ಚೆನ್ನಾಗಿ ಗೊತ್ತು. ಅದಕ್ಕುತ್ತರವಾಗೆ ನಾಲಿಗೆಯನ್ನು ಹೊರಚಾಚಿ ಅಣಕವಾಡಿದಳು.

ಅದನ್ನು ಕಂಡು ನಟರಾಜ ನಗುವದಕ್ಕಾರಂಭಿಸಿದ. ಹುಸೇನ್‌ಸಾಬಿಯೂ ನಗುತ್ತಾ ತಪ್ಪಿತಸ್ಥನಾದ ಕಳ್ಳ ತಪ್ಪಿಸಿಕೊಂಡು ಹೋಗುವಂತೆ ಸರಸರನೆ ಹೊರಟುಹೋದ.

ಅವನು ಕಣ್ಣಿಗೆ ಮರೆಯಾಗುವವರೆಗೂ ಮೆಟ್ಟಿಲ ಮೇಲೆ ನಿಂತಂತೆಯೇ ಸಿಟ್ಟಿನಿಂದ ನೋಡುತ್ತಿದ್ದಳು ಮಂಗಳೆ.

ದೂರದಿಂದ ಹುಸೇನನ ಕೂಗು ಇನ್ನೂ ಕೇಳಿಬರುತ್ತಿದ್ದಿತು – "ಕಲಾಯಿಪಾತ್ರೇ... ಕಲಾಯಿ ಪಾತ್ರೇ–ೀ–ೀ."

ಆಮೇಲೆ ಸ್ವಲ್ಪ ಹೊತ್ತಿನವರೆಗೆ ಮನೆಯಲ್ಲಿ ಎಲ್ಲರೊಡನೆಯೂ ಮುನಿಸಿಕೊಂಡೇ ಇದ್ದಳು ಮಂಗಳೆ. ಆದರೆ ಮಕ್ಕಳ ಮುನಿಸು! ಎಷ್ಟಾದರೂ ಕ್ಷಣಿಕವಲ್ಲವೇ?.... ನಾಗಜ್ಜಿ ತಿನ್ನಲು ತಿಂಡಿ ಕೊಟ್ಟು ಬೇರೆ ಮಾತು ತೆಗೆದಾಗ ಮಂಗಳೆ ಎಲ್ಲವನ್ನೂ ಮರೆತಳು.

ಹೀಗೆ ಹಳ್ಳಿಯ ನೈಸರ್ಗಿಕ ವಾತಾವರಣದ ನಗು–ಅಳುವಿನ ಚಕ್ರತೀರ್ಥದಲ್ಲಿ ಮಿಂದು ನಟರಾಜ–ಮಂಗಳೆಯರ ಬಾಳು ಅರಳುತ್ತಿತ್ತು.

ಹಾಗೆಯೇ ಮತ್ತೊಂದು ಯುಗಾದಿ ಹತ್ತಿರಕ್ಕೆ ಬಂದಿತು. ಯುಗಾದಿಗೆ ನಾಲ್ಕು ದಿನ ಮುಂಚಿತವಾಗಿ ನರಸಮ್ಮ ಗಾಡಿಯಲ್ಲಿ ಬಂದಿಳಿದಳು – ಅವಳ ಜೊತೆಗೆ ಅವಳ ತಮ್ಮ ಸುಬ್ಬರಾಯಾಚಾರಿ ಒಬ್ಬನೇ ಬಂದಿದ್ದ. ಚೆಲುವಮ್ಮನೂ ಮಕ್ಕಳೂ ಬರದಿದ್ದುದನ್ನು ಕಂಡು ಪಾರ್ವತಮ್ಮನಿಗೆ ವ್ಯಥೆಯಾಯಿತು. ಚೆಲುವಮ್ಮನಿಗೂ ಅವಳಿಗೂ ಬಹಳ ಹೊಂದಿತ್ತು. ಅವಳ ಗುಣವನ್ನವಳು ವಿಶೇಷವಾಗಿ ಮೆಚ್ಚಿದ್ದಳು. ಅದಕ್ಕೇ ನರಸಮ್ಮ ಒಳಗೆ ಬಂದೊಡನೆಯೇ ಅವಳನ್ನು ಕೇಳಿದಳು.

"ಅದ್ಯಾಕಾ ಅಕ್ಕ, ಚೆಲುವಿ ಕರಕೊಂಡು ಬರದೇಹೋದೆ?"

"ಅಲ್ಲ ಕನ ಪಾರತಿ, ನೀನೂ ಬೋ ಚೆಂದಾಗಿ ಹೇಳಿದೆ. ಅವಳ್ನೂ ಕರಕೊಂಡು ಬಂದುಬುಟ್ಟಿದ್ರೆ ಅವರಿಗೆ ಇಟ್ಟು ಬೇಯ್ಸಿಹಾಕೋರ್‍ಯಾರು?" ಎಂದು ಮಗಳು ಬರಲಾಗದುದಕ್ಕೆ ಕಾರಣ ತಿಳಿಸಿ "ನಾನೂ ಬತ್ತಾ ಇರ್ನಿಲ್ಲ, ಹುಣಸೂರಿಗೋಗಿದ್ದೆ. ಅಂಗೇಯಾ ನಿಮ್ಮಗೋಳ್ನೆಲ್ಲಾ ನೋಡಿಕೊಂಡು ಓಗಾವ ಅಂತ ಅನ್ನಸ್ತು; ಬಂದಿ....ಓಟೆ," ಎಂದು ನಂಟಿನಲ್ಲಿ ತನಗಿರುವ ಪ್ರೀತಿಯನ್ನು ಹೆಚ್ಚಿಸಿ ಹೇಳಿದಳು.

ಆ ದಿನ ನರಸಮ್ಮ ಬಂದಳೆಂದು ಮನೆಯಲ್ಲಿ ಹೆಚ್ಚುಗಟ್ಟಲೆ ಮಾಡಿದಳು ಪಾರ್ವತಮ್ಮ. "ನಿನ್ನ ಕಯ್ಯಡಿಗೆ ಬೋ ಚೆಂದ ಪಾರತಿ" ಎಂದು ಚಪ್ಪರಿಸುತ್ತಾ ಊಟಮಾಡಿದಳು ನರಸಮ್ಮ.

"ಅತ್ತೆ ಸಾಯ ಮಾಡದೇ ಹೋಗಿದ್ರೆ ನಾ ಯೇನು ಮಾಡ್ತಿದ್ದೆ ನನ್ನ ತಲೆಕಾಯಿ ಬಿಕ್ಕಾವಾ?" ಎಂದಳು ಪಾರ್ವತಮ್ಮ.

"ಏಟಾದರೂ ಅತ್ತೆ ಕೈ ನಿಲ್ಲತಾ ಬಂತು...."

"ಅವರ ಕಯ್ಯಾಕೆ ಈಟು ಬ್ಯಾಗ ನಿಂತಾತು?.... ನಮ್ಮಂಗಾ?.... ಅವ್ರು ಪುಣ್ಯದ ಕಾಲದಲ್ಲಿ ಹುಟ್ಟಿದೋರು" ಎಂದು ಜಗಳವಾಡುವ ರೀತಿಯಲ್ಲೇ ಮಾತನಾಡಿದಳು ಪಾರ್ವತಮ್ಮ.

ಪಾರ್ವತಮ್ಮನಿಗೆ ಅತ್ತೆಯೆಂದರೆ ಅಷ್ಟು ಅಭಿಮಾನ. ಸ್ವಭಾವತಃ ಬಾಯಿಬಡಕಿಯಾದ ನರಸಮ್ಮನಿಗೂ ಅದು ಚೆನ್ನಾಗಿ ಗೊತ್ತಿದ್ದಿತು. ಅತ್ತೆಯನ್ನು ವಹಿಸಿಕೊಂಡು ಊರಿನ ಎಷ್ಟೋ ಹೆಂಗಸರೊಡನೆ ಪಾರ್ವತಮ್ಮ ಜಗಳವಾಡಿದ್ದುದೂ ಅವಳಿಗೆ ತಿಳಿದಿತ್ತು. ಆದ್ದರಿಂದ ಆ ಮಾತನ್ನು ಅಲ್ಲಿಗೆ ಬಿಟ್ಟು ವಿಷಕಂಠಯ್ಯನನ್ನುದ್ದೇಶಿಸಿ, "ಈ ಸಲ ನಿಮ್ಮ ರಾಗಿ ಬೆಳಸು ಎಂಗಾಗದೆ?" ಎಂದು ಕೇಳಿದಳು.

"ಸುಮಾರಾಗಿ ಆಗದೆ, ಆದ್ರೂ ಹೋದ ಸಲದೋಟು ಚೆಂದಾಗಿ ಬರ್ನಿಲ್ಲ" ಎನ್ನುತ್ತಾ ಧ್ವನಿಯನ್ನೆತ್ತರಿಸಿ "ಎಲ್ಲವ್ವಾ ಮಳೇನೇ ಬೀಳ್ನಿಲ್ಲ ವೈನಾಗಿ" ಎಂದು ಹೇಳಿದ ವಿಷಕಂಠಯ್ಯ.

ಊಟ ಮುಗಿದು ಎಲೆ ಅಡಿಕೆ ಹಾಕುವಾಗ ವಿಷಕಂಠಯ್ಯ ಇದ್ದಕ್ಕಿದ್ದಂತೆಯೇ ಎಲೆಗೆ ಸುಣ್ಣ ಹಚ್ಚುವುದನ್ನು ಹಾಗೆಯೇ ನಿಲ್ಲಿಸಿ, "ಒಂದಿಸಿಯಾ ಹೇಳೋದು ಮರತೇಬಿಟ್ಟಿದ್ದೆ" ಎಂದ.

"ಯೇನಾ?" ಎಂದು ಕೇಳಿದಳು ನಾಗಜ್ಜಿ.

"ನಿಂಗೊತ್ತದಲ್ಲವ್ವಾ ಊರಿನಲ್ಲಿ ಹುಲಿ, ಕಿರುಬನ ಕಾಟ ಎಚ್ಚಿಬುಟ್ಟಿದೆ."

"ಊ".

"ನೆನ್ನೆ ರಾತ್ರಿ ಹುಲ್ಲಟ್ಟಿ ರಾಮೇಗೌಡನ ಕೊಟ್ಟಿಗೆಗೆ ನುಗ್ಗಿಬುಟ್ಟಿತ್ತು ಕಿರುಬ...."

"ಆಮೇಕೆ?-ಯಾವ್ದಾದ್ರೂ ದನೀಗೆ ಅಪಾಯ ಮಾಡ್ತಂತಾ?" ಎಂದು ಕೇಳುವ ನಾಗಜ್ಜಿಯ ನುಡಿಯಲ್ಲಿ ತನ್ನ ಕೊಟ್ಟಿಗೆಗೇ ಕಿರುಬ ಬಿದ್ದ ನೋವಿತ್ತು.

"ಇಲ್ಲ. ಆ ಮುತ್ತರಾಯನ ದಯದಿಂದ ಯಾವ ದನೀಗೂ ಅಪಾಯ ಆಗ್ನಿಲ್ಲ. ಆ ದನಗೋಳೆಲ್ಲ ಸೇರಿ ಆ ಕಿರುಬನ್ನ ತಿವಿದು ಓಡಿಸಿಬುಟ್ಟವಂತೆ."

"ಅಂಗಾ?" ಎಂದು ಆಶ್ಚರ್ಯಪಟ್ಟಳು. ನರಸಮ್ಮ.

ಯಾವ ಹಸುವಿಗೂ ಅಪಾಯ ಸಂಭವಿಸಲಿಲ್ಲವೆಂದು ಕೇಳಿ ನಾಗಜ್ಜಿಗೆ ಸಂತೋಷವಾದರೂ ಹುಲಿ, ಕಿರುಬನ ಕಾಟ ಹೆಚ್ಚಿದ ಮೇಲೆ ಊರಿಗೆ ಕಾವಲಾದ ಮುತ್ತುರಾಯ ಅಸಂತುಷ್ಟನಾಗಿರಬೇಕೆಂದು ಅವಳು ಬಗೆದಳು... ದನ, ಕರುವಿಗೆ ಅಪಾಯವಾಗದಂತೆ ನೋಡಿಕೊಳ್ಳುವುದಕ್ಕೆ ತಾನೇ ಆ ಮುತ್ತರಾಯಸ್ವಾಮಿ ಇರುವುದು.

"ಇಸಕಂಟೂ, ನಾಳೀಕೆ ಮುತ್ತರಾಯನ ಪೂಜೆ ಆಗಬೇಕು. ಅವನಿಗೆಲ್ಲೊ ಕ್ವಾಪ ಅತ್ತುಬುಟ್ಟದೆ ನಮ್ಮಳ್ಳಿ ಮ್ಯಾಗೆ. ನಾವು ಓಟು ಜಿನದಿಂದ ಆಯಪ್ಪನ ಪೂಜೆ, ಪುನಸ್ಕಾರಾನೇ ನಿಲ್ಲಿಸಬುಟ್ಟಿವಿ. ಇಲ್ಲದೇ ಇದ್ದರೆ ಹುಲಿ, ಕಿರುಬ ಈಟು ಎಚ್ಚಾನೇ ಅಂದ್ರೇನು?.... ಎಲ್ಲಾ ಮಾಯಕಾರ ಸ್ವಾಮಿ ತ್ರಷ್ಣೆ."

ವಿಷಕಂಠಯ್ಯನಿಗೂ ತಾಯಿಯ ಮಾತು ಸಮಂಜಸವಾಗಿ ಕಂಡಿತು. ಊರಿನ ಪ್ರಮುಖರಲ್ಲಿಗೆ ತೆರಳಿ ಮರುದಿನವೇ ಮುತ್ತರಾಯನ ಪೂಜೆಗಿಡುವುದೆಂದು ನಿರ್ಧಾರ ಮಾಡಿದನು.

ಸರಿ. ಮಾರನೆಯ ಪ್ರಾತಃಕಾಲವೇ ಊರಿನ ಜನ ಹಣ್ಣುಕಾಯಿ ತಟ್ಟೆಗಳನ್ನು ತೆಗೆದುಕೊಂಡು ಮುತ್ತರಾಯನ ಬೆಟ್ಟಕ್ಕೆ ಹೊರಟರು.

ಮುತ್ತರಾಯನ ಬೆಟ್ಟವೆಂದರೆ ಊರಿನ ಕೆರೆಗೆ ಸ್ವಲ್ಪ ಮುಂದಿರುವ ಸುಮಾರು ಎತ್ತರದ ಒಂದು ದೊಡ್ಡ ಗುಡ್ಡ, ಅಷ್ಟೆ. ಅದರ ತುದಿಗೆ ಮೂರು ಕಡೆಗೂ ಕಲ್ಲು ಚಪ್ಪಡಿ ನಿಲ್ಲಿಸಿ, ಹಾಗೆಯೇ ಮೇಲು ಭಾಗಕ್ಕೊಂದು ಕಲ್ಲು ಚಪ್ಪಡಿ ಹೊದಿಸಿದ್ದಿತು. ಅದೇ ಮುತ್ತರಾಯಸ್ವಾಮಿ ಗುಡಿ. ಅದರೊಳಗೆ ಮುತ್ತರಾಯನ 'ವಿಗ್ರಹ'ವೆಂದರೆ ಆಕಾರವಿಲ್ಲದ ಒಂದು ಒಂದೂವರೆ ಅಡಿ ಎತ್ತರದ ಒಂದೇ ಶಿಲೆ.

ಆ ದಿನ ನಟರಾಜನಿಗೆ ಶಾಲೆ ಇದ್ದುದರಿಂದ ಅವನು ಬರಲಾಗಲಿಲ್ಲ. ಮಂಗಳೆ ಮಾತ್ರ ಮಠ ತಪ್ಪಿಸಿ ಬಂದಿದ್ದಳು.

ಪೂಜೆ ಮುಗಿದು ಎಲ್ಲರೂ ಗುಡ್ಡವನ್ನಿಳಿದು ಮನೆ ಸೇರುವ ವೇಳೆಗೆ ಆಗಲೇ ಮಧ್ಯಾಹ್ನವಾಗಿತ್ತು. ಊಟಮಾಡಿ ಹಾಗೂ ಹೀಗೂ ಆಡುವ ಹೊತ್ತಿಗೆ ಸಂಜೆಯಾಯಿತು. ಪಾರ್ವತಮ್ಮ ರಾಗಿ ಮಾಡುತ್ತಿದ್ದಳು. ನಾಗಜ್ಜಿ ಮಂಗಳೆಗೆ ತಲೆ ಬಾಚುತ್ತಿದ್ದಳು. ನರಸಮ್ಮ ಕಾಲುಚಾಚಿ ಕುಳಿತು ಎಲೆ ಅಡಿಕೆ ಮೆಲುತ್ತಿದ್ದಳು. ಕೊನೆಯ 'ಪಿರಿಯಡ್'ನಲ್ಲಿ ಮೇಷ್ಟರು ಈ ದಿನ ಏಕೋ ಬಂದಿಲ್ಲದುದರಿಂದ ನಟರಾಜನೂ ಬೇಗನೆ ಬಂದು ಪ್ರಸಾದದ ಹಣ್ಣು ಕಾಯಿ ತಿನ್ನುತ್ತಾ ಕುಳಿತಿದ್ದ. ಸ್ವಲ್ಪ ಸಂಕೋಚ ಸ್ವಭಾವದ ಸುಬ್ಬರಾಯಿಯೂ ಮೌನವಾಗಿ ಒಂದು ಮೂಲೆಗೆ ಕುಳಿತಿದ್ದ.

ಹಠಾತ್ತಾಗಿ ಹಳ್ಳಿಯ ಬಾಗಿಲಿನ ಹೊರಗೆ ಅಸಾಧ್ಯ ಗದ್ದಲವೆದ್ದಿತು. ಕುತೂಹಲದಿಂದ ಎಲ್ಲರೂ ಎದ್ದು ಹೊರಗೆ ಬಂದರು. ಬಣ್ಣ ಬಣ್ಣದ ಬಟ್ಟೆ ತುಂಡುಗಳನ್ನು ಸೇರಿಸಿ

ಮಾಡಿದ ಕುಪ್ಪಸ ತೊಟ್ಟು, ಚಿಂದಿ ಸೀರೆಗಳನ್ನು ಸುತ್ತಿದ್ದ ಇಬ್ಬರು ಹಕ್ಕಿಪಿಕ್ಕಿ ಯುವತಿಯರು ಮನೆಯ ಮೆಟ್ಟಿಲ ಮುಂದೆ ಹಾಡುತ್ತ ಕುಣಿಯುತ್ತಿರುವುದನ್ನು ಕಂಡರು ....

ಧಿಂಗಲವ್ವ ಧಿಂಗಾಲೇ–ಧಿಂಗಲವ್ವ ಧಿಂಗಾಲೇ
ಹೋಯೀ
ಧಿಂಗಲವ್ವ ಧಿಂಗಾಲೇ–ಧಿಂಗಲವ್ವ ಧಿಂಗಾಲೇ

ಹಾಡು ಹೇಳುತ್ತಿರುವಂತೆ ಅವರದೇ ಆದ ವಿಚಿತ್ರ ರೀತಿಯಲ್ಲಿ ಆ ಹಕ್ಕಿಪಿಕ್ಕಿ ಯುವತಿಯರು ನರ್ತಿಸುತ್ತಿದ್ದರು. ಕಾಡಿನಲ್ಲಿ ಸ್ವೇಚ್ಛೆಯಾಗಿ ಬೆಳೆದ ಅವರ ದೇಹಗಳು ಅವರಿಚ್ಛೆಯನ್ನನುಸರಿಸಿ ಆಡುತ್ತಿದ್ದವು. ಕಟ್ಟಾದ ಅವರ ಕಾಯಗಳಲ್ಲಿ ಬಳುಕುವ ಲತೆಯ ಲಾಲಿತ್ಯವೂ ಮೈಗೂಡಿಕೊಂಡು ಸಮರಸ ಬೆರೆತಂತಿತ್ತು. ಈಗ ಮಣಿಯುವರು : ಇನ್ನೊಮ್ಮೆ ಹಾರುವರು; ಮತ್ತೊಮ್ಮೆ ನೋಡುವ ಕಣ್ಣು ತಣಿಯುವಂತೆ ಕುಣಿಯುವರು. ಕಿಲಕಿಲನೆ ನಗುವರು; ಏನೇನೋ ಗಳುಹುವರು; ಇಂಪಾದ ಧ್ವನಿಯೆತ್ತರಿಸಿ ಹಾಡುವರು... ವಸಂತದ ವನ, ಸುಗ್ಗಿಯ ಸೊಗಸಿಗೆ ಕರಗಿ ಅವೆರಡು ಹೆಣ್ಣುಗಳ ರೂಪವನ್ನು ತಾಳಿ ಬಂದಂತ್ತಿತ್ತು ....ಧಿಂಗಲವ್ವ ಧಿಂಗಾಲೇ–ಧಿಂಗಲವ್ವ ಧಿಂಗಾಲೇ....

ಅವರೆಲ್ಲರೂ ಈ ಹಕ್ಕಿಪಿಕ್ಕಿಯವರ ಕುಣಿತವನ್ನು ಪ್ರತಿ ಸುಗ್ಗಿಯಲ್ಲೂ ನೋಡಿದ್ದರು. ಪ್ರತಿ ಸುಗ್ಗಿಯಲ್ಲೂ ಹಳ್ಳಿ ಹಳ್ಳಿ ಅಲೆದು ಹಾಡಿ, ಕುಣಿದು ಹಳ್ಳಿಗರ ಮನವೊಲಿಸಿಕೊಂಡು ಮುಂದಿನ ಸುಗ್ಗಿಯ ತನಕ ತಮಗೆ ಬೇಕಾಗುವ ಧಾನ್ಯ ಶೇಖರಣೆ ಮಾಡಿಕೊಳ್ಳುತ್ತಾರೆ ಈ ಕಾಡು ಜನ.

ಪ್ರತಿಬಾರಿ ನೋಡಿದಾಗಲೂ ಹಳ್ಳಿಗರಿಗೆ ಈ ಹೆಂಗಸರ ಕುಣಿತದಲ್ಲಿ ನಾವೀನ್ಯತೆಯೇ ಕಾಣುತ್ತದೆ. ಅವರ ಕುಣಿತಕ್ಕೆ ಬೆರಗಾಗಿ, ಅವರ ಮಾತಿಗೆ ಮರುಳಾಗಿ ರಾಗಿಯನ್ನೋ, ಹುರುಳಿಯನ್ನೋ, ತಮ್ಮ ಹತ್ತಿರವಿರುವ ಯಾವುದಾದರೂ ದವಸವನ್ನೊ ಸುರಿದು ಕಳುಹಿಸುತ್ತಾರೆ.

ಪಾರ್ವತಮ್ಮನೂ ಕುಣಿತ ನಿಂತ ಬಳಿಕ ಒಳಗೆ ನಡೆದು ಮೊರದಲ್ಲಿ ರಾಗಿ ತುಂಬಿ ತಂದು ಸುರಿದಳು.

ಆ ಯುವತಿಯರು ಹೊರಟುಹೋದ ತರುವಾಯ ನರಸಮ್ಮ ಮೂಗಿನ ಮೇಲೆ ಬೆರಳಿಟ್ಟು, "ಅವ್ವೇ.... ಆ ಯೆಂಗಸರು ಯಾಪಾಟಿ ಕುಣೀತಾರವ್ವ?... ಅಂಗೆ ಕುಣಿಬೇಕಾದರೆ ಏನು ತ್ರಾಣ ಇರಬೌದು ಅವರ ಮಯ್ನಲ್ಲಿ!" ಎಂದು ತನ್ನ ಅಚ್ಚರಿಗೆ ಮಾತು ಕೊಟ್ಟು ನುಡಿದಳು.

"ಊ ನೋಡಕ್ಕ. ನಂಗೂ ಅದೇ ಇಸ್ಮಯ ಆಗದೆ....ಯೇನುಪಚಾರ ಕಂಡಿದ್ದದು ಅವರ ದೇಯ?.... ಒಂದು ಎಣ್ಣೆಯಾ ಒಂದು ನೀರಾ?.... ಯೇನೂ ಇಲ್ಲ. ಅಂಗಿದ್ರೂ ಯೇನು ಸತುವಾ ಅದವ್ವಾ ಅವರ ಮಯ್ನಲ್ಲಿ?" ಎಂದು ಪಾರ್ವತಮ್ಮನೂ ಆಶ್ಚರ್ಯವನ್ನು ಸೂಚಿಸಿದಳು.

"ಅದರಲ್ಲೇನಾ ಚೋಜಿಗ? ಕಾಡು ಹುಲ್ಲೇ ಅಂಗೆ ಬೆಳಕೊಂಡವೆ.... ಈವತ್ತಿನ ಚಿಂತೆಯಾ?.... ನಾಳೇ ಯಸನವಾ?.... ಅಕ್ಕಿ ಅಂಗೆ ಜೀವಣ ನಡೆಸ್ತಾರೆ....ನಮ್ಮಂಗಾ?" ಎಂದು ಆ ಹೆಂಗಸರ ಶರೀರ ಸಂಪತ್ತು ಹಾಗೆ ಬೆಳೆದಿರುವ ಕಾರಣ ತಿಳಿಸಿ ಮಾತಾಡಿದಳು ನಾಗಜ್ಜಿ.

ದೊಡ್ಡವರು ಹೀಗೆ ಸಂಭಾಷಿಸುತ್ತಿದ್ದಾಗ ನಟರಾಜನೂ ಮಂಗಳೆಯೂ ಕೈ ಕೈ ಹಿಡಿದು "ಧಿಂಗಲವ್ವ ಧಿಂಗಾಲೇ–ಧಿಂಗಲವ್ವ ಧಿಂಗಾಲೇ" ಎಂದು ಆ ಹೆಂಗಸರನ್ನೇ ಅನುಕರಣಮಾಡುತ್ತಾ ಕುಣಿಯುತ್ತಿದ್ದರು.

ಅದನ್ನು ಕಂಡು ನಗುತ್ತಾ ನಾಗಜ್ಜಿ, "ಊ, ಹಿಂಗೆ ಕುಣಿತಾ ಇರಿ, ನಿಮ್ಮಿಬ್ಬರ್ನೂ ಆ ಹಕ್ಕಿಪಿಕ್ಕಿಯೋರಿಗೇ ಮಾರಿಬುಡ್ತೀವಿ" ಎಂದಳು.

ಹುಡುಗರು ಮುದುಕಿಯ ಮಾತನ್ನು ಕೇಳಿಯೂ ಕೇಳದಂತೆ ತಮ್ಮ ಪಾಡಿಗೆ ತಾವು ಕುಣಿಯುತ್ತಲೇ ಹೊರಗೆ ಹೋದರು.

ಮಂಗಳೆ ನಟರಾಜನ ಜೊತೆಯಲ್ಲಿ ಹಾಗೆ ಕುಣಿಯುವುದು ನರಸಮ್ಮನಿಗೇಕೋ ಹಿಡಿಸಲಿಲ್ಲ.

"ಇದೇನಾ ಪಾರತಿ. ಇಂಗೆ ಬುಟ್ಟುಬುಟ್ಟಿದ್ದೀ ನಿನ್ನ ಮಗಳಾ? ಯವೊತ್ತೂ ಒಳ್ಳೆ ಬೀದಿ ಬಸವಿ ಅಂಗೆ ಕುಣೀತವ್ಳಲ್ಲಾ?" ಎಂದಳು.

ಪಾರ್ವತಮ್ಮ ಮಾತಾಡುವುದರಲ್ಲಿ ನಾಗಜ್ಜಿಯೇ ಮಧ್ಯೆ ಬಾಯಿಹಾಕಿ "ಆಡೋ ಕಾಲ ಆಡಕೊತ್ತಾವೇಳು. ಈಗ ನಾನೂ ನೀನೂ ಕುಣಿ ಅಂದ್ರೆ ಕುಣಿಯಾಕೆ ಆದಾತಾ?" ಎಂದು ನರಸಮ್ಮನ ಬಾಯಿ ಮುಚ್ಚಿದಳು.

ಭಾನುವಾರ ಬೆಳಿಗ್ಗೆ ನರಸಮ್ಮ ತಮ್ಮ ಊರಿಗೆ ಹೊರಟು ನಿಂತಳು. ಆದರೆ ನಾಗಜ್ಜಿ ಅವಳು ಊಟ ಮಾಡುವವರೆಗೂ ಹೊರಡಲು ಒಪ್ಪಲಿಲ್ಲ.

ಮಧ್ಯಾಹ್ನದ ವೇಳೆಗೆ ಸುಬ್ಬರಾಯಿ ಗಾಡಿ ಕಟ್ಟಿ ತಂದು ಮನೆಯ ಮುಂದೆ ನಿಲ್ಲಿಸಿದ. ಆಗ ಪಾರ್ವತಮ್ಮ ಕೊಟ್ಟ ವೀಳ್ಯವನ್ನು ಕೈಗೆ ತೆಗೆದುಕೊಳ್ಳುತ್ತಾ ನರಸಮ್ಮ, "ನಮ್ಮ ಜೊತೇಲಿ ಮಂಗ್ಲೇನೂ ಕರಕೊಂಡು ಓಯ್ತೀನಿ ಪಾರತಿ" ಎಂದಳು.

"ಕರಕೊಂಡೋಗವ್ವ ಸದ್ಯ. ನಾನಂತು ಅವಳ ಹಾವಳಿ ತಡೀನಾರೆ" ಎಂದವಳು "ಆದ್ರೇ.... ಅವಳಿಗೆ ಮಠ ತಪ್ಪೋಯ್ತದಲ್ಲಕ್ಕಾ?" ಎಂದು ಅನುಮಾನಿಸಿದಳು ಪಾರ್ವತಮ್ಮ.

"ಐ ಮಠದ್ದೇನಾ ಬುಡು ಪಾರತಿ, ಇನ್ನೆಂಡು ಜಿನ, ಎಂಗಿದ್ರೂ ಮುಚ್ಚಕತ್ತದೆ... ಕಳಸ್ಕಡು ನಮ್ಮೂರಿನಲ್ಲೂ ಒಂದೆಂಡು ಜಿನ ಇದ್ದುಬುಟ್ಟು ಬರ್ಲಿ ಮಂಗ್ಲೆ" ಎನ್ನುತ್ತಾ ಮಂಗಳೆಯ ಕಡೆಗೆ ತಿರುಗಿ "ಯೇನಾ ಮಂಗ್ಲೀ.... ಕೊತ್ತೇಗಾಲಕ್ಕೆ ಬತ್ತೀಯೇನಾ?" ಎಂದು ಕೇಳಿದಳು.

ಪ್ರಯಾಣವೆಂದರೆ ಚಿಕ್ಕ ಹುಡುಗರಿಗೆ ಯಾವಾಗಲೂ ಹಿಗ್ಗು.

"ಓ! ಬತ್ತೀನಿ" ಎಂದು ನರಸಮ್ಮನ ಸಂಗಡ ಹೊರಡಲು ಕೂಡಲೆ ಒಪ್ಪಿದ ಮಂಗಳೆ ನಟರಾಜನನ್ನು ನೋಡಿ "ಅಟಾಜ?.... ಅವ್ನೂ ಬತ್ತಾನಾ?" ಎಂದು ಕೇಳಿದಳು.

ನರಸಮ್ಮ ಏನು ಉತ್ತರ ಕೊಡಬೇಕೆಂದು ಚಿಂತಿಸುತ್ತಿದ್ದಳು. ಅವಳಿಗೆ ನಟರಾಜನನ್ನು ಕಂಡರೆ ಅಷ್ಟಾಗಿ ಆಗುತ್ತಿರಲಿಲ್ಲ. ಅವಳ ಅಸಡ್ಡೆಯಲ್ಲಿ ಅಸೂಯೆಯೂ ಬೆರೆತಿದ್ದಿತೆಂದು ಧಾರಾಳವಾಗಿ ಹೇಳಬಹುದು. ನಟರಾಜನನ್ನು ಮಂಗಳೆ ಅಷ್ಟು ಒಗ್ಗಿಕೊಂಡಿದ್ದುದು ಅವಳ ಅಸೂಯೆಗೆ ಕಾರಣವಾಗಿತ್ತು. ಬಹುದಿನಗಳಿಂದ ಅವಳಿಗೆ ಮಂಗಳೆಯನ್ನು ತನ್ನ ತಮ್ಮ ಸುಬ್ಬರಾಯಿಗೆ ತಂದುಕೊಳ್ಳಬೇಕೆಂಬ ಹಂಬಲ ಪ್ರಬಲವಾಗಿದ್ದಿತು. ಅವಳ ಆ ಹಂಬಲ ಈಡೇರಲು ಮುಂದೆ ನಟರಾಜ ಎಲ್ಲಿ ಅಡ್ಡಿಯಾಗುವನೊ ಎಂಬ ಕಾತರ ಅವಳನ್ನು ಕಾಡುತ್ತಿತ್ತು. ಅದಕ್ಕೆ ಅವಳು ಮಂಗಳೆಯ ಪ್ರಶ್ನೆಗೆ ಸಹಜವಾದ ಉತ್ತರವೀಯದೆ ಕೊಂಚ ಕಾಲ ಹಾಗೆ ಚಿಂತಿಸುತ್ತಾ ನಿಂತುದು.

ಆದರೆ ಆಗ ಪರೀಕ್ಷೆಯ ಕಾಲ. ಆ ಸಮಯದಲ್ಲಿ ನಟರಾಜ ಓದನ್ನು ಗಾಳಿಪಾಲುಮಾಡಿ ಹೊರಟುಹೋಗುವುದು ಪಾರ್ವತಮ್ಮನಿಗೆ ಸರ್ವಥಾ ಇಷ್ಟವಿರಲಿಲ್ಲ. ಅದಕ್ಕೆ ಅವಳು, "ಇದೇನಾ ಹಿಂಗಾಡೀ. ಅಟಾಜನ್ನ ಯಾವಾಗ್ಲೂ ನಿನ್ನ ಮೊಡ್ಲಲ್ಲೆ ತುಂಬಿಕೊಂಡಿರಕ್ಕೆ ಆಯ್ತದಾ?.... ಅವ್ನೂ ಗಂಡಸು ಮುಂದಕ್ಕೆ ಬರೂ ಉಡುಗ. ಓದಿ ಪ್ಯಾಸ್ ಮಾಡ್ಲಿ. ನೀನಿನ್ನೂ ಚಿಕ್ಕೋಳು. ಓಗಿ ತಿರೀಕೊಂಡು ಬಾ" ಎಂದು ಮಂಗಳೆಯನ್ನು ಗದರಿಸಿಕೊಂಡಳು.

ನಟರಾಜ ಅದನ್ನು ಕೇಳಿ ಸಪ್ಪೆ ಮುಖ ಹಾಕಿದ.

ನರಸಮ್ಮನೂ ಮಂಗಳೆಯೂ ಗಾಡಿಯಲ್ಲಿ ಕುಳಿತರು. ಸುಬ್ಬರಾಯಿ ಗಾಡಿಯ ಮುಂದೆ ನೆಗೆದು ಕುಳಿತು. 'ಉಚ್-ಉಚ್' ಎನ್ನುತ್ತಾ ಎತ್ತುಗಳ ಬಾಲವನ್ನು ನುಲಿದ. ಗಡಲ್-ಗಡಲ್ ಎಂದು ಸದ್ದು ಮಾಡುತ್ತಾ ಗಾಡಿ ಹೊರಟಿತು.

ಮಂಗಳೂರು-ಮೈಸೂರಿನ 'ಮಾರ್ಗ' ದಾಟಿದ ಗಾಡಿ ಆಗಲೇ ಕೊತ್ತೇಗಾಲದ ಹಾದಿಗೆ ಹೊರಳಿತ್ತು. ನರಸಮ್ಮ ಮಂಗಳೆಯನ್ನು ಮುದ್ದಿಸುತ್ತಾ, "ಮಂಗ್ಲೀ.... ನಮ್ಮ

ಸುಬ್ರಾಯಿ ಲಗ್ನಾದಿಯೇನಾ?" ಎಂದು ಮಂಗಳೆಯ ಮನಸ್ಸನ್ನು ಪರೀಕ್ಷಿಸುವ ಪ್ರಶ್ನೆ ಕೇಳಿದಳು.

ಅಕ್ಕನ ಮಾತು ಕಿವಿಗೆ ಬಿದ್ದೊಡನೆಯೇ ಸುಬ್ಬರಾಯಿ ಹಗ್ಗವನ್ನು ಹಿಡಿದಂತೆಯೇ ಪಕ್ಕನೆ ತಿರುಗಿ ನೋಡಿದ. ಅವನಿಗಾಗಲೇ ಹದಿನೈದು ಹದಿನಾರರ ವಯಸ್ಸು. ಆ ವಯಸ್ಸಿಗೂ ಮೀರಿ ಬೆಳೆದ ಕಾಯ, ಕಪ್ಪು ಮುಖದಲ್ಲಿ ನಿಬಿಡವಾದ ಸಿಡುಬಿನ ಕಲೆಗಳು....

ಮಂಗಳೆ ಆ ಮುಖವನ್ನೆ ಗಾಬರಿಯಿಂದ ನಿಟ್ಟಿಸುತ್ತಾ, "ಊಹ್ಞು.... ಆಯಕಿಲ್ಲ" ಎಂದು ಸ್ಪಷ್ಟೋಕ್ತಿ ನುಡಿದಳು.

ಮಂಗಳೆಯ ಈ ಉತ್ತರ ನರಸಮ್ಮನನ್ನು ಹತಾಶಗೊಳಿಸಿತು. ಆದರೂ ಅಷ್ಟಕ್ಕೇ ಬಿಡದೆ, "ಅದ್ಯಾಕೆ ಆಗೊಲ್ಲೆ?" ಎಂದು ಪುನಃ ಕೆದಕಿದಳು. ಆ ಪ್ರಶ್ನೆಗೆ ಏನುತ್ತರ ಹೇಳಬೇಕೊ ಇನ್ನೂ ಬಾಲೆಯಾದ ಮಂಗಳೆಗೆ ತಿಳಿಯದಾಯಿತು. ಕೆನ್ನೆ ಉಬ್ಬಿಸಿಕೊಂಡು, ತುಟಿ ಬಿರುವುತ್ತಾ, "ಯಾ–ಕೋ..." ಎಂದು ಮಾತ್ರ ಉಸುರಿದಳು. ಅವಳು ಸಹಜವಾಗಿ ಹಾಗೆ ನುಡಿದಾಗ ನರಸಮ್ಮನಿಗೂ ನಗುಬಂದಿತು. ನಗುತ್ತಲೇ, "ಅವನಂತಾ ಗಂಡ ಸಿಕ್ಕಬೇಕಾದರೆ ನೀ ಪುಣ್ಯ ಮಾಡಿದ್ದೆ" ಎಂದು ನುಡಿದು ಪರಿಹಾಸ್ಯದಲ್ಲೇ ಮಾತು ತೇಲಿಸಿದಳು. ಮಂಗಳೆಯ ಉತ್ತರದಿಂದ ಅವಳ ಚಿತ್ತ ಕಹಿಯಾದರೂ "ಇನ್ನೂ ಅರೀದ ಮೊಗ. ಯೇನಂತೆ ಈಗ್ಲೇ ಸರೋದದ್ದು?.... ಬೆಳೆದು ದೊಡ್ಡೋಳಾಗ್ಲಿ. ಒಪ್ಪಿಕೊಂಡೇ ಒಪ್ಪಕೊತ್ತಾಳೆ" ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು.

ಸ್ವಲ್ಪ ಹೊತ್ತಿಗಾಗಲೇ ಗಾಡಿ ಕೊತ್ತೇಗಾಲವನ್ನು ಸೇರಿತು. ಕಾಳಯ್ಯನ ಹೊಸ ಎತ್ತುಗಳು ಎರಡು ಎರಡೂವರೆ ಮೈಲಿಯ ಪ್ರಯಾಣವನ್ನು ಅರ್ಧ ಗಂಟೆಯಲ್ಲೇ ಮುಗಿಸಿದ್ದವು.

ಕಾಳಯ್ಯನ ಮನೆಯ ಮುಂಭಾಗದಲ್ಲಿ ಗಾಡಿ ಬಂದು ನಿಂತಿತು. ತತ್‌ಕ್ಷಣವೇ ಮನೆಯೊಳಗಿನಿಂದ ಚೆಲುವಮ್ಮನ ಮಕ್ಕಳಾದ ಬಸವಾಚಾರಿ ಮತ್ತು ದುರ್ಗಮ್ಮ ಓಡಿಬಂದರು. ದುರ್ಗಮ್ಮ ಸರ್ವಮಂಗಳೆಗಿಂತಲೂ ಆರು ತಿಂಗಳು ಹಿರಿಯಳು. ಬಸವಾಚಾರಿಯ ವಯಸ್ಸು ನಟರಾಜನದಕ್ಕಿಂತ ಸುಮಾರು ಎರಡು ಮೂರು ವರ್ಷ ಅಧಿಕವಾಗಿತ್ತು.

ಬಸವಾಚಾರಿ ನೋಡಲು ಚೆಲುವ. ಸದಾ ಒಂದಲ್ಲ ಒಂದು ಹವ್ಯಾಸಕ್ಕೆ ಅಂಟಿ ಬೀಳುವವ. ಅವನಲ್ಲಿ ಒಂದು ಬಗೆಯ ಭೃಂಗವೃತ್ತಿ ಬೆಳೆದುಬಂದಿತ್ತು. ಒಂದು ಕೆಲಸವನ್ನೂ ನೇರವಾಗಿ ಹಿಡಿದು ಅವನು ಮಾಡಿದ್ದೇ ಇಲ್ಲ. ಈ ಗಳಿಗೆಗೆ ಒಂದು ವಸ್ತು ಅವನ ಚಿತ್ತವನ್ನಾಕರ್ಷಿಸಿದರೆ ಮರುಗಳಿಗೆಗೆ ಆಗಲೇ ಆ ವಸ್ತು ತನ್ನ ಸೆಳೆಯನ್ನು ಕಳೆದುಕೊಂಡು ನೀರಸವಾಗಿ ತೋರುತ್ತಿತ್ತು... ಬಾಲ್ಯದಿಂದಲೂ ಬೆಳೆದು ಬಂದ ಆ ಭೃಂಗವೃತ್ತಿಗೆ

ಸಹಾಯಕವಾಗಿ ತಾಯಿಯೂ ಒಬ್ಬನೇ ಮಗನೆಂದು ಅತಿ ಮುದ್ದಿನಿಂದ ಸಾಕುತ್ತ ಬಂದಿದ್ದಳು. ನರಸಮ್ಮ, ಕಾಳಯ್ಯರಂತೂ ಅವನು ಬೇಡಿದ ವಸ್ತುವನ್ನು ತಮಗೆಷ್ಟು ಶ್ರಮವಾದರೂ ಹೇಗೋ ಹೊಂದಿಸುತ್ತಿದ್ದರು. ಇದರ ಜೊತೆಗೆ ಅವನ ಕಣ್ಣು, ಮೂಗು 'ನೇರವಾಗಿ' ಇದ್ದುದು ಬೇರೆ ಆ ಹುಡುಗನ ತಲೆ ತಿರುಗಿಸಿತ್ತು. ಇದರಿಂದಾಗಿ ಪ್ರೈಮರಿ ವಿದ್ಯಾಭ್ಯಾಸ ಮುಗಿಸುವುದರಲ್ಲಿಯೇ ಬಿ.ಎ. ಮಾಡಿದ ದಣಿವು ತೋರಿ, ಶಾಲೆಗೂ ಅವನ ಮನಸ್ಸನ್ನು ಕೆಲಹೊತ್ತಾದರೂ ಯಾವದಾದರೂ ಒಂದೇ ವಿಷಯದಲ್ಲಿ ನಿಲ್ಲಿಸಲು ಹವಣಿಸುತ್ತಿದ್ದ ಉಪಾಧ್ಯಾಯರಿಗೂ ಆತನಾಗಲೇ ಶರಣು ಹೊಡೆದಿದ್ದ. ಹಾಗೆ ಮಾಡಿದ ಬಳಿಕ ಅವನ ಕೈಮೇಲೆ ಬಿಡುವು ಭಾರವಾಗಿ ಕುಳಿತಂತೆ ತೋರಿತು. ಆದ್ದರಿಂದ ಅಕ್ಷರ ಕಲಿಯುವದನ್ನು ನಿಲ್ಲಿಸಿ ತುಂಟತನದ ಅಭ್ಯಾಸದಲ್ಲಿ ಆತ ತನ್ನ ಜನ್ಮವನ್ನು ಸಾರ್ಥಕಗೊಳಿಸುತ್ತಿದ್ದ. ಈ ಹೊಸ ಕುಶಲ ಕಲೆಗೆ ಅವನ ರೂಪು ಊರಿನ ಪಟಿಂಗ ಹುಡುಗರ ಗುಂಪೂ ಬಹಳವಾಗಿ ಸಹಾಯ ನೀಡಿದ್ದವು.

ಕಲ್ಲಹಳ್ಳಿಯಿಂದ ಗಾಡಿ ಬಂದು ನಿಂತೊಡನೆಯೇ ಆತನೇ ಮೊದಲು ಓಡಿ ಬಂದಿದ್ದ. ಅವನ ಅಜ್ಜಿ ನರಸಮ್ಮ ಕೊತ್ತೇಗಾಲವನ್ನು ಕೆಲವು ದಿನಗಳ ಹಿಂದೆ ಬಿಡುವಾಗ "ಮಂಗ್ಳೇನೂ ಒಂದಿಗೆ ಕರಕೊಂಡು ಬತ್ತೀನಿ" ಎಂದು ಹೇಳಿದ್ದುದೇ ಅದಕ್ಕೆ ಕಾರಣ..... ತನ್ನ ತಂಗಿ ದುರ್ಗಮ್ಮನಿಗಿಂತಲೂ ಮಂಗಳೆಯನ್ನು ಅವನು ಇಷ್ಟಪಡುತ್ತಿದ್ದ. "ಉಬ್ಬಲ್ಲಿ" ಎಂದು ಅವಳನ್ನು ಯಾವಾಗಲೂ ಅವನು ಅಣಕಿಸುತ್ತಿದ್ದುದರಿಂದ ದುರ್ಗಮ್ಮನಿಗೂ ಬಸವಾಚಾರಿಯನ್ನು ಕಂಡರೆ ಅಷ್ಟಕಷ್ಟೆ.

ದುರ್ಗಿಗೆ ಹಲ್ಲು ಸ್ವಲ್ಪ ಉಬ್ಬೇ ಹೌದು. ಬಣ್ಣದಲ್ಲಿ ಕೆಂಪಾಗಿದ್ದರೂ ಉಬ್ಬು ಹಲ್ಲಿನಿಂದ ಅವಳ ಮುಖಕ್ಕಾದ ಅವಲಕ್ಷಣ ಸ್ವಲ್ಪವೂ ಮುಚ್ಚಿರಲಿಲ್ಲ. ಆದರೆ ದುರ್ಗಿ ರೂಪಿನಲ್ಲಿ ಲಕ್ಷಣವಿಲ್ಲದಿದ್ದರೂ ಗುಣದಲ್ಲಿ ಲಕ್ಷಣವಂತೆ. ಅದರಿಂದಲೇ ಮಂಗಳೆ ಕೊತ್ತೇಗಾಲಕ್ಕೆ ಬಂದ ಎರಡೇ ದಿನಕ್ಕೆ ಅವಳನ್ನು ಒಗ್ಗಿಬಿಟ್ಟಿದ್ದಳು. ಬಸವಾಚಾರಿಯ ತುಂಟಾಟ ಅವಳಿಗೆ ಕೊಂಚವೂ ಇಷ್ಟವಾಗಲಿಲ್ಲ.

ಒಂದು ದಿನ ದುರ್ಗಿ ಮಂಗಳೆಯೊಡನೆ ಮನೆಯ ಜಗುಲಿಯ ಮೇಲೆ ಆಡುತ್ತ ಕುಳಿತಿದ್ದಳು. ಕಾಚಿ ಎಲೆಗಳನ್ನು ಮುದುಡಿ ತೊಟ್ಟಿಗೆ ಸ್ವಲ್ಪ ದೂರದಲ್ಲಿ ಜಿಗಟಿ ಹಾಕಿ ಮಂಗಳೆಗೆ ಅದನ್ನು ತೋರುತ್ತಾ "ನೋಡೂ....ಚಳತುಂಬುs !" ಎನ್ನುವಳು. ನಿಜವಾಗಿಯೂ ಅದು ಹೆಂಗಸರು ಕಿವಿಯಿಂದ ಜೋತುಬಿಡುವ ಬಂಗಾರದ ಜುಮುಕಿಯನ್ನೇ ವಿಶೇಷವಾಗಿ ಹೋಲುತ್ತಿದ್ದಿತು. "ದಿಟ ಕನಾ ದುರ್ಗಿ. ಚಳತುಂಬಿನ ಅಂಗೆ ಅದೆ" ಎಂದು ಕುತೂಹಲದಿಂದ ದುರ್ಗಿಯ ಕೈ ಚಳಕವನ್ನೇ ನಿರುಕಿಸುತ್ತಾ ಕುಳಿತಳು ಮಂಗಳೆ.

ಕಾಚಿ ಎಲೆಯಿಂದ ಹೀಗೆ ಚಳತುಂಬುಮಾಡಿ ತೋರಿದ ಮೇಲೆ ದುರ್ಗಿ ಆ ಎಲೆಯ ಹಿಂದಿನ ಉದ್ದನೆಯ ದಂಟನ್ನು ಎಲ್ಲೂ ಕಿತ್ತು ಹೋಗದಂತೆ ಅಷ್ಟಷ್ಟು ದೂರಕ್ಕೆ ಕುಶಲತೆಯಿಂದ ಮುರಿಯುತ್ತಾ, ಜುಮುಕಿಯ ಜೊತೆಗೆ ಹೆಂಗಸರು ಬೆಂಡೋಲೆಯಿಂದ ಹಿಂದಕ್ಕೆ ಕೂದಲೆಳೆಗಳಿಗೆ ಸಿಕ್ಕಿಸುವ 'ಓಲೆಸರ' ಮಾಡಿದಳು. ಅದನ್ನು ತನ್ನ ಕಿವಿಯಿಂದ ಹಿಂದಕ್ಕೆ ನಾಜೂಕಾಗಿ ಹಿಡಿದು ತೋರಿಯೂ ತೋರಿದಳು. ಹಿಗ್ಗಿನಿಂದ ಮಂಗಳೆ ಚಪ್ಪಾಳೆ ತಟ್ಟಿದಳು.

ಅಷ್ಟರಲ್ಲಿ ಎಲ್ಲೋ ಹೊರಗೆ ಹೋಗಿದ್ದ ಬಸವಾಚಾರಿ ಬಂದವನು ತಾನೂ ಆಟದಲ್ಲಿ ಕೂಡಿಕೊಳ್ಳಲು ಬಂದ. ಜುಮುಕಿಯನ್ನೂ, ಓಲೆ ಸರವನ್ನೂ ತನಗೆ ಕೊಡೆಂದು ಕೇಳಿದ.

ತನ್ನನ್ನು ಬೆಳಗಿನಿಂದಲೂ ಬಸವಾಚಾರಿ ಅಣಕಿಸುತ್ತಿದ್ದುದನ್ನೇ ಮನದಲ್ಲಿಟ್ಟುಕೊಂಡು ಆ ಹುಡುಗಿ, "ಓಗು. ನೀ ಆಟಕ್ಕೆ ಬರೋದು ಬ್ಯಾಡ...ನಾ ತುಂಬುವಾಲೆ ಸರ ಕೊಡೋದೂ ಇಲ್ಲ" ಎಂದು ನಿಖರವಾಗಿ ಹೇಳಿಬಿಟ್ಟಳು.

ಬಸವಾಚಾರಿಗೆ ವಯಸ್ಸಾಗಿದ್ದರೂ ಇನ್ನೂ ವಿಪರೀತ 'ಹುಡುಗು'. ತಾನು ಯಾರಿಗೂ ಏತರಲ್ಲೂ ಸೋಲಬಾರದೆಂಬ ಹಟ. ತಾನು ಕೇಳಿದ ಒಡನೆಯೇ ಆ ಕಾಚಿಯ ಆಭರಣಗಳನ್ನು ಕೊಡದೇ ಹೋದಳಲ್ಲಾ ತಂಗಿ, ಎಂದು ಬಹಳ ಕೋಪ ಬಂತು. ರಪರಪನೆ ಹೆಜ್ಜೆ ಹಾಕುತ್ತಾ ಹತ್ತಿರ ಬಂದವನೇ ಅವಳ ಕೈಗಳಿಂದವನ್ನು ಜಗ್ಗಿಸಿ ಕಿತ್ತುಕೊಂಡ. ಅವನು ಕಿತ್ತ ರಭಸಕ್ಕೆ ಆ 'ವಡವೆ'ಗಳು ಹರಿದು ತುಂಡಾದವು.

ದುರ್ಗಿ ಅಳುವುದಕ್ಕಾರಂಭಿಸಿದಳು.

ಒಳಗಿನಿಂದ ತಾಯಿ ಚೆಲುವಮ್ಮ-ರಾಗಿ ಹಸಿಟ್ಟು ಒಂದರಿ ಆಡುತ್ತಿದ್ದವಳು ಹಾಗೇ ಎದ್ದು ಬರುತ್ತಾ, "ಅದ್ಯಾಕೇ ದುರ್ಗಿ, ಅಂಗೆ ಹೊಡಕೊತ್ತಿ?.... ಯೇನಾಯ್ತು?" ಎಂದು ಕೇಳಿದಳು.

"ನೋಡವ್ವ...ಊ, ಊ...ಮಂತೆ ನಾನೂ ಮಂಗ್ಳೇನೂ ಆಡ್ತಿದ್ದೊ.... ಊ,ಊ....ನಾನೂ ಕಾಚಿ ಎಲೇಲಿ ಚಳತುಂಬ್ನೂ ವಾಲೆ ಸರಾನೂ ಮಾಡಿದ್ದೆ ಕನವ್ವಾ" ಎಂದು ಒಂದೇ ಉಸುರಿಗೆ ಹೇಳಿ, ಆಮೇಲೆ ಬಸವಾಚಾರಿಯ ಕಡೆ ಕೈಮಾಡಿ ತೋರುತ್ತಾ "ಆಗ ಇವ್ನು ಬಂದುs.... 'ಅದ್ನ ನಂಗೆ ಕೊಡು' ಅಂದ, ನಾ ಕೊಡಕ್ಕಿಲ್ಲ ಅಂದೆ. ಅದ್ಕೆ ನನ್ನ ಕಯ್ನಿಂದ ಅದ್ನ ಜಗ್ಸಿ ಕಿತ್ತಾಕಿಬುಟ್ಟ" ಎಂದು ಹೇಳುವಾಗ ಇನ್ನೂ ಅಳುತ್ತಲೇ ಇದ್ದಳು.

ಚೆಲುವಮ್ಮ ತನ್ನ ಸೀರೆಯ ಸೆರಗಿನಿಂದ ದುರ್ಗಿಯ ಕಣ್ಣೀರೊತ್ತುತ್ತಾ, "ಅವ್ನ ಚೇಷ್ಟೆ ಯಾವತ್ತೂ ಇಂಗೆ. ಇಲ್ಲಿ ಬಾ, ಅವ್ನ ನಡ ಮುರೀತೀನಿ" ಎಂದು ಸಮಾಧಾನ ಹೇಳಿ ಮುದ್ದಿಸಿ ಒಳಗೆ ಕರೆದುಕೊಂಡು ಹೋದಳು.

ಆದರೆ ತನ್ನ ನಡ ಮುರಿಯದೆ ಸುಭದ್ರವಾಗೇ ಉಳಿಯುವದೆಂದು ಬಸವಚಾರಿಗೆ ಚೆನ್ನಾಗಿ ಗೊತ್ತು. ತಾಯಿಯದು ಹುಸಿ ಬೆದರಿಕೆ, ಮಳೆ ತಾರದ ಗುಡುಗಿನ ಅಬ್ಬರ ಎಂದು ಅವನು ಎಂದೋ ತಿಳಿದಿದ್ದ.

ಹಾಗೇ ಆಡುತ್ತ ಯುಗಾದಿ ಬಂದಿತು.

ಅಂದು ಕಾಳಯ್ಯನ ಮನೆಯಲ್ಲಿ ಎಂದೂ ಇಲ್ಲದ ಸಡಗರ.

ಎಲ್ಲರೂ ಮಿಂದು ಹೊಸ ಉಡುಪು ಹಾಕಿದರು. ನರಸಮ್ಮನೂ ಪಕ್ಷಪಾತ ಮಾಡದೆ ತನ್ನ ಪತಿಗೆ ಹೇಳಿ ಹುಣಸೂರಿನಿಂದ ದುರ್ಗಿಗೆ ತರುವಂತೆ ಮಂಗಳೆಗೂ ಒಂದು ಹೊಸ ಕಿರಿಗೆ ತರಿಸಿದ್ದಳು. ಸ್ವಭಾವತಃ ಜಿಪುಣನಾದ ಕಾಳಾಚಾರಿ 'ಈಗ ನನ್ನ ತಾವು ಓಟು ದುಡ್ಡಿಲ್ಲ' ಎಂದು ಜಾರಿಕೊಳ್ಳಲು ಪ್ರಯತ್ನಪಟ್ಟಿದ್ದ. ಆದರೆ ಮನಸ್ಸು ಒಂದು ನಿರ್ಧಾರಕ್ಕೆ ಬಂದ ಬಳಿಕ ಸೋಲೊಪ್ಪಿ ಸುಮ್ಮನಿರುವ ಸ್ವಭಾವದವಳಲ್ಲ ನರಸಮ್ಮ. "ಯಾವ ಸೀಮೆ ತಿರುಕಾಟವಾ ಇದು. ಆ ಪಾಯಿಗ್ಯಾರಾ ತಂದುಕೊಡೋರು? ಓಗಿ ಅದಕೂ ಒಂದು ಕಿರಿಗೆ ತಗೊಂಬನ್ನಿ," ಎಂದು ಗಂಡನನ್ನು ಒತ್ತಾಯಪಡಿಸಿದ್ದಳು.

ಕಿರಿಗೆಯುಡಿಸಿ ಮಂಗಳೆಗೂ ದುರ್ಗಿಗೂ ತಾನೇ ಮೊಗ್ಗಿನ ಜಡೆ ಹಾಕಿದಳು ನರಸಮ್ಮ. ಮುಂದಲೆಗೆ ಬೈತಲೆಯ ಇಕ್ಕೆಲಗಳಲ್ಲಿ ಮಲ್ಲಿಗೆ ಮೊಗ್ಗಿನಲ್ಲೇ ಸೂರ್ಯ ಚಂದ್ರರನ್ನು ನಾಜೂಕಾಗಿ ಬಿಡಿಸಿದಳು. ಅನಂತರ ಹಣೆಯ ಮಧ್ಯಕ್ಕೆ ಸರಿಯಾಗಿ ತಿಲಕವನ್ನಿಟ್ಟು ಕೆನ್ನೆಗಳಿಗೆ ದೃಷ್ಟಿಯ ಬೊಟ್ಟುಗಳನ್ನಿಟ್ಟಳು.

ಇಬ್ಬರಿಗೂ ಒಂದೇ ಅಲಂಕಾರ. ಆದರೆ ಅಲಂಕಾರ ಮಾಡಿದ ಅವರಿಬ್ಬರೂ ಬೇರೆ ಬೇರೆ....ಅದರಿಂದಾಗಿ ಅಲಂಕಾರದಲ್ಲಿ ಮಂಗಳೇ ಶೋಭಿಸಿದಷ್ಟು ದುರ್ಗಿ ಶೋಭಿಸಲಿಲ್ಲ.

ಇಲ್ಲದ ರೂಪನ್ನು ಅಲಂಕಾರ ತರಲಾರದು. ಇದ್ದ ರೂಪಿಗೆ ಪುಟವಿಟ್ಟು ಹೆಚ್ಚು ಪ್ರಕಾಶಗೊಳಿಸುವುದಷ್ಟೆ ಅದರ ಕೆಲಸ.... ಆದರೂ ದುರ್ಗಿಗೆ ಆ ಅಲಂಕಾರದಿಂದ ಬಹಳ ಸಹಾಯವಾಗಿತ್ತು. ಬಿಡಿ ದಿನಗಳಲ್ಲಿ ಅಷ್ಟು ಲಕ್ಷಣವಾಗಿ ಕಾಣದ ಅವಳ ರೂಪೂ ಇಂದು ಆ ಅಲಂಕಾರದ ಡೌಲಿನಲ್ಲಿ ಇನ್ನೇನಿಲ್ಲದಿದ್ದರೂ ತನ್ನ ಅವಲಕ್ಷಣವನ್ನು ಬಹುಮಟ್ಟಿಗೆ ಕಳೆದುಕೊಂಡಂತಿತ್ತು. ಜಡೆಬಿಲ್ಲೆ ಹಾಕಲು ಬಂದ ಚೆಲುವಮ್ಮನೂ, "ಅವ್ವೀ....ನನ್ನ ಮಗಳು ಏಟು ಚೆಂದಾಗಿ ಕಾಣ್ತಾಳವ್ವ ಈ ಜಿನಾ–" ಎನ್ನುತ್ತಾ ದುರ್ಗಿಯ ಮುಖದ ಮುಂದೆ ಕೈಗಳನ್ನು ನೀವಾಳಿಸಿ, ತನ್ನ ತಲೆಗೆ ಒತ್ತುತ್ತ ಲಟಿಕೆ ತೆಗೆದಳು. ನಟನಟ ಎಂದು ಅವಳ ಕೈಬೆರಳುಗಳು ಸದ್ದು ಮಾಡಿದಾಗ "ಏಟು ದಿಷ್ಟಿ ಬಡದು ಬುಟ್ಟದವ್ವಾ ನನ್ನ ಕಂದನ್ಗೆ...." ಎಂದು ನಗುತ್ತಾ ತಾನು ಕಟ್ಟಿಟ್ಟಿದ್ದ ಮಲ್ಲಿಗೆ ಹಾರವನ್ನು ತೆಗೆದುಕೊಂಡು ಹೋಗಿ ನಡು ಮನೆಯ ಗೋಡೆಗೆ ತೂಗು ಹಾಕಿದ್ದ ಕಾಳಿಕಾಮ್ಮನವರ ಪಟಕ್ಕೆ ಕಟ್ಟಿದಳು.

ಚೆಲುವಮ್ಮ ಹೂ ಮುಡಿದುಕೊಳ್ಳದೆ ಬರಿ ತಲೆಯಲ್ಲಿರುವುದನ್ನು ಕಂಡು ಮಂಗಳೆ ನರಸಮ್ಮನನ್ನು ಕೇಳಿದಳು.

"ಯಾಕೆ ದೊಡ್ಡವ್ವ, ಅಕ್ಕ ಹೂವ್ನೇ ಮೊಡಕೊಳಾಕಿಲ್ಲ....?"

ನರಸಮ್ಮನ ಬಾಯಿ ಕಟ್ಟಿತು. ಒಳಗಿನಾಳದಿಂದ ಉದ್ವೇಗ ಒತ್ತಿ ಬಂದು ಉತ್ತರ ಹೇಳಲು ಮಾತೇ ಹೊರಡದಾಯಿತು. ಅವಳ ಕಣ್ಣಂಚಿನಲ್ಲಿ ನೀರಿನ ಸೆಲೆ ಒಡೆಯಿತು. ತನ್ನ ಪ್ರಶ್ನೆಯಿಂದ ನರಸಮ್ಮನಿಗಾದ ದುಃಖದ ಅರಿವಿಲ್ಲದೆ, "ಅಕ್ಕನ್ಗೂ ಮೊಗ್ಗಿನ ಜಡೆ ಆಕ್ಕೊಡು ದೊಡ್ಡವ್ವ.... ಆಕು ದೊಡ್ಡವ್ವ...." ಎಂದು ಕಾಡಲು ಉಪಕ್ರಮಿಸಿದಳು ಮಂಗಳೆ.

ಅವಳ ಮಾತುಗಳು ನರಸಮ್ಮನಿಗೆ ಕಣ್ಣೀರು ಹರಿಸಿದಂತೆ ಚೆಲುವಮ್ಮನಿಗೂ ಅಳುವನ್ನು ತಂದವು... 'ತಾನು ಪತಿಯನ್ನು ಕಳೆದುಕೊಂಡ ನಿರ್ಭಾಗ್ಯ ವಿಧವೆ. ಆ ಕಾರಣದಿಂದ ತಾನು ಹೂ ಮುಡಿಯುವಂತಿಲ್ಲ' ಎಂದು ಹೇಳಿದರೆ ಪಾಪ! ಆ ಪುಟ್ಟ ಹುಡುಗಿಗೆ ಅರ್ಥವಾಗುವುದಾದರೂ ಹೇಗೆ?–ಎಂದು ತಹ ತಹಪಡುತ್ತಾ ಕಣ್ಣೀರನ್ನು ಬೆರಳಿನ ತುದಿಯಿಂದ ಚಿಮ್ಮಿದಳು ಚೆಲುವಮ್ಮ.

ಚೆಲುವಮ್ಮನ ಪತಿ ತೀರಿಕೊಂಡು ಒಂದು ವರ್ಷವೂ ಕಳೆದಿರಲಿಲ್ಲ. ಅವಳನ್ನು ವಿರಾಜಪೇಟೆಯ ಸಿಂಗಾಚಾರಿಗೆ ಕೊಟ್ಟಿತ್ತು. ಅವಳನ್ನು ಬಹು ಚೆನ್ನಾಗಿ ನೋಡಿಕೊಂಡಿದ್ದ. ಕಳೆದ ದಿನಗಳ 'ಐಭೋಗ'ದ ಬಾಳು ಮತ್ತೆ ಚೆಲುವಮ್ಮನ ಸ್ಮೃತಿಪಟಲದ ಮೇಲೆ ಮೂಡಿದಂತಾಯಿತು. ಆ ನೆನಪನ್ನೇ ಮೆಲಕು ಹಾಕುತ್ತಿರುವಂತೆ ಉಂಟಾದ ಸಂತಸ ಮರುಗಳಿಗೆಗೇ ಮಾಯವಾಯಿತು. ಕೊಡಗಿನ ಆ ಸುಂದರ ಸೃಷ್ಟಿ, ಅಲ್ಲಿ ಪತಿಯೊಡನೆ ತಾನು ಕಳೆದ ಸುಖದ ದಿನಗಳ ಸ್ಮರಣೆ ಇವು ಚೆಲುವಮ್ಮನ ವೈಧವ್ಯದ ಕೊರಗನ್ನು ಮತ್ತೂ ತೀವ್ರಗೊಳಿಸಿದವು. ಕಣ್ಣೀರು ಸುರಿಸುತ್ತಾ ಅವಳು ಅಡುಗೆ ಮನೆಯನ್ನು ಹೊಕ್ಕಳು.

ಮಗಳು ರೋದಿಸುವುದನ್ನು ಕಂಡ ನರಸಮ್ಮನ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಯಿತು. ಅವಳು ಮಂಗಳೆಯನ್ನುದ್ದೇಶಿಸಿ, "ಇಲ್ಲ ಕನ ಮಂಗ್ಳೀ, ನಿನ್ನಕ್ಕ ಊವು ಮೊಡಿಯೋ ಅಂಗೇ ಇಲ್ಲ."

"ಯಾಕೆ ದೊಡ್ಡವ್ವಾ?" ಏನೂ ಅರ್ಥವಾಗದೆ ಕೇಳಿದಳು ಮಂಗಳೆ.

'ಅವ್ಳ ಗಂಡ ತೀರ್ಕೋದ್ನಲ್ಲಾ ಅದ್ಕೆ' ಎಂದು ನರಸಮ್ಮ ತಿಳಿಯಹೇಳಿದಳು.

ಗಂಡ ಗತಿಸಿದರೆ ಹೆಂಡತಿಯಾದವಳು ಏಕೆ ಹೂ ಮುಡಿಯಬಾರದು ಎಂಬುದರ ರಹಸ್ಯ ಮಂಗಳೆಯ ಬಾಲಬುದ್ಧಿಗೆ ಎಟುಕದ ವಿಷಯವಾಗಿತ್ತು.

ಅವಳು ಚಿಂತಿಸುತ್ತ ಕುಳಿತಳು.

ಅಷ್ಟರಲ್ಲಿ ಬಸವಾಚಾರಿ ಅಳುತ್ತಾ ಓಡಿಬಂದ.

ಎಲ್ಲರೂ ಅವನ ಕಡೆ ತಿರುಗಿದರು. ಚೆಲುವಮ್ಮನೂ ಅಡಿಗೆ ಮನೆಯಿಂದ ಹೊರಗೆ ಬಂದು ಮಗ ಅಳುತ್ತಿರುವ ಕಾರಣವನ್ನು ತಿಳಿಯಲು ಕಾತರಳಾದಳು. ಬಸವಾಚಾರಿ ನೇರವಾಗಿ ನರಸಮ್ಮನ ಹತ್ತಿರ ಬಂದನು, "ನೋಡು ಹೆತ್ತವ್ವ, ವರ್ಸಕ್ಕೊಂದು ಉಗಾದಿ ಹಬ್ಬ ಅಂತ ನಾವೆಲ್ಲ ಉಡುಗರು ಸೇರಿಕೊಂಡು 'ಲಗ್ಗೆ ಚೆಂಡು' ಆಡ್ತಿದ್ವೊ. ಆಗ ಚಿಕ್ಕಯ್ಯ ಎಲ್ಲೊ ಒಯ್ತಿದ್ದೋನುs ತಾನೂ ಆಡ್ತೀನಿ ಅಂತ ಬಂದುs ಚೆಂಡಿನಿಂದ ಎತ್ತಿ ನನ್ನ ಬೆನ್ನಿಗೆ ಬಾರಿಸಿಬುಟ್ಟ" ಎಂದು ರೋದನವನ್ನು ಹೆಚ್ಚಿಸಿದ.

"ಮಂತೆ ಯುದ್ಧದಲ್ಲಿ ಸೋದರ ಮಾವ್ನಾ ಅಂತ ಆಟಕ್ಕೆ ನಿಂತಮ್ಯಾಲೆ ಒಡೀದೆ?" ಒಳಗೆ ಬರುತ್ತಾ ಸುಬ್ಬರಾಯಿ ಹೇಳಿದ.

"ಯೇನೊ ಸುಬ್ಬರಾಯಿ? ಏಟು ಒರಟೋ ನೀನು?" ಎಂದು ತಮ್ಮನನ್ನ ಗದರಿಸಿಕೊಂಡು ಮೊಮ್ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿ ಆದರಿಸುತ್ತಾ "ಸುಮ್ಕಿರು ನನ್ನ ಕಂದ. ಅಳಬ್ಯಾಡ. ಸುದ್ದ ಒರಟು ಅವ್ನು. ಇನ್ನುಮ್ಯಾಲೆ ಅವ್ನ ತಂಟೆಯೇ ಬ್ಯಾಡ. ಅವ್ನ ಸಂಗಡ ಆಡಾಕೇ ಓಗಬ್ಯಾಡ. ಆಗ ಯಾರ್ನ ಒಡದಾನು ಅವ್ನು?" ಎಂದು ಸಮಾಧಾನಪಡಿಸಿದಳು.

ಇಷ್ಟರಲ್ಲಿ ಮಂಗಳೆ, ದುರ್ಗಿಯರ ಶೃಂಗಾರ ಮುಗಿದಿದ್ದುದರಿಂದ ಚೆಲುವಮ್ಮ ಅವರನ್ನುದ್ದೇಶಿಸಿ, "ಇದೇನಾ ಇಂಗೆ ಕುಂತುಬುಟ್ಟರಿ?.... ಯೇಳಿ, ಯೇಳಿ... ಎದ್ದೋಗಿs ಆಜುಬಾಜು ಮನೆಯೋರಿಗೆಲ್ಲಾ ತೋರಿಕಂಬನ್ನಿ ನಿಮ್ಮ ಸಿಸ್ತು, ಸಿಂಗಾರವಾ" ಎಂದು ಸಲಹೆ ಮಾಡಿದಳು.

ಹುಡುಗಿಯರು ಎದ್ದು ಹೋಗಿ ನೆರೆಹೊರೆಯ ಮನೆಯವರಿಗೆ ತಮ್ಮ ಅಲಂಕಾರವನ್ನು ತೋರಿಬರುವದರಲ್ಲಿ ಒಬ್ಬಟ್ಟನ್ನೂ ಪಾಯಸವನ್ನೂ ಅಟ್ಟಿದ್ದಳು.

ಕಾಳಯ್ಯನ ಪಂಕ್ತಿಗೇ ಮಕ್ಕಳೂ ಊಟಕ್ಕೆ ಕುಳಿತರು.

ಪಾಯಸ ಸೊರೆಯುತ್ತಾ, ಸುಬ್ಬರಾಯ ಲಗ್ಗೆ–ಚೆಂಡು ಆಡುವಾಗ ತನಗೆ ಬೇಕೆಂದು ಹೇಗೆ ಹೊಡೆದನೆಂಬುದನ್ನು ವಿವರಿಸಿ ಹೇಳಿದ ಬಸವಾಚಾರಿ.

ತಾನೂ ಒಬ್ಬಟ್ಟನ್ನು ಪಾಯಸದಲ್ಲಿ ಅದ್ದಿ ತಿನ್ನುತ್ತಾ ಕಾಳಯ್ಯ, "ಚೆಂದಾಯುಕ್ತನ ಬುಡು..... ಅಲ್ಲಾ ಕನೊ ಸುಬ್ರಾಯಿ, ಇಂಗಾದ್ರೆ ಎಂಗೊ ಉದ್ದಾರ ಆಗೋದು ನೀನುs?– ಒಬ್ಬರ ಸಂಗಡ ಕೂಡಾಕಿಲ್ಲ. ಕೂಡಿದರೆ ಕಾದಿ ಕಾದಿ ಇಡಾದು !.... ಜಗ್ಳ – ಜಗ್ಳ....ಅಟ–

ಅಟ....ಸಿವನೆ, ನಿನ್ನ ತಾವು ಬೇಯಾದು ಬೋ ಕಸ್ಟ," ಎಂದು ಮುಖ ಮುರಿಯುವಂತೆ ಸುಬ್ಬರಾಯಿಯ ಸ್ವಭಾವವನ್ನೆತ್ತಿ ಹಾಕುತ್ತಾ ನುಡಿದ.

ಸುಬ್ಬರಾಯಿ ಊಟಮಾಡುತ್ತಾ ತಲೆ ತಗ್ಗಿಸಿದವನು ಊಟ ಮುಗಿಯುವವರೆಗೂ ಅದನ್ನು ಮೇಲೆತ್ತಲೇ ಇಲ್ಲ. ಅವನಿಗೆ ಬಹಳ ಕೋಪ ಬಂದಿತ್ತು.

ಆ ರಾತ್ರಿ ನರಸಮ್ಮನೂ ಚೆಲುವಮ್ಮನೂ ಎಷ್ಟು ವಿಧದಲ್ಲಿ ಹೇಳಿದರೂ ಕೇಳದೆ, ಊಟಮಾಡಲು ನಿರಾಕರಿಸಿ ತನ್ನ ಮನೆಗೆ ಮಲಗಲು ತೆರಳಿದ.

ನರಸಮ್ಮನ ತೌರುಮನೆ ಕೊತ್ತೇಗಾಲದಲ್ಲೇ ಇದ್ದಿತು. ಆದರೆ ಅವಳ ತಂದೆ ತಾಯಿಯರು ಮೊನ್ನೆ ಮೊನ್ನೆ ತೀರಿಕೊಂಡಿದ್ದರು. ಐದು ಎಕರೆಯ ಒಂದು ತೋಟ, ಹನ್ನೆರಡು ಹದಿಮೂರು ಎಕರೆ ಹೊಲ, ಹತ್ತಿಪ್ಪತ್ತು ರಾಸು, ದನಕರು – ಈ ಆಸ್ತಿಯನ್ನವರು ಸುಬ್ಬರಾಯಿಗೆ ಬಿಟ್ಟುಹೋಗಿದ್ದರೂ ತನ್ನ ಮನೆಯ ಒಂಟಿ ಜೀವನ ಅವನಿಗೆ ಸಹ್ಯವಾಗಿರಲಿಲ್ಲ. ಇನ್ನೂ ಚಿಕ್ಕವನಾದ ಅವನು ಅಡುಗೆಯನ್ನು ಮಾಡುತ್ತಾ ಮನೆಯಲ್ಲಿ ಒಬ್ಬನೆ ಕೂರುವುದಾದರೂ ಹೇಗೆ?.... ಅವನು ತೊಂದರೆಪಡುವುದನ್ನು ನೋಡಲಾರದೆ ಕಾಳಾಚಾರಿಯೇ ಹೇಳಿದ್ದ: "ನೀ ಲಗ್ಣ ಆಗಿ ಇಟ್ಟು ಬೇಯಿಸಿ ಹಾಕಾಕೆ ಹಟ್ಟೀಗೆ ಒಂದು ಹೆಣ್ಣು ಬರೋತನಕ, ನಮ್ಮನೇಲೆ ಉಂಡುಕೊಂಡು ಇರು," ಎಂದು. ಆಗಿನಿಂದ ಸುಬ್ಬರಾಯಿಯ ಊಟೋಪಚಾರ ವೆಲ್ಲ ಅಕ್ಕನ ಮನೆಯಲ್ಲೇ ನಡೆದುಹೋಗುತ್ತಿತ್ತು. ರಾತ್ರಿಯ ವೇಳೆ ಮಾತ್ರ ಮಲಗಲು ಮನೆಗೆ ಹೋಗುತ್ತಿದ್ದ. ಈಗೆರಡು ದಿನ ಕಾಳಯ್ಯನ ಮಾತಿಗೆ ಮುನಿಸಿಕೊಂಡು ಮನೆಗೆ ಊಟಕ್ಕೇ ಬರದೆ ತಾನೇ ಬೇಯಿಸಿಕೊಳ್ಳುತ್ತಿದ್ದ. ಅದು ನರಸಮ್ಮನನ್ನೂ ಚೆಲುವಮ್ಮನನ್ನೂ ಬಹುವಾಗಿ ಖೇದಗೊಳಿಸಿತು.

ಮೂರನೆಯ ದಿನ ಅವರಿಬ್ಬರೂ ಅವನನ್ನು ಊಟಕ್ಕೆ ಕರೆಯಲು ತಾವೇ ಹೋಗಬೇಕಾಯಿತು. ಬಹಳಕಾಲ ಬರುವುದಿಲ್ಲವೆಂದು ಚಂಡಿ ಹಿಡಿದ ಸುಬ್ಬರಾಯಿ. ಅವನ ಮೊಂಡ ಸ್ವಭಾವವನ್ನರಿತ ನರಸಮ್ಮ ಅವನನ್ನು ಒಪ್ಪಿಸಿ ಊಟಕ್ಕೆ ಕರೆದುತರಲು ತಿಳಿದ ಚಾತುರ್ಯವನ್ನೆಲ್ಲಾ ಉಪಯೋಗಿಸಬೇಕಾಯಿತು.

ಆದರೆ ಒಂದು ಬಾರಿ ಊಟಮಾಡಿದ ಮೇಲೆ ಸುಬ್ಬರಾಯಿ ಎಂದಿನಂತೆ ಯಾರಿಂದಲೂ ಹೇಳಿಸಿಕೊಳ್ಳದೆ ಊಟಕ್ಕೆ ಬರಲು ಆರಂಭಿಸಿದ. "ಉಚ್ಚು ಮೂದೇವಿ" ಎಂದು ಕಾಳಯ್ಯನೂ ಸುಮ್ಮನಾಗಿಬಿಟ್ಟ.

ಮಾರನೆಯ ಮಧ್ಯಾಹ್ನ ಎಲ್ಲರೂ ಊಟಮಾಡಿ ಕುಳಿತಿದ್ದರು. ಆಗ ನಡುಪ್ರಾಯದ ಬುಂಡೆ ಬೆಸ್ತರ ಹೆಂಗಸೊಬ್ಬಳು "ಹಸರು ಹೂಯಿಸಕೊತ್ತೀರೇನ್ರವ್ವಾ–?" ಎಂದು ಹೊರಗಿನಿಂದ ಕೂಗಿದ ಸದ್ದು ಕೇಳಿತು.

ನರಸಮ್ಮ ಚೆಲುವಮ್ಮನ ಮುಖ ನೋಡಿ, "ಹೂಯಿಸಿಕೊತ್ತೀಯೇನಾ.... ಹೆಸರಾ?.... ಎಂದು ಕೇಳಿದಳು.

"ಹೂಕವ್ವಾ-ಹೂಯಿಸಿಕೊತ್ತೀನಿ," ಎಂದು ಹೇಳಿದ ಚೆಲುವಮ್ಮನ ಧ್ವನಿಯಲ್ಲಿ ಆಸೆ ತುಂಬಿತು.

"ಅದಕ್ಕೇನು ಮುಟ್ಟೋದದಾ, ಹೂಯಿಸಿಕೊಳಾ" ಎಂದು ನರಸಮ್ಮ ಬುಂಡೆ ಬೆಸ್ತರವಳನ್ನು ಕುರಿತು "ಬಾವ್ವಾ, ಬಾ-ಒಳೀಕೆ ಬಾ" ಎಂದು ಕೂಗಿ ಕರೆದಳು.

ಬುಂಡೆ ಬೆಸ್ತರವಳು ಒಳಗೆ ಕುಳಿತು, ಬಟ್ಟಲಿಗೆ ಹಸರನ್ನು ಹಿಂಡಿ ಅದಕ್ಕೆ ಮಸಿಯನ್ನು ಕಲಸುತ್ತಾ, "ಯಾರಿಗೆ ಹಾಕಾನವ್ವಾ ಮೊದ್ಲು....?" ಎಂದಳು.

"ಇವಳಿಗೆ ಹಾಕು" ಎಂದು ನರಸಮ್ಮ ತನ್ನ ಮಗಳ ಕಡೆಗೆ ಬೆಟ್ಟು ಮಾಡಿದಳು. ಬುಂಡೆ ಬೆಸ್ತರವಳು ಚೆಲುವಮ್ಮನನ್ನೇ ದಿಟ್ಟಿಸುತ್ತಾ, "ಕೈ ನೀಡವ್ವ ಒಸಿ" ಎಂದಳು.

ಆಮೇಲೆ ಚೆಲುವಮ್ಮನ ಚಾಚಿದ ಕಯ್ಯನ್ನೇ ನೋಡುತ್ತ, "ಓ ! ಮೊಣಕೈನ ಅತ್ತರ ಎರಡು ಕೈನಾಗೂ ಎಂಡು ಬಾಳೇಕಂಬ ಹುಯ್ಯಿಸಿಕೊಂಡಿದ್ದೀ ಆಗ್ಲೇ?..... ಅದರ ಮುಂಚೋರಿ ಎಡಗೈನಲ್ಲಿ ಒಂದು ಎಸಳು ಮುತ್ತಿನಾರತಿ. ಬಲಗೈನಲ್ಲಿ ಒಂದು ಗೂಡು ಮುತ್ತಿನಾರತಿ ! ಅದರ ಮುಂಚೋರಿಕೆ ಒಂದೊಂದು ಲಿಂಬಿ ಹೂವು !!...." ಎಂದಳು.

"ಊ ಚಿಕ್ಕವಳಾಗಿದ್ನಲ್ಲಾ ಆಗ್ಲೇ ಹುಯ್ಯಿಸಿಕೊಂಡಿದ್ದೇ ಇದ್ನೆಲ್ಲಾ ನಾನು" ಎಂದು ವಿಶದೀಕರಿಸಿದಳು ಚೆಲುವಮ್ಮ.

"ಓ, ಅಂಗವ್ವಾ ಊ ಅಂಗಾರೆ ಮುತ್ತಿನಾರತಿ ಮುಂಚೋರೀಗೆ ಎರಡು ಕೈಗೂ ವೀರಣ್ಣನ ಗದ್ದುಗೆ ಹೂದುಬುಡ್ತೀನಿ" ಎಂದಳು.

"ಊ, ಅಂಗೇ ಮಾಡು.... ಅಮ್ಯಾಕೆ ಗದ್ದುಗೆ ಮುಂಚೋರಿ ಆ ಕಡೆ ಈ ಕಡೆ, ಇಲ್ನೋಡು ನಮ್ಮವ್ವ ಹುಯ್ಯಿಸಿಕೊಂಡಿರೋದು" ಎಂದು ತಾಯಿಯ ಕೈಯಲ್ಲಿದ್ದ ಹಸರು ಚಿತ್ರವನ್ನು ತೋರುತ್ತಾ "ಇದರಂಗೆ ಸಣ್ಣದಾಗಿ ಒಂದೊಂದು ಹುಲಿ ಉಗುರು, ಎಲೆ ಪಿಂಡಿ ಹೂದುಬುಡು" ಎಂದು ಹೇಳಿದಳು ಚೆಲುವಮ್ಮ.

"ಊ, ಅಂಗೇ ಆಗ್ಲಿ. ತಾವ್ವ ಕಯ್ಯಾ" ಎಂದು ಅವಳು ನೀಡಿದ ಕೈಗೆ ಕಡ್ಡಿಯಲ್ಲಿ ಹಸುರನ್ನು ಅದ್ದಿಕೊಂಡು ಸೊಗಸಾದ ರಂಗವಲ್ಲಿಯ ಚಿತ್ರವನ್ನು ಹೋಲುವ ಚಿತ್ರವೊಂದನ್ನು ಬರೆದು "ಇದೇಯಾ ಕನವ್ವಾ ವೀರಣ್ಣನ ಗದ್ದುಗೆ ಅನ್ನಾದೂ....ನೋಡು ನಿಮ್ಮವ್ವನ ಕಯ್ಯನಾಗೆ ಇರಾದಕ್ಕಿಂತ ಚೆಂದಾಗಿ ಬರದಿವ್ನಿ" ಎಂದು ಅಭಿಮಾನದಿಂದ ಹೇಳಿ, ಕಡ್ಡಿಯನ್ನು ಬಟ್ಟಲಿಗೆ

ಹಾಕಿ, ಸೂಜಿಯನ್ನು ತೆಗೆದುಕೊಂಡು ಆ ಚಿತ್ರದ ಹಸುರಿನ ರೇಖೆಗಳ ಮೇಲೆ ಒಂದು ಕಡೆಯಿಂದ ಚುಚ್ಚಿದಳು.

"ಹಸರು ಹೂದಮ್ಯಾಽಹಾಡು ಕಲಿಸೀದಮ್ಮ
ಹಸುಮಕ್ಕಳಿಗ್ಹಾಲಾ ಎರೇದಮ್ಮ...."

ಎಂದು ಹಾಡಲು ಆರಂಭಿಸಿದಳು. ಮಧ್ಯೆ ಮಧ್ಯೆ "ಸೋ–ಸೋ–ಸೋ–ಸೋ" ಎಂದು ರಾಗವಾಗಿ ಸೋಗುಡುತ್ತ ಚುಚ್ಚಿದಳು.

ಚುಚ್ಚುವ ಸೂಜಿಯ ನೋವು ಮರೆಯಲೆಂದು ಅವಳು ಹಾಗೆ ಸೋಗುಡುವುದು ಮತ್ತು ಹಾಡುವುದು ! ಇದರೊಡನೆ ಚೆಲುವಮ್ಮನ 'ಸ್ ...! ಅಹಹಹ' ಬೇರೆ ಸೇರುತ್ತಿದ್ದಿತು.

ಚೆಲುವಮ್ಮನಿಗೆ ಪೂರ್ತಿ ಚುಚ್ಚಿ ಮುಗಿದ ಬಳಿಕ ಬುಂಡೆ ಬೆಸ್ತರವಳು ಕೇಳಿದಳು :

"ಇನ್ನಾರಾರ ಅವರೇನವ್ವಾ?"

ನರಸಮ್ಮ ಸ್ವಲ್ಪಕಾಲ ಯೋಚಿಸಿ "ಮಂಗ್ಲೆ, ನೀನೂ ಆಕಿಸಿಕೊಂಡು ಬುಡು" ಎಂದಳು.

ಹುಡುಗಿ ಮಂಗಳೆ ಹೆಣ್ಣಲ್ಲವೇ?–ಕಯ್ಯಲ್ಲಿ 'ಚಿತ್ತಾರ' ಬರೆಸಿಕೊಂಡು 'ಅಟಾಜ'ನಿಗೂ, ಅಜ್ಜಿ, ಅವ್ವ, ಅಪ್ಪ ಎಲ್ಲರಿಗೂ ತೋರಿಸಬಹುದೆಂದು ಅವಳು ಹಿಗ್ಗಿದಳು.

ಆದರೆ ನೋವಾಗುವದಲ್ಲಾ? ಆದರೇನು? ಆ ನೋವು ತಿಂದ ಬಳಿಕ ಕೈ ಮೇಲೆ ಸುಂದರವಾದ ಮೋಹಕವಾದ, ಎಲ್ಲರ ಮನವನ್ನೂ ಆಕರ್ಷಿಸುವ ಚಿತ್ರ ಮೂಡುವದಿಲ್ಲವೇ?...

ಸುಖ ತರುವ ನೋವಿಗೆ ಹೆಣ್ಣು ಎಂದೂ ಹೆದರುವುದಿಲ್ಲ, ಹೆದರಿದರೆ ಮುಂದುವರಿಯುವದಾದರೂ ಹೇಗೆ? ಮಂಗಳೆ ಹಸರು ಹುಯ್ಯಿಸಿಕೊಳ್ಳಲು ಹಿಂದು ಮುಂದು ವಿಚಾರಿಸದೆ ಒಪ್ಪಿಕೊಂಡಳು.

"ಯೇನು ಹುಯ್ಯಲವ್ವ ಈ ಉಡುಗಿ ಕೈಗೆ?" ಬುಂಡೆ ಬೆಸ್ತರವಳು ನರಸಮ್ಮನನ್ನು ಕೇಳಿದಳು.

ನರಸಮ್ಮ ಸ್ವಲ್ಪ ಯೋಚಿಸಿದವಳು "ಅವಳಾ ನನ್ನ ತಮ್ಮನ್ಗೆ ತಂದುಕೋ ಬೇಕು ಅಂತ ಇವ್ನಿ. ಗಂಡನಿಗೆ ನೀರು ಕೊಡೊ ಒಂದು ಗಿಂಡಿ ಹುಯ್ಯವ್ವಾ" ಎಂದಳು.

ಬುಂಡೆ ಬೆಸ್ತರವಳು ಮಂಗಳೆಯ ಬಲ ಹೆಬ್ಬೆಟ್ಟಿನ ಕೆಳಗೆ ಹೊರಭಾಗದಲ್ಲಿ ನೀರಗಿಂಡಿಯನ್ನೂ, ಅವಳ ಎಡ ಹೆಬ್ಬೆಟ್ಟಿನ ಕೆಳಗೆ ಹೊರಭಾಗದಲ್ಲಿ, ಮೂರು ದಪ್ಪ ಬೊಟ್ಟಿನ 'ಒಲೆ ಕುಪ್ಪೆ'ಯನ್ನೂ ಹುಯ್ದು, "ಈ ಒಲೇ ಕುಪ್ಪೆಮ್ಯಾಗೆ ಅಡಿಗೆ ಅಟ್ಟು, ನಿನ್ನ

ಗಂಡಯ್ಯ ಉಣ್ಣಕ್ಕೆ ಕೂತುಕೊಳಾಕೆ ಮುಂಚೆ ಈ ಗಿಂಡಿ ತಕ್ಕೊಂಡು ಅವ್ನ ಕೈಕಾಲು ತೊಳೆಯಾಕೆ ನೀರು ಕೊಡವ್ವ" ಎಂದು ನಗೆಯಾಡಿದಳು.

ಗಂಡ ಎಂದರೆ ಏನೆಂದು ಸರಿಯಾದ ಕಲ್ಪನೆಯಿಲ್ಲದಿದ್ದರೂ ಬುಂಡೆ ಬೆಸ್ತರವಳ ಮಾತಿಗೆ ಮಂಗಳೆ ಮಾತ್ರ ನಾಚಿ ಹಿಡಿಯಾದಳು.

ಚೆಲುವಮ್ಮ ಒಳಗಿನಿಂದ ಮೂರು ಪಡಿ ರಾಗಿಯನ್ನು ತಂದು ಸುರಿದ ಮೇಲೆ ಬುಂಡೆ ಬೆಸ್ತರವಳು ಎದ್ದು ಹೋದಳು.

ಅವಳು ಅತ್ತ ಹೋದ ಬಳಿಕ ಚೆಲುವಮ್ಮ ನೋವನ್ನು ತಾಳಲಾರದೆ 'ಅಸ್–ಉಸ್' ಎಂದುಕೊಳ್ಳುತ್ತಾ, "ಅಲ್ಲ ಕನವ್ವಾ, ಇದಕೇ ಈಟು ಒದ್ದಾಡತಿವ್ನಲ್ಲಾ ನಾನು, ಆ ಕಲ್ಹಳ್ಳಿ ಮರಿನಿಂಗಿ ಹೇಳಿದ್ದ ನೆನೆಸಿಕೊಂಡರೆ ಮೈ ಜುಂ ಅಂತದೆ... "ಎನ್ನುವುದರಲ್ಲಿ ನರಸಮ್ಮ, "ಯೇನಂದ್ಲಾ ಮರಿನಿಂಗೀ?" ಎಂದು ಪ್ರಶ್ನಿಸಿದಳು.

"ಅವಳ ಮುತ್ತಜ್ಜಿ ಹಿಂಗೇ ಬುಂಡೇ ಬೆಸ್ತರೋಳೊಬ್ಬಳ ತಾವು ಬೆನ್ನು ಎದೆ ಮ್ಯಾಗೆಲ್ಲ ಕುಪ್ಪಸದಂಗೆ ಹಸರು ಹುಯಿಸಿಕೊಂಡಳಂತೆ...."

"ಊ...."

"ಥೇಟ್ ಕುಪ್ಪಸದಂಗೆ ಹುಯ್ದಿದ್ಲಂತೆ ಕನವ್ವಾ...."

"ಆಮ್ಯಾಕೆ?"

"ಕುಪ್ಪಸಾನೇನೋ ಚೆಂದಾಗಿ ಹುಯ್ದಲಂತೆ. ಆದ್ರೆ ಕುಪ್ಪಸ ಕಟ್ಟೋ ಗಂಟು ಹುಯ್ಯೋವಾಗ ಅವಮ್ಮನ ಪ್ರಾಣಾನೇ ಹೊಂಟು ಹೋಯ್ತಂತೆ" ಎಂದು ಹೇಳುವಾಗ ಚೆಲುವಮ್ಮ ಭಾರವಾಗಿ ನಿಟ್ಟುಸಿರುಬಿಟ್ಟಳು.

"ಊ, ನಾನೂ ಕೇಳಿವ್ನಿ. ನಮ್ಮೂರಿನಲ್ಲೂ ಇಬ್ಬರು ಮೂವರು ಅಂಗೇ ಹುಯ್ಸಿಕೊಂಡಿದ್ರಂತೆ ಹಿಂದೆ....ಆದ್ರೆ ಈ ಕಾಲದಲ್ಲಿ ಯಾರವ್ವ ಹುಯ್ಸಿಕೊತ್ತಾರೆ ಅಂತಾದೆಲ್ಲಾನೂ?"

ಇದಾದ ಮೂರು ದಿನಗಳಲ್ಲಿ ಕಾಳಯ್ಯನೇ ಮಂಗಳೆಯನ್ನು ಕಲ್ಲಹಳ್ಳಿಗೆ ಕರೆದುತಂದು ಬಿಟ್ಟ.

ಮಂಗಳೆಯ ಕಯ್ಯ ಹಸರನ್ನು ನೋಡಿದ ನಾಗಜ್ಜಿ, "ಇದೇನಾ ಮಂಗ್ಲಿ... ಒಲೆ ಕುಪ್ಪೆ, ನೀರು ಗಿಂಡಿ ಹುಯಿಸಿಕೊಂಡಿದ್ದೀ! ಒಲೆಕುಪ್ಪೇಲಿ ಅಟ್ಟು, ನಿನ್ನ ಗಂಡ ನಟ್ರಾಜನಿಗೆ ಗಿಂಡೀಲಿ ನೀರು ಕೊಡಾಕಾ?" ಎಂದು ಪರಿಹಾಸ್ಯಮಾಡಿ, ಅದರ ಮೂಲಕ ತನ್ನ ಆಸೆಯನ್ನು ಪ್ರಪ್ರಥಮ ಬಾರಿಗೆ ಸ್ಪಷ್ಟವಾಗಿ ವ್ಯಕ್ತಪಡಿಸಿದಳು.

ಆ ಮಾತಿಗೆ ಮಂಗಳೆ ಸೆಟೆದುಕೊಂಡಳು. ಅಜ್ಜಿ ಹಾಸ್ಯ ಮಾಡುತ್ತಿರುವಳೆಂಬ ಒಂದು ವಿಚಾರ ಮಾತ್ರ ಅವಳ ಬಗೆಗೆ ಹೊಳೆಯುತ್ತಿದ್ದಿತು. ಆದ್ದರಿಂದ, "ಊ, ಅವನು ಯಾಕೆ ನನ್ನ ಗಂಡ ಆದಾನು?" ಎಂದು ಗಡಿಗೆ ಮುಖ ಮಾಡಿಕೊಂಡು ಸಿಟ್ಟಿನಿಂದ ಒಳಗೆ ನಡೆದಳು.

* * * *

ಹೀಗೆ ಎರಡು ವರ್ಷ ಕಳೆಯಿತು.

ಒಂದು ದಿನ 'ಅವ್ವಾ–ಅಜ್ಜೀ' ಎಂದು ಕೂಗುತ್ತಾ ಓಡಿಬಂದ ಮಂಗಳೆ ನಟರಾಜ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿಚಾರವನ್ನು ಹರ್ಷೋತ್ಕರ್ಷದಿಂದ ತಾಯಿಗೂ ಅಜ್ಜಿಗೂ ತಿಳಿಸಿದಳು. ತಾನು ಪ್ರೈಮರಿ ನಾಲ್ಕನೆಯ ಕ್ಲಾಸಿನಲ್ಲಿ ಉತ್ತೀರ್ಣಳಾದುದಕ್ಕಿಂತಲೂ ಹೆಚ್ಚಿನ ಸಂತೋಷವಾಗಿತ್ತು ಮಂಗಳೆಗೆ. ಮರಿನಿಂಗಿಯ ಮನೆಯ ಬಳಿಯೇ ನಟರಾಜನಿಂದ ಆ ವಿಷಯವನ್ನು ತಿಳಿದು ಅವನಿಗೂ ಮೊದಲು ತಾನೇ ಮನೆಗೆ ಸಮಾಚಾರ ಮುಟ್ಟಿಸಲು ಉತ್ಸಾಹದಿಂದ ಓಡಿಬಂದಿದ್ದಳು.

ನಟರಾಜ ಗೆಳೆಯರ ಕಾಟವನ್ನು ತಪ್ಪಿಸಿಕೊಂಡು ಮನೆಯ ಮೆಟ್ಟಿಲು ಏರುತ್ತಿರುವ ಹಾಗೆ 'ಗಮ್' ಎನ್ನುವ ಅಡುಗೆ ಅವನಿಗೆ ಸ್ವಾಗತ ನೀಡುತ್ತಿತ್ತು.

ಅಂದು ರಾತ್ರಿ ಊಟಕ್ಕೆ ಕುಳಿತಾಗ ವಿಷಕಂಠಯ್ಯನಿಗೂ ವಿಚಾರ ತಿಳಿದು ಆತನೂ ಸಂತೋಷಪಟ್ಟ. "ತಬ್ಬಲಿ ಮೊಗ. ದೇವರು ಎಂಗೋ ದಾರಿ ತೋರಿಸ್ದ" ಎಂದು ಹೆಂಡತಿಯೊಡನೆ ಉದ್ಗಾರ ತೆಗೆದ.

"ಅದೇನೋ ಒಂದು ನೇರ್ಪಾಯ್ತು, ಸರಿ. ಮುಂದಕ್ಕೆ ಅವ್ನ ಯೋಚ್ನೆ ಯೇನಾ ಮಾಡಿದ್ರಿ?" ಎಂದು ಭವಿಷ್ಯದ ಕಡೆಗೆ ಗಂಡನ ಚಿತ್ತವನ್ನು ತಿರುಗಿಸುತ್ತಾ ನುಡಿದಳು ಪಾರ್ವತಮ್ಮ.

"ಊ, ಅದೂ ದಿಟ," ಎಂದು ಒಂದು ಗಳಿಗೆ ಏನೂ ತೋರದಂತೆ ಸುಮ್ಮನೆ ಕುಳಿತ ವಿಷಕಂಠಯ್ಯ.

ಸ್ವಲ್ಪ ಕಾಲ ಹೀಗೆ ಸಂದ ಬಳಿಕ, "ಊ, ಅದೇ ಒಂದು ಬಾರಿ ಯೋಚ್ಣೆ ಮಾಡ್ಬೇಕಾಗದೆ ನೋಡು...ಹುಣಸೂರಿನಲ್ಲಿ ಐಸ್ಕೂಲು ಇಲ್ಲ. ಮುಂದಕ್ಕೇನಾರ ಉಡುಗ ಓದಬೇಕಾದರೆ ಮೈಸೂರಿಗೇ ಓಗಬೇಕು," ಎಂದು ಸ್ವಲ್ಪ ಆಲೋಚಿಸಿ "ಮೈಸೂರಿನಲ್ಲಿ ಉಡುಗನ್ನಿಟ್ಟು ಓದಿಸಾಕೆ ನಾನೆಲ್ಲಾ ತರ್ಲಿ ಆಟೊಂದು ದುಡ್ಡಾ?" ಎಂದು ನಿಟ್ಟುಸಿರಿಡುತ್ತಾ ಹೇಳಿದ.

ಮುಂದೆ ಕೆಲವು ದಿನಗಳಲ್ಲಿ ಮನೆಯವರಿಗೆಲ್ಲಾ ನಟರಾಜನದೇ ಚಿಂತೆಯಾಯಿತು. ಪಾರ್ವತಮ್ಮನಿಗಂತೂ ತನ್ನ ತಮ್ಮ ದೊಡ್ಡ 'ಆಫೀಸ'ರಾಗಿ ಮೆರೆಯುವುದನ್ನು ಕಾಣಬೇಕೆಂಬ ಹಂಬಲ!

ನಟರಾಜ ಹಾಗೆ ದೊಡ್ಡ 'ಆಫೀಸ'ರಾಗಿ ಮೆರೆಯಬೇಕಾದರೆ ಮುಂದೆ ಮುಂದೆ ಓದಿ, ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಬೇಕು. ಹಾಗೆ ಮುಂದೆ ಮುಂದೆ ಓದಲು ದುಡ್ಡು ಬೇಕು. ಹಳ್ಳಿಯ ಒಬ್ಬ ಬಡ ಆಚಾರಿಯ ಸಂಸಾರದಲ್ಲಿ ಆ ದುಡ್ಡು ಎಲ್ಲಿಂದ ಒದಗಬೇಕು?....

ಬೇಸಿಗೆ ರಜಾ ದಿನಗಳು ಒಂದೊಂದಾಗಿ ಕಳೆದುಹೋದಂತೆ ನಟರಾಜನ ಭವಿಷ್ಯ ಹಳ್ಳಿಯಲ್ಲೇ ಸ್ಥಿರವಾದಂತೆ ತೋರಹತ್ತಿತ್ತು. "ಈಟು ಜಿನ ನಟಾಜ ಮಟಕ್ಕೆ ಮೊಣ್ಣು ಹೊತ್ತದ್ದೂ ಹೊಳೇಲಿ ಹುಣಸೇ ಹಣ್ಣು ತೇದಂಗೆ ಆಗೋಯ್ತಲ್ಲಾ-!" ಎಂದು ನಾಗಜ್ಜಿ ಬಹುವಾಗಿ ನೊಂದುಕೊಂಡಳು.

ಆದರೆ ಇಷ್ಟರಲ್ಲಿ ಒಂದು ಅನುಕೂಲ ಪ್ರಸಂಗ ಒದಗಿತು.

ತಂದೆ ಶಿವಸ್ವಾಮಿ ಸತ್ತು ಬಹಳ ಕಾಲ ಕಳೆದಿದ್ದರೂ ಪಾರ್ವತಮ್ಮನನ್ನಾಗಲಿ, ನಟರಾಜನನ್ನಾಗಲಿ ನಂಜುಂಡಸ್ವಾಮಿ ನೋಡಲಾಗಿರಲಿಲ್ಲ. ಆದರೆ ತನ್ನ ತಂದೆ ಮೃತ್ಯುಶಯ್ಯೆಯಲ್ಲಾಡಿದ ಮಾತುಗಳನ್ನಾತ ಮರೆತಿರಲಿಲ್ಲ- "ಇದು....ದಿ-ಕ್ಕಿ-ಲ್ದ.... ತಬ್ಬಲಿ. ಇ-ದ್ಕೆ....ನೀ-ನೇ....ಗತಿ" ಎಂದು, ಮುಂದಿನ ಮಾತುಗಳನ್ನು ಬಾಯಿಯಲ್ಲಿ ಆಡಲಾರದೆ ಕಣ್ಣಿನ ನೋಟದಿಂದ ಸೂಚಿಸಿ, ತಬ್ಬಲಿಯಾದ ನಟರಾಜನನ್ನು ತನ್ನ ವಶಕ್ಕೊಪ್ಪಿಸಿ ತಂದೆ ತೆರಳಿದ್ದುದು ನಂಜುಂಡಸ್ವಾಮಿಯ ಮನದಲ್ಲಿನ್ನೂ ಹಸುರಾಗಿತ್ತು. ಅದನ್ನೆಂದಿಗೂ ಆತ ಮರೆಯುವಂತಿರಲಿಲ್ಲ. ತಂದೆಯ ಮಾತಿನಂತೆ ನಟರಾಜನನ್ನೂ ತನ್ನ ಮಗ ಅನಂತನಂತೆಯೇ ಪೋಷಿಸಿ ಬೆಳೆಸುವುದು ತನ್ನ ಕರ್ತವ್ಯವೆಂದು ಆತ ನಿರ್ಧಾರಕ್ಕೆ ಬಂದಿದ್ದ.

ಆ ನಿರ್ಧಾರದಂತೆ ಆತ ಕಲ್ಲಹಳ್ಳಿಗೆ ಬಂದು ವಿಷಕಂಠಯ್ಯನೊಡನೆ ಪ್ರಸ್ತಾಪ ಮಾಡಿದ.

ಶಿವಸ್ವಾಮಿ ಸಾಯುವ ಸಮಯದಲ್ಲಿ ಆಡಿದ ಮಾತುಗಳನ್ನು ಪಾರ್ವತಮ್ಮನ ಮುಖೇನ ಕೇಳಿದ್ದರೂ ವಿಷಕಂಠಯ್ಯ ತನ್ನ ಕಿವಿಯನ್ನೇ ತಾನು ನಂಬಿರಲಿಲ್ಲ. "ಪಟ್ಟನದೋರು- ಅವರಿಗೇನ, ಒಂದು ಮಾತಾ? ಒಂದು ಕತೆಯಾ?.... ಗಳಿಗ್ಗೊಂದು ಗ್ಯಾನ.... ಅವರ ಮಾತು ಹೆಂಗಾ ನಂಬೋದು" ಎಂದು ಹೆಂಡತಿಯ ಮಾತಿಗೆ ಬೆಲೆ ಕೊಡದೆ, ತನ್ನೊಳಗಿದ್ದ ಸಂಶಯವನ್ನು ಹೊರಗೆಡವಿದ್ದ. ಈಗ ಶಿವಸ್ವಾಮಿಯೇ ಸ್ವತಃ ಬಂದು ಹೇಳಿದರೂ ವಿಷಕಂಠಯ್ಯನ ಎದೆಯಲ್ಲಿ ಅಲ್ಪ ಸ್ವಲ್ಪ ಸಂದೇಹ ಉಳಿದೇ ಇದ್ದಿತು.

ಮಾರನೆಯ ದಿನ ಮೈಸೂರು ಕಡೆ ಹೋಗುವ ಬಸ್ಸಿನಲ್ಲಿ ನಂಜುಂಡಸ್ವಾಮಿಯೊಡನೆ ನಟರಾಜನೂ ಕೂಡುವವರೆಗೆ ಆ ಸಂದೇಹ ಸಣ್ಣದಾಗಿ ಹೊಗೆಯಾಡುತ್ತಲೇ ಇತ್ತು.

೧೧

ಮಾರನೆಯ ದಿನ ಬೆಳಿಗ್ಗೆ ಪಾರ್ವತಮ್ಮನೂ ನಾಗಜ್ಜಿಯೂ ಮುಂಜಾವಿಗೇ ಎದ್ದು ಪಯಣಿಗಳಿಗೆ ರಾಗಿ ರೊಟ್ಟಿ, ಅದರೊಂದಿಗೆ ನೆಂಚಿಕೊಳ್ಳಲು ಅರೆ ಮೆಣಸಿನಕಾಯಿ ಖಾರವನ್ನು ಮಾಡಿಕೊಟ್ಟರು.

"ಬಲೆ ಚೆಂದಾಗದೆ ರೊಟ್ಟಿ. ಖಾರಾನೂ ಮಜವಾಗಿ ಮಾಡಿದ್ದೀರಿ ಪಾರತಿ," ತಿನ್ನುತ್ತಿರುವಂತೆಯೇ ಪ್ರಶಂಶಿಸುತ್ತಿದ್ದ ನಂಜುಂಡಸ್ವಾಮಿ.

"ಬುಡಿ ಚಿಕ್ಕಪ್ಪ. ರಾಗಿ ರೋಟ್ಟೀಲಿ ಯೇನದೆ, ನೀವು ಮೈಸೂರು ಪಟ್ಟಣದೋರು. ಇಡ್ಲಿ, ದೋಸೆ, ಚಪಾತಿ ಅಂತ ರುಚಿ ರುಚಿ ತಿಂಡಿ ತಿನ್ನೋರು..." ಪಟ್ಟಣದ ಜೀವನ ಹಳ್ಳಿಯ ಗೋಳಿನ ಬಾಳಿಗಿಂತಲೂ ನೂರು ಪಾಲು ಮೇಲು ಎಂದು ಭಾವಿಸಿದ್ದ ಪಾರ್ವತಮ್ಮ ಹಾಗೆಂದಳು.

"ನೀನೂ ಒಳ್ಳೆ ಚೆಂದಾಗಿ ಹೇಳಿದೆ. ಮೈಸೂರಿನಲ್ಲಿ ಇಂತಾ ರೊಟ್ಟಿ ಮಾಡಿಕೊಟ್ಟರೆ ಕುಣಿದಾಡೇನು ! ಅಲ್ಲಿ ಮಾಡೋ ಹತ್ತು ಇಡ್ಲಿ ತಿಂದರೆ ತಾನೆ ಈ ಒಂದು ರಾಗಿ ರೊಟ್ಟಿ ತಿಂದಷ್ಟು ನಿಮಣ ಆದಾತು?"

ನಂಜುಂಡಸ್ವಾಮಿಯ ಮಾತಿಗೆ ಪಾರ್ವತಮ್ಮ ನಕ್ಕಳು. ಆಕೆಯ ಮಾತಿನಲ್ಲಿ ಚಿಕ್ಕಪ್ಪನ ಮಾತು ಸಹಜ ಎನ್ನುವದಕ್ಕಿಂತ ಚಿಕ್ಕಪ್ಪನ ಹೊಟ್ಟೆ ದೊಡ್ಡದು ಎಂಬ ಭಾವ ಬೆರೆತಂತಿತ್ತು.

ವಿಷಕಂಠಯ್ಯ ಮಧ್ಯೆ ಬಾಯಿ ಹಾಕಿ ಅವಸರಿಸಿದ.

"ಊ, ಯೇಳಿ ಯೇಳಿ ಒತ್ತಾಯ್ತು. ಇನ್ನೇನು ಬಸ್ಸು ಬರೋ 'ಟೇಂ" ಆಯ್ತು."

ಎಲ್ಲರೂ ಬೇಗ ರೊಟ್ಟಿ ತಿಂದು ಕೈತೊಳೆದರು. ನಟರಾಜ ಕೋಟು ಸಿಕ್ಕಿಸಿ ಸಿದ್ಧವಾದ. ಅವನನ್ನು ಕಳುಹಿಸಿಕೊಡಲು 'ಮಾರ್ಗ'ದವರೆಗೂ ಮನೆಯವರೆಲ್ಲ ಬಂದರು. ಇನ್ನೂ ಬಸ್ಸು ಬಂದಿರಲಿಲ್ಲವಾಗಿ ಎಲ್ಲರೂ ರಸ್ತೆ ಪಕ್ಕಕ್ಕೆ, ಹುಲ್ಲಿನ ಮೇಲೆ ಕುಳಿತರು. ಜೊತೆಯಲ್ಲಿ ಮರಿನಿಂಗಿಯೂ, ವಿಷಕಂಠಯ್ಯನಿಗೆ ಬೇಕಾದ ಒಬ್ಬಿಬ್ಬರೂ, ನಟರಾಜನಂತೆಯೇ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೂ, ಮುಂದೆ ವ್ಯಾಸಂಗ ಮಾಡಲು ಅವಕಾಶವಿಲ್ಲದ ಮರಿ, ಪುಟ್ಟ ಮುಂತಾದ ಅವನ ಗೆಳೆಯರೂ ಬಂದಿದ್ದರು.

ದೂರದಲ್ಲಿ ಯಾವದೊ ಮೋಟಾರು ಸದ್ದು ಮಾಡಿತು. ಎಲ್ಲರೂ ದಡಬಡನೆ ಎದ್ದು ನಿಂತರು. ಆದರೆ ಅದು ಹತ್ತಿರ ಬಂದಂತೆ ಅದು ಬಸ್ಸಲ್ಲವೆಂತಲೂ ಕೊಡಗಿನಿಂದ ಮೂಟೆಗಳನ್ನು ಹೊತ್ತು ತರುತ್ತಿರುವ ಯಾವುದೊ ಲಾರಿ ಎಂತಲೂ ಅವರಿಗೆ ತಿಳಿದೊಡನೆಯೆ ನಗುತ್ತಾ ಮತ್ತೆ ಕುಳಿತುಕೊಂಡರು.

ಆದಾದ ಸ್ವಲ್ಪ ಹೊತ್ತಿನಲ್ಲಿಯೆ ಪಿರಿಯಾಪಟ್ಟಣದ ಕಡೆಯಿಂದ ಡರ್-ಡರ್ ಎಂದು ಕೋಲಾಹಲವೆಬ್ಬಿಸುತ್ತಾ ಕಡೆಗೂ ನಟರಾಜನನ್ನು ಮೈಸೂರಿಗೆ ಕೊಂಡೊಯ್ಯುವ ಬಸ್ಸು ಬಂದೇ ಬಂದಿತು.

ನಟರಾಜನಿಗೆ ಎಲ್ಲಿಲ್ಲದ ಸಂಕಟ ಉಮ್ಮಳಿಸಿ ಬಂತು. ತಾನು ಅಷ್ಟು ದಿನವೂ ಆಡಿ ಕುಣಿದು, ನಲಿದ ತಾಣವನ್ನು ಬಿಡಬೇಕಾಗಿ ಬಂದುದಕ್ಕೆ ತುಂಬ ನೊಂದುಕೊಂಡ. ಮಂಗಳೆ ಬಿಕ್ಕಿ ಬಿಕ್ಕಿ ಅಳುವದನ್ನು ನೋಡಿದಾಗಲಂತೂ ಅವನ ಹೃದಯ ಹಿಂಡಿದಂತಾಗಿ ಕಣ್ಣಿನಲ್ಲಿ ನೀರು ತುಂಬಿತು.

ಅಳುತ್ತಲೇ ನಾಗಜ್ಜಿಯ ಬಳಿ ಸಾರಿ, "ನಾ ಹೋಗಿಬುಟ್ಟುಬತ್ತೀನಿ ಅಜ್ಜಿ" ಎಂದು ಹೇಳಿದ. ಮುದುಕಿಯೂ ಅಳುತ್ತಲೇ "ಓಗಿಬುಟ್ಟು ಬಾ ನನ್ನ ಕಂದಾ.... ದೇವರು ನಿನ್ನ ಚೆಂದಾಗಿ ಇಡಲಿ" ಎಂದು ಹರಸಿದಳು.

ಪಾರ್ವತಮ್ಮನೂ ಕಣ್ಣೀರು ತುಂಬಿಕೊಂಡು ತಮ್ಮನಿಗೆ ವಿವೇಕ ಹೇಳಿದಳು. ಹೊಸ ಜಾಗ, ಹೊಸ ಜನರ ಹತ್ತಿರ ಹೇಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ವಿವರಿಸಿ ಹೇಳಿದಳು. ಪಾರ್ವತಮ್ಮನ ಮಾತಿನ ಜೊತೆಗೆ ವಿಷಕಂಠಯ್ಯನೂ ತನ್ನದಾಗಿ ಒಂದೆರಡು ಬುದ್ಧಿವಾದದ ಮಾತುಗಳನ್ನು ಬೆರಸಿದನು.

ಮರಿನಿಂಗಿಯೂ ನಟರಾಜನನ್ನು ಅಪ್ಪಿಕೊಂಡು, "ಜ್ವಾಕೆ ಮೊಗಾ. ಚಂದಾಗಿ ಓದಿ, ಇದ್ಯಾ ಕಲ್ತು ನಮ್ಮಳ್ಳೀಗೆ ಹೆಸರು ತರಬೇಕು. ಆ ಆಯರ ಹಳ್ಳಿ ಅಯ್ಯನ ಉಡುಗನಂಗೆ 'ಪೋಲು ಪೋಲಿ, ತಾಲಿ ತಾಲಿ' ಅಂತ ಆಗಿಬುಡಬಾರದು. ಗೊತ್ತಾಯ್ತೇನಾ?" ಎಂದಳು.

ಬಸ್ಸಿನವನು ಹೊತ್ತಾಯಿತೆಂದು ಹಾರ್ನ್ ಒಂದೇ ಸಮನೆ ಕುಟ್ಟುತ್ತಿದ್ದ.

ನಟರಾಜ ಎಲ್ಲರಿಗೂ ನಮಸ್ಕಾರಮಾಡಿ ನಂಜುಂಡಸ್ವಾಮಿಯೊಡನೆ ಬಸ್ಸಿನೊಳಗೆ ಹೋಗಿ ಕುಳಿತ. ಡರ್-ಡರ್ ಎಂದು ಸದ್ದು ಮಾಡುತ್ತಾ ಬಸ್ಸು ಹೊರಟಿತು.

ಬಸ್ಸು ದೂರ ಹೋಗಿ ಕಣ್ಮರೆಯಾದರೂ ಮಂಗಳೆ ಅಳುತ್ತಲೇ ನಿಂತಿದ್ದಳು. ಉಳಿದವರ ಅಳು ನಿಂತರೂ ಅವಳ ಅಳು ನಿಂತಿರಲಿಲ್ಲ.

ಅಂಥ ಸಮಯದಲ್ಲೂ ಮಂಗಳೆಯ ಸ್ವಾರಸ್ಯವಾದ ರೋದನ ನಾಗಜ್ಜಿಯ 'ಹುಡುಗಾಟಿಕೆ'ಗೆ ಕಚಗುಳಿ ಇಟ್ಟಂತಾಯಿತು. ಅವಳು ಪಾರ್ವತಮ್ಮನನ್ನು ತಿವಿದು, "ನೋಡಾ

ಪಾರತೀ... ಗಂಡ ಹೊಂಟೋಗಿಬುಟ್ಟ ಅಂತ ಯಾಪಾಟಿ ಅಳ್ತಾ ಅವ್ಳೆ ನಿನ್ನ ಮಗಳುss...." ಎಂದು ಕುಚೋದ್ಯಮಾಡಿ ನಕ್ಕಳು.

೧೨

ಮೈಸೂರಿನ ರಂಗಾಚಾರ್ಲು ಪುರಭವನದ ಮುಂಭಾಗದಲ್ಲಿ ಬಸ್ಸು ಬಂದು ನಿಂತಾಗ ನಟರಾಜನ ಹೃದಯ ಉದ್ವೇಗದಿಂದ ಬಡಿದುಕೊಳ್ಳುತ್ತಿತ್ತು. ವಿಶಾಲವಾದ ರಸ್ತೆಗಳಿಂದಲೂ ಸುಂದರವಾದ ಉದ್ಯಾನಗಳಿಂದಲೂ ಶೋಭಿಸುತ್ತಿದ್ದ ಮೈಸೂರು ನಗರ ಅವನಿಗೆ ದಿಗ್ಭ್ರಮೆ ಹಿಡಿಸಿತ್ತು. ಹಾರ್ಡಿಂಜ್ ಸರ್ಕಲಿನ ಚೆಲುಮೆಯಿಂದ ನಾಲ್ಕೂ ಕಡೆಗೆ ಚಿಮ್ಮುವ ನೀರಿನ ವೈಭವ, ಅಲ್ಲಿಂದ ಮುಂದೆ 'ಕರ್ಜನ್ ಪಾರ್ಕಿನ' ವಿವಿಧ ವೃಕ್ಷಗಳ ಸೊಬಗು, ಪಾರ್ಕಿನಾದ್ಯಂತ ತನ್ನ ರತ್ನಗಂಬಳಿ ಹಾಸಿ ನಲಿಯುತ್ತ ಬೆಳೆದು ನಿಂತಿದ್ದ ಹಸರು ಹುಲ್ಲು, ಆ ಹುಲ್ಲುಗಾವಲಿನ ಮಧ್ಯೆ ಮಧ್ಯೆ ಅಚ್ಚುಕಟ್ಟಾಗಿ ಕೆತ್ತಲ್ಪಟ್ಟ ಪುಟ್ಟ ಪುಟ್ಟ ರಸ್ತೆಗಳು, ಪಾರ್ಕಿನೊಳಗೆ ಅಷ್ಟು ದೂರದಲ್ಲಿ ಎಲ್ಲ ಕಡೆಯೂ ತೆರೆಯಲ್ಪಟ್ಟ ಗೋಪುರಾಕಾರದ ಕಟ್ಟಡದ ಮಧ್ಯೆ ಬಂಗಾರದ ಬಣ್ಣದಲ್ಲಿ ಸಜೀವವಾಗಿ ಕಾಣುವ ಸಿಂಹದ ಮಾದರಿ, ಅದರಾಚೆ ಕಂಗೊಳಿಸುವ 'ಬ್ಯಾಂಡ್ ಸ್ಟ್ಯಾಂಡ್'–ಒಂದೊಂದೂ ಮುಗ್ಧನಾದ ನಟರಾಜನ ಮನಸ್ಸನ್ನು ಮರಳುಮಾಡಿದವು. ನಂಜುಂಡಸ್ವಾಮಿಗಂತೂ ಮಿರ್ಜಾ ರಸ್ತೆಯಲ್ಲಿ (ಕರ್ಜನ್ ಪಾರ್ಕಿನ ಮಧ್ಯೆ ಹೋಗುವ ರಸ್ತೆ) ಸಾಗಿದಂತೆ ನಟರಾಜನನ್ನು ಮುಂದೆ ಮುಂದೆ ನಡೆಸಿ ಪಾರ್ಕನ್ನು ದಾಟಿ ಹೋಗುವುದರಲ್ಲಿ ಸಾಕು ಸಾಕೆನಿಸಿತು. ಅಡಿಗಡಿಗೆ ಆ ಪಾರ್ಕಿನ ಚೆಲುವಿಗೆ ಮನಸೋತು ನಿಂತು ಬಿಡುವನು ನಟರಾಜ. ಅಡಿಗಡಿಗೆ "ಏನು ಚೆಂದಾಗದೆ ಚಿಕ್ಕಪ್ಪಾ!" ಎಂದು ಬೆಕ್ಕಸ ಬೆರಗಾಗುವನಂತೆ ಉದ್ಗಾರ ತೆಗೆಯುವನು. ಹೀಗೆ ಸಾವಧಾನವಾಗಿ ನಿಂತು ನಿಂತು ನಡೆಯುವ ನಟರಾಜನನ್ನು ಕಟ್ಟಿಕೊಂಡು ಇಟ್ಟಿಗೆ ಗೂಡಿನ ತಮ್ಮ ಮನೆ ಮುಟ್ಟುವುದರಲ್ಲಿ ನಂಜುಂಡಸ್ವಾಮಿ ಭಾರವಾದ ಅಕ್ಕಿಯ ಮೂಟೆಯನ್ನು ಬೆನ್ನಿನ ಮೇಲೆ ಹೊತ್ತು ತಂದವನಷ್ಟು ದಣಿದಿದ್ದನು.

ನಂಜುಂಡಸ್ವಾಮಿಯ ದಣಿವು, ಬೇಸರ ಯಾರಿಗಾದರೂ ಅರ್ಥವಾಗುವಂಥದು. ಸಾವಿರ ಸಲ ಆ ಮಿರ್ಜಾ ರಸ್ತೆಯಲ್ಲಾತ ಸಂಚರಿಸಿದ್ದ. ಸಾವಿರ ಸಲ ಆ ಉದ್ಯಾನದೊಳಗೆಲ್ಲ ತನ್ನ ಹೆಂಡತಿ ಮಕ್ಕಳೊಡನೆ ಸಂಚರಿಸಿದ್ದ. ಅದರಿಂದಾಗಿ ಆ ಪಾರ್ಕಿನ ಸೊಬಗಿಗೆ ಆತ ಬರಬರುತ್ತಾ ಕುರುಡನಂತಾಗಿದ್ದ. ದಿನವೂ ಕುಡಿಯುವ ಕ್ಷೀರದಲ್ಲಿ ರುಚಿ ಕಾಣುವವರು ವಿರಳ–ನಂಜುಂಡಸ್ವಾಮಿ ಆ ವಿರಳರ ಗುಂಪಿಗೆ ಸೇರಿದವನಲ್ಲ!

ನಟರಾಜನಿಗಾದರೂ ಎಲ್ಲ ಹೊಸದು, ಅವನು ಹಿಂದೊಮ್ಮೆ–ನಂಜುಂಡಸ್ವಾಮಿಯ ತಂದೆ ಕಾಲವಾದಾಗ–ಪಾರ್ವತಮ್ಮ ಮಂಗಳೆಯರೊಡನೆ ಮೈಸೂರಿಗೆ ಬಂದಿದ್ದರೂ

ಮೈಸೂರಿನ ಯಾವೊಂದು ದೃಶ್ಯವೂ ಅವನ ಮನದ ಮೇಲೆ ಖಚಿತವಾಗಿ ಮೂಡಿರಲಿಲ್ಲ. ಅವನು ಮೈಸೂರಿನಲ್ಲಿ ಕಳೆದುದು ಕೆಲವೇ ದಿನಗಳಾದ್ದರಿಂದಲೂ, ನಂಜುಂಡಸ್ವಾಮಿಯ ಮನೆಯವರಿಗೆ ತಟ್ಟಿದ ಸೂತಕದಲ್ಲಿ ಅವರು ಈ ನೆಂಟರನ್ನು ಮನೆಯ ಹೊರಗೆ ಬೇರೆಲ್ಲಿಯೂ ಕರೆದೊಯ್ಯಲಾಗದೆ ಹೋದುದರಿಂದಲೂ, ನಟರಾಜ ಆಗ ತೀರ ಸಣ್ಣವನಿದ್ದು ನೋಡಿದಷ್ಟನ್ನಾದರೂ ನೆನಪಿನಲ್ಲಿಡುವ ಸಾಮರ್ಥ್ಯ ಪಡೆದಿರಲಿಲ್ಲವಾದ್ದರಿಂದಲೂ ಅವನಿಗೆ ಎಲ್ಲವೂ ಹೊಸದಾಗೇ ತೋರುತ್ತಿತ್ತು.

ಮೃಗಾಲಯದ ಎದುರಿಗೆ ಒಂದು ಮೂಲೆಗಿದ್ದ ನಂಜುಂಡಸ್ವಾಮಿಯ ಮನೆಯನ್ನು ಸೇರುವದರಲ್ಲಿ ಆಗಲೇ ಮಧ್ಯಾಹ್ನ ಒಂದೂವರೆ ಗಂಟೆ ಸಮಯುವಾಗಿತ್ತು. ನಂಜುಂಡಸ್ವಾಮಿಯ ಹೆಂಡತಿ ಯಶೋದಮ್ಮ ಅದುವರೆಗೂ ಕಾದು 'ಇಂದು ಬರಲಿಲ್ಲ'ವೆಂದುಕೊಂಡು ಆಗತಾನೇ ಊಟಕ್ಕೆ ಕುಳಿತಿದ್ದಳು. ಹೊರಗೆ 'ಯಶೋದ ಯಶೋದ' ಎಂದು ಕೂಗುತ್ತಿರುವ ಯಜಮಾನರ ಧ್ವನಿ ಕೇಳಿ, ಎದ್ದು ಬಂದು ಬಾಗಿಲು ತೆರೆದಳು.

"ಇದೇನು ಇಷ್ಟು ಹೊತ್ತು ಮಾಡಿಬಿಟ್ಟಿರಿ? ಬಸ್ಸು ಎಲ್ಲಾದರೂ ಕೆಟ್ಟು ಹೋಗಿಬಿಟ್ಟಿತ್ತೇನು?" ಎಂದು ಕೇಳಿದಳು ಯಶೋದಮ್ಮ.

"ಬಸ್ಸೂ ಕೆಟ್ಟಿರ್ಲಿಲ್ಲ. ಏನೂ ಇಲ್ಲ. ಚೆಂದಾಗೆ ಬಂತು. ಆದರೆ ಈ ನಟರಾಜನಿಂದ ಹೊತ್ತಾಗೋಯ್ತು ನೋಡು. ಕರ್ಜನ್‌ಪಾರ್ಕ್ ನೋಡ್ತಾ ನಿಂತುಕೊಂಡು ಬಿಟ್ಟ ಇವನು ಏನುಮಾಡಿದರೂ ಬರೊಲ್ಲ. ನಾನು ಹೆಜ್ಜೆ ಹೆಜ್ಜೆಗೂ ತಿವಿದುಕೊಂಡು ಎಳೆದುಕೊಂಡು ಬರಬೇಕಾಯ್ತು, ಇವನ್ನ.... 'ಓ ! ಹುಲ್ಲೆ ನೋಡು ಚಿಕ್ಕಪ್ಪ-ಸಿಂಹ ನೋಡು ಚಿಕ್ಕಪ್ಪ' ಅಂತ ನಿಂತುಬಿಡೋನು. ಅದಕ್ಕೇ ಇಷ್ಟು ಹೊತ್ತಾಯ್ತು" ಎಂದು ಹೊತ್ತಾಗಿ ಬಂದುದಕ್ಕೆ ಕಾರಣ ತಿಳಿಸಿದನು ನಂಜುಂಡಸ್ವಾಮಿ.

"ಒಳ್ಳೆ ಹುಡುಗ !" ಎಂದು ನಗುತ್ತ ನಟರಾಜನನ್ನು ನೋಡಿ ಯಶೋದಮ್ಮ "ಹೂ, ಹೊತ್ತಾಗದೆ ಬನ್ನಿ. ಕೈಕಾಲು ತೊಳೆದುಕೊಳ್ಳಿ. ಊಟಮಾಡುವಿರಂತೆ" ಎನ್ನುತ್ತಾ ಅಡುಗೆ ಮನೆಯೊಳಗೆ ನಡೆದಳು.

ಕೈಕಾಲು ತೊಳೆದು ಊಟಕ್ಕೆ ಕೂರುತ್ತಾ, "ಅನಂತೂ ಎಲ್ಲಿ ಕಾಣ್ತಾನೇ ಇಲ್ಲವಲ್ಲ?" ಎಂದು ಕೇಳಿದ ನಂಜುಂಡಸ್ವಾಮಿ.

"ನಿಮಗ್ಗೊತ್ತೇ ಇದೆಯಲ್ಲಾ ಅವನ ವಿಷಯ. ನಾನೇನು ಹೇಳಲಿ?" ಯಶೋದಮ್ಮ ಹಾಗೆನ್ನುತ್ತಾ ಸಾರು ಬಡಿಸಿ "ಬೆಳಗ್ಗೆ ಇಷ್ಟು ಕಾಫಿ ಕುಡಿದು ಹೋದೋನು ಇನ್ನೂ ಬರ್ತಾ ಅವ್ನೆ" ಎಂದು ನಿಟ್ಟುಸಿರುಬಿಟ್ಟಳು.

"ಸರಿ. ಅವನೆಲ್ಲಿ ಹಾವಾಡಿಗ ಹಾವಾಡಿಸೋದು ನೋಡುತ್ತಾ ನಿಂತಿದ್ದಾನೋ, ಇಲ್ಲ ಕಪಿ ಆಡಿಸೋದು ನೋಡ್ತಾ ನಿಂತಿದ್ದಾನೊ, ದೇವರೇ ಬಲ್ಲ! ಮಹರಾಯ ಇದೇ ಶ್ರದ್ಧೆ ಓದಿನಲ್ಲಿ ತೋರಿದರೆ ಎಷ್ಟು ಚೆಂದಾಗಿರ್ತದೆ."

"ಅಯ್ಯೊ, ಹಾವಾಡಿಸೋದು ಕಪಿ ಆಡಿಸೋದು ಹಾಗಿರಲಿ. ನೆನ್ನೆ ಸಾಯಂಕಾಲ ನೋಡಬೇಕಾಗಿತ್ತು ನೀವು ಅವನನ್ನ! ಆಕಾಶದಲ್ಲಿ ಮೋಡಗಳು ಹೋಗೋದ್ನೆ ಬೆಪ್ಪನ ಹಾಗೆ ನೋಡ್ತಾ ನಿಂತುಬಿಟ್ಟಿದ್ದ."

"ಹೂ, ನಾನು ಎಷ್ಟೋ ಸಲ ನೋಡಿವ್ನಿ ಅವನು ಹಾಗೆ ಮಾಡೋದು. ನಿನ್ನೊಂದಿಗೆ ಹೇಳಿರ್ಲಿಲ್ಲ, ಅಷ್ಟೆ. ಒಂದು ಮೋಡ ನೋಡಲಿ, ಒಂದು ಹೂವು ನೋಡಲಿ, ಒಂದು ಹಕ್ಕಿ ಹಾಡೋದು ಕೇಳಲಿ ಅಲ್ಲೇ ನಿಂತುಬಿಡ್ತಾನೆ. ಅದರಲ್ಲೂ ಬಣ್ಣ ಅಂದರೆ ಅದೇನು ಆಸೆಯೊ ಅವನಿಗೆ! ಕರ್ಜನ್ ಪಾರ್ಕಿಗೆ ಅವನನ್ನ ಕರೆದುಕೊಂಡು ಹೋಗಿಬಿಟ್ಟರಂತೂ ಮುಗೀತು– ಮನೆ, ಮಠ, ತಂದೆ, ತಾಯಿ ಯಾವುದರ ಚಿಂತೆಯೂ ಸುಳಿಯೋದಿಲ್ಲ ಅವನ ತಲೆ ಒಳಗೆ... ಈ ನಟರಾಜನ ಅಣ್ಣ ಆಗಿಬಿಡ್ತಾನೆ."

"ನಟರಾಜ ಎಷ್ಟೇ ಆದರೂ ಹಳ್ಳಿಯ ಹುಡುಗ ಬಿಡಿ. ಈ ಪಟ್ಟಣಕ್ಕೆ ಹೊಸಬ. ಅವನಿಗೆ ಈ ಪಟ್ಟಣದ ನವನಾಗರೀಕ ಎಲ್ಲ ಹೊಸ ಹೊಸದಾಗಿ ಏನೋ ಒಂದು ತರಹ ಕಾಣ್ತದೆ–ಎಲ್ಲ ಎರಡು ದಿನ ಅಂತ ಅನ್ನಿ....ಆದರೆ ಈ ಅನಂತೂಗೇನು ಬಂದಿದೆ ಕೇಡು, ಸುಮ್ಮನೆ ಹೀಗೆ ಕಾಲ ಕಳೆಯೋಕೆ?"

"ನೀನೂ ಸರಿ. ಅಪ್ಪ ಆಗಾಗ್ಗೆ ಹೇಳ್ತಾ ಇದ್ದದ್ನ ಮರೆತೇಬಿಟ್ಟಿರೋ ಹಾಗೆ ಕಾಣಿಸ್ತದೆ ನೀನು–?"

"ಏನು ಹೇಳ್ತಾ ಇದ್ದರು ಮಾವ?"

"ಅವರು ಹೇಳ್ತಾ ಇದ್ದರು: 'ಈ ಅನಂತು. ನನ್ನ ತಂದೆ ವಾಸಾಚಾರೀನೇ ಹೋತು ಹುಟ್ಟವ್ನೆ. ಅವರ ಹಾಗೇನೇ ಇವನೂ ದೊಡ್ಡ ಕಲೆಗಾರ ಆಗಬಹುದು' ಅಂತ ಯಾರಿಗೆ ಗೊತ್ತು?"

"ಹೂ. ಹಾಗಂತ ನೀವೂ ಅವನ ತಲೆ ಕೆಡಿಸಿ ಇಡಿ. ಅವನ ಹೆಂಡತಿ ಮಕ್ಕಳಿಗೆ ಚೆಂದಾಗಿ ಹಿಟ್ಟು, ಬಟ್ಟೆ ಹೊಂದಿಸ್ತಾನೆ."

ಅಷ್ಟರಲ್ಲಿ ಹೊರಗಿನಿಂದ ಯಾರೋ ಗಟ್ಟಿಯಾಗಿ ಬಾಗಿಲು ತಟ್ಟುತ್ತಿರುವ ಸದ್ದು ಕೇಳಿಬಂದಿತು.

'ಓ! ಬಂದ ಅಂತ ಕಾಣ್ತದೆ. ಹೋಗಿ ಬಾಗಿಲು ತಕ್ಕೊಡು." ನಂಜುಂಡಸ್ವಾಮಿ ಕೈ ತೊಳೆಯುತ್ತಾ ಹೆಂಡತಿಗೆ ಹೇಳಿದ.

ಒಳಗೆ ಬಂದ ಅನಂತನ ಸ್ವರೂಪ ಹಳ್ಳಿಯ ಹುಡುಗನಾದ ನಟರಾಜನನ್ನು ವಿಸ್ಮಯಗೊಳಿಸಿತು. ಪಟ್ಟಣದ ಹುಡುಗರು ತುಂಬಾ 'ಶೋಕಿಲಾಲ'ರೆಂದು ಅವನು ಕೇಳಿದ್ದ. ಆದರೆ ಈ ಅನಂತನ ನಡತೆಯಲ್ಲಾಗಲಿ ಉಡುಪಿನಲ್ಲಾಗಲಿ ಶೋಕಿಯ ಸುಳಿವೇ ಇಲ್ಲ! ಅವನನ್ನು ಥಟ್ಟನೆ ನೋಡಿದ ಯಾರಾದರೂ ಅವನು ಹಳ್ಳಿಯ ಕುಸಂಸ್ಕೃತ ಬಾಲಕನೆಂದೇ ಭಾವಿಸುತ್ತಿದ್ದರು.

ನಟರಾಜ ಆ ವ್ಯಕ್ತಿಯನ್ನೇ ಕುತೂಹಲನಯನನಾಗಿ ನಿಟ್ಟಿಸಿದ. ಮಂಡಿಗೆ ಐದಾರು ಅಂಗುಲ ಬಿಟ್ಟಂತೆ ಅವನು ಧರಿಸಿದ್ದ ಆ ತುಂಡು ಚೆಡ್ಡಿ, ಗುಂಡಿಗಳೆಲ್ಲಾ ಎಂದೋ ಬಿದ್ದು ಹೋಗಿದ್ದುದರಿಂದ ಸದಾ ಬಾಯಿ ತೆರೆದು ಅವನ ಎದೆಯನ್ನು ಸಂಪೂರ್ಣವಾಗಿ ಪ್ರದರ್ಶಿಸುತ್ತಿದ್ದ ಆ ಅರ್ಧ ತೋಳಿನ ಅಂಗಿ. ಎಣ್ಣೆಯನ್ನು ಕಂಡು ಯುಗ ಯುಗಗಳು ಕಳೆದಿರಬಹುದು ಎಂದು ಸಾರಿ ಹೇಳುವಂತಿದ್ದ ಒರಟು ಒರಟಾದ ಆ ತಲೆಗೂದಲು....ಒಂದೊಂದನ್ನು ನೋಡಿದಾಗಲೂ ನಟರಾಜನಿಗೆ ವಿಚಿತ್ರವೆನಿಸಿತು. ಆದರೆ ಇಷ್ಟೆಲ್ಲ ವಕ್ರತೆ ತುಂಬಿದ್ದರೂ ಅವನ ವ್ಯಕ್ತಿತ್ವದಲ್ಲಿ ಅವರ್ಣನೀಯವಾದ ಒಂದು ಮೋಹಕತೆ, ಆಕರ್ಷಣೀಯ ಶಕ್ತಿ ಹುದುಗಿದ್ದಿತು. ಆ ಶಕ್ತಿಯೆಲ್ಲಾ ಅವನ ಕಣ್ಣುಗಳಲ್ಲಿ ಕೇಂದ್ರೀಕೃತವಾದಂತೆ ಕಾಣುತ್ತಿತ್ತು. ಸದಾ ಯಾವುದೋ ಕನಸಿನ ರಾಜ್ಯದಲ್ಲಿ ವಿಹರಿಸುತ್ತಿರುವಂತೆ ತೋರುವ ಆ ನೋಟದಲ್ಲಿ ಅವನ ವ್ಯಕ್ತಿತ್ವದ ಇನ್ನೆಲ್ಲ ಶಠತ್ವವನ್ನೂ ಮರೆಮಾಡುವ ವೈಖರಿಯಿತ್ತು.

ಊಟ ಮುಗಿಸಿ ಅವರಿಬ್ಬರು ಬಾಲಕರೂ ಅನಂತನ ಕೋಣೆಯನ್ನು ಹೊಕ್ಕ ಸ್ವಲ್ಪ ಹೊತ್ತಿನಲ್ಲಿಯೇ ಅವರಿಬ್ಬರಲ್ಲಿಯೂ ಪರಸ್ಪರ ಮೈತ್ರಿ ಏರ್ಪಟ್ಟಿತ್ತು. ಅನಂತನದು ನಿರ್ಮಲಚಿತ್ತ. ತೋರಿದುದನ್ನು ತೋರಿದಂತೆಯೇ ನುಡಿಯುವ ತಿಳಿಮನಸ್ಸು, ಶೋಕಿಯಿಂದ ದೂರನಾದಂತೆ ಅನಂತ ಅಹಂಭಾವದಿಂದಲೂ ದೂರನಾಗಿದ್ದ. ತನ್ನೊಡನೆ ಕೊಂಚ ಕಾಲ ಹರಟುವುದರಲ್ಲಿಯೇ ನಟರಾಜನನ್ನು ಆಯಸ್ಕಾಂತದಂತೆ ಆಕರ್ಷಿಸಿದ. ಅನಂತನಂಥ ತಿಳಿಸ್ವಭಾವ ಜನಕ್ಕೆ ಮಿತ್ರರಾಗುವದೂ ಬೇಗ; ಶತ್ರುಗಳಾಗುವುದೂ ಅಷ್ಟೇ ಬೇಗ.

ಅಂದು ಸಂಜೆ ಊರನ್ನು ತೋರಿಸಿಕೊಂಡು ಬರುವೆನೆಂದು ತನ್ನ ತಂದೆ ತಾಯಿಯರೊಡನೆ ಹೇಳಿ, ನಟರಾಜನನ್ನು ಕೂಡಿಕೊಂಡು ಅನಂತ ಮನೆಯಿಂದ ಹೊರಬಿದ್ದ. ಹೊಸಲು ದಾಟುತ್ತಿರುವಂತೆ "ಹೊತ್ತು ಮಾಡಬೇಡ ಅನಂತೂ, ನಿನಗೇನು ಸರಿಯಾಗದೆ, ಒಂದು ಹೊತ್ತು ಗೊತ್ತೂ ಅನ್ನೋದೆ ಇಲ್ಲ. ಪಾಪ, ಅದು ಮೊದಲೇ ಹಳ್ಳಿ ಹುಡುಗ. ಏನೊಂದರೆ ಏನೂ ಅರೀದು. ಜಾಗ್ರತೆ ಬಂದು ಬಿಡು ಅವನ್ನೂ ಕರೆಕೊಂಡು" ಎಂದು ತ್ವರೆಗೊಳಿಸಿದಳು ಯಶೋದಮ್ಮ.

"ಆಗಲಿ" ಎಂದು ಹೇಳಿ ಹೊರಟ ಅನಂತ ನಟರಾಜನೊಡನೆ ಪಟ್ಟಣದೊಳಗೆಲ್ಲ ಸುತ್ತಾಡಿದ.

ಮೈಸೂರು ಭಾರತ ದೇಶದ ಅತ್ಯಂತ ಸುಂದರ ನಗರಗಳಲ್ಲೊಂದು. ಕಲ್ಕತ್ತಾ, ಬೊಂಬಾಯಿ ಮುಂತಾದ ಭಾರಿಭಾರಿ ನಗರಗಳಿಂದ ಬರುವ ನಾಜೂಕಿನ ಜನರು ಈ ಪಟ್ಟಣದ ಅಚ್ಚುಕಟ್ಟನ್ನೂ, ಕಲೆಗಾರಿಕೆಯನ್ನೂ, ವೈಭವವನ್ನೂ ವಿಶೇಷವಾಗಿ ಮೆಚ್ಚಿಕೊಂಡಿದ್ದಾರೆ. ಇಲ್ಲಿನ ಸುಂದರ ಉಪವನಗಳು, ಪೂರ್ಣವಾಗಿ ಪುಷ್ಪಿಸಿದ ವೃಕ್ಷಗಳಿಂದ ಇಕ್ಕೆಲಗಳಲ್ಲೂ ಅಲಂಕೃತಗೊಂಡು ಮೆರೆಯುವ ಸುವಿಶಾಲವಾದ ಇಲ್ಲಿನ ಬೀದಿಗಳು, ಮನೋಹರವಾದ ಗುಲಾಬಿ, ಮಲ್ಲಿಗೆ, ಜಾಜಿಗಳ ಹೂದೋಟಗಳನ್ನುಳ್ಳ ಇಲ್ಲಿನ ಮಹಲುಗಳು, ಮನಮೋಹಕ ವಾದ ಇಲ್ಲಿನ ಅರಮನೆ, ಪಟ್ಟಣದ ಒಂದು ಬದಿಗೆ ಹಬ್ಬಿದ ಚಾಮುಂಡಿ ಬೆಟ್ಟದ ವೈಖರಿ– ಒಂದೊಂದು ದೃಶ್ಯವೂ ನೋಡಿದವರ ಕಣ್ಮನಗಳನ್ನು ತಣಿಸುವಂತಹುದು. ಮೊದಲ ಬಾರಿಗೆ ನಗರಜೀವನದ ಇಂಥ ನೋಟಗಳನ್ನು ಸರಿಯಾಗಿ ನೋಡದ ನಟರಾಜನಿಗೆ ಬೆರಗು ಬಡಿದಂತಾಗಿತ್ತು. ಆತ ಏನೊಂದೂ ಮಾತನಾಡದೆ ಮೌನವಾಗಿ ಹೆಜ್ಜೆ ಹಾಕುತ್ತಿದ್ದ.

ಆದರೆ ಈ ಮೌನ ಅನಂತನಿಗೆ ಸರಿಬೀಳಲಿಲ್ಲ. ಅನಂತನಿಗೂ ಮೌನಕ್ಕೂ ಸುಖ ದುಃಖಗಳಿಗೆ ಪರಸ್ಪರ ಇರುವಷ್ಟು ಅಂತರ ! ಅವನು ಸದಾ ಏನಾದರೊಂದು ಹವ್ಯಾಸಗಳಲ್ಲಿ ಮಗ್ನನಾಗಿರಬೇಕು; ಕೆಲಸವಿಲ್ಲದ ವೇಳೆ ಏನಾದರೊಂದು ಮಾತಾಡುತ್ತಿರಬೇಕು.

"ಯಾಕೋ ನಟರಾಜ, ಹೀಗೆ ಮೂಕನಾಗಿಬಿಟ್ಟಿದ್ದೀಯೆ? ನನ್ನ ಜೊತೆ ಆಗಲೆ ಬೇಜಾರಾಗಿಬಿಡ್ತೇನೊ ?" ಎಂದು ಕೇಳಿ, ನಟರಾಜ ತನ್ನ ಪ್ರಶ್ನೆಗೆ ಉತ್ತರ ಕೊಡುವಷ್ಟರಲ್ಲಿ "ಬಾ, ನಿನಗೆಲ್ಲೊ ಹೊಟ್ಟೆ ಹಸೀತಾ ಇರಬೇಕು. ಜಗನ್ಮೋಹನ ಬಂಗ್ಲೆ ಹತ್ತಿರ ನಾರಣಾಚಾರಿ ಹೋಟಲು ಅಂತ ಇದೆ. ಅಲ್ಲಿ ಸೊಗಸಾದ ಸಾದಾ ದೋಸೆ ಹಾಕ್ತಾನೆ. ಅಲ್ಲಿಗೆ ಹೋಗಿ ಒಂದೊಂದು ಸಾದಾ ದೋಸೆ ಕತ್ತರಿಸಿಬಿಡೋಣ, ಬಾ. ಅಮೇಲೆ ಸರಿಹೋಗ್ತೀಯೆ" ಎನ್ನುತ್ತಾ ಆತುರಾತುರವಾಗಿ ಹೆಜ್ಜೆ ಹಾಕಲುಪಕ್ರಮಿಸಿದ. ನಿರ್ವಾಹವಿಲ್ಲದೆ ನಟರಾಜನೂ ಅವನನ್ನು ಮೌನದಿಂದ ಹಿಂಬಾಲಿಸಿದ.

ಆ ಕಾಲಕ್ಕೆ ನಾರಣಾಚಾರಿ ಹೋಟಲೆಂದರೆ ಬಹಳ ಪ್ರಸಿದ್ಧಿ. ಅದರಲ್ಲೂ ಆತ ತಯಾರಿಸುತ್ತಿದ್ದ ಸಾದಾ ದೋಸೆ ಮನೆ ಮನೆಯ ಮಾತಾಗಿತ್ತು. ಆ ಹೋಟೆಲಿನ ಸುತ್ತಮುತ್ತ ವಾಸಿಸುತ್ತಿದ್ದ ಜನ ಬೆಳಗಿನ ವೇಳೆ ತಮ್ಮ ಮನೆಗಳಲ್ಲಿ ಒಲೆಗಳನ್ನೇ ಹೊತ್ತಿಸುತ್ತಿರಲಿಲ್ಲ. ಎಲ್ಲರೂ ನಾರಣಾಚಾರಿಯ ಹೋಟಲಿಗೇ ಮುಗುಚಿಕೊಳ್ಳುತ್ತಿದ್ದರು. ಗಂಡಸರು ತಾವು ತಿನ್ನುವಷ್ಟು ದೋಸೆ ತಿಂದು ತಮ್ಮ ತಮ್ಮ ಮನೆಗಳಿಗೂ ದೋಸೆಗಳನ್ನು ಕಟ್ಟಿಸಿ ತೆಗೆದುಕೊಂಡು ಹೋಗುತ್ತಿದ್ದರು. ಎಂಟು ಎಂಟೂವರೆ ಗಂಟೆಯ ಸುಮಾರಿಗೆ ಆ ಹೋಟಲಿಗೆ ತೀರ ದೂರದಲ್ಲಿ ವಾಸಿಸುತ್ತಿದ್ದ ಜನರೂ ಬಂದು ಸೇರುತ್ತಿದ್ದರು.

ಎಷ್ಟೋ ಗೃಹಿಣಿಯರು ನಾರಣಾಚಾರಿಯನ್ನು ಮನಸ್ಸಿನಲ್ಲೇ ವಂದಿಸಿದ್ದರು. ಏಕೆಂದರೆ ಅವರ ಪ್ರಾತಃಕಾಲದ ಅಡುಗೆಯ ಕಾರ್ಯವನ್ನೆಲ್ಲ ಆತನು ತನ್ನ ಕೈಗಳ ಮೇಲೆ ತೆಗೆದುಕೊಂಡು

ಉಪಕಾರ ಮಾಡಿದ್ದ. ಅದರಲ್ಲೂ ಅಧಿಕ ಸಂಖ್ಯೆಯ ಮಕ್ಕಳಿರುವ ತಾಯಂದಿರು, ಬಾಣಂತಿ ಸ್ತ್ರೀಯರು "ಸದ್ಯ ದೇವರು ಆ ನಾರಣಾಚಾರಿಗೆ ನೂರು ವರ್ಷ ಆಯುಷ್ಯ ಕೊಡಲಿ" ಎಂದು ಹಾರೈಸುತ್ತಿದ್ದರು. ಆದರೆ ಕೆಲವು ಮಹಿಳೆಯರು ಮಾತ್ರ ನಾರಣಾಚಾರಿಯ ಹೆಸರೆತ್ತಿದರೆ ಬೆಂಕಿಯಾಗುತ್ತಿದ್ದರು. ತಮ್ಮ ಸಹಜವಾದ ಕೌಟುಂಬಿಕ ಜೀವನವನ್ನು ಒಡೆದು ಹಾಕಿದ ಶತ್ರು, ಎಂದು ಕೂಡ ಶಪಿಸುತ್ತಿದ್ದರು. ಬೆಳಿಗ್ಗೆ ಎದ್ದ ಕೂಡಲೆ ಇನ್ನೂ ಪವಡಿಸಿರುವ ತಮ್ಮ ಗಂಡಂದಿರನ್ನು ಉದ್ದೇಶಿಸಿ "ಹೊತ್ತಾಯ್ತು, ಏಳಿ, ಏಳಿ. ಪಾಪ ನಿಮ್ಮ ನಾರಣಾಚಾರಿ ಅಲ್ಲಿ ಕಾಯ್ತಾ ಇರಬೇಕು" ಎಂದು ಮೂದಲಿಸುತ್ತಿದ್ದರು.

ಅಂತೂ ಬೆಳಗಿನ ಸಮಯದಲ್ಲಿ ನಾರಣಾಚಾರಿಯ ಹೋಟಲು, ಗಂಡಸರನ್ನು ಪತಂಗಗಳನ್ನಾಕರ್ಷಿಸುವ ದೀಪದಂತೆ, ಆಕರ್ಷಿಸಿತ್ತು.

ಅನಂತ ನಟರಾಜನನ್ನು ಕೂಡಿಕೊಂಡು ಒಂದು ಮೂಲೆ ಸೇರಿ ಕುಳಿತ. ಹೋಟೆಲಿನಲ್ಲಿ ಆ ಸಾಯಂಕಾಲದಲ್ಲೂ ಜನ ಎಂದಿನಂತೆ ಕಿಕ್ಕಿರಿದು ನೆರೆದಿದ್ದರು.

ಇವರ ಪಕ್ಕದಲ್ಲಿ ಕುಳಿತವರ ಮುಂದೆ ನಾಲ್ಕು ಕಪ್ಪು ಕಾಫಿ ಇಟ್ಟು ಹಾಗೇ ಅನಂತ ನಟರಾಜರ ಮೇಜಿನ ಬಳಿಯೂ ಮಾಣಿಯೊಬ್ಬ ಹಾಜರಾದ. ಅವನ ಬಾಯಿ ಯಾಂತ್ರಿಕವಾಗಿ ಕೇಳಿತು : "ನಿಮಗೇನು ಬೇಕು ಸಾರ್ ?"

ಅನಂತ ನಟರಾಜನೆಡೆಗೆ ದೃಷ್ಟಿ ಹೊರಳಿಸಿದ. ಅವನು ಸುಮ್ಮನಿರುವುದನ್ನು ಗಮನಿಸಿ ಹುಸಿನಗು ನಗುತ್ತಾ, "ನಮ್ಮಿಬ್ಬರಿಗೂ ಎರಡೆರಡು ಸಾದಾ ದೋಸೆ ತಗೊಂಡು ಬಾ" ಎಂದು ಮಾಣಿಗೆ ಆಜ್ಞಾಪಿಸಿದ.

"ಸರಿ" ಎಂದ ಮಾಣಿ ಮುಂದಿನ ಮೇಜುಗಳ ಬಳಿಯೂ ಹೋಗಿ "ನಿಮಗೆ ಸಾರ್ ? ನಿಮಗೆ ? ನಿಮಗೆ ?....." ಎಂದು ಕೇಳುತ್ತಾ, "ಮಸಾಲೆ ಒಂದು, ಸಾದಾ ನಾಲ್ಕು..... ನಿಮಗೆ ? ಒಂದು ಕೇಸರಿ ಭಾತು, ಪಕೋಡ.... ಸರಿ. ನಿಮಗೆ? ಎರಡು ಪೂರಿ, ನಾಲ್ಕು ಉದ್ದಿನವಡೆ.... ನಿಮಗೆ? ಆರು ಸಾದಾ...." ಎಂದು ಅವರುಗಳು ಕೇಳಿದುದನ್ನೇ ತಾನೂ ಗಟ್ಟಿಯಾಗಿ ಉಚ್ಚರಿಸಿ, ತನ್ನ ಮನಸ್ಸಿಗೆ ಖಚಿತಮಾಡಿಕೊಂಡು ಹೋಟಲಿನೊಳಗೆ ಬರುವ, ಹೊರಗೆ ಹೋಗುವವರ ಅಸಾಧ್ಯ ಗೊಂದಲಗುಂಪಿನ ನಡುವೆ ತೂರಿಕೊಂಡು ಒಳಗೆ ಮಾಯವಾದ.

ನಟರಾಜ ಮಂಕನಂತೆ ಆ ಮಾಣಿಯ ಚಲನವಲನಗಳನ್ನೇ ದಿಟ್ಟಿಸುತ್ತ ಮಂಡಿಸಿದ್ದ. ಬರುವ ಹೋಗುವ ಜನಸಂದಣಿಯಂತೂ ಅವನನ್ನು ಭ್ರಾಂತಿಗೊಳಿಸಿತ್ತು. ಹುಣಸೂರಿನಲ್ಲೂ ಅವನು ಬಸ್ ನಿಲ್ದಾಣದಲ್ಲಿದ್ದ ಉಡುಪಿ ಹೋಟೆಲಿಗೆ ಎಷ್ಟೋ ಸಲ ಭೇಟಿ ಕೊಟ್ಟಿದ್ದ.

ಆದರೆ ಈ ಹೋಟಲಿಗೂ ಅದಕ್ಕೂ ಅಜಗಜಾಂತರ. ಇಲ್ಲಿಯ ಜನಪ್ರವಾಹದ ಎದುರು ಅಲ್ಲಿ ಸೇರುವ ಜನರ ಗುಂಪು ಒಂದು ಕಿರುತೊರೆ ಎನಿಸಿತು ಅವನಿಗೆ.

ನಟರಾಜ ಬರುವ–ಹೋಗುವ ಜನರನ್ನೂ ಅವರ ಮಂದೆ ತಪ್ಪದೆ ಪ್ರತ್ಯಕ್ಷರಾಗಿ ಅವರು ಕೇಳಿದ ತಿಂಡಿಯನ್ನು ತಂದುಕೊಡುತ್ತಿದ್ದ ಮಾಣಿಗಳನ್ನೂ ಮುಗ್ಧನಾಗಿ ದಿಟ್ಟಿಸುತ್ತಿದ್ದ.

ಅಷ್ಟರಲ್ಲಿ ತನಗೆ ಹೇಳಲ್ಪಟ್ಟ ತಿಂಡಿಗಳನ್ನು ಹತ್ತಾರು ತಟ್ಟೆಗಳಲ್ಲಿ ಒಂದರ ಮೇಲೊಂದು ಜೋಡಿಸಿಟ್ಟುಕೊಂಡು ಚಾಕಚಕ್ಯತೆಯಿಂದ ಜನರ ಗುಂಪಿನಲ್ಲಿ ನುಸುಳಿಕೊಂಡು ಇವರ ಮುಂದೆ ಪ್ರತ್ಯಕ್ಷವಾದ ಮಾಣಿ. "ಎರಡೆರಡು ಸಾದಾ" ಎಂದು ಕೂಗಿ ಎರಡು ತಟ್ಟೆಗಳನ್ನು ಇವರಿಬ್ಬರ ಮುಂದಿಟ್ಟು ಮುಂದಿನ ಮೇಜುಗಳ ಬಳಿ ಹರಿದುಹೋದ. ಇನ್ನು ಕೊಂಚ ಹೊತ್ತಿನಲ್ಲಿ ಪುನಃ ಹಾಜರಾಗಿ ಎರಡು ಲೋಟಗಳಲ್ಲಿ ನೀರು ತಂದಿಟ್ಟು ಹೋದ.

ದೋಸೆಗಳನ್ನು ತಿಂದು ಹೋಟಲಿನಿಂದ ಹೊರಗೆ ಬಂದಾಗಲೂ ನಟರಾಜ ಮಾಣಿಗಳ ವಿಷಯದಲ್ಲಿ ಅಚ್ಚರಿಪಡುತ್ತಲೇ ಇದ್ದ. ಎಷ್ಟೊಂದು ಜನ ಕೇಳಿದ ವಿವಿಧ ಬಗೆಯ ತಿನಿಸುಗಳನ್ನೆಲ್ಲ ಆ ಮಾಣಿಗಳು ನೆನಪಿನಲ್ಲಿಟ್ಟು ಅವುಗಳನ್ನು ಎಷ್ಟು ಸುಲಭವಾಗಿ ತಂದಿಡುತ್ತಿದ್ದರು?..... ಎಂತಹ ಪವಾಡ ಅದು ! ಎಂದೆಲ್ಲ ಯೋಚಿಸುತ್ತಿದ್ದ.

ಅನಂತ ನಟರಾಜನನ್ನು ಹಾಗೆಯೇ ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರ್ಕೆಟ್ಟುಗಳಲ್ಲಿ ಸುತ್ತಾಡಿಸಿ ಕುಕ್ಕರಹಳ್ಳಿ ಕೆರೆ ಸಮೀಪಕ್ಕೆ ಕರೆತಂದಿದ್ದ.

ಸಂಜೆಯ ಮೆಲುಗಾಳಿ ಕೆರೆಯ ನೀರಿನ ಮೇಲೆ ತೇಲಿ ಬಂದು ಅವರಿಬ್ಬರ ಶರೀರಗಳನ್ನು ಚುಂಬಿಸುತ್ತಿತ್ತು. ಅವರಿಬ್ಬರೂ ಏರಿಯ ಪುಟ್ಟ ರಸ್ತೆಯ ಮೇಲೆ ನಡೆದು ಹೋಗಿ ಲತಾಮಂಟಪವೊಂದರ ಶಿಲಾಪೀಠದ ಮೇಲೆ ಕುಳಿತರು. ಸೂರ್ಯನಾಗಲೇ ಮುಳುಗಿ ಹೊತ್ತು ಕಂತಿತ್ತು. ಸ್ವಲ್ಪ ಕಾಲದ ಹಿಂದೆ ಸಂಧ್ಯಾರಾಗದಿಂದ ಅರಕ್ತವಾಗಿದ್ದ ಪಶ್ಚಿಮ ನಭ, ಮಾಸಲು ಕೆಂಪುಬಣ್ಣಕ್ಕೆ ತಿರುಗಿತ್ತು.

ಅವರು ಕುಳಿತ ಕೆಲವು ನಿಮಿಷಗಳಲ್ಲಿ ಬೀದಿಯ ದೀಪಗಳು ಹೊತ್ತಿಕೊಂಡವು. ಮರುಕ್ಷಣವೇ ಆ ದೀಪಗಳ ಪ್ರತಿಬಿಂಬಗಳು ಕೆರೆಯ ನೀರಿನಲ್ಲಿ ಬೆಳಕಿನ ಕಂಬಗಳಂತೆ ಉದ್ದುದ್ದವಾಗಿ ಸಾಲು ಸಾಲಾಗಿ ಕಾಣಿಸಿಕೊಂಡವು. ಗಾಳಿ ನೀರಿನ ಮೇಲೆ ತೆಳುವಾಗಿ ಬೀಸಿದಂತೆ ನೀರಿನೊಳಗೆ ಈ ಬೆಳಕಿನ ಕಂಬಗಳೂ ಕೋಮಲವಾಗಿ ಅಲುಗಾಡುತ್ತಿದ್ದವು.

ನಟರಾಜ ಅದನ್ನೇ ನೋಡುತ್ತಿದ್ದವನು ಅನಂತನೆಡೆಗೆ ದೃಷ್ಟಿ ತಿರುಗಿಸಿದ. ಅನಂತ ಯಾವುದೊ ಅದ್ಭುತವನ್ನು ಕಂಡು ಆ ನೋಟದಲ್ಲೇ ತಲ್ಲೀನನಾದಂತಿತ್ತು.

ಕತ್ತಲು ಅಧಿಕವಾದಂತೆ ನೀರಿನೊಳಗಿನ ಆ ಬೆಳಕಿನಾಟವೂ ಸ್ಫುಟವಾಗಿ ಗೋಚರಿಸತೊಡಗಿತು. ಆರಂಭದಲ್ಲಿ ಬೆಳ್ಳಿಯ ಕಾಂತಿಯನ್ನು ತಳೆದಿದ್ದ ಬೆಳಕಿನ ಸಾಲು ಕಂಬಗಳು ಈಗೀಗ ಬಂಗಾರದ ಬಣ್ಣದಿಂದ ಥಳಥಳಿಸಹತ್ತಿದವು.

ನಟರಾಜನಿಗೆ ಈ ನೋಟ ಪ್ರಿಯವೆನಿಸಿತಾದರೂ ಅನಂತನಿಗೆ ಹಿಡಿಸಿದಷ್ಟು ಹುಚ್ಚು ಹಿಡಿಸಿರಲಿಲ್ಲ. ಹೊಸ ಜಾಗ, ಹೊಸ ಜನರನ್ನು ಕಂಡು ಮೊದಲೇ ದಿಗ್ಭ್ರಮೆ ಹಿಡಿದಂತಾಗಿದ್ದ ಅವನು ಪ್ರಕೃತಿಯಲ್ಲಿ ತನ್ಮಯನಾದ ಅನಂತನನ್ನು ಮಾತನಾಡಿಸುವ ಸಾಹಸ ಮಾಡಲಿಲ್ಲ. ಅದರ ಬದಲು ಏರಿಯ ಕಿರುದಾರಿಯಲ್ಲಿ ಗಾಳಿ ಸೇವನೆಗಾಗಿ ಸಂಚರಿಸುವ ಮೈಸೂರಿನ ಹತ್ತಾರು ಜನರನ್ನೇ ಮೌನವಾಗಿ ನಿರುಕಿಸುತ್ತ ಕುಳಿತ. ಎದುರಿಗೆ ನೀರಿನಲ್ಲಿ ಬಲೆ ಬೀಸಿ ಕಾದು ಕುಳಿತ ಒಬ್ಬಿಬ್ಬರು ಬೆಸ್ತರ ಕಡೆಗೂ ಅವನ ದೃಷ್ಟಿ ಹರಿಯುತ್ತಿತ್ತು..... ಬಾನಂಗಳದಲ್ಲಿ ಚುಕ್ಕಿಗಳು ಒಡೆದು ಅವುಗಳ ಕಾಂತಿ ಪ್ರಖರವಾದಂತೆ ಕೆರೆಯ ಜಲಗನ್ನಡಿಯಲ್ಲಿ ಅವುಗಳ ಬಿಂಬಗಳು ಆಕರ್ಷಕವಾಗಿ ಮಿನುಗತೊಡಗಿದವು.

ಅನಂತನ ಏಕಾಗ್ರತೆ ಅಧಿಕವಾಯಿತು.

ಅವನನ್ನೆ ನಿಟ್ಟಿಸುತ್ತಿದ್ದಂತೆ ನಟರಾಜನಿಗೆ ಅಂದು ಮಧ್ಯಾಹ್ನ ಊಟ ಮಾಡುವಾಗ ಯಶೋದೆ ಚಿಕ್ಕಮ್ಮ ಆಡಿದ ಮಾತುಗಳು ನೆನಪಿಗೆ ಬಂದವು:

"ನೆನ್ನೆ ಸಾಯಂಕಾಲ ನೋಡಬೇಕಾಗಿತ್ತು ನೀವು ಅವನ್ನ ! ಆಕಾಶದಲ್ಲಿ ಮೋಡಗಳು ಹೋಗೋದ್ನೇ ಬೆಪ್ಪನ ಹಾಗೇ ನೋಡ್ತಾ ನಿಂತುಬಿಟ್ಟಿದ್ದ."

"ಹುಚ್ಚ" ಎಂದುಕೊಂಡ ನಟರಾಜ. ಅನಂತನ ತುಂಟ ಸ್ವಭಾವಕ್ಕೂ ಪ್ರಕೃತಿಯ ಎದುರು ನೀರವವಾಗಿ ಮೌನ ತಾಳುವ ಅವನ ಸರಳ ಹೃದಯಕ್ಕೂ ಇರುವ ಅಂತರ ನಟರಾಜನಿಗೆ ಸೋಜಿಗವೆನಿಸಿತು.

ಎಷ್ಟೋ ಕಾಲ ಹೀಗೆ ಕಳೆದ ಬಳಿಕ ಅನಂತ ಯಾವುದೋ ಕನಸಿನಿಂದ ಎಚ್ಚೆತ್ತವನಂತೆ "ಓ ! ಎಷ್ಟು ಹೊತ್ತು ಆಗೋಗದೇ ?" ಎಂದುಕೊಳ್ಳುತ್ತ "ನಟರಾಜ, ಬಾರೊ ಹೋಗೋಣ" ಎನ್ನುತ್ತಾ ಎದ್ದು ಹೊರಟೇಬಿಟ್ಟ. ನಟರಾಜನೂ ಎದ್ದು ಮೌನವಾಗಿ ಅವನ ಹಿಂದೆಯೇ ಹೊರಟ.

ಕೆರೆಯ ಏರಿಯನ್ನು ಇಳಿದು ಬಂದಂತೆ ಹಾದಿಗೆ ಅಡ್ಡಲಾಗುವ ರೈಲ್ವೆ ಕಂಬಿಗಳನ್ನು ದಾಟುತ್ತಿದ್ದಂತೆ, ಇಲ್ಲಿಯ ತನಕ ಕಾಲೇಜು ಮುಖ್ಯೋಪಾಧ್ಯಾಯರ ಬಂಗಲೆಗಳ ಅಡಚಣೆ ಇದ್ದುದರಿಂದ ಕಾಣದಿದ್ದ ಚಾಮುಂಡಿ ಬೆಟ್ಟ ದೃಷ್ಟಿಗೆ ಬಿದ್ದಿತು. ಬೆಟ್ಟವನ್ನು ಬೆಪ್ಪನಂತೆ ಈಗ ನಿಟ್ಟಿಸುತ್ತ ನಿಂತವನು ನಟರಾಜ!

ಆ ನೋಟ ಹಳ್ಳಿಯ ಹುಡುಗನಾದ ನಟರಾಜನಿಗೆ ಅಷ್ಟು ವಿಸ್ಮಯಕಾರಿಯಾಗಿತ್ತು... ಚಾಮುಂಡಿ ಬೆಟ್ಟದ ಮೇಲುಗಡೆ ಬೆಟ್ಟದುದ್ದಕ್ಕೂ ಸಾಲಾದ ನಕ್ಷತ್ರ ಮಾಲೆಯಂತೆ ದೀಪಗಳು ಬೆಳಗುತ್ತಿದ್ದವು. ಅರ್ಧಚಂದ್ರಾಕಾರದ ಆ ದೀಪಮಾಲೆಯ ಮಧ್ಯದಿಂದ ಇನ್ನೊಂದು ದೀಪಮಾಲೆ ಬೆಟ್ಟವನ್ನು ಎರಡು ಮಾಡಿ ಹೆಣ್ಣಿನ ಬೈತಲೆಯ ಸರದಂತೆ ಮುಡಿಯಿಂದ ಅಡಿಯವರೆಗೂ ಇಳಿದಿತ್ತು. ಅವೆರಡು ದೀಪಮಾಲೆಗಳೂ ಕೂಡಿದ ಕಡೆ, ಬೆಟ್ಟದ ನಡುನೆತ್ತಿಯ ಮೇಲೆ ಮಾಣಿಕ್ಯದಂತೆ ಹೊಳೆಯುವ ಕೆಂಪುದೀಪವೊಂದು ಉರಿಯುತ್ತಿತ್ತು.

ಆ ಸುಂದರ ದೃಶ್ಯವನ್ನು ಕಂಡು ನಟರಾಜ ಮುಗ್ಧನಾಗಿ ಹೋಗಿದ್ದ. ಅಡಿಗಡಿಗೆ ಅನಂತನೊಡನೆ ಮೈಸೂರು ನಗರದ ಚೆಲುವನ್ನು ಹೊಗಳುತ್ತ ಹೆಜ್ಜೆ ಹಾಕತೊಡಗಿದ.

ಇಬ್ಬರೂ ಮನೆಯನ್ನು ಸೇರುವ ವೇಳೆಗೆ ಆಗಲೇ ಹತ್ತು ಗಂಟೆ ಹೊಡೆದು ಹೋಗಿತ್ತು.

"ಎಲ್ಲೆಲ್ಲಿ ಸುತ್ತಿಸ್ತಾ ಇದ್ದಾನೋ ಪುಣ್ಯಾತ್ಮ !" ಎಂದು ಅರ್ಧ ಗಂಟೆಯಿಂದಲೂ ಬೀದಿಯ ಬಾಗಿಲಿನಲ್ಲಿಯೇ ಇವರಿಗಾಗಿ ಕಾದು ನೋಡಿ ಸಾಕಾಗಿ ಅದೇ ತಾನೇ ಒಳಗೆ ಬಂದ ನಂಜುಂಡಸ್ವಾಮಿ ಹೆಂಡತಿಯೊಡನೆ ನಿಟ್ಟುಸಿರಿಡುತ್ತಾ ಹೇಳಿದನು.

ಯಶೋದಮ್ಮ ಪತಿಯ ಮಾತಿಗೆ ಏನೋ ಉತ್ತರವೀಯಬೇಕೆನ್ನುವಷ್ಟರಲ್ಲಿ ಅನಂತನ ಸವಾರಿ ನಟರಾಜನೊಡಗೂಡಿ ಚಿತ್ತೈಸಿತ್ತು. ಅದನ್ನು ಕಂಡು "ಅಗೋ–ಬಂದ" ಎಂದು ಮಾತ್ರ ಹೇಳಿದಳು ಯಶೋದಮ್ಮ.

ನಂಜುಂಡಸ್ವಾಮಿ ಕೋಪಿಸಿಕೊಂಡು 'ಲಲ್ಲೆ–ಲಲ್ಲೆ' ಎಂದು ಲೊಟಗುಟ್ಟುತ್ತಲೇ ಊಟ ಮುಗಿಸಿ ಎದ್ದನು.

ಎಷ್ಟೇ ಕೋಪ ಬಂದರೂ ಮಗನ ಮೇಲಿನ ಮೋಹ ನಂಜುಂಡಸ್ವಾಮಿಯನ್ನು ವಿಶೇಷವಾಗಿ ಬಯ್ಯಗೊಡುತ್ತಿರಲಿಲ್ಲ. ಈಗ್ಗೆ ಹದಿನಾರು ವರುಷಗಳ ಹಿಂದೆ ಅವನ ಹಿರಿಯ ಮಗ ಮೃತನಾದ ಮೇಲಂತೂ ಅವನ ಪ್ರೀತಿಯೆಲ್ಲಾ ಇರುವ ಒಬ್ಬ ಪುತ್ರನಾದ ಅನಂತನಲ್ಲೇ ಕೇಂದ್ರೀಕೃತವಾಯಿತು. ಅವನ ಆಸೆ, ಆಕಾಂಕ್ಷೆಗಳೆಲ್ಲವೂ ಅನಂತನ ಶ್ರೇಯೋಭಿವೃದ್ಧಿಯನ್ನೇ ಅವಲಂಬಿಸಿದ್ದವು.

ನಂಜುಂಡಸ್ವಾಮಿ ಮೈಸೂರು ರೈಲ್ವೆಯಲ್ಲಿ ಒಬ್ಬ ಗಾರ್ಡು. ಅವನಿಗೆ ಬರುತ್ತಿದ್ದ ನಲವತ್ತು ರೂಪಾಯಿ ಸಂಪಾದನೆಯಲ್ಲದೆ ಅದರಷ್ಟೇ 'ಮೇಲೆ–ಸಂಪಾದನೆ'ಯೂ ಇದ್ದಿತು. ಅದೂ ಅಲ್ಲದೆ ಅವನ ತಂದೆ ಶಿವಸ್ವಾಮಿ ಸ್ವತಃ ತಾನೇ ನಿಂತು ಕಟ್ಟಿದ ಮನೆ ಮೈಸೂರಿನ ಅವಸರ ಜೀವನದಲ್ಲಿ (ಕಲ್ಲಹಳ್ಳಿಗೆ ಹೋಲಿಸಿದರೆ) ನಿಲ್ಲುವುದಕ್ಕೊಂದು ಠಾವು ಕಲ್ಪಿಸಿಕೊಟ್ಟಿತ್ತು. ಊಟವೊಂದು ಕಳೆದರೆ ಮಿಕ್ಕುದೆಲ್ಲಾ ಉಳಿತಾಯವೇ ಆಗಿದ್ದಿತು.

ಹೀಗಾಗಿ ನಂಜುಂಡಸ್ವಾಮಿಗೆ ಇತರ ಎಷ್ಟೋ ಬಡಪಾಯಿಗಳಂತೆ ಹೊಟ್ಟೆ ಬಟ್ಟೆಗೆ ಕೊರತೆ ಇರಲಿಲ್ಲ. ಜೀವನದ ಸಂಜೆಯಲ್ಲಿ ಅಡಿಯಿಡುತ್ತಿರುವ ಆತನಿಗೆ ಈಗಿದ್ದುದು ಒಂದೇ ಹಂಬಲ–ಮಗ ಚೆನ್ನಾಗಿ ಓದಿ ಭಾರಿ ಭಾರಿ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಬೇಕು. ದೊಡ್ಡ ಹುದ್ದೆ ಅವನಿಗೆ ದೊರೆಯಬೇಕು. ತಾನು ಸಾಯುವುದಕ್ಕೆ ಮುನ್ನ ಅನಂತ ಕನಿಷ್ಠ ಪಕ್ಷ ಅಸಿಸ್ಟೆಂಟ್ ಕಮೀಷನರ್ ಆಗುವುದನ್ನಾದರೂ ನೋಡಬೇಕು. ಅಹರ್ನಿಶಿ ಇದೇ ಪ್ರಾರ್ಥನೆ ನಂಜುಂಡಸ್ವಾಮಿ ದೇವರಲ್ಲಿ ಮಾಡುತ್ತಿದ್ದುದು.

ಆದರೆ ಅನಂತನನ್ನು ನೋಡಿದವರಿಗೆ ನಂಜುಂಡಸ್ವಾಮಿಯ ಪ್ರಾರ್ಥನೆಯನ್ನು ದೇವರು ನಡೆಸಿಕೊಡುವ ಸುಚಿಹ್ನೆಯೇ ಕಂಡುಬರುತ್ತಿರಲಿಲ್ಲ. ಮೊದಲಿನಿಂದಲೂ ಅನಂತನಿಗೂ ವ್ಯಾಸಂಗಕ್ಕೂ ಎಣ್ಣೆ, ಸೀಗೇಕಾಯಿ ಇದ್ದಂತೆ ! ಶಾಲೆಯ ನಾಲ್ಕು ಗೋಡೆಯ ಆವರಣದಲ್ಲಿ ಕ್ಷಣಗಳನ್ನು ಕಳೆಯಬೇಕಾದರೂ ಅವನಿಗೆ ಅತ್ಯಂತ ಪ್ರಯಾಸವಾಗುತ್ತಿತ್ತು. ನಿತ್ಯವೂ ಗಂಟೆಗಟ್ಟಲೆ ಕೂರಲೇಬೇಕಾಗಿ ಬರುತ್ತಿದ್ದರಿಂದ ಅವನ ಕಷ್ಟ ಹೇಳತೀರದು. ಬಂದೀಖಾನೆಯ ಬಂದಿಗಳೂ ಅಷ್ಟು ಸಂಕಷ್ಟವನ್ನನುಭವಿಸುವುದಿಲ್ಲವೆನ್ನಬಹುದು.

ಅದರಲ್ಲೂ ಲೆಖ್ಖದ ಕ್ಲಾಸೆಂದರೆ ತೀರಿತು. ಆ 'ಪೀರಿಯಡ್' ಮುಗಿಯುವವರೆಗೂ ಮುಳ್ಳಿನ ಮೇಲೆ ಕುಳಿತಂತಿರುತ್ತಿತ್ತು ಅವನಿಗೆ. ಮೂರು ವರುಷ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದಾಗಲೂ ಲೆಖ್ಖವೇ ತಲೆಶೂಲೆಯಾಗಿ ಪರಿಣಮಿಸಿ ಮೂರು ವರುಷವೂ ಅನಂತ ಅದೇ ಕ್ಲಾಸಿನಲ್ಲಿ ಉಳಿಯಬೇಕಾಗಿ ಬಂದಿತ್ತು. ಆ ಬಾರಿ ಅದು ಹೇಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನೊ ಬ್ರಹ್ಮನಿಗೇ ಗೊತ್ತು ! ಈ ಕಾರಣದಿಂದಲೇ ವಯಸ್ಸಿನಲ್ಲಿ ನಟರಾಜನಿಗಿಂತ ಮೂರು ವರುಷ ಹಿರಿಯವನಾದರೂ ಈಗ ತಾನೆ ನಟರಾಜನ ಜೊತೆಗೇ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಆರಂಭಿಸುವನಾಗಿದ್ದ.

ಆ ರಾತ್ರಿ ಇಬ್ಬರೂ ಊಟ ಮುಗಿಸಿ ಮಲಗುವ ಕೋಣೆಯನ್ನು ಸೇರಿದಾಗ ಅನಂತನಿಗೆ ಜಾಗ್ರತೆಯಾಗಿ ನಿದ್ದೆ ಒಲಿಯಿತು. ಆದರೆ ನಟರಾಜನಿಗೆ ಮಾತ್ರ ಎಷ್ಟು ಪ್ರಯತ್ನಪಟ್ಟರೂ ಬಹಳ ಹೊತ್ತಿನವರೆಗೆ ಅವನ ಕಣ್ಣಿಗೆ ನಿದ್ದೆ ಎನ್ನುವುದೇ ಹತ್ತಲಿಲ್ಲ. ಹೊಸ ಪ್ರದೇಶಕ್ಕೆ ಹೋದಾಗ ಯಾರಿಗಾದರೂ ಹಾಗಾಗುವುದು ಸಾಮಾನ್ಯ. ಅದರಲ್ಲೂ ನಟರಾಜನಂತಹ ಒಬ್ಬ ಹಳ್ಳಿಯ ಹುಡುಗ ಪ್ರಥಮ ಬಾರಿಗೆ ಪಟ್ಟಣ ಸೇರಿ ಅಲ್ಲೇ ವಾಸಿಸಬೇಕಾಗಿ ಬಂದಾಗ ಮೊದಲು ಕೆಲವು ದಿನ ದಿಗ್ಭ್ರಮೆ ಹಿಡಿದಂತಾಗುತ್ತದೆ. ಮೊದಲೆರಡು ರಾತ್ರಿಗಳಂತೂ ಜಾಗ್ರತೆ ನಿದ್ರೆ ಬರುವುದು ಅಪರೂಪ.

ಬೇಗ ನಿದ್ರೆ ಬಾರದ್ದರಿಂದ ನಟರಾಜನ ಯೋಚನೆ ಹಳ್ಳಿಯ ಕಡೆಗೆ ಹರಿಯಿತು. ಅಜ್ಜಿ, ಅಕ್ಕ, ಭಾವ, ಮಂಗಳೆಯರ ಸ್ವರೂಪಗಳು ಒಂದೊಂದಾಗಿ ಅವನ ಅಂತರಂಗದಲ್ಲಿ ಕಾಣತೊಡಗಿದವು. ತನ್ನೊಡನೆಯೂ ಮಂಗಳೆಯೊಡನೆಯೂ ಮಗುವಿಗಿಂತ ಹೆಚ್ಚಾಗಿ

ಆಡುತ್ತಿದ್ದ ಅಜ್ಜಿಯನ್ನು ತಾನು ಬಿಟ್ಟು ಬಂದಿರುವೆನು ಎಂದು ನೆನಸಿಕೊಂಡಾಗ ಅನುಭವಿಸಲಾಗದಷ್ಟು ಸಂಕಟವಾಯಿತು ಅವನಿಗೆ. ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆಯೇ ಪ್ರೀತಿಯಿಂದ ಸಾಕಿ ತನ್ನನ್ನು ಇಷ್ಟು ದೊಡ್ಡವನನ್ನಾಗಿ ಬೆಳೆಸಿದ ಅಕ್ಕ, ಭಾವಂದಿರನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡ. ಆದರೆ ಇವರೆಲ್ಲರಿಗಿಂತಲೂ ಸರ್ವಮಂಗಳೆಯನ್ನು ಅಗಲಿರುವುದು ಅವನಿಗೆ ವಿಪರೀತ ನೋವನ್ನುಂಟುಮಾಡಿತ್ತು. ಅವನ ಬಾಳಿಗೆ ಅವಳು ಅಷ್ಟು ಹೊಂದಿ ಬೆಳೆದಿದ್ದಳು. ನಿತ್ಯವೂ ಅವಳೊಡನೆ ಸರಸವಾಗಿ ಕಾಲ ಕಳೆಯುವುದು ಅವನಿಗೆ ಅಭ್ಯಾಸವಾಗಿಹೋಗಿತ್ತು. ಈಗ ಅವಳೊಡನೆ ಕೂಡಿಯಾಡುವುದು ತಪ್ಪಿ ಹೋಯಿತಲ್ಲಾ ಎಂದು ತೀರ ವ್ಯಥೆ ಪಟ್ಟುಕೊಂಡ. ಅವಳ ಜೊತೆಯಿಲ್ಲದೆ ಕಾಲ ಕಳೆಯುವುದು ಅಸಹನೀಯವೆನಿಸಿತ್ತು.

ಹೀಗೆ ಯೋಚನೆಯಲ್ಲಿ ಮುಳುಗಿದ್ದಂತೆಯೇ ತನ್ನ ಮಗ್ಗುಲಿನಲ್ಲಿ ಮಲಗಿದ್ದ ಅನಂತನನ್ನೇ ದುರದುರನೆ ನೋಡತೊಡಗಿದ ನಟರಾಜ. ಈ ಹೊಸ ಗೆಳೆಯನನ್ನು ನಿಟ್ಟಿಸಿದಂತೆ ಆತ ಆ ಸಂಜೆಯೆಲ್ಲಾ ಊರಿನಲ್ಲಿ ಸುತ್ತಾಡಿಸಿ ಮೈಸೂರು ನಗರದ ವೈಭವ ದೃಶ್ಯಗಳನ್ನು ತನಗೆ ತೋರಿದ್ದು ನೆನಪಾಗಿ ಮನಸ್ಸಿನಲ್ಲಿಯೇ ಅವನಿಗೆ ಸಾವಿರ ನಮಸ್ಕಾರ ಹಾಕಿದ. ಅನಂತನಿಗೂ ತನಗೂ ಅಷ್ಟು ಬೇಗ ಮೈತ್ರಿ ಬೆಳೆದುದು ತನ್ನ ಸುಯೋಗವೆಂದೇ ಭಾವಿಸಿದ.

ಹೀಗೆ ಏನೇನೋ ವಿಚಾರಗಳು ಸುಳಿಯುತ್ತಿರುವಂತೆ ನಿದ್ರೆ ಅವನಿಗೆ ಅರಿವಾಗದಂತೆಯೇ ತನ್ನ ಮಾಯೆಯ ಮುಸುಕನ್ನು ಅವನ ಮೇಲೆ ಬೀಸಿತು. ಕ್ರಮಕ್ರಮೇಣವಾಗಿ ವಿಚಾರಗಳು ಅಸ್ಫುಟವಾಗುತ್ತ ಬಂದು ನಿದ್ದೆಯ ಕಡಲಲ್ಲಿ ಅವನು ಮುಳುಗಿದ.

ಬೆಳಿಗ್ಗೆ ಅವನು ಎದ್ದಾಗ ಅನಂತನಿನ್ನೂ ಮಲಗೇ ಇದ್ದ. ಅವನ ತಾಯಿ ಯಶೋದಮ್ಮ, ಮಲಗಿದ ಅನಂತನ ಮಗ್ಗುಲಲ್ಲಿ ನಿಂತು, "ಸೋಂಭೇರಿ–ಸೋಂಭೇರಿ" ಎಂದು ಬೈದು ಅವನನ್ನು ಎಬ್ಬಿಸುತ್ತಿದ್ದರು. ನಂಜುಂಡಸ್ವಾಮಿಯಾಗಲೇ ರೈಲ್ವೇ ಗಾರ್ಡಿನ ಕಪ್ಪು ಸರ್ಜ್ ಉಡುಪು ಧರಿಸಿ ಸ್ಟೇಶನ್ನಿಗೆ ಹೊರಡುವ ಸನ್ನಾಹದಲ್ಲಿದ್ದನು.

ಅನಂತ ಎದ್ದ ಬಳಿಕ, ಇಬ್ಬರೂ ಪ್ರಾತರ್ವಿಧಿಗಳನ್ನು ತೀರಿಸಿ ಯಶೋದಮ್ಮ ಕೊಟ್ಟ ಕಾಫಿಯನ್ನು ಕುಡಿದರು. ಅಷ್ಟರಲ್ಲಿ ಹೊರಗಿನಿಂದ ಯಾವುದೋ ಹೆಣ್ಣು ದನಿ "ಅತ್ತೇ–" ಎಂದು ಕೂಗಿದಂತಾಯಿತು.

"ಓ, ವಿಶಾಲಿ ಬಂದಳು ಅಂತ ಕಾಣಿಸ್ತದೆ. ಹೋಗು ಅನಂತು ಬಾಗಿಲು ತೆಗಿ" ಎಲ್ಲರ ಕಾಫಿ ಕುಡಿದ ಲೋಟಗಳನ್ನು ನೀರಿನಿಂದ ತೊಳೆಯುತ್ತ ಯಶೋದಮ್ಮ ಮಗನಿಗೆ ಆಜ್ಞಾಪಿಸಿದಳು.

ಮನಸ್ಸಿಲ್ಲದ ಮನಸ್ಸಿನಿಂದ, ತಾಯಿಯ ಬಲಾತ್ಕಾರಕ್ಕೆ ವಿಧಿಯಿಲ್ಲದೆ ಹಾಗೆ ಮಾಡುತ್ತಿರುವವನಂತೆ, ಎದ್ದು ಹೋಗಿ ಬಾಗಿಲು ತೆರೆದ ಅನಂತ.

ಆದರೆ ಹುಡುಗಿ ಒಳಗೆ ಬರಲಿಲ್ಲ. ಹೊಸ್ತಿಲ ಹೊರಗೇ ನಿಂತು "ದೇವರ ಪೂಜೆಗೆ ಅಮ್ಮ ಹೂವು ಕುಯ್ದುಕೊಂಡು ಬರಹೇಳಿದರು ಅತ್ತೆ. ಸ್ವಲ್ಪ ಕುಯ್ದುಕೊಳ್ಳಲಾ ಅತ್ತೆ ?" ಎಂದು ಕೂಗಿ ಕೇಳಿದಳು.

"ಆಗಲಿ ಕುಯ್ದುಕೊಳೇ" ಎಂದು ಅಡುಗೆ ಮನೆಯಿಂದ ಉತ್ತರ ಬಂದಿತು.

ಹುಡುಗಿ ಅನಂತನನ್ನು ತುಂಟತನದಿಂದಲೂ, ನಟರಾಜನನ್ನು ನಾಚಿಕೆಯಿಂದಲೂ ನೋಡಿ, ಅನಂತರ ಕಾಂಪೌಂಡಿನೊಳಗೆ ಬೆಳೆದಿದ್ದ ಕಣಿಗಲೆ ಮತ್ತು ಗುಲಾಬಿ ಹೂಗಳನ್ನು ಬಿಡಿಸಲು ನೆಗೆದಳು.

ವಿಶಾಲಾಕ್ಷಿ ನಂಜುಂಡಸ್ವಾಮಿಯ ತಂಗಿ ಆದಿಲಕ್ಷ್ಮಿಯ ದ್ವಿತೀಯ ಪುತ್ರಿ. ಆದಿಲಕ್ಷ್ಮಿಯ ಗಂಡ ಚಿನ್ನಸ್ವಾಮಿಯ ಚಿನ್ನದಂಗಡಿ ದೊಡ್ಡಪೇಟೆಯಲ್ಲಿದ್ದರೂ ವಾಸಿಸುವ ಮನೆಯನ್ನು ಮಾತ್ರ ಆತ ಇಟ್ಟಿಗೆಗೂಡಿನಲ್ಲಿಯೇ ಮಾಡಿಕೊಂಡಿದ್ದ.

ಥರ್ಡ್ ಇಯರ್ ಕ್ಲಾಸಿನಲ್ಲಿ ಓದುತ್ತಿದ್ದ ವಿಶಾಲಾಕ್ಷಿ ಆಗಲೇ ಮೈನೆರೆದು ನಿಂತಿದ್ದಳು. ಅವಳು ನೆರೆದ ಆರು ತಿಂಗಳಿಂದಲೂ ಆದಿಲಕ್ಷ್ಮಿ ಅಣ್ಣನನ್ನೂ ಅತ್ತಿಗೆಯನ್ನೂ, "ಅನಂತನಿಗೆ ನಮ್ಮ ವಿಶಾಲಿ ತಂದುಕೊಳ್ಳಿ" ಎಂದು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದಳು.

ಆದರೆ ಅದಕ್ಕೆಲ್ಲಾ ನಂಜುಂಡಸ್ವಾಮಿಯ ಒಂದೇ ಉತ್ತರ, "ಅನಂತನಿಗೆ ಮೆಟ್ರಿಕ್ಯುಲೇಷನ್ ಆದರೂ ಆಗಲಿ, ಆಮೇಲೆ ನೋಡೋಣವಂತೆ."

ಯಶೋದಮ್ಮನಿಗೇನೊ ವಿಶಾಲಿಯನ್ನು ತಮ್ಮ ಮಗನಿಗೆ ತಂದುಕೊಳ್ಳಲು ಮೊದಲಿನಿಂದಲೂ ಆಸೆಯಿದ್ದಿತೆಂದೇ ಹೇಳಬಹುದು. ಅನುಕೂಲಸ್ಥರ ಮನೆಯ ಹುಡುಗಿ ಎನ್ನುವುದರ ಜೊತೆಗೆ ವಿಶಾಲಿಯನ್ನು ರೂಪಿನಲ್ಲೂ 'ಕಳಪೆ' ಮಾಡುವ ಹಾಗಿರಲಿಲ್ಲ. ಕಣ್ಣು ಮೂಗು ನೇರವಾಗಿದ್ದುದಲ್ಲದೆ ಸುಖದಲ್ಲಿ ಬೆಳೆದಿದ್ದುದರಿಂದ ನೆರೆದ ಆರು ತಿಂಗಳುಗಳಲ್ಲಿಯೇ ಅವಳ ಅಂಗಾಂಗಗಳು ತುಂಬಿಕೊಂಡು 'ಡಬ್ಬಾಗಿ' ಕಾಣಿಸುತ್ತಿದ್ದಳು.

ಚಿಕ್ಕಂದಿನಿಂದಲೂ ಅವಳೊಡನೆ ಒಟ್ಟಿಗೆ ಬೆಳೆದಿದ್ದುದರಿಂದಲೊ ಏನೋ ವಿಶಾಲಾಕ್ಷಿಯನ್ನು ಮದುವೆಯಾಗಬೇಕೆನ್ನುವ ಯೋಚನೆ ಸಹ ಅನಂತನಲ್ಲಿ ಮೂಡಿರಲಿಲ್ಲ. ಮದುವೆ ಆಗುವ ಮಾತು ಹಾಗಿರಲಿ; ಅವನಿಗೆ ವಿಶಾಲಾಕ್ಷಿಯನ್ನು ಕಂಡರೇ ಆಗುತ್ತಿರಲಿಲ್ಲ. ಅವಳ 'ಜಂಭ', ಹುಡುಗಿಯಾದ ಅವಳು ಯಾರಿದ್ದರೂ 'ಹುಚ್ಚು ಹುಚ್ಚಾಗಿ' ಆಡುವುದು, ಇವೊಂದೂ ಅವನಿಗೆ ಸರಿ ಬಿದ್ದಿರಲಿಲ್ಲ. ಅದಕ್ಕೇ ಅವಳನ್ನವನು ವಿಶೇಷವಾಗಿ ಮೈಹಚ್ಚಿಕೊಂಡಿರಲಿಲ್ಲ. ಅವಳೇ ಮೇಲೆ ಬಿದ್ದು ಮಾತನಾಡಿಸಿಕೊಂಡು ಬರುವಳು. ಆದರೆ ಅನಂತ ಒಂದೆರಡು ಮಾತಿನಲ್ಲೇ ಅವಳನ್ನು ತನ್ನ ಕೋಣೆಯಿಂದಾಚೆಗೆ ಹೊರಡಿಸಲು ಯತ್ನಿಸುವನು. ಆದರೂ

ಬಿಡದೆ ಅವಳು ಕಾಡುವಳು. "ಒಳ್ಳೆ ಪ್ರಾರಬ್ಧ" ಎಂದು ಗೊಣಗಿಕೊಳ್ಳುತ್ತಾ ಸುಮ್ಮನಾಗುವವನು ಅನಂತ. ಹೀಗೆ ಒಂದು ವಿಧವಾದ ತಿಕ್ಕಾಟ ಅವರಿಬ್ಬರಲ್ಲಿಯೂ ಮಸೆಯುತ್ತಲೇ ಇರುತ್ತಿತ್ತು.

ಆದರೆ ನಟರಾಜ ಬಂದ ಕೆಲವೇ ದಿನಗಳಲ್ಲಿ ವಿಶಾಲಿ ಅವನನ್ನು ಒಗ್ಗಿಬಿಟ್ಟಿದ್ದಳು. ಅನಂತನೆದುರು ಮಾಡುತ್ತಿದ್ದ ಚೇಷ್ಟೆಯನ್ನು ಅವನ ಮುಂದೆ ತೋರುವ ಸಾಹಸ ಮಾಡುತ್ತಿರಲಿಲ್ಲ. ನಟರಾಜನೂ ಅವಳನ್ನು ಅನಂತನಂತೆ ಕಾಣುತ್ತಿರಲಿಲ್ಲ.

ಅನಂತನಂತೆ ವಿಶಾಲಾಕ್ಷಿಯೂ ಲೆಕ್ಕ ಮಾಡುವುದರಲ್ಲಿ ನಂಜುಂಡಸ್ವಾಮಿ ಹೇಳುವ ಹಾಗೆ 'ಬೃಹಸ್ಪತಿ"ಯೇ ಆಗಿದ್ದಳು. ಶಾಲಾ ಉಪಾಧ್ಯಾಯರು ಮನೆಯಲ್ಲಿ ಮಾಡಿ ತರಬೇಕೆಂದು ಆಗಿಂದಾಗ್ಗೆ ಕೊಡುತ್ತಿದ್ದ ಲೆಕ್ಕಗಳನ್ನು ಅವಳೆಂದಿಗೂ ಸ್ವತಃ ಮಾಡುವ ಶಕ್ತಿ ಪಡೆದಿರಲಿಲ್ಲ. ಆದ್ದರಿಂದ ಅವುಗಳನ್ನೆತ್ತಿಕೊಂಡು ನೇರವಾಗಿ ನಟರಾಜನ ಹತ್ತಿರ ಓಡಿಬರುವಳು. ಅವನೂ ಬೇಸರ ಪಡದೆ ಅವಳು ತಂದ ಲೆಕ್ಕಗಳನ್ನೆಲ್ಲಾ ಮಾಡಿಕೊಡುತ್ತಿದ್ದನು. ಹೀಗೆ ಅವರಿಬ್ಬರಲ್ಲಿಯೂ ಸಲಿಗೆ ಬೆಳೆಯತೊಡಗಿತು.

ಆದರೆ ಒಂದು ದಿನ ವಿಶಾಲಾಕ್ಷಿಯ ಕೈಯಲ್ಲೇ ಒಂದು ಲೆಕ್ಕ ಮಾಡಿಸಬೇಕೆಂದು ಹೇಳಿಕೊಡುತ್ತಿದ್ದ ನಟರಾಜ. ಎಷ್ಟು ಹೇಳಿಕೊಟ್ಟರೂ ಅದು ಅವಳ ತಲೆಗೆ ಅಂಟುತ್ತಲೇ ಇರಲಿಲ್ಲ. ಕಡೆಗೆ ಬೇಸರವಾಗಿ ಹತ್ತಿರದಲ್ಲೇ ಕುಳಿತ ಅನಂತನನ್ನೇ ತುಂಟತನದಿಂದ ನೋಡುತ್ತಾ "ಅಂತೂ ಲೆಕ್ಕದಲ್ಲಿ ಗಂಡ-ಹೆಂಡತೀರಿಬ್ಬರಿಗೂ ಒಳ್ಳೆ ಜೋಡಿ" ಎಂದು ಪರಿಹಾಸ್ಯ ಮಾಡಿದ ನಟರಾಜ.

"ಬೇಡ ಮಹಾರಾಯ, ಅವಳಿಗೂ ನನಗೂ ಎಣ್ಣೆ, ಸೀಗೇಕಾಯಿನ ಹಾಗೆ. ನಿನಗೂ ಅವಳಿಗೇ ಸರಿ. ನೀನೇ ಕಟ್ಟಿಕೋ ಅವಳ್ನ ಚೆನ್ನಾಗಿರುತ್ತದೆ" ಎಂದು ಕಹಿಯಾಗಿ ನುಡಿದ ಅನಂತ.

ಅಷ್ಟು ಹೊತ್ತಿಗಾಗಲೇ ಹೈಸ್ಕೂಲು ತೆರೆದಿದ್ದಿತು. ನಟರಾಜನೂ ಅನಂತನೂ ನಾಲ್ಕನೆಯ ಫಾರಮ್ಮಿಗೆ ಸೇರಿಯೂ ಆಗಿದ್ದಿತು. ಈಗ ನಿತ್ಯವೂ ಇಟ್ಟಿಗೆಗೂಡಿನಿಂದ ಮರಿಮಲ್ಲಪ್ಪ ಹೈಸ್ಕೂಲಿನವರೆಗೆ ಹೋಗಿ ಬರುವುದು ಅಭ್ಯಾಸವಾಗಿ ಹೋಗಿತ್ತು.

ನಟರಾಜ ಎಂದಿನಂತೆ ವ್ಯಾಸಂಗದಲ್ಲಿ ಶ್ರದ್ಧೆ ತೋರಿದ. ಶಾಲೆಯಲ್ಲಿ ಉಪಾಧ್ಯಾಯರು ಹೇಳಿಕೊಡುತ್ತಿದ್ದ ಪಾಠಗಳನ್ನು ಆಸಕ್ತಿಯಿಂದ ಆಲಿಸಿ, ಅವುಗಳ ಮುಖ್ಯಾಂಶಗಳನ್ನು ತನ್ನ ನೋಟ್ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಿದ್ದ. ಅನಂತನಿಗಾದರೊ ಪಾಠವೆಂದರೆ ಬೇಸರ. ಲೆಕ್ಕದ 'ಪಿರಿಯಡ್'ನಲ್ಲಿಯಂತೂ ಕ್ಲಾಸು ಬಂದೀಖಾನೆಯಂತೆ ಬಾಧಿಸುತ್ತಿತ್ತು. ಆ ಹಿಂಸೆಯನ್ನು ಆ ಬೇಸರವನ್ನು ನೀಗಿಕೊಳ್ಳಲು ಅವನು ಒಂದು ಉಪಾಯವನ್ನು ಹುಡುಕಿಕೊಂಡಿದ್ದ. ಕ್ಲಾಸಿನ 'ಮಾನಿಟರ್' ಆಗಿದ್ದ ನಟರಾಜನ ಬಳಿ ಸೀಮೇಸುಣ್ಣ ಯಾವಾಗಲೂ ಇರುತ್ತಿದ್ದಿತು.

ಅದನ್ನು ಅವನಿಂದ ತೆಗೆದುಕೊಂಡು "$(A\text{-}B)^2 =$" ಎಂದು ಉಪದ್ರವ ಕೊಡಲು ಆರಂಭ ಮಾಡುವ ಲೆಕ್ಕದ ಉಪಾಧ್ಯಾಯರ ಚಿತ್ರವನ್ನು ತನ್ನ ಮುಂದಿನ ಮೇಜಿನ ಮೇಲೆ ಬರೆಯಲು ತೊಡಗುವನು.

ಉಪಾಧ್ಯಾಯರು ಸುತ್ತುತ್ತಿದ್ದ ಅಸ್ತವ್ಯಸ್ತವಾದ ಪೇಟ, ಅವರ ಸುಕ್ಕಲು ಸುಕ್ಕಲು ಮುಖ, ಗರುಡನಂತೆ ಎತ್ತರವಾಗಿ ಬಾಗಿದ ಅವರ ಮೂಗು, ಆ ಮೂಗಿನ ತುದಿಗೆ ಜಾರಿ ಬಂದು ಕುಳಿತ ದಪ್ಪನೆಯ ಗಾಜುಗಳುಳ್ಳ ಅವರ ಕನ್ನಡಕ–ಒಂದೊಂದನ್ನೂ ತದ್ರೂಪವಾಗಿ, ಕಂಡದ್ದನ್ನು ಕಂಡಹಾಗೆ ಬರೆದಿಡಲು ಯತ್ನಿಸುವನು ಅನಂತ. ಅದನ್ನು ನೋಡಿ ಅವನ ಸುತ್ತ ಕುಳಿತ ಹುಡುಗರಿಗೆ ನಗು ತಡೆಯದಾಗುವುದು. ಅವರು ಎಷ್ಟೇ ಪ್ರಯತ್ನಪೂರ್ವಕ ತಮ್ಮ ನಗುವಿಗೆ ತಡೆ ಹಾಕಿದರೂ ಆ ನಗುವಿನ ತೆರೆಗಳು ಸಣ್ಣದಾಗಿಯಾದರೂ ಸದ್ದು ಮಾಡೇಬಿಡುತ್ತಿದ್ದವು.

ಉಪಾಧ್ಯಾಯರು ಸ್ವಲ್ಪ ಕೋಪಿಷ್ಠರು. ಅವರ ಕ್ಲಾಸಿನಲ್ಲಿ ಹುಡುಗರು ಗಲಾಟೆ ಮಾಡಲು ಹೆದರುತ್ತಿದ್ದರು. ಹಾಗಿದ್ದೂ ಒಂದು ಪಾರ್ಶ್ವಕ್ಕೆ ಕುಳಿತ ಹುಡುಗರೆಲ್ಲರೂ ಸಣ್ಣದಾಗಿ ನಗುವಿನಿಂದ ಕುಲುಕುವುದನ್ನು ಕಂಡು ಅವರು ಬೆರಗಾದರು.

"ಏನ್ರಯ್ಯಾ ಕಪಿ ಕುಣೀತಾ ಇದೆಯೇನು?.... ಯಾಕೆ ಹೀಗೆ ಸುಮ್ಮನೆ ಹಲ್ಲು ಕಿರೀತಾ ಕುಳಿತಿದ್ದೀರಿ?" ಎಂದು ಅವರು ಬೆದರಿಸಿದಾಗ ಕೊಂಚ ಸುಮ್ಮನಾಗುವ ಹುಡುಗರು ಉಪಾಧ್ಯಾಯರ ಮುಖ ಬೋರ್ಡಿನ ಕಡೆಗೆ ತಿರುಗಿದೊಡನೆಯೇ ಸಣ್ಣಗೆ ಕುಲುಕುವುದಕ್ಕೆ ಪ್ರಾರಂಭಿಸುವರು.

ಉಪಾಧ್ಯಾಯ ಶ್ರೀನಿವಾಸಾಚಾರ್ಯರಿಗೆ ವಾಸ್ತವವಾಗಿ ಅರುವತ್ತಕ್ಕೆ ಮೇಲ್ಪಟ್ಟು ವಯಸ್ಸಾಗಿತ್ತು. ಇಷ್ಟು ವೇಳೆಗಾಗಲೇ ಅವರು ನಿವೃತ್ತಿ ಹೊಂದಿ ತಮ್ಮ ಮನೆಯಲ್ಲಿ ವಿಶ್ರಾಂತಿ ಹೊಂದುತ್ತಿರಬೇಕಾಗಿತ್ತು. ಆದರೆ ಅವರು ವಿದ್ಯಾಖಾತೆಯಲ್ಲಿ ಕೊಟ್ಟ ಲೆಕ್ಕದ ಪ್ರಕಾರ ಅವರಿಗಿನ್ನೂ ಮೂರು ವರ್ಷಗಳ 'ಸರ್ವಿಸ್' ಇತ್ತು. ಆದರೆ ಶ್ರೀನಿವಾಸಾಚಾರ್ಯರ ಆಸೆಗೆ ಅವರ ಆರೋಗ್ಯವೇ ಪ್ರಬಲವಾದ ಆತಂಕವಾಗಿ ಪರಿಣಮಿಸಿತ್ತು. ಅವರಿಗಾಗಲೇ ವಾಯುದೋಷದಿಂದ ಆಗಾಗ್ಗೆ ಶರೀರದ ಕೀಲು ಕೀಲೂ ಹಿಡಿದುಕೊಳ್ಳುತ್ತಿತ್ತು. ಅದರಿಂದಾಗಿ ಈಚೀಚೆಗೆ ಹುಡುಗರು ಗಲಾಟೆ ಮಾಡಿದರೆ ಹಿಂದಿನಂತೆ ಎದ್ದು ಬಂದು ಕಿವಿ ಹಿಂಡುವುದು, 'ರೂಲ್‌ದೊಣ್ಣೆ'ಯಿಂದ ಹೊಡೆಯುವುದು, ಇದಾವುದೂ ಅವರಿಂದ ಶಕ್ಯವಾಗುತ್ತಿರಲಿಲ್ಲ. ಹುಡುಗರನ್ನು ಭಯದಲ್ಲಿಡಲು ಈಗ ಅವರು ಉಪಯೋಗಿಸಲಾಗುತ್ತಿದ್ದುದು ಒಂದೇ ಒಂದು ಶಿಕ್ಷೆ–ಮೇಜಿನ ಮೇಲೆ ನಿಲ್ಲಿಸಿವುದು !....ಈಗಲೂ ಅದೇ ರೀತಿ ಅನಂತನ ಸುತ್ತ ಕುಳಿತ ಹುಡುಗರನ್ನೆಲ್ಲಾ ಪೀರಿಯಡ್ ಮುಗಿಯುವವರೆಗೂ ಮೇಲೆ ನಿಲ್ಲಿಸಿ ತೃಪ್ತಿಪಟ್ಟುಕೊಂಡರು.

ಆದರೆ ಹುಡುಗರು ಈ ಸಣ್ಣ ಅಸ್ತ್ರಕ್ಕೆ ತಲೆಬಾಗುವರೇ ? ಅವರ ಕೀಟಲೆಯನ್ನವರು ಮಾಡುತ್ತಲೇ ಇದ್ದರು. ಅನಂತ ದಿನವೂ ನಾನಾ ಭಂಗಿಯಲ್ಲಿ ಬರೆಯುತ್ತಿದ್ದ ಉಪಾಧ್ಯಾಯರ ಚಿತ್ರ ಹೆಚ್ಚು ಹೆಚ್ಚು ತಾದಾತ್ಮ್ಯ ಪಡೆಯುತ್ತ ಹೋಯಿತು.

೧೩

ಕ್ರಿಸ್‌ಮಸ್ ರಜ ಬಂದಿತು. ನಟರಾಜ ಅನಂತನನ್ನು ಕೂಡಿಕೊಂಡು ಕಲ್ಲಹಳ್ಳಿಗೆ ಬಂದ.

ಇಷ್ಟರಲ್ಲಿ ಮಂಗಳೆಯಾಗಲೇ ಹುಣಸೂರಿನ ಮಿಡಲ್‌ಸ್ಕೂಲಿನ ಮೊದಲನೆ ಫಾರಮ್ಮಿನಲ್ಲಿ ಓದುತ್ತಿದ್ದಳು. ಶಾಲೆಗೆ ಹೋಗುವಾಗ ಅವಳ ಜೊತೆಗೆ ಅವಳಂತೆಯೇ ಇನ್ನೂ ಮೂರು ಹುಡುಗಿಯರು ಕಲ್ಲಹಳ್ಳಿಯಿಂದ ನಿತ್ಯವೂ ಹೋಗುತ್ತಿದ್ದರು. ಅವರಲ್ಲಿ ಆಯರಹಳ್ಳಿ ಅಯ್ಯನ ಮಗಳೂ ಒಬ್ಬಳು.

ಈಗ ಕ್ರಿಸ್‌ಮಸ್ ಆದುದರಿಂದ ಮಂಗಳೆಗೂ ರಜವಿದ್ದಿತು. "ರಜವನ್ನು ಹೇಗಪ್ಪಾ ಕಳೆಯುವುದು?.... ನಟರಾಜ ರಜದಲ್ಲಿ ಹಳ್ಳಿಗೆ ಬರುತ್ತಾನೋ, ಇಲ್ಲವೋ" ಎಂದು ಪರಿತಪಿಸುತ್ತಿದ್ದ ಮಂಗಳೆಯ ಮನಸ್ಸು ನಟರಾಜನನ್ನು ಕಂಡೊಡನೆಯೇ ಉಲ್ಲಾಸದಿಂದ ನಲಿಯಿತು. ಅವನ ಜೊತೆಯಲ್ಲಿ ಬಂದ ಅನಂತನನ್ನು ಹೊಂದಿಕೊಳ್ಳುವುದಕ್ಕೂ ಅವಳಿಗೆ ಬಹಳ ಕಾಲ ಹಿಡಿಯಲಿಲ್ಲ.

ಅನಂತನಿಗೆ ಕಲ್ಲಹಳ್ಳಿಯ ವಾತಾವರಣ ಅತ್ಯಂತ ಪ್ರಿಯವೆನಿಸಿತು. ಮಲೆನಾಡಿನ ಸೆರಗಿನಂತಿರುವ ಈ ಪ್ರಾಂತದ ನೈಸರ್ಗಿಕ ಚೆಲುವು ಕಲಾಭಿರುಚಿಯುಳ್ಳ ಅವನ ಚಿತ್ತದ ಮೇಲೆ ವಿಶೇಷ ಪರಿಣಾಮ ಮಾಡಿತು. ಮೂರು ಹೊತ್ತೂ ಅಲ್ಲಿರುವವರೆಗೆ ಸುತ್ತಮುತ್ತಲಿನ ಕಾಡು ಮೇಡು ಅಲೆಯುವುದು ಅವನ ದಿನಚರಿಯಾಯಿತು. ಅವನ ಅರಣ್ಯ ಪರ್ಯಟನದಲ್ಲಿ ಜೊತೆಯಾಗಿ ನಟರಾಜನೂ ಇರುತ್ತಿದ್ದನು. ಒಂದೊಂದು ವೇಳೆ ಮಂಗಳೆಯೂ ಒಟ್ಟಾಗಿ ಅವರೊಡನೆ ಅಲೆಯುವಳು. ಹೀಗೆ ಅಲೆಯುವಾಗ ಅನೇಕ ಸಲ ಅನಂತನ ಅಂತರಂಗದ ಗುಪ್ತವಾದ ಬಯಕೆ ತನ್ನ ಇಚ್ಛೆಗೆ ಬಾಹ್ಯಾಕಾರ ಕೊಡಲು ಅಸಮರ್ಥನಾಗಿ ಒಳಗೊಳಗೇ ಕುದಿಯುವುದು. ಹೃದಯವನ್ನು ತನ್ನ ಸೌಂದರ್ಯದಿಂದ ಸೂರೆಗೊಳ್ಳುವ ಅಲ್ಲಿಯ ಪ್ರಕೃತಿ ವೈಭವವನ್ನು ನೋಡಿ ಪುಳಕಗೊಳ್ಳುವ ಸಂಸ್ಕಾರ ವಂಶಾನುಗತವಾಗಿ ಅನಂತನಲ್ಲಿ ಹುದುಗಿದ್ದಿತಾದರೂ ಆ ಪ್ರಕೃತಿ ಚಿತ್ರಗಳಿಗೆ ರೂಪು ಕೊಡುವಷ್ಟು ಚೈತನ್ಯ, ಸಾಧನ ಅವನಲ್ಲಿರಲಿಲ್ಲ. ಶಿಲ್ಪಿ ವಾಸಾಚಾರಿಯಿಂದ ಹರಿದು ಬಂದ ಸಂಸ್ಕಾರ ಅವನಾತ್ಮವನ್ನೂ ಬೆಳಗಿದರೂ ಅವನ ಕಯ್ಯಿಂದ ಕಲಾರೂಪ ತಾಳಿ ಆ ಪ್ರಕೃತಿ ಚಿತ್ರಗಳು ಅರಳಲು

ಅವಶ್ಯವಾದ ಅಭ್ಯಾಸ ಸಾಧನ ಅವನಿಗಿನ್ನೂ ಆಗಬೇಕಿತ್ತು. ಆದ್ದರಿಂದಲೇ ನಾನಾ ಜಾತಿಯ ಗಿಡ ಮರಗಳನ್ನೂ, ಮೃಗ, ಪಕ್ಷಿಗಳನ್ನೂ ಕಂಡು ಅವನ ಎದೆ ಅನುಭವಿಸಲಾಗದ ಮೂಕವೇದನೆಯಿಂದ ಮಿಡುಕುವುದು. ಛಂಗನೆ ಅಲ್ಲಿಂದಿಲ್ಲಿಗೆ ನೆಗೆದಾಡುವ ಆ ಕಾಡು ಹುಲ್ಲೆಗಳು, ಮನೋಹರವಾಗಿ ಗರಿಗೆದರಿ ಜಾಗರವಾಡುವ ಆ ನವಿಲುಗಳು, ಪೊದೆಯಿಂದ ಪೊದೆಗೆ ಸರಕ್ಕನೆ ಧಾವಿಸುವ ಮುದ್ದಾದ ಮೊಲಗಳು, ಕಾಡಿನಲ್ಲೆಲ್ಲ ತಾನೇತಾನಾಗಿ ಹಬ್ಬಿ ಹರಡಿದ ಉಣ್ಣೆಯ ಮೆಳೆಗಳಲ್ಲಿ ಶೋಭಿಸುವ ಬಿಳಿ, ಹಳದಿ, ಕೆಂಪು ಬಣ್ಣದ ಗೊಂಚಲು ಹೂ–ಒಂದೊಂದನ್ನು ನೋಡಿದಾಗಲೂ ಇವನ್ನೆಲ್ಲಾ ಹೇಗಾದರೂ ಚಿತ್ರಿಸಬೇಕು ಎಂಬ ಅಭಿಲಾಷೆ ಅನಂತನಲ್ಲಿ ಪ್ರಬಲವಾಗಿ ಮೂಡುವುದು. ಆದರೆ ಹೇಗೆ ಚಿತ್ರಿಸುವುದು ಎಂಬುದರ ಅರಿವಿಲ್ಲದೆ ನಿರಾಶೆಗೊಳ್ಳುವುದು. ಹೀಗಾಗಿ ಅನಂತನಿಗೆ ಆ ಪ್ರಕೃತಿ ಸನ್ನಿಧಿಯಲ್ಲಿ ಒಂದು ವಿಧವಾದ ಭ್ರಾಂತಿ ಕವಿಯುತ್ತಿತ್ತು. ಬೆಪ್ಪನಂತೆ ಆ ಚಿತ್ರಗಳನ್ನೇ ನಿಟ್ಟಿಸುತ್ತಾ ನೀರವವಾಗಿ ನಿಂತುಬಿಡುತ್ತಿದ್ದನು.

ನಟರಾಜ ಮಂಗಳೆಯರಲ್ಲಿ ಸಾಮಾನ್ಯ ಮಟ್ಟದಲ್ಲಿ ಕಾಣುತ್ತಿದ್ದ ಪ್ರಕೃತಿ ಪ್ರೇಮ ಅನಂತನಲ್ಲಿ ದಿವ್ಯೋನ್ಮಾದವಾಗಿ ಉಕ್ಕುತ್ತಿತ್ತು. ಆ ಕಾಡಿನ ಆವರಣದಿಂದ ಅನಂತನನ್ನು ಹೊರಡಿಸಿಕೊಂಡು ಬರಬೇಕಾದರೆ ನಟರಾಜನಿಗೆ ಸಾಕು ಸಾಕಾಗಿ ಹೊಗುತ್ತಿತ್ತು. ಅಂಥ ಸಂದರ್ಭಗಳಲ್ಲೆಲ್ಲಾ ನಟರಾಜನ ಮನಸ್ಸಿನಲ್ಲಿ ತಾನು ಓದು ಕಲಿಯಲು ಮೈಸೂರಿಗೆ ಹೋದ ಮೊದಲ ದಿನ ಕುಕ್ಕರಹಳ್ಳಿ ಕೆರೆಯ ಏರಿಯ ಮೇಲೆ ಸಮಾಧಿಸ್ಥನಂತೆ ಮಾತಿಲ್ಲದೆ ಮೌನವಾಗಿ ಕೆರೆಯ ಸೊಬಗನ್ನೇ ವೀಕ್ಷಿಸುತ್ತ ಕುಳಿತ ಅನಂತನ ಚಿತ್ರ ನೆನಪಾಗುವುದು. "ವಿಚಿತ್ರ ಪುರುಷ" ಎಂದು ತನಗೆ ತಾನೇ ನಗುತ್ತಾ ಹೇಳಿಕೊಳ್ಳುವನು ನಟರಾಜ.

ಕಲ್ಲಹಳ್ಳಿಗೆ ನಟರಾಜನೂ ಅನಂತನೂ ಬಂದು ಆಗಲೇ ಎಂಟು ಹತ್ತು ದಿನಗಳು ಕಳೆದಿವೆ. ಇನ್ನೂ ಐದಾರು ದಿನಗಳಲ್ಲಿ ಅವರ ಕ್ರಿಸ್‌ಮಸ್ ರಜ ಮುಗಿಯುವುದರಲ್ಲಿದೆ.

ಒಂದು ಮಧ್ಯಾಹ್ನ, ಹಿತ್ತಲಿನ ಬೇಲಿಯ ಬಳಿ ನಿಂತು ನಟರಾಜ ಮಂಗಳೆಯರಿಬ್ಬರೂ ಹಂಚಿಕಡ್ಡಿಗೆ ಕಾಚಿಕಾಯನ್ನು ಸೆಕ್ಕಿ, ಕೈ ಬೀಸಿ ಕಾಯಿ ದೂರ ಬೀಳುವಂತೆ ಬೀಸುತ್ತಿದ್ದಾರೆ. ಅದನ್ನೇ ಕುತೂಹಲದಿಂದ ನಿರೀಕ್ಷಿಸಿ ತಾನೂ ಅವರಂತೆ ಸೆಕ್ಕಿ ಹೊಡೆಯಲು ಯತ್ನಿಸುತ್ತಾನೆ ಅನಂತ. ಆದರೆ ಪರಿಶ್ರಮ ಸಾಲದ ಕಾರಣ ಅವನು ಕಡ್ಡಿಯಿಂದ ಬೀಸಿಬಿಟ್ಟ ಕಾಚಿಕಾಯಿ ಅಲ್ಪ ದೂರದಲ್ಲೇ ಬೀಳುತ್ತದೆ.

"ಅನಂತೂಗೆ ಕಡ್ಡಿ ಬೀಸಾಕೇ ಬರಾಕಿಲ್ಲ" ಎಂದು ನಗೆಯಾಡುತ್ತಾಳೆ ಮಂಗಳೆ.

ನಟರಾಜ "ಹೀಗೆ ಹೊಡೀಬೇಕು ಅನಂತೂ" ಎಂದು ಹೊಡೆದು ತೋರುತ್ತಾನೆ.

ಅಷ್ಟರಲ್ಲಿ ನಟರಾಜ ಹಳ್ಳಿಯಲ್ಲಿ ಓದುತ್ತಿದ್ದಾಗ ಅವನ ಜೊತೆಗಾರರಾದ ಮರಿ, ಪುಟ್ಟ ಇಬ್ಬರೂ ಬಂದರು.

"ಮುಟ್ಟನ ಅಯ್ಯ ಈ ಜಿನ ಗೊಂಬೆ ಆಡಸ್ತಾರೆ" ಎಂದು ಬಂದ ಎರಡು ಗಳಿಗೆಯೊಳಗೆ ಸುದ್ದಿ ಮುಟ್ಟಿಸಿದ ಮರಿ.

ಈ ಸಮಾಚಾರ ನಟರಾಜ–ಮಂಗಳೆಯರಿಬ್ಬರನ್ನೂ ಪುಳಕಗೊಳಿಸಿತು. ಕಾಚಿಕಾಯೊಂದನ್ನು ಹಂಚಿಕಡ್ಡಿಗೆ ಸೆಕ್ಕಿ ಅಣಿಗೊಳಿಸುವುದರಲ್ಲಿದ್ದ ನಟರಾಜ ತನ್ನ ಕಾರ್ಯವನ್ನು ಅಷ್ಟಕ್ಕೇ ನಿಲ್ಲಿಸಿ, "ಗೊಂಬೆಯೋರು ಬಂದವರಾ?" ಎಂದು ಕೇಳಿದ.

"ನಾವು ಉಣ್ಣಾಕೆ ಇನ್ನೇನು ಕೂತುಕೋಬೇಕು. ಅಷ್ಟರೊಳಗೆ ಈ ಗೊಂಬೆ ಆಡಿಸೋರು ನಮ್ಮನೆ ಮುಂದುಗಡೆ ಪ್ರತ್ಯಕ್ಷ ಆದರು. ತಟ್ಟೇಕೆರೆಯಿಂದ ಬಂದವರಂತೆ. ಅವರು ಕೇಳೋದೇ ತಡ ನಮ್ಮ ಅಯ್ಯ ಆ ಕ್ಷಣ ಒಪ್ಪಿಕ್ಕೊಂಡು ಬುಟ್ಟರು" ಎಂದು ವಿಶದ ಪಡಿಸಿದ ಮುಟ್ಟ.

"ಚಪ್ಪರ ಎಲ್ಲಿ ಹಾಕ್ತಾರಂತೆ ?"

"ಅರಸಿನೋರ ಮನೆಗೂ ಗೌಡಯ್ಯನ ಹಟ್ಟೀಗೂ ಮಧ್ಯ ರಸ್ತೆ ಇಲ್ಲವಾ ಅಲ್ಲಿ."

ಮುಟ್ಟ, ಮರಿ ಇಬ್ಬರೂ ಗೆಳೆಯನಿಗೆ ಸುದ್ದಿ ಮುಟ್ಟಿಸಿ ತೆರಳಿದರು. ಗೊಂಬೆ ಆಟ ಆಡುವರೆಂದು ಸಡಗರ. 'ಸುಮ್ಮಾನ'ಗಳಿಂದ ನಲಿಯುವ ಈ ಹಳ್ಳಿಯ ಹುಡುಗರ, ಸಂತಸ ಅನಂತನಿಗೆ ಅರ್ಥವಾಗಲಿಲ್ಲ. ಪಟ್ಟಣದಲ್ಲೇ ಬೆಳೆದ ಅವನ ಬುದ್ಧಿಗೆ ಗೊಂಬೆಯಾಟವೆಂದರೆ ಗೊಂಬೆ 'ಕೂರಿಸುವುದು' ಎಂಬ ಕಲ್ಪನೆ ಇದ್ದಿತು. ಮೈಸೂರಿನಲ್ಲಿ ನವರಾತ್ರಿಯ ದಿನಗಳಲ್ಲಿ ತಮ್ಮ ಮನೆಯಲ್ಲೂ, ಇತರ ಮಿತ್ರರ ಗೃಹಗಳಲ್ಲೂ ಅಲಂಕಾರ ಮಾಡಿದ ಬೆಣ್ಣೆ ಕೃಷ್ಣ, ಮಂಗಳಗೌರಿ ಮುಂತಾದ ಗೊಂಬೆಗಳನ್ನು ಕೂರಿಸುವುದನ್ನು ಅವನು ಕಂಡಿದ್ದ.

ಆದರೆ ಅದೆಲ್ಲ ಮನೆಯ ಒಳಭಾಗದಲ್ಲಿ, ಹಜಾರದಲ್ಲೋ ಅಥವಾ ಶೃಂಗಾರಗೊಳಿಸಿದ ಕೋಣೆಯೊಂದರಲ್ಲೋ ನಡೆಯುವ ವ್ಯಾಪಾರ. ರಸ್ತೆಯ ಮಧ್ಯದಲ್ಲಿ ಚಪ್ಪರ ಹಾಕಿ, ಅದರೊಳಗೆ ಗೊಂಬೆ ಕೂರಿಸುವುದು ಈ ಹಳ್ಳಿಯ ಪದ್ಧತಿಯೇನೋ ! ಎಂದು ಬಗೆದ.

ರಾತ್ರಿಯಾಯಿತು. ಊಟ ಮುಗಿಸಿ ಊರೆಲ್ಲ ಕೋಟೆಯೊಳಗಿನ ಗೌಡಯ್ಯನ ಮನೆಯ ಮುಂದಿನ ಬೀದಿಯ ವಿಸ್ತಾರದಲ್ಲಿ ನೆರೆಯಿತು. ನಟರಾಜ ಮಂಗಳೆಯರೊಡನೆ ಅನಂತನೂ ಸಂಭ್ರಮದಿಂದ ಬಂದು 'ಮುಂದೇನಾಗುವುದೋ' ಎಂಬ ಕಾತರದಿಂದ ಕಾದು ಕುಳಿತಿದ್ದನು.

ಅವರೆದುರಿಗೆ ಸುಮಾರು ನಾಲ್ಕು ಅಡಿ ಚೌಕದಲ್ಲಿ, ನಾಲ್ಕು ಅಡಿ ಎತ್ತರಕ್ಕೆ ಗಳುವಿನ ಚಿಕ್ಕ ಚಪ್ಪರವೊಂದು ಹಾಕಲ್ಪಟ್ಟಿತ್ತು. ಆ ಚೌಕನೆಯ ಚಪ್ಪರದ ಮೂರು ಮುಖಕ್ಕೂ ಬಿಳಿ ಬಟ್ಟೆ ಇಳಿಬಿಡಲ್ಪಟ್ಟಿತ್ತು. ಅದರ ಮೇಲುಭಾಗವೂ ಹಾಗೆಯೇ ಬಟ್ಟೆಯಿಂದ ಮುಚ್ಚಲ್ಪಟ್ಟಿತ್ತು. ಆದರೆ ಚಪ್ಪರದ ಹಿಂದಿನ ಮುಖ ಮಾತ್ರ ವಸ್ತ್ರದಿಂದ ಮುಚ್ಚಲ್ಪಡದೆ ಹಾಗೆಯೇ ತೆರೆದಿತ್ತು.

ಅದರ ಮುಖೇನ ಬೊಂಬೆ ಆಡಿಸುವವನು ಚಪ್ಪರದೊಳಗೆ ಅಡಗಿ ಕುಳಿತಿದ್ದನು. ಅವನು ಪ್ರೇಕ್ಷಕರ ಕಣ್ಣಿಗೆ ಕಾಣುವಂತಿರಲಿಲ್ಲ.

ಅವನ ಕೈಯಲ್ಲಿ ಚರ್ಮದಿಂದ ಮಾಡಲ್ಪಟ್ಟ ಗೊಂಬೆ. ಆ ಕಯ್ಯ ಹಿಂದೆ ಒಂದು ಹಚ್ಚಿದ ಹಣತೆ. ಅವನ ಹಿಂದೆ ಅವನಂತೆಯೇ ಪ್ರೇಕ್ಷಕರ ನೋಟಕ್ಕೆ ಮರೆಯಾಗಿ ಅವನ ಹೆಂಗಸು ಕುಳಿತಿದ್ದಳು.

ಅವಳ ಮುಂದುಗಡೆ ನೆಲದ ಮೇಲೆ ಮಗುಚಿಟ್ಟ ಕಂಚಿನ ಹರಿವಾಣ, ಅದರ ಮೇಲೆ ಮೂರು ಕಾಸಿನ ಅಗಲಕ್ಕೆ ಜೇನುಮೇಣ ಅಂಟಿಸಿದೆ. ಸುಮಾರು ಮುಕ್ಕಾಲು ಅಡಿ ಉದ್ದದ, ಬಳಪದ ಗಾತ್ರದ ಜೋಳದ ಕಡ್ಡಿಯೊಂದನ್ನು ಆ ಮೇಣದ ಮೇಲೆ ಭದ್ರವಾಗಿ ಊರಿ ಹಿಡಿದಿದ್ದಾಳೆ ಆಕೆ. ಹಾಗೆಯೇ ತನ್ನೆರಡೂ ಕೈಗಳನ್ನು ಒಂದರ ಹಿಂದೆ ಒಂದನ್ನನುಸರಿಸಿ ಅದುಮಿದಂತೆಯೇ ಕಡ್ಡಿಯ ಮೇಲಿನಿಂದ ಕೆಳಕ್ಕೆ ಜಾರಿಸುತ್ತಾಳೆ. ಒಂದು ಕೈ ಕಡ್ಡಿಯ ಕೆಳಭಾಗಕ್ಕೆ ಹೋದಂತೆ ಅದನ್ನೆತ್ತಿ ಒಡನೆಯೇ ಕಡ್ಡಿಯ ಮೇಲುಭಾಗವನ್ನೂ ಹಿಡಿಯುತ್ತಾಳೆ. ಅವಳ ಕೈಗಳು ಅವಿಶ್ರಾಂತವಾಗಿ ಹೀಗೆ ಜೋಳದಕಡ್ಡಿಯ ಮೇಲೆ ಓಡಾಡಿದಾಗ ಮಗುಚಿಟ್ಟ ಕಂಚಿನ ಹರಿವಾಣದಿಂದ 'ಝುಯ್-ಝುಯ್-ಝುಯ್' ಎಂಬ ಮಧುರವಾದ ನಾದ ತರಂಗ ತರಂಗವಾಗಿ ಏಳುತ್ತದೆ. ಈ ಸುಮಧುರ ನಾದವೇ ಆಕೆ ಹಾಡುವ ಗೀತೆಗೆ ಶ್ರುತಿ. ಅವಳ ಹಾಡನ್ನನುಸರಿಸಿ 'ಗೊಂಬೆಯವನು' ಗೊಂಬೆಯನ್ನು ತನ್ನ ಕೈಯಲ್ಲಿ ಹಿಡಿದು ಕುಣಿಸುತ್ತಾನೆ. ಹಿಂದೆ ಹಣತೆಯ ಪ್ರಕಾಶವಿರುವುದರಿಂದ ಆ ಪುಟ್ಟ ಬೊಂಬೆಯ ಛಾಯೆ ದೊಡ್ಡದಾಗಿ ಮುಂದಿನ ಬಟ್ಟೆಯ ತೆರೆಯ ಮೇಲೆ ಬೀಳುತ್ತದೆ. ಬೊಂಬೆಗೆ ವಿಧವಿಧವಾದ ಬಣ್ಣ ಹಾಕಿರುವುದರಿಂದ ಅದು ಅತ್ಯಂತ ಮನೋಹರವಾಗಿ ಕಾಣುತ್ತದೆ.

ನೆರೆದ ಜನಸ್ತೋಮದಲ್ಲಿ ಮಂಡಿಸಿದ ಅನಂತ 'ಆಟ' ಇನ್ನೇನು ಆರಂಭವಾಗಬೇಕು ಎನ್ನುವಾಗ ನಟರಾಜನನ್ನು ತಿವಿದು ಕೇಳಿದ :

"ಇದೇನೋ ಗೊಂಬೆ ಆಟ ಅಂತ ಅಂದಿರಲ್ಲೊ? ಒಂದು ಗೊಂಬೇನೂ ಕೂರಿಸೇ ಇಲ್ಲವಲ್ಲೊ ನಟ್ರಾಜಾ?"

ಆ ಮಾತುಗಳನ್ನು ಕೇಳಿ, ನಟರಾಜನಿಗೆ ನಗು ಬಂದಿತು.

"ಗೊಂಬೆ 'ಕೂರಿಸೋದು' ಅಂದರೇನೊ ?....ಸುಮ್ಮನೆ ಕೂತುಕೊಂಡು ನೋಡು ಗೊತ್ತಾಗ್ತದೆ" ಎಂದು ಹೇಳಿ ಮೌನವಾದ.

ಗೊಂಬೆಯಾಟವೆಂದರೆ ನಟರಾಜನಿಗೆ ಪ್ರಾಣ. ಹಳ್ಳಿಯ ಮಕ್ಕಳಿಗೇ ಹಾಗೆ-ಅವರ ಬಾಳನ್ನು ವರ್ಷಕ್ಕೊಮ್ಮೆ ಮುದಗೊಳಿಸುವ ವಸ್ತುಗಳಲ್ಲಿ ಈ ಆಟವೂ ಒಂದು. ಪಟ್ಟಣಿಗರಿಗೆ ಸಿನಿಮಾ ಇದ್ದಂತೆ ಹಳ್ಳಿಗರಿಗೆ ಈ ಆಟ ಆನಂದದಾಯಿ.

ನಾಗಜ್ಜಿಯ ಪಕ್ಕದಲ್ಲಿ ಅವಳ ತೊಡೆಯ ಮೇಲೆ ಬಲಗೈಯಿಟ್ಟು ಕುಳಿತ ಮಂಗಳೆಯಂತೂ ತನ್ನ ನೋಟವನ್ನು ಚಪ್ಪರದ ಬಟ್ಟೆಯ ಪಟದಲ್ಲೇ ನಾಟಿ ಬಿಟ್ಟಿದ್ದಳು.

ಆಟ ಆರಂಭವಾಯಿತು.

ಹೆಂಗಸು ಹಾಡಲು ಮೊದಲು ಮಾಡಿದಳು.

"ಮದುವ್ಯಾಗೆ ಗೊಂಬೆ
ದಿದಿವಿಂಚಾರಿ (ಬೀಬಿ ನಚ್ಚಿಯಾರಿ) ಮದುವ್ಯಾಗೆ ಗೊಂಬೆ"

ಅವಳ ಹಾಡಿಗೆ ಅನುಗುಣವಾಗಿ ಜೋಳದ ಕಡ್ಡಿ 'ಝುಯ್-ಝುಯ್' '.....ಝುಯ್-ಝುಯ್' ಎಂದು ಶ್ರುತಿಯಿಡುತ್ತಿತ್ತು.

ಆ ಹಾಡನ್ನನುಸರಿಸಿ ಗೊಂಬೆಯವನು ಹಣತೆಯ ಕುಡಿಯ ಮುಂದೆ ಹಿಡಿದ ಗೊಂಬೆಯನ್ನು ಕುಣಿಸುತ್ತಿದ್ದನು.

ಬಟ್ಟೆಯ ತೆರೆಯ ಮೇಲೆ ಗೊಂಬೆಯ ಛಾಯೆ ವಿಧ ವಿಧ ಭಂಗಿಯಲ್ಲಿ ಕುಣಿಯಿತು.

ಹಳ್ಳಿಯ ಜನ ಅದನ್ನು ಕಂಡು ಉತ್ಸಾಹದಿಂದ ನಲಿದರು! ನಟರಾಜ ಮಂಗಳೆಯರ ಉತ್ಸುಕತೆಗೆ ಮೇರೆಯೇ ಇರಲಿಲ್ಲ. ಅನಂತನಂತೂ ಪಟ್ಟಣದಲ್ಲಿ ದುಡ್ಡು ಕೊಟ್ಟರೂ ಕಾಣಸಿಗದ ಇಂಥ ಸುಂದರ ದೃಶ್ಯವನ್ನು ವೀಕ್ಷಿಸಿ ಮುಗ್ಧನಾಗಿ ಹೋದ.....

"ಡಿಲ್ಲಿ ಸುಲ್ತಾನ ಮಗಳೆ ಮದುವ್ಯಾಗೆ ಬೊಂಬೆ
ವರ ನಂದೀ ಮದುವ್ಯಾಗೆ ಬೊಂಬೆ-
ಝುಯ್-ಝುಯ್-ಝುಯ್-ಝುಯ್......"

ಆದರೆ ಡಿಲ್ಲಿಯ ಸುಲ್ತಾನನ ಮಗಳಾದ ಬೀಬಿ ನಚ್ಚಿಯಾರ್ ಚೆಲುವರಾಯ ಸ್ವಾಮಿಯ ಸುಂದರ ಪ್ರತಿಮೆಗೆ ಪೂರ್ಣವಾಗಿ ಮನಸೋತಿದ್ದಾಳೆ. ಇನ್ನಾವ ಮಾನವನಿಂದಲೂ ಅವಳು ಆಕರ್ಷಿತಳಾಗುವವಳಲ್ಲ. ಹೀಗಿರುವಾಗ ಶ್ರೀ ರಾಮಾನುಜಾಚಾರ್ಯರು ದೆಹಲಿಗೆ ಬಂದು ಸುಲ್ತಾನರನ್ನು ಬೇಡಿ ನಚ್ಚಿಯಾರ್ ಇಲ್ಲದ ವೇಳೆಯಲ್ಲಿ ಚೆಲುವರಾಯನ ವಿಗ್ರಹವನ್ನು ಕೊಂಡೊಯ್ಯುವುದು; ಆಮೇಲೆ ಈ ವಿಷಯ ತಿಳಿದು ರಾಜಕುಮಾರಿ ಪ್ರಲಾಪ ಮಾಡುವುದು, ಬಳಿಕ ಕುದುರೆಯೇರಿ ಮೇಲುಕೋಟೆಗೆ ಆಕೆ ಧಾವಿಸಿ ಬರುವುದು, ಚೆಲುವರಾಯನ ಗುಡಿಯಲ್ಲಿ ಸ್ವಾಮಿಗೆ ಮಹಾಮಂಗಳಾರತಿಯಾಗುತ್ತಿರುವಂತೆ ಗುಡಿಯ ಹೊರಗೆ ಆಕೆ ಕುದುರೆಯಿಂದ ಬಿದ್ದು ಮೃತಳಾಗುವುದು, ಅನಂತರ ಅವಳ ಆತ್ಮಜ್ಯೋತಿ ರೂಪದಲ್ಲಿ ಪರಮಾತ್ಮನ ವಿಗ್ರಹದಲ್ಲಿ ಐಕ್ಯವಾಗುವುದು-ಹೀಗೆ ಕಥೆ ಹರಿದು ಪರಿಸಮಾಪ್ತಿಗೊಂಡಿತು. ಕಥೆಯ ವಿವಿಧ ಸಂಗತಿಗಳನ್ನು ಗೊಂಬೆಯವನು ಅತಿ ಚಮತ್ಕಾರವಾಗಿ ಗೊಂಬೆಯನ್ನು ಹಾಗೆ ಹೀಗೆ ತಿರುಗಿಸಿ ಆಡಿಸುವುದರಲ್ಲಿ ಸ್ಪಷ್ಟವಾಗಿ ಪ್ರೇಕ್ಷಕರ ಮನಮುಟ್ಟುವಂತೆ, ಹೃದಯ

ಕರಗುವಂತೆ ಚಿತ್ರಿಸಿಬಿಟ್ಟಿದ್ದ. ಜೊತೆಗೆ ಇಂಪಾದ ಅವಳ ಹಾಡು, ಜೋಗುಳದಂತೆ ಹಿತವಾದ ಆ ಶೃತಿ–ಪ್ರೇಕ್ಷಕರಿಗೆ ಸುಶ್ರಾವ್ಯ ಸಂಗೀತದ ಅಮೃತಪಾನ ಮಾಡಿಸಿತ್ತು.

ಎಲ್ಲರಿಗಿಂತಲೂ ಆ ಆಟದ ಪರಿಣಾಮ ಅನಂತನ ಮೇಲೆ ಸಂಪೂರ್ಣವಾಗಿ ಆಗಿತ್ತು. ಅವನ ಹೃದಯ ಹಿಗ್ಗಿನಿಂದ ಹಾಡುತ್ತಿತ್ತು. ಎದ್ದು ಮನೆಯ ಹಾದಿ ಹಿಡಿದಂತೆ, "ಈ ಆಟಾನ ಏನಂತ ಕರೀತಾರೋ ನಟ್ರಾಜ ?" ಎಂದು ಕೇಳಿದ.

"ತೊಗಲುಗೊಂಬೆ ಆಟ ಅಥವಾ ಚಕ್ಕಳದ ಗೊಂಬೆ ಆಟ ಅಂತ ಕರೀತಾರೆ."

"ತುಂಬ ಸೊಗಸಾಗಿದೆ ಕಣಯ್ಯ. ನಾನು ಇಂಥ ಆಟ ನೋಡೇ ಇರಲಿಲ್ಲ" ಎಂದು ಹೇಳಿ ಏನೋ ನೆನೆದುಕೊಂಡವನಂತೆ "ನನಗೇನೊ ಈ ಹಳ್ಳಿ ಜೀವನ ನೋಡಿದ ಮೇಲೆ ಆ ಹಾಳು ಪಟ್ಟಣದ ವಾಸಕ್ಕೆ ಪುನಃ ಹೋಗಬೇಕಲ್ಲಪ್ಪಾ ಅಂತ ಬೇಜಾರಾಗ್ತದೆ" ಎಂದು ಅತೃಪ್ತಿಯ ನಿಟ್ಟುಸಿರಿಟ್ಟುಕೊಂಡನು.

ಮಾರನೇ ಬೆಳಗ್ಗೆ ಅನಂತ ಎದ್ದಾಗ ಆಗಲೇ ಬಿಸಿಲೇರಿತ್ತು. ನಟರಾಜ–ಮಂಗಳೆಯರಿನ್ನೂ ನಿದ್ರಾದೇವಿಯ ಆಲಿಂಗನದಲ್ಲೇ ಪವಡಿಸಿದ್ದರು. ರಾತ್ರಿ ಗೊಂಬೆಯಾಟ ಬಹುಹೊತ್ತಿನ ತನಕ ನಡೆದದ್ದರಿಂದ ಇನ್ನೂ ನಿದ್ದೆಯ ಜೊಂಪು ಹರಿದಿರಲಿಲ್ಲ. ಅನಂತನಿಗೆ ಹೊಸ ಜಾಗವಾದುದರಿಂದಲೊ ಏನೊ ಏಳು ಗಂಟೆಯಾದ ಬಳಿಕ ಎಷ್ಟೇ ಪ್ರಯತ್ನಪಟ್ಟರೂ ಮಲಗಲು ಸಾಧ್ಯವಾಗಲಿಲ್ಲ. ಎದ್ದು ಬಂದು ನೀರೊಲೆಯ ಮುಂದೆ ಕುಳಿತುಕೊಂಡ. ಪಡಸಾಲೆಯಲ್ಲಿ ಮಲಗಿದ್ದುದರಿಂದ ಅವನಿಗೆ ಚಳಿಯಾಯಿತೇನೊ ! 'ಕ್ರಿಸ್‌ಮಸ್' ದಿನಗಳಲ್ಲಿ ಕಲ್ಲಹಳ್ಳಿ ವಿಪರೀತ ಚಳಿ ಹಿಡಿಸುತ್ತದೆ.

ಅಷ್ಟು ಹೊತ್ತಿಗಾಗಲೆ ಪಾರ್ವತಮ್ಮ ಎದ್ದು ನೀರೊಲೆಗೆ ಉರಿಹಾಕಿದ್ದಳು. ಆ ಬೆಂಕಿಯ ಶಾಖದಲ್ಲಿ ಅವನು ಮೈ ಕಾಯಿಸಿಕೊಳ್ಳುತ್ತಾ ಇದ್ದಂತೆ ನಾಗಜ್ಜಿ ಚೆಂಬು ಹಿಡಿದುಕೊಂಡು ಹಿತ್ತಲಿನ ಬಾಗಿಲಿನಿಂದ ಹೊರಬಿದ್ದವಳು, ಹಾಗೇ ತಡೆದು ನಿಂತು, "ಯೇನ ಮೊಗ ಬೊ ಚಳಿಯಾಯ್ತುದಾ ?" ಎಂದು ವಿಚಾರಿಸಿದಳು.

"ಹೌದಜ್ಜಿ, ಬಲು ಚಳಿಯಾಗಿದೆ" ಎಂದು ಹೇಳುವಾಗ ಅನಂತನ ದೇಹ ನಡುಗಿದುದರಿಂದ ಅವನ ಹಲ್ಲುಗಳು ಕಟಕಟನೆ ಸದ್ದು ಮಾಡಿದುವು.

"ಚೆಂದೋಯ್ತು ಇದೇನಾ ? ಇನ್ನು ಅರೀದ ಹುಡುಗ ನೀನು. ನಿನ್ನ ಹಲ್ಲೆಲ್ಲಾ ಇಂಗೆ ಒಂದೇ ಸಮಕೆ ಪದ ಹೇಳಾಕೆ ಹತ್ತುಬುಟ್ಟವೆ ?....ನೋಡು ನಾನು ಹಣ್ಣು ಹಣ್ಣು ಮುದುಕಿ, ಹೆಂಗಿವ್ನಿ ! ನಿನ್ನಂಗೆ ನಡಕ್ಕೊಂಡು ಕುಂತಿವ್ನಾ ಯಾವತ್ತೂ ದನುರ್ವಾಯು ಹೊಡೆದೋರಂಗೆ ?" ಎಂದು ನುಡಿದು "ಈ ಪಟ್ಟಣದೋರ ತೀರೇ ಈಟು. ಒಂದು

ಮೆಣಸಿನಕಾಯಿ ತಿಂದರೆ ಉಸ್ನ, ಒಂದೀರುಳ್ಳಿ ತಿಂದರೆ ಸೀತ" ಎನ್ನುವಾಗ ಮುದುಕಿ, ಇನ್ನೊಬ್ಬರನ್ನು ಕೀಟಲೆ ಮಾಡುವಾಗ ಸಹಜವಾಗಿ ಉದ್ಭವಿಸುವ ಸಂತಸದಿಂದ ಹಿಗ್ಗಿದಳು.

ಅಜ್ಜಿಯ ಚುಚ್ಚುಮಾತಿಗೆ ಮರು ನುಡಿಯಲು ಆಗದೆ ಅನಂತ ನಾಚಿ ಸುಮ್ಮನೆ ಕುಳಿತುಕೊಂಡನು.

ಮುದುಕಿ ಹಾಗೆ ನಸುನಕ್ಕು, ಕಾಲು ತೆಗೆಯುತ್ತಾ, "ಹು, ಹಂಗೆ ಒಸಿ ಮೊಕ ತೊಳೆದುಕೊಂಡುಬುಡು. ಬಿರ್ರನೆ ಹಾಲು ಕರಕೊಂಡು ಬಂದು ಕಾಯಿಸಿ ಕೊಟ್ಟೇನು" ಎಂದಳು.

ಅಜ್ಜಿ ಕೊಟ್ಟಿಗೆಗೆ ಹೋದ ಸ್ವಲ್ಪ ಹೊತ್ತಿನವರೆಗೂ ಅನಂತ ಏನೊಂದೂ ಮಾಡದೆ ಹಾಗೆಯೇ ಕುಳಿತಿದ್ದ. ಆಮೇಲೆ ಮುಖ ತೊಳದೇಬಿಡುವುದೆಂದು ಮನಸ್ಸು ಮಾಡಿ, ಪಕ್ಕದಲ್ಲೇ ಇಟ್ಟಿದ್ದ ತಣ್ಣೀರು ಹಂಡೆಯಿಂದ ಬೊಗಸೆ ನೀರು ಕೆಂಡದ ಮೇಲೆ ಸುರಿದ. ಆಮೇಲೆ ಒಂದು ದಪ್ಪ ಇದ್ದಿಲನ್ನು ಹಲ್ಲು ತಿಕ್ಕುವುದಕ್ಕೆಂದು ಕೈಗೆತ್ತಿಕೊಂಡ. ಅಷ್ಟರಲ್ಲಿ ಅವನಿಗೇನೆನಿಸಿತೋ? ಆ ಇದ್ದಿಲು ಚೂರಿನಿಂದ ಒಮ್ಮೆ ಎದುರಿಗಿನ ಗೋಡೆಯ ಮೇಲೆ ಗೀಚಿದ. ಹಾಗೇ ಏನೊ ಉತ್ಸಾಹ ಉಕ್ಕಿದಂತಾಗಿ ಅವನಿಗೆ ಪೂರ್ಣವಾಗಿ ಅದರ ಅರಿವಾಗದೆಯೇ ಅವನ ಕೈ ಗೀಚುತ್ತಾ ಹೋಯಿತು. ಹಾಗೆ ಗೀಚುತ್ತಾ ಹೋದಂತೆ ಗೋಡೆಯ ಗೆರೆಗಳು ಯಾವುದೊ ಸ್ಫುಟ ಆಕಾರ ತಳೆಯುತ್ತಿರುವುದು ಯಾರಿಗಾದರೂ ಗೋಚರಿಸುತ್ತಿತ್ತು.

ಇಷ್ಟು ವೇಳೆಗಾಗಲೆ ಎದ್ದು ಬಂದ ನಟರಾಜ-ಮಂಗಳೆಯರು ಅನಂತನ ಬೆನ್ನಿನ ಹಿಂದೆ ಸದ್ದು ಮಾಡದೆ ನಿಂತು ಅವನು ಬರೆಯುತ್ತಿರುವ ಮಸಿಯ ರೇಖಾಚಿತ್ರವನ್ನೇ ನಿಟ್ಟಿಸುತ್ತಿದ್ದರು.

ಇನ್ನೂ ಒಂದೆರಡು ಗೆರೆಗಳನ್ನೆಳೆಯುವುದರಲ್ಲಿ ಅನಂತನ ಚಿತ್ರ ಕೆಲಸ ಮುಕ್ತಾಯಗೊಂಡಿತು. ಅದನ್ನೇ ನೋಡುತ್ತಿದ್ದ ಮಂಗಳೆ "ದಿದಿವಿಂಚಾರಿ!" ಎಂದು ಚಪ್ಪಾಳೆ ತಟ್ಟಿದಳು.

ಬೆಚ್ಚಿ ಹಿಂತಿರುಗಿದ ಅನಂತ.

"ನೀವಾ? ನಾ ಯಾರಪ್ಪಾ ಅಂತೀನಿ!....ಬುಡ್ತು ಅನ್ನು" ಎಂದ.

"ಎಷ್ಟು ಚೆನ್ನಾಗಿ ಬರೆದಿದ್ದೀ ಅನಂತೂ. ರಾತ್ರಿ ನೋಡಿದ ಬೊಂಬೇಗೂ ಇದಕ್ಕೂ ಏನೇನೂ ವ್ಯತ್ಯಾಸವಿಲ್ಲ." ನಟರಾಜ ತನ್ನ ಮೆಚ್ಚುಗೆಯನ್ನು ಸೂಚಿಸಿದ.

ಅಷ್ಟರಲ್ಲಿ ಹಾಲು ಕರೆದುಕೊಂಡು ಕೊಟ್ಟಿಗೆಯಿಂದ ನಾಗಜ್ಜಿಯೂ ಬಂದಳು. ಚಿತ್ರವನ್ನು ನೋಡಿ ಅವಳಿಗೂ ಅಚ್ಚರಿ.

"ಅವ್ವಿ! ಏಟು ಚೆಂದಾಗಿ ಬರೆದವ್ನೆ. ತದ್ರೂಪು ಆ ಗೊಂಬೆ ಅಂಗೇ ಅದಲ್ಲಾ ?" ಎಂದಳು, "ಪಾರತೀ, ಬಾವ್ವ ಇಲ್ಲಿ, ನೋಡು ಈ ಇಚಿತ್ರವಾ!" ಎಂದು ಪಾರ್ವತಮ್ಮನನ್ನು ಕೂಗಿ ಕರೆದಳು.

ಪಾರ್ವತಮ್ಮನೂ ಅಡುಗೆ ಮನೆಯಿಂದ ಬಂದು ನೋಡಿ ಬೆರಗಾದಳು. ಚಿತ್ರ ರಾತ್ರಿ ನೋಡಿದ ಗೊಂಬೆಯನ್ನು ಮತ್ತೊಮ್ಮೆ ಪ್ರತ್ಯಕ್ಷಗೊಳಿಸಿತ್ತು.

ನಾಗಜ್ಜಿ ಹಾಲಿನ ತಪ್ಪಲೆಯನ್ನು ಕೆಳಗಿಟ್ಟು ಅನಂತನಿಗೆ 'ಲಟಿಗೆ' ತೆಗೆಯುತ್ತಾ, "ಬಲೆ ನಮ್ಮಪ್ಪ, ಹಿರೀಕರ ಹೆಸರು ಹೇಳಾಕೆ ನೀನೊಬ್ಬ ಹುಟ್ಟಿಕೊಂಡೆ ಬುಡು. ಇನ್ನೇನಾ, ವಾಸಾಚಾರಿ ವಂಸ ಉದ್ದಾರ ಆದಂಗೇಯಾ!" ಎಂದು ಪ್ರಶಂಸಿಸಿದಳು.

ಮಧ್ಯಾಹ್ನ ಮನೆಗೆ ಬಂದ ವಿಷಕಂಠಯ್ಯನೂ ಅನಂತನ ಚಿತ್ರವನ್ನು ಬಹುವಾಗಿ ಹೊಗಳಿದ.

ಊರಿನ ಇತರ ಹೆಂಗಸರು 'ಮೈಸೂರಿಂದ ಬಂದಿರೊ ಅಯ್ಯ ಚಿತ್ತಾರ ಬರೆದವ್ನಂತೆ ಕನಾ' ಎಂದು ತಂಡ ತಂಡವಾಗಿ ವಿಷಕಂಠಯ್ಯನ ಮನೆಗೆ ಬಂದು ಚಿತ್ರವನ್ನು ನೋಡಿ ಹೋಗುತ್ತಿದ್ದರು. ಮಕ್ಕಳಿಗಂತೂ ಆ ನೋಟ ಅತ್ಯಂತ ಪ್ರಿಯವೆನಿಸಿತು. 'ನಾನೂ ಅಂಗೆ ಬರೀತೀನಿ' ಎಂದು ಎಷ್ಟೋ ಮಕ್ಕಳು ತಮ್ಮ ಮನೆಯ ಗೋಡೆಗಳನ್ನೂ, ನೆಲವನ್ನೂ ಗಲೀಜುಮಾಡಿ ತಮ್ಮ ಮನೆಯ ಹಿರಿಯರಿಂದ ಛೀಮಾರಿ ಹಾಕಿಸಿಕೊಂಡರು. ಹಲವಾರು ಗಂಡಸರು ತಮ್ಮ ಮನೆಯ ಹೆಂಗಸರ ಒತ್ತಾಯಕ್ಕೆ ಬಂದು ಅನಂತನ ಚಿತ್ರವನ್ನು ಪರಿಶೀಲಿಸಿದರು.

೧೪

ಮಕ್ಕಳು ಹೀಗೆ ಆಡುತ್ತ ಬೆಳೆಯುತ್ತಿರುವಂತೆ ಒಂದು ವರ್ಷ ಕಳೆಯಿತು. ಕಾಲ ಮಂಗಳೆಯನ್ನು ಯೌವನದ ಹೊಸ್ತಿಲ ಮೇಲೆ ತಂದು ನಿಲ್ಲಿಸಿತ್ತು.

ಒಂದು ಸಂಜೆ ಮನೆಯಲ್ಲಿ ಎಲ್ಲರೂ ಸೇರಿ ನಡುಮನೆಯ ಒರಳಿನಲ್ಲಿ ಭತ್ತವನ್ನು ಕುಟ್ಟುತ್ತಿದ್ದರು. ಪಾರ್ವತಮ್ಮನೇ ಒನಕೆ ಹಿಡಿದು ನಿಂತಿದ್ದಳು. ನಾಗಜ್ಜಿ ಒರಳಿನ ಬಳಿ ಕುಳಿತು ಭತ್ತ ನೂಕುತ್ತಿದ್ದಳು. ಅದನ್ನೆಲ್ಲ ಬಹಳ ಹೊತ್ತಿನ ತನಕ ಸುಮ್ಮನೆ ನಿಂತು ನೋಡುತ್ತಿದ್ದ ಮಂಗಳೆ ತನ್ನ ತಾಯಿಯೊಬ್ಬಳೇ ಕೆಲಸ ಮಾಡಿ ಬಳಲುತ್ತಾಳಲ್ಲಾ ಎಂದು ಬಗೆದು, "ಅದ್ಯಾಕೆ ಒಬ್ಬಳೇ ಕುಟ್ತೀ. ಕೊಡವ್ವಾ, ನಾನು ತುಸ ಕುಟ್ತೀನಿ" ಎಂದು ಒನಕೆಗೆ ಕೈ ಇಟ್ಟಳು.

ಪಾರ್ವತಮ್ಮ ಎಷ್ಟೋ ಬಗೆಯಲ್ಲಿ ಹೇಳಿದಳು.

"ಬ್ಯಾಡಕವಾ ಆಯಾಸ ಆಯ್ತದೆ. ನಾಳೇಕೆ ನೀನು ಮಠಕ್ಕೆ ಬ್ಯಾರೆ ಹೋಗಬೇಕು, ಹುಣಸೂರಿಗೆ."

ಮಂಗಳೆ ಕೇಳಲಿಲ್ಲ.

"ಇಲ್ಲ ಕಣ ಕೊಡವ್ವಾ" ಎಂದು ಹಟಮಾಡಿ ಪಾರ್ವತಮ್ಮನ ಕಯ್ಯಿಂದ ಒನಕೆಯನ್ನು ಈಸುಕೊಂಡಳು.

ಅಜ್ಜಿಯೂ ಪಾರ್ವತಮ್ಮನೂ ನೂಕುತ್ತಿದ್ದರು.

ಬಹಳ ಹೊತ್ತಿನವರೆಗೆ ಲಗುಬಗೆಯಿಂದ ಕುಟ್ಟುತ್ತಿದ್ದಳು ಮಂಗಳೆ.

ರಾತ್ರಿ ಊಟ ತೀರಿಸಿ ಮಲಗುವಾಗ ಮಂಗಳೆಗೆ ತೀರ ದಣಿವಾಗಿತ್ತು. ಯಾವ ಮಾಯದಲ್ಲಿಯೋ, ಅವಳಿಗೆ ಅರಿವಿಲ್ಲದೆಯೇ ನಿದ್ದೆ ಬಂದಿತು. ಬೆಳಿಗ್ಗೆ ಮುಂಜಾವಿಗೇ ಎದ್ದಾಗ ಹೊಸ ಜಗತ್ತು ಅವಳನ್ನು ಸ್ವಾಗತಿಸುವಂತಿತ್ತು. ಅವಳ ಮನೆ, ಅವಳ ತಾಯಿ ತಂದೆ, ಅವಳ ಅಜ್ಜಿ ಎಲ್ಲರೂ ಅವಳ ಕಣ್ಣಿಗೆ ಹೊಸದಾಗೇ ತೋರಿದರು.

ಪದ್ಧತಿಯಂತೆ ಎದ್ದು ಬೀದಿ ಬಾಗಿಲಿಗೆ ಹೋದಳು ಮಂಗಳೆ.

ಅಷ್ಟು ಹೊತ್ತಿಗೆ 'ಮಸುಬಿ'ಗೇ ಎದ್ದ ಮಾದಿಯ ಸೊಸೆ ಇವರ ಮನೆಯ ಮುಂದೆಯೇ ಹೋಗುತ್ತಿದ್ದಳು. ಆಕೆ ನಂಜನಗೂಡಿನಿಂದ ಕಲ್ಲಹಳ್ಳಿಗೆ ಲಗ್ನವಾಗಿದ್ದಳು. ಚೂಟು ಹೆಂಗಸು ಎಂದು ಊರಿಗೆ ಊರೇ ಕರೆಯುತ್ತಿತ್ತು ಅವಳನ್ನು.

ಅವಳು ಒಂದು ಗಳಿಗೆ ತಡೆದು ನಿಂತು ಮಂಗಳೆಯನ್ನೇ ಸೂಕ್ಷ್ಮವಾಗಿ ಪರಿಶೀಲಿಸಿದಳು. ಆಮೇಲೆ ನಗುತ್ತಾ, "ಹೌದಾ?" ಎಂದು ಕಣ್ಣು ಮಿಟುಕಿಸಿದಳು.

ಪಾಪ, ಮಂಗಳೆಗೆ ಅವಳ ಕುಹಕ ಅರ್ಥವಾಗಲಿಲ್ಲ. ಸುಮ್ಮನೆ ಪೆಚ್ಚು ಮೋರೆ ಹಾಕಿ ಕಂಬವನ್ನೊರಗಿ ನಿಂತಳು.

ಮಾದಿಯ ಸೊಸೆ ಮಂಗಳೆಯನ್ನೇ ನೋಡಿ ನಗುತ್ತಾ ಮನೆಯೊಳಗೆ ನಡೆದಳು.

ಅಂಗಳದಲ್ಲೇ ಪಾರ್ವತಮ್ಮ ಸಿಕ್ಕಿ, "ಯೇನಾ ನಂಜೀ...ಅಪರೂಪಕ್ಕೆ ಅಳಿಯಾ ಬರೋ ಹಂಗೆ ಬಂದುಬುಟ್ಟಿದ್ದೀ? ಚೆಂದಾಗಿದ್ದೀಯಾ? ನಂಜನಗೂಡಿಗೆ ಹೋಗಿರ್ನಿಲ್ವಾ? ಏಟು ಜಿನಾ ಆಯ್ತು ಇಲ್ಲೀಗೆ ಬಂದು...." ಎಂದೆಲ್ಲ ಕೇಳಿದಳು.

"ನೆನ್ನೆ ಬೆಳಿಗ್ಗೆ ಬಸ್ಸಿಗೇ ಬಂದೀ. ಚೆಂದಾಗೂ ಇವ್ನಿ.... ಅದಿರ್ಲಿ ಕನವ್ವಾ ನಿಮಗೊಂದು ಚಮಾಚಾರ ಹ್ಯಾಳಾಕೆ ಬಂದಿ...."

"ಯಾನವ್ವಾ ?"

"ನಿಮ್ಮ ಮಂಗ್ಲೆ ಆಚೆ ಬಾಗ್ಲಾಗೆ ನೆರೆದು ನಿಂತವಳೇ..."

"ದಿಟವವ್ವಾ ?"

"ಹೂಕನವ್ವಾ, ನಾನೇ ರುತು ಕಂಡೀ" ಎಂದು ಸುದ್ದಿ ಮುಟ್ಟಿಸಿದಳು.

ಕೂಡಲೇ ಪಾರ್ವತಮ್ಮನೂ ನಾಗಜ್ಜಿಯೂ "ಹಂಗೇನಾ?" ಎನ್ನುತ್ತಾ, ಸಡಗರದಿಂದ ಓಡಾಡಿ ಆ ಸಂದರ್ಭಕ್ಕೆ ಆಗಬೇಕಾದ ವಸ್ತುಗಳನ್ನು ಅಣಿಗೊಳಿಸಿದರು.

ಪಾರ್ವತಮ್ಮ ಬೇಗ ಬೇಗ ಅಟ್ಟಕ್ಕೆ ಹತ್ತಿ ತೆಂಗಿನ ತರುಳು ತಂದು ವೀಳ್ಯದೊಡನೆ ಮಂಗಳೆಯ ಕಯ್ಯಲ್ಲಿಟ್ಟರು. ಅಷ್ಟರಲ್ಲಿ ನಾಗಜ್ಜಿ ಚೆಂಬು ತೆಗೆದುಕೊಂಡು ಕೊಟ್ಟಿಗೆಗೆ ಓಡಿ, ಹಾಲು ಕರೆದು ತಂದು ಕಾಯಿಸಿ, ಅದಕ್ಕೆ ತುಪ್ಪ ಹಾಕಿ ಮಂಗಳೆಗೆ ಕುಡಿಯಲು ಕೊಟ್ಟಳು. ಅತ್ತ ಮಾದಿಯ ಸೊಸೆ, ಮಂಗಳೆ ಋತುಮತಿಯಾದುದನ್ನೂ, ಅವರೆಲ್ಲರೂ ಮನೆಗೆ ಬರಬೇಕೆಂದು ನಾಗಜ್ಜಿ ಹೇಳಿ ಕಳಿಹಿದ್ದುದನ್ನೂ ಊರಿನ ಮುತ್ತೈದೆಯರಿಗೆ ವರದಿ ಕೊಟ್ಟಳು.

ಬಿಸಿಲು ಬಲಿತಂತೆ ಓಲಗದವರು ಮುತ್ತೈದೆಯರು ಎಲ್ಲ ನೆರೆದರು. ಹುಡುಗಿಯನ್ನು ಒಳಗೆ ಕರೆದೊಯ್ದು ಮಂಗಳಸ್ನಾನ ಮಾಡಿಸಿದರು. ಆ ಬಳಿಕ ಅರಿಶಿನ ಹಚ್ಚಿ, ಒಳ್ಳೆ ಸೀರೆಯುಡಿಸಿ ಮನೆಯಲ್ಲಿದ್ದ ಆಭರಣಗಳಿಂದ ಅಲಂಕಾರ ಮಾಡಿದರು. ಹಾಗೆ ಅವಳನ್ನು ಶೃಂಗರಿಸುವಾಗ ಮನೆಯಲ್ಲಿ ಹೆಚ್ಚು ಆಭರಣಗಳಿಲ್ಲದಿದ್ದುದು ನಾಗಜ್ಜಿಗೂ, ಪಾರ್ವತಮ್ಮನಿಗೂ ತುಂಬ ವ್ಯಥೆಯನ್ನುಂಟುಮಾಡಿತ್ತು. ಪಾರ್ವತಮ್ಮನ ಕಣ್ಣಿನಲ್ಲಂತೂ ತುಂಬ ವ್ಯಥೆಯನ್ನುಂಟು ಮಾಡಿತ್ತು. ಪಾರ್ವತಮ್ಮನ ಕಣ್ಣಿನಲ್ಲಂತೂ ನೀರು ತುಂಬಿಕೊಂಡಿತ್ತು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ಮಾದಿಯ ಸೊಸೆ ತನ್ನ ಬಂಗಾರದ ಜೋಮಾಲೆ ಸರವನ್ನು ತೆಗೆದು ಮಂಗಳೆಯ ಕೊರಳಿಗೆ ಹಾಕಿದಳು. ಅವಳ ಮೇಲ್ಪಂಕ್ತಿಯನ್ನನುಸರಿಸಿ ಇತರ ಮುತ್ತೈದೆಯರೂ ತಾವು ತಮ್ಮ ಮೈಮೇಲೆ ತೊಟ್ಟ ಒಡವೆಗಳಿಂದ ಹುಡುಗಿಗೆ ಅಲಂಕಾರ ಮಾಡಿದರು. ಅನಂತರ ಅವಳನ್ನು ಮಣೆಯ ಮೇಲೆ ಕೂರಿಸಿ ಆರತಕ್ಷತೆ ಮಾಡಿದರು.

ಇಷ್ಟರಲ್ಲಿ ನಾಗಜ್ಜಿಯೂ ಪಾರ್ವತಮ್ಮನೂ ಅಡುಗೆ ಮನೆ ಸೇರಿ, ಚಿಗಳಿ, ತಂಬಿಟ್ಟುಗಳನ್ನು ಮಾಡಿಟ್ಟರು.

ಬಂದೋರಿಗೆಲ್ಲಾ ಚಿಗಳಿ, ತಂಬಿಟ್ಟು ವೀಳ್ಯ ಕೊಟ್ಟಾಯಿತು.

ಅದಾದ ಮೇಲೆ ಅತ್ತಿ ಸೊಪ್ಪು ತಂದು, ಹಸೆಮಣೆಯ ಹಿಂಭಾಗದಲ್ಲಿ ಗೋಡೆಗೆ ಸೇರಿದಂತೆ ಸೊಪ್ಪಿನ ಕೊನೆಗಳನ್ನಿಟ್ಟು ಸೊಪ್ಪಿನ ಚೌಕ ಮಾಡಿದರು, ಇದನ್ನು "ಗುಡ್ಲು" ಎಂದು ಕರೆಯುತ್ತಾರೆ.

ಆರತಿಯಾದ ಬಳಿಕ ಹುಡುಗಿಯನ್ನು ಗುಡ್ಲು ಕೂಡಿದರು. ಆಮೇಲೆ ಪುನಃ ಆರತಿ ಮಾಡಿ ಗುಡ್ಲಿನಿಂದ ಅವಳನ್ನು ಈಚೆಗೇಳಿಸಿಕೊಂಡರು.

ಇಷ್ಟರಲ್ಲಿ ಒಳಗೆ ಹುಗ್ಗಿಯನ್ನ ತಯಾರಾಗಿತ್ತು. ಅತ್ತಿ ಎಲೆಗಳಿಂದಲೇ ಹಚ್ಚಿದ ಊಟದೆಲೆಯಲ್ಲಿ ಅದನ್ನು ಹುಡುಗಿಗೆ ಬಡಿಸಿದರು.

ಮಧ್ಯಾಹ್ನ ಹೊಲದಿಂದ ಹಿಂತಿರುಗುತ್ತಿದ್ದ ವಿಷಕಂಠಯ್ಯನಿಗೆ ಊರಿನೊಳಗೆ ಕಾಲಿಟ್ಟೊಡನೆಯೇ ಶುಭಸಮಾಚಾರ ಮುಟ್ಟಿತು. ಮನೆಗೆ ಬಂದವನೇ ಬೇಗ ಊಟ ತೀರಿಸಿಕೊಂಡು ಕೊತ್ತೇಗಾಲಕ್ಕೆ ಸುದ್ದಿ ತಿಳಿಸಲು ನಿರ್ವಾಣಿಯ ಗಾಡಿಯಲ್ಲಿ ಹೊರಟ. ನಾಗಜ್ಜಿ ಆಯರಹಳ್ಳಿ ಅಯ್ಯನಿಗೆ ಹೇಳಿ ಮೈಸೂರಿಗೆ ಕಾಗದ ಹಾಕಿಸಿದಳು.

ರಾತ್ರಿಯಾಗುತ್ತಲೂ ಮಂಗಳೆ ಮಲಗುವಾಗ ಅವಳ ಕೈಗೆ "ಕುಡ್ಲು" ತಂದುಕೊಟ್ಟಳು ನಾಗಜ್ಜಿ. ಅಷ್ಟು ಮಾಡಿದಮೇಲೆ ನಾಗಜ್ಜಿ, ಪಾರ್ವತಮ್ಮನಲ್ಲದೆ ಇನ್ನೂ ಮೂರು ನಾಲ್ಕು ಜನ ಹೆಂಗಸರೂ ಹುಡುಗಿಯ ಸುತ್ತ ಕಾಯುತ್ತ ಮಲಗಿದರು. ಅರಿಶಿನದ ಮೈಗೆ ಭೀತಿ ಅಂಟೀತೆಂದು ನಮ್ಮ ಹಳ್ಳಿಗಳಲ್ಲಿ ಈ ಏರ್ಪಾಟು ಸಾರ್ವತ್ರಿಕವಾಗಿ ಬೆಳೆದುಬಂದಿದೆ.

ಸುದ್ದಿ ತಲುಪಿದ ಮೇಲೂ ಕೊತ್ತೇಗಾಲದಿಂದ ನರಸಮ್ಮ ಬರಬೇಕಾದರೆ ಎಂಟು ದಿನ ಬೇಕಾಯಿತು. ಆದರೆ ಬಂದ ಬಳಿಕ ಮಾರನೆಯ ದಿನವೇ ಪ್ರೀತಿಯಿಂದ ಮಂಗಳೆಯನ್ನು ಹಸೆಗೆ "ಹತ್ತಿಸಿದಳು." ಅವಳ ಜೊತೆಯಲ್ಲಿ ಚೆಲುವಮ್ಮನಲ್ಲದೆ ಸುಬ್ಬರಾಯಿಯೂ ಬಂದಿದ್ದ. ಕಾಳಯ್ಯ ಮಾತ್ರ 'ಎಂಗಸರ ಕಾರ್ಯ ಅಲ್ಲಿ ನಾ ಬಂದು ಮಾಡೋದು ಯೇನಾ ಅದೆ ?' ಎಂದು ಹಿಂದೆ ಉಳಿದಿದ್ದ.

ನರಸಮ್ಮ ಹಣದ ಮುಖ ನೋಡಲಿಲ್ಲ. ಕೈ ಸಡಿಲಿಸಿ ಸಮಾರಂಭವನ್ನು ವೈಭವದಿಂದ ನೆರವೇರಿಸಿದಳು. ತಾನೇ ಗಾಡಿ ಕಟ್ಟಿಸಿಕೊಂಡು ಹೋಗಿ ಹುಣಸೂರಿನಿಂದ ತಂದಿದ್ದ ಹಳದಿ ಧರ್ಮಾವರ ಸೀರೆಯನ್ನು ಮಂಗಳೆಗೆ ತನ್ನ ಕೈಯಿಂದಲೇ ಉಡಿಸಿದಳು. ತನ್ನ ಮೈಮೇಲಿದ್ದ ಆಭರಣಗಳೆನ್ನಲ್ಲಾ ಒಂದೊಂದಾಗಿ ತೆಗೆದು ಮಂಗಳೆಗೆ ತೊಡಿಸಿದಳು. ಚಿನ್ನದ ಪೌಚಿ, ಚಿನ್ನದ ಸರ, ಜುಮುಕಿ ಮುಂತಾದುವುಗಳಿಂದ ಹುಡುಗಿ ಮತ್ತೂ ಲಕ್ಷಣವಾಗಿ ಕಂಡುಬಂದಳು. ಎರಡು ಮೂರು ವರ್ಷಗಳ ಹಿಂದೆ ತನ್ನ ತಮ್ಮ ಸುಬ್ಬರಾಯಿಗೆ ಮಂಗಳೆಯನ್ನು ತಂದುಕೊಂಡರೆ ಚೆನ್ನಾಗಿರುತ್ತದೆ ಎಂದು ಸಣ್ಣದಾಗಿ ಅಂಕುರಿಸಿದ ನರಸಮ್ಮನ ಅಂತರಂಗದ ಆಸೆಯ ಮೊಗ್ಗು ಈ ಹೊತ್ತಿನಲ್ಲಿ, ತೀವ್ರವಾಗಿ ಕೆರಳಿ ಅರಳಿತು. ಹೇಗಾದರೂ ಮಾಡಿ ಈ ಹುಡುಗಿಯನ್ನು ತನ್ನ ತಮ್ಮನಿಗೆ ತಂದುಕೊಂಡೇ ತೀರಬೇಕೆಂದು ಅವಳ ಹೃದಯ ಬಯಸಹತ್ತಿತ್ತು. ಆದರೆ ಅವಳ ಬಯಕೆಗೆ ನಟರಾಜ ಆತಂಕವಾಗಿದ್ದ......

ಪಾರ್ವತಮ್ಮ ಮಗಳನ್ನು ತನ್ನ ತಮ್ಮನಿಗಲ್ಲದೆ ಬೇರೆ ಯಾರಿಗೂ ಕೊಡಲಾರಳೆಂದು ನರಸಮ್ಮನಿಗೂ ಯಾವೊತ್ತೋ ತಿಳಿದಿತ್ತು. ಆದರೆ ಆ ಸಂಬಂಧ ಹೇಗಾದರೂ ತಪ್ಪಿ ಹೋಗಬಾರದೇಕೆ? ಎಂದು ತನ್ನ ಮನಸ್ಸಿನಲ್ಲಿಯೇ ಚಿಂತಿಸಿದಳು. ವಿಷಕಂಠಯ್ಯ ಕೊತ್ತೇಗಾಲಕ್ಕೆ ಮಂಗಳೆ ಋತುವಾದ ವಾರ್ತೆಯನ್ನು ಹೇಳಲು ಬಂದ ರಾತ್ರಿ ತನ್ನ ಪತಿಯೊಡನೆ ಇದೇ ವಿಷಯವಾಗಿ ಪ್ರಸ್ತಾಪ ಮಾಡಿದ್ದಳು.

"ಅವ್ವು ಇದ್ದರೇನಂತೆ. ಎಂತೆಂತ ಸಮ್ಮಂದವೊ ತಪ್ಪಿ ಓಯ್ತವೆ. ತೊಟ್ಟಲಗಿರಂಗೆ ಹಾಕಿ ಉಡುಗಿ ಇನ್ನೂವೆ ಮೊಗಾ ಆಗಿರೊ ಆಗ್ಲೇ ಮದ್ವೆ ಅಂತ ಮಾಡಿರೊ ನಂಟೂ ಕಿತ್ತೋಯ್ತದೆ. ಅಂತಾದ್ದರಲ್ಲಿ..." ಎಂದು ಅವಳು ಹೇಳುವಾಗ ಕಾಳಯ್ಯ ಮಧ್ಯೆ ಬಾಯಿಹಾಕಿ ಹೇಳಿದ್ದ.

"ನೀ ಹೇಳಾದು ಸರಿ. ಪಾರತೀಗೆ ತವರು ಅಂದರೆ ಪ್ರಾಣ ಬುಡುಸಿಕೊತ್ತಾಳೆ. ಅದರಲ್ಲೂ ಅವಳ ತವರು ಎಸರೇಳಾಕೆ ಇರೋದು ಅದು ಒಂದು ಕೊನೆ. ಆ ನಟ್ರಾಜನ್ನ ಬುಟುಬುಟ್ಟು ಬ್ಯಾರೆ ಕಡೀಕೆ ಅವಳ ಯೋಚ್ಣೆಯಾರಾ ಹರಿದಾತಾ?" ಎಂದೆಲ್ಲ ಶಂಕಿಸಿದ್ದ.

ಆಗ ನರಸಮ್ಮ ಕೋಪದಿಂದ ಸಿಡುಕಿದ್ದಳು.

"ತವರು ತವರೂ ಅಂತ ತಿರುಕನಿಗೆ ಎಣ್ಣು ಕೊಡಕ್ಕೆ ಬಂದಾತಾ? ಆ ನಟ್ರಾಜನ ತಾವು ಇರೋದು ಯೇನಾ?–ಕರ್ನಕುಪ್ಪೇಲಿ ಒಂದು ಮುಡಿ ಜಮೀನು! ಆ ಜಮೀನ್ನಾರೂ ನೇರ್ಪಾಗಿ ಮಾಡಿಸಿಕೊಂಡಿರೊ ಯೋಗತೆ ಇದ್ದಾತಾ ಗಂಡಿಗೆ ?... ಇದ್ಯಾ ಕಲೀತೀನಿ ಅಂತ ಮೈಸೂರಿಗೋಗಿ ಕುಂತದೆ–ಹೊಟ್ಟೆ ತುಂಬಾತಾ ಅವ್ನು ಕಲೀತಾ ಇರೊ ಆ ಇದ್ಯದಿಂದ? ಈ ಗಂಡು ದಿಟವಾಗೂ ಮಗೂ ಎಡತಿ ಸಾಕಾತಾ ?...ಮಂಗಲೆ ಮುತ್ತಿನಂತಾ ಹೆಣ್ಣು. ನಮ್ಮ ಸುಬ್ರಾಯಿಗೊಳ್ಳೆ ಜೋಡಿ. ಅಪ್ಪಾರ ಆಸ್ತಿಬ್ಯಾರೆ ಆದೆ ಸುಬ್ಬರಾಯಿಗೆ. ಇವನಿಗಾರಾ ಅವಳ್ನ ಕೊಟ್ಟರೆ ಉಡುಗಿ ಬದುಕ್ಕತ್ತಾಳೆ. ಅದ ಬುಟ್ಟು ಆ ತಿರುಕನಿಗೆ ಯಾರಾರಾ ಕೊಟ್ಟಾರಾ ಚೆಂದುಳ್ಳಿ ಎಣ್ಣಾ ? ಇಳ್ಳು ಕಂಡ ಬಾವೀಗೆ ಹಾಡಿದ ಹಗಲೊತ್ತೇ ಯಾರಾರಾ ಓಗಿ ಬೀಳಾದುಂಟಾ ?....." ಎಂದು ತಡೆದು, "ಪಾರತಿ ಎಂಗಾರ ಯೋಚ್ನೆ ಮಾಡ್ಲಿ. ಈಗೇನಾ ಅದರಿಂದ ಆದ್ದು? ಮನೆ ಯಜಮಾನ ಅನ್ನಿಸಿಕೊಂಡು ನಿಮ್ಮ ತಮ್ಮ ಇಲ್ಲವಾ? ಅವನಿಗಾರಾ ತಿಳೀತದೆ. ಯಾವುದು ಸರಿ, ಯಾವುದು ತೆಪ್ಪೂ ಅಂತ."

ಹೀಗೆ ಆಕೆ ನುಡಿಯುವಾಗ ತಾನೂ ತನ್ನ ಪತಿಯೂ ಮಲಗಿದ ನಡುಮನೆಯ ಹೊರಗೆ ಕೊಟ್ಟಿಗೆಯಲ್ಲಿ ವಿಷಕಂಠಯ್ಯ ಮಲಗಿದ್ದುದರ ಅರಿವಿತ್ತು. ಅವನಿಗೆ ತನ್ನ ಮಾತುಗಳು ಕೇಳಲೆಂಬ ಅಭಿಲಾಷೆಯಿಂದಲೇ ನರಸಮ್ಮ ತನ್ನ ದನಿಯನ್ನು ಎತ್ತರಿಸಿ ನುಡಿದಿದ್ದಳು.

ವಿಷಕಂಠಯ್ಯನಿಗೂ ಅತ್ತಿಗೆಯ ಮಾತುಗಳನ್ನು ಕೇಳಿ ಹೇಗೆ ಹೇಗೋ ಎನ್ನಿಸಿತ್ತು. ಆತನ ಚಿತ್ತ ಎಂದೂ ಈ ದಿಸೆಯಲ್ಲಿ ಹರಿದುದಿಲ್ಲ, "ತನಗೆ ಒಬ್ಬಳು ಹೆಣ್ಣುಮಗಳಿದ್ದಾಳೆ.

ಅವಳು ಇನ್ನೇನು ವಯಸ್ಸಿಗೆ ಬರುವವಳಿದ್ದಾಳೆ. ಅವಳಿಗೆ ಸರಿಯಾದ ವರವನ್ನು ಹುಡುಕಿ ಗೊತ್ತುಮಾಡುವ ಭಾರ ಪೂರ್ಣವಾಗಿ ತನ್ನ ಮೇಲೆಯೇ ಬಿದ್ದಿದೆ." ಮುಂತಾದ ವಿಚಾರಗಳು ಇಲ್ಲಿಯ ತನಕ ಅವನ ಮನಸ್ಸಿನಂಚಿನಲ್ಲೂ ಸುಳಿದುದಿಲ್ಲ. ಇದೀಗ ಅವನ ಅತ್ತಿಗೆ... "ನಿಮ್ಮ ತಮ್ಮ ಇಲ್ಲವಾ? ಅವನಿಗಾರಾ ತಿಳೀತದೆ-ಯಾವುದು ತೆಪ್ಪೂ ಅಂತ" ಎಂದು ಹೇಳಿದ್ದು ಕೊಳದ ನೀರಿನಂತೆ ಶಾಂತವಾಗಿದ್ದ ಅವನ ಚಿತ್ತವನ್ನು ಹಟಾತ್ತನೆ ಕಲಕಿದಂತಾಗಿತ್ತು. ಅವನ ಮನಸ್ಸಿನಲ್ಲಿ ಯೋಚನೆಗೆ ಮೊದಲಾಗಿತ್ತು...

"ಔದಲ್ಲವಾ, ಮಂಗ್ಲ ನೆರೆದು ನಿಂತುಕೊಂಡಳು. ಇನ್ನು ಅವಳಿಗೆ ಲಗ್ಣ ಮಾಡೇ ಮುಗೀಬೇಕು-ಹೂವ ಅರಳಿದ ಮ್ಯಾಲೆ ದೇವರ ತಲೇಮ್ಯಾಕ್ಕೆ ನೆಟ್ಟಗೆ ಬರೊ ಹಂಗೆ !... ನಟ್ರಾಜಾ ಯೇನೋ ಬೆಳಕಂಡು ಕಯ್ಯಿಗೆ ಬಂದದೆ. ಆದರೆ ಅತ್ತಿಗೆ ಹೇಳಿದಂತೆ ಅದು ಯಾವ ಜಮಾಕೂ ಇಲ್ಲದ್ದು. ದುಡ್ಡು ಕಾಸಿನ ಇಸಯ ತಕಂಡರೆ ಅವ್ನು ನಮಗಿಂತ ಪುರಂದರ! ಸುಬ್ರಾಯಿ ಒಳ್ಳೆ ಅನುಕೂಲವಾದ ಕುಳ-ಸ್ಥಿತಿವಂತ-ಅವನ್ಗಾರಾ ನನ್ನ ಮಗಳ ಕೊಟ್ಟರೆ ನಮ್ಮ ಮೊಗೀಗೆ ಒಂದು ದಾರಿ ತೋರಿಸಿದಂಗಾಯ್ತದೆ. ಆದರೆ ನಮ್ಮವ್ವ ಒಪ್ಪಿಕೋಬೇಕಲ್ಲ? ಒಂದು ಪಕ್ಕಸ ಪಾರತೀಯಾ ಎಂಗಾರು ಅಟಕಾಯಿಸಿ ಒಪ್ಪುಸಿ ಬುಟ್ಟೇನು. ನಮ್ಮವ್ವನ್ನ ಒಪ್ಪುಸೋದು ಸಾಧ್ಯವಿಲ್ಲದ ಮಾತು..."

ವಿಷಕಂಠಯ್ಯ ಹೀಗೆ ಯೋಚಿಸುತ್ತಿರುಂತೆ ಕಾಳಯ್ಯನೂ ಅದೇ ಮಾತನ್ನ ತನ್ನ ಹೆಂಡತಿಯೊಡನೆ ಹೇಳಿದ್ದ.

"ಇಸಕಂಟೂ ಒಂದು ಪಕ್ಕಸ ಒಪ್ಪಿದರೂ ಒಪ್ಪಿಕೋಬೌದು. ಅವ್ನು ಹಟ ತೊಟ್ಟರೆ ಪಾರತೀನೂ ಒಪ್ಪಿಸಬೌದು. ಆದ್ರೆ ನಮ್ಮವ್ವ ಅವಳಲ್ಲಾ, ಅವಳ ಮಾತ್ರ ಜಪ್ಪಯ್ಯ ಅಂದರೂ ಬಗ್ಗಿಸಕ್ಕಾಗಕ್ಕಿಲ್ಲ ಅವನ ಕೈಲಿ. ಅವಳು ಹಿಡಿದ್ದೇ ಹಟ... ನಟ್ರಾಜ್ನ ಕಂಡರೆ ತಬ್ಬಲಿ ಅಂತ ಅವನ ಮೊಗೀನಿಂದಲೂ ಬೋಪ್ರೇಮ. ಮಂಗಲೇಯ ನಟ್ರಾಜನಿಗೇ ತಂದುಕೊತ್ತಾಳೆ ಅವಳು. ಅವಳಿರೋವರೆಗೂ ಇನ್ಯಾರ ಬ್ಯಾಳೆಕಾಳೂ ಬೇಯೊಹಂಗಿಲ್ಲ."

ಮಾತು ಅಲ್ಲಿಗೆ ನಿಂತಿದ್ದಿತು. ನಾಗಜ್ಜಿ ಇರುವವರೆಗೂ ತನ್ನ ಇಚ್ಛೆಯನ್ನವಳು ನಡೆಯಗೊಡಳೆಂದು ನರಸಮ್ಮನ ಮನಸ್ಸಿನಲ್ಲಿ ಖಚಿತವಾಯಿತು. ಆದರೂ ಅವಳ ಅಂತರಾತ್ಮದಲ್ಲಿ ಆಸೆಯ ಕೆಂಡ ಕವರುತ್ತಲೇ ಇದ್ದಿತು.

ಮನೆಗೆ ಬಂದ ನೆಂಟರು ತೆರಳಿದ ತರುವಾಯ ನಾಗಜ್ಜಿ, ಪಾರ್ವತಮ್ಮ ತಮ್ಮ ಗಮನವೆಲ್ಲಾ ಪೂರ್ಣವಾಗಿ ಮಂಗಳೆಯ ಶುಶ್ರೂಷೆಯ ಕಡೆಗೆ ತಿರುಗಿಸಿದರು. ಮುಂದೆ ಮೂರು ತಿಂಗಳ ಕಾಲ ಕೊಬರಿ, ಬೆಲ್ಲ, ಚಿಗಳಿ ತಿನ್ನಿಸುವುದು, ಉದ್ದಿನಕಾಳು ಬೇಯಿಸಿಕೊಡುವುದು-ಮುಂತಾದ ಎಲ್ಲ ಆರೈಕೆ ಮಾಡುವುದರಲ್ಲಿ ನಿರತರಾದರು.

ಹೆಣ್ಣು ನೆರೆದ ಹದಿನಾರನೆ ದಿನ ಪುನಃ ಹಸೆಗೆ ಕೂರಿಸಿ ಆರತಿ ಎತ್ತುವುದು ವಾಡಿಕೆ. ಅದರಂತೆಯೇ ಮಂಗಳೆಯನ್ನು ಹದಿನಾರನೆಯ ದಿನ ಹಸೆಗೆ ಕೂರಿಸಲು ಮನೆಯಲ್ಲಿ ಸಿದ್ಧತೆಗಳು ನಡೆಯುತ್ತಿದ್ದವು. ಆದರೆ ಪಾರ್ವತಮ್ಮನಿಗೆ ಈಗೆರಡು ದಿನಗಳಿಂದಲೂ ಹುಷಾರು ತಪ್ಪಿತ್ತು. ಜ್ವರ ಒಂದೇ ಸಮನೆ ಕಾಯುತ್ತಿತ್ತು. ಆದ್ದರಿಂದ ಮಲಗಿದ ಜಾಗದಿಂದ ಮೇಲೇಳುವಂತಿರಲಿಲ್ಲ. ಇದರಿಂದ ನಾಗಜ್ಜಿಯದೇ ಎಲ್ಲೆಲ್ಲೂ ಓಡಾಟ. ಆದರೆ ಊರಿನ ಹೆಂಗಸರು ಮುದುಕಿಯೊಬ್ಬಳೇ ಕಷ್ಟಪಡುವಾಗ ಸುಮ್ಮನೆ ಕೈ ಕಟ್ಟಿ ನೋಡುತ್ತ ನಿಲ್ಲುವವರೇ? ಅವರೂ, ಆರತಕ್ಷತೆಯ ಕಾರ್ಯದಲ್ಲಿ ನೆರವಾದರು.

ಅದೇ ಸಂಜೆಗೆ ಮೈಸೂರಿನಿಂದ ಒಂದು ಪತ್ರ ಬಂದಿತು. ಅದನ್ನು ಯಶೋದಮ್ಮ ಬರೆದಿದ್ದಳು. ಅದರಲ್ಲಿ ತನ್ನ ಪತಿ ನಂಜುಂಡಸ್ವಾಮಿಗೆ ಪಾರ್ಶ್ವವಾಯು ಹೊಡೆದು ಸುಮಾರು ಇಪ್ಪತ್ತು ದಿನಗಳಾಯಿತೆಂದೂ, ಅವರನ್ನು 'ದೊಡ್ಡ ಆಸ್ಪತ್ರೆ'ಗೆ ಸೇರಿಸಿರುವುದಾಗಿಯೂ ಈ ಕಾರಣದಿಂದಲೇ ತಾವುಗಳು ಮಂಗಳೆ ನೆರೆದು ಇಷ್ಟು ದಿನಗಳಾದರೂ ಕಲ್ಲಹಳ್ಳಿಗೆ ಬರಲಾಗಲಿಲ್ಲವೆಂದೂ ಬರೆಯಲ್ಪಟ್ಟಿತ್ತು.

ಅಕಸ್ಮಾತ್ತಾಗಿ ನಂಜುಂಡಸ್ವಾಮಿಗೆ ಬಂದೊದಗಿದ ಈ ಅಪಘಾತಕ್ಕಾಗಿ ಮನೆಯವರೆಲ್ಲಾ ಮರುಗಿದರು. ಆದರೆ ನಾಗಜ್ಜಿ ಮಾತ್ರ "ಒಸೀ ಕುಡೀ ಬಾರದಾ?... ಆ ಪಾಟಿ ಹೀರಿದರೆ ಬುಟ್ಟಾತ ಮಂತೆ?... ಇಲ್ಲಿಗೆ ಬಂದಾಗಲೂ ಹಂಗೇ ಕನವ್ವ ಅವನು. ನೆಟ್ಟಗೆ ಚಿಲಕುಂದದ ಹತ್ತರ ಇರೊ ಹೆಂಡದ ಪಡಕಾನೇಗೆ ಓಡಿಬುಡ್ತಿದ್ದಾ. ಅನುಭೋಗಿಸಲೇಳು. ನಾನು ಎಸರಿಗೆ ಅಪ್ಪಾರ ಉಪ್ಪು ಸುರಿದು ಉಣ್ಣಾಕೆ ಕೂತುಕೊಂಡಾಗ 'ಅವ್ವೀ ಇದೇನಾ ಎಸರು ಈ ಪಾಟಿ ಉಪ್ಪಾಗಿದೆ?' ಅಂದರೆ ಯಾರವ್ವಾ ಕೇಳಾರು" ಎಂದು ಎಲ್ಲರೊಡನೆಯೂ ಒಪ್ಪಿಸುತ್ತಾ ಕಠಿಣವಾಗಿ ನುಡಿದಳು. ಆದರೆ ಅವಳು ಹೀಗೆ ಹೊರಗೆ ಕಠಿಣವಾಗಿ ಆಡುತ್ತಿದ್ದರೂ ಅವಳ ಹೃದಯ ದುಃಖದಿಂದ ಬಿರಿಯುತ್ತಿತ್ತೆಂದು ಸರ್ವರಿಗೂ ವೇದ್ಯವಾಗಿತ್ತು. ಒಳಗಿನ ದುಮ್ಮಾನವನ್ನು ಮುಚ್ಚುವುದಕ್ಕೆ ಅವಳು ಈ ರೀತಿ ಹೊರಗೆ ಕಾಠಿಣ್ಯದ ಕವಚ ತೊಟ್ಟಂತೆ ತೋರುತ್ತಿತ್ತು.

ಮೈಸೂರಿಗೆ ಹೋಗಿ ನಂಜುಂಡಸ್ವಾಮಿಯನ್ನು ನೋಡಿ ಬರಲು ನಾಗಜ್ಜಿಗೇನೋ ಬಹಳ ಆಸೆ. ಆದರೆ ಮನೆಯ ಈಗಿನ ಪರಿಸ್ಥಿತಿಯಲ್ಲಿ ಅವಳು ಕಲ್ಲಹಳ್ಳಿಯನ್ನು ಬಿಟ್ಟು ಕದಲುವಂತಿರಲಿಲ್ಲ. ಪಾರ್ವತಮ್ಮ ಜ್ವರ ಹಿಡಿದು ಒಂದುಕಡೆ ಮಲಗಿದ್ದಾಳೆ. ಇತ್ತಲಾಗಿ ಮಂಗಳೆ ಮೈನೆರೆದು ಕೂತಿದ್ದಾಳೆ. ನಾಗಜ್ಜಿಯೊಬ್ಬಳೆ ಅವರಿಬ್ಬರನ್ನೂ ಸುಧಾರಿಸಬೇಕಾಗಿದೆ. ಹೀಗಿರುವಾಗ ಮೈಸೂರಿಗೆ ಹೋಗಿ ಬರಲು ಬಿಡುವಾದರೂ ಎಲ್ಲಿ ದೊರೆಯುತ್ತದೆ ? ಸದ್ಯಕ್ಕೆ ವಿಷಕಂಠಯ್ಯನನ್ನು ಕಳುಹಿಸಿಕೊಟ್ಟು ಮುಂದೆ ಅನುವಾದಾಗ ತಾವೆಲ್ಲರೂ ಹೋಗಿ ಬರುವುದೆಂದು ನಿರ್ಧಾರ ಮಾಡಿದಳು ಮುದುಕಿ.

ಅದರಂತೆ ವಿಷಕಂಠಯ್ಯ ಮೂರು ದಿನಗಳ ಮಟ್ಟಿಗೆ ಮೈಸೂರಿಗೆ ಹೋಗಿ ಬಂದಿದ್ದ. ಮೈಸೂರಿನಲ್ಲಿರುವಾಗ್ಗೆ ಅವನಿಗೂ ನಂಜುಂಡಸ್ವಾಮಿಯ ತಂಗಿ ಆದಿಲಕ್ಷ್ಮಿಯ ಗಂಡ ಚೆನ್ನಸ್ವಾಮಿಗೂ ನಂಜುಂಡಸ್ವಾಮಿಯ ಕಾಯಿಲೆಯ ವಿಚಾರ ಲೋಕಾಭಿರಾಮವಾಗಿ ಮಾತುಕತೆ ನಡೆದಿತ್ತು.

"ಬಲದಾ ಪಾರ್ಸ್ವಕ್ಕೆಲ್ಲಾ ಅನಾಮತ್ತು ಲಕ್ಕುವಾ ಒಡೆದು ಬುಟ್ಟಿದೇ! ಬಲದಾ ಚೋರಿ ಕಯ್ಯಿ, ಕಾಲು ಜಪ್ಪಯ್ಯ ಅಂದರು ಅಲ್ಲಾಡಿಸಕ್ಕೆ ಆಕ್ಕಿಲ್ಲಾ!!" ಎಂದು ಅವನು ಪ್ರಶ್ನಿಸಿದಾಗ ಚೆನ್ನಸ್ವಾಮಿ ಹೇಳಿದ್ದ :

"ಈಗ ನೀವು ನೋಡ್ತಾ ಇದ್ದೀರಿ, ಇಪ್ಪತ್ತು ದಿನದ ಹಿಂದೆ ನೋಡಿದ್ದರೆ ಏನಂತಿದ್ದಿರೋ–ಬಾಯಿಯಲ್ಲಿ ಒಂದು ಮಾತೂ ಕೂಡ ಹೊರಡ್ತಾ ಇರಲಿಲ್ಲ. ದಾಕ್ತರ್‌ಗೋಳೂ ಹೆದರಿಕೊಂಡು ಬುಟ್ಟಿದ್ದರು" ಎಂದು ನಿಟ್ಟುಸಿರಿಟ್ಟುಕೊಂಡು ನಿಧಾನವಾಗಿ "ಏನೋ ಈಗಲೇ ಒಸಿ ವಾಸಿ ಅಂತ ಹೇಳಬಹುದು–ಮುಖ್ಯ ಅವರವರ ನಸೀಬು" ಎಂದಿದ್ದ.

ಅವನ ಪತ್ನಿ ಆದಿಲಕ್ಷ್ಮಿ ಮಧ್ಯದಲ್ಲಿಯೇ ರೇಗಿ ನುಡಿದಿದ್ದಳು. "ಹೌದೌದು. ಅವರ ನಸೀಬು ತಾನೆ!... ಅಲ್ಲ, ಹೋಗಾ ಬರಾ ನೀರು ಮಜ್ಜಿಗೇ ಹಂಗೆ ಕುಡೀತಾ ಇದ್ದರೆ ಇನ್ನೇನಾಗ್ತದೆ?"

ಈ ಮಾತೆಲ್ಲಾ ನಂಜುಂಡಸ್ವಾಮಿಯ ಮನೆಯಲ್ಲೇ ನಡೆದಿತ್ತು. ಆದಿಲಕ್ಷ್ಮಿಯ ಮಾತುಗಳು ಕಿವಿಗೆ ಬೀಳುತ್ತಲೂ ಯಶೋದಮ್ಮ ಕೆರಳಿದ್ದಳು :

"ಹೌದೇ ತಾಯಿ. ನಮ್ಮೆಜಮಾನರು ಕುಡೀತಾರೆ... ಅವರಿರೋ ಕೆಲಸದ ಹಣೆಬರಹವೇ ಹಾಗೆ. ಕುಡೀದೇ ಇದ್ದರೆ ಆಗೋದೇ ಇಲ್ಲವಂತೆ. ಈವೊತ್ತು ಅರಸೀಕೆರೆ, ನಾಳೆ ಚಾಮರಾಜನಗರ ಅಂತ ಸುತ್ತುತ್ತಾ ಇರ್ತಾರೆ. ತಿಂಗಳಿಗೆ ಹದಿನೈದು ದಿನ ನಿದ್ದೆ ಕೆಡಬೇಕು. ದೇಹ ಕಾದು ಕೆಂಡ ಆಗಿರ್ತದೆ. ಆ ರೈಲು ಪ್ರಯಾಣ ಮಾಡುವಾಗ ಕುಡೀದೇ ಹೋದರೆ ಆಲಸ್ಯದಿಂದ ಮೈ ಕೈ ಭಾರ ಆಗಿ ಮಲಗಿದಾಗ ಕಣ್ಣಿಗೆ ನಿದ್ದೆ ಅನ್ನೋದೇ ಹತ್ತೋದಿಲ್ಲ ಅಂತ ಅವರೇ ಹೇಳ್ತಾ ಇದ್ದರು. ಏನು ಮಾಡೋದು ಪಾಪ! ಈ ಕೆಲಸಾನಾದ್ರೂ ಬಿಟ್ಟು ಬಿಡ್ಲಿ ಅಂದರೆ ನಮ್ಮ ಸಂಸಾರದ ರಥ ಸಾಗೋದಾದ್ರು ಹೇಗೆ..."

ಸಂಕಟದಿಂದ ಯಶೋದಮ್ಮ ಹೀಗೆಲ್ಲ ನುಡಿಯುವಾಗ ವಿಷಕಂಠಯ್ಯನಿಗ ದುಃಖ ಒತ್ತರಿಸಿ ಬಂದಿತ್ತು. ಆ ವಿಷಯವನ್ನೆಲ್ಲಾ ಹಳ್ಳಿಗೆ ಬಂದು ತಾಯಿಯೊಡನೆ ಸವಿಸ್ತಾರವಾಗಿ ವಿಶದಪಡಿಸುವಾಗ, "ಆ ಪಟ್ಟಣದ ಇಚಾರ ನೋಡಿಬುಟ್ಟರೆ ನಮ್ಮ ಹಳ್ಳಿಯೇ ಏಟೋ ವಾಸಿ ಅಂದುಬುಡ್ತೀಯೆ ಕನವ್ವಾ ನೀನು. ನಾವು ಇಲ್ಲಿ ಅಂಬಲಿಯೋ ತುಂಬೆಸೊಪ್ಪೋ ತಿಂದುಕೊಂಡು ಯಾವೋನ ಹಂಗರಣೆಯೂ ಇಲ್ಲದೇಯ ಹಾಯಾಗಿ ಇದ್ದುಕಂಡಿದೀವಿ...

ಅಲ್ಲಿ ಆ ತಾಪತ್ರಯ ಬ್ಯಾಡ, ಬ್ಯಾಡ. ಎರಡೊತ್ತಿನ ಊಟ ಸಿಕ್ಕಬೇಕಾದರೆ ದಿನಾ ಎಲ್ಲ ಗೇಯಬೇಕು..." ಎಂದು ತಾನಿದ್ದ ಮೂರೇ ದಿನಗಳಲ್ಲಿ ಮೈಸೂರು ನಗರದ ಅಂತರಂಗ ಜೀವನವನ್ನೆಲ್ಲಾ ಹೊಕ್ಕು ನೋಡಿಬಿಟ್ಟವನಂತೆ ದರ್ಪದಿಂದ ಹೇಳಿದ.

೧೫

ಕೆಲವು ತಿಂಗಳು ಕಳೆದವು. ಪಾರ್ವತಮ್ಮ ಹಾಸಿಗೆ ಬಿಟ್ಟೆದ್ದಿದ್ದಳು. ಆರೋಗ್ಯ ಸುಧಾರಿಸಿತ್ತು. ವಿಷಕಂಠಯ್ಯನನ್ನು ಮನೆಯಲ್ಲಿಯೇ ಬಿಟ್ಟು ನಾಗಜ್ಜಿಯೂ, ಪಾರ್ವತಮ್ಮನೂ ಮಂಗಳೆಯೊಡಗೂಡಿ ಮೈಸೂರಿಗೆ ಪ್ರಯಾಣ ಹೊರಟರು.

ಬೆಳಗಿನ ಬಸ್ಸು ಹೆಚ್ಚೆಂದರೆ ಹನ್ನೊಂದು ಗಂಟೆಯೊಳಗೇ ಅವರನ್ನು ಸುಗಮವಾಗಿ ಮೈಸೂರಿನಲ್ಲಿ ತಂದು ಇಳಿಸಿತ್ತು.

ನಾಗಜ್ಜಿ ಮುಂದಾಲೋಚನೆಯಿಂದ ಮಂಗಳೆಯ ಕಯ್ಯಲ್ಲಿ ನಟರಾಜನಿಗೆ ಕಾಗದ ಬರೆಸಿ ಹಾಕಿದ್ದುದರಿಂದ ಅನಂತನೂ ನಟರಾಜನೂ ಬಸ್ಸು ನಿಲ್ಲುವ ಸ್ಥಳದಲ್ಲಿಯೇ ಬಂದು ಕಾದಿದ್ದರು.

ಬಸ್ಸಿನಿಂದ ಇಳಿಯುತ್ತಿರುವಂತೆಯೇ ಅನಂತನನ್ನು ಕಂಡು ನಾಗಜ್ಜಿ, "ಅಂತೂ ಈಗ ನಿಮ್ಮ ಅಯ್ಯ ಹೆಂಗವನೆ ಮೊಗಾ? ಕೈಕಾಲು ಇಡಕಂಡಿದ್ದು ಬುಟ್ಟಿದ್ದಾತಾ?... ಓಸಿ ತಿರುಗಾಡಾನಾ ಈಗ?" ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಅನಂತನ ಮೇಲೆ ಕರೆದಳು.

"ಹೂಕಣಜ್ಜಿ. ಈಗ ಸ್ವಲ್ಪ ಉತ್ತಮ. ದೊಡ್ಡ ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದಿದೀವಿ. ಮನೆಯೊಳಗೇ ಹಂಗೆ ಕೋಲು ಊರಿಕೊಂಡು ಸ್ವಲ್ಪ ಸ್ವಲ್ಪ ತಿರುಗಾಡ್ತಾರೆ."

"ಸದ್ಯಕ್ಕೆ! ಓಗಲಿ ಬುಡು. ಇನ್ನು ಅಂಗಾರೆ ಬಯ ಇಲ್ಲ" ಎಂದು ನಾಗಜ್ಜಿ ಮುಕ್ತಾಯ ಸೂಚಕವಾಗಿ ನಿಟ್ಟುಸಿರ್ಗರೆದರೂ ಆ ಮಾತನ್ನವಳು ಅಲ್ಲಿಗೇ ಮುಗಿಸಿಬಿಡಲಿಲ್ಲ.

ದಾರಿಯುದ್ದಕ್ಕೂ ಮತ್ತೆ ಮತ್ತೆ ಅದೇ ಮಾತನ್ನಾಡುತ್ತಿದ್ದಳು...

"ಈಗ ಯೇನು ಉಂಡಾನು?... ಪತ್ಯ ಯೇನಾರ ಹೇಳಿದ್ದಾರಾ?.... ತಾನಾಗೀನಾ ಮಾಡಾನಾ..."

ಪಾರ್ವತಮ್ಮನೂ ಅನಂತನಿಗೂ ಅದೇ ರೀತಿಯ ಪ್ರಶ್ನೆಗಳನ್ನು ಹಾಕುತ್ತಿದ್ದಳು. ಅನಂತನೂ ಆ ಪ್ರಶ್ನೆಗಳಿಗೆಲ್ಲ ಬೇಸರಪಟ್ಟುಕೊಳ್ಳದೇ ಉತ್ತರ ಕೊಡುತ್ತ ಸಾಗಿದ.

ಪಾರ್ವತಮ್ಮ "ಈಗ ಔಸದ ಯೇನು ತಗೊಂಡಾನು?" ಎಂದು ಕೇಳಿದಳು.

"ಔಷಧವೂ ಇಲ್ಲ, ಕಷಾಯವೂ ಇಲ್ಲ, ಈಗ... ಆಸ್ಪತ್ರೆ ಬಿಟ್ಟಾಗಿನಿಂದಲೂ ಮೂರು ದಿನಕ್ಕೊಂದಾವರ್ತಿ ಒಂದೊಂದು ಪಾರಿವಾಳ ಬೇಯಿಸಿ ಹಾಕ್ತಾಳೆ ಅಮ್ಮ. ಅಷ್ಟೇ ಹೊರತು ಬೇರೆ ಯಾವ ಔಷಧಾನೂ ಕೊಡ್ತಾ ಇಲ್ಲ ಅಪ್ಪನಿಗೆ" ತನಗೆ ತಿಳಿದಿದ್ದುದನ್ನು ಅನಂತ ಹೇಳಿದ.

"ಓಟೇಯಾ?... ನಮ್ಮ ಹಳ್ಳೀಲೂ ಅದೇ ಮದ್ದು ನಾವು ಕಲಿತಿರೋದು. ಯಾರಿಗಾರ ಲಕ್ಕುವಾ ಒಡೀತೂ ಅಂತ ಇಟ್ಟುಕೋ. ತಕ್ಷಣ ಪಾರಿವಾಳ ಎಲ್ಲಿಂದಲಾರಾ ತಂದು ಬೇಯಿಸಿಕೊಟ್ಟು ಬುಡ್ತೀವಿ. ಅದರ ಜಪಾತಿ ಇನ್ನೊಂದಿಲ್ಲ ನೋಡು ಮೊಗ. ಹಿಂದಕ್ಕೆ ನಮ್ಮ ಚಿಕ್ಕಯ್ಯನಿಗೆ ಇಂಗೇ ಲಕ್ಕುವ ಒಡೆದುಬಿಡ್ತು..." ಎಂದು ತನ್ನ ಅನುಭವದ ಕತೆಯನ್ನೇ ಹೇಳಲು ಆರಂಭಿಸಿದಳು ನಾಗಜ್ಜಿ.

ನಟರಾಜನಿಗೆ ಇದೊಂದು ಮಾತಿನ ಕಡೆಗೂ ಲಕ್ಷ್ಯವಿರಲಿಲ್ಲ. ಅವನ ಗಮನವೆಲ್ಲ ಪೂರ್ಣವಾಗಿ ಮಂಗಳೆಯಲ್ಲಿ ನೆಲೆಗೊಂಡಿತ್ತು. ಮಂಗಳೆಯ ವರ್ತನೆ ಅವನಿಗೆ ಅರ್ಥವಾಗದೆ ಆಶ್ಚರ್ಯವನ್ನು ಮಾಡಿತ್ತು. ಬಸ್ಸಿನಿಂದಿಳಿದು ಬಂದವಳು ಅವನನ್ನು ಕದ್ದೂಕಾಣದ ಹಾಗೆ ಒಂದು ಬಾರಿ ನೋಡಿದಳೇ ವಿನಾ ಅವನೊಡನೆ ಒಂದು ಮಾತನ್ನಾದರೂ ಆಡಲಿಲ್ಲ. ಏನೋ ಬಿಂಕ, ಏನೊ ಬಿನ್ನಾಣ, ಏನೊ ನಾಚಿಕೆ ಅವಳ ಬಾಯಿಯನ್ನು ಬಿಗಿದು ಕಟ್ಟಿದಂತಿತ್ತು. ಅವಳ ಈ ನಾಚಿಕೆ ಹೆಂಗಸರಿಗೆ ಸಹಜವಾಗಿ ತೋರಿದರೂ ನಟರಾಜನಿಗೆ ಮಾತ್ರ ವಿಪರೀತವಾಗಿ ಕಂಡಿತು.

ಬಸ್ಸಿನಿಂದಿಳಿದಾಗಲೇನೊ "ಹೋಗಲಿ, ನನ್ನನ್ನು ನೋಡಿ ಮೂರು ನಾಲ್ಕು ತಿಂಗಳಾಯಿತು, ಬೇಸಿಗೆಯ ರಜಕ್ಕೆ ಹಳ್ಳಿಗೆ ಹೋದಾಗ ನೋಡಿದ್ದುದು. ಬಹಳ ದಿನಗಳಾದುದರಿಂದ ನಾಚಿಕೆಪಡುತ್ತಿರಬಹುದು. ಇನ್ನೇನು ಮಾತಾಡಿಸುತ್ತಾಳೆ" ಎಂದುಕೊಂಡಿದ್ದ ನಟರಾಜನಿಗೆ ದಾರಿಯಲ್ಲಿ ನಡೆಯುವಾಗ ಮತ್ತೂ ವಿಚಿತ್ರವೆನಿಸಿತು. ಮಂಗಳೆ ಕದ್ದು ನೋಡಿಕೊಳ್ಳುವಳೇ ಹೊರತು ಅವನನ್ನು ಮಾತಾಡಿಸುವ ಸಾಹಸ ಮಾಡಲಿಲ್ಲ.

ಮನೆಗೆ ಬಂದ ನೆಂಟರನ್ನು ಯಶೋದಮ್ಮ ಅತಿಶಯವಾದ ಆದರದಿಂದ ಬರಮಾಡಿಕೊಂಡಳು. ನಂಜುಂಡಸ್ವಾಮಿ ಎದ್ದು ಕೋಲು ಊರಿಕೊಂಡು ತುದಿ ಬಾಗಿಲಿನವರೆಗೂ ನಡೆದು ಬಂದಿದ್ದ. ಆತನನ್ನು ನೋಡಿ ನಾಗಜ್ಜಿಗೂ ಪಾರ್ವತಮ್ಮನಿಗೂ ಸಂತೋಷವಾಯಿತು. ಕಾತರಗೊಂಡಿದ್ದ ಅವರಿಬ್ಬರ ಹೃದಯಗಳೂ ನೆಮ್ಮದಿ ತಾಳಿದವು.

ಆದರೂ ಆ ಸ್ಥಿತಿಯಲ್ಲಿ ನಂಜುಂಡಸ್ವಾಮಿ ಹಾಸಿಗೆ ಬಿಟ್ಟೆದ್ದು ಬಾಗಿಲಿನವರೆಗೂ ಬಂದುದು ನಾಗಜ್ಜಿಗೆ ಸರಿದೋರಲಿಲ್ಲ.

"ಅದ್ಯಾಕ ಮೊಗ ಸುಮ್ಮಕೆ ಮಲಕ್ಕಂಡಿರಬಾರದಾಗಿತ್ತಾ ?... ನಾವೇ ಬರ್ತಿದ್ದೋ– ಒಳೀಕೆ..." ಎಂದಳು.

"ಇಲ್ಲ ಕಣಜ್ಜಿ, ಈಗ ಎಷ್ಟೋ ಗುಣ ಆಗದೆ. ಆಸ್ಪತ್ರೇಲಿ ನೀವು ನನ್ನ ನೋಡಿ ಬಿಟ್ಟಿದ್ರೆ ಏನು ಹೇಳ್ತಿದ್ದಿರೋ ?..."

"ನಾವೆಲ್ಲ ಅವರ ಆಸೇನೆ ಬುಟ್ಟುಬುಟ್ಟಿದ್ದೊ..." ಯಶೋದಮ್ಮನೂ ಮಾತು ಸೇರಿಸಿದಳು.

ನಾಗಜ್ಜಿ ನಿಟ್ಟುಸಿರುಬಿಡುತ್ತಾ, ಮೇಲೆ ಕೈಮಾಡಿ ತೋರುತ್ತಾ, "ಎಲ್ಲಾ ಆ ಸ್ವಾಮಿ ದಯೆ... ಮುಕ್ಕಗಳು ನಾವು... ನಮ್ಮದೇನವ್ವ ನಡೀತದೆ...? ಯೇನೊ ಇರೊವರೆಗೆ ಇಂಗೆ ಆಡ್ತಾ ಇರೊದು–ಮಕ್ಕಳು, ಮರಿ, ಗಂಡ, ಹೆಂಡತೀ ಅಂತ. ನಮ್ಮ ನಮ್ಮ ಕತೆ ಮುಗಿದಮ್ಯಾಗೆ ಮಕ್ಕಳೂ ಇಲ್ಲ, ಮರಿಯೂ ಇಲ್ಲ, ಗಂಡನೂ ಇಲ್ಲ, ಹೆಂಡತಿಯೂ ಇಲ್ಲ... ಜೊತೇಲಿ ಯಾರೂ ಬರೋದಿಲ್ಲ" ಎಂದು ದೊಡ್ಡದೊಂದು ತತ್ವವನ್ನೇ ಹೇಳಿಬಿಟ್ಟಳು.

ಊಟಕ್ಕೆ ಮುಂಚೆ ಬಂದವರೆಲ್ಲರೂ ಸ್ನಾನ ಮಾಡಿದರು. ತಮ್ಮ ಸ್ನಾನ ಮುಗಿದ ಬಳಿಕ ಅವರಿಗಾಗೇ ಪ್ರತ್ಯೇಕವಾಗಿ ಉರಿ ಹಾಕಿ ನೀರು ಕಾಯಿಸಿ ಇಟ್ಟಿದ್ದಳು ಯಶೋದಮ್ಮ.

ಸ್ನಾನ ಮಾಡಿ ಎಲ್ಲರಂತೆ ಹಳೆಯ ಸಾಧಾರಣ ಸೀರೆಯೊಂದನ್ನು ಸುತ್ತಿಕೊಂಡಳು ಮಂಗಳೆ. ಅದನ್ನು ನೋಡಿ ಯಶೋದಮ್ಮ ತನಗೆ ತಾನೇ "ನಾನೂ ಸರಿ" ಎಂದುಕೊಂಡು ಗುಡುಗುಡನೆ ಹೋಗಿ, ಪೆಟ್ಟಿಗೆಯಿಂದ ರೇಷ್ಮೆಯ ಹೊಸ ಸೀರೆಯೊಂದನ್ನು ತೆಗೆದುಕೊಂಡು, ಅದರ ಅಂಚಿಗೆ ಅರಶಿನ ಕುಂಕುಮ ಹಚ್ಚಿ, ಅದನ್ನು ದೇವನ ಪಟದ ಮೇಲೆ ಕೆಲವು ಗಳಿಗೆ ಇಟ್ಟು ತಂದು, "ತಕ್ಕೊಳ್ಳೆ ಮಂಗಳೆ. ಉಟ್ಟುಕೋ... ನೀನು ನೆರದಾಗಂತೂ ನಾವೊಬ್ಬರೂ ಬರಕ್ಕಾಗಲಿಲ್ಲ" ಎಂದಳು.

"ಅದಕ್ಕೇನು ಬೋ ಸೂರು ಹೋಗಿತ್ತವ್ವಾ?... ಆಮ್ಯಾಕೆ ಉಡಿಸಿದರೆ ಒಲ್ಲಿ ಅಂತಿತ್ತಾ !... ನಿಂತ ನಿಲೀನಲ್ಲೇ ಯೇನ ಆ ಪಾಟಿ ಆತುರ ಬಂದಿದ್ದದ್ದು...!" ಮಗಳ ಹೊಸ ಸೀರೆಯನ್ನು ನೋಡಿ ಸಂತೋಷವಾದರೂ ಕೇಳಿದಳು ಪಾರ್ವತಮ್ಮ.

"ಆಮೇಲೇನು! ಈಮೇಲೇನು! ಈವೊತ್ತು ಹೆಂಗಿದ್ದರೂ ಗುರುವಾರ, ಒಳ್ಳೆ ದಿನ ಉಟ್ಟುಕೊಳ್ಳಲೇಳು."

ಹೊಸ ಸೀರೆ ಉಟ್ಟು ದೇವರ ಮನೆಗೆ ಹೋಗಿ ಅಡ್ಡ ಬಿದ್ದು ಬಂದು ಹಿರಿಯರಿಗೆಲ್ಲಾ ನಮಸ್ಕಾರ ಮಾಡಿದಳು ಮಂಗಳೆ.

"ಮಕ್ಕಳ ತಾಯಾಗಿ ಚೆನ್ನಾಗಿ ಬದುಕವ್ವಾ" ಎಂದು ಕಣ್ಣೀರು ತುಂಬಿಕೊಂಡು ನಂಜುಂಡಸ್ವಾಮಿ ಹರಸಿದ.

ಆ ದಿನ ಊಟ ಮಾಡುವಾಗ ಮಂಗಳೆಯನ್ನು ನಟರಾಜನ ಪಕ್ಕದಲ್ಲೇ ಹಟಮಾಡಿ ಕೂರಿಸಿದಳು ನಾಗಜ್ಜಿ. ಆಗ ಮಂಗಳೆ ಅನುಭವಿಸಿದ ಹಿಂಸೆ ಅಷ್ಟಿಷ್ಟಲ್ಲ. ಕತ್ತು ಬಾಗಿಸಿ ಕುಳಿತವಳು ಊಟ ಮುಗಿಯುವವರೆಗೂ ಹಾಗೇ ಮೌನವಾಗಿ ಕುಳಿತಿದ್ದಳು. ಉಳಿದವರೆಲ್ಲ

ತಮ್ಮ ತಮ್ಮ ಮಾತುಗಳಲ್ಲೇ ಮೈ ಮರೆತಿದ್ದಾರೆಂದು ಖಚಿತವಾದಾಗ ಮಾತ್ರ ಒಂದೆರಡು ವೇಳೆ ಕತ್ತು ಬಾಗಿದಂತೆಯೇ ನಟರಾಜನ ಕಡೆ ಕದ್ದು ನೋಡಿದಳು. ಹಾಗೆ ನೋಡಿದಾಗ ಅನಂತನ ದೃಷ್ಟಿಯೂ ಒಮ್ಮೆ ಅವಳ ದೃಷ್ಟಿಯನ್ನು ಕೂಡಿತು. ಆಗ ಅವಳು ಕೆಂಜಿಗದ ಹೂವಿನಂತೆ ಕೆಂಪಾದಳು.

ಆ ಸಮಯದಲ್ಲಿ ಏಕೋ ಈ ಕಡೆ ನೋಡಿದ ನಾಗಜ್ಜಿ ಎಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿದಳು. ಒಂದು ಹಿಡಿಯಾಗಿ ಕುಳಿತ ಮಂಗಳೆಯನ್ನು ನೋಡನೋಡಿದಂತೆಲ್ಲಾ ಅವಳಿಗೆ ನಗುವುಕ್ಕಿ ಬಂದಿತು.

"ಈಟು ಬ್ಯಾಗ ಮದ್ವೆ ಎಣ್ಣಾಗಿ ಕುಂತುಕೊಂಬುಟ್ಟರೆ ಹೆಂಗೆ ಮಂಗಳೆ?... ಇನ್ನೂ ಓಟು ಕಾಲ ಕಳೀಲಿ... ನಟ್ರಾಜಾನೂ ಬಾರಿ ಬಾರಿ ಪರೀಕ್ಷೆ ಮಾಡಿ ಕಳ್ಲಿ..." ತುಂಟತನದಿಂದ ರಾಗವಾಗಿ ಒತ್ತಿ ಒತ್ತಿ ನುಡಿದಳು ಮುದುಕಿ.

ಮಂಗಳೆ ನಾಗಜ್ಜಿಯನ್ನೇ ತಿಂದುಬಿಡುವಂತೆ ದುರದುರನೆ ನೋಡಿದಳು.

ಎಲ್ಲರೂ ಕಿಲಕಿಲನೆ ನಕ್ಕರು.

ತಾನೂ ನಾಚಿ ನಾಚಿ ನಗುತ್ತ ಮಂಗಳೆಯತ್ತ ದೃಷ್ಟಿ ಬೀರಿದ ನಟರಾಜ.

ಎಡಗಾಲನ್ನೆತ್ತಿ ಮಡಿಸಿ, ಅದರ ಮರೆಯಲ್ಲಿ ಕತ್ತು ಬಾಗಿಸಿ ಮಂಡಿಸಿದ್ದಳು ಮಂಗಳೆ– ಮದುವಣಗಿತ್ತಿಯ ಹಾಗೆ!

ಅಜ್ಜಿಯ ಮಾತು ಯಾವುದೋ ಸಂಬಂಧವನ್ನು ಕಲ್ಪಿಸಿ ಅವನ ಗಮನವನ್ನು ಅತ್ತ ಸೆಳೆದಿದ್ದಿತ್ತು.

ನಾಲ್ಕೆ ತಿಂಗಳಲ್ಲಿ ಮಂಗಳೆ ಗುರುತು ಸಿಗದಷ್ಟು ಬದಲಿಸಿಬಿಟ್ಟಿದ್ದಳು.

"ಎಷ್ಟು ಬೇಗ ದೊಡ್ಡವಳಾಗಿ ಬೆಳೆದುಬಿಟ್ಟಿದ್ದಾಳೆ!" ತನ್ನ ಮನಸ್ಸಿನಲ್ಲಿಯೇ ಅಂದುಕೊಂಡ ನಟರಾಜ.

ವಾಸ್ತವವಾಗಿ ಅಷ್ಟು ದಷ್ಟ ಪುಷ್ಟವಾಗಿ ಬೆಳೆದಿದ್ದಳು ಮಂಗಳೆ. ಹನ್ನೆರಡು ಹದಿಮೂರು ವಯಸ್ಸಿನ ಹುಡುಗಿಯರಲ್ಲಿ ಸಾಧಾರಣವಾಗಿ ಕಂಡುಬಾರದ ಒಂದು ಪರಿಪೂರ್ಣತೆ ಅವಳ ಅಂಗ ಅಂಗದಲ್ಲಿಯೂ ನಲಿಯುತ್ತಿದ್ದಿತು.

ಅದನ್ನು ಗಮನಿಸಿದ ನಟರಾಜನ ಹೃದಯದಲ್ಲಿ ಇಷ್ಟು ದಿನವೂ ಅಲ್ಲಿರದಿದ್ದ ಹೊಸ ಭಾವವೊಂದು ಮೂಡಿತ್ತು. ಮಂಗಳೆಯನ್ನು ಇಷ್ಟು ಕಾಲವೂ ನೋಡದಿದ್ದ ರೀತಿಯಲ್ಲಿ ನೋಡುವ ಆಸೆಯನ್ನು ಬಿತ್ತಿತ್ತು ಈ ಭಾವ !

ಈ ಹೊಸ ಅನುಭವದಿಂದ ಅತ್ಯಂತ ನಾಚಿಕೆಯಾಯಿತು ನಟರಾಜನಿಗೆ.

ಈ ಭಾವ ಈ ನಾಚಿಕೆ ಅಂದಿನಿಂದ ಅವನ ಜೊತೆಗೇ ಇದ್ದು ಮಂಗಳೆಯನ್ನು ಕಂಡಾಗಲೆಲ್ಲಾ ವಿಚಿತ್ರ ರೀತಿಯಲ್ಲಿ ಅವನ ಬಾಯಿಯನ್ನು ಬಿಗಿಯುತ್ತಿದ್ದವು.

ಹೀಗೆ ಎರಡು ದಿನ ಕಳೆಯಿತು.

ಮೂರನೆಯ ಮಧ್ಯಾಹ್ನ. ಊಟವಾದ ಬಳಿಕ ನಾಗಜ್ಜಿಗೆ ಯಶೋದಮ್ಮ ತನ್ನ ಮುಂದೆ ತಂದಿಟ್ಟ ಪ್ರಸಿದ್ಧವಾದ ಮೈಸೂರೆಲೆ ಮೆಲ್ಲಲು ಇಚ್ಛೆಯಾಯಿತು. ಆದರೆ ಇತ್ತೀಚೆಗೆ ಅವಳ ಹಲ್ಲುಗಳೆಲ್ಲಾ ಉದುರಿಹೋಗಿದ್ದವು.

"ನಿಮ್ಮ ತಾವು ಎಲೆ ಕುಟ್ಟಿಕಳೊ ಕುಟ್ಟಾಣಿ ಇಲ್ಲವವ್ವಾ?" ಎಂದು ಯಶೋದಮ್ಮನನ್ನು ಕೇಳಿದಳು.

"ಕುಟ್ಟಾಣಿ ಇಲ್ಲದೇ ಏನು? ಇದೆ. ನಮ್ಮ ಮಾವಾರಿಗೆ ಅದರಲ್ಲಿ ತಾನೇ ಮತ್ತೆ ನಿತ್ಯ ವೀಳ್ಯ ಕುಟ್ಟಿಕೊಡ್ತಾ ಇದ್ದದ್ದು ನಾವು. ಅವರಿಗೂ ನಿಮ್ಮಂಗೇ ಹಲ್ಲೆಲ್ಲಿತ್ತು?" ಹಾಗೆಂದು ನುಡಿದ ಯಶೋದಮ್ಮ ಪಕ್ಕದಲ್ಲೇ ಕುಳಿತ ಮಂಗಳೆಗೆ "ಇಲ್ನೋಡವ್ವ, ಆ ಮುಂದಿನ ಕೋಣೆಗೆ ಹೋಗಿ ಮೇಜಿನ ಕೆಳಗಡೆ ಒಂದು ಕಲ್ಲಿನದು ಕುಟ್ಟಾಣಿ ಇದೆ – ಅದನ್ನೆತ್ತಿಕೊಂಡು ಬರ್ತೀಯಾ?" ಎಂದು ಬೆನ್ನು ಸವರಿದಳು.

"ಆಗಲಿ" ಎಂದು ಸಮ್ಮತಿ ಸೂಚಿಸಿದ ಮಂಗಳೆ ಎದ್ದು ಹೋಗಿ ಮುಂದಿನ ಕೋಣೆಯ ಬಾಗಿಲನ್ನು ತೆರೆದಳು.

ಅಂದು ಭಾನುವಾರವಾದುದರಿಂದ ನಟರಾಜ, ಅನಂತ ಇಬ್ಬರೂ ಕೋಣೆಯೊಳಗೇ ಇದ್ದರು. ಅನಂತ ಸೀಸದ ಕಡ್ಡಿಯಿಂದ ಕಾಗದದ ಮೇಲೆ ಆನೆ, ಕುದುರೆ, ಬೆಕ್ಕು ಇನ್ನೂ ಏನೇನೋ ಚಿತ್ರಗಳನ್ನು ಸಣ್ಣ ಸಣ್ಣದಾಗಿ ಬರೆಯುತ್ತಿದ್ದು ಹಾಗೆಯೇ ಒಂದು ಕಡೆಗೆ ನಿದ್ದೆ ಹೋಗಿದ್ದ. ನಟರಾಜ ಇನ್ನೊಂದು ಪಕ್ಕಕ್ಕೆ ಕುಳಿತು ಎಂ.ಎಸ್. ಪುಟ್ಟಣ್ಣನವರ "ಮುಸುಕು ತೆಗೆಯೆ ಮಾಯಾಂಗನೆ"ಯನ್ನು ಓದುವುದರಲ್ಲಿ ಮಗ್ನನಾಗಿದ್ದ. ಅವನ ದೃಷ್ಟಿ ಸಂಪೂರ್ಣವಾಗಿ ಆ ಹೊತ್ತಗೆಯ ಪುಟಗಳಲ್ಲೇ ನಾಟಿಕೊಂಡಂತಿತ್ತು. ಬೆಳಿಗ್ಗೆ ಬಾಚಿದ ಕ್ರಾಪು ಎಲ್ಲ ಕೆದರಿಹೋಗಿ ಹಣೆಯ ಮೇಲೆ ಸುರುಳಿ ಸುರುಳಿಯಾಗಿತ್ತು.

ನಟರಾಜನನ್ನೇ ನಸು ನಾಚಿಕೆಯ ಓರೆನೋಟದಿಂದ ನೋಡುತ್ತಾ ಹಳದಿ ಧರ್ಮಾವರದ ಸೀರೆಯ ನಿರಿಗಳನ್ನು ಚಿಮ್ಮುತ್ತಾ ಮೇಜಿನ ಕಡೆಗೆ ಮುಂಬರಿದಳು ಮಂಗಳೆ.

ನಡಿಗೆಯ ಸದ್ದು ಕೇಳಿದ ನಟರಾಜ ತಲೆಯೆತ್ತಿ ನೋಡಿದ.

ಮಂಗಳೆ !... ಹತ್ತಿರದಲ್ಲೇ ನಡೆದುಹೋಗುತ್ತಿದ್ದಳು.

ಇಂದು ಅವಳನ್ನು ಮಾತನಾಡಿಸಿಯೇ ತೀರುವುದೆಂದು ನಿರ್ಧರಿಸಿದ ನಟರಾಜ.

ಆದರೆ ಅವಳು ತನ್ನ ಮಾತಿಗೆ ಉತ್ತರವೀಯದೇ ಮೌನ ತಾಳಿದರೊ? ಎಂಬ ಸಂಶಯವೂ ಪ್ರಬಲವಾಗಿ ಕಾಡಿತು.

ಆದರೂ ಪ್ರಯತ್ನ ಮಾಡಿಬಿಡುವುದೆಂದೇ ಮನಸ್ಸು ಮಾಡಿದ. ಏನೆಂದು ಆರಂಭ ಮಾಡುವುದು?... "ಇಷ್ಟು ದಿನವೂ ಯಾಕೆ ಮಾತಾಡಿಸುತ್ತಿರಲಿಲ್ಲ?" ಎಂದು ಕೇಳುವುದೆ? – ಅದಕ್ಕೆ ಪ್ರತಿಯಾಗಿ ಅವಳು "ನೀನು ಮಾತಾಡಿಸುತ್ತಿರಲಿಲ್ಲವಲ್ಲಾ!" ಎಂದುಬಿಟ್ಟರೆ... ಅಥವಾ "ಈ ದಿನ ಬಹಳ ಚಳಿ" ಎನ್ನುವುದೆ?– "ಹೌದು" ಎಂದು ಒಂದೇ ಮಾತಿನಲ್ಲಿ ಒಪ್ಪಿ ಅವಳು ನಡೆದು ಬಿಟ್ಟರೆ?...

ಇಲ್ಲಿನವರೆಗೆ ಒಂದೆರಡೇ ಮಾತಿನಲ್ಲಿ ಉತ್ತರವಿತ್ತಿದ್ದಳು ಮಂಗಳೆ. ಇಂದೂ ಅದೇ ರೀತಿಯಾದರೆ?...

ನಟರಾಜ ಹೀಗೆ ಯೋಚಿಸುತ್ತಿರುವಾಗ ಮಂಗಳೆಯಾಗಲೆ ಮೆಲುಮೆಲನೆ ಮೇಜಿನ ಬಳಿ ಸಾರಿ ಕುಟ್ಟಾಣಿಯನ್ನು ತೆಗೆದುಕೊಂಡು ಹಿಂದಿರುಗುತ್ತಿದ್ದಳು.

ಕುಟ್ಟಾಣಿಯನ್ನು ನೋಡಿದ ನಟರಾಜನಿಗೆ ಧೈರ್ಯ ಬಂದಿತು. ಅದರ ವಿಷಯವಾಗೇ ಕೇಳಿಬಿಡುವುದೆಂಬ ತೀರ್ಮಾನ ಮಾಡಿದ. ಆದರೂ ಸ್ವಲ್ಪ ಸಂಕೋಚದಿಂದಲೇ ಕೇಳಿದ.

"ಕುಟ್ಟಾಣೀನಾ ಎಲ್ಲಿಗೆ ತೆಗೆದುಕೊಂಡು ಹೋಗ್ತಾ ಇದೀಯ ಮಂಗಲಿ?"... ಹಠತ್ತಾನೆ ಬಂದ ಪ್ರಶ್ನೆಗೆ ಮಂಗಳೆಯ ಕಿವಿ ನಾಚಿ ಕೆಂಪಾಯಿತು. ನಾಚುತ್ತ ನಾಚುತ್ತಲೇ ಉತ್ತರವಿತ್ತಳು.

"ಅನಂತೂ ತಾಯಿ ತಗೊಂಡು ಬರಹೇಳಿದರು. ಅಜ್ಜಿಗೆ ಎಲೆ ಅಡಿಕೆ ಕುಟ್ಟಿಕೊಡೋಕೆ..."

"ಓ !" ಎಂದು ನಟರಾಜ ಮುಂದೇನು ಹೇಳಲೂ ತೋಚದೆ ಸುಮ್ಮನಾದ.

ನಟರಾಜ ಮುಂದೇನಾದರೂ ಹೇಳುವನೆಂದು ನಿರೀಕ್ಷಿಸಿದ ಮಂಗಳೆ, ಅವನು ಸುಮ್ಮನಾಗಲು ತಾನೂ ಮೌನವಾಗಿ ಮುಂದೆ ಮುಂದೆ ಅಡಿಯಿಟ್ಟಳು.

ಮುಂದೆ ಆಡಲು ಮಾತುಗಳಿಲ್ಲದೆ, ಹೊರಟುಹೋಗುತ್ತಿದ್ದ ಮಂಗಳೆಯನ್ನೇ ನಿಟ್ಟಿಸುತ್ತಿದ್ದಂತೆ ನಟರಾಜನ ದೃಷ್ಟಿ ಅವಳ ಧರ್ಮಾವರದ ಸೀರೆಯಿಂದ ಆಕರ್ಷಿಸಲ್ಪಟ್ಟಿತು.

ಮುಳುಗುತ್ತಿದ್ದವನಿಗೆ ಅಕಸ್ಮಾತ್ತಾಗಿ ಬೆಂಡು ದೊರೆತಂತಾಯಿತು.

"ಓ! ಇನ್ನೂ ಒಂದು ಹೊಸ ಸೀರೆ!... ಇದು ಯಾವಾಗ ಬಂತು ಮಂಗಲೆ?" ಎಂದು ಕೇಳಿದ.

ಈ ಸೀರೆಯ ವಿಚಾರವೂ ಅವನಿಗೆ ತಿಳಿದಿತ್ತು. ನರಸಮ್ಮ ಅದನ್ನು ತಂದು ಉಡಿಸಿದ ವಿಷಯವನ್ನು ಹಿಂದಿನ ದಿನ ಯಶೋದಮ್ಮನಿಗೆ ವಿವರವಾಗಿ ಪಾರ್ವತಮ್ಮ ಹೇಳುತ್ತಿದ್ದುದು ಇವನ ಕಿವಿಗೂ ಬಿದ್ದಿತ್ತು.

ಆದರೂ ಸುಮ್ಮನೆ ಕೇಳಿದ.

ಕುಟ್ಟಾಣಿಯನ್ನು ಹೊತ್ತೇ ಒಂದು ಬಾರಿ ಓರೆಯಾಗಿ ತಿರುಗಿ ಮಂಗಳೆ ಉಸುರಿದಳು :

"ಇದು ಹೊಸದೇನಲ್ಲ–ಹಳೇದೇ. ಆಗಲೇ ನಾಲ್ಕು ತಿಂಗಳಾಯಿತು."

"ಅಯ್ಯಾ ತಂದದ್ದಾ?"

"ಅಲ್ಲ. ಕೊತ್ತೇಗಾಲದ ದೊಡ್ಡವ್ವ ಉಡಿಸಿದ್ದು."

"ಸೀರೆ ತುಂಬಾ ಚೆನ್ನಾಗಿದೆ."

"ಹೂ...." ಎಂದು ಹೂಗುಟ್ಟಿದಳು ಮಂಗಳೆ.

"ನಿನಗೆ ತುಂಬ ಒಪ್ಪುತ್ತದೆ" ಎಂದ ನಟರಾಜ ನಗುನಗುತ್ತಾ. ಮಂಗಳೆ ನಾಚಿ ನಿರುತ್ತರಳಾದಳು. ಮುಖ ಒಂದೇ ಗಳಿಗೆಗೆ ಕೆಂಪು ಕುಂಕುಮವಾಯಿತು. ಮೂಗಿನ ತುದಿಯ ಮೇಲೆ ಬೆವರು ಚೆಲ್ಲನೆ ಚೆಲ್ಲಿ ಹನಿಯಾಯಿತು.

"ಅಜ್ಜಿ ಕಾಯ್ತಾ ಇರ್ತಾಳೆ" ಎಂದು ಹೇಳುತ್ತ ಸರಸರನೆ ಹೊರಗೆ ಹೊರಟುಹೋದಳು.

೧೬

ಸೂರ್ಯ ಉದಯಿಸಿದ ಬಳಿಕ ಮಂಜು ಕರಗದೆ ಹಾಗೇ ಇರುತ್ತದೆಯೇ?

ಅವರಿಬ್ಬರ ಬಾಳಿನಲ್ಲೂ ಪ್ರೇಮದ ಅಂಕುರಾರ್ಪಣವಾದ ನಂತರ ಪ್ರತ್ಯೇಕಗೊಳಿಸುವ ನಾಚಿಕೆಗೆ ಎಡೆಯೆಲ್ಲಿದೆ?

ನಟರಾಜ ಬೇಸಿಗೆ ರಜೆಯಲ್ಲಿ ಎಂದಿನಂತೆ ಕಲ್ಲಹಳ್ಳಿಗೆ ಬಂದ.

ದಿನ ಕಳೆದಂತೆ, ತಿಂಗಳುಗಳು ಉರುಳಿದಂತೆ ಪುನಃ ಅವರಿಬ್ಬರ ಬಾಳಿನ ನಡುವೆ ಸಲಿಗೆ ಬೆಳೆಯತೊಡಗಿತು.

ಹೀಗೆ ಪರಸ್ಪರ ಬೆಳೆದ ಸಲಿಗೆಗೆ, ಕಾಲದ ಜೊತೆಗೆ ನಾಗಜ್ಜಿಯೂ ಅರಿತೋ ಅರಿಯದೆಯೋ ನೆರವು ನೀಡಿದ್ದಳು.

ಅವರಿಬ್ಬರೂ ಊಟ ಮಾಡುವಾಗ "ಗಂಡ–ಹೆಂಡತಿ" ಎಂದು ಲೇವಡಿ ಎಬ್ಬಿಸುವಳು. ಅದರಿಂದ ನಾಚಿ ಮಂಗಳೆ, ನಟರಾಜನ ಜೊತೆ ಕೂರದೆ ಅವಿತುಕೊಂಡರೆ ನಟರಾಜನಿಗೊಬ್ಬನಿಗೇ ಊಟಕ್ಕೆ ಬಡಿಸಲು ನಿರಾಕರಿಸುತ್ತಿದ್ದಳು.

"ನಿನ್ನ ಹೆಂಡತೀ ಕರಕೊಂಬಂದರೇ ನಿಂಗೆ ಊಟ ಸಿಕ್ಕೋದು... ಇಲ್ಲದೇ ಇದ್ದರೆ ಮೂರು ಅಗಳು ಅನ್ನಾನೂ ಹಾಕಾಕಿಲ್ಲ" ಎಂದು ತುಂಟತನದ ಹಟ ಹಿಡಿಯುವಳು.

ನಟರಾಜ ಎದ್ದು ಹೋಗಿ ಮಂಗಳೆಯನ್ನು ಹುಡುಕಿ ಎಳೆದು ತಂದ ಮೇಲೆ ನಾಗಜ್ಜಿ ಪ್ರಸನ್ನಳಾಗಿ ಇಬ್ಬರಿಗೂ ಊಟ ಬಡಿಸುತ್ತಿದ್ದಳು.

ಅಂತೂ ಈಗೀಗ ನಟರಾಜ–ಮಂಗಳೆಯರ ನಡುವೆ ಕೆಲವು ಕಾಲ ಬೆಳೆದು ನಿಂತಿದ್ದ ಸಂಕೋಚ, ನಾಚಿಕೆಗಳ ಬೇಲಿ ಮಾಯವಾಗುತ್ತಿತ್ತು. ಮಂಗಳೆ ಹೆಚ್ಚಾಗಿ ನಟರಾಜನ ಜೊತೆಗೇ ಕಾಲ ಕಳೆಯುವಳು. ಅದನ್ನು ಕಂಡು ನಾಗಜ್ಜಿ, "ಓಟು ಬಿಡುವು ಸಿಕ್ಕುಬುಡ್ತೊ ಅಂತ ಅಂದರೆ ಮಂಗ್ಲಿ ನೆಟ್ಟಗೆ ನಟ್ರಾಜನ ತಾವಕೇ ಓಡಿಬುಡ್ತಳೆ" ಎಂದು ಪಾರ್ವತಮ್ಮನ ಕಡೆ ಕಣ್ಣು ಮಿಟುಕಿಸಿ ಹಾಸ್ಯ ಮಾಡದೆ ಬಿಡುತ್ತಿರಲಿಲ್ಲ.

ಅಂತೂ ಬೇಸಿಗೆ ರಜ ಕಳೆಯುವುದರೊಳಗೆ ನಟರಾಜ–ಮಂಗಳೆಯರ ಸಂಬಂಧ ಮೊದಲಿದ್ದುದಕ್ಕಿಂತಲೂ ನಿಕಟವಾಯಿತು.

ರಜ ಕಳೆದು ಎಂಟು ದಿನಗಳಾದರೂ ನಟರಾಜ ಕಲ್ಲಹಳ್ಳಿಯಲ್ಲಿಯೇ ಉಳಿದುಕೊಂಡಿದ್ದ. ಕಡೆಗೆ "ಇದ್ಯಾಕೋ ಇಂಗೆ ಇಸ್ಕೂಲು ಮರೆತುಬಿಟ್ಟು ಇಲ್ಲೇ ಕುಂತುಬುಟ್ಟಿದ್ದೀ....?" ಎಂದು ವಿಷಕಂಠಯ್ಯ ಒತ್ತಾಯಪಡಿಸಿ ಕಳುಹಿಸಬೇಕಾಯಿತು.

ನಟರಾಜ ಮೈಸೂರಿಗೆ ತೆರಳಿದ ದಿನ ಮಂಗಳೆಯ ಹೃದಯದಲ್ಲಿ ಹೊಸ ಬೇಸರಿಕೆ ಕಾಣಿಸಿಕೊಂಡಿತು. ಊಟಕ್ಕೆ ಕುಳಿತಾಗ ಹಿಟ್ಟಿನ ತುತ್ತು ಗಂಟಲಿನೊಳಗೆ ಇಳಿಯಲು ನಿರಾಕರಿಸಿತು. ಕೂಡಲೆ ನಾಗಜ್ಜಿ ಕೀಟಲೆ ಮಾಡುವುದನ್ನು ಮರೆಯಲಿಲ್ಲ. – "ನೋಡವ್ವ ಪಾರತೀ...ನಟ್ರಾಜ ಹೊಂಟೋಗಿಬುಟ್ಟ ಅಂತ ಮಂಗಲೀಗೆ ಹಿಟ್ಟು ಉಣ್ಣಾಕೂ ಆಯ್ತಾ ಇಲ್ಲಾ...!"

ಮಂಗಳೆ ಮೈನೆರೆದಂದಿನಿಂದ ಹುಣಸೂರಿಗೆ ಹೋಗುವುದೂ ನಿಲ್ಲಿಸಲ್ಪಟ್ಟಿತ್ತು... "ಇವ್ಳು ಈಟು ಓದಿದ್ದೇ ಅಪ್ಪಾರ ಆಯ್ತು. ಎಂಗಸ್ರು ಓದಿ ಕಡಿದಾಕೋದೇನಾ?– ಅವರು ಒಲೆ ಬೂದಿ ಎತ್ತೋದು ತಪ್ಪೋಗಿ ಬುಟ್ಟಾತಾ?" ಎಂದು ವಿಷಕಂಠಯ್ಯನ ವಾದ ಆಗ.

ಇದೆಲ್ಲ ಕಾರಣದಿಂದ ಉಂಟಾದ ಬೇಸರ ಆ ರಾತ್ರಿ ಮಂಗಳೆಯ ದಿಂಬನ್ನು ಕಣ್ಣೀರಿನಿಂದ ತೋಯಿಸಿತು.

ಆದರೆ 'ಮಂಗಳೆಗೆ ಏನೋ ವ್ಯಥೆಯಾಗಿದೆ, ತಾಳು ನೋಡೋಣ' ಎಂದು ಕಾಲ ನಿಂತ ಕಡೆ ನಿಲ್ಲುವಂತದೇ ?... ಅದರ ಪಾಡಿಗೆ ಅದು ಮುಂದೆ ನಡೆಯಿತು... ನವರಾತ್ರಿಯನ್ನು ಹತ್ತಿರ ಹತ್ತಿರ ತಂದಿತು.

ನವರಾತ್ರಿ ಸಮೀಪಿಸಿದಂತೆ ಮಂಗಳೆಯ ವ್ಯಥೆಯೂ ಮಂತ್ರ ಹಾಕಿದಂತೆ ಕಡಿಮೆಯಾಗುತ್ತ ಹೋಯಿತು.

ಅದಕ್ಕೆ ಪ್ರಬಲವಾದ ಕಾರಣವಿದ್ದಿತು.

ಅವರೆಲ್ಲ ನಂಜುಂಡಸ್ವಾಮಿಯನ್ನು ನೋಡಲು ಮೈಸೂರಿಗೆ ಹೋಗಿದ್ದಾಗ ಅಲ್ಲಿ ಹೆಚ್ಚು ದಿನ ಇರಲಾಗಲಿಲ್ಲ. ಹಳ್ಳಿಯಲ್ಲಿ ಅವರ ದೊಡ್ಡ ಹಸು ಕರು ಹಾಕಿದ ಸುದ್ದಿ ಬಂದುದರಿಂದ ವಿಷಕಂಠಯ್ಯನೊಬ್ಬನಿಗೇ ಹೊಲ, ಮನೆ ಎರಡು ಕಡೆಯೂ ನೋಡಲು ಪ್ರಯಾಸವಾಗುವುದೆಂದು ಪಾರ್ವತಮ್ಮನೂ ನಾಗಜ್ಜಿಯೂ ಹೊರಟುಬಿಟ್ಟಿದ್ದರು.

ನಂಜುಂಡಸ್ವಾಮಿ ಎಷ್ಟೋ ಬಗೆಯಲ್ಲಿ ಹೇಳಿ ಅವರನ್ನು ಇನ್ನೂ ಕೆಲವು ದಿನ ಮೈಸೂರಿನಲ್ಲೇ ತಡೆಯಲು ಯತ್ನಿಸಿದ್ದ.

"ನೀವುಗಳು ಬರೋದೇ ಅಪರೂಪ. ಇನ್ನೂ ಒಂದೆರಡು ದಿನ ಇದ್ದು ಹೋಗಿ..."

"ಇಲ್ಲ ಕನಪ್ಪ. ಈ ಸಲ ಆಗಕ್ಕಿಲ್ಲ" ಎಂದು ನಿರಾಕರಿಸಿದ ನಾಗಜ್ಜಿ ತನ್ನ ಮಾತಿನಿಂದ ಖಿನ್ನಗೊಂಡ ನಂಜುಂಡಸ್ವಾಮಿಯ ಮುಖವನ್ನು ನೋಡಿ ತನ್ನ ಸ್ವರವನ್ನು ಮೃದುಮಾಡಿ ಆಶ್ವಾಸನೆ ಕೊಟ್ಟಳು. "ಈಗೇನಾ ಆಗೋದದ್ದು.... ಇನ್ನೊಂದು ಸಲ ಬತ್ತೀವೇಳು...ಬರಕ್ಕೆ ಹಿಂದಕ್ಕಿದ್ದ ತೊಂದರೆಯೂ ಮಾಯವಾಗದೆ ಈಗ... ಗಾಡೀಲಿ ಕೊಣ ಕೊಣ ಅಂತಾ ಒಂದು ದಿನ ಎಲ್ಲಾ ಪಂಚಾತಿ ಹತ್ತಿಕೊಂಬರಬೇಕಾ?... ಬಸ್ಸಿನಲ್ಲಿ ಕುಂತುಬುಟ್ಟಾ ಅಂದರೆ ಎರಡು ಎರಡೂವರೆ ಗಂಟೆ ಒಳಗೇ ಕರಕೊಂಬಂದುಬುಡ್ತದೇ..."

"ಅದೆಲ್ಲಾ ಸರಿಯೇ. ನೀವು ಈಗ ಬಂದೋರು ಒಂದು ನಾಕು ದಿನವೂ ನೆಟ್ಟಗಿರದೆ ಹೊಂಟೋಗ್ತಾ ಇದ್ದೀರಲ್ಲಾ ಅಂತ ವ್ಯಸನ, ಅಷ್ಟೇ... ಮೊದಲೇ ನವರಾತ್ರಿಗೂ ಬರಲಿಲ್ಲ; ಮೈಸೂರಿನಲ್ಲಿ ಆ ಸಂಭ್ರಮ ಎಲ್ಲಾ ಮುಗಿದುಹೋದ ಮೇಲೆ ಬಂದಿರಿ!..."

"ಮುಖ್ಯವಾಗಿ ನೀನು ಹೇಗಿದ್ದೀಯೋ ಅಂತ ನೋಡೋಕೆ ಬಂದದ್ದು ನಾವು... ಸದ್ಯ ಆ ಕಾಳಿಕಮ್ಮನವರ ದಯದಿಂದ ಗುಣ ಆಯ್ತಲ್ಲಪ್ಪಾ ನಿಂಗೆ! ನವರಾತ್ರಿ

ಎಲ್ಲಿಗೋಡೋದಾತು ? – ಬಂದೇ ಬರ್ತದೆ." ನಂಜುಂಡಸ್ವಾಮಿಗೆ ಸಮಾಧಾನವಾಗಲೆಂದು ಹಾಗೆ ನುಡಿದಳು ನಾಗಜ್ಜಿ. ಅಂದರೆ ಅದನ್ನೇ ಗಟ್ಟಿಯಾಗಿ ಹಿಡಿದುಕೊಂಡ ನಂಜುಂಡಸ್ವಾಮಿ.

"ಹಂಗಾದರೆ ಮುಂದಿನ ನವರಾತ್ರಿಗಾದರೂ ನೀವು ಎಲ್ಲರೂ ಬಂದೇ ಬರಬೇಕು."

"ಆಗಲಿ ಬತ್ತೀವಿ ಕನಪ್ಪ... ನೀನೀಟು ಮನಸ್ಸಿನಿಂದ ಕರೆಯೋವಾಗ ಬರದೇ ಇದ್ದರೆ ಆಯ್ತದಾ ? – ಬತ್ತಿವೇಳು..."

"ಎಂಟು ದಿನ ಮುಂಚಿತವಾಗೇ ಬರಬೇಕೂ..."

"ಆಗಲಿ" ಎಂದು ಮಾತುಕೊಟ್ಟಿದ್ದಳು ನಾಗಜ್ಜಿ.

ಈಗ ಪುನಃ ನವರಾತ್ರಿ ಬಂದಾಗ ಮಂಗಳೆಗೆ ಅದೆಲ್ಲ ನೆನಪಾಯಿತು. ಮತ್ತೆ ಮೈಸೂರಿಗೆ ಹೋಗಬಹುದೆಂಬ ನಿರೀಕ್ಷೆ ಅವಳ ಮನಸ್ಸಿಗೆ ಸಮಾಧಾನವನ್ನೂ ಉಲ್ಲಾಸವನ್ನೂ ತಂದಿತು.

ನಂಜುಂಡಸ್ವಾಮಿಗೆ ಮಾತು ಕೊಟ್ಟಿದ್ದಂತೆ ನಾಗಜ್ಜಿಯೂ ಪಾರ್ವತಮ್ಮನೂ ಮಂಗಳೆಯೊಡನೆ ನವರಾತ್ರಿ ಇನ್ನೂ ಏಳೆಂಟು ದಿನಗಳು ಇರುವಂತೆಯೇ ಮೈಸೂರಿಗೆ ಹೊರಟುಬಿಟ್ಟರು.

ನಂಜುಂಡಸ್ವಾಮಿಗೆ ಈಗ ಪೂರ್ಣ ಗುಣವಾಗಿತ್ತು. ಈಗೆರಡು ತಿಂಗಳುಗಳಿಂದ ಆತ ಗಾರ್ಡ್ ಕೆಲಸಕ್ಕೆ ಹೋಗುವುದಕ್ಕೂ ಆರಂಭಿಸಿದ್ದ. ತನ್ನ ಮಾತಿನಂತೆ ಬಂದ ನೆಂಟರನ್ನು ಕಂಡು ಅವನಿಗೆ ಸಂತೋಷವಾಯಿತು. ಯಶೋದಮ್ಮ ಅವರನ್ನೆಲ್ಲಾ ಪ್ರೀತಿಯಿಂದಲೇ ಕಂಡಳು.

ಅವರೆಲ್ಲರೂ ಮೈಸೂರಿಗೆ ಹಳಬರಾದರು ಎನ್ನುವಷ್ಟರಲ್ಲಿ ಆಡುತ್ತಾಡುತ್ತಾ ನವರಾತ್ರಿ ಬಂದಿತು.

ಮೈಸೂರು ಪಟ್ಟಣವನ್ನು ನೋಡಬೇಕಾದರೆ ನವರಾತ್ರಿ ದಿನಗಳಲ್ಲಿ ನೋಡಬೇಕು !... ಆ ದಿನಗಳಲ್ಲಿ ಅಂದವಾಗಿ ಸಿಂಗರಿಸಿದ ಮದುವಣಗಿತ್ತಿಯಂತೆ ಶೋಭಾಯಮಾನವಾಗಿ ಬೆಳಗುತ್ತದೆ ಮೈಸೂರು. ನಾಟಕ ಸಂಸ್ಥೆಗಳು, ಸರ್ಕಸ್ ಸಂಸ್ಥೆಗಳು, ಇನ್ನೂ ವಿವಿಧ ಬಗೆಯ ಮನರಂಜನೆಯ ನೋಟಗಳು ಬಂದು ನಗರದಾದ್ಯಂತ ಬಿಡಾರ ಮಾಡುತ್ತವೆ. ಸುತ್ತಮುತ್ತಲಿನ ಹಳ್ಳಿಗಳಿಂದ ರೈಲುಗಳಲ್ಲಿ, ಬಸ್ಸುಗಳಲ್ಲಿ, ಎತ್ತಿನ ಗಾಡಿಗಳಲ್ಲಿ, ಕಡೆಗೆ ಕಾಲುನಡಿಗೆಯಲ್ಲಿ ಜನ ತಂಡ ತಂಡವಾಗಿ ಬರುತ್ತಾರೆ. ವಿಜಯದಶಮಿ ದಿನವಂತೂ ಮದರಾಸು, ಬೊಂಬಾಯಿ ಮೊದಲಾದ ದೂರದೂರುಗಳಿಂದಲೂ ಅನೇಕ ಜನ ನೋಟ ನೋಡಲು ಬಂದು ನೆರೆಯುತ್ತಾರೆ. ಮಿಠಾಯಿ ಅಂಗಡಿಗಳು, ಬಟ್ಟೆ ಅಂಗಡಿಗಳು ಬೀದಿಗಳಲ್ಲೇ ತೆರೆಯಲ್ಪಟ್ಟು ನೋಡಿದವರಿಗೆ ಭಾರಿ ಜಾತ್ರೆಯೊಂದು ನಡೆಯುತ್ತಿರಬೇಕು ಇಲ್ಲಿ ಅನ್ನಿಸುತ್ತದೆ.

ನಾಗಜ್ಜಿ ಮತ್ತು ಪಾರ್ವತಮ್ಮ ನವರಾತ್ರಿಯನ್ನು ಹೊಸದಾಗೇನೂ ನೋಡುತ್ತಿರಲಿಲ್ಲ. ಹಿಂದೆ ಮೂರು ನಾಲ್ಕು ಬಾರಿ ಬಂದು ನೋಡಿದ್ದರು. ಆದರೂ ಅದನ್ನೆಲ್ಲ ಅವರು ಪ್ರಪ್ರಥಮವಾಗಿ ನೋಡುವವರಂತೆಯೇ ಬೆರಗುಗೊಂಡು ವೀಕ್ಷಿಸುತ್ತಿದ್ದರು. ಎಲ್ಲರಿಗಿಂತಲೂ ಮಂಗಳೆಗೆ ನವರಾತ್ರಿಯನ್ನು ನೋಡಿ ದಂಗು ಬಡಿದಂತಾಗಿದ್ದಿತು. ಅದರಲ್ಲೂ ಮಹಾರಾಜರ ಮೆರವಣಿಗೆಯ ಅದ್ಭುತ ದೃಶ್ಯವನ್ನು ಕಂಡಾಗಲಂತೂ ನಾಗಜ್ಜಿ ಹೇಳುತ್ತಿದ್ದಂತೆ 'ದೇವೇಂದ್ರನ ಐಭೋಗಾನೇ' ಕಂಡಂತಾಗಿತ್ತು.

ದಸರಾ ಮಹೋತ್ಸವ ಮುಗಿದ ಬಳಿಕ ಒಂದು ದಿನ ಮನೆಯ ಹತ್ತಿರವೇ ಇದ್ದ ಮೃಗಾಲಯಕ್ಕೆ ಎಲ್ಲರೂ ಹೋಗಿ ಬಂದರು. ವಿಜಯದಶಮಿಯ ದಿನ ಇವರೊಡನೆ ಬಂದಂತೆ ಈಗಲೂ ಚೆನ್ನಸ್ವಾಮಿಯ ಹೆಂಡತಿ ಆದಿಲಕ್ಷ್ಮಿಯೂ ಅವಳ ಮಗಳು ವಿಶಾಲಾಕ್ಷಿಯೂ ಬಂದಿದ್ದರು.

ಬಣ್ಣ ಬಣ್ಣದ ಗಿಳಿಗಳಿಗೆ ನೆಲಗಡಲೇಕಾಯಿ ತಿನ್ನಿಸಿದ ಮೇಲೆ, ಹಾಗೇ ಮುಂದೆ ಸಾಗಿ ನವಿಲುಗಳನ್ನು ಕೂಡಿದ್ದ ತಾಣಕ್ಕೆ ಬಂದರು.

ಅಲ್ಲಿ ಒಂದು ಗಂಡು ನವಿಲು ಜಾಗರವಾಡುತ್ತಿತ್ತು. ಇತರ ಹೆಣ್ಣು ನವಿಲುಗಳು ಸುಮ್ಮನೆ ಆದರ ಬಳಿ ಸುತ್ತಾಡುತ್ತಿದ್ದವು.

ವಿಶಾಲಿ ನಟರಾಜನ ಗಮನವನ್ನು ಆ ದೃಶ್ಯದೆಡೆಗೆ ಸೆಳೆಯುತ್ತ, "ಅಲ್ಲಿ ನೋಡು ನಟರಾಜ !... ಆ ನವಿಲು ಹೇಗೆ ಜಾಗರ ಆಡ್ತಾ ಇದೆ !... ಓ, ಆ ನವಿಲಿಂದು ಎಷ್ಟು ಒಳ್ಳೇ ಬಣ್ಣ !" ಎಂದವಳು "ನನ್ನ ಹತ್ತಿರ ಅದೇ ಬಣ್ಣದ್ದು ಒಂದು ಸೀರೆ ಇದೆ," ಎಂದು ಹೇಳುವ ಅವಳ ರೀತಿಯಲ್ಲಿ ಜಂಭದ ಲೇಪವಿತ್ತು.

ಅವಳ ಕೊನೆಯ ಮಾತನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ನಟರಾಜ ಹೇಳಿದ.

"ಅಯ್ಯೊ, ಇದೆಂಥಾ ನವಿಲು... ನಮ್ಮ ಕಾಡಿನಲ್ಲಿ ಇದಕ್ಕಿಂತ ಸಾವಿರ ಪಾಲು ಸುಂದರವಾದ ನವಿಲುಗಳಿವೆ. ಅಲ್ಲವೇನೆ ಮಂಗಲಿ...?" ಅವನು ಮಂಗಳೆಯನ್ನು ಹಾಗೆ ಕೇಳಿದಾಗ ವಿಶಾಲಿ ಅಸೂಯೆಯಿಂದಲೇ ಒಮ್ಮೆ ಮಂಗಳೆಯ ಮುಖವನ್ನು ನೋಡಿದಳು.

ಮಂಗಳೆ "ಹೌದು" ಎಂದು ಸೂಚಿಸುವಂತೆ ತಲೆಯಲ್ಲಾಡಿಸಿ, ನವಿಲುಗಳನ್ನೇ ನೆಟ್ಟ ನೋಟದಿಂದ ಅನುಲಕ್ಷಿಸುತ್ತಿದ್ದಳು. ಅಷ್ಟರಲ್ಲೇ ಅವಳಿಗೆ ವಿಶಾಲಿಯ ಪರಿಚಯವಾಗಿ ಅವಳ ಅಹಂಭಾವವೂ ಅನುಭವವಾಗಿತ್ತು. ಇವರೆಲ್ಲ ಮೈಸೂರಿಗೆ ಬಂದ ರಾತ್ರಿಯೇ ವಿಶಾಲಿ ಮನೆಗೆ ಬಂದಿದ್ದಳು. ಅವಳು ಆಗ ಮಂಗಳೆಯನ್ನು ಸರಿಯಾಗಿ ಮಾತಾಡಿಸಲೇ ಇಲ್ಲ. ಮಂಗಳೆ ಹಳ್ಳಿಯ ಹುಡುಗಿ ಅವಳಿಗೇನೂ ತಿಳಿಯದು, ತನ್ನಷ್ಟು ವಿದ್ಯೆ ಓದಿಲ್ಲ

(ವಿಶಾಲಿ ಈಗ ಫೋರ್ತ್ ಫಾರಮ್ಮಿನಲ್ಲಿ ಓದುತ್ತಿದ್ದಳು). ಈ ಎಲ್ಲ ಭಾವವನ್ನು ತನ್ನ ನಡೆ, ನುಡಿಯಲ್ಲಿ ಸಾಕಷ್ಟು ಪ್ರದರ್ಶಿಸಿದ್ದಳು.

ಎಲ್ಲರೂ ಹಾಗೇ ಆನೆಗಳನ್ನು ನೋಡಿದರು. ಹುಲಿ ಸಿಂಹಗಳನ್ನು ನೋಡಿದ್ದಾಯಿತು. ಜಿಂಕೆಗಳನ್ನೂ, ಮೊಸಳೆಗಳನ್ನೂ ಕಂಡದ್ದಾಯಿತು. ನಂತರ ನೀರು ಕುದುರೆ ಇದ್ದಲ್ಲಿಗೆ ಬಂದರು. ಭಾರಿ ಎಮ್ಮೆಯಂತೆ ನೀರಿನಲ್ಲಿ ಮುಳುಗಿ ಮಲಗಿದ್ದ ಆ ಪ್ರಾಣಿಯನ್ನು ನೌಕರನೊಬ್ಬ, ಮಕ್ಕಳು ಕೇಳಿಕೊಂಡುದರ ಮೇರೆಗೆ, ಕೋಲಿನಿಂದ ಚುಚ್ಚಿ, ಎಬ್ಬಿಸಿ ಬಾಯಿ ತೆರೆಸಿದ. ಬಾನಿನಂತೆ ಅಗಾಧವಾದ ಅದರ ಬಾಯಿಯನ್ನು ನೋಡಿ ಬೆಪ್ಪಾಗಿ ನಾಗಜ್ಜಿ "ಅವ್ವೀ, ಏಟು ಅಗಲ ಅದೆಯವ್ವಾ ಈ ಮೃಗದ ಬಾಯಿಾ...?" ಎಂದು ಆಶ್ಚರ್ಯಪಟ್ಟಳು.

ಆ ಮೃಗದ ಬಾಯಿಗೆ ದೂರದಿಂದ ನೆಲಗಡಲೆಕಾಯಿ ಎಸೆಯುತ್ತಾ,

"ಅಜ್ಜೀ ಬಾಯಿನಲ್ಲೂ ಹಲ್ಲಿಲ್ಲ.... ಇದಕ್ಕೂ ಬಿದ್ದು ಹೋಯ್ತಾ ಅವೆ...!" ಎಂದು ನಗೆಯಾಡಿದ ನಟರಾಜ.

"ನನ್ನ ಹಳೇನ ಮಗನೇ... ಆಡಿಕೊಂಡೀಯ ನನ್ನಾ-?" ಎಂದು ಹುಸಿ ಮುನಿಸಿನಿಂದ ಅವನನ್ನು ಹೊಡೆಯುವವಳಂತೆ ಹತ್ತಿರ ಹೋದಳು ನಾಗಜ್ಜಿ. ನಟರಾಜ ತಪ್ಪಿಸಿಕೊಂಡು ನಗುತ್ತಾ ಮುಂದೆ ನಡೆದುಬಿಟ್ಟ.

ಜಾರುಗುಪ್ಪೆಯನ್ನು ಕಂಡು ಮಕ್ಕಳು ಹತ್ತಿ ಹೋಗಿ ಜಾರಲುಪಕ್ರಮಿಸಿದರು. ಎರಡನೆಯ ಸಲ ನಟರಾಜ ಜಾರಲು ಕುಳಿತಿದ್ದ. ಆಗ ಹಿಂದಿನಿಂದ ಅವನಿಗೆ ತಿಳಿಯದಂತೆ ಹುಡುಗಾಟಕ್ಕಾಗಿ ನೂಕಿಬಿಟ್ಟಳು ವಿಶಾಲಿ. ಅಕಸ್ಮಾತ್ತಾಗಿ ನೂಕಲ್ಪಟ್ಟುದರಿಂದ ಭೀತನಾಗಿ ಕಿರುಚುತ್ತಾ ಜಾರಿ ಬಂದು ಬಿದ್ದ ನಟರಾಜ. ಅದರಿಂದ ಅವನ ಮಂಡಿ ಸ್ವಲ್ಪ ಕಿತ್ತಿತೇ ವಿನಾ ಹೆಚ್ಚು ಪೆಟ್ಟೇನೂ ಆಗಿರಲಿಲ್ಲ. ಮಂಡಿಯನ್ನೇ ಹಿಡಿದು ಅಲ್ಲಾದ ಗಾಯವನ್ನೇ ನಿರೀಕ್ಷಿಸುತ್ತಿರುವಂತೆ "ಹತ್ತರಿಕೆಲಾ...? ಹಂಗೇ ಆಗಬೇಕು" ಎನ್ನುತ್ತ, ನಾಗಜ್ಜಿ ಅವನನ್ನು ಹಿಡಿಯಲು ಬಂದಳು. ಆದರೆ ನಟರಾಜ ಅಷ್ಟರಲ್ಲಿ ಎಚ್ಚೆತ್ತು, ಕೈಗೆ ಸಿಕ್ಕಿದನೆನ್ನುವಷ್ಟರಲ್ಲಿ ತಪ್ಪಿಸಿಕೊಂಡು ಓಡಿದ...

ಅನಂತರ ಬೋನುಗಳಲ್ಲಿಟ್ಟ ನಾನಾ ಜಾತಿಯ ಕಪಿಗಳನ್ನವರು ನೋಡಿದರು. ಮೊದಲನೆಯ ಕಪಿಯನ್ನು ನೋಡಿದಾಗಲೇ ನಾಗಜ್ಜಿ ನಟರಾಜನಿಗೆ ಕೂಗಿ ಹೇಳಿದಳು :

"ಇಲ್ನೋಡು... ನಿನ್ನಂಗೇ ಇರೊ ಮಂಗವಾ_!... ನಿಂಗೆ ಬಾಲ ಒಂದು ಇಲ್ಲದೇ ಓಗಿ ಬಿಡ್ತು... ಇದಕ್ಕೆ ಬಾಲ ಅದೆ ನಿಂಗಿಲ್ಲ-ಓಟೇ ಎತ್ವಾಸ ನಿಂಗೂ ಈ ಮಂಗನಿಗೂವೆ..." ಎಂದು ಕುಹಕವಾಗಿ ನಕ್ಕಳು.

ಮುಂದೆ ಕರಡಿ, ಚಿರತೆ ಮುಂತಾದ ಪ್ರಾಣಿಗಳನ್ನು ನೋಡಿಕೊಂಡು ಜಿರಾಫೆ ಇರುವಲ್ಲಿಗೆ ಬಂದರು. ಈ ಪ್ರಾಣಿಗಳ ವಿಪರೀತ ಉದ್ದವಾದ ಕತ್ತನ್ನು ಕಂಡು ಪಾರ್ವತಮ್ಮ ಅಚ್ಚರಿಯಿಂದ ನಾಗಜ್ಜಿಯೊಡನೆ ಹೇಳಿದಳು:

"ಹೆಂಗತ್ತೇ ಬೆಳೀತೂ ಈಟು ಉದ್ದ... ಇದರ ಕತ್ತು?–ಯಾವತ್ತೂ ಒಳ್ಳೆ ನಮ್ಮ ಕೆಂಚಯ್ಯನ ಸಿದ್ದಿ ಕತ್ತಿನಂತೆ ಬೆಳಕೊಂಡದಲ್ಲಾ...?" ಎಂದು ನಗೆಯಾಡಿದಳು.

ಮಕ್ಕಳು ಕಡಲೆಕಾಯಿ ಆಸೆ ತೋರಿದರು.

ಒಂದು ಜಿರಾಫೆ ಹತ್ತಿರ ಬಂದು ಸಲಾಕಿಯ ಹೊರಗೆ ಕತ್ತು ಚಾಚಿ ಮಕ್ಕಳ ಕಯ್ಯಿಂದ ಕಡಲೆಕಾಯಿ ತಿನ್ನಲು ಆರಂಭಿಸಿತು.

ಅನಂತ ಕುಚೋದ್ಯಕ್ಕಾಗಿ ತನ್ನ ಟೋಪಿಯನ್ನು ತೆಗೆದು ಆ ಪ್ರಾಣಿಯ ತಲೆಯ ಮೇಲಿಟ್ಟ. ಅದು ಕತ್ತೆತ್ತಿ ಮತ್ತೆ ಇನ್ನೊಬ್ಬರ ಕೈಗೆ ಕಡಲೆಕಾಯಿ ತಿನ್ನಲು ಬಾಯಿ ಹಾಕಿದಾಗ ಚಾಕಚಕ್ಯತೆಯಿಂದ ತನ್ನ ಟೋಪಿಯನ್ನು ಎತ್ತಿಕೊಂಡ.

ಎಲ್ಲರೂ ನಕ್ಕರು.

ನಟರಾಜನಿಗೆ ತಾನೂ ಹಾಗೇ ಮಾಡುವ ಆಸೆಯಾಗಿ ಆ ಪ್ರಾಣಿ ಮಂಗಳೆಯ ಕಯ್ಯಿಂದ ಕಡಲೆಕಾಯಿ ಮತ್ತೊಮ್ಮೆ ತಿನ್ನಲು ಬಾಯಿ ನೀಡಿದಾಗ ಬೇಗ ಅದರ ತಲೆಯ ಮೇಲೆ ತನ್ನ ಟೋಪಿಯನ್ನಿರಿಸಿಬಿಟ್ಟ, ಅದು ಹಾಗೆಯೇ ಕತ್ತನ್ನು ಮೇಲಕ್ಕೆತ್ತಿಕೊಂಡಿತು.

ಆ ಪ್ರಾಣಿ ಮತ್ತೆ ಕತ್ತು ನೀಡಿದಾಗ ತನ್ನ ಟೋಪಿಯನ್ನೆತ್ತಿಕೊಳ್ಳುವುದೆಂದು ಕಾಯುತ್ತ ನಿಂತಿದ್ದ ನಟರಾಜ.

ಆದರೆ ಆ ಪ್ರಾಣಿ ಪುನಃ ಕಡಲೆಕಾಯಿಗೆ ಆಶಿಸಿ ಕತ್ತು ನೀಡಲಿಲ್ಲ. ಆಗಲೆ ಸಾಕಷ್ಟು ತಿಂದು ಬೇಸರ ಬಂದಿತ್ತೊ, ಏನೊ? ಬಿಟ್ಟಿ ಸಿಕ್ಕಿದ ಟೋಪಿಯನ್ನಿಟ್ಟು ಸವಾರಿ ಹೊರಡಬೇಕೆಂದು ಆಸೆ ಉಂಟಾಗಿದ್ದರೂ ಇರಬಹುದು... ಅದು ಸರಕ್ಕನೆ ಹಿಂದಿರುಗಿ ತಾನು ಕೂಡಲ್ಪಟ್ಟಿದ್ದ ವಿಶಾಲ ಬಯಲಿನಲ್ಲಿ ಓಡಾಡಲು ಪ್ರಾರಂಭ ಮಾಡಿತು.

"ಈಗ ಬರುತ್ತದೆ ಆಗ ಬರುತ್ತದೆ" ಎಂದು ನಟರಾಜ ಕಾದು ಕಾದು ಸಾಕಾಗಿ ಹೋಯಿತು.

"ನೀ–ಇಲ್ಲೇ ಕಾಯಿಕೊಂಡಿರು ಅದು ನಿನ್ನ ತೋಪಿ ತಂದು ಕೊಡೋವರೆಗೂ. ನಾವು ಓಯ್ತೀವಿ..." ಎಂದು ಕುಚೇಷ್ಟೆ ಮಾಡಿದಳು ನಾಗಜ್ಜಿ.

೧೭

ಆ ರಾತ್ರಿ ಊಟ ಮಾಡುವಾಗ ನಾಗಜ್ಜಿಯೊಡನೆ ಮಾತು ತೆಗೆದ ನಂಜುಂಡಸ್ವಾಮಿ :

"ಏನಜ್ಜಿ, ನಾಳೆ ಹೊರಟುಬುಡಬೇಕು ಅಂತ ಇದೀರಂತೆ..."

"ಓ, ಆಗ್ಲೆ ನಿನ್ನ ಎಡತಿ ಬೆಸೆದುಬಿಟ್ಟವಳೇ ?..." ಎಂದು ನಗುತ್ತಾ ಯಶೋದಮ್ಮನ ಕಡೆ ನೋಡಿ, ಅನಂತರ ನಂಜುಂಡಸ್ವಾಮಿಯನ್ನುದ್ದೇಶಿಸಿ "ಮಂತೆ ಇಲ್ಲೇ ಇನ್ನೂ ಏಟು ಜಿನ ಕುಂತುಕೊಳಿ ಅಂತೀ... ಮನೆ ಮಟ ಎಲ್ಲ ಬುಟ್ಟುಬುಟ್ಟೂ-?... ಹಳ್ಳೀಲಿ ಇಸಕಂಟೂ ಒಂದೇ ಏಟು ಪಾಡು ಹತ್ತುತಾ ಇದ್ದಾತೋ ?... ನಾವು ಬಂದಾಗ್ಲೇ ಈಟು ದಿನ ಆಗೋಯ್ತೂ !" ಎಂದಳು ನಾಗಜ್ಜಿ.

"ಇನ್ನೊಂದೆರಡು ದಿನ ಇದ್ದುಬಿಟ್ಟು ಹೋಗಬಹುದಲ್ಲಾ ಅಜ್ಜಿ...?" ಎಂದು ನಂಜುಂಡಸ್ವಾಮಿ ರಾಗವೆಳೆದ.

ಈ ಸಲ ಕಾಯಿಲೆ ಬಿದ್ದು ಎದ್ದಾಗಿನಿಂದ ನಂಜುಂಡಸ್ವಾಮಿಗೆ ತನ್ನ ಕಲ್ಲಹಳ್ಳಿಯ ನೆಂಟರನ್ನು ಕಂಡರೆ ಪ್ರೀತಿ ಹೆಚ್ಚಿದಂತಿತ್ತು. ಕೊತ್ತೇಗಾಲದಿಂದ ಕಾಳಯ್ಯನ ಮನೆಯವರು ಅವನು ಕಾಯಿಲೆ ಬಿದ್ದಿದ್ದಾಗ ಒಂದು ಬಾರಿ ಅವನನ್ನು ನೋಡಲು ಮೈಸೂರಿಗೆ ಬಂದಿದ್ದರು. ಆದರೆ ಆ ಮನೆಯವರ ನಡತೆಯನ್ನು-ಚೆಲುವಮ್ಮನೊಬ್ಬಳ ನಡತೆಯನ್ನುಳಿದು-ಆತ ಇಷ್ಟ ಪಟ್ಟಿರಲಿಲ್ಲ. ಅದರಲ್ಲೂ ಪ್ರತಿಯೊಂದರಲ್ಲೂ ತನ್ನ ಐಶ್ವರ್ಯದ ಪ್ರದರ್ಶನವನ್ನೇ ಮಾಡಲು ಇಚ್ಛಿಸುತ್ತಿದ್ದ ನರಸಮ್ಮ ಎಷ್ಟು ಬೇಗ ಮನೆ ಬಿಟ್ಟು ಹೊರಟರೆ ಅಷ್ಟು ಕ್ಷೇಮ, ಎಂದೆನಿಸಿತ್ತವನಿಗೆ.

ಅದಕ್ಕಾಗೇ ಇನ್ನಷ್ಟು ದಿನ ತನ್ನ ಕಲ್ಲಹಳ್ಳಿಯ ನೆಂಟರನ್ನು ಉಳಿಸಿಕೊಳ್ಳಲು ಯತ್ನಿಸಿದ ಆತ.

ಆದರೆ ನಾಗಜ್ಜಿ "ನಾ ಏಟು ಹೇಳಿದ್ರೂ ನಿಂಗೆ ತಿಳಿಯಕ್ಕೇ ಇಲ್ಲಕನ ಮೊಗಾ...? ಎಂದು ಹುಬ್ಬುಗಂಟಿಕ್ಕಿದಳು.

ಯಶೋದಮ್ಮ ಮಧ್ಯೆ ಬಾಯಿ ಹಾಕಿದಳು.

"ಹೋಗಲಿ ಅಜ್ಜಿ, ನೀವೆಲ್ಲ ಶಿವರಾತ್ರೀಗಾದರೂ ಇಲ್ಲಿಗೇ ಬಂದುಬಿಡಿ" ಎಂದು ಕೇಳಿಕೊಂಡಳು.

"ಹೂ, ಹಾಗಾದರೂ ಮಾಡಿ" ವಿಧಿಯಿಲ್ಲದೆ ನಂಜುಂಡಸ್ವಾಮಿ ಆಗಲಾದರೂ ಅವರಿಲ್ಲಿ ಬರಲೆಂದು ಆಶಿಸಿದನು.

"ಆಗಲೆ ನೋಡುವಾ" ಎಂದಷ್ಟು ಮಾತ್ರ ಹೇಳಿದಳು ನಾಗಜ್ಜಿ.

"ನೋಡೋದೂ ಇಲ್ಲ, ಏನೂ ಇಲ್ಲ. ಬಂದೇ ತೀರಬೇಕು" ಎಂದು ನಂಜುಂಡಸ್ವಾಮಿ ಒತ್ತಾಯಪಡಿಸಿದ.

ಎಷ್ಟೋ ಹೊತ್ತಾದ ಬಳಿಕ ಅವರ ಹಿಂಸೆಯನ್ನು ತಾಳಲಾರದೆ "ಹೂ, ಬತ್ತೀವಿ" ಎಂದು ಸುಮ್ಮನೆ ಒಪ್ಪಿಕೊಂಡಳು ಮುದುಕಿ.

* * *

ಮೂರು ತಿಂಗಳು ಕಳೆದವು.

ನಾಗಜ್ಜಿ ಮೈಸೂರಿಗೆ ಹೋಗಬಾರದೆಂದೇ ನಿರ್ಧರಿಸಿದ್ದಳು. ನಂಜುಂಡಸ್ವಾಮಿಯೊಡನೆ ಬರುತ್ತೇನೆಂದು ಅವಳು ಹೇಳಿದ್ದುದು ಅವನ ಬಲವಂತಕ್ಕಾಗಿ ಅಷ್ಟೆ.

ಹೀಗಿರುವಾಗ ಮುದುಕಿ ಒಂದು ದಿನ ಕಾಡಿಗೆ ಸೌದೆ ತರಲು ಹೋಗಿದ್ದಳು. ಅಲ್ಲಿ ತಾನು ಕಟ್ಟಿದ ಸೌದೆ ಹೊರೆ ಇಷ್ಟು ಬಾರಿ ಕಟ್ಟುತ್ತಿದ್ದುದಕ್ಕಿಂತಲೂ ಭಾರವಾಗಿದ್ದುದರಿಂದ ಅದನ್ನವಳು ಬಾಗಿ ಎತ್ತುವಾಗ ಸೊಂಟ ಉಳುಕಿದಂತಾಯಿತು. ಸೊಂಟವನ್ನು ಹಿಡಿದುಕೊಂಡು ಬಹಳ ಪ್ರಯಾಸದಿಂದ ಹೇಗೋ ಮನೆಯನ್ನು ಸೇರಿದಳು. ಬಾಗಿಲಿನಲ್ಲೇ ನಿಂತಿದ್ದ ವಿಷಕಂಠಯ್ಯ ಇವಳನ್ನು ಕಂಡು "ಯಾನವ್ವಾ ಆಯಿತು ?" ಎಂದು ಗಾಬರಿಗೊಂಡು ಕೇಳಿದ.

"ನಾಳೀಕೆ ಸೋಮವಾರ ಅಲ್ಲವಾ ಮೊಗಾ, ಎಲ್ಲರೂ ನೀರು ಆಕಿ ಕೊಳಾವಾ ಅಂತ ಸೌದೆ ತರಾಕೆ ಓಗಿದ್ದೆ. ಹೊರೆ ಎತ್ತವಾ ಅಂತ ಬಗ್ಗದೆ, ಆಮೇಕೆ ಅದರ ಬಾರಕ್ಕೆ ನಡ ಎತ್ತಾಕ್ಕೇ ಆಗನಿಲ್ಲ. ಹಂಗೆ ಓಟುಹೊತ್ತು ಕುಂತಕೊಂಡಿದ್ದು ಮೆಲ್ಲಮೆಲ್ಲಕೆ ಬಂದೆ ಇಲ್ಲೀಗಂಟ..." ಎಂದು ನಿಟ್ಟುಸಿರು ಬಿಟ್ಟು "ಹೊರೆ ಕಟ್ಟಿದ್ದು ಕಟ್ಟಿದಂಗೇ ಅದೆ. ಓಗಿ ಒಸಿ ಎತ್ತಿಕೊಂಬಂದುಬಿಡಪ್ಪಾ ನೀನೇಯಾ..." ಎಂದು ಬಾಗಿಲಿನಲ್ಲೇ ಕುಳಿತುಬಿಟ್ಟಳು.

ಪಾರ್ವತಮ್ಮ ಗಾಬರಿಯಾಗಿ ಒಳಗಿನಿಂದ ಓಡಿಬಂದು, ವಿಚಾರ ತಿಳಿದ ಬಳಿಕ ಒಳ್ಳೆಣ್ಣೆ ಮತ್ತು ಬೆಳ್ಳುಳ್ಳಿಯನ್ನು ತಂದು ಅತ್ತೆಯ ನಡುವಿಗೆ ತಿಕ್ಕಿದಳು. ಅನಂತರ ಕೈ ಕಾಲು ತೊಳೆಯಲು ಪ್ರತಿ ಸಂಜೆ ಮಾಮೂಲಿನಂತೆ ಕಾಯಿಸಿ ಇಟ್ಟ ನೀರನ್ನು ಅವಳು ಸೊಂಟಕ್ಕೆ ಸುರಿದಳು. ಅಷ್ಟರಲ್ಲಿ ಕಾಡಿನಿಂದ ಹೊರೆಹೊತ್ತು ತಂದ ವಿಷಕಂಠಯ್ಯ ಹೊರೆಯನ್ನಿಳುಹುತ್ತಾ ಚಾಪೆಯ ಮೇಲೆ ಮಲಗಿದ ತಾಯಿಯನ್ನು ನೋಡಿ "ಅಲ್ಲಕನವ್ವಾ, ಈ ಹೊರೆ ಹೊರೋದರಲ್ಲಿ ನನ್ನ ನಡುವೇ ಬಿದ್ದು ಓಯ್ತಲ್ಲಾ ?... ಇನ್ನು ಅಣ್ಣು ಅಣ್ಣು ಮುದುಕಿ... ನೀನು ಎತ್ತುಕ್ಕೋದರೆ ಇನ್ನೇನಾದಾತು... ನಡ ನೋವು ಬರದೆ–?" ಎಂದು ಕೇಳಿದ.

ಒಂದೆರಡು ದಿನ ಹೀಗೇ ಕಳೆದ ಮೇಲೆ ಒಂದು ಮಧ್ಯಾಹ್ನ ಮಜ್ಜಿಗೆ ಕಡೆಯುತ್ತಿದ್ದ ಪಾರ್ವತಮ್ಮನನ್ನು ಕರೆದು "ನಿಂಗೆ ಒಂದು ವಿಚಾರ ಯೇಳಬೇಕು ಕನಾ ಪಾರತಿ..." ಎಂದಳು ನಾಗಜ್ಜಿ.

"ಯೇನು ಅತ್ತೇ–?"

"ನಾವು ಮೈಸೂರಿಗೆ ಓಗಿದ್ದಾಗ ನಂಜುಂಡಸ್ವಾಮಿ ಮಾತು ಕೇಳಿಕಂದು ಇನ್ನೂ ಒಸಿ ಜಿನ ಬುಟ್ಟೇ ಬರಬೇಕಾಗಿತ್ತು ಕನಾ...."

"ಅದೇನಾ...?" ಪಾರ್ವತಮ್ಮ ಕುತೂಹಲದಿಂದಲೇ ಕೇಳಿದಳು.

"ನೋಡಾ... ಇನ್ನೊಂದೆಡು ಜಿನದಲ್ಲೇ ಬೆಟ್ಟದ ಜಾತ್ರೆ ಆಯುತಿತ್ತು. ಓಟರಾಗೇ ಬೋ ಆತುರ ಅಂತ ಓಡಿಬಂದುಬುಟ್ಟೊ... ಆ ಚಾಮುಂಡಿ ಮಾತಾಯಿ ದರ್ಶನ ಮಾಡದೇಯ ಬಂದದ್ದೇ ತೆಪ್ಪಾಗಿ ಓಯ್ತು... ಆ ತಾಯಿಗೆ ಕ್ವಾಪ ಹತ್ತಿ ಬುಟ್ಟದೆ... ಒಂದು ಪಾವುಡೆ ತಕೊಂಡು ಅರಿಸಿನದ ನೀರಿನಲ್ಲಿ ಅದ್ದಿ ಒಂದು ಬೆಳ್ಳಿ ಪಾವಲಿ ಕಟ್ಟಿಡು... ಆ ಮಾತಾಯಿ ನನ್ನ ಸೊಂಟದ ನೋವು ಹೋಗೊಹಂಗೆ ಮಾಡಿದ್ರೆ ಬೆಟ್ಟಕೊಂದು ಸಲ ಹೋಗಿದ್ದೇ ಬಂದುಬುಡಾವಾ, ಹೆಂಗಾರು ಮಾಡಿ..."

"ನಿಮ್ಮ ಕಷ್ಟಕ್ಕಿಂತ ಬೋ ಎಚ್ಚಾ... ಹಂಗೇ ಆಗಲಿ" ಎಂದು ಹೇಳಿ, ಕುಡಿಕೆಯಿಂದ ಪಾವಲಿ ತೆಗೆದು ಅರಿಸಿನದ ಪಾವುಡೆಯಲ್ಲಿ ಕಟ್ಟಿಟ್ಟಳು.

ಮುಂದೆ ಒಂದು ವಾರದಲ್ಲಿ ಹಿಡಿದುಕೊಂಡಿದ್ದ ನಾಗಜ್ಜಿಯ ಸೊಂಟ ಸ್ವಲ್ಪ ಬಿಟ್ಟಿತು. ಇದನ್ನು ಅವಳು ಚಾಮುಂಡೇಶ್ವರೀ ಅಮ್ಮನವರಿಗೆ ತಾನು ಹರಸಿಕೊಂಡುದರ ಫಲವೆಂದು ಭಾವಿಸಿದಳು. ಇನ್ನೊಂದು ತಿಂಗಳೊಳಗೆ ಅವಳಿಗೆ ಪೂರ್ಣವಾಗಿ ಗುಣವಾಯಿತು. ಆಗ ಒಂದು ದಿನ ಮೈಸೂರಿಗೆ ಹೊರಟುನಿಂತಳು ನಾಗಜ್ಜಿ.

ಆದರೆ ಅವಳೊಡನೆ ಈ ಬಾರಿಯೂ ಮೈಸೂರಿಗೆ ಹೋಗಲು ಸಮ್ಮತಿಸಲಿಲ್ಲ ಪಾರ್ವತಮ್ಮ.

"ಹಟ್ಟೀಗೇ ಕಾಳು ಕಡ್ಡಿ ಬರೋಕಾಲ... ಅದ್ನೆಲ್ಲ ಒಪ್ಪವೈನ ಮಾಡಬ್ಯಾಡದಾ ?... ಅವರು ತಾನೇ ಒಬ್ಬರೇ ಏಟು ಅಂತ ಪೇಚಾಡಾರು ?" ಎಂದವಳು, ಅಷ್ಟರಲ್ಲಿ ಬೆರಣಿ ತಟ್ಟಿ ಬಂದ ಮಂಗಳೆಯನ್ನು ನೋಡಿ "ಬೇಕಾದರೆ ಮಂಗಲೀನೂ ನಿಮ್ಮ ಜೊತೇಲಿ ಕರಕೊಂಡು ಹೋಗತ್ತೆ" ಎಂದು ಸಲಹೆ ಮಾಡಿದಳು.

"ಮಂಗಲಿ ಕರಕೊಂಡು ಓಗಾದ ಈ ಯಜಮೊಣಿಗಿತ್ತಿ ಕೈಲೇ ಹೇಳಿಸಕೊಬೇಕಾಗಿತ್ತು...!" ಎಂದು ನಾಗಜ್ಜಿ ಸಿಡುಕಿದರೂ ತನ್ನ ಮನಸ್ಸಿನಲ್ಲಿ "ಇಂಗಲ್ಲವಾ ಇರಬೇಕು ಮನೆ ಎಂಗಸು

ಅಂದರೆ ?... ಅದು ಬುಟ್ಟು ಎಂಗಸು ಅನ್ನಿಸಿಕೊಂಡೋಳು ಬೀದಿ ಬೀದಿ ತಿರುಗ್ತಾ ನಿಂತುಕೊಂಡರೆ ಮನೆ ಗತಿಯೇನು..." ಎಂದು ಗೃಹಕೃತ್ಯದಲ್ಲಿ ಪಾರ್ವತಮ್ಮನು ತೋರುತ್ತಿದ್ದ ಅಸಾಧಾರಣ ಆಸಕ್ತಿಯನ್ನು ಮೆಚ್ಚಿಕೊಂಡಳು.

ನಾಗಜ್ಜಿಯೂ ಮಂಗಳೆಯೂ ಮೈಸೂರಿಗೆ ಬಂದಾಗ ಶಿವರಾತ್ರಿ ಇನ್ನೂ ಇಪ್ಪತ್ತು ಇಪ್ಪತ್ತೆರಡು ದಿನಗಳಿದ್ದವು. ಆದರೂ ತನ್ನ ಹರಕೆಯನ್ನು ತೀರಿಸುವ ಆತುರದಲ್ಲಿ ಮುದುಕಿ ಬೇಗನೆ ಹೊರಟುಬಿಟ್ಟಿದ್ದಳು.

ಬುಧವಾರ ಇನ್ನೂ ಮಧ್ಯಾಹ್ನದ ಊಟ ಮಾಡಿರಲಿಲ್ಲ ಯಶೋದಮ್ಮ. ತನಗೂ ನಟರಾಜನಿಗೂ ಉಳಿದಿದ್ದ ಅನ್ನವನ್ನೇ ನಾಗಜ್ಜಿಗೂ ಮಂಗಳೆಗೂ ಬಡಿಸಿ ಮತ್ತೆ ತಮಗೆ ಅನ್ನ ಮಾಡಿಕೊಳ್ಳಲು ಒಲೆಯ ಮೇಲೆ ನೀರಿಟ್ಟಳು. ನಟರಾಜನ ಹೈಸ್ಕೂಲಿನವರು ಬನುಮಯ್ಯನವರ ಹೈಸ್ಕೂಲಿನವರ ಮೇಲೆ ಫುಟ್‌ಬಾಲ್ ಪಂದ್ಯವೊಂದರಲ್ಲಿ ಹಿಂದಿನ ದಿನ ಜಯಗಳಿಸಿದ್ದುದರಿಂದ ಆ ದಿನ ಅವರ ಶಾಲೆಗೆ ಅರ್ಧದಿನದ ಮಟ್ಟಿಗೆ ರಜೆ ಕೊಡಲಾಗಿದ್ದಿತು. ಆ ಕಾರಣದಿಂದ ಬೆಳಗಿನ ಕ್ಲಾಸಿಗೆ ಹೋಗಿದ್ದ ನಟರಾಜ. ಅನಂತನಿಗೆ ಹದಿನೈದು ದಿನದಿಂದ ಮಲೇರಿಯಾ ಜ್ವರ ಬರುತ್ತಿದ್ದು ಈಗೆರಡು ದಿನದಿಂದ ಬಿಟ್ಟಿತ್ತು. ಆದರೆ ಅವನಿಗಿನ್ನೂ ನಿಶ್ಶಕ್ತಿಯಿದ್ದುದರಿಂದ ಆತ ನಟರಾಜನೊಡನೆ ಶಾಲೆಗೆ ಹೋಗದೆ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದ. ನಂಜುಂಡಸ್ವಾಮಿ ಯಥಾಪ್ರಕಾರ ತನ್ನ ಕೆಲಸಕ್ಕೆ ತೆರಳಿದ್ದ.

ಆ ರಾತ್ರಿ ನಂಜುಂಡಸ್ವಾಮಿ ಮನೆಗೆ ಬಂದೊಡನೆಯೇ ನಾಗಜ್ಜಿ, ಮಂಗಳೆಯರನ್ನು ನೋಡಿ ಅವನಿಗೆ ಅತ್ಯಂತ ಸಂತೋಷವಾದರೂ, ಪಾರ್ವತಮ್ಮ ಬಾರದಿದ್ದುದಕ್ಕೆ ತುಂಬಾ ವಿಷಾದಪಟ್ಟುಕೊಂಡನಾತ.

ನಾಗಜ್ಜಿ ತಾನು ಬೇಗ ಬರಬೇಕಾಗಿ ಬಂದುದರ ಕಾರಣವನ್ನು ತಿಳಿಸಿದಳು. ನಂಜುಂಡಸ್ವಾಮಿ ಅದನ್ನು ಕೇಳಿ ಕೂಡಲೇ ಸಂತೋಷದಿಂದ ಹೇಳಿದ :

"ಅದಕ್ಕೇನು ಅಜ್ಜಿ. ಈವೊತ್ತು ಹೇಗಿದ್ದರೂ ಬುಧವಾರ. ನಾಳೆಯಲ್ಲ ನಾಡಿದ್ದು ಶುಕ್ರವಾರ. ನಾಡಿದ್ದು ಬೆಳಿಗ್ಗೆಯೇ ಹೋಗಿಬಿಡೋಣ ಚಾಮುಂಡಿ ತಾಯಿ ದರ್ಶನಕ್ಕೆ... ನಾನೂ ಒಂದು ದಿನದ ಮಟ್ಟಿಗೆ ರಜಾ ಬರೆದು ಹಾಕಿ ಬಿಡ್ತೀನಿ".

ಶುಕ್ರವಾರ ಪ್ರಾತಃಕಾಲ ಎಲ್ಲರೂ ಬೇಗ ಬೇಗ ಎದ್ದು ಸ್ನಾನಮಾಡಿ ಮಡಿಯುಟ್ಟು ಸಿದ್ಧರಾದರು. ಯಶೋದಮ್ಮ ಮಾತ್ರ ಅನಂತನೊಬ್ಬನೇ ಬೇಸರಪಡುವನೆಂದು ತಾನೂ ಅವನ ಜೊತೆಗೇ ಮನೆಯಲ್ಲೇ ಉಳಿದುಕೊಳ್ಳಲು ನಿರ್ಧರಿಸಿದಳು.

"ಈ ಕಂದನ್ನೊಂದನ್ನೇ ಮನೇಲಿ ಬುಟ್ಟು ಹೇಗಜ್ಜೀ ನಾನು ಬಂದು ಬುಡಲೀ...?" ಎಂದು ಅವಳು ಕೇಳಿದಾಗ ಆ ಮಾತನ್ನು ನಾಗಜ್ಜಿಯೂ, ನಂಜುಂಡಸ್ವಾಮಿಯೂ ಒಪ್ಪಿಕೊಂಡರು.

ನಂಜುಂಡಸ್ವಾಮಿ, ನಾಗಜ್ಜಿ, ನಟರಾಜ, ಮಂಗಳೆಯರ ಜೊತೆಗೆ ಆದಿಲಕ್ಷ್ಮಿ, ಅವಳ ಪತಿ ಚೆನ್ನಸ್ವಾಮಿ ಮತ್ತು ವಿಶಾಲಿ ಸಹ ಹೊರಟಿದ್ದರು.

ಎಲ್ಲರೂ ನಡೆದುಕೊಂಡೇ ಹೊರಟರು.

ಅರ್ಧ ಮುಕ್ಕಾಲು ಗಂಟೆಯಲ್ಲಿ ಚಾಮುಂಡಿ ಬೆಟ್ಟದ ಬುಡವನ್ನು ಸೇರಿದರು. ಅಲ್ಲಿ ಎಲ್ಲರೂ ಚಾಮುಂಡೇಶ್ವರಿ ಅಮ್ಮನವರ ಪಾದವನ್ನು 'ಸಣ್ಣ ಮಾಡಿ'ಕೊಂಡು ಹಂತ ಹತ್ತಲು ಆರಂಭಿಸಿದರು.

ಮೊದಮೊದಲು ಎಲ್ಲರೂ ಹೆಚ್ಚು ಕಡಿಮೆ ಒಟ್ಟಾಗೇ ಮೆಟ್ಟಲುಗಳನ್ನು ಹತ್ತುತ್ತಿದ್ದರು. ಕೆಲವು ಮೆಟ್ಟಲುಗಳನ್ನು ಹತ್ತುವುದರಲ್ಲೇ ತಾರುಣ್ಯದ ಉತ್ಸಾಹವಿದ್ದ ನಟರಾಜ, ಮಂಗಳೆ, ವಿಶಾಲಿಯರ ಸಮಕೂಡಿ ಸಾಗುವುದು ಇತರರಿಗೆ ದುಸ್ಸಾಧ್ಯವಾಯಿತು. ಸುಮಾರು ಐವತ್ತು ಹಂತಗಳವರೆಗೂ ಜೊತೆಯಲ್ಲೇ ಬಂದವರು, ಅಮೇಲೆ ವಿಧಿಯಿಲ್ಲದೆ ದುಸದುಸನೆ ಏದುತ್ತಾ ಹಿಂದಾಗಬೇಕಾಯಿತು.

ಹುಡುಗರು ಇನ್ನೂ ಇಪ್ಪತ್ತು ಮೂವತ್ತು ಹಂತಗಳನ್ನು ಉಲ್ಲಾಸದಿಂದ ಏರಿ ಹೋದಂತೆ ವಿಶಾಲಿಗೇಕೋ ಅಸೂಯೆಯಾದಂತಾಯಿತು. ಮುಂದೆ ನಟರಾಜ ಮಂಗಳೆಯರೊಡನೆ ಕೂಡಿ ಸಾಗುವುದು ಅವಳಿಗೆ ಸಹಿಸದೆ ಹೋಯಿತು. ಮೆಲ್ಲಮೆಲ್ಲನೆ ತನ್ನ ವೇಗವನ್ನು ಕಡಿಮೆ ಮಾಡಿ ಹಿಂದಾದಳು. ನಟರಾಜ ಮಂಗಳೆಯರಿಬ್ಬರೇ ಭರದಿಂದ ಮುಂದೆ ನಡೆದರು.

ಇನ್ನೂ ಸೂರ್ಯೋದಯವಾಗಿರಲಿಲ್ಲ. ಚಾಮುಂಡಿ ಬೆಟ್ಟದ ಒಡಲನ್ನೆಲ್ಲಾ ದಟ್ಟವಾದ ಬೆಳ್ಳಿ ಮಂಜು ಅಪ್ಪಿಕೊಂಡಿತು. ಐದಾರು ಹಂತದಾಚೆ ಏನೊಂದೂ ಕಾಣುತ್ತಿರಲಿಲ್ಲ. ಆದರೂ ನಟರಾಜ ಮಂಗಳೆಯರು ಮೆಟ್ಟಲುಗಳನ್ನು ಬೇಗ ಬೇಗನೆ ಏರುತ್ತಿದ್ದರು. ಆ ಮೈ ಕೊರೆಯುವ ಚಳಿಯೇ ಅವರನ್ನು ಮೇಲೆ ಮೇಲೆ ಹತ್ತಿಸುತ್ತಿತ್ತು. ಹಾಗೆ ಅವರಿಬ್ಬರೂ ಹತ್ತುತ್ತಾ ಹೋದಂತೆ ಅವರ ಮೈ ರಕ್ತವೂ ಕಾವೇರಿ ಬಿಸಿಬಿಸಿಯಾಗಿ ಧಮನಿಗಳಲ್ಲಿ ದುಮುದುಮಿಸಿ ಪ್ರವಹಿಸತೊಡಗಿತು.

ಸುಮಾರು ಮುನ್ನೂರು ನಾನ್ನೂರು ಮೆಟ್ಟಲುಗಳನ್ನು ಓಟದ ನಡಿಗೆಯಲ್ಲಿಯೇ ಏರಿಹೋದಂತೆ ಈರ್ವರಿಗೂ ಸಾಕಾದಂತಾಗಿ, ನಿಂತು ಸುಧಾರಿಸಿಕೊಳ್ಳುತ್ತಾ ಹಿಂದಿರುಗಿ ನೋಡಿದರು. ಮನೆಯವರಾರೂ ಕಣ್ಣಿಗೆ ಬೀಳಲಿಲ್ಲ. ಜೊತೆಗೆ ಬರುತ್ತಿದ್ದ ವಿಶಾಲಿಯೂ

ಸಮೀಪದಲ್ಲೆಲ್ಲೂ ಕಣ್ಣಿಗೆ ಬೀಳಲಿಲ್ಲ. ಅವಳು ತಮ್ಮ ಜೋಡಿ ನಡೆದುಬರುತ್ತಿಲ್ಲವೆನ್ನುವ ವಿಷಯ ಇದೀಗ ಅವರಿಗೆ ವಿದಿತವಾದಂತಾಯಿತು.

ಕೆಲವರು ಭಕ್ತಾದಿಗಳು ಅವರ ಪಕ್ಕದಲ್ಲೇ ಹತ್ತಿಕೊಂಡು ಹೋದರು. ಅವರನ್ನು ಅಷ್ಟಾಗಿ ಗಮನಿಸದೆ, ಆ ಮಂಜಿನ ಜಗತ್ತನ್ನೇ ಇಬ್ಬರೂ ವಿಸ್ಮಯದಿಂದ ಮುಗ್ಧರಾಗಿ ನಿಟ್ಟಿಸುತ್ತ ನಿಂತರು...

ಅತ್ತ, ಇತ್ತ, ಎತ್ತೆತ್ತ ತಿರುಗಿದರೂ ಮಂಜು !– ರಾಶಿ ರಾಶಿ ಮಂಜು ! ಶ್ವೇತವರ್ಣದ ಉಣ್ಣೆ ಮುಗಿಲುಗಳು ನಭೋಮಂಡಲದ ವಿಸ್ತಾರವನ್ನೆಲ್ಲಾ ಹರಡಿ ತುಂಬುವಂತೆ, ಆ ಬೆಟ್ಟದ ಸುತ್ತಮುತ್ತಿನ ವಿಶಾಲ ಪ್ರದೇಶವನ್ನೆಲ್ಲಾ ಆವರಿಸಿ, ಆಕ್ರಮಿಸಿಕೊಂಡಿತ್ತು ಆ ಹಿಮರಾಶಿ. ಮೋಡದೊಳಗೆ ಮೋಡ ನುಸಿದು ಹೋಗುವಂತೆ ಮಂಜಿನೊಳಗೆ ಮಂಜು ನುಸಿದು ಹೋಗುತ್ತಿತ್ತು. ಮದ್ಯಪಾನದ ಮತ್ತಿನಲ್ಲಿ ತೂರಾಡುವ ಕುಡುಕನಂತೆ ಆ ಹಿಮರಾಶಿ ತತ್ತರಿಸಿ, ಉರುಳುತ್ತಿತ್ತು...

ಮೂಕರಾಗಿ ಇಬ್ಬರೂ ಆ ಹಿಮದ ಚಲನೆಯ ವೈಭವವನ್ನೇ ದಿಟ್ಟಿಸುತ್ತಿರುವಾಗ ಸೂರ್ಯೋದಯವಾಯಿತು. ಸೂರ್ಯದೇವನ ಬೆಳ್ಳಿ ಕಿರಣಗಳು ಮಿಂಚಿನ ಬಾಣಗಳಂತೆ ಆ ಹಿಮದ ಕೋಟೆಯನ್ನು ಭೇದಿಸಿ ತೂರಿ ತೂರಿ ಬಂದವು. ಆ ಮಂದವಾದ ಬೆಳಕಿನಲ್ಲಿ ಅಲ್ಲೊಂದು ಇಲ್ಲೊಂದು ಕುರುಚಲು ಗಿಡ, ಅಲ್ಲೊಂದು ಇಲ್ಲೊಂದು ಮರ, ಅಲ್ಲೊಂದು ಇಲ್ಲೊಂದು ಬಂಡೆ ಹಠತ್ತಾನೆ ಧರಣಿಯಿಂದೆದ್ದು ಕಾಣಿಸಿಕೊಂಡ ಪ್ರೇತಗಳಂತೆ ವಿಕಾರವಾಗಿ ಎದ್ದು ನಿಂತವು. ಆದರೆ ಆ ವಿಕಾರದಲ್ಲೂ ಯಾವುದೊ ವರ್ಣಿಸಲಾಗದ ಭಯಂಕರ ಸೌಂದರ್ಯ ಸುಪ್ತವಾದಂತಿದ್ದಿತು.

ನಡುಬೆಟ್ಟದಲ್ಲಿ ನಿಂತ ಅವರ ನೋಟ, ಬೆಟ್ಟದ ಬುಡದಲ್ಲಿ, ಎದುರಿಗೇ ಮಲಗಿದ ಮೈಸೂರು ನಗರದೆಡೆಗೆ ಹರಿಯಿತು. ಆದರೆ ತೆರೆ ಹೊದಿಸಿದಂತೆ ಆ ನಗರವನ್ನೆಲ್ಲಾ ಇನ್ನೂ ಮಂಜು ಮುತ್ತಿಕೊಂಡಿತ್ತು...

ಅದನ್ನೇ ನಿಟ್ಟಿಸುತ್ತಿದ್ದಂತೆ, "ನೋಡು ಮಂಗಲೀ... ಇದನ್ನು ನೋಡಿದರೆ ಮೈಸೂರು ಪಟ್ಟಣದ ರಕ್ಷಣೆ ಭಾರಾನ ಹೊತ್ತಂಥಾ ಚಾಮುಂಡೇಶ್ವರಿ ತನ್ನ ಸೀರೆಯ ಬೆಳ್ಳಿ ಸೆರಗನ್ನು ಈ ಪಟ್ಟಣದ ಮೇಲೆ ವಾತ್ಸಲ್ಯದಿಂದ ಹೊದಿಸಿರೊ ಹಾಗಿದೆ" ಎಂದು ನುಡಿದ ನಟರಾಜ.

ನಿಸರ್ಗದ ಚೆಲುವಿನ ಎಲ್ಲೋ ಒಂದಂಶದ ಅನುಭವವಾದ ಆ ತರುಣ ತರುಣಿಯರ ಹೃದಯಗಳನ್ನು ಯಾವುದೊ ಅದೃಶ್ಯ ಹಸ್ತ ಸೆಳೆದು ಒಂದುಗೂಡಿಸಿದಂತಾಗಿತ್ತು... ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಂಡರು. ದೃಷ್ಟಿಗೆ ದೃಷ್ಟಿ ಬೆರೆಯಿತು. ಇಬ್ಬರ ನೋಟದಲ್ಲೂ

ಅನಂತವಾದ ಉಲ್ಲಾಸ ನಲಿಯುತ್ತಿತ್ತು. ಇದ್ದಕ್ಕಿದ್ದಂತೆ ಮಂಗಳೆಯ ತುಟಿಗಳಿಂದ ಕಿಲಕ್ಕನೆ ನಗು ಹೊರಬಂದು ಹತ್ತಿರವಿದ್ದ ಮಂಜನ್ನು ಶಾಖಗೊಳಿಸಲು ಯತ್ನಿಸಿತು. ತಾನು ಏಕೆ ಹಾಗೆ ನಕ್ಕೆ, ಎನ್ನುವುದರ ಕಾರಣ ಮಂಗಳೆಗೇ ತಿಳಿಯದು.. ತಾರುಣ್ಯವೇ ಹಾಗೆ! ಆ ಕಾರಣ ನಗು ಅವರ ಬೆನ್ನಿಗೆ ಅಂಟಿಬಂದುದು...

ಆ ಬೆಟ್ಟದ ಪ್ರಭಾತ ಪೂರ್ವದ ಮಹಾಮೌನ ಇದೀಗ ಮಾಯವಾಗಿ ನೂರಾರು ಬಗೆಯ ಹಕ್ಕಿಗಳು ಹಿತವಾಗಿ ರವಗೈಯುತ್ತಿದ್ದವು.

ಮಂಗಳೆಯನ್ನೇ ಹುಡುಕು ನೋಟದಲ್ಲಿ ನಿಟ್ಟಿಸುತ್ತಿದ್ದಂತೆ ನಟರಾಜನ ದೃಷ್ಟಿಗೆ ಹೊಸದಾಗಿ ಕಂಗೊಳಿಸಿದಳು ಮಂಗಳೆ...

ಹಂತವೊಂದರ ಕೊನೆಯಲ್ಲಿ ಪಕ್ಕದ ಪುಟ್ಟ ಬಂಡೆಯೊಂದರ ಮೇಲೆ ಕಾಲಿಟ್ಟು ನಿಂತಿದ್ದಳವಳು. ಅವಳ ಮಸ್ತಕದ ಮೇಲೆ ಸಣ್ಣ ಸಣ್ಣ ಹಿಮಮಣಿಗಳು ಒಂದರ ಪಕ್ಕದಲ್ಲೊಂದು, ಜೋಡಿಸಿಟ್ಟಂತೆ, ಚೇತೋಹಾರಿಯಾಗಿ ಚಿತ್ತಾರ ಬಿಡಿಸಿದ್ದವು. ಅವುಗಳ ಮೇಲೆ ಮೆಲ್ಲನೆ ಹರಡಿದ ಎಳೆಬಿಸಿಲಿನ ಕೆಂಪು ಆ ಮಣಿಮುತ್ತುಗಳಿಗೆ ವೈಖರಿಯಿಂದ ಮಾಣಿಕ್ಯದ ಲೇಪ ಬಳಿದಿತ್ತು. ಅರೆ ತೆರದ ಅವಳ ಪುಟ್ಟಬಾಯಿಗೆ ಬೆಟ್ಟವೇರುವ ಕ್ರಿಯಾವಿಶೇಷ, ರಕ್ತರಾಗವನ್ನು ಮೂಡಿಸಿತ್ತು. ಅವಳ ಸುಂದರ ನಯನಗಳು ವಿಶಾಲವಾಗಿ ಅರಳಿ, ಮಂಗಳೆಯ ತುಂಬಿದ ಹೃದಯವನ್ನು ಪ್ರತಿಬಿಂಬಿಸುತ್ತಿದ್ದವು... ಅದೇ ಹೊತ್ತಾರೆ ಮಿಂದು ತಲೆಗೂದಲಿಗೆ ಎಣ್ಣೆ ಸೋಕಿಸದಿದ್ದ ಕಾರಣ, ಹಣೆಯ ಮುಂಗಡೆಗೆ ಸುರುಳಿ ಸುರುಳಿಯಾದ ಕೂದಲು, ತಣ್ಣನೆಯ ಬೆಳಗಿನ ಗಾಳಿಯಲ್ಲಿ, ನಟರಾಜನ ಹೃದಯದೊಳಗೆ ಆಸೆಯ ಅಲೆಗಳನ್ನು ಎಬ್ಬಿಸುತ್ತಾ ಹಾರಾಡಿತ್ತು...

ಆ ಬೆಟ್ಟದ ನಡುವಣ ಹಿಮ ಪ್ರಭಾತದ ಚೌಕಟ್ಟಿನಲ್ಲಿ ಲಾವಣ್ಯಮಯಿಯಾದ ವನದೇವತೆಯಂತೆ ಬೆಳಗುತ್ತಿದ್ದಳು ಮಂಗಳೆ.

ಅವಳನ್ನೇ ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದ ನಟರಾಜ, "ನೀನು ಬಹಳ ಚೆಲುವೆ ಮಂಗಲೀ" ಎಂದು ಹೇಳಿದ ಇದ್ದಕ್ಕಿದ್ದಂತೆಯೇ !

ಅನಿರೀಕ್ಷಿತವಾಗಿ ನಟರಾಜನ ಬಾಯಿಯಿಂದ ಹೊರಟ ಈ ಉದ್ಗಾರವನ್ನು ಕೇಳಿ ಮಂಗಳೆಗೆ ಅಪೂರ್ವ ಸುಖವುಂಡಂತಾಯಿತು. ಆದರೆ ಆ ಸಂತಸದ ಕೈಹಿಡಿದು ನಾಚಿಕೆಯೂ ಅವಳ ಹೃದಯದೊಳನುಗ್ಗಿತ್ತು...

ಅದರಿಂದಲೇ ಏನೋ, ಅವಳ ಮುಖದಲ್ಲಿ ಒಂದು ಗಳಿಗೆ ಸಂತಸದ ಮಂದಹಾಸ ಮಿನುಗಿದರೂ ಮರುಕ್ಷಣವೇ ಅದು ಮಾಯವಾಗಿ ಅದರ ಸ್ಥಳದಲ್ಲಿ ಎಲ್ಲೂ ಇಲ್ಲದ

ನಾಚಿಕೆ ತಾಂಡವವಾಡಿತು... ನಟರಾಜನ ದೃಷ್ಟಿಗೆ ದೃಷ್ಟಿ ಕೂಡಿಸಿ ನೋಡಲು ಧೈರ್ಯ ಸಾಲದಾಯಿತು ಮಂಗಳೆಗೆ! – ಕಡೆಗೆ ಅವನ ಹತ್ತಿರ, ಅವನ ಪಕ್ಕದಲ್ಲಿ ನಿಲ್ಲುವುದು ಕೂಡ ವಿಚಿತ್ರ ಹಿಂಸೆಯಾಗಿ ಪರಿಣಮಿಸಿತು.

ಆ ಪರಿಸ್ಥಿತಿಯಿಂದ ಹೇಗಾದರೂ ಪಾರಾಗಲು ಹವಣಿಸಿದಳು ಮಂಗಳೆ. ಅವಳಿಗಿದ್ದುದು ಒಂದೇ ಉಪಾಯ. ಅಲ್ಲಿಂದ ಕಾಲು ಕೀಳುವುದು. ಅದರಂತೆ ಬೇಗ ಬೇಗ ಹಂತ ಹತ್ತಲುಪಕ್ರಮಿಸಿದಳು ಮಂಗಳೆ...

ಆದರೆ ಅವಳು ಹಾಗೆ ಆತುರಾತುರವಾಗಿ ಮೆಟ್ಟಲುಗಳನ್ನು ಏರಿಹೋಗುತ್ತಿರುವಾಗ ಅವಳ ವಿಚಲವಾದ ಚಿತ್ತ ಹಿತವಾದ ನಟರಾಜನ ಮಾತುಗಳನ್ನು ಬಿಡಿಸಿ ಬಿಡಿಸಿ ತನಗೆ ತಾನೇ ಹೇಳಿಕೊಂಡು ಆ ಮಾತುಗಳ ಮಾಧುರ್ಯವನ್ನು ಸವಿಯುತ್ತಿತ್ತು.

ದೃಷ್ಟಿಗೆ ಸೂತ್ರಧಾರಿಯಾದ ಚಿತ್ತ ಹೀಗೆ ತನ್ನ ಕಾರ್ಯವನ್ನು ತಾತ್ಕಾಲಿಕವಾಗಿ ಮರೆತು ಕನಸಿನ ವಿಶ್ವದಲ್ಲಿ ವಿಹರಿಸುತ್ತಿರುವಾಗ, ದೃಷ್ಟಿಯ ನೆರವು ತಪ್ಪಿಹೋಗಿ ಕಾಲು ಎಡವಿತು.

ಗಾಯವಾಗದಿದ್ದರೂ ನೋವಾಗಿ ಮಂಗಳೆಯ ಚಿತ್ತ ತನ್ನ ಕ್ರಿಯಾ ಭ್ರಷ್ಟತೆಗೆ ಸಂಕಟಪಟ್ಟಿತು.

ಅಷ್ಟರಲ್ಲಿ ಪೆಟ್ಟು ತಗುಲಿ ಕೆಳಗೆ ಬಿದ್ದುದನ್ನು ನಿರೀಕ್ಷಿಸಿದ ನಟರಾಜ ಓಡಿಬಂದು ಅವಳನ್ನು ಎತ್ತಿಹಿಡಿದ. ನಿಲ್ಲಲಾರದೆ ಒಂದು ಗಳಿಗೆ ತತ್ತರಿಸಿದ ಅವಳ ದೇಹವನ್ನು ತನ್ನ ಬಲ ತೋಳಿನಿಂದ ಹಿಡಿದು ತನ್ನ ವಕ್ಷಃಸ್ಥಲದ ವಿಸ್ತಾರಕ್ಕೆ ಒರಗಿಸಿಕೊಂಡ.

ಇದೆಲ್ಲ ಮಿಂಚು ಬಂದು ಹೋಗುವ ಹೊತ್ತಿನಲ್ಲಿ ನಡೆದುಹೋಗಿತ್ತು. ಮಂಗಳೆಗಾಗಲಿ, ನಟರಾಜನಿಗಾಗಲಿ ತಾವು ಏನು ಮಾಡುತ್ತಿರುವೆವೆಂಬ ಪ್ರಜ್ಞೆಯೇ ಆ ಗಳಿಗೆಗೆ ಇರಲಿಲ್ಲ.

ಉಬ್ಬಿ ಇಳಿಯುತ್ತಿದ್ದ ಎದೆ, ನಟರಾಜನ ಎದೆಯನ್ನು ಆಶ್ರಯಿಸಿ ಮಂಗಳೆಯ ಆಂತರ್ಯವನ್ನೆಲ್ಲಾ ಬಯಲಿಗೆ ಎಳೆಯುತ್ತಿತ್ತು.

ಒಂದು ಗಳಿಗೆ – ಒಂದು ಸಂವತ್ಸರ – ಒಂದು ಯುಗ ಆ ಅಲ್ಪ ಕಾಲಾವಕಾಶದಲ್ಲಿ ಉರುಳಿ ಹೋದಂತಾಯಿತು.

ಮುಂದೆ ಒಂದೆರಡು ಗಳಿಗೆಯಲ್ಲಿ ಮಂಗಳೆಗೆ ಬಾಹ್ಯ ಜಗತ್ತಿನ ಪ್ರಜ್ಞೆ ಮರಳಿತು. ಸರಕ್ಕನೆ ಕೈ ಬಿಡಿಸಿಕೊಂಡು ದೂರ ಹೋಗಿ ಹಂತದ ಮೇಲೆ ಕುಳಿತುಕೊಂಡಳು.

ಯಾವುದೋ ಮಧುರ ಸ್ವಪ್ನದಿಂದೆಚ್ಚೆತ್ತವನಂತೆ ಅವಳನ್ನು ನಾಚಿ ನಾಚಿ ನೋಡುತ್ತಾ ನಟರಾಜ ಕೇಳಿದ :

"ಪೆಟ್ಟಾಯಿತೇ ಮಂಗಲೀ..?"

ಕಾಲನ್ನೇ ನೋಡಿ, ಸವರಿಕೊಳ್ಳುತ್ತಾ, "ಇ–ಲ್ಲ..." ಎಂದಳು ಮಂಗಳೆ.

ಅಷ್ಟಕ್ಕೆ ಮಾತು ನಿಂತಿತು. ಮತ್ತೆ ಉಳಿದವರು ಅವರಿಬ್ಬರನ್ನೂ ಬಂದು ಕೂಡುವವರೆಗೆ– ಏಕೆ, ಬೆಟ್ಟದಿಂದ ಹಿಂತಿರುಗಿ ಮನೆ ಸೇರಿದ ಮೇಲೂ–ಆ ದಿನವೆಲ್ಲ ಮಾತು ನಾಚಿಕೊಂಡು ಅವರಿಬ್ಬರ ನಡುವೆ ಸುಳಿಯುವ ಸಾಹಸ ಮಾಡಲಿಲ್ಲ.

ಅವರನ್ನು ಮೊದಲು ಬಂದು ಕೂಡಿದವಳು ವಿಶಾಲಿ.

"ಯಾಕೇ ವಿಶಾಲಿ, ಹಿಂದೆ ಬಿದ್ದುಬಿಟ್ಟೆ...?" ಎಂದು ಅವಳನ್ನು ಕೇಳಿದ ನಟರಾಜ. ಸದ್ಯ, ಅವನಿಗೆ ಯಾರೊಡನೆಯಾದರೂ ಮಾತಾಡುವುದು ಬೇಕಾಗಿತ್ತು. ಅದಕ್ಕೆ ತಕ್ಕಂತೆ ವಿಶಾಲಿ ಬಂದದ್ದು ಅವನಿಗೆ ಸಹಾಯವಾದಂತಾಯಿತು.

"ಮತ್ತೆ ನೀವಿಬ್ಬರೂ ಒಳ್ಳೆ ಕಡಿವಾಣ ಇಲ್ಲದ ಕುದುರೆಗಳ ಹಾಗೆ ಓಡ್ತಾ ಇದ್ದೀರಿ ?" ಎಂದು ಕುಹಕದಿಂದ ಮಂಗಳೆಯನ್ನು ನೋಡಿ "ಗಂಡಸಿನ ಸಮ ಹರಾಮಿ ಹಾಗೆ ಓಡೋದಕ್ಕೆ ನನ್ನ ಕೈಲಿ ಆಗೋದಿಲ್ಲಪ್ಪಾ" ಎಂದು ಬಿರುಸಿನಿಂದ ನುಡಿದಳು ವಿಶಾಲಿ.

"ನಿನಗೆ ಅವಕಾಶ ಸಿಕ್ಕಿಬಿಟ್ಟರೆ ಮಣ್ಯಾತ್ತಿಗಿತ್ತಿ, ನಿನ್ನ ಸಮ ಯಾರು ನಿಲ್ಲುತ್ತಾರೆ ?... ಸುಮ್ಮನಿರು" ಎಂದು ಸಿಡುಕಿ ಅವಳ ಬಾಯಿ ಮುಚ್ಚಿಸಿದ.

ಅಷ್ಟರಲ್ಲಿ ಒಬ್ಬಿಬ್ಬರಾಗಿ ಹಿಂದುಳಿದವರೆಲ್ಲರೂ ಆ ಜಾಗಕ್ಕೆ ಬಂದು ಸೇರಿದರು.

ಎಲ್ಲರಿಗೂ ಕಡೆಯಲ್ಲಿ ನಾಗಜ್ಜಿಯೊಡನೆ ಹರಟುತ್ತಾ ನಿಧಾನವಾಗಿ ಹತ್ತಿ ಬಂದ ನಂಜುಂಡಸ್ವಾಮಿ ನಟರಾಜ, ಮಂಗಲೆ, ವಿಶಾಲಿಯರನ್ನು ನೋಡಿ ನಗುತ್ತಾ, "ಚೆಂದಾಯ್ತು, ನೀವಿನ್ನೂ ಇಲ್ಲೇ ಇದೀರಾ ? ಮೊಲ, ಆಮೆ ಕಥೆ ಆಯ್ತು..." ಎಂದು ಹೇಳಿದ.

ಎಲ್ಲರೂ ನಕ್ಕರು.

ಮುಂದೆ ಅವರೆಲ್ಲರೂ ಬಸವನ ಬಳಿಗೆ ಬರುವಷ್ಟರಲ್ಲಿ ಬಿಸಿಲು ಪ್ರಖರವಾಗಿ ಮಂಜು ಕರಗುವುದರಲ್ಲಿತ್ತು.

ಅವರೆಲ್ಲ ದೇವಸ್ಥಾನವನ್ನು ತಲುಪುವ ವೇಳೆಗೆ ಚಾಮುಂಡೇಶ್ವರಿ ಅಮ್ಮನವರಿಗೆ ಅಭಿಷೇಕ, ಅಲಂಕಾರಗಳೆಲ್ಲ ಮುಗಿದಿದ್ದವು.

ನೈವೇದ್ಯವನ್ನು ತಾಯಿಗೆ ಅರ್ಪಿಸಿ, ಮಂಗಳಾರತಿ ಮಾಡಿ, ಅರ್ಚಕರು ತೀರ್ಥ ಪ್ರಸಾದಗಳನ್ನು ಎಲ್ಲರಿಗೂ ವಿನಿಯೋಗಿಸಿದರು.

ನೆರೆದ ಭಕ್ತಾದಿಗಳ ಸ್ತೋಮದಲ್ಲಿ ನೂತನ ದಂಪತಿಗಳಿಬ್ಬರು ಬಂದು ನಿಂತು ಪ್ರಸಾದ ಸ್ವೀಕಾರ ಮಾಡುತ್ತಿದ್ದರು. ಆ ದಂಪತಿಗಳನ್ನೂ ನಟರಾಜ–ಮಂಗಳೆಯರನ್ನೂ ಆದಿಲಕ್ಷ್ಮಿಗೆ ಚುಚ್ಚಿ ತೋರುತ್ತಾ ನಾಗಜ್ಜಿ ಹುಸಿ ನಗೆ ನಗುತ್ತಿದ್ದುದು ನಟರಾಜ–ಮಂಗಳೆಯರ ದೃಷ್ಟಿಗೂ ಬಿದ್ದಿತು. ಅವರಿಬ್ಬರೂ ಅರ್ಥಪೂರ್ಣವಾಗಿ ಒಬ್ಬರನ್ನೊಬ್ಬರು ನೋಡಿಕೊಂಡರು.

ಬೆಟ್ಟದಿಂದ ಹಿಂದಿರುಗಿದ ಮೇಲೆ ಆ ದಿನವೆಲ್ಲಾ ಮಂಗಳೆಯೂ, ನಟರಾಜನೂ ಮತ್ತೆ ಅಪರಿಚಿತರಂತೆ ವರ್ತಿಸಿದರು. ಕಣ್ಣುಗಳು ಪರಸ್ಪರ ಸಂಧಿಸಿದಾಗ ಮಾತ್ರ ಅವರಿಬ್ಬರ ಕಳ್ಳ ಹೃದಯಗಳನ್ನು ಬೀದಿಗೆಳೆಯುತ್ತಿದ್ದವು.

ಆ ರಾತ್ರಿ ಮಲಗಿಕೊಂಡಾಗ ಅವರಿಬ್ಬರ ಕಣ್ಣಿಗೆ ನಿದ್ದೆ ಹತ್ತಲು ಬಹುಕಾಲ ಹಿಡಿಯಿತು.

೧೮

"ಗರಂ ಗರಂ ಗಂಜಾಂ ಪುರಿ... ಬಿಸಿ ಬಿಸಿ ಕಡಲೆ ಪುರಿ."

–ತಲೆಯ ಮೇಲೆ ಹೆಡಿಗೆ ಹೊತ್ತು, ಮಾರನೆಯ ಸಂಜೆ, ಮನೆಯ ಮುಂದೆ ಕೂಗುತ್ತಾ ಹೋಗುತ್ತಿದ್ದ ಪುರಿ ಮಾರುವವನು.

ಅವನ ಕೂಗನ್ನಾಲಿಸಿ ಅನಂತನ ಜ್ವರ ಬಿಟ್ಟ ಬಾಯಿ ಪರ ಪರ ಎಂದಿತು. ತನಗೆ ಪುರಿ ಬೇಕೆಂದು ಯಶೋದಮ್ಮನನ್ನು ಕೇಳಿಕೊಂಡ. ಮನೆಗೆ ನೆಂಟರು ಬಂದಿರುವುದನ್ನೂ ಗಮನಿಸಿ ಯಶೋದಮ್ಮ ಎಲ್ಲರಿಗೂ ಆಗಲೆಂದು ಪುರಿಯವನನ್ನು ಕರೆದು ಹೆಚ್ಚಾಗೇ ಪುರಿಯನ್ನು ಕೊಂಡಳು. ಅನಂತರ ಅದನ್ನು ಅನಂತನಿಗೊಬ್ಬನಿಗಲ್ಲದೆ ಎಲ್ಲರಿಗೂ ಹಂಚಿದಳು.

ನಟರಾಜ ಆಗ ಮನೆಯಲ್ಲಿರಲಿಲ್ಲ. ಶಾಲೆಗೆ ಹೋಗಿದ್ದ. ಅವನ ಪಾಲನ್ನೂ ಯಶೋದಮ್ಮ ಬೇಕೆಂದು ಕುಚೇಷ್ಟೆಗಾಗಿ ಮಂಗಳೆಯ ಕೈಗೇ ಕೊಟ್ಟಳು. ಅದನ್ನು ತೆಗೆದುಕೊಡು ಹೋಗಿ ಮಂಗಳೆ ಅನಂತ–ನಟರಾಜನ ಕೋಣೆಯ ಮೇಜಿನ ಮೇಲೆ ಸುರಿದಳು. ತನ್ನ ಪಾಲಿನ ಪುರಿಯನ್ನು ಆ ಬಳಿಕ ಸೀರೆಯ ಮಡಿಲಿನಲ್ಲಿ ತುಂಬಿಕೊಂಡು ಪಕ್ಕದ ಕೋಣೆಗೆ ಹೋದಳು. ಅಲ್ಲಿ ಯಾರೂ ಇರಲಿಲ್ಲ. ಅಲ್ಲಿದ್ದ ಚಾಪೆಯೊಂದನ್ನು ಹಾಕಿಕೊಂಡು ತನ್ನ ಮಡಿಲಿನಲ್ಲಿದ್ದ ಪುರಿಯನ್ನೆಲ್ಲಾ ಅದರ ಮೇಲೆ ಸುರಿದು, ಪುರಿಯನ್ನು ತಿನ್ನುತ್ತಾ ಕುಳಿತಳು.

ಸ್ವಲ್ಪ ಸ್ವಲ್ಪವಾಗಿ ಪುರಿಯನ್ನು ತಿನ್ನುತ್ತಿದ್ದಂತೆ ಅವಳ ಮನಸ್ಸು ಹಿಂದಿನ ದಿನ ಚಾಮುಂಡಿ ಬೆಟ್ಟದಲ್ಲಾದ ಮಧುರ ಅನುಭವವನ್ನು ನೆನೆದು ಸಿಹಿ ಸಿಹಿಯಾಯಿತು.

ಹಾಗೇ ಅಲೋಚನೆಯಲ್ಲೇ ಅವಳು ತಲ್ಲೀನಳಾದಂತೆ ಮಂಗಳೆಯ ಎದೆ ಮತ್ತೆ ನಟರಾಜನ ವಕ್ಷಃಸ್ಥಲವನ್ನು ಸೋಕಿದಂತಾಗಿ ಅದು ಉದ್ವೇಗದಿಂದ ಒಂದೇ ಸಮನೆ

ರಭಸದಿಂದ ಬಡಿಯತೊಡಗಿತು... ಅವಳ ಆತ್ಮ ಮತ್ತೊಮ್ಮೆ ಅತಿಪ್ರಿಯವಾದ ಸುಖಸ್ನಾನ ಮಾಡಿದ ಅನುಭವವಾಯಿತು...

ಈ ಎಲ್ಲಾ ಸುಖದ, ಈ ಎಲ್ಲ ಸಂತೋಷದ ಪ್ರಭಾವ ಮಂಗಳೆಯ ಕೈಬೆರಳುಗಳು ಮಗ್ನವಾದ ಕಾರ್ಯದಲ್ಲಿ ಪರಿಪೂರ್ಣವಾಗಿ ಎದ್ದು ತೋರುತ್ತಿತ್ತು.

ಅವಳು ತನ್ಮಯಳಾದಂತೆ, ಅವಳ ಕೈ ಬೆರಳುಗಳು ಮೃದುವಾಗಿ, ವಿತರಣೆಯಿಂದ ಪುರಿಯ ಕಾಳುಗಳನ್ನು ಒಂದೊಂದಾಗಿ ಎತ್ತಿ ಜೋಡಿಸುತ್ತಿದ್ದವು... ನ–ಟ–ರಾ–

ಜ–ಎಂದು ಅವಳು ಜೋಡಿಸುವುದರಲ್ಲಿ ನಟರಾಜನೇ ಒಳಗೆಲ್ಲೋ ಇದ್ದ ಅನಂತನನ್ನು ಹುಡುಕಿಕೊಂಡು ಮಂಗಳೆಯಿದ್ದ ಕೋಣೆಯೊಳಗೆ ಪ್ರವೇಶಿಸಿಬಿಟ್ಟ!

ನಟರಾಜ ಬಂದ ಸುಳಿವು ಗೊತ್ತಾದ ಮಂಗಳೆ ನಾಚಿ ಹಿಡಿಯಾದಳು.

"ಅಲೆ! ಅಷ್ಟಕ್ಕೇ ನಿಲ್ಲಿಸಿಬಿಟ್ಟರೆ ಅಪಶಕುನ, ಪೂರ್ತಿ ಮಾಡಿಬಿಡು." ನಟರಾಜ ನಗೆಯಾಡಿದ.

ಮಂಗಳೆ ಇನ್ನೂ ನಾಚಿ, ಆ ಪುರಿಯ ಅಕ್ಷರಗಳನ್ನೆಲ್ಲಾ ತನ್ನ ಕೈಯಿಂದಲೇ ಚೆಲ್ಲಾಪಿಲ್ಲಿ ಮಾಡಿ, ಸರಸರನೆ ಎದ್ದು ಅಲ್ಲಿ ನಿಲ್ಲದೆ ಒಳಗೆ ಓಡಿದಳು.

೧೯

ಹೀಗೆ ಸಾಗಿದ ಮಂಗಳೆಯ ಪ್ರೇಮದ ಬಾಳಿನಲ್ಲೂ ಅಸೂಯೆ ತಲೆ ಹಾಕಿತು... ವಿಶಾಲಿ ಅತ್ಯಂತ ಚೆಲುವೆ ಎಂದು ಕರೆಯಲ್ಪಡದಿದ್ದರೂ ಕುರೂಪಿಯೆಂದು ಯಾರೂ ಹೇಳುವಂತಿರಲಿಲ್ಲ. ಕಣ್ಣುಗಳು ಕೊಂಚ ಚಿಕ್ಕವಾದರೂ ಅವುಗಳಲ್ಲಿ ವಿಶೇಷ ಜೀವ ತುಂಬಿತ್ತು. ಅವುಗಳ ಚಲನೆ ಸದಾ ಚುರುಕಾಗೇ ಇರುತ್ತಿತ್ತು. ಕೆಳಗಿನ ತುಟಿ ಮೇಲಿನದಕ್ಕಿಂತ ದಪ್ಪವಾಗಿ ಜೋತು ಅವಳ ಕಾಮಪ್ರಕೃತಿಯ ಸಂಕೇತವಾಗಿತ್ತು. ಅಷ್ಟೇನೂ ಎತ್ತರವಾಗಿ ಬೆಳೆಯದಿದ್ದರೂ ದೇಹ ಪುಷ್ಟವಾಗಿ ಬೆಳೆದಿತ್ತು. ಅವಳು ಮುಂಗುರುಳನ್ನು ಹಣೆಯ ಮೇಲೆ ಕೃತಕವಾಗಿ ಬಾಗಿಸುತ್ತಿದ್ದಳು. ಕಣ್ಣಿಗೆ ಕಾಡಿಗೆ ಬಳಿಯುತ್ತಿದ್ದಳು. 'ಉಗುರುಗಳಿಗೆ ಗೋರಂಟಿ' ಹಚ್ಚಿ ಅವುಗಳನ್ನು ಕೆಂಪಗೆ ಮಾಡಿಕೊಳ್ಳುತ್ತಿದ್ದಳು. ಅಲ್ಲದೆ ಯಾರೊಡನೆಯಾದರೂ ಸಂಭಾಷಿಸುವಾಗ – ಅದರಲ್ಲೂ ಯುವಕನೊಡನೆ ಸಂಭಾಷಿಸುವಾಗ ಕೆಳದುಟಿಯನ್ನು ದಂಷ್ಟ್ರಗಳಿಂದ ಕಡಿದುಕೊಳ್ಳುವ ಅಭ್ಯಾಸ ಮಾಡಿದ್ದಳು.

ತುಟಿ ಕೆಂಪಾಗಿ ಕಾಣಲೆಂದೊ, ಏನೊ! ಆ ಮುಖಕ್ಕಂತೂ ಒಂದೂ ಒಂದೂವರೆ ಅಂಗಲು ಪೌಡರ್ ಹಚ್ಚುತ್ತಿದ್ದಳು. ಮುಡಿಯಲು ಹೂ ಸಿಗದಿದ್ದಲ್ಲಿ ಅವಳು ಸಾಧಾರಣವಾಗಿ ತನ್ನ ಮನೆಯನ್ನು ಬಿಟ್ಟು ಹೊರಗೆ ಹೊರಟದ್ದೇ ಇಲ್ಲ!

ಇಂಥ ಹುಡುಗಿ ಪರೀಕ್ಷೆ ಹತ್ತಿರ ಬರುತ್ತಿರುವುದೆಂಬ ನೆಪದಿಂದ ನಟರಾಜನಿಂದ ಲೆಕ್ಕ ಹೇಳಿಸಿಕೊಳ್ಳಲು ಬರುತ್ತಿದ್ದುದು ಮಂಗಳೆಯ ಮುಗ್ಧ ಮನಸ್ಸಿಗೆ ಏಕೊ ಒಪ್ಪಲಿಲ್ಲ. ಅದರಲ್ಲೂ ಲಲ್ಲೆ ಹೊಡೆದುಕೊಂಡು ಆಡುತ್ತಿದ್ದ ವಿಶಾಲಿಯ ಆಟವಂತೂ ಮಂಗಳೆಯನ್ನು ಅಸಮಾಧಾನಗೊಳಿಸಿತ್ತು. ಒಂದೊಂದು ವೇಳೆ ಮಂಗಳೆಯ ಮನಸ್ಸಿನಲ್ಲಿ "ನಟರಾಜ ಏನಾದರೂ ವಿಶಾಲಿಯನ್ನು ಇಷ್ಟಪಡುವನೊ...?" ಎಂಬ ಸಂದೇಹವೂ ಉತ್ಪನ್ನವಾಗುವುದು...

ಈಗೆರಡು ದಿನಗಳಿಂದ ಮಂಗಳೆ ತೀರ ಕಾತರಗೊಂಡಿದ್ದಳು. ಏಕೆಂದರೆ ಯಾವುದೊ ಮಾತಿಗೆ ಯಶೋದಮ್ಮ "ವಿಶಾಲಿ ತುಂಬ ಚೆಲ್ಲು ಚೆಲ್ಲು" ಎಂದು ಆಗ್ರಹಗೊಂಡಿದ್ದಾಗ "ಇಲ್ಲ ಚಿಕ್ಕಮ್ಮ, ವಿಶಾಲಿ ಒಳ್ಳೇ ಹುಡುಗೀನೇ–ಏನೊ ಸ್ವಲ್ಪ ಹುಡುಗು !" ಎಂದು ನಟರಾಜ ವಿಶಾಲಿಯನ್ನು ವಹಿಸಿಕೊಂಡಿದ್ದ. ಆ ಪ್ರಕರಣ ಮಂಗಳೆಯ ಹೃದಯದಲ್ಲಿ ಸಂಶಯದ ಸರ್ಪವಾಗಿ ಹೆಡೆಯಾಡಿತು.

ನಂಬಿಕೆಯ ಅಣೆಕಟ್ಟಿನಲ್ಲಿ ಅತಿ ಕಿರಿದಾದ ಅನುಮಾನದ ಬಿರುಕು ಕಾಣಿಸಿದರೂ ಸಾಕು. ಬಹುಬೇಗ ಅದು ಬೃಹದಾಕಾರವನ್ನು ತಾಳಿ ಒಟ್ಟು ಅಣೆಕಟ್ಟನ್ನೇ ಅಲುಗಾಡಿಸಿಬಿಡುತ್ತದೆ – ಮಂಗಳೆಗೆ ನಟರಾಜನಲ್ಲಿದ್ದ ನಂಬಿಕೆಯ ಭದ್ರವಾದ ಅಣೆಕಟ್ಟಿನಲ್ಲಿ ಅನುಮಾನದ ಸಣ್ಣ ಬಿರುಕೊಂದು ಕಾಣಿಸಿ ದಿನ ಕಳೆದಂತೆ ದೊಡ್ಡದಾಗಿ ಬೆಳೆಯುತ್ತಾ ಹೋಯಿತು...

ವಿಶಾಲಿಯೊಡನೆ ಅಷ್ಟು ಸರಸವಾಗಿ ನಟರಾಜ ಮಾತನಾಡುವುದಾದರೂ ಏಕೆ ? ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವಳು. ಅವಳನ್ನು ಮಾತಾಡಿಸುವಾಗ ನಟರಾಜ ವಿಶಾಲಿಗೆ ತೋರುತ್ತಿದ್ದ ಗೌರವ–ಅಲ್ಲ, ಆಸೆ ! ಛೆ, ಛೇ,... ಪ್ರೀತಿ !! ಮಂಗಳೆಗೆ ಅತಿಯಾದ ಯಾತನೆಯನ್ನುಂಟುಮಾಡಿತ್ತು.

ಇದರಿಂದ ಅವಳಿಗೆ ನಿದ್ದೆ ಬಾರದೆ ರಾತ್ರಿಯೆಲ್ಲಾ ಹಾಸಿಗೆಯ ಮೇಲೆ ಹೊರಳಿ ಹೊರಳಿ ಸಂಕಟಪಡುವಳು.

ಬೆಳಗ್ಗೆ ಎದ್ದಾಗ ತಾನು ವಿಶಾಲಿಯಷ್ಟು ಸುಂದರಿಯಲ್ಲವೇ ? – ಎಂದು ಕನ್ನಡಿಯಲ್ಲಿ ತನ್ನ ಮುಖವನ್ನೇ ಬಲುಹೊತ್ತು ಭ್ರಮಿಸಿದವಳಂತೆ ಮೌನವಾಗಿ ವೀಕ್ಷಿಸುತ್ತಾ ಕೂರುವಳು. ಮುಕುರದಲ್ಲಿ ಪ್ರತಿಬಿಂಬಿತವಾದ ತನ್ನ ಮುಖದ ಪಕ್ಕದಲ್ಲಿ ವಿಶಾಲಿಯ ಮುಖವನ್ನು ಊಹಿಸಿ ಇಡಲು ಯತ್ನಿಸುವಳು... ಆ ದರ್ಪಣದಲ್ಲಿ ಚಿತ್ರಿತವಾಗಿರುವ ಎರಡು ಮುಖಗಳಲ್ಲಿ ಯಾವುದು ಸುಂದರ... ವಿಶಾಲಿಯದೊ ? ತನ್ನದೊ ? ಎಂದು ಹೋಲಿಸಿ ನೋಡುವಳು.

ಯಾವ ದೃಷ್ಟಿಯಿಂದ ನೋಡಿದರೂ, ಎಷ್ಟೇ ಧಾರಾಳ ಬುದ್ಧಿಯಿಂದ ವಿಚಾರ ಮಾಡಿದರೂ, ವಿಶಾಲಿ ರೂಪಿನಲ್ಲಿ ಎಂದಿಗೂ ತನ್ನ ಮಟ್ಟಕ್ಕೆ ಬರಲಾರಳೆಂದು ಖಚಿತ

ಮಾಡಿಕೊಂಡಳು ಮಂಗಳೆ ! ನೋಡ ನೋಡಿದಂತೆ ಕನ್ನಡಿ ಅವಳನ್ನು "ನೀನೇ ವಿಶಾಲಿಗಿಂತ ಸುಂದರಿ – ನೀನು ವಿಶಾಲಿಗಿಂತ ಸುಂದರಿ" ಎಂದು ಗಲ್ಲ ಸವರುತ್ತಿತ್ತು.

ಹಾಗಿದ್ದರೂ ನಟರಾಜ ಏಕೆ ಹಾಗೆ ವಿಶಾಲಿಯ ಜೊತೆ ಸಂಭಾಷಿಸಲು ಇಚ್ಛಿಸುತ್ತಾನೆ ? ಎಂದು ತಲೆ ಕರೆದುಕೊಂಡಳು.

ಎಷ್ಟೇ ಯೋಚಿಸಿದರೂ, ಏನೇ ಮಾಡಿದರೂ, ಸಮಸ್ಯೆ ಬಗೆಹರಿಯಲಿಲ್ಲ.

ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸದಿದ್ದ ನಟರಾಜನ ಮನಸ್ಸಿಗೆ ಮಂಗಳೆಯ ಅಂತರಂಗದಲ್ಲಿ ನಡೆಯುತ್ತಿದ್ದ ಒಳತೋಟಿಯ ಸುಳಿವೂ ಸಹ ತಟ್ಟಿರಲಿಲ್ಲ. ಮಂಗಳೆಯೂ ಅವನೆದುರು ತನ್ನೊಳಗೇಳುತ್ತಿದ್ದ ತುಮುಲದ ತೆರೆಗಳನ್ನು ಸಾಧ್ಯವಾದಷ್ಟು ಅದುಮಿಟ್ಟು, ಶಾಂತರೀತಿಯಿಂದಲೇ ವರ್ತಿಸಲು ಯತ್ನಿಸುತ್ತಿದ್ದಳು.

ಹೀಗಿರುವಾಗ ಒಂದು ದಿನ ಮಂಗಳೆ ಅನಂತ–ನಟರಾಜರ ಕೋಣೆಯ ಹಿಂದಿನ ಕೋಣೆಯಲ್ಲಿ ಕುಳಿತು ಎರಡು ಫೋಟೋಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಹಿಡಿದು ಸೂಕ್ಷ್ಮವಾಗಿ ನೋಡುತ್ತಿದ್ದಳು. ಅವೆರಡು ಫೋಟೋಗಳಲ್ಲಿ ಒಂದು ವಿಶಾಲಿಯದು; ಇನ್ನೊಂದು ತನ್ನದು !... ಕೆಲವು ದಿನಗಳ ಹಿಂದೆ ಅವರೆಲ್ಲರೂ ಪೇಟೆಗೆ ಹೋಗಿ ಫೋಟೋ ತೆಗೆಸಿಕೊಂಡಿದ್ದರು. ಮಂಗಳೆ ಅವುಗಳನ್ನು ಎಷ್ಟೋ ಬಾರಿ ನೋಡಿದ್ದರೂ ಈ ದಿನ ಪುನಃ ಯಶೋದತ್ತೆಯನ್ನು ಕಾಡಿ ತನ್ನ ಮತ್ತು ವಿಶಾಲಿಯ ಫೋಟೋಗಳನ್ನು ಈಸಿತಂದು ನೋಡುತ್ತಿದ್ದಳು.

ನಟರಾಜ ಹಿಂದಿನಿಂದ ಬಂದವನು "ಇದೇನೇ ಮಂಗಲಿ... ನಿಮ್ಮಿಬ್ಬರು ಹೆಂಗಸರ ಫೋಟೋನೇ ಅಷ್ಟು ನೋಡ್ತಾ ಇದೀಯೇ?" ಎಂದು ನಗುತ್ತಾ ಕೇಳಿದ.

ಮಂಗಳೆ ನಾಚಿ ಫೋಟೋಗಳನ್ನು ಕೆಳಗಿಟ್ಟು ಮೌನ ತಾಳಿದಳು.

"ಹೇಳೋದಿಲ್ಲವಾ ?..." ಮೃದುವಾಗಿ ತಗ್ಗಿದ ಸ್ವರದಲ್ಲಿ ಕೇಳಿದ ನಟರಾಜ.

ಅವನು ಬಹಳ ಪುಸಲಾಯಿಸಿದ ಬಳಿಕ ನಿಜಾಂಶ ಹೊರಬಿದ್ದಿತು.

"ಮಧ್ಯಾಹ್ನ ವಿಶಾಲಿ ಬಂದು ಅವನ ಮನೇಗೆ ಕರೆಕೊಂಡು ಹೋಗಿದ್ದಳು. ಆಗ ಅವಳ ಸ್ನೇಹಿತೇರು ನಾಲ್ಕೈದು ಹುಡುಗೀರು ಬಂದರು. ನಾವುಗಳು ತೆಗೆಸಿದ ಫೋಟೋಗಳನ್ನೆಲ್ಲಾ ಆಗಲೇ ಕಟ್ಟು ಹಾಕಿಸಿ ಅವರ ಮನೆ ಗೋಡೆಗಳ ಮೇಲೆ ನೇತು ಹಾಕಿದ್ದರು..." ಎಂದು ಉಸಿರಾಡಲು ಸ್ವಲ್ಪ ತಡೆದಳು ಮಂಗಳೆ.

"ಅಲ್ಲದೆ, ಅವರಿಗೇನು ಕಡಿಮೆ !... ಆಮೇಲೆ ?"

"ಆಗ ಆ ಹುಡುಗೀರು ನನ್ನ ಮತ್ತು ವಿಶಾಲಿ ಫೋಟೋಗಳನ್ನು ಕೈಗೆತ್ತಿಕೊಂಡರು..."

"ಹೂ, ಆಮೇಲೆ ?"

"ಅವರವರಲ್ಲೇ ವಾಗ್ವಾದ ಶುರು ಆಗಿಬುಡ್ತು..."

"ಏನಂತ ?"

"......................."

"ಹೇಳು" ಎಂದು ನಟರಾಜ ಪ್ರೀತಿಯಿಂದ ನೇವರಿಸುವ ಧ್ವನಿಯಲ್ಲಿ ಒತ್ತಾಯಪಡಿಸಿದ.

"ನಾನು, ವಿಶಾಲಿ ಇಬ್ಬರಲ್ಲಿ ಯಾರು ಚೆಂದ ಅಂತ !" ಎಂದು ಬಹು ಪ್ರಯಾಸದಿಂದ ಉಸುರಿದ ಮಂಗಳೆ ನಾಚಿಕೆಯಿಂದ ಕೆಂಪಾಗಿ ಹೋದಳು, ಶರೀರವೆಲ್ಲಾ ಬೆವರಿನಿಂದ ತೊಯ್ದು ಹೋಯಿತು.

"ಹೂ...?" ಎಂದ ನಟರಾಜ, ನಸುನಗುತ್ತಾ.

"ನಾನು ಹೇಳಿದೆ : ವಿಶಾಲೀನೇ ನನಗಿಂತ ಚೆಂದ ಅಂತ."

"ಚಿ!" ಎಂದು ಗೊಣಗಿದ ನಟರಾಜ "ನೀನೆಲ್ಲಿ, ಅವಳೆಲ್ಲಿ ? ನಿನ್ನ ಮುಂದೆ ಅವಳ್ನ ನೀವಾಳಿ ತೆಗೀಬೇಕು" ಎಂದು ಹೇಳಿದ.

ನಟರಾಜನ ಮಾತನ್ನು ಕೇಳಿ ಚಕಿತಳಾದಳು ಮಂಗಳೆ. ನಟರಾಜನ ಮನಸ್ಸಿನಲ್ಲಿ ಈ ರೀತಿಯ ಅಭಿಪ್ರಾಯವಿದೆ ಎಂದು ಅವಳು ನಂಬೇ ಇರಲಿಲ್ಲ. ಆದ್ದರಿಂದ ಆ ಮಾತುಗಳನ್ನು ಕೇಳಲು ಅವಳಿಗೆ ಅಚ್ಚರಿಯಾಯಿತು–ಅಚ್ಚರಿಯ ಜೊತೆಗೆ ಆನಂದವೂ ಆಯಿತು. ಈ ಆನಂದದ ಮಾಧುರ್ಯವನ್ನು ಸವಿಯುತ್ತಾ ಮೌನವಾಗಿ ಕುಳಿತಳು.

ಅವಳು ಮುಂದೆ ಏನೂ ಹೇಳದಿರಲು ನಟರಾಜನೇ ಕೇಳಿದ :

"ಆಯಿತು. ಆ ಹುಡುಗೀರು ಏನು ಹೇಳಿದರೂ ಅಂತ ಹೇಳಲೇ ಇಲ್ಲವಲ್ಲಾ ನೀನು ?"

ಮಂಗಳೆ ಸುಮ್ಮನಿದ್ದಳು. ಅವಳ ಮುದ್ದಾದ ಗಲ್ಲದ ಮೇಲೆ ಹರ್ಷದ ಪುಟ್ಟ ಸುಳಿಯೊಂದು ಕಾಣಿಸಿಕೊಂಡಿತು.

"ಹೇಳು ಮಂಗಲೀ..."

"ವಿಶಾಲೀನೇ ಚೆಂದವಂತೆ !" ಹಾಗೆ ಹೇಳುವಾಗ ಅವಳ ನಯನಗಳು ನಗುತ್ತಿದ್ದವು.

"ಮಡ್ಡಿಗಳು" ಎಂದ ನಟರಾಜ ಅವಳನ್ನೇ ನೋಡುತ್ತ.

ನಾಚಿ ತಲೆ ತಗ್ಗಿಸಿದಳು ಮಂಗಳೆ.

ಈ ರೀತಿ ಅವರಿಬ್ಬರಿಗೂ ಸಂವಾದ ನಡೆದ ರಾತ್ರಿ ಮಲಗಿಕೊಂಡಾಗ ಮಂಗಳೆಗೆ ಅತ್ಯಂತ ವ್ಯಥೆಯಾಯಿತು. ತನ್ನ ನಟರಾಜನ ವಿಷಯವಾಗಿ ತನ್ನ ಹೃದಯದಲ್ಲಿ ಅನುಮಾನಕ್ಕೆ ಆಸ್ಪದ ಕೊಟ್ಟುದಕ್ಕಾಗಿ ತನ್ನನ್ನೇ ತಾನು ಹಳಿದುಕೊಂಡಳು.

೨೦

ಕೆಲ ದಿನಗಳು ಕಳೆದಿದ್ದವು.

ಪ್ರಾತಃಕಾಲದ ಸಮಯ.

ನಟರಾಜನ ಕೋಣೆಗೆ ಅಂಟಿದಂತೆ ಬೆಳೆದಿದ್ದ ಗುಲಾಬಿ ಗಿಡಕ್ಕೆ ತಂಬಿಗೆಯಿಂದ ನೀರೆರೆಯುತ್ತಿದ್ದಳು ಮಂಗಳೆ.

ಕೋಣೆಯೊಳಗೆ ನಟರಾಜನಿನ್ನೂ ನಿದ್ರಿಸುತ್ತ ಮಲಗಿದ್ದ.

ತಂಬಿಗೆಯ ನೀರನ್ನೆಲ್ಲಾ ಗಿಡಕ್ಕೆ ಸುರಿದ ಬಳಿಕ, ಇನ್ನೂ ಮಲಗಿದ್ದ ನಟರಾಜನನ್ನೊಮ್ಮೆ ನೋಡುವ ಮನಸ್ಸಾಯಿತು ಮಂಗಳೆಗೆ–ಹಾಗೆಯೇ ಕಿಟಕಿಯ ಸಲಾಕಿಗಳನ್ನು ಹಿಡಿದು ಕೋಣೆಯೊಳಗೆ ಇಣುಕಿ ನೋಡಿದಳು.

ನಿದ್ರಿಸುತ್ತಿದ್ದ ನಟರಾಜನ ಮುಖದಲ್ಲಿ ಸಣ್ಣ ನಗುವಿನ ತೆರೆ ಲಾಸ್ಯವಾಡುತ್ತಿದ್ದಿತ್ತು.

"ನಟ್ರಾಜ ಯಾವುದೊ ಕನಸುಕಾಣ್ತಾ ಇರಬೇಕು" ಎಂದುಕೊಂಡಳು ಮಂಗಳೆ.

ಅಷ್ಟರಲ್ಲಿ ಗಾಳಿಯ ತೆರೆಯೊಂದು ಬಲವಾಗಿ ಬೀಸಿ ನಟರಾಜನ ಮೇಜಿನ ಮೇಲಿದ್ದ ಪುಸ್ತಕವೊಂದನ್ನು ನಿಷ್ಠುರವಾಗಿ ತೆರೆದಿಟ್ಟಿತು. ಅದರ ರಭಸಕ್ಕೆ ಆ ಪುಸ್ತಕದೊಳಗೆ ಅಡಗಿದ್ದ ಪತ್ರವೊಂದು ಹೊರಬಂದು ಗಾಳಿಯಲ್ಲಿ ಅತ್ತ ಇತ್ತ ಹಾರಿ ಮೇಜಿನ ಕೆಳಗೆ ಬಿದ್ದಿತು.

ಮೇಜು ಕಿಟಕಿಗೆ ಹತ್ತಿರವಿದ್ದುದರಿಂದ ಯಾವುದೊ ಹೆಂಗಸಿನ ಕೈ ಬರಹ ಎಂದು ತೋರುವ ಮಟ್ಟಿಗೆ ಆ ಪತ್ರ ಸಮೀಪವಾಗಿತ್ತು.

ಅದನ್ನು ನೋಡಿದ ಮಂಗಳೆಗೆ ಏನೊ ಅನುಮಾನ ಉಂಟಾಯಿತು. ತಂಬಿಗೆಯನ್ನೆತ್ತಿಕೊಂಡೇ ಒಳಗೆ ಹೋಗಿ ಪತ್ರವನ್ನೆತ್ತಿ ಬಿಡಿಸಿ ನೋಡಿದಳು.

ಉದ್ವಿಗ್ನಳಾಗಿ ಪತ್ರದ ಅಂತ್ಯಕ್ಕೆ ದೃಷ್ಟಿ ತಗ್ಗಿಸಿದಳು ಮಂಗಳೆ. ಅಲ್ಲಿ "ನಿನ್ನವಳು, ವಿಶಾಲಿ" ಎಂದು ಬರೆದಿತ್ತು.

"ಬಜಾರಿ" ಎಂದು ರೋಷದಿಂದ ಪತ್ರವನ್ನು ಕೈಯಲ್ಲಿ ಮುರಿದು ಬಿರುಸಾಗಿ ಮೂಲೆಗೆ ಎಸೆದಳು.

ಹಾಗೆ ಎಸೆದು ಇನ್ನೇನು ಹೊರಟು ಹೋಗುವುದರಲ್ಲಿದ್ದಳು. ಆದರೆ ಅಷ್ಟರಲ್ಲಿ ಏನೋ ಹೊಳೆದಂತಾಗಿ ತಡೆದು ಯೋಚಿಸುತ್ತ ನಿಂತಳು. ಅನಂತರ ಪತ್ರ ಬಿದ್ದಿದ್ದ ಸ್ಥಳಕ್ಕೆ ಬಂದು ಮತ್ತೆ ಅದನ್ನು ಎತ್ತಿಕೊಂಡಳು. ಅದರೊಳಗೇನು ಬರೆದಿದೆ ಎಂದು ಓದಿ ತಿಳಿದುಕೊಳ್ಳದೆ ಅಲ್ಲಿಂದ ಹೊರಟು ಹೋಗಲು ಅವಳ ಹೆಣ್ಣು ಮನಸ್ಸು ಒಡಂಬಡಲಿಲ್ಲ.

ಮತ್ತೊಮ್ಮೆ ಆ ಮುದುಡಿದ ಪತ್ರವನ್ನು ಬಿಚ್ಚಿ ಸರಿಪಡಿಸಿದಳು.

ಪತ್ರದ ಸರಣಿ ಹೀಗಿತ್ತು :

ಪ್ರಿಯ ನಟರಾಜ,

ನಿನ್ನನ್ನು ಕಂಡರೆ ನನಗೆ ಬಹಳ ಆಸೆ, ನನ್ನ ಕಂಡರೆ ನಿನಗೆ ಆಸೆಯಿದೆಯಾ?

ನೀನು ಪಾಠ ಹೇಳಿಕೊಡೋವಾಗ ಒಂದೊಂದು ಸಲ ನಿನ್ನ ಕೈಯೇನಾದ್ರು ನನ್ನ ಕೈಗೆ ತಗುಲಿದರೆ ನಂಗೆ ಹೇಗೊ ಆಗುತ್ತೆ.

ಒಂದು ವಿಚಾರ ನಿನಗೆ ಹೇಳಲಾ ?–

ನಿನ್ನೆ ರಾತ್ರಿ ನಾನು ಮಲಗಿಕೊಂಡಿದ್ದಾಗ ಒಂದು ಕನಸು ಬಿದ್ದಿತು. ಆ ಕನಸಿನಲ್ಲಿ ನಿನ್ನನ್ನೇ ಹೆಚ್ಚಾಗಿ ಕಾಣ್ತಾ ಇದ್ದೆ... ನೀನು ನಗದೇ ಇದ್ದರೆ ಇನ್ನೂ ಒಂದು ವಿಷಯ ಹೇಳ್ತೀನಿ. ನೋಡು – ಆ ಕನಸಿನಲ್ಲಿ ನೀನೇ ಗಂಡ, ನಾನೇ ಹೆಂಡತಿಯಾಗಿದ್ದೊ. ಆಗ ನೀನು ನನಗೆ ಮು–ಕೊಟ್ಟೆ.

ಎಷ್ಟು ಚೆನ್ನಾಗಿತ್ತೂಂತ !

ನಾಳೆ ನಾನು ಪಾಠಕ್ಕೆ ಬಂದಾಗ ನೀನು ನನಗೆ ಅದನ್ನು ನಿಜವಾಗಿಯೂ ಕೊಡುವೆಯಾ ?

ನಿನ್ನವಳೆ,

ವಿಶಾಲಿ.

ಪತ್ರವನ್ನೋದಿ ಮುಗಿಸಿದ ಮಂಗಳೆ "ಹುಚ್ಚಿ" ಎಂದು ಹೇಳಿ ಪತ್ರವನ್ನು ಹರಿದು ಹಾಕುವುದರಲ್ಲಿದ್ದಳು.

ಆದರೆ ಹಾಗೆ ಮಾಡುವುದು ತಪ್ಪು ಎಂದು ತೋರಿ ಪತ್ರವನ್ನು ಮಡಿಸಿ ಅದು ಹಿಂದೆ ಇದ್ದ ಕಾದಂಬರಿ ಪುಸ್ತಕದೊಳಗೇ ಇಟ್ಟು ಹೊರಬಂದಳು. ವಿಶಾಲಿಯ ವಿಷಯವಾಗಿ ಅವಳಲ್ಲಿ ಕೋಪವಿತ್ತೋ, ತಿರಸ್ಕಾರವಿತ್ತೋ ಹೇಳಲು ಬರುವಂತಿರಲಿಲ್ಲ.

ನಟರಾಜ ಎದ್ದು ಸ್ನಾನ ಮಾಡಿ ಕಾಫಿ ಕುಡಿಯುವವರೆಗೂ ಆ ಪತ್ರ ಅವನ ಕಣ್ಣಿಗೆ ಬೀಳಲೇ ಇಲ್ಲ.

ಕಾಫಿ ಕುಡಿದಾದ ಮೇಲೆ ಮೇಜಿನ ಮೇಲಿದ್ದ ವೆಂಕಟಾಚಾರ್ಯರ "ಅಮೃತ ಪುಲಿನ" ಕಾದಂಬರಿಯನ್ನು ಹೊತ್ತು ಹೋಗದುದಕ್ಕೆ ತಿರುವಿ ಹಾಕಲೆಂದು–ಅದನ್ನಾಗಲೇ ಎರಡು ಬಾರಿ ಓದಿದ್ದ–ಕೈಗೆತ್ತಿಕೊಂಡ.

ಕೆಲವು ಹಾಳೆಗಳನ್ನು ತಿರುವಿ ಹಾಕಿದ ನಂತರ ವಿಶಾಲಿಯ ಪತ್ರ ಅವನ ದೃಷ್ಟಿಗೆ ಬಿದ್ದಿತು. ಆ ಪತ್ರವನ್ನು ಪೂರ್ಣವಾಗಿ ಓದಿ ಮುಗಿಸಿದ ಮೇಲೆ ಅದು ಆ ಕಾದಂಬರಿಯೊಳಗೆ ಹೇಗೆ ಬಂದಿತೆಂದು ಯೋಚಿಸತೊಡಗಿದ.

ಹಾಗೇ ಯೋಚಿಸುತ್ತಿರುವಾಗ ವಿಷಯ ಅವನಿಗೆ ಹೊಳೆಯಿತು. ಅದನ್ನು ಸುಮಾರು ಒಂದು ತಿಂಗಳಿನ ಹಿಂದೆ ವಿಶಾಲಿಗೆ ಓದಲು ಕೊಟ್ಟಿದ್ದ–ಅವಳ ಒತ್ತಾಯದ ಮೇಲೆ! ಬಣ್ಣದ ಚಿಟ್ಟೆಯಾದ ಅವಳು ಅದನ್ನೋದುವಳೆಂದು ಅವನು ಸರ್ವಥಾ ಎಣಿಸಿರಲಿಲ್ಲ. ಕೊಟ್ಟ ಪುಸ್ತಕ ಕೊಟ್ಟಂತೆಯೇ ಹಿಂದೆ ಬರುವುದೆಂದು ನಕ್ಕು ಸುಮ್ಮನಾಗಿದ್ದ. ಆದರೆ ಅವಳು ಹಿಂದಿನ ದಿನ ಓರೆ ನೋಟ ಬೀರುತ್ತಾ ಪುಸ್ತಕವನ್ನು ಕೈಗೆ ಕೊಟ್ಟಾಗ ಅದರೊಳಗೆ ಈ ರೀತಿ ಪತ್ರವೂ ಇರಬಹುದೆಂದು ಅವನು ಕನಸಿನಲ್ಲಿಯೂ ಸಹ ಊಹಿಸಿರಲಿಲ್ಲ.

ಪತ್ರವನ್ನಿನ್ನೂ ಅವನು ಕೈಯ್ಯಲ್ಲಿ ಹಿಡಿದಿರುವಂತೆಯೇ ವಿಶಾಲಿ ಅವನ ಕೋಣೆಯನ್ನು ಬೆಡಗಿನಿಂದ ಕುಲುಕುತ್ತಾ ಪ್ರವೇಶಿಸಿದಳು.

ಅವಳನ್ನು ಕಂಡಕೂಡಲೇ ಮೊದಲೇ ಪತ್ರವನ್ನೋದಿ ಕೆರಳಿದ್ದ ನಟರಾಜನ ಕೋಪ ಇಮ್ಮಡಿಯಾಯಿತು. ಒಡನೆಯೇ ಆ ಪತ್ರವನ್ನು ಚೂರುಚೂರಾಗಿ ಹರಿದು ಸಿಟ್ಟಿನಿಂದ ಬಿಸುಟು ವಿಶಾಲಿಯನ್ನು ಮಾತು ಆಡಿಸದೆ ಸಿಡಾರನೆ ಆ ಕೋಣೆಯಿಂದ ಹೊರಗೆ ಹೊರಟುಹೋದ.

ವಿಶಾಲಾಕ್ಷಿಗೆ ಮುಖಭಂಗವಾದಂತಾಗಿ ದುಃಖ ಒತ್ತರಿಸಿ ಬಂದಿತು. ಕಣ್ಣೀರು ತಂದುಕೊಂಡಿತು. ಅಲ್ಲಿ ನಿಲ್ಲದೆ ಬೇಗ ಬೇಗ ತಮ್ಮ ಮನೆಗೆ ಹೊರಟಳು. ಹೋಗುವಾಗ ಅವಳು ಕಣ್ಣಿಗೆ ಬಿದ್ದುದರಿಂದ ಯಶೋದಮ್ಮ "ಇದೇನೆ ವಿಶಾಲಿ ಹೀಗೆ ಬಂದು ಹಾಗೆ

ಹೊರಟೋಗ್ತಾ ಇದ್ದೀ. ಬಾರೆ ಇಲ್ಲಿ" ಎಂದು ಆದರದಿಂದ ಕೂಗಿದಳು. ಆದರೂ ನಿಲ್ಲದೆ, ಮಾತು ಕೇಳಿಸಿದರೂ ಕೇಳಿಸದಂತೆ ಹೊರಟು ಹೋದಳು ವಿಶಾಲಿ.

ಏಕೋ ಅದೇ ಸಮಯಕ್ಕೆ ಹಜಾರಕ್ಕೆ ಬಂದ ಮಂಗಳೆಗೆ ನಟರಾಜ ವಿಶಾಲಿಯೆದುರು ಕಾಗದವನ್ನು ಚೂರುಚೂರಾಗಿ ಹರಿದು ಬಿಸಾಡಿ ಹೊರಗೆ ಹೋದದ್ದು ಕಾಣಿಸಿತು. ಅನಂತರ ಕಣ್ಣೀರು ತಂದುಕೊಂಡು ವಿಶಾಲಿ ಹೊರಟು ಹೋಗುತ್ತಿದ್ದುದೂ ಕಾಣಿಸಿತು.

ಅದನ್ನು ಕಂಡು ಮಂಗಳೆಗೆ ಆ ಕ್ಷಣಕ್ಕೆ ವಿಶಾಲಿಗಾಗಿ ಮರುಗುವಂತಾಯಿತು. ತತ್‌ಕ್ಷಣವೇ "ವಿಶಾಲಿ, ವಿಶಾಲಿ" ಎಂದು ಕೂಗಿ ಕರೆಯುತ್ತಾ ಅವಳ ಹಿಂದೆ ಅವಳ ಮನೆಯವರೆಗೂ ಹೋದಳು. ಆದರೆ ವಿಶಾಲಿ ಅವಳನ್ನು ಕತ್ತೆತ್ತಿಯೂ ನೋಡದೆ ತನ್ನ ಕೋಣೆಯನ್ನು ಸೇರಿ ದಢಾರನೆ ಬಾಗಿಲು ಹಾಕಿಕೊಂಡಳು.

ಅಂದಿನಿಂದ ನಟರಾಜ ವಿಶಾಲಿಯನ್ನು ಅಷ್ಟಾಗಿ ಮೈ ಹಚ್ಚಿಕೊಳ್ಳುವುದನ್ನು ಬಿಟ್ಟುಬಿಟ್ಟ. ಆದರೂ ಅವಳಾಟವನ್ನವಳು ಬಿಡಲಿಲ್ಲ. ನಾಯಿಬಾಲ ಎಷ್ಟಾದರೂ ಡೊಂಕೇ !

೨೧

ಶಿವರಾತ್ರಿ ಕಳೆದ ಕೆಲವಾರು ದಿನಗಳಲ್ಲಿ ನಾಗಜ್ಜಿಯೂ ಮಂಗಳೆಯೂ ಕಲ್ಲಹಳ್ಳಿಗೆ ತೆರಳಿದ್ದರು. ಯಶೋದಮ್ಮ, ನಂಜುಂಡಸ್ವಾಮಿ ಇಬ್ಬರೂ ಅವರನ್ನು ಅತಿ ಪ್ರಯಾಸದಿಂದ ಬೀಳ್ಕೊಟ್ಟಿದ್ದರು. ಮಂಗಳೆಯನ್ನು ಕಳುಹಿಸುವಾಗಂತೂ ನಂಜುಂಡಸ್ವಾಮಿ "ದೇವರು ನನಗೆ ಇಂತಾದ್ದು ಒಂದು ಹೆಣ್ಣು ಕೊನೆ ಕೊಡದೇ ಹೋದ..." ಎಂದು ಕಣ್ಣೀರು ತಂದಿದ್ದ.

ಈಗ ನಟರಾಜನಿಗೂ ಅನಂತನಿಗೂ ಪರೀಕ್ಷೆಯ ದಿನಗಳು. ಆಗಲೇ ಪರೀಕ್ಷೆಯ ಎರಡು ದಿನಗಳೂ ಕಳೆದಿದ್ದವು. ಮೂರನೆಯ ದಿನ ನಟರಾಜನಿಗೆ ಜ್ವರ ಕಾಣಿಸಿತು. ಅದರಲ್ಲೇ ಹೇಗೋ ಶಾಲೆಗೆ ಹೋಗಿ ಬರೆದು ಬಂದನು. ಆದರೆ ಮಾರನೆಯ ದಿನ ನಟರಾಜನಿಗೆ ಜ್ವರ ಹೆಚ್ಚಿ ಆ ದಿನ ಅವನು ಪರೀಕ್ಷೆಗೆ ಕೂರದಂತೆ ಮಾಡಿತು.

ಮುಂದೆರಡು ದಿನಗಳಲ್ಲಿ ಜ್ವರ ನಿಂತಿತಾದರೂ ಎರಡು ಮೂರು ದಿನ ಪರೀಕ್ಷೆಗೆ ಕೂರದೇ ಹೋದ ಕಾರಣ ನಟರಾಜ ಆ ಸಲದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫೇಲ್ ಆಗಿದ್ದ. ಪರೀಕ್ಷೆಗೆ ಎಲ್ಲಾ ದಿನಗಳು ಹೋಗಿ ಕುಳಿತಿದ್ದರೂ ಅನಂತ ಲೆಕ್ಕದ ತೊಂದರೆಯಿಂದಾಗಿ 'ಡುಂಕಿ' ಹೊಡೆದಿದ್ದ.

ಬೇಸಿಗೆಯಲ್ಲಿ ನಟರಾಜ ಹಳ್ಳಿಗೆ ಬಂದಾಗ ಅವನಿಗೆ ಪರೀಕ್ಷೆಯಾಗುತ್ತಿರುವಾಗಲೇ ಜ್ವರ ಬಂದುದನ್ನು ಕೇಳಿ ಮನೆಯವರೆಲ್ಲರೂ ವ್ಯಥೆಪಟ್ಟರು.

ನಟರಾಜ ತನ್ನ ರಜೆಯ ದಿನಗಳನ್ನು ಕಲ್ಲಹಳ್ಳಿಯಲ್ಲಿ ಆನಂದದಿಂದಲೇ ಕಳೆದ. ಆ ದಿನಗಳಲ್ಲಿ ಮಂಗಳೆಯ ಮತ್ತು ಅವನ ಸ್ನೇಹ ಇನ್ನೂ ಗಾಢವಾಯಿತು.

ಮಾರನೆಯ ವರ್ಷ ಶಾಲೆ ಆರಂಭವಾದೊಡನೆಯೇ ಮೈಸೂರಿಗೆ ಬಂದುಬಿಟ್ಟ ನಟರಾಜ. ಈ ಬಾರಿ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಲೇಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿದ್ದ.

ಕೆಲವು ತಿಂಗಳೂ ಕಳೆದವು.

ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ತಿರುಮಲರಾಯರು ಎನ್ನುವವರು ಶಾಲೆಯ ಉಪಾಧ್ಯಾಯ ವರ್ಗದಲ್ಲಿ ಒಬ್ಬರಾಗಿದ್ದರು. ಅವರು ಹುಡುಗರಿಗೆ ಚರಿತ್ರೆಯನ್ನು ಹೇಳಿಕೊಡುತ್ತಿದ್ದರು. ಒಂದು ಭಾನುವಾರ ಎಸ್.ಎಸ್.ಎಲ್.ಸಿ. ಕ್ಲಾಸಿನ ವಿದ್ಯಾರ್ಥಿಗಳನ್ನೆಲ್ಲಾ ಶ್ರೀರಂಗಪಟ್ಟಣವನ್ನು ತೋರಿಸಲು ಕರೆದುಕೊಂಡು ಹೋದರು. ಹುಡುಗರಿಂದ ದುಡ್ಡು ಎತ್ತಿ ಹುಳಿಯನ್ನ ಮೊಸರನ್ನವನ್ನು ಮಾಡಿಸಿದ್ದರು. ರೈಲು ಖರ್ಚಿಗೂ ಆ ದುಡ್ಡನ್ನೇ ಬಳಸಲಾಗಿತ್ತು.

ತಿರುಮಲರಾಯರು ಶ್ರೀರಂಗಪಟ್ಟಣದಲ್ಲಿ ನೋಡಬೇಕಾದ ಜಾಗಗಳನ್ನೆಲ್ಲ ವರ್ಣನೆಯೊಡನೆ ಒಂದೊಂದಾಗಿ ತೋರಿಸುತ್ತಾ ಹೋದರು. ಉದ್ದಕ್ಕೂ ಟೀಪುವಿನ ವೀರಕಥೆ ಹಾದಿ ಸಾಗಿಸುತ್ತಿತ್ತು. ಸುಲ್ತಾನನ ಜೀವನದ ಪ್ರತಿ ಅಂಶವನ್ನು ಬಿಡಿಸಿ ಬಿಡಿಸಿ ತಾವೇ ಕಂಡಂತೆ ವಿಸ್ತಾರವಾಗಿ ಹೇಳುತ್ತಿದ್ದರು ರಾಯರು. ಹೇಳುತ್ತ ಹೇಳುತ್ತ ಕಂಠ ಗದ್ಗದಿತವಾಗುತ್ತಿತ್ತು. ಟೀಪುವಿನ ಮಕ್ಕಳನ್ನು ಕುಹಕಿ ಇಂಗ್ಲೀಷರಿಗೆ ಒಪ್ಪಿಸಬೇಕಾಗಿ ಬಂದ ಪ್ರಸಂಗವಂತೂ ರಾಯರ ಎರಡೂ ಕಣ್ಣುಗಳಿಂದ ಕವಲಾದ ಕಾವೇರಿಯನ್ನೇ ಹರಿಸಿಬಿಡುತ್ತಿತ್ತು. ಹುಡುಗರು ಮೂಕರಾಗಿ ಕಣ್ಣೀರಿಡುತ್ತಿದ್ದರು. 'ಮೈಸೂರಿನ ಹುಲಿ' ದರ್ಬಾರ್ ನಡೆಸಿದ ದರಿಯಾ ದೌಲತ್ ಅರಮನೆ, ನಮಾಜ್ ಮಾಡಿದ ಮಸೀದಿ, ಹೆಬ್ಬಾಗಿಲ ಬಳಿ ಅವನ ಮಡಿದ ತಾಣ, ತಂದೆ ತಾಯಿಗಳ ಪಕ್ಕದಲ್ಲಿ ಮಲಗಿದ ಅವನ ಗೋರಿ–ರಾಯರು ಒಂದೊಂದನ್ನು ವರ್ಣಿಸುವಾಗ ಹುಡುಗರ ಬಡ ತೋಳಿಗೂ ಟೀಪುವಿನ ಬಲ ಬಂದಂತಾಗುತ್ತಿತ್ತು... ನಟರಾಜನಂತೂ ಟೀಪುವಾಗೇ ಮಾರ್ಪಾಟಾಗಿದ್ದ–ಬಂಗಾರದ ಖಡ್ಗವೊಂದೇ ಬಾಕಿಯಾಗಿತ್ತು!

ಕಥೆ ಹೇಳುತ್ತ ಹೇಳುತ್ತ ರಾಯರು ಎಲ್ಲಿಂದಲೋ ಎಲ್ಲಿಗೊ ಹಾರಿದರು. ಇದ್ದಕ್ಕಿದ್ದಂತೆಯೇ ತಡೆದು ನಿಂತು ಹುಡುಗರನ್ನುದ್ದೇಶಿಸಿ, ನೀವು ಚಿಕ್ಕ ಮಕ್ಕಳಾಗಿದ್ದಾಗ ನಿದ್ದೆ ಮಾಡದೆ ಚಂಡಿ ಮಾಡಿದರೆ ನಿಮ್ಮ ತಾಯಂದಿರು ಏನು ಹೇಳುತ್ತಿದ್ದರು...? ಎಂದು ಪ್ರಶ್ನಿಸಿದರು.

"ಗುಮ್ಮ ಬರುತ್ತೆ, ಅಂತ ಹೇಳ್ತಾ ಇದ್ದರು" ಎಂದು ಹುಡುಗರು ಉತ್ತರ ಕೊಟ್ಟರು.

"ಹೂ. ಹಾಗೇನೆ ಇಂಗ್ಲೆಂಡಿನಲ್ಲಿ ಇಂಗ್ಲೀಷ್ ತಾಯಂದಿರು ತಮ್ಮ ತುಂಟ ಮಕ್ಕಳನ್ನು ಮಲಗಿಸಬೇಕಾದರೆ ಏನು ಹೇಳ್ತಾ ಇದ್ದರು ಗೊತ್ತೆ..."

"ಏನು ಹೇಳ್ತಾ ಇದ್ದರು ಸಾರ್?"

"ಗುಮ್ಮ ಬರುತ್ತೆ ಅಂತ ಹೇಳ್ತಾ ಇರಲಿಲ್ಲ..."

"ಮತ್ತೆ–?"

"ಟೀಪು ಬರ್‍ತಾನೆ–ಮೈಸೂರು ಹುಲಿ ಬರ್‍ತಾನೆ, ಅಂತ ಹೇಳಿ ಮಲಗಿಸುತ್ತಾ ಇದ್ದರು" ಎಂದು ಅಭಿಮಾನದಿಂದ ನುಡಿದರು ಉಪಾಧ್ಯಾಯರು.

ಹುಡುಗರಿಗೆ ಸುಲ್ತಾನನಲ್ಲಿದ್ದ ಆದರ, ಗೌರವಗಳನ್ನು ಈ ಸಂಗತಿ ದ್ವಿಗುಣಗೊಳಿಸಿತು. ನಟರಾಜನ ಹೃದಯವಂತೂ ಇಂಗ್ಲೀಷರ ವಿರುದ್ಧ ಬಂಡಾಯವೆದ್ದಿತು. ಆ ಗಳಿಗೆಗೆ ನಾಗಜ್ಜಿ ಹೇಳುತ್ತಿದ್ದ ಕಥೆಯ "ವೀರ ಅಭಿಮನ್ಯು" ಆಗಿದ್ದನಾತ.

ಆ ಬಳಿಕ ಊರೆಲ್ಲ ಸುತ್ತಿ ರಂಗನಾಥಸ್ವಾಮಿಯ ಗುಡಿಗೆ ಬಂದರು. ಉದ್ದವಾಗಿ ಮಲಗಿದ ಸ್ವಾಮಿಯ ಭವ್ಯ ವಿಗ್ರಹವನ್ನು ಕಂಡು ಹುಡುಗರೆಲ್ಲ ಮುಗ್ಧರಾದರು. ಪೂಜೆ ಮಾಡಿಸಿಕೊಂಡು ರೈಲ್ವೆ ನಿಲ್ದಾಣಕ್ಕೆ ಅವರು ಬಂದ ಹತ್ತು ನಿಮಿಷಗಳಲ್ಲಿ ಬೆಂಗಳೂರಿನ ಕಡೆಯಿಂದ ಮೈಸೂರಿಗೆ ಹೋಗುವ ಸಂಜೆಯ ರೈಲು ಬಂದಿತು.

ಅದರಲ್ಲಿ ಎಲ್ಲರೂ ಕುಳಿತು ಮೈಸೂರಿನ ಕಡೆ ಹೊರಟರು.

೨೨

೧೯೩೦ನೇ ಇಸವಿಯ ಭಾರತದ ಗಾಳಿ ಏನೊ ಒಂದು ರೂಪು ತಾಳಿ ಬೀಸಿತು. ಹೊಸ ಹುರುಪು, ಹೊಸ ಚೈತನ್ಯ, ಹೊಸ ತೇಜಸ್ಸು, ಆ ಗಾಳಿಯಲ್ಲಿ ಬೆರೆತಿತ್ತು. ೧೯೨೧ರ ಅಸಹಕಾರ ಚಳವಳಿಯಿಂದ ಇಲ್ಲಿಗೆ ಒಂಭತ್ತು ವರ್ಷಗಳ ದೀರ್ಘ ನಿದ್ರೆ ಭಾರತದ ಶರೀರಕ್ಕೆ ಅಮಾನುಷ ಬಲವನ್ನು ತಂದಂತಿತ್ತು.

ಮಹಾತ್ಮ ಗಾಂಧಿಯವರ ದಂಡಿಯ ಮಹಾಯಾತ್ರೆ ಮೊದಲಾಯಿತು. ಉಪ್ಪಿನ ಸತ್ಯಾಗ್ರಹ ಹಿಂದೂಸ್ಥಾನದ ಹೃದಯದಲ್ಲಿ ಸುಪ್ತವಾಗಿದ್ದ ಕ್ರಾಂತಿಯ ಪಂಜಿಗೆ ಎಣ್ಣೆಯೆರೆಯಿತು. ಶತಮಾನದ ದಾಸ್ಯದ ಶೃಂಖಲೆಗಳನ್ನು ಕಿತ್ತೊಗೆಯುವ ಕಾಲ ಒದಗಿತೆಂದು ಅಖಂಡ ಭಾರತದ ಜನತೆ ಹಿಗ್ಗಿತು. ಸಹಸ್ರ ಸಹಸ್ರ, ಲಕ್ಷ ಲಕ್ಷ ಸ್ತ್ರೀ ಪುರುಷರು ಮನೆ ಮಠಗಳ ಹಂಗುತೊರೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಅವರ ಕೈಯಲ್ಲಿ ತಕಲಿ ತಿರುಗಿತು. ದೇಹವನ್ನು ಅಹಿಂಸೆಯ ಕವಚ ಅಲಂಕರಿಸಿತು. ಅಂತರಂಗದ ಬಟ್ಟಲನ್ನು ಸತ್ಯದ ಅಮೃತ ತುಂಬಿತು.

ವಿದೇಶೀ ಸರಕಾರ ಇದಕ್ಕೆಲ್ಲ ಪ್ರತಿಯಾಗಿ ಲಾಠಿ, ಗುಂಡು, ಸೆರೆಮನೆಗಳ ಉತ್ತರವಿತ್ತಿತು. ಇಡೀ ಹಿಂದೂಸ್ಥಾನ ಒಂದು ಅಪಾರ ಕಾರಾಗಾರವಾಯಿತು... "ಗುಲಾಮ ಭಾರತವೇ

ಒಂದು ವಿಶಾಲ ಕಾರಾಗೃಹ. ಬಂದೀಖಾನೆಯ ಹೊರಗಿದ್ದರೇನು ? ಒಳಗಿದ್ದರೇನು ?" ಎಂದು ರೋಸಿದ ಜನತೆ ಸಡ್ಡು ಹೊಡೆಯಿತು. ಯುವಕರು ಹೂಂಕರಿಸುತ್ತಿದ್ದರು, ಮುದುಕರ ಎದೆಗಳೂ ಭಯವನ್ನು ನೀಗಿ ಬ್ರಿಟಿಷರ ಗುಂಡುಗಳಿಗೆ ಎದುರಾಗುತ್ತಿದ್ದುವು. ತೊಟ್ಟಿಲು ತೂಗುವ ಕೈಗಳೂ ಬೀದಿಗೆ ಬಂದು ಲಾಠಿಯ ಏಟನ್ನು ತಿನ್ನುತ್ತಿದ್ದವು...

ರಾಷ್ಟ್ರದಲ್ಲೆಲ್ಲಾ ಹೀಗೆ ಉರಿಯುತ್ತಿದ್ದ ರಾಜಕೀಯ ಜ್ವಾಲೆಯ ಉರಿ ಮೈಸೂರಿಗೂ ತಟ್ಟದೆ ಹೋಗಲಿಲ್ಲ. ಇಲ್ಲೂ ಮೆರವಣಿಗೆಗಳು, ಹರತಾಳಗಳು, ಮುಂತಾದವು ನಡೆದವು. ಜೊತೆಗೆ ಪೋಲೀಸರ ಅತ್ಯಾಚಾರಗಳೂ ನಡೆದವು.

ಹೀಗಿರುವಾಗ ಜನವರಿ ತಿಂಗಳಿನ ಅಂತ್ಯಭಾಗಕ್ಕೆ ಒಂದು ದಿನ ನಟರಾಜನೂ ಅನಂತನೂ ಶಾಲೆಯಲ್ಲಿ ಕುಳಿತಿದ್ದರು. ಲೆಕ್ಕದ ಉಪಾಧ್ಯಾಯರು ಯಾವುದೊ ಕಠಿಣವಾದ ಸಮಸ್ಯೆಯನ್ನು ಅವರ ಮುಂದಿಟ್ಟರು. ಅದನ್ನು ಬಗೆಹರಿಸಲಾರದೆ ಹುಡುಗರು ಬೇಸತ್ತಿದ್ದರು. ಆಗ ಅವರ ಶಾಲೆಯ ಬಳಿ ಬೇರೊಂದು ಶಾಲೆಯ ಹುಡುಗರ ಗುಂಪು ಬಂದುದರಿಂದ ಶಾಲೆಯ ಹೊರಗೆ ಅಸಾಧ್ಯ ಗದ್ದಲವಾಯಿತು. ಹುಡುಗರೆಲ್ಲರ ಗಮನವೂ ಆ ಎಡೆಗೆ ಹರಿಯಿತು.

"ಮಹಾತ್ಮ ಗಾಂಧೀಕಿ ಜೈ-ಮಹಾತ್ಮ ಗಾಂಧೀಕಿ ಕೈ" ಎಂದು ಹೊರಗಡೆ ನಿಂತು ಗುಂಪು ಕೂಗುತ್ತಿತ್ತು.

"ಸ್ನೇಹಿತರೇ, ಇಂದು ನಮ್ಮ ಪವಿತ್ರ ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಬೇಕಾಗಿದೆ. ಕ್ಲಾಸುಗಳಲ್ಲಿ ಕುಳಿತು ಏನು ಮಾಡುವಿರಿ? ಹೊರಗೆ ಬನ್ನಿ, ಇನ್ನೆಷ್ಟು ಕಾಲ ಈ ಗುಲಾಮಗಿರಿ? ಭಾರತಮಾತೆಯ ಸಂಕೋಲೆಗಳನ್ನು ಕಡಿದುಹಾಕಿ ಶತಮಾನ ಶತಮಾನಗಳಿಂದಲೂ ನರಳುತ್ತಿರುವ ನಮ್ಮ ತಾಯಿಯ ಬಂಧವಿಮೋಚನೆ ಮಾಡೋಣ ಬನ್ನಿ... ಬನ್ನಿ... ಓಡಿ... ಬನ್ನಿ..." ಎಂದು ಉತ್ತೇಜಕವಾಗಿ ಕರೆಯುತ್ತಿತ್ತು ಗುಂಪು.

ಶಾಲೆಯೊಳಗೆ ಕುಳಿತ ವಿದ್ಯಾರ್ಥಿಗಳಿಗೆ ತಾವೂ ಶಾಲೆ ಬಿಟ್ಟು ಆ ಗುಂಪನ್ನು ಸೇರಬೇಕು ಎನಿಸಿತು. ಪುಸ್ತಕಗಳನ್ನು ಬಗಲಿಗೇರಿಸಿ ಹೊರಟೇಬಿಟ್ಟರು.

ಸಿಟ್ಟುಗೊಂಡ ಉಪಾಧ್ಯಾಯರು ಕೂಗಿದರು.

"ಎಲ್ಲಿಗೆ ಹೊರಡ್ತಾ ಇದ್ದೀರಿ ನೀವೆಲ್ಲರೂ ? ಸುಮ್ಮನೆ ನಿಮ್ಮ ಪಾಡಿಗೆ ನೀವು ಕುಳಿತುಕೊಂಡು ಲೆಕ್ಕ ಮಾಡಿ. ನೀವು ಹೊರಗಡೆ ಹೋಗಿ ಆ ಗುಂಪಿನೊಂದಿಗೆ ಕೂಗಿದಾಕ್ಷಣ ಸ್ವರಾಜ್ಯ ದೇಶಕ್ಕೆ ಬಂದು ಬಿಡೋದಿಲ್ಲ..."

ಉಪಾಧ್ಯಾಯರ ಕೂಗು ಕ್ಲಾಸಿನಲ್ಲೇ ಉಳಿಯಿತು.

ಹುಡುಗರೆಲ್ಲ ಓಡಿಬಂದು ಗುಂಪನ್ನು ಕೂಡಿಕೊಂಡರು. ಇತರ ತರಗತಿಗಳ ವಿದ್ಯಾರ್ಥಿಗಳೂ ಬಂದು ಸೇರಿದರು.

ಇಷ್ಟೆಲ್ಲ ಜನಸಂದಣಿಯಿಂದ ದೊಡ್ಡದಾದ ಆ ಗುಂಪು ಪ್ರಚಂಡ ಮೆರವಣಿಗೆ ಮಾಡುತ್ತ ಹೊರಟಿತು. ಹೊಳೆಯ ನೀರಿನ ಮೇಲೆ ಕುಳಿತ ಬೆಳ್ಳಕ್ಕಿಗಳಂತೆ ಆ ಗುಂಪಿನ ಉದ್ದಕ್ಕೂ ಗಾಂಧೀ ಟೋಪಿಗಳ ಮೆರವಣಿಗೆ, ಅಲ್ಲಲ್ಲಿ ರಾಷ್ಟ್ರಧ್ವಜಗಳನ್ನು ಎತ್ತಿ ಹಿಡಿದ ಕೈಗಳು. ಮಧ್ಯೆ ಮಧ್ಯೆ ಕ್ರಾಂತಿ ಘೋಷಣೆ–

"ಮಹಾತ್ಮ ಗಾಂಧೀಕಿ ಜೈ – ಮಹಾತ್ಮ ಗಾಂಧೀಕಿ ಜೈ."

ಹೀಗೆ ಮೆರವಣಿಗೆ ಸಾಗುತ್ತಿರುವಾಗ ಪೋಲೀಸರು ಬಂದರು. ಅದು ಮುಂದೆ ಸಾಗದಂತೆ ನಿಂತು ಅಡ್ಡ ಹಾಕಿದರು.

ಗುಂಪಿನ ಮುಂಭಾಗದಲ್ಲಿ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದ ತರುಣನಿಗೂ ಪೋಲೀಸ್ ಇನ್ಸ್‌ಪೆಕ್ಟರಿಗೂ ಮಾತಿಗೆ ಮಾತು ಬೆಳೆಯಿತು.

"ಹೀಗೆ ಮೆರವಣಿಗೆ ತೆಗೆದುಕೊಂಡು ಹೋಗೋದು ಕಾನೂನಿಗೆ ವಿರುದ್ಧ ಎಂದು ತಿಳಿದಿಲ್ಲವೆ ?" ಎಂದು ಪೋಲೀಸ್ ಇನ್ಸ್‌ಪೆಕ್ಟರ್ ಪ್ರಶ್ನಿಸಿದ.

ಆ ತರುಣನಿಂದ ತೀಡಿದಂತೆ ಬಂತು ಉತ್ತರ:

"ಪರದೇಶೀ ಸರಕಾರದ ಯಾವ ಕಾನೂನನ್ನೂ ನಾವು ಮನ್ನಿಸುವುದಿಲ್ಲ."

"ಲಾಠಿ ಛಾರ್ಜು ಮಾಡಬೇಕಾಗುತ್ತದೆ."

"ಸ್ವಾತಂತ್ರ್ಯ ಯೋಧರು ಲಾಠೀ ಚಾರ್ಜನ್ನೂ ಸಹಿಸಬೇಕು. ಗುಂಡಿನೇಟನ್ನೂ ಸಹಿಸಬೇಕು.

"ಎಷ್ಟಯ್ಯಾ ಹರಟ್ತೀಯಾ ?" ಎಂದು ಕ್ರುದ್ಧವಾಗಿ ತರುಣನ ಕೆನ್ನೆಗೆ ಬಲವಾಗಿ ತೀಡಿದ ಇನ್ಸ್‌ಪೆಕ್ಟರ್...

ಆ ತರುಣ ಆಜಾನುಬಾಹು. ಹುಲುಸಾಗಿ ಬೆಳೆದ ಹರವಾದ ಎದೆ. ಬಿಳಿಯ ಖಾದಿ ಅಂಗಿಯೊಳಗೆ ಪದರ ಪದರವಾಗಿ ಬಿಗಿದು ಉಬ್ಬಿದ ದಪ್ಪನೆಯ ತೋಳುಗಳು... ಆ ತೋಳು ಒಂದೇ ಸಲ ಬೀಸಿದ್ದರೂ ಇನ್ಸ್‌ಪೆಕ್ಟರ್ ಹತ್ತು ಗಾವುದ ಹಾರಿ ಹೋಗುತ್ತಿದ್ದ – ಆ ವಿಚಾರ ಇದೀಗ ಹೊಳೆದುದರಿಂದ ಇನ್ಸ್‌ಪೆಕ್ಟರ್ ಭೀತಿಯಿಂದ ಇಲಿಮರಿಯಾಗಿದ್ದ.

ಆದರೆ ಇನ್ಸ್‌ಪೆಕ್ಟರ್ ಬಗೆದಂತೆ ಆ ತರುಣ ಗಾಂಧೀಭಕ್ತ ಪ್ರತೀಕಾರಕ್ಕೆ ಹಾತೊರೆಯಲಿಲ್ಲ. ಧ್ವಜವನ್ನೆತ್ತಿ ಹಿಡಿದು ಶಾಂತವಾಗಿ ಹೇಳಿದ :

"ನಾವು ಅಹಿಂಸೆ ಪಾಲಿಸುವ ಯೋಧರು. ನಿಮ್ಮಂತಹ ನೌಕರಶಾಹಿ ಗುಲಾಮರು ಎಷ್ಟು ಹಿಂಸಿಸಿದರೂ ನಾವು ತಾಳ್ಮೆ ತಪ್ಪುವುದಿಲ್ಲ..."

ಪೆಚ್ಚು ಪೆಚ್ಚಾದ ಇನ್ಸ್‌ಪೆಕ್ಟರ್ ಜನರ ಕಡೆ ದೃಷ್ಟಿ ಹೊರಳಿಸಿದ.

ಜನರ ಸಮೂಹ ಕಿಲಕಿಲನೆ ನಕ್ಕಿತು.

ಇನ್ಸ್‌ಪೆಕ್ಟರಿಗೆ ಅವಮಾನವಾದಂತಾಯಿತು.

ರೋಷದಿಂದ ಹಲ್ಲು ಕಡಿಯುತ್ತಾ "ಛಾರ್ಜ್" ಎಂದು ಸಿದ್ಧರಾಗಿ ನಿಂತ ಪೋಲೀಸ್ ಪಡೆಗೆ ಆಜ್ಞೆ ಮಾಡಿದ.

ಲಾಠಿ ಪ್ರಹಾರಕ್ಕೆ ಮೊದಲಾಯಿತು. ಕುಡಿದು ಬಂದ ಪೋಲೀಸರ ತಂಡ ಮುಖ, ಮೈಯೆನ್ನದೆ ಜನತೆಯನ್ನು ಹಿಗ್ಗಾ ಮುಗ್ಗಾ ಹೊಡೆದರು.

ಪೋಲೀಸರ ಈ ಪಶುವರ್ತನೆಯನ್ನು ಕಂಡು ಹೇಸಿ ನಟರಾಜನೂ ಅನಂತನೂ ತಮ್ಮ ಸರದಿ ಯಾವಾಗ ಬರುವುದೊ ಎಂದು ನಿರೀಕ್ಷಿಸುತ್ತ ನಿಂತರು.

ನಟರಾಜನಿಗೆ ಮಾತ್ರ ಅಸಮಾಧಾನ. ಸಹಸ್ರಾರು ಜನ ಕೇವಲ ಇಪ್ಪತ್ತು ಮೂವತ್ತು ಪೋಲೀಸರ ಕಯ್ಯಿಂದ ಏಟು ತಿನ್ನುವುದನ್ನು ನೋಡಿ ಅವನು ಸಹಿಸದಾದ...

"ಥೂ ಎಂಥ ಹೇಡಿ ಜನ ?... ಇಷ್ಟು ಜನ ಇದ್ದಾರೆ–ಮನಸ್ಸು ಮಾಡಿದರೆ ಈ ಪೋಲೀಸ್‌ನೋರನ್ನ ಇರುವೆ ಹೊಸಗಿದ ಹಾಗೆ ಹೊಸಗಿ ಹಾಕಿಬಿಡಬಹುದು" ಎಂದು ಅನಂತನಿಗೆ ಉದ್ರೇಕಗೊಂಡು ಹೇಳಿದ.

"ಹೌದಲ್ಲವಾ, ಎಷ್ಟು ನಾಚಿಕೆಕೇಡು?" ಎಂದು ಅನಂತನೂ ಒಪ್ಪಿಕೊಂಡನು.

ಆದರೆ ಅವರಿಬ್ಬರ ಹತ್ತಿರವೇ ನಿಂತ ಹಿರಿಯನೊಬ್ಬ, "ಹೌದು ಹೊಸಕೇ ಹಾಕಬಹುದು. ಆದರೆ ಗಾಂಧೀಜಿ ಹೇಳಿದಾರೆ, ಅಹಿಂಸೆ ಪಾಲಿಸಬೇಕು ಅಂತ" ಎಂದು ತಿಳಿಯಪಡಿಸಿದ.

ಆನಂತ ಏನೋ ಹೇಳಬೇಕೆಂದಿದ್ದ –

ಅಷ್ಟರಲ್ಲಿ ಪೋಲೀಸನೊಬ್ಬ ನಟರಾಜನ ತಲೆಗೆ ಲಾಠಿಯನ್ನು ಬೀಸಲು ಗುರಿಯಿಡುತ್ತಿದ್ದ.

ಅದನ್ನು ನಿರುಕಿಸಿದ ಅನಂತ ಭೀತಿಯಿಂದ ನಡುಗಿದ. ಕಂಪಿತ ಸ್ವರದಲ್ಲಿ "ನಟ್ರಾಜಾ...." ಎಂದವನು ಪೋಲೀಸಿನವನ ಕಡೆ ಕೈ ತೋರಿಸಿದ.

ಆದರೆ ಅಷ್ಟರಲ್ಲೇ ಕಾಲ ಮಿಂಚಿಹೋಗಿತ್ತು.

ಪೋಲೀಸಿನವನ ಲಾಠಿ ಬಂದು ನಟರಾಜನ ಹಣೆಗೆ ಕಠೋರವಾಗಿ ಬಡಿದಿತ್ತು.

ಬಿಸಿ ನೆತ್ತರು ನಟರಾಜನ ಹಣೆಯಿಂದ ಬಳಬಳನೆ ಸುರಿಯಿತು. ಬಿದ್ದ ಏಟಿಗೆ ತತ್ತರಿಸುತ್ತಿದ್ದರೂ "ಮಹಾತ್ಮ ಗಾಂಧೀಕಿ ಜೈ" ಎಂದು ಒಂದು ಸಲ ಘೋಷಿಸಿ ನೆಲಕ್ಕುರುಳಿದ ನಟರಾಜ.

೨೩

ಎಷ್ಟೋ ಹೊತ್ತಿನ ಮೇಲೆ ಪ್ರಜ್ಞೆ ಬಂದ ನಟರಾಜನನ್ನು ಅನಂತ ಸಾವಧಾನವಾಗಿ ನಡೆಸಿಕೊಂಡು ಮನೆಗೆ ಕರೆದು ತಂದ.

ನಟರಾಜನ ಹಣೆಯ ಗಾಯವನ್ನು ನೋಡಿ ಯಶೋದಮ್ಮ ಗಾಬರಿಗೊಂಡಳು. ಅನಂತನಿಂದ ಎಲ್ಲ ಸಮಾಚಾರವನ್ನು ತಿಳಿದು ಅವಳಿಗೆ ದುಃಖವಾಯಿತು. ಸ್ವಲ್ಪಹೊತ್ತಿಗೆ ಮುಂಚೆ ರೈಲಿನಿಂದ ಬಂದು ಮಲಗಿದ್ದ ನಂಜುಂಡಸ್ವಾಮಿಯನ್ನು ಏಳಿಸಿದಳು. ಅವನು "ಹಾಳು ಪೋಲೀಸಿನೋರಿಗೆ ಏನು ಬಂದದೆಯೊ, ಮಕ್ಕಳನ್ನೆಲ್ಲಾ ಹಾಗೆ ಹೊಡಿಯೋಕೆ" ಎನ್ನುತ್ತಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಇಲಾಜು ಮಾಡಿಸಿದ.

ಮುಂದೆ ಎಂಟು ದಿನಗಳಲ್ಲಿ ನಾಗಜ್ಜಿ ಮಂಗಳೆಯ ಕಯ್ಯಿಂದ ಬರೆಸಿದ ಪತ್ರವೊಂದು ಬಂದಿತು. ಅದರಲ್ಲಿ ಕಲ್ಲಹಳ್ಳಿಯಿಂದ ಮೈಸೂರಿಗೆ ಬಂದಿದ್ದ ನಿರ್ವಾಣೇಗೌಡನಿಂದ ನಟರಾಜನಿಗೆ ಏಟು ಬಿದ್ದಿರುವ ಸಂಗತಿಯನ್ನು ಕೇಳಿದುದಾಗಿಯೂ, ನಟರಾಜನ ಆರೋಗ್ಯಕ್ಕೆ ತಾವೆಲ್ಲರೂ ಕಾತರಗೊಂಡಿರುವುದಾಗಿಯೂ ಅವನನ್ನು ಒಡನೆಯೇ ಊರಿಗೆ ಕಳುಹಿಸಿ ಕೊಡಬೇಕೆಂದು ಆ ಪತ್ರದಲ್ಲಿ ನಿರೂಪಿಸಿತ್ತು.

ಆ ಕಾಗದವನ್ನೋದಿದ ನಂಜುಂಡಸ್ವಾಮಿ, "ಆ ಮುದುಕಿಗೆ ಮೊಮ್ಮಗ ಅಂದರೆ ಅದೇನು ಆಸೆಯೋ ? – ಮಂಡೆ ಕೂದಲು ಚುಲ್ ಅನ್ನೋ ಹಾಗಿಲ್ಲ... ಹೂ, ಹೋಗಿದ್ದು ಬಾ ನಟರಾಜ ಕಲ್ಲಹಳ್ಳೀಗೆ, ನಾಳೇನೆ" ಎಂದು ಊರಿಗೆ ಹೋಗಲು ತನ್ನ ಅನುಮತಿಯಿತ್ತ.

ಬೆಳಗಿನ ಬಸ್ಸಿನಲ್ಲೇ ನಟರಾಜ ಹೊರಟು ಕಲ್ಲಹಳ್ಳಿಯಲ್ಲಿ ಮಧ್ಯಾಹ್ನದ ಊಟಕ್ಕೆ ಸರಿಯಾಗಿ ಹಾಜರಾದ.

ಬಾಗಿಲಿನಲ್ಲೇ ಮರನಿಂಗಿಯೊಡನೆ ಜಗುಲಿಯ ಕಟಕಟೆಯನ್ನೊರಗಿ ನಟರಾಜನಿಗೆ ಏಟು ಬಿದ್ದ ಸುದ್ದಿಯನ್ನೇ ಮಾತನಾಡುತ್ತಿದ್ದ ನಾಗಜ್ಜಿ ನಟರಾಜನನ್ನು ಕಂಡು, "ಅಕೊ !... ಬಂದೇಬುಟ್ಟ ನಟ್ರಾಜ..." ಎಂದಳು. ಸ್ವಲ್ಪ ಮುಂದಕ್ಕೆ ಸರಿದು "ಬಾ ಮೊಗಾ...ನಿಂಗೆ ನೂರು ವರ್ಷ ಆಯುಸ್ಸು... ಈಗ ಹೆಂಗಿದೀಯೆ ?" ಎಂದು ಮೈದಡವುತ್ತಾ ಕೇಳಿದಳು.

"ಈಗೇನೂ ಇಲ್ಲ ಅಜ್ಜಿ, ಚೆನ್ನಾಗಿದೀನಿ, ಗಾಯ ಇನ್ನೂ ಮಾಸಿಲ್ಲ, ಅಷ್ಟೆ."

"ರಣ ಆಗಯ್ತಾ ಮೊಗಾ" ಎಂದು ಮರಿನಿಂಗಿ ತಾನೂ ಕೇಳಿದಳು.

"ಅಂಥದೇನೂ ಇಲ್ಲ, ಪೋಲೀಸಿನೋನು ಹೊಡೆದಾಗ ಒಂದಿಷ್ಟು ರಕ್ತ ಸುರೀತು. ಮೂರು ಕಾಸಿನ ಅಗಲಕ್ಕೆ ಇದೆ ಗಾಯ."

ಅಷ್ಟರಲ್ಲಿ ನಟರಾಜನನ್ನೇ ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದ ನಾಗಜ್ಜಿ ಅವನ ಕರಿಯ ಟೋಪಿ ಹೋಗಿ ಅದರ ಬದಲು ಬಿಳಿಯ ಟೋಪಿ ಬಂದು ತಲೆಯ ಮೇಲೆ ಕುಳಿತಿರುವುದನ್ನು ಗಮನಿಸಿ, "ಇದೇನಾ...ನಿನ್ನ ಟೋಪಿಯೇನಾಯ್ತು ?... ಈ ದುಬಟೀಲಿ ಮಾಡಿದಂಗಿರಾ ತೋಪಿ ಯಾಕೆ ಸಿಕ್ಕಿಸಿಕೊಂಡಿದೀಯೇ ?..." ಎಂದು ಕೇಳಿದಳು.

ನಟರಾಜು ನಕ್ಕು, "ಇದು ದುಪಟೀಲಿ ಮಾಡಿದ ಟೋಪಿ ಅಲ್ಲ ಅಜ್ಜಿ... ಇದು ಖಾದಿ ಟೋಪಿ. ನಮ್ಮ ದೇಶದ ದುಡ್ಡು ನಮ್ಮ ದೇಶದಲ್ಲೇ ಉಳೀಲಿ ಅಂತ ಗಾಂಧೀಜಿ ಹೂಡಿರೊ ಹೂಟ"–ಶಾಲಾ ಉಪಾಧ್ಯಾಯರು ತಿರುಮಲರಾಯರು ತನಗೆ ಹೇಳಿದುದನ್ನೇ ನಟರಾಜನೂ ಹೇಳುತ್ತಿದ್ದ.

ಅಷ್ಟರಲ್ಲಿ ಹಿಟ್ಟು ಉಡಿದು ತೊಟ್ಟಿಗೆ ಬಂದ ಪಾರ್ವತಮ್ಮ ಜಗುಲಿಯ ಬಳಿ ನಟರಾಜನನ್ನು ಕಂಡು "ಓ ! ನಟ್ರಾಜಾ" ಎನ್ನುತ್ತಾ ಹೊರಗೆ ಬಂದಳು.

ತಾಯಿಯ ಕೂಗು ಕೊಟ್ಟಿಗೆಯಲ್ಲಿ ಹಸುಗಳಿಗೆ ಹುಲ್ಲು ಹಾಕುತ್ತಿದ್ದ ಮಂಗಳೆಗೆ ಕೇಳಿತು. ನಟರಾಜ ಬಂದನೆಂದು ತಿಳಿದು ಮಂಗಳೆಯ ಹೃದಯ ಹಿಗ್ಗಿ ಹಿಗ್ಗಿ ಹಾಡಿತು. ಅವನನ್ನು ಬೇಗ ನೋಡಿಬಿಡುವ ಉತ್ಸಾಹದಿಂದ ಓಡುತ್ತ ಬಂದಳು. ಆದರೆ ತೊಟ್ಟಿಯ ಬಾಗಿಲಿನಲ್ಲಿ ಗಾರೆಯ ನೆಲದ ಮೇಲೆ ಚೆಲ್ಲಿದ ನೀರಿನ ಮೇಲೆ ಕಾಲಿಟ್ಟುದರಿಂದ ಜಾರಿ ಬಿದ್ದಳು. ಕೈ ಬಳೆಗಳೆಲ್ಲಾ ಒಡೆದು ಹೋದುವೇ ವಿನಹ ಮತ್ತೇನೂ ಹೆಚ್ಚು ಪೆಟ್ಟಾಗಿರಲಿಲ್ಲ. ಬಳೆಗಳ ಚೂರುಗಳನ್ನೆಲ್ಲಾ ಯಾರೂ ಕಾಣಬಾರದೆಂಬ ಅಭಿಪ್ರಾಯದಿಂದ ಎತ್ತುತ್ತಿರುವಾಗ ಮೊದಲು ಒಳಗೆ ಬಂದ ನಾಗಜ್ಜಿ, "ಇದೇನಾ ಮಂಗಲೀ, ನೀ ಮಾಡ್ತಾ ಇರೋದು ?..." ಎಂದವಳು, ಮಂಗಳೆ ಬಳೆಗಳ ಚೂರುಗಳನ್ನೆತ್ತುತ್ತಿರುವುದನ್ನು ಗಮನಿಸಿ "ಅಯ್ಯೊ, ಬಿದ್ದುಬುಟ್ಟೆಯೇನಾ ?" ಎಂದು ಹತ್ತಿರ ಹೋಗಿ ಕೈಗಳಲ್ಲಿ ಒಂದು ಬಳೆಯೂ ಇಲ್ಲದಿರುವುದನ್ನು ನೋಡಿ "ಇದ್ಯಾಕವ್ವಾ ಹಿಂಗಾಯ್ತು ?... ಗ್ಯಾನವಾಗಿ ನಡೀಬಾರದೇನಾ ?... ನಟ್ರಾಜಾ ಹಟ್ಟೀಗೆ ಬರಾಕು, ನಿನ್ನ ಬಳೆ ಒಡೆಯಾಕೂ ಒಂದೇ ಆಯ್ತಲ್ಲಾ ?..." ಎಂದು ಕೇಳಿ, "ಯೇನು ಅಪಸಕುನವೊ, ಯೇನು ಕತೆಯೊ..." ಎಂದು ತನ್ನಷ್ಟಕ್ಕೇ ಗೊಣಗಿಕೊಂಡಳು.

ಅಷ್ಟರಲ್ಲಿ ಒಳಗೆ ಬಂದು ಅವರಿಬ್ಬರ ಮುಂದೆಯೇ ನಿಂತ ನಟರಾಜನನ್ನು ಮಂಗಳೆ ಅಳುಕಿ, ಕತ್ತೆತ್ತಿ ನೋಡಿದಳು. ಹೆಚ್ಚು ಪೆಟ್ಟು ತಾಗಿಲ್ಲವೆಂದು ಖಚಿತವಾದಾಗ ಭಾರ ಕಳೆದಂತೆ ನಿಡಿದಾಗಿ ಉಸಿರ್ಗರೆದಳು. ನಟರಾಜ ಅವಳನ್ನೇ ನಿರೀಕ್ಷಿಸುತ್ತಾ ಹುಸಿನಗೆ ನಗುತ್ತಿದ್ದ.

ಮಧ್ಯಾಹ್ನ ಊಟಕ್ಕೆ ಕೂರುವ ವೇಳೆಗೆ ವಿಷಕಂಠನೂ ಬಂದಿದ್ದ. ನಟರಾಜನನ್ನು ನೋಡಿ "ಆಗ್ಲೆ ಬಂದುಬುಟ್ಟವನೆ !...ಯೇನಾ ವಿಚಾರ ?" ಎಂದು ತಿರಸ್ಕಾರದಿಂದ ಕೇಳಿ ನಟರಾಜ ಉತ್ತರ ಕೊಡುವುದರೊಳಗೆ "ಹೂ, ಹೂ ಉಣ್ಣುತ್ತಾ ಮಾತಾಡಾವಾ ಬಾ" ಎಂದು ಕೈಕಾಲು ತೊಳೆದುಕೊಳ್ಳಲು ಹೋದ.

ಊಟ ಮಾಡುವಾಗ ನಾಗಜ್ಜಿಯೇ ಕೇಳಿದಳು :

"ನೀ ಯಾಕಪ್ಪಾ ಇದಕ್ಕೆಲ್ಲಾ ಸೇರಾಕೋದೆ...?...ಗಾಂಧಿ ಅಂತವನಲ್ಲಾ ಅವ್ನು ಯಾರು ?...ದೇಶದ ಮ್ಯಾಗೆಲ್ಲ ಯಾಕೆ ದಂಗೆ ಯೇಳಸ್ತಾ ಅವ್ನೆ ಹಿಂಗೆ ?..."

"ಗಾಂಧಿ, ಒಬ್ಬ ಮಹಾತ್ಮಾ ಅಜ್ಜೀ. ನಮ್ಮ ದೇಶಾನ ಈಗ ಇಂಗ್ಲೀಷ್‌ನೋರು ಆಳ್ತಾ ಇದಾರೆ..."

"ಕುಂಪಣಿಯೋರು–?"

"ಹೂ, ಕುಂಪಣಿಯೋರು ಆಳ್ತಾ ಇದಾರೆ. ಅವರನ್ನ ಓಡಿಸಬೇಕು. ಅವರ ಬದಲು ನಾವೇ ನಮ್ಮ ದೇಶ ಆಳಬೇಕು–ನೋಡಜ್ಜಿ ಇದೇ ಗಾಂಧಿ ಮಹಾತ್ಮ ಹೇಳೊ ಮಾತು..."

"ಯಾಕೆ ಚೆಂದಾಗೆ ಆಳ್ತಾ ಅವ್ನಲ್ಲ ಕುಂಪಣಿಯೋನು ?... ಅವ್ನು ಹೊಂಟೋಗಿಬುಟ್ಟರೆ ದೇಸ ಆಳಾಗೋಗಿಬುಡ್ತದೆ...ರಾಜ್ಯಾನ ಒಳ್ಳೆ ಹದ್ದುಬಸ್ತಿನಲ್ಲಿ ಇಟ್ಟವ್ನೆ ಅವ್ನು...ಹಿಂದಕ್ಕೆ 'ಓಡಿಗೆ' ಆಗಿತ್ತು, ಅವ್ನು ಬರಾಕೆ ಮುಂಚೆ...ಅಲ್ಲವಾ ಅವ್ವಾ ?" ಎಂದು ವಿಷಕಂಠಯ್ಯ ನಾಗಜ್ಜಿಯನ್ನು ಕೇಳಿದ.

"ಹೂಕನಂತೆ ಮೊಗಾ. ನಮ್ಮತ್ತೆ ಹೇಳ್ತಿದ್ದರು, ಓಡಿಗೆಯೋರು ಬಂದರೂ ಅಂದರೆ ಊರಿಗೆ ಊರೇಯಾ ಹಿಡಿದಿದ್ದನ್ನ ಹಿಡಿದಿದ್ದ ತಾವೇ ಬುಟ್ಟು ಓಡಿಬುಡ್ತಿದ್ರಂತೆ ಕಾಡಿಗೆ...ಬ್ಯಾಡವಂತೆ ಆಗಿನ ಪಜೀತಿ !...ಓಡಿಗೆಯೋರು ಬಂದು ಅಡಿಗೆ ಮಾಡಿದ್ದನ್ನೆಲ್ಲ ಆಕ್ಕೊಂಡು ತಿಂದು ಕಯ್ಯಿಗೆ ಸಿಕ್ಕಿದ್ನೆಲ್ಲ ದೋಚಿಕೊಂಡು ಪರಾರಿ ಆಯ್ತಿದ್ರಂತೆ..." ಬ್ರಿಟಿಷರು ಹೊರಟು ಹೋದರೆ ಮತ್ತೆಲ್ಲಿ 'ಓಡಿಗೆ'ಗೆ ಆರಂಭವಾಗುವುದೊ ಎಂಬ ಭಯದಿಂದ ನುಡಿದಳು ನಾಗಜ್ಜಿ.

ಅಜ್ಜಿಯ ಮುಗ್ಧತೆಗೆ ನಗುತ್ತಾ ನಟರಾಜ, "ಕುಂಪನಿಯೋನು ಹೊರಟೋದರೆ ಪುನಃ 'ಓಡಿಗೆ'ಗೆ ಆರಂಭ ಆಗ್ತದೆ ಅಂತ ತಿಳಿದುಕೊಂಡಿದೀಯ ಅಜ್ಜಿ ?...ಎಂದಿಗೂ ಇಲ್ಲ. ಗಾಂಧೀಜಿ ನಮ್ಮ ದೇಶಾನ ಅವರಿಗಿಂತ ಸಾವಿರ ಪಾಲು ಚೆನ್ನಾಗಿ ಆಳ್ತಾರೆ..." ಎನ್ನುತ್ತಿರುವಷ್ಟರಲ್ಲಿ ವಿಷಕಂಠಯ್ಯ ರೇಗಿ "ಹೂ, ನಿಮ್ಮ ಗಾಂಧಿ ಪಸೀತಾನೆ... ಕುಂಪನಿಯೋನ ಸಮಕ್ಕೆ ಯಾವೋನೂ ರಾಜ್ಯ ನಡಿಸಾಕೆ ಆಗಕ್ಕಿಲ್ಲ" ಎಂದ.

"ಹೌದೌದು, ಕುಂಪನಿಯೋನು ನಮ್ಮ ದೇಶದ ದುಡ್ಡನ್ನೆಲ್ಲಾ ತಗೊಂಡೋಗಿ ತನ್ನ ಭಂಡಾರಾನ ತುಂಬಿಕೊಳ್ತಾ ಇದಾನೆ. ಅದನ್ನ ನೀವು ಸರಿ ಅಂತ ಹೇಳ್ತೀರಿ ಅಲ್ಲವೆ ? ನಮ್ಮ ದೇಶದಲ್ಲಿ ಹೊಟ್ಟೆಗೆ ಬಟ್ಟೆಗೆ ಇಲ್ಲದೆ ಸಾಯ್ತಾ ಇರಲಿ !" ಎಂದು ನಟರಾಜ ನಿಷ್ಠುರವಾಗಿ ನುಡಿದ.

ವಿಷಕಂಠಯ್ಯನಿಗೆ ಇನ್ನೂ ರೇಗಿತು.

"ಓ, ನೀ ಬೋ ತಿಳುವಳಿಕಸ್ತ. ಸಾಕು ಸುಮ್ಕಿರು...ಮೂರು ಅಕ್ಷರ ಕಲ್ತಿವ್ನೀ ಅಂತ ಪರ್ತಿಷ್ಟೆ ಒಡೀಬ್ಯಾಡ..." ಎಂದು ನಟರಾಜನನ್ನೇ ಕಣ್ಣು ಕೆಂಪಗೆಮಾಡಿ ನೋಡಿದ.

ಇನ್ನು ಹೆಚ್ಚು ಮಾತಾಡಿ ಸುಖವಿಲ್ಲವೆಂದು ಮನಗಂಡು ನಟರಾಜ ಮೌನವಾಗಿ ಊಟ ಮುಗಿಸಿ ಎದ್ದ.

ವಾದವಾಗುತ್ತಿದ್ದಾಗ ಮಂಗಳೆ ಮನಸ್ಸಿನಲ್ಲಿ ನಟರಾಜನನ್ನೇ ವಹಿಸಿಕೊಂಡಿದ್ದಳು. ಅವಳಿಗೆ ತನ್ನ ತಂದೆಯ ಮಾತುಗಳು ಅಷ್ಟು ಸಮಂಜಸವಾಗಿ ತೋರಲಿಲ್ಲ.

ನಾಗಜ್ಜಿ ಯಾವ ಇತ್ಯರ್ಥಕ್ಕೂ ಬರಲು ಅಸಮರ್ಥಳಾಗಿ "ಹೆಂಗಾರಾ ಆಗಲಿ, ನೀವು ಊಟಮಾಡಿ ಯೇಳಿ...ಇದೇನಾ ಕಜರಗಳೆ ಅಟ್ಟೇಲಿ–?" ಎಂದಿದ್ದಳು.

ಸಂಜೆಯ ಹೊತ್ತಿಗೆ ನಟರಾಜನಿಗೆ ಏಟುಬಿದ್ದ ಸುದ್ದಿ ಊರಿಗೆಲ್ಲ ತಿಳಿಯಿತು. ಚಿಕ್ಕಂದಿನಲ್ಲಿ ಅವನೊಡನೆ ಒಟ್ಟಿಗೇ ಹುಣಸೂರಿಗೆ ಓದಲು ಹೋಗುತ್ತಿದ್ದ ಪುಟ್ಟ ಮತ್ತು ಮರಿ ಬಂದು ಮಾತನಾಡಿಸಿ ಹೋದರು. ಮುಚ್ಚಂಜೆಯ ವೇಳೆಗೆ ಆಯರಹಳ್ಳಿ ಅಯ್ಯನೂ ಕೋಲೂರಿಕೊಂಡು ಮೆಲ್ಲ ಮೆಲ್ಲನೆ ಬಂದು "ಈಗ ಚೆಂದಾಗಿದೀಯಾಪ್ಪಾ ?" ಎಂದು ಕುಶಲಪ್ರಶ್ನೆ ಮಾಡಿ ಹೋದ.

ರಾತ್ರಿ ಎಲ್ಲರಿಗೂ ಊಟವಾದ ಬಳಿಕ ತೊಟ್ಟಿಯಲ್ಲಿ ನಂಜುಂಡಸ್ವಾಮಿ ಮೈಸೂರಿನಿಂದ ಕಳುಹಿಸಿದ ಎಲೆಯನ್ನು ಕುಟ್ಟಾಣಿಯಲ್ಲಿ ಕುಟ್ಟುತ್ತಾ ನಾಗಜ್ಜಿ, ತಾನೂ ಎಲೆ ಅಡಿಕೆ ಹಾಕಿಕೊಳ್ಳುತ್ತಾ ಕುಳಿತಿದ್ದ ವಿಷಕಂಠಯ್ಯನೊಡನೆ, "ಈ ವರ್ಷ ನಟ್ರಾಜ ಪರೀಕ್ಸೆ ಮುಗಿಸೋವರೆಗೂ ಇಂಗೆ ಆಡ್ತಾ ಇರಲಿ...ಆಮ್ಯಾಕೆ ಅವ್ನ ಕುತ್ತಿಗೇಗೆ ಮಂಗಲಿ ಕಟ್ಟಿ ಆಕಿಬುಟ್ಟರೆ ತೆಪ್ಪಗಾಗೋಯ್ತಾನೆ..." ಎಂದು ಕುಚೋದ್ಯ ಮಾಡಿದಳು.

ಅಲ್ಲೇ ಇದ್ದ ಮಂಗಳೆ ನಾಚಿಕೆಯಿಂದ ಕತ್ತು ತಗ್ಗಿಸಿದವಳು. ಅದನ್ನು ಮಲಗುವವರೆಗೂ ಮೇಲೆತ್ತಲಿಲ್ಲ..

ಮುದುಕಿ ತಾಂಬೂಲವನ್ನು ಸವಿದ ನಂತರ ಎಲ್ಲರೂ ಮಲಗಿಕೊಂಡರು.

ನಾಗಜ್ಜಿಗೆ ಅಂದೇಕೋ ಬಹಳ ಹೊತ್ತಿನವರೆಗೆ ನಿದ್ದೆಹತ್ತಲಿಲ್ಲ, ಯೋಚನೆಯಲ್ಲಿಯೇ ಮುಳುಗಿದ್ದಳು. ಅಂದು ಮಧ್ಯಾಹ್ನ ಮಂಗಳೆ ತೊಟ್ಟಿಯಲ್ಲಿ ಜಾರಿ ಬಿದ್ದು ಕೈ ಬಳೆಗಳನ್ನೆಲ್ಲಾ ಒಡೆದುಕೊಂಡದ್ದು ಬರಲಿರುವ ಯಾವ ಅಪಶಕುನದ ಕುರುಹೋ? ಎಂದು ಮತ್ತೆ ಮತ್ತೆ ಚಿಂತಿಸಿದಳು. ಹೀಗೆ ಎಷ್ಟೋ ಕಾಲ ಕಳೆದ ಬಳಿಕ ತನ್ನ ಮನಸ್ಸನ್ನು ಅಧೈರ್ಯದ ಹಾದಿಯಿಂದ ಹಿಂದಿರುಗಿಸಿ ನಟರಾಜ–ಮಂಗಳೆಯರ ಭವಿಷ್ಯದ ಕಡೆಗೆ ಹರಿಯಬಿಟ್ಟಳು...ಯೋಚನೆ ಹರಿದಂತೆಲ್ಲಾ ಅಜ್ಜಿಯ ಮುಖ ಪ್ರಫುಲ್ಲಿತವಾಗುವುದು– "ವರಸಾಮ್ಯ ಬೋ ಚೆಂದಾಗದೆ..." ಎಂದು ತನಗೆ ತಾನೇ ಹೇಳಿಕೊಳ್ಳುವಳು...ಆ ಮಕ್ಕಳಿಬ್ಬರನ್ನೂ ಚಿಕ್ಕಂದಿನಲ್ಲಿ ಆಡಿಸುವಾಗ ಎಷ್ಟು ಬಾರಿ ಆ ರೀತಿ ಹೇಳಿಕೊಂಡುದಿಲ್ಲ ?... ಆದರೆ ಇಂದೇಕೊ ಒಂದು ಶಂಕೆ ಮುದುಕಿಯನ್ನು ಪ್ರಬಲವಾಗಿ ಕಾಡಿತು–

"ಅಲ್ಲೀಗಂಟ ನಾ ಇದ್ದೇನಾ ?...ನಟ್ರಾಜ–ಮಂಗ್ಲಿ ಲಗ್ನ ನೋಡೋ ಬಾಗ್ಯ ತಂದು ಹುಟ್ಟಿದ್ದಾವಾ ನನ್ನ ಕಣ್ಣು ?..." ಎಂಬ ಸಂದೇಹ ಅವಳ ಹೃದಯವನ್ನು ಕಲಕಿ ನಡುಗಿಸಿತು.

ಈ ಯೋಚನೆಯಲ್ಲಿ ನಾಗಜ್ಜಿಗೆ ನಿದ್ದೆಬಂದಾಗ ಮಧ್ಯರಾತ್ರಿಯೇ ಆಗಿತ್ತು.

ಬೆಳಗಿನ ಜಾವದ ಸಮಯದಲ್ಲಿ ಅಜ್ಜಿಯ ಪಕ್ಕಕ್ಕೆ ಮಲಗಿದ ನಟರಾಜ ಕನವರಿಸುತ್ತಿದ್ದ...ಎತ್ತರವಾದ ಒಂದು ದಿಬ್ಬ. ಆ ದಿಬ್ಬದ ನೆತ್ತಿಯ ಮೇಲೆ ಯಾರೊ ನಿಂತಂತಿದೆ. ಯಾರಿರಬಹುದು ?–ಭವ್ಯವಾದ ಆಕಾರ, ಸ್ಫೂರ್ತಿಯುತವಾದ ನಿಲುವು, ಪೌರುಷ ಕುಣಿಯುವ ಕಣ್ಣು...ಈಗ, ಈಗ ಗುರುತು ಸಿಕ್ಕಿತು–ಟೀಪುಸುಲ್ತಾನ ! ರಾಷ್ಟ್ರವೀರನಿಗೆ ಭಯ ಭಕ್ತಿಯಿಂದ ಸಲಾಂ ಮಾಡಿ ಕತ್ತೆತ್ತಿದ ನಟರಾಜ...ನಿಜವೇ? ನಿಜವೇ? ತಾನು ನೋಡುತ್ತಿರುವುದು ಕನಸಲ್ಲವೇ? ಅಲ್ಲವೇ? ಕೌತುಕ ತುಂಬಿದ ನಯನಗಳಿಂದ ಆಪಾದಮಸ್ತಕ ಆ ತೇಜೋಮೂರ್ತಿಯನ್ನೇ ಎವೆಯಿಕ್ಕದೆ ನೋಡಿದ... ನವರತ್ನ ಖಚಿತವಾದ ಮೆಟ್ಟುಗಳು, ರೇಷ್ಮೆಯ ಸುರುಪಾಲು, ಕಲಾಪತ್ತಿನ ಅಂಗರೇಖು, ನಡುವಿಗೆ ಬಂಗಾರದ ಖಡ್ಗವನ್ನು ಓರೆಯಾಗಿ ಹೊತ್ತ ಚಿನ್ನದ ನಡುಕಟ್ಟು, ಕೊರಳಿಗೆ ಮುತ್ತು ರತ್ನಗಳ ಥಳಥಳಿಸುವ ಕಂಠೀಹಾರಗಳು...ಮೇಲೆ ಮೇಲೆ ಹರಿಯಿತು ನಟರಾಜನ ದೃಷ್ಟಿ...ದೃಢನಿಶ್ಚಯವನ್ನು ಸೂಚಿಸುವ ಆ ಗಲ್ಲ, ಆ ಬಾಯಿ, ವೈರಿಭಯಂಕರವಾದ ಆ ನಸುಬಾಗಿದ ನಾಸಿಕ, ತೇಜಃಪುಂಜವಾದ ಆ ನಯನಗಳು...ಮುಂದೆ ಮುಂದೆ ಹೋಯಿತು ನಟರಾಜನ ನೋಟ–ಹಾ ! ಏನದು ?... ರಕ್ತ ! ಸುಲ್ತಾನನ ಹಣೆಯಲ್ಲಿ ರಕ್ತ : ನಟರಾಜನ ಹಣೆಯಲ್ಲಿ ಸೋರುತ್ತಿದ್ದಂತೆ ಸುಲ್ತಾನನ ಹಣೆಯಿಂದ ಪುಟಪುಟಿಸುತ್ತಿದೆ ಕೆಂಪು, ಕೆಂಪು ರಕ್ತ...ನೋವು ತುಂಬಿದ ಹೃದಯದಿಂದ ನಟರಾಜ ನಿರೀಕ್ಷಿಸುತ್ತಿದ್ದ...ಅಯ್ಯೋ ! ಅಯ್ಯೊ !! ಸುಲ್ತಾನ ನಿಂತ ದಿಬ್ಬ ಬಾಯಿಬಿಟ್ಟು ಅಗಾಧವಾದ ಕಮರಿಯಾಗುತ್ತಿದೆ !!!...ಆಯಿತು. ಆಯಿತು, ಆ ಕಮರಿಯಲ್ಲಿ ಸುಲ್ತಾನ ಬೀಳುತ್ತಿದ್ದಾನೆ–ಬಿದ್ದ–ಬಿದ್ದೇ ಹೋದ...ಕಮರಿ ಮುಚ್ಚಿತು–

ಮತ್ತೆ ದಿಬ್ಬ ಕಾಣುತ್ತಿದೆ. ಆ ದಿಬ್ಬದ ಮೇಲೆ ಇನ್ನಾವುದೊ ವ್ಯಕ್ತಿ ನಿಂತಿದೆ–ಈ ಹೊಸ ಮೂರ್ತಿ ಯಾರು? ಎಲ್ಲೋ ನೋಡಿದಂತಿದೆ ಈತನನ್ನು!...ಸೂಕ್ಷ್ಮವಾಗಿ, ಸೂಕ್ಷವಾಗಿ ನಿಟ್ಟಿಸಿ ನೋಡಿದ ನಟರಾಜ–ಉಪಾಧ್ಯ ತಿರುಮಲರಾಯರ ಮನೆಯಲ್ಲಿ ತೂಗು ಹಾಕಿದ್ದ ಚಿತ್ರಕ್ಕೂ ಇದಕ್ಕೂ ಸಾಮ್ಯವಿದೆಯೇ ?...ಇದೆ. ಇದೆ. ಈತನೇ ಅಲ್ಲವೇ ನಮ್ಮ ಹೊಸ ನಾಯಕ ಮಹಾತ್ಮ ಗಾಂಧಿ ! ಸತ್ಯವನ್ನೇ ಊರುಗೋಲಾಗಿ ಹಿಡಿದು, ಅಹಿಂಸೆಯ ಧೋತ್ರವನ್ನು ಮೈತುಂಬ ಸುತ್ತಿ, ವಾತ್ಸಲ್ಯಪೂರ್ಣ ದೃಷ್ಟಿಯಿಂದ ಇಡೀ ಹಿಂದೂಸ್ಥಾನಕ್ಕೆ ತಂದೆಯಾದ ಗಾಂಧೀಜಿ !....ಅತ್ಯಂತ ಭಕ್ತಿಯಿಂದ ಶಿರಬಾಗಿ ನಮಸ್ಕರಿಸಿ ಘೋಷಿಸಿದ ನಟರಾಜ !

"ಮಹಾತ್ಮ ಗಾಂಧೀಕಿ ಜೈ"–

ಬೆಚ್ಚಿಬಿದ್ದಂತಾಗಿ ಎದ್ದಳು ನಾಗಜ್ಜಿ. ನಟರಾಜನ ಮೈದಡವಿ "ಯಾಕೆ ಮೊಗಾ...ಹಂಗೆ ಅರಚಿಕೊಂಡೇ?" ಎಂದು ಕೇಳಿದಳು.

ನಟರಾಜನ ಚಿತ್ತ ಇನ್ನೂ ಕನಸಿನಂಚಿನಲ್ಲಿಯೇ ಸುಳಿದಾಡುತ್ತಿತ್ತು.

"ಅವನೆಲ್ಲಿ ಅಜ್ಜೀ–?" ಎಂದು ಕೇಳಿದ.

"ಯಾರು ಮೊಗಾ?"

"ಮಹಾತ್ಮ ಗಾಂಧಿ–"

ಅಜ್ಜಿ ನಕ್ಕಳು–ಅವಳಿಗೆ ಅರ್ಥವಾಗಿತ್ತು.

"ಮಲಕ್ಕೊಳಾ...ನಿಂಗೆಲ್ಲೊ ಕನಸು ಬಿದ್ದಿರಬೌದು," ಎಂದು ಆದರದಿಂದ ಮೃದುವಾಗಿ ತಟ್ಟಿದಳು.

೨೪

ಮುಂದೆ ಎರಡು ದಿನಗಳಲ್ಲಿ ಮೈಸೂರಿಗೆ ಬಂದ ನಟರಾಜ ಮೊದಲಿನಂತೆ ಓದಿನಲ್ಲಿ ಆಸಕ್ತಿ ವಹಿಸಲು ಪ್ರಾರಂಭಿಸಿದ. ಆದರೆ ಆ ದಿನಗಳಲ್ಲಿ ರಾಜಕೀಯ ವಾತಾವರಣ ಇವನ ಓದಿಗೆ ಸಹಕಾರಿಯಾಗಿರಲಿಲ್ಲ. ಎಲ್ಲೆಲ್ಲೂ ಮೆರವಣಿಗೆಗಳು, ಎಲ್ಲೆಲ್ಲೂ ಹರತಾಳಗಳು. ಎಲ್ಲೆಲ್ಲೂ ಮುಷ್ಕರಗಳು–ಅವುಗಳನ್ನು ದಮನ ಮಾಡಲು ಪೋಲೀಸರು ನಡೆಸುತ್ತಿದ್ದ ಅತ್ಯಾಚಾರ...ಇವು ಶಾಲಾ ಕಾಲೇಜುಗಳ ತರುಣರನ್ನು ಉದ್ವಿಗ್ನಗೊಳಿಸಿದ್ದವು.

ಈ ಎಲ್ಲ ಕಾರಣಗಳಿಂದ ಆ ಬಾರಿ ಪರೀಕ್ಷೆಯಲ್ಲಿ ನಟರಾಜನಾಗಲಿ ಅನಂತನಾಗಲಿ ಚೆನ್ನಾಗಿ ಮಾಡಲಿಲ್ಲ.

ಪರೀಕ್ಷೆ ಮುಗಿದ ಬಳಿಕ ಕಲ್ಲಹಳ್ಳಿಗೆ ಬಂದ ನಟರಾಜನಿಗೆ ತನ್ನ ಪರೀಕ್ಷೆಯ ಫಲಿತಾಂಶದಲ್ಲಿ ಅನುಮಾನ ಇದ್ದೇ ಇದ್ದಿತು.

ಬೇಸಿಗೆಯ ರಜ ಮುಗಿಯುತ್ತ ಬಂದು ಪರೀಕ್ಷೆಯ ಫಲಿತಾಂಶ ಪ್ರಕಟವಾಗುವ ದಿನ ಹತ್ತಿರ ಬಂದಂತೆ ನಟರಾಜನ ಹೃದಯ ಉದ್ವೇಗದಿಂದ ಬಡಿಯ ಹತ್ತಿತ್ತು.

ಹೀಗಿರುವಾಗ ಒಂದು ದಿನ ನಂಜುಂಡಸ್ವಾಮಿಯಿಂದ ಪತ್ರ ಬಂದಿತು. ಅದರಲ್ಲಿ ನಟರಾಜನೂ ಅನಂತನೂ ಪರೀಕ್ಷೆಯಲ್ಲಿ ಫೇಲ್ ಆದುದನ್ನೂ, ಅನಂತನಿಗೆ ಇದೇ ವರ್ಷ ಮದುವೆಗೆ ಏರ್ಪಾಟು ಮಾಡಿರುವುದನ್ನೂ ನಮೂದಿಸಿತ್ತು. ಇನ್ನು ಹದಿನೈದು ದಿನಕ್ಕೆ ಲಗ್ನ ನಿಷ್ಕರ್ಷೆಯಾಗಿರುವುದಾಗಿಯೂ ಅದರಲ್ಲಿ ತಿಳಿಸಿತ್ತು. ಎಲ್ಲರೂ ಕಾಗದ ಕಂಡ ಕೂಡಲೆ ಮೈಸೂರಿಗೆ ಹೊರಟು ಬರಬೇಕೆಂದು ನಂಜುಂಡಸ್ವಾಮಿ ತ್ವರೆ ಮಾಡಿದ್ದ.

ಅನಂತನ ವಿವಾಹದ ಸುದ್ದಿಯನ್ನು ಕೇಳಿ ವಿಷಕಂಠಯ್ಯನ ಮನೆಯವರೆಲ್ಲರೂ ಅಚ್ಚರಿಗೊಂಡರು. ಅದರಲ್ಲೂ ಪಾರ್ವತಮ್ಮ, "ಅದಕೇನ ಬುಡಿ ಅತ್ತೆ...ಬೆಳೆದು ನಿಂತ ಉಡುಗಿ ಇದ್ದಲು–" ಎನ್ನುವಲ್ಲಿ ನಾಗಜ್ಜಿ, "ಈಗೇನ ನಿನ್ನ ಮಗಳು ಬೆಳೆದು ನಿಂತಿಲ್ಲವಾ...? ನಾವು ಸಾಸ ಮಾಡಿದ್ರೆ ಈ ವರ್ಸಾನೇ ಮಾಡಬುಡಬೌದಾಗಿತ್ತು ಮಂಗಲಿ ಲಗ್ಣಾವಾ..." ಎಂದಳು.

"ಊ. ಮಾಡಬುಡಬೌದಾಗಿತ್ತು ಕಯ್ನಲ್ಲಿ ಕಾಸಿಲ್ಲದೇ ಇದ್ರೂ ಸಮ... ಕರ್ನಕುಪ್ಪೇಲಿ ನಟ್ರಾಜನಿಗೆ ಜಮೀನು ನಮಗಿಂತಲೂ ಆರೆಕೆರೆ ಕಮ್ಮಿಯೇಯಾ. ನಾನೇ ಅಲ್ಲವ ಅವ್ವ ಅದ್ನ ಗುತ್ತಿಗೇ ಮಾಡಕ್ಕೆ ಕೊಟ್ಟುಬುಟ್ಟು ಬಂದದ್ದು... ಏನೊ ಆ ಮಾರಾಯ ನಂಜುಂಡಸ್ವಾಮಿ ಮನಸುಮಾಡೊ ಒತ್ತಿಗೆ ಇವ್ನು ಈಟಾದ್ರೂ ಓದಕ್ಕಾಯ್ತು. ಇಲ್ಲದೇ ಹೋಗಿದ್ರೆ ನಾವು ಓದಿಸಕಾಯ್ತಿತ್ತಾವ್ವಾ..." ಎಂದು ವಿಷಕಂಠಯ್ಯ ಹೇಳುತ್ತಿರುವಾಗಲೇ ನಾಗಜ್ಜಿ, "ಯೇನೊ ಈ ಸಲ ಇವ್ನು ಪರೀಕ್ಸೆ ಒಂದು ಮುಗಿಸಿಕೊಂಬುಟ್ಟಿದ್ರೆ ಚೆನ್ನಾಗಿತ್ತು...ನಂಜುಂಡಸ್ವಾಮಿ ರೈಲಿನಲ್ಲೇ ಒಂದು ಕೆಲಸ ಕೊಡಿಸಿಬುಡ್ತೀನಿ ಅಂತ ಯೇಳ್ತಿದ್ದ...."

"ಅದೇನು ಕೆಲಸ ಬುಡವ್ವಾ...ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ... ಇನ್ನೂ ಬಿ.ಎ. ಇ.ಎ.–ಅಂತ ದೊಡ್ಡ ಪರೀಕ್ಸೆ ಮಾಡಿದ್ರೆ ಆಗ ಕೈತುಂಬ ಸಂಬಳ ಬರೊ ಕೆಲಸ ಸಿಕ್ತದೆ..." ಎಂದ ವಿಷಕಂಠಯ್ಯ, ತೋಟಕ್ಕೆಲ್ಲೋ ಹೋಗಿದ್ದ ನಟರಾಜ ತನ್ನೆದುರಿನಲ್ಲೇ ಇರುವನೆಂದು ಭಾವಿಸಿದಂತೆ "ಇದರ ಮೊಕ ನೋಡಿದೇಟಿಗೇ ಬಿ.ಎ. ಮಾಡ್ತದೆ ಇದು....ಅದೇನೊ ಕಾಂಗ್ರೆಸ್ಸು ಗೀಂಗ್ರೆಸ್ಸು ಅಂದುಕೊಂಡು ಈ ಪರೀಕ್ಸೇಲಿ ಆಗಲೆ ಎರಡು ವರ್ಷ ಗೋತಾ ಹಾಕವ್ನೆ–" ಎಂದು ತಿರಸ್ಕಾರವಾಗಿ ನಗುತ್ತ ಹೊಲದ ಕಡೆ ಹೊರಟ.

"ಎಂಗೊ ಇನ್ನೊಂದು ಸಲ ಓದಿಬುಟ್ಟು ಅವನಿಗೆ ಒಂದು ಕೆಲಸ ಅಂತ ಆಗಲಿ, ಜಮೀನು ಜೊತೆಗೆ ಏಟೋ ಸಾಯ ಆಯ್ತದೆ...ಆಮ್ಯಾಕೆ ಎಂಗಾರು ಮಾಡಿ ಲಗ್ಣ ಮಾಡಿಬುಡೋದು...ಯೇನು ಪಾರತಿ ?" ಎಂದು ಕೇಳಿದಳು ಪಾರ್ವತಮ್ಮ.

"ಯೇನೊ ಅತ್ತೆ, ಎಲ್ಲ ಆ ಬಗವಂತನ ದಯಾ..." ಎಂದಳು ಪಾರ್ವತಮ್ಮ.

ನಡುಮನೆಯೊಳಗೆ ಬಾಗಿಲೊರಗಿ ನಿಂತಿದ್ದ ಮಂಗಳೆಗೆ ಅಜ್ಜಿಯ ಮಾತು ನಾಚಿಕೆಯನ್ನೂ ಸಂತೋಷವನ್ನೂ ಒಮ್ಮೆಗೇ ಉಂಟುಮಾಡಿತು.

ಎಂಟು ದಿನಗಳಲ್ಲಿ ಎಲ್ಲರೂ ಮೈಸೂರಿಗೆ ಹೊರಟರು. ವಿಷಕಂಠಯ್ಯ ಮಾತ್ರ ಕಲ್ಲಹಳ್ಳಿಯಲ್ಲೇ ಉಳಿದುಕೊಂಡ.

"ನೀವು ನಡೀರಿ. ಧಾರೇ ಹೊತ್ತಿಗೆ ಒಂದು ದಿನದ ಮಟ್ಟಿಗೆ ಬಂದಿದ್ದು ಬತ್ತೀನಿ ನಾನು" ಎಂದು ಅವರನ್ನು ಕಳುಹಿಸಿಕೊಟ್ಟ.

ಅನಂತನ ಮದುವೆ ವೈಭವದಿಂದಲೇ ನಡೆಯಿತು. ಕೊತ್ತೇಗಾಲದಿಂದ ಬರಲು ಅನಾನುಕೂಲವಾದುದರಿಂದ ವಿಷಕಂಠಯ್ಯನಿಗೆ ಹೇಳಿಕಳುಹಿಸಿ ನರಸಮ್ಮ ತನ್ನ ಮೊಮ್ಮಕ್ಕಳಾದ ದುರ್ಗಿ ಮತ್ತು ಬಸವಾಚಾರಿಯನ್ನು ಕೂಡಿಕೊಂಡು ಬಂದಿದ್ದಳು.

ವಿಷಕಂಠಯ್ಯ ನರಸಮ್ಮನ ಜೊತೆಗೆ ಬಂದುದು ನಾಗಜ್ಜಿಗೂ ಪಾರ್ವತಮ್ಮನಿಗೂ ಅಸಮಾಧಾನವನ್ನು ಉಂಟುಮಾಡಿತು.

ನಂಜುಂಡಸ್ವಾಮಿ ಅನಂತನ ಮದುವೆಯನ್ನು ಹೀಗೆ ತ್ವರಿತಗೊಳಿಸಲು ಅವನು ಎಸ್.ಎಲ್.ಎಸ್.ಸಿ. ಪರೀಕ್ಷೆಯಲ್ಲಿ ಎರಡು ಸಲ 'ಫೇಲ್' ಆಗಿದ್ದುದು ಮುಖ್ಯ ಕಾರಣವಾಗಿತ್ತು. ಅವನು ಲೆಕ್ಕದಲ್ಲೇ ಎರಡು ಸಲವೂ ತೇರ್ಗಡೆಯಾಗದೇ ಇದ್ದುದರಿಂದ ನಂಜುಂಡಸ್ವಾಮಿ ಇನ್ನು ಅವನನ್ನು ಓದಿಸಿ ಸುಖವಿಲ್ಲವೆಂದು ನಿರ್ಧರಿಸಿದ್ದ. ಅಲ್ಲದೆ, ಅನಂತನಿಗೆ ಮುಂದೆ ಓದಲು ಆಸಕ್ತಿಯಿಲ್ಲವೆಂದೂ, ಚಿತ್ರಕಲೆ ಅವನ ಚಿತ್ತವನ್ನು ಸಂಪೂರ್ಣವಾಗಿ ಆಕರ್ಷಿಸಿತ್ತೆಂದೂ ನಂಜುಂಡಸ್ವಾಮಿಗೆ ವೇದ್ಯವಾಗಿತ್ತು. ತನ್ನ ತಂಗಿ ಆದಿಲಕ್ಷ್ಮಿಯೂ, ಅವಳ ಗಂಡ ಚೆನ್ನಸ್ವಾಮಿಯೂ ಹೇಗೂ ತಮ್ಮ ಮಗಳು ವಿಶಾಲಿಯನ್ನು ಅನಂತನಿಗೆ ತಂದುಕೊಳ್ಳಬೇಕೆಂದು ಅವಳು ಮೈನೆರೆದಾಗಿನಿಂದಲೂ ಒತ್ತಾಯಪಡಿಸುತ್ತ ಬಂದಿದ್ದರು. ಅನಂತ ಎರಡನೆ ಸಲವೂ ಪರೀಕ್ಷೆಯನ್ನು ಕಳೆದುಕೊಂಡುದನ್ನು ಕೇಳಿ ಮಾತಾಡಿಸಲು ಬಂದಿದ್ದ ಚೆನ್ನಸ್ವಾಮಿ ನಂಜುಂಡಸ್ವಾಮಿಯೊಡನೆ ಪ್ರಸ್ತಾಪ ಮಾಡಿದ್ದ. ಅನಂತನಿಗೆ ಇಷ್ಟು ಓದೇ ಸಾಕು. ಅವನಿಗೆ ಆ ಕಡೆ ಮನಸ್ಸು ಹೋಗೋಹಾಗಿಲ್ಲ. ಅವನಿಗೆ ಚಿತ್ರ ಬರೆಯೊ ಹುಚ್ಚು. ಅವನಿಗೆ ಒಂದು ಮದುವೆ ಅಂತ ಮಾಡಿಬಿಡೋಣ...ಅಮೇಲೆ ಬೇಕಾದ್ರೆ ನಮ್ಮ ಅಂಗಡೀನ ಅವನೇ ನೋಡಿಕೊಳ್ಳಲಿ...ನನಗೂ ವಯಸ್ಸಾಗ್ತಾ ಬಂತು. ಅವನೂ ಆಗ ಈಗ ಅಂಗಡಿ ನೋಡಿಕೊಂಡರೆ ಎಷ್ಟೋ ಸಹಾಯ ಆಗ್ತದೆ...ಬೇಕಾದ್ರೆ ಅವನು ಚಿತ್ರಕಲೆ ಅಭಿವೃದ್ಧಿಪಡಿಸಿಕೊಳ್ಳೋದಕ್ಕೂ ನಾನು ಸಹಾಯ ಮಾಡ್ತೇನೆ. ನನಗೆ ತಿಳಿದವರು ಒಬ್ಬರು ಇದಾರೆ–ಶ್ರೀಕಂಠಪ್ಪ ಅಂತ. ಒಳ್ಳೆ ಕಲೆಗಾರರು. ಬೊಂಬಾಯಿಗೆಲ್ಲ ಹೋಗಿ ಬಂದಿದ್ದಾರೆ. ಅವರಿಗೆ ಹೇಳಿ ಅವರಿಂದ ಪಾಠ ಹೇಳಿಸ್ತೇನೆ–ಎಷ್ಟು ಖರ್ಚಾದರೂ ಚಿಂತೆಯಿಲ್ಲ."

ಚಿನ್ನಸ್ವಾಮಿಯ ಮಾತು ನಂಜುಂಡಸ್ವಾಮಿಗೆ ಒಪ್ಪಿಗೆಯಾಗಿತ್ತು. ಅದರಂತೆ ಅನಂತನ ವಿವಾಹಕ್ಕೆ ತಾನು ಸಮ್ಮತಿಸಿದುದಲ್ಲದೆ ತನ್ನ ಹೆಂಡತಿಯನ್ನು ಒಪ್ಪಿಸಿದ.

ಚಿನ್ನಸ್ವಾಮಿಯೂ ವಿವಾಹವಾದ ಬಳಿಕ ತನ್ನ ಮಾತಿನಂತೆಯೇ ನಡೆದುಕೊಂಡನು; ವರ್ಣಚಿತ್ರ ಬರೆಯುವುದರಲ್ಲಿ ಪ್ರಸಿದ್ಧಿ ಪಡೆದ ಶ್ರೀಕಂಠಪ್ಪ ಅನಂತನ ಗುರುಗಳಾದರು.

ಕೆಲವು ತಿಂಗಳು ಕಳೆದ ಬಳಿಕ ಒಂದು ದಿನ ಶ್ರೀಕಂಠಪ್ಪ ಅನಂತನೊಡನೆ ಮನೆಗೆ ಬಂದಿದ್ದರು, ಅದೇತಾನೇ ರೈಲಿಗೆ ಹೊರಡುವುದರಲ್ಲಿದ್ದ ನಂಜುಂಡಸ್ವಾಮಿ "ಹೇಗೆ ಬರೀತಾನೆ ಈಗ, ಶಿಷ್ಯ ?" ಎಂದು ಕೇಳಿದ.

"ನಾನು ಏನೋ ಅಂತಿದ್ದೆ ಮೊದಮೊದಲು. ಸೊಗಸಾಗಿ ಬರೀತಾನೆ ಈಗ... ಹೀಗೇ ಇನ್ನೂ ಸ್ವಲ್ಪಕಾಲ ಅಭ್ಯಾಸಮಾಡಿದರೆ ನಾವು ಯಾರೂ ಇವನಿಗೆ ಸರಿದೂಗುವುದಿಲ್ಲ !" ಎಂದು ಪ್ರಶಂಶಿಸಿದರು ಶ್ರೀಕಂಠಪ್ಪ.

ಗುರುಗಳ ಬಾಯಿಂದ ಆ ಪ್ರಶಂಶೆಯನ್ನು ಕೇಳಿ ನಂಜುಂಡಸ್ವಾಮಿ ಹಿಗ್ಗಿದ... "ವಾಸಾಚಾರಿಯ ರಕ್ತವಲ್ಲವೇ, ಎಷ್ಟಾದರೂ–!" ಎಂದು ಅಭಿಮಾನದಿಂದ ತನಗೆ ತಾನೇ ಹೇಳಿಕೊಂಡ. "ಅನಂತ ಬಿ.ಎ. ಪಾಸ್ ಮಾಡಿ ಅಮಲ್ದಾರಿಕೆ ಮಾಡದೇ ಇದ್ದರೆ ಏನಂತೆ ?...ಈವೊತ್ತು ಜನ ವಾಸಾಚಾರೀನ ನೆನಸಿಕೊಳ್ತಾರೊ ? ಅವನ ಕಾಲದಲ್ಲಿದ್ದ ಅಮಲ್ದಾರರು, ಡೆಪ್ಯುಟಿ ಕಮೀಷನರು ಮಂತ್ರಿಗಳನ್ನ ನೆನಸಿಕೊಳ್ತಾರೊ..." ಎಂದು ಅನಂತನ ಕಲೆಯ ವಿಷಯದಲ್ಲಿ ಹೆಮ್ಮೆಪಟ್ಟಿದ್ದ.

ಎಂದಿನಂತೆ ಮೈಸೂರಿಗೆ ದಸರ ಮಹೋತ್ಸವ ಬಂದಿತು. ಆದರೆ ನಟರಾಜನಿಗೆ ಮಂಗಳೆಯಿಲ್ಲದ ದಸರ ರುಚಿಸುವಂತಿರಲಿಲ್ಲ. ಆದಕಾರಣ ರಜ ಬಂದ ದಿನವೇ ಕಲ್ಲಹಳ್ಳಿಗೆ ಹೊರಟುಬಿಟ್ಟ ನಟರಾಜ.

ಅವನು ಮನೆಯೊಳಗೆ ಕಾಲಿಟ್ಟಾಗ ನಾಗಜ್ಜಿ ಮರಿನಿಂಗಿಯೊಡನೆ ಮಾತನಾಡುತ್ತಾ ಕುಳಿತಿದ್ದಳು. ಮಂಗಳೆ ಎಲ್ಲೊ ಒಳಗಡೆ ಇದ್ದಳು. ನಟರಾಜನನ್ನು ನೋಡಿದ ಮರಿನಿಂಗಿ, "ನಟ್ರಾಜಪ್ಪ ಬಂದುಬುಟ್ಟ–!" ಎಂದವಳು, ಧ್ವನಿಯೆತ್ತರಿಸಿ "ಮಂಗಳವ್ವಾ, ಬಾರಾ ಇಲ್ಲಿಃ....ಕ್ವಾಣೆ ಸೇರಿಕೊಂಡೇನಾ ಮಾಡ್ತಾ ಇದ್ದೀ...ಕೆಲಸ ಇದ್ದೇ ಇರ್ತದೆಕನಾ ಬಾ...ನಿನ್ನೆಜಮಾನರು ಮೈಸೂರಿನಿಂದ ಬಂದವ್ರೆ" ಎಂದು ಹಾಸ್ಯ ಮಾಡಿದಳು.

ಹಿಂದೆ ಒಂದು ಸಲ ಮರಿನಿಂಗಿ ಹೀಗೇ ನಟರಾಜ ಬರದಿದ್ದರೂ 'ಬಂದ' ಎಂದು ಸುಳ್ಳಾಡಿ ಗೋಳು ಹುಯ್ದುಕೊಂಡಿದ್ದುದರಿಂದ ಮಂಗಳೆಗೆ ಅವಳ ಮಾತಿನಲ್ಲಿ ನಂಬಿಕೆಯುಂಟಾಗಲಿಲ್ಲ. ಆದ್ದರಿಂದ ಅನುಮಾನಿಸುತ್ತಲೇ ಅಡಿಗೆ ಮನೆಯಿಂದ ಅಡಿಯಿಡುತ್ತಾ,

"ನಿನ್ನ ಚೇಷ್ಟೆ ಸಾಕು ಸುಮ್ಮನೆ ಇರು...ನಂಗೂ ಗೊತ್ತು ಬಂದಿರೋದು" ಎನ್ನುತ್ತಾ ನಡುಮನೆಯ ಬಾಗಿಲು ಬಳಿಗೆ ಬಂದು ನಟರಾಜನನ್ನು ನೋಡಿ ನಾಲಗೆ ಕಚ್ಚಿಕೊಂಡಳು.

ಮರಿನಿಂಗಿ ನಟರಾಜನನ್ನುದ್ದೇಶಿಸಿ "ನಮ್ಮ ಹೆಣ್ಣ ಮದ್ವೆ ಆಗಕ್ಕೇ ಪುಣ್ಯ ಮಾಡಿದ್ದೆ ಕನ ಮೊಗಾ. ಕೆಲಸದಲ್ಲಿ ಅವ್ಳು ಕಟ್ಟಾಣಿ, ಕಡುಜಾಣೆ" ಎಂದು ಮಂಗಳೆಯನ್ನು ಹೊಗಳಿದಳು.

ಮಂಗಳೆ ನಾಚಿಕೊಂಡು ಒಳಗೆ ನಡೆದಳು.

ನಟರಾಜ ತಾನು ತಂದಿದ್ದ ಕೈಚೀಲವನ್ನು ತೊಟ್ಟಿಯ ಕಂಬವೊಂದಕ್ಕೆ ಒರಗಿಸಿದ. ಆ ಕೈಚೀಲವನ್ನೇ ಹಳ್ಳಿಗರಿಗೆ ಸಹಜವಾದ ಕುತೂಹಲದಿಂದ ನೋಡುತ್ತ "ಯೇನೇನು ತಂದಿದ್ದೀ ಮೊಗಾ ಮೈಸೂರು ಪಟ್ಣದಿಂದs...?" ಎಂದು ಕೇಳಿದಳು ಮರಿನಿಂಗಿ.

"ಏನೂ ಇಲ್ಲ ಮರಿನಿಂಗಿ. ಒಂದು ಕೌಳಿಗೆ ವೀಳಯದೆಲೆ, ಒಂದು ಕುಚ್ಚು ಮಲ್ಲಿಗೆ ಹೂವು."

"ಮೈಸೂರು ಪಟ್ನ ಮಲ್ಲಿಗೆ ಊವಿಗೂ ಚಿಗುರೆಲೇಗೂ ಬೋ ಪರ್ಸಿದ್ದಿ... ಎಲ್ಲ ಮೊಗಾ. ಒಂದೋಟು ಎಲೆ ಕೊಡಾ, ಆಕತ್ತೀನಿ."

"ಕೊಡು ಮೊಗಾ" ಎಂದು ನಾಗಜ್ಜಿಯೂ ಹೇಳಿದಳು.

ಅಂತೂ ವೀಳೆಯದೆಲೆಯನ್ನು ವಸೂಲುಮಾಡಿ ಮರಿನಿಂಗಿ ಹೊರಟು ಹೋದಳು.

ಹೀಗೇ ನಾಲ್ಕು ದಿನ ಕಳೆದವು.

ಐದನೇ ದಿನ ಬೆಳಿಗ್ಗೆ ನಾಗಜ್ಜಿಗೆ ಏಕೋ ಆಲಸ್ಯವಾದಂತಾಯಿತು. ಏಕೆ, ಏನು ಎಂದು ಅವಳಿಗೇ ತಿಳಿಯದು.

ಪಾರ್ವತಮ್ಮ ಮಧ್ಯಾಹ್ನ ಊಟವಾದ ನಂತರ ಹೆಡಿಗೆ ತೆಗೆದುಕೊಂಡು ಮೆಣಸಿನಹಣ್ಣು ಬಿಡಿಸಲು ಹೊಲಕ್ಕೆ ಹೊರಟು ನಿಂತಳು.

"ಹಂಗಾರೆ ನಾನು ಹೋಗಿ ಮೆಣಸಿನಹಣ್ಣು ಬುಡಿಸಿಕೊಂಬತ್ತೀನಿ ಅತ್ತೆ" ಎಂದಳು.

"ನಾನೂ ಬತ್ತೀನಿ ಕನವ್ವಾ...ಒಬ್ಬಳೇ ಏಟು ಅಂತ ಬುಡಿಸೀ ?... ಇಬ್ಬರೂs ಬುಡಿಸಿದ್ರೇ ಇನ್ನೂ ಎರಡು ಮೂರು ಜಿನ ಆಯ್ತವೆ. ನೆನ್ನೆ ಮೊನ್ನಿಂದ ನಟ್ರಾಜ ಸಾಯ ಮಾಡಿಕೊಡೋ ಒತ್ತಿಗೆ ಏಟೊ ಬ್ಯಾಗ ಮುಗೀತು !..." ಎನ್ನುತ್ತಾ ತಾನೂ ಒಂದು ಹೆಡಿಗೆಯನ್ನು ತೆಗೆದುಕೊಳ್ಳಲು ಹೋಗಲುದ್ಯುಕ್ತಳಾದಳು ನಾಗಜ್ಜಿ.

ಇದನ್ನು ಕಂಡ ಪಾರ್ವತಮ್ಮ, "ನೀವೇನೂ ಬ್ಯಾಡಿ ಕನತ್ತೆ. ಯಾಕೊ ಬೆಳಗಿನಿಂದ ನಳ್ಳಾಡ್ತ ಇದ್ದೀರಿ...ನಟ್ರಾಜ ತಾನೇ ಯಾಕೇ ? ಇನ್ನೊಂದೆರಡು ಮೂರು ಜಿನದಲ್ಲೇ ಮೈಸೂರಿಗೆ ಹೋಯ್ತಾನೆ. ಅವನೂ ಒಸಿ ಸುಧಾರಿಸಿಕೊಳ್ಳಲಿ...ನಿಮ್ಮ ಮಗ ಹೆಂಗಿದ್ದರು 'ಎತ್ತುಗಳ ಮೇಯಿಸ್ತಾ ಹೊಲದ ತಾವೇ ಇರ್ತೀನಿ' ಅಂದಿದ್ದರುs...ಅಲ್ಲಿಗೇ ಉಣ್ಣಾಕೆ ತಗಂದೋಗಿಬುಟ್ಟು ಇಬ್ಬರೂ ಮೆಣಸಿನಹಣ್ಣ ಬುಡಿಸಿಕೊಂಡು ಸಂಜೆ ಹೊತ್ತಿಗೆ ಬರ್ತೀವಿ..." ಎಂದು ಹೇಳಿ, ಮಂಗಳೆಯ ಕಡೆ ತಿರುಗಿ, "ಯಲ್ಲವ್ವಾ...ಒಸಿ ಊಟ ಮಡಗಿಬುಡು, ನಿಮ್ಮಯ್ಯನಿಗೆ," ಎಂದಳು.

ಒಂದು ಸಣ್ಣ ಗೆರಸಿಯಲ್ಲಿ ಹಿಟ್ಟನ್ನೂ ಹಿತ್ತಲವರೆ ಎಸರನ್ನೂ ತಂದ ಮಂಗಳೆ, ಗೆರಸಿಯನ್ನು ಪಾರ್ವತಮ್ಮನಿಗೆ ಕೊಡದೆ ತನ್ನ ಅಂಗೈ ಮೇಲೆಯೇ ಇಟ್ಟುಕೊಂಡು ಮತ್ತೊಂದು ಕಯ್ಯಲ್ಲಿ ಒಂದು ಚೆಂಬಿನಲ್ಲಿ ನೀರನ್ನು ಹಿಡಿದುಕೊಂಡು, "ನಾನೂ ಬರ್ತೀನಿ ನಡಿಯವ್ವಾ..." ಎಂದಳು.

"ನೀ ಯೇನೂ ಬ್ಯಾಡ...ನಾನೂ ನಿಮ್ಮಯ್ಯನೂವೆ ಲಾಜಾದಲ್ಲಿ ಬುಡಸಿ ತರ್ತೀವಂತೆ, ನೀನುs ಮಜ್ಜಿಗ್ಗೆ ಒಂದೀಟು ಹಸಿಟ್ಟು, ಎರಡು ಹಳ್ಳು ಉಪ್ನೂ ಆಕಿ ತೆಳ್ಳಗೆಮಾಡಿ ಹುಯ್ಯವ್ವ ಕರುಗಳಿಗೆ..." ಎಂದು ಅವಳ ಕಯ್ಯಿಂದ ಊಟದ ಗೆರಸಿಯನ್ನು ತೆಗೆದುಕೊಂಡು ಬಾಗಿಲವರೆಗೆ ಹೋದವಳು, ಅಲ್ಲಿಯೇ ತಡೆದು ನಿಂತು "ಆ ಸಣ್ಣ ಕರ ಹಂಗೆ ಕುಡಿದೇ ಓದರೆ ಕೊಟ್ಟದಲ್ಲಿ ಹೂದು ಬುಡು..." ಎಂದು ಸಲಹೆಮಾಡಿ ಹೊರಟುಹೋದಳು.

ಮಂಗಳೆಗೂ ಅದೇ ಬೇಕಾಗಿತ್ತು. ನಟರಾಜ ಮನೆಯಲ್ಲಿದ್ದಾಗ ಹೊರಗೆ ಹೋಗಲು ಅವಳು ಸರ್ವಥಾ ಇಚ್ಛಿಸುತ್ತಿರಲಿಲ್ಲ. ಆದರೆ ತಾಯಿ ಏನಾದರೂ ತಿಳಿದುಕೊಂಡಾಳೆಂದು ಹಾಗೆ ನುಡಿದಿದ್ದಳು.

ದಿನ ಸಂಜೆಗೆ ತಿರುಗಿದಂತೆ ನಾಗಜ್ಜಿಗೆ ಹಠಾತ್ತನೆ ಎದೆಯಲ್ಲಿ ನೋವು ಕಾಣಿಸಿಕೊಂಡಿತು. ಅವಳು ನಟರಾಜನನ್ನು ಹತ್ತಿರ ಕರೆದು, "ನೋಡು ಮೊಗಾ...ಎದೇಲಿ ಯೇನೊ ನೋವು ಆಯ್ತಾ ಅದಲ್ಲಾ ?" ಎಂದು ಹೇಳಿಕೊಂಡಳು.

ಮೊದಮೊದಲು ಅಜ್ಜಿ ಹುಡುಗಾಟಕ್ಕೆ ಹೇಳುತ್ತಿರಬೇಕೆಂದು ಸುಮ್ಮನಿದ್ದ ನಟರಾಜ ಅಜ್ಜಿಯ ಮುಖದಲ್ಲಾಗುತ್ತಿದ್ದ ಬದಲಾವಣೆಗಳನ್ನು ಗಮನಿಸಿ ಸ್ವಲ್ಪ ಗಾಬರಿಗೊಂಡನು.

ತನ್ನನ್ನು ಹಾಗೇ ಗೋಡೆಗೆ ಒರಗಿಸುವಂತೆ ನಾಗಜ್ಜಿ ಸೂಚಿಸಿದಳು.

ಈಗಲೀಗ ನಟರಾಜನಿಗೆ ದಿಗಿಲು ಹೆಚ್ಚಿ ಕೊಟ್ಟಿಗೆಯಲ್ಲಿದ್ದ ಮಂಗಳೆಯನ್ನು ಕೂಗಿ ಕರೆದನು.

ಮಂಗಳೆ ಬಂದು ಅಜ್ಜಿಯ ಸ್ಥಿತಿಯನ್ನು ನೋಡಿ, "ಇದೇನಜ್ಜಿ ?...ಹೇಂಗಾಯ್ತದೆ ನಿಂಗೆ ?" ಎಂದು ಕಾತರದಿಂದ ಕೇಳಿದಳು.

ನಾಗಜ್ಜಿ ಎದೆಯನ್ನು ಮುಟ್ಟಿ ತೋರುತ್ತಾ "ಎದೆ ನೋವು ಕನವ್ವಾ" ಎಂದಳು.

ಇಬ್ಬರೂ ಎತ್ತಿ ಅವಳನ್ನು ಗೋಡೆಗೆ ಒರಗಿಸಿದರು.

ನಾಗಜ್ಜಿ ನಿಶ್ಚಲವಾಗಿ ಗೋಡೆಯನ್ನು ಒರಗಿ ನಟರಾಜ–ಮಂಗಳೆಯರನ್ನು ಶೂನ್ಯ ದೃಷ್ಟಿಯಿಂದ ನಿಟ್ಟಿಸುತ್ತಿದ್ದಳು.

ಅವಳನ್ನು ಆ ಸ್ಥಿತಿಯಲ್ಲಿ ನೋಡಿದ ನಟರಾಜನಿಗೆ ವಿಪರೀತ ದಿಗಿಲಾಯಿತು. "ಅಕ್ಕ, ಭಾವನ್ನಾದರೂ ಕರೆದುಕೊಂಡು ಬರ್ತೀನಿ" ಎಂದು ಮನೆಯ ಮುಂಬಾಗಿಲಿಗೆ ಹೋಗುತ್ತಿದ್ದ ನಟರಾಜನನ್ನು ನಾಗಜ್ಜಿ ಗಮನಿಸಿ ಕೈ ಸನ್ನೆಯಿಂದ ಕರೆದು ತನ್ನ ಪಕ್ಕದಲ್ಲಿ ಕೂರುವಂತೆ ಹೇಳಿದಳು.

ನಿಸ್ತೇಜವಾಗುತ್ತಿದ್ದ ಅವಳ ನಯನಗಳನ್ನೇ ವೀಕ್ಷಿಸಿದ ಮಂಗಳೆ 'ಗೊಳೋ' ಎಂದು ಅಳತೊಡಗಿದಳು.

ಶಕ್ತಿ ಉಡುಗುತ್ತಿದ್ದರೂ ಅಜ್ಜಿಯ ಮುಖ ಪ್ರಶಾಂತವಾಗಿತ್ತು. ತನ್ನೆಡೆಯಲ್ಲಿ ಕುಳಿತ ಅವರಿಬ್ಬರನ್ನೂ ದಿಟ್ಟಿಸುತ್ತಿದ್ದಂತೆ ಅಜ್ಜಿಯ ಕಣ್ಣುಗಳು ಅಶ್ರುಪೂರಿತವಾದವು. ಎರಡು ದೊಡ್ಡ ಜಲಬಿಂದುಗಳು ಅವಳ ಕಪೋಲಗಳ ಮೇಲೆ ಉರುಳಿದವು. ಮಕ್ಕಳಂತೆ ಗದ್ಗದಿತರಾಗಿ ನಟರಾಜ, ಮಂಗಳೆ ಇಬ್ಬರೂ ಅಜ್ಜಿಯ ಮುಖವನ್ನೇ ನೋಡುತ್ತಿದ್ದರು.

ಅವರಿಬ್ಬರ ಕೈಗಳನ್ನೂ ಜೋಡಿಸಿ ನಾಗಜ್ಜಿ ಮೆಲ್ಲನೆ, ಬಹು ಮೆಲ್ಲನೆ ಉಸುರಿದಳು:

"ನಾನಿನ್ನು ಉಳಿಯೊದಿಲ್ಲ...ದೇವರು ತನ್ನತ್ತರ ಕರಕೊತ್ತಾ ಅವ್ನೆ...ಯೆಲ್ಲಾ ಅವನ ಇಚ್ಛೆ–ಅದೂ ನಂಗೆ ಸಂತೋಷವೇ..." ಎಂದು ಹೇಳಿ, ಅಷ್ಟು ಮಾತನಾಡಿದುದರಿಂದ ಸಾಕಾದಂತಾಗಿ ಸ್ವಲ್ಪ ಕಾಲ ಮೌನವಾಗಿದ್ದು ಮತ್ತೆ ಪ್ರಾರಂಭಿಸಿದಳು: "ಆದ್ರೆ–ಆದ್ರೆ...ನಂಗೊಂದೇಯ ಸಂಕಟ...ನಿಮ್ಮಿಬ್ಬರ್ದೂ ಲಗ್ನ ನೋಡದೆ ಓಯ್ತಾ ಇವ್ನಲ್ಲಾ, ಆನ್ನೋ ಸಂಕಟ..." ಎಂದು ಅವರಿಬ್ಬರನ್ನೂ ದೀರ್ಘವಾಗಿ ನೋಡಿ, ಕಣ್ಣು ಮುಚ್ಚಿದಳು. ಕಣ್ಣುಗಳ ಅಂಚಿನಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು.

ನಟರಾಜ–ಮಂಗಳೆಯರು ಏನೊಂದೂ ತೋಚದೆ ಒಬ್ಬರನ್ನೊಬ್ಬರು ಮೂಕರಾಗಿ ನೋಡಿಕೊಳ್ಳುತ್ತಾ ದಿಗ್ಭ್ರಾಂತರಾಗಿ ಕಂಬನಿಗರೆಯುತ್ತಿದ್ದರು.

ಸ್ವಲ್ಪ ಹೊತ್ತು ಹೀಗೇ ರೋದಿಸಿ, ಸುಮ್ಮನೆ ಹೀಗೆ ಕುಳಿತಿರುವುದರಲ್ಲಿ ಏನೂ ಅರ್ಥವಿಲ್ಲವೆಂದು ಬಗೆದು ನಟರಾಜ ಮೆಲ್ಲನೆ ಮಂಗಳೆಯ ಕಿವಿಯಲ್ಲಿ, "ಚಿಲಕುಂದಕ್ಕೆ

ಹೋಗಿ ಡಾಕ್ಟರ್ ಕರೆದು ತರುವಂತೆ ಮರಿಗಾಗಲಿ, ಪುಟ್ಟನಿಗಾಗಲಿ, ಹೇಳಿಬಿಟ್ಟು ಬರ್‍ತೀನಿ" ಎಂದು ಹೇಳಿ ಏಳುವುದರಲ್ಲಿದ್ದನು.

ಅಷ್ಟರಲ್ಲಿ ನಾಗಜ್ಜಿಗೆ ತಲೆ ಸುತ್ತಿ ಬಂದಂತಾಗಿ ಒರಗಿದ್ದ ಗೋಡೆಯನ್ನು ಬಿಟ್ಟು ನಟರಾಜನ ಭುಜದ ಮೇಲೆಯೇ ತನ್ನ ತಲೆಯನ್ನಿರಿಸಿದಳು. ಈಗ ವಿಧಿಯಿಲ್ಲದೆ ತನ್ನ ತೊಡೆಯ ಮೇಲೇ ಮೆಲ್ಲನೆ ಮಲಗಿಸಿಕೊಂಡ ನಟರಾಜ–

ನಾಗಜ್ಜಿಯ ಪ್ರಜ್ಞೆ ಮಂಪರ ಮಂಪರವಾಗುತ್ತಿತ್ತು. ಅವಳು ನಿಶ್ಚಲಳಾದಂತೆ ಮಕ್ಕಳಿಬ್ಬರೂ "ಅಜ್ಜಿ–ಅಜ್ಜಿ..." ಎಂದು ಕೂಗುತ್ತಾ ಬಿಕ್ಕಿ ಬಿಕ್ಕಿ ಅಳತೊಡಗಿದರು... ನಾಗಜ್ಜಿಗೆ ಬಾಹ್ಯ ಪ್ರಪಂಚದ ಅರಿವು ಈಗಲೀಗ ಪೂರ್ಣವಾಗಿ ಅಳಿಸಿಹೋದಂತಿತ್ತು. ಅವಳ ಆತ್ಮ ಯಾವುದೋ ಕನಸಿನ ಗೋಜಿನಲ್ಲಿ ಸಿಕ್ಕಿಕೊಂಡಂತಿತ್ತು. ಏನೇನೋ ಅಸ್ಫುಟ ಚಿತ್ರಗಳು ಅವಳ ಬಗೆಗಣ್ಣಿಗೆ ಕಾಣತೊಡಗಿದವು–"ಅಕ್ಕೋ, ಅಕ್ಕೊ–ಯೇನ ಅದುs ?– ನೋಡ್ತಾ ಇರಾದು ದಿಟವಾ ?– ನಟ್ರಾಜ, ಮಂಗ್ಳಿ ಲಗ್ಣ !–ಅಯ್ಯೋ ಆ ಪುರೋಯಿತ ಯಾಕೆ ಈಟೊಂದು ತಡಾಮಾಡ್ತಾ ಅವ್ನೆ ?–ಬ್ಯಾಗ ಬ್ಯಾಗ ತಾಲಿ ಕಟ್ಟಿಸಿಬುಡಬ್ಯಾಡದಾ ? ನಾನೂ ಕಣ್ತುಂಬ ನೋಡಿಕೊತ್ತಿದ್ನಲ್ಲಾ– ಊ,ಊ–ಬ್ಯಾಗ–ಬ್ಯಾಗ–"

ನಾಗಜ್ಜಿಯ ದೇಹ ಕದಲುವುದೆಲ್ಲ ಪೂರ್ತಿಯಾಗಿ ನಿಂತು ಸೆಟೆದು ನಿಶ್ಚಲವಾಯಿತು.

ನಟರಾಜ, ಮಂಗಳೆಯರಿಬ್ಬರೂ ಅಜ್ಜಿಯ ಶವದ ಮೇಲೆ ಬಿದ್ದು ಬಿದ್ದು ಗೋಳಿಟ್ಟರು. ಮೊಟ್ಟಮೊದಲ ಬಾರಿ ಸಾವನ್ನು ಕಂಡು ಆ ಮುಗ್ಧಜೀವಿಗಳ ಹೃದಯ ಶೋಕದಿಂದ ವಿದೀರ್ಣವಾಗಿತ್ತು; ಬಾಳು ತನ್ನ ಬೆನ್ನು ತಿರುಗಿಸಿ ಸಾವಿನ ವಿಕಟ ಸ್ವರೂಪವನ್ನು ಪ್ರದರ್ಶಿಸಿತ್ತು– ಇಬ್ಬರು ಮಕ್ಕಳೂ ಭಯದಿಂದ ಅಜ್ಜಿಯ ಮೃತಶರೀರವನ್ನೇ ಇನ್ನೂ ಬಿಗಿಯಾಗಿ ತಬ್ಬಿಕೊಂಡರು.

೨೫

ನಾಗಜ್ಜಿ ಇಲ್ಲದ ವಿಷಕಂಠಯ್ಯನ ಮನೆ ಮಂಕು ಹಿಡಿದಂತೆ ತನ್ನ ಹಿಂದಿನ ಉತ್ಸಾಹವನ್ನು ಕಳೆದುಕೊಂಡಿತ್ತು.

ನಟರಾಜ–ಮಂಗಳೆಯರಿಗಂತೂ ಆ ಮನೆಯಲ್ಲಿ ಬಾಳು ಅರ್ಥಶೂನ್ಯವಾಗಿ ಪರಿಣಮಿಸಿತ್ತು.

ಪಾರ್ವತಮ್ಮ ಏನೊ ದಂಗು ಬಡಿದವಳಂತೆ ಮಾಂತ್ರಿಕವಾಗಿ ತಿರುಗಾಡುತ್ತಿದ್ದಳು... ದಿನವೂ ಮನೆಗೆ ಬರುತ್ತಿದ್ದ ಮರಿನಿಂಗಿಯೊಡನಂತೂ ತನ್ನ ಅತ್ತೆಯ ವಿಚಾರ ಹೇಳಿಕೊಳ್ಳದಿದ್ದರೆ ಅವಳಿಗೆ ಸಮಾಧಾನವೆನ್ನುವುದೇ ಇಲ್ಲ.

"ಅವ್ವನಿಗಿಂತ ಎಚ್ಚಾಗಿದ್ದ ಅತ್ತೆ ಕಳಕೊಂಡು ನಾ ಎಂಗವ್ವ ಕಾಲ ಆಕೋದೂ...? ಅವರಿದ್ದಂಗೆ ಈ ಮಂಗಲೀದೊಂದು ಮದ್ವೆ ಆಗಿಬುಟ್ಟಿದ್ರೇ ನಂಗೆ ಆಟು ಚಿಂತೆ ಇರ್‍ನಿಲ್ಲ ಕನವ್ವಾ..." ಎಂದು ಗೋಳುಗರೆಯುವಳು.

"ಇನ್ನೇನವ್ವಾ?...ಯಾವುದೂ ಸಾಸ್ವತ ಇಲ್ಲ ಈ ಲೋಕದಲ್ಲಿ...ಕಾಲ ಮುಗಿದ ಮ್ಯಾಗೆ ಯೆಲ್ಲ ಹೋಯ್ತಾ ಇರಬೇಕು...ನಮ್ಮಿಚ್ಚೆಯವ್ವಾ?...ಅಜ್ಜಿ ಚೆಂದಾಗಿ ಬಾಳಿತು ಕನ ಬುಡು. ಮಕ್ಕಳೂ ಮೊಮ್ಮಕ್ಕಳು ಯೆಲ್ಲಾರ್‍ನೂ ನೋಡ್ತು, ಏಟು ಜನಕ್ಕೆ ಅದೆಯವ್ವಾ ಆ ಪುಣ್ಯ?...ಇಲ್ನೋಡು, ನೀನು ಮಾತ್ರ ಇಂಗೆ ಕೊರಗಿ ಜೀವ ಸಣ್ಣ ಮಾಡಕೋಬ್ಯಾಡದು..." ಎಂದು ಬುದ್ಧಿ ಹೇಳಿದಳು ಮರಿನಿಂಗಿ.

ಅಜ್ಜಿಯ ಶ್ರಾದ್ಧ ಮುಗಿಯುವವರೆಗೂ ನಟರಾಜ ಕಲ್ಲಹಳ್ಳಿಯಲ್ಲಿಯೇ ನಿಂತ. ಆ ಬಳಿಕ ಶ್ರಾದ್ಧಕ್ಕೆ ಬಂದಿದ್ದ ನಂಜುಂಡಸ್ವಾಮಿಯೊಡನೆ ಮೈಸೂರಿಗೆ ಬಂದುಬಿಟ್ಟ.

ಮೈಸೂರಿಗೆ ಬಂದ ನಟರಾಜನಿಗೆ ಅಜ್ಜಿಯದೇ ಜ್ಞಾನ. "ಇನ್ನು ಯಾರನ್ನು 'ಅಜ್ಜಿ' ಎಂದು ಕೂಗಲಿ" ಎಂದು ಅನಂತನೊಡನೆ ಹೇಳಿಕೊಂಡು ಹಂಬಲಿಸುವನು. ಅವಳ ಸಾವನ್ನು ನೆನೆದ ಕೂಡಲೇ ಅವನ ದೇಹದ ರಕ್ತವೆಲ್ಲಾ ಬಸಿದುಹೋದಂತಾಗಿ ಕೈಕಾಲುಗಳೆಲ್ಲ ಬೆಂಡಾದಂತಾಗುವುವು. ಅದನ್ನು ಪುನಃ ಪುನಃ ನೆನಸಿಕೊಳ್ಳುವನು. "ನಟರಾಜಪ್ಪ ಅವ್ನ ಅಪ್ಪನ್ನೂ ಅವ್ವನ್ನೂ ಕಳಕಂಡಾಗ ತಬ್ಬಲಿಯಾಗ್ನಿಲ್ಲ...ಈಗ ಅಜ್ಜಿ ತೀರಿಕೊಂಡಮ್ಯಾಲೆ ಕಂದ ತಬ್ಬಲಿಯಾಗಿಬುಡ್ತು ಕನ ಪಾರತಿ..."

ನಟರಾಜನಿಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಯಿತು. ಜೊತೆಗೆ ಅನಂತನೂ ಇರುತ್ತಿರಲಿಲ್ಲ. ಅವನಿಗೆ ಅಂಗಡಿ ಮತ್ತು ಚಿತ್ರಕಲೆಯ ಅಭ್ಯಾಸದಲ್ಲಿ ಬಿಡುವೇ ಸಿಗುತ್ತಿರಲಿಲ್ಲ. ಇದೆಲ್ಲ ಕಾರಣದಿಂದ ನಟರಾಜನ ಅಂತರಂಗದಲ್ಲಿ 'ನನಗೆ ಯಾರೂ ಇಲ್ಲ. ನಾನು ಒಬ್ಬಂಟಿಗ' ಎಂಬ ಭಾವನೆ ಬೆಳೆಯುತ್ತಿತ್ತು. ಅವನ ಚಿತ್ತ ಇನ್ನಾವುದನ್ನೂ ಯೋಚಿಸುವುದಕ್ಕೂ ಅಶಕ್ತವಾಗಿತ್ತು. ಅದಕ್ಕೆ ತಕ್ಕಂತೆ ಮೈಸೂರಿನಲ್ಲಿ ಕಾಂಗ್ರೆಸ್ ಚಳುವಳಿಯೂ ಬಿರುಸಾಗಿ ನಡೆಯುತ್ತಿತ್ತು. ಬೇಸರದಿಂದ ಅರ್ಧ ನಟರಾಜ ಚಳುವಳಿಯಲ್ಲಿ ಧುಮುಕಿದ. ಶುದ್ಧ ಖಾದಿ ಅರಿವೆಗಳನ್ನು ತೊಟ್ಟು ಪರದೇಶೀ ಬಟ್ಟೆಗಳಿಗೆ ಬಹಿಷ್ಕಾರ ಹಾಕಿದ. ಕೆಲವು ಗೆಳೆಯರನ್ನು ಕೂಡಿಕೊಂಡು ಸುಬ್ಬರಾಯನ ಕೆರೆಯ ಅಂಗಳದಲ್ಲಿ ಪರದೇಶೀ ವಸ್ತ್ರಗಳಿಗೆ ಬಹಿರಂಗವಾಗಿ ಬೆಂಕಿಯಿಟ್ಟು ಸುಟ್ಟು ಹಾಕಿದ. ಕಾಂಗ್ರೆಸ್ ಸಂಸ್ಥೆಯಲ್ಲಿ ನಾಲ್ಕಾಣೆಯ ಸದಸ್ಯನೂ ಆಗಿ ಹೆಂಡದಂಗಡಿಗಳ ಮುಂದೆ 'ಪಿಕೆಟಿಂಗ್' ನಡೆಸುವುದಕ್ಕೂ ಆರಂಭಿಸಿದ. ಬರಬರುತ್ತಾ ಪ್ರಭಾತಫೇರಿ ತೆಗೆದುಕೊಂಡು ಹೋಗುವಾಗ ಹರತಾಳಗಳನ್ನಾಚರಿಸುವಾಗ, ಅವನೇ ಮುಂದಾಳು ಆಗಿಬಿಡುತ್ತಿದ್ದನು. ಒಂದೆರಡು ಸಂದರ್ಭದಲ್ಲಿ ಸರ್ಕಾರಕ್ಕೆ ವ್ಯತಿರಿಕ್ತವಾಗಿ ಜನರನ್ನು ಉದ್ರೇಕಗೊಳಿಸುವಂತಹ

ಭಾಷಣಗಳನ್ನೂ ಮಾಡಿದ್ದನು. ಪೋಲೀಸಿನವರ ಗುಪ್ತ ರೆಕಾರ್ಡುಗಳಲ್ಲಿ ನಟರಾಜನ ಹೆಸರು ಪ್ರಾಧಾನ್ಯತೆ ಪಡೆದಿತ್ತು.

ನಂಜುಂಡಸ್ವಾಮಿಯೂ ಎಷ್ಟೋ ಬಗೆಯಲ್ಲಿ ಹೇಳಿನೋಡಿದನು. ಆದರೆ ನಟರಾಜನಿಗೆ ಆಗ ಯಾವ ಬುದ್ಧಿವಾದವೂ ಹಿಡಿಸುವಂತಿರಲಿಲ್ಲ.

ನಟರಾಜನ ಈ ನಡತೆ ಹಳ್ಳಿಗೆ ತಿಳಿದಾಗ ಪಾರ್ವತಮ್ಮ ತನ್ನ ತಮ್ಮನಿಗಾಗಿ ಬಹಳ ನೊಂದುಕೊಂಡಳು. ವಿಷಕಂಠಯ್ಯ ಮಾತ್ರ ಬಹಳ ತಿರಸ್ಕಾರವಾಗಿ ಪಾರ್ವತಮ್ಮನ ಸಂಗಡ ಹೇಳಿದ.

"ನೋಡಿದೇನೆ ನಿನ್ನ ತಮ್ಮನ ನಡತೇಯಾ...? ತಿರುಗ ಆ ಗಾಂದೀ ಸೇರಿಬುಟ್ಟವ್ನಂತೆ !...ಅವ್ನು ಮಂತೆ ಉದ್ದಾರ ಆದಾನ ? ಆಳಾಗಿಹೋದ...ಅವನ್ನ ನಮ್ಮವ್ವ ಮುದ್ದುಮಾಡಿ ಮುದ್ದುಮಾಡಿ ತನ್ನಿಚ್ಚೆಯಾಗಿ ಬೆಳಸಿಬುಟ್ಟಳು...ಇತ್ತಾಗಿ ಮೂರು ವರ್ಸದಿಂದ ಪರೀಕ್ಸೇನೂ ಮಾಡ್ನಿಲ್ಲ. ಅತ್ತಾಗಿ ಹೊಲ ಮನೇನಾದ್ರೂ ನೇರ್ಪಾಗೆ ನೋಡಾಕೆ ಕಲೀನಿಲ್ಲ..." ಎಂದವನು, "ಮುಂದ್ಕೇನಾ ಮಾಡೋದು ?"– ಎಂದು ಭವಿಷ್ಯವನ್ನು ಯೋಚಿಸುವವನಂತೆ ನುಡಿದ.

"ಈಗೆಲ್ಲಿಗೊಂಟು ಓಗಿಬುಟ್ಟಿದ್ದಾನು ?...ಬತ್ತಾನೆ ಸುಮ್ಕಿರಿ...ಯೇನೊ ಯೆಂಡು ಜಿನ ಅಂಗಾಡಿಕೊತ್ತದೆ ಮುಕ್ಕ...." ಎಂದು ಪಾರ್ವತಮ್ಮ ತಮ್ಮನನ್ನು ಬೆನ್ನಿಗೆ ಹಾಕಿಕೊಂಡು ಮಾತಾಡಿದ್ದಳು.

ತಂದೆ ತಾಯಿಯರ ಈ ಮಾತು ಕತೆಯನ್ನು ಆಲಿಸಿದ ಮಂಗಳೆ ನಟರಾಜನ ಕ್ಷೇಮಕ್ಕಾಗಿ ತೀರ ಗಾಬರಿಗೊಂಡಳು.

೧೯೩೧ನೇ ಇಸವಿಯ ಜನವರಿ ಒಂದನೇ ತಾರೀಖು. ಪಂಡಿತ ಜವಾಹರ ಲಾಲ್‌ರ ನೆಚ್ಚಿನ ಮಡದಿ ಕಮಲಾ ನೆಹರುವಿನ ಬಂಧನವಾರ್ತೆ ದೇಶದಲ್ಲೆಲ್ಲಾ ಹಬ್ಬಿತು. ಬಂಧನದ ಬೆನ್ನಿಗೇ ಹರತಾಳಗಳು, ಪ್ರಚಂಡ ಸಭೆಗಳಲ್ಲಿ ಭಾಷಣಗಳು ನಡೆದವು. ಮೈಸೂರಿನಲ್ಲೂ ಆ ಬಂಧನವನ್ನು ಖಂಡಿಸುವ ಸಲುವಾಗಿ ಸುಬ್ಬರಾಯನ ಕೆರೆಯ ಮೈದಾನದಲ್ಲಿ ಕಾಂಗ್ರೆಸಿಗರು ಸಭೆ ಸೇರಿದ್ದರು. ನೂರಾರು ಜನರ ಆ ಸಭೆಯಲ್ಲಿ ನಟರಾಜನೂ ಒಂದು ಪುಟ್ಟ ಭಾಷಣ ಮಾಡಿದ.

ಅದರ ಹಿಂದಿನ ದಿನವೇ ಸಭೆ ಸೇರುವುದು ಅಕ್ರಮವಾಗುವುದೆಂದು ಸರ್ಕಾರ ಆಜ್ಞೆ ಹೊರಡಿಸಿತ್ತು. ಅದನ್ನನುಸರಿಸಿ ಪೋಲೀಸರು ಬಂದು ಲಾಠಿ ಪ್ರಹಾರದಿಂದ ಸಭೆಯನ್ನು ಚದುರಿಸಿ ಭಾಷಣಕಾರರನ್ನು ಬಂಧಿಸಿದರು.

ನಟರಾಜನನ್ನು ಬಂಧಿಸಲು ಬಂದ ಪೋಲೀಸ್ ಸಬ್‌ಇನ್‌ಸ್ಪೆಕ್ಟರು ಬಲಪ್ರಯೋಗ ಮಾಡಬೇಕಾಗಿ ಬಂದಿತು. ನಟರಾಜ ತನ್ನ ಕೈಗಳಿಗೆ ಕೋಳಗಳನ್ನು ಹಾಕಿಸಿಕೊಳ್ಳಲು ನಿರಾಕರಿಸಿದ : "ನಾನೇನು ಕದ್ದಿಲ್ಲ ಕಣ್ರೀ...ಕೈಗೆ ಕೋಳ ಹಾಕಿಸಿಕೊಳ್ಳೋಕೆ..."

"ಕದಿಯೋಕ್ಕಿಂತ ಹೆಚ್ಚು ನೀನು ಸರ್ಕಾರದ ವಿರುದ್ಧ ಹೋರಟಿರೋದು" ನಟರಾಜನ ಕೈಗಳನ್ನು ಬಲವಾಗಿ ಹಿಡಿದುಕೊಳ್ಳುತ್ತಾ ಹೇಳಿದ ಸಬ್‌ಇನ್‌ಸ್ಪೆಕ್ಟರ್.

ತನ್ನ ಕೈಗಳನ್ನು ಕೊಸಾರನೆ ಬಿಡಿಸಿಕೊಳ್ಳುತ್ತಾ, "ನಿಮ್ಮ ಸರ್ಕಾರ ಮಾಡ್ತಾ ಇರೋ ಅನ್ಯಾಯಕ್ಕೆ ಇನ್ನೇನು ಮಾಡಬೇಕು?" ಎಂದು ದೃಢವಾಗಿ ನುಡಿದ.

ನಟರಾಜ ಕೈಗಳನ್ನು ಬಲವಂತದಿಂದ ಬಿಡಿಸಿಕೊಂಡದ್ದು ಸಬ್‌ಇನ್‌ಸ್ಪೆಕ್ಟ್ರಗೆ ರೇಗಿತು.

"ನನ್ನ ಡ್ಯೂಟೀಗೆ ಹೀಗೇ ವ್ಯತಿರಿಕ್ತವಾಗಿ ನೀನು ನಡೀತಾ ಇದ್ದರೆ ಬಲಪ್ರಯೋಗ ಮಾಡಬೇಕಾಗುತ್ತದೆ" ಎಂದು ಹೇಳಿದ.

"ನೀ ಏನೇ ಹಾರಾಡಿದರೂ ನಾನು ಬೇರೆ ಕೈಗೆ ಕೋಳಾ ಹಾಕಿಸಿಕೊಳ್ಳೋದಿಲ್ಲ..."

"ನೋಡ್ತೀಯ ಹಾಗಾದ್ರೆ..." ಎಂದು ನಟರಾಜನ ಕೈಗಳನ್ನು ಮತ್ತೆ ಹಿಡಿದುಕೊಳ್ಳಲು ಯತ್ನಿಸಿದ ಸಬ್‌ಇನ್‌ಸ್ಪೆಕ್ಟರು.

ನಟರಾಜ ಕಾಂಗ್ರೆಸ್ಸಿಗೆ ಸೇರಿಕೊಂಡಿದ್ದರೂ ಪೂರ್ಣವಾಗಿ ಗಾಂಧೀವಾದಿಯಾಗಿರಲಿಲ್ಲ. ಇನ್ನೂ...ಸಬ್‌ಇನ್‌ಸ್ಪೆಕ್ಟರನೊಡನೆ ಕೈ ಕೈ ಮಿಲಾಯಿಸಿಯೇ ಬಿಟ್ಟ. ಅದನ್ನು ಕಂಡು ಇನ್ನಿಬ್ಬರು ಕಾನ್‌ಸ್ಟೇಬಲ್ಲುಗಳು ಬಂದರು. ನಟರಾಜನ ಮೇಲೆ ಬಿದ್ದು, ಲಾಠಿಗಳಿಂದ ಚೆನ್ನಾಗಿ ಹೊಡೆದು ಅವನನ್ನೆಳೆದುಕೊಂಡು ಹೋಗಿ ಸೆರೆಮನೆಗೆ ದೂಡಿದರು. ನಟರಾಜನ ಮೇಲೆ ಎಲ್ಲಿಲ್ಲದ ಆಪಾದನೆಗಳು ಹೊರಿಸಲ್ಪಟ್ಟವು.

ನಟರಾಜನ ಬಂಧನದ ಸುದ್ದಿಯನ್ನು ಕೇಳಿ ನಂಜುಂಡಸ್ವಾಮಿಯೂ, ಯಶೋದಮ್ಮನೂ ತುಂಬ ಮರುಗಿದರು. ಆದರೆ ತಾನು ಸರ್ಕಾರಿ ನೌಕರಿಯಲ್ಲಿದ್ದುದರಿಂದ ನಟರಾಜನನ್ನು ನೋಡಲು ಹೋಗುವುದಕ್ಕೂ ಅಂಜಿದನು ನಂಜುಂಡಸ್ವಾಮಿ. ಅನಂತ ಮಾತ್ರ ಒಂದು ಬಾರಿ ಸೆರೆಮನೆಯೊಳಗೆ ಹೋಗಿ ತನ್ನ ಗೆಳೆಯನನ್ನು ಮಾತಾಡಿಸಲು ಪ್ರಯತ್ನಪಟ್ಟಿದ್ದ. ಆದರೆ ಸೆರೆಮನೆಯ ಅಧಿಕಾರಿಗಳು ಆ 'ತುಂಟ ಖೈದಿ"ಯನ್ನು ಯಾರು ಭೇಟಿ ಮಾಡುವುದಕ್ಕೂ ಅವಕಾಶವೀಯಲಿಲ್ಲ. ಕಡೆಗೆ ತನ್ನ ಕಾರ್ಯ ಸಾಧಿಸಿಕೊಳ್ಳಲು ಅನಂತ ಜೈಲು ವಾರ್ಡರುಗಳಿಗೆ ಲಂಚ ಕೊಡಬೇಕಾಯಿತು.

ಅತ್ತ ಕಲ್ಲಹಳ್ಳಿಯಲ್ಲಿ ಆರು ತಿಂಗಳ ಗರ್ಭಿಣಿಯಾಗಿದ್ದ ಪಾರ್ವತಮ್ಮನಿಗೆ 'ಮೈ ಇಳಿದು' ತುಂಬಾ ಕಾಯಿಲೆಯಾಗಿತ್ತು. ದಿನ ದಿನಕ್ಕೆ ಅವಳು ಕೃಶಳಾದಂತೆ ವಿಷಕಂಠಯ್ಯನಿಗೆ ತನ್ನ ಹೆಂಡತಿ ಬದುಕುವಳೊ, ಇಲ್ಲವೊ ! ಎಂಬ ಶಂಕೆ ಮೂಡಿತು.

ಒಂದು ದಿನವಂತೂ ಜ್ವರ ವಿಪರೀತವಾಗಿ ತೀರ ನಿಶ್ಶಕ್ತಳಾಗಿದ್ದಳು ಪಾರ್ವತಮ್ಮ. ಮನೆಗೆ ಬಂದಿದ್ದ ಮರಿನಿಂಗಿ, ವಿಷಕಂಠಯ್ಯನನ್ನು ಒಂದು ಪಕ್ಕಕ್ಕೆ ಕರೆದು, "ಪೂರ ಸೋತುಬಿಟ್ಟಿವ್ಳೇ ಕನಪ್ಪಾ... ಮೊದಲಾರ ಆ ಮುದುಕಿ ಇದ್ದದ್ದು ಹಟ್ಟೀಲಿ ಯೆಲ್ಲಾರಿಗೂ ಧೈರ್ಯ ಆಗಿತ್ತು. ಈಗ ಆ ಮೊಗ ಏಟೂ ಅಂತ ನೋಡಿಕೊಂಡಾದಪ್ಪ... ನಿಮ್ಮ ಅತ್ತಿಗೇಗಾರ ಹ್ಯಾಳಿ ಕಳಿಸು... ಅಲ್ಲಿಂದ ಚೆಲುವಮ್ಮನಾರೆ ವಸಿ ಜಿನದ ಮಟ್ಟಿಗೆ ಬಂದಿಲ್ಲಿದ್ರೆ ಏಟೋ ಸಾಯ ಆಯ್ತದೆ..." ಎಂದಳು.

ಈ ಸುದ್ದಿ ತಿಳಿದ ನರಸಮ್ಮ ತಾನೇ ಕಲ್ಲಹಳ್ಳಿಗೆ ಬಂದಳು. ತನಗೆ ತಿಳಿದ ಔಷಧಗಳನ್ನೆಲ್ಲಾ ಮಾಡಿದಳು. ಇದಾವುದರಿಂದಲೂ ಪಾರ್ವತಮ್ಮನಿಗೆ ಗುಣವಾಗುವ ಹಾಗೆ ಕಾಣಲಿಲ್ಲ.

ಹೀಗಿರುವಾಗ ಒಂದು ದಿನ ರಾತ್ರಿ ಎಲ್ಲರೂ ತನ್ನ ಹತ್ತಿರ ಕುಳಿತಿರುವಾಗ ಮಂಗಳೆಯನ್ನು ಸನ್ನೆ ಮಾಡಿ ಕರೆದು ತನ್ನ ಪಕ್ಕದಲ್ಲಿ ಕೂರಿಸಿಕೊಂಡು ಮೃದುವಾಗಿ ಮುಂಗುರುಳು ತಿದ್ದುತ್ತಾ ಪಾರ್ವತಮ್ಮ "ನಿನ್ನ ಮದ್ವೆ ಆಗೊತನಕ ದೇವರು ನನ್ನ ಉಳಿಸಾನೊ ಇಲ್ಲವೊ ಕಾಣ್ನೆಲ್ಲ ಮಗಳೆ..." ಎಂದು ಕಣ್ಣೀರು ತಂದುಕೊಂಡು "ನಿಮ್ಮಜ್ಜಿ ಅಂಗೆ ನಾನೂವೆ ಕಣ್ಣು ಮುಚ್ಚಿಕೊಂಡ್ರೆ ನಿನ್ನ ಗತಿಯೇನವ್ವಾ ?" ಎಂದು ಬಿಕ್ಕಿ ಬಿಕ್ಕಿ ರೋದಿಸಲು ಆರಂಭಿಸಿದಳು.

"ಬಿಡ್ತು ಅನ್ನವ್ವ..." ಎಂದು ಗದ್ಗದಿತಳಾದರೂ ತಾಯಿಯ ಅಧೈರ್ಯವನ್ನು ಕಡಿಮೆಗೊಳಿಸಬೇಕೆಂಬ ಇಚ್ಛೆಯಿಂದ ತನ್ನ ಸಾಹಸವೆಲ್ಲವನ್ನೂ ವೆಚ್ಚ ಮಾಡಿ ಉಕ್ಕುವ ಕಣ್ಣೀರನ್ನು ಶ್ರಮದಿಂದ ತಡೆಯುತ್ತ, "ಹಾಗೆಲ್ಲ ಮಾತಾಡಬಾರದು. ದೇವರು ಒಳ್ಳೇದು ಮಾಡ್ತಾನೆ..." ಎಂದಳು ಮಂಗಳೆ.

"ಯೇನು ದೇವರೊ, ಯೇನೊ... ಆ ನಟ್ರಾಜನಿಗೆ ಬ್ಯಾರೆ ಹಂಗೆಮಾಡಿ ಕುಂಡರಿಸವ್ನೆ... ಮುತ್ತಿನಂಗೆ ಇದ್ದ ಹುಡುಗನಿಗೆ ಈಟು ಗ್ಯಾನಾ ತಪ್ಪಾನೆ ಅಂದ್ರೇನಾ ? ಆ ಮಾಯಕಾರ ಶಿವ ಇದ್ನೆಲ್ಲಾ ನೋಡಿಕೊಂಡು ಅದ್ಯಾಕಿನ್ನೂ ಸುಮ್ಮನೆ ಕಣ್ಣು ಮುಚ್ಚಿ ಕುಂತುಗಂಡವ್ನೊ ನಾ ಬ್ಯಾರೆ ಕಾಣೆ... ಸದ್ಯದಾಗೆ ಅವನ್ನ ಬುಡಾಹಂಗೆ ಕಾಣ್ನಿಲ್ಲ ಅಂತ ಮೈಸೂರಿನಿಂದ ಚಿಕ್ಕಯ್ಯ ಬ್ಯಾರೆ ಕಾಗದ ಆಕಿಸಿದ್ದ..." ಅಷ್ಟು ಮಾತುಗಳನ್ನು ಒಟ್ಟಿಗೇ ಆಡಿದುದರಿಂದ ಪಾರ್ವತಮ್ಮನಿಗೆ ದಣಿವು ತೋರಿತು. ಹಾಗೇ ಸ್ವಲ್ಪ ಸುಮ್ಮನಿದ್ದು ಸುಧಾರಿಸಿಕೊಂಡು ತನ್ನ ಮಾತು ಮುಂದುವರಿಸಿದಳು... "ಯೇನು ಯೇನು ಆಯ ಬೇಕಾಗಿದ್ದಾತೊ ಯಾರು ಕಂಡಿರೋರು ?... ಯೇನಾರಾ ಆಗಕಲ್ಲಿ. ನಿನ್ನದೊಂದು ಮದ್ವೆ ಅಂತ ಆಗಿಬುಟ್ಟಿದ್ರೆ ನಾನು ನಿಸೂರಾಗಿ ಪ್ರಾಣ ಬುಟ್ಟುಬುಡ್ತಿದ್ದೆ ಕನವ್ವಾ, ಈಗ ನಂಗೆ ಅದೊಂದೇ ಭಾರಿ ಕೊರತ್ನೆ ಹತ್ತಿಕೊಂಡದೆ ಮಗಳೇ..." ಎಂದು ಅನುಭವಿಸಲಾಗದ ಸಂಕಟದಿಂದ ಹೇಳಿಕೊಂಡಳು.

ಈ ಮಾತುಗಳನ್ನು ಕೇಳಿ ವಿಷಕಂಠಯ್ಯನಿಗೂ ಸಂಕಟವಾಯಿತು. ಅವನು ಅಲ್ಲಿ ನಿಲ್ಲಲಾರದೆ ನರಸಮ್ಮನೊಡನೆ ಹೊರ ಜಗುಲಿಗೆ ಬಂದನು.

"ಕೇಳಿದಿರಾ ಅತ್ತಿಗೆ ನನ್ನೆಡತಿ ಹೇಳಿದ್ದಾ –?"

"ಕೇಳಿದಿ."

"ಮಂಗ್ಲೀಗೆ ಎಂಗಾರ ಈ ಸರ್ತಿ ಲಗ್ಣ ಮಾಡೇಬುಡಬೇಕು..."

"ಊ....ನಿನ್ನೆಡತಿ ಆಸೆಯೂ ಅದೇ ಆಗದಲ್ಲಾ !"

"ಅವಳಿಗ್ಯಾನೊ ಆಸೆ ಸರಿ... ಆದ್ರೆ ಮಾಡಕ್ಕೊಂದು ಆಗಬೇಕಲ್ಲಾ..."

"ಆಗದೆ ಯೇನಾ ಅಂತಾದ್ದು...?"

"ದುಡ್ಡು ಕಾಸು ಬ್ಯಾಡದಾ ಅತ್ತಿಗೆ ?... ಈಗೊಂದೆಂಟು ವರ್ಸದಿಂದ ಒಂದೀಟು ರೂಪಾಯಿ ಬತ್ತಿದ್ದ ಹೊಗೆಯೂ ಈ ಸರ್ತಿ ಕೈಕೊಟ್ಟುಬುಡ್ತು..."

"ಯಾಕೇ?"

"ಈ ಸರ್ತಿ ಒಂದು ಕೆಲಸ ಆಗಿಬುಡ್ತು. ನಾನು ಹೊಗೇನ ಮುಂಚು ಮುಂಚೆಗೇ ಆಕ್ನಿಲ್ಲ. ಮಳಿಲ್ಲದೇಯ ಯೆಲ್ಲ ಉರಿದೋಯ್ತು. ಒಂದು ಹತ್ತು ಹನ್ನೆರಡು ರೂಪಾಯೂ ಆಗಕ್ಕಿಲ್ಲ... ಜೊತೆ ಎತ್ತೂ ಬ್ಯಾರೆ ಸತ್ತೋಗಿ ಬುಡ್ತು... ನಂಗಾಗಿರೋ ನಷ್ಟದಲ್ಲಿ ಇನ್ನೊಬ್ಬ ಆಗಿದ್ರೆ ಪ್ರಾಣ ಕಳಕೊಂಬಿಡ್ತಿದ್ದ... ಎಲ್ಲ ಹೋಗಲಪ್ಪ ಅಂದ್ರೆ ನಮ್ಮ ಮನೇಗೆ ಆದಾರ ಆಗಿದ್ದ ನಮ್ಮ ಮುದುಕೀನೂ ಓಗಿಬುಡ್ತು. ಈಗ ಪಾರತೀಗೆ ಬ್ಯಾರೆ ಹಿಂಗಾಗಿ ಕುಂತದೆs... ಇದರೊಳಗೆ ಹೆಂಗೆ ನಾ ಮದ್ವೆ ಮಾಡೋದು?" ಎಂದು ನರಸಮ್ಮನೊಡನೆ ತನ್ನೊಳಗಿದ್ದ ದುಃಖವನ್ನೆಲ್ಲ ತೋಡಿಕೊಂಡನು.

"ಕಸ್ಟ ಮನುಸನಿಗೆ ಬರದೇಯ ಮರಕ್ಕೆ ಬಂದಾತಾ?... ಧೈರ್ಯಮಾಡಿ ಯೇನಾರ ಒಂದು ಮಾಡಬೇಕು."

"ಯೇನು ಧೈರ್ಯ ಮಾಡಲಿ ಅತ್ತಿಗೆ... ಆ ನಟ್ರಾಜ ಯೇನೊ ನೌಕ್ರಿ ಮಾಡ್ತಾನೆ ಅಂತ ಮೂರು ವರ್ಷ ಓದಿಸಿ ಆಯ್ತು... ಓಡೋಗಿ ಜೈಲು ಸೇರಿಕಂಡ... ಹಿಂಗೆ ಕುಂತುಕೊಂಡ ಉಣ್ಣಾಕೆ ಅಪ್ಪಾರ ಜಮಿನಿದ್ದಾತಾ?... ಓಗಲಿ ಇರೊ ಜಮೀನ್ನಲ್ಲಾರ ಗೇದು ಉಣ್ಣೊ ಸಕ್ತಿ ಇದ್ದಾತಾ... ಈ ಓದಿದ ಹಕ್ಕಳಿಗೆ...?" ಎಂದು ಅನುಮಾನಪಟ್ಟ.

"ಹಂಗಂತಾ ಹಿಂಗೆ ಕುಂತಿರಾಕ್ಕೆ ಆದಾತಾ? ಯೇನಾರ ಒಂದು ಮಾಡಲೇಬೇಕು. ಪಾರತಿ ಬ್ಯಾರೆ ಹಿಂಗಾಗಿಬುಟ್ಟವ್ಳೆ... ಯಾವಾವ ಗಳಿಗೇಲಿ ಯೇನೋ ! ಈ ಸಾಯೋ ಗಳಿಗೇಲಿ ಮಗಳ ಮದ್ವೇದೊಂದೆ ಕೊರಗಣೆ ಹಿಡಿದುಬುಟ್ಟದೆ ಅವಳಿಗೆ... ಹಿಂಗಿರೋವಾಗ ಮುಂದ್ಕೇನಾರ ಯೋಚ್ಣೆ ಮಾಡ್ದೆ 'ನಾ ಯೇನ ಮಾಡ್ಲಿ' ಅಂತ ಕುಂತುಗೊಂಡರೆ ಆದಾತಾ?..."

ವಿಷಕಂಠಯ್ಯನ ಆಲೋಚನೆ ಬೇರೆ ದಿಸೆಯಲ್ಲಿ ಹರಿಯುವಂತೆ ಮಾಡಲು ಯತ್ನಿಸಿದಳು ನರಸಮ್ಮ.

"ನಂಗೊಂದುಃ ತೋಚಾಕಿಲ್ಲ" ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡ ವಿಷಕಂಠಯ್ಯ.

ಮುಂದೆ ಏನು ಹೇಳಬೇಕೆಂದು ತನ್ನ ಮನಸ್ಸಿನಲ್ಲೇ ಗುಣಾಕಾರ ಹಾಕಿಕೊಂಡ ನರಸಮ್ಮ, "ನಿಂಗೆ ದುಡ್ಡಿನ್ದು ತಾನೆ ಯೋಚ್ನೆ ?.... ಅದೇಟಾಯ್ತುದೊ ನಾ ಕೊಡ್ತೀನಂತೆ ಮಾಡು" ಎಂದು ಭರವಸೆಯಿತ್ತಳು.

ಈ ಮಾತು ಕೇಳಿದ ವಿಷಕಂಠಯ್ಯನಿಗೆ ಸಂತೋಷವಾಯಿತು. ಅತ್ತಿಗೆಯ ಧಾರಾಳ ಸ್ವಭಾವವನ್ನು ಮನಸ್ಸಿನಲ್ಲೇ ವಂದಿಸಿದ.

ಆದರೆ ದುಡ್ಡು ಸಿಕ್ಕಿತೆಂದು ಹಿಗ್ಗಿದ ಅವನ ಮನಸ್ಸಿಗೆ ಮರುಗಳಿಗೆಯಲ್ಲಿಯೇ ನಟರಾಜ ಕಾರಾಗೃಹದಲ್ಲಿರುವುದು ನೆನಪಾಯಿತು.

"ಸರಿಕನತ್ತಿಗೇ... ದುಡ್ಡೇನೊ ನೀವು ದೊಡ್ಡ ಮನಸುಮಾಡಿ ಕೊಟ್ಟಿರಿ ಅನ್ನಾವಾ. ಮದ್ವೇಗೆ ಜೈಲಿನಾಗಿರೊ ಉಡುಗನ್ನೆಂಗಾ ಕರಕೊಂಬರೋದು ?... ಪಾರತೀಗೆ ಬ್ಯಾರೆ ಹಿಂಗೆ ತುಟಗಟ್ಟಾಗಿಬುಟ್ಟದೆ ?... ತಡಮಾಡೋಹಂಗಿಲ್ಲ ?... ಯೇನು ಮಾಡ್ಲೀ ?" ತನ್ನ ಸಮಸ್ಯೆಯನ್ನು ಪೂರ್ತಿಯಾಗಿ ಹೇಳಿ, ಅದನ್ನು ಬಗೆಹರಿಸುವ ಪೂರ್ಣ ಸ್ವಾತಂತ್ರ್ಯವನ್ನು ಅವಳಿಗೇ ಕೊಟ್ಟವನಂತೆ ವಿಷಕಂಠಯ್ಯ ಮಾತನಾಡುತ್ತಿದ್ದ.

ನರಸಮ್ಮ ಕೆಲವುಗಳಿಗೆ ಯೋಚಿಸಿದ ನಂತರ ಹೇಳಿದಳು :

"ಈಗೇನು ಸೂರು ಓದದ್ದೂ ?... ಅವ್ನಿಗೇ ಆಗಬೇಕೂ ಅಂತಯೇನಾ ?... ಒಂದು ಗಂಡಿಗೆ ಒಂದು ಎಣ್ಣು ಅಂತ ತಿಷ್ಣೆ ಆಗೇ ಅದೆ. ಅದಕ್ಯಾಕೆ ಆಟು ಯೋಚ್ನೆ ಮಾಡೀ ಬುಡು..." ಎಂದವಳು, ಅವನಿಗೆ ಉಪಕಾರ ಮಾಡುವವಳಂತೆ "ಅಂತ ಆತುರ ಆಗಿದ್ರೆ ನಮ್ಮ ಸುಬ್ಬರಾಯಿಗೇ ಮಾಡಿಬುಟ್ಟರಾಯ್ತು" ಎಂದಳು.

ನರಸಮ್ಮನ ಮಾತು ಕೇಳಿ ವಿಷಕಂಠಯ್ಯನಿಗೆ ಏನು ಮಾತಾಡಲೂ ತೋರದೆ ಹೋಯಿತು. ಸುಬ್ಬರಾಯಿಗೆ ಮಂಗಳೆಯನ್ನು ತಂದುಕೊಳ್ಳುವುದಾಗಿ ನರಸಮ್ಮ ಹೇಳಿದ್ದು ಪೇಚಿನಲ್ಲಿ ಸಿಕ್ಕಿಬಿದ್ದಿದ್ದ ವಿಷಕಂಠಯ್ಯನನ್ನು ಸಂತೋಷಗೊಳಿಸಿತು. ಚಿಂತೆಯ ಸಾಗರದಲ್ಲಿ ಮುಳುಗುತ್ತಿದ್ದವನಿಗೆ ತನ್ನ ಸಲಹೆಯ ಬೆಂಡನ್ನು ನೀಡಿದ್ದಳು ನರಸಮ್ಮ...

ಕೆಲಹೊತ್ತು ನರಸಮ್ಮನ ಸಲಹೆಯಿಂದ ತನ್ನ ಕಷ್ಟ ನೀಗಿತೆಂದು ಮಂಡಿಗೆ ತಿನ್ನುತ್ತಿದ್ದ ವಿಷಕಂಠಯ್ಯನ ಮನಸ್ಸನ್ನು ಬೇರೊಂದು ಯೋಚನೆ ಆಕ್ರಮಣ ಮಾಡಿತು... "ನನ್ನ

ಹೆಡತಿ ಒಪ್ಪಿಸೋದು ಎಂಗೆ?... ತನ್ನ ತಮ್ಮನ್ನ ಬುಟ್ಟುಬುಟ್ಟು ಬ್ಯಾರೊಬ್ಬನಿಗೆ ಮಗಳ ಕೊಡಾಕೆ ಒಪ್ಪಿಕೊಂಡಾಳಾ ! ಮಂಗಲಿ ಬ್ಯಾರೆ ನಟ್ರಾಜನಿಗೆ ಅಂತ್ಲೇ ಬೆಳೆದೋಳು... ಅವನ್ನ ಕಂಡ್ರೆ ಬೋ ಆಸೆ ಅವಳ್ಗೆ... ಅದನ್ನ ತಪ್ಪಿಸಿಬುಟ್ಟು ಬ್ಯಾರೆ ಕಡೀಕೆ ಅವಳ್ನ ಕೊಡಕ್ಕಾದಾತಾ ?..."

ಹೀಗೆ ವಿಷಕಂಠಯ್ಯ ಯೋಚಿಸುತ್ತ ಕುಳಿತುದನ್ನು ಕಂಡು ನರಸಮ್ಮ, "ಯೇನಾ ಬೋ ಯೋಚ್ನೆ ಮಾಡ್ತಾ ಕುಂತುಬುಟ್ಟೆ–? ನನ್ನ ತಮ್ಮನಿಗೆ ನಿನ್ನ ಮಗಳ ಕೊಡಾಕೆ ಮನಸಿಲ್ಲವಾ?" ಎಂದು ಮುನಿಸಿಕೊಂಡವಳಂತೆ ಕೇಳಿದಳು.

"ಮನಸಿಲ್ಲದೆ ಯೇನು?... ಮನಸೇನೋ ಅದೆ... ಆದ್ರೇ–"

"ಯೇನು?"

"ನಮ್ಮ ಪಾರತಿ ಒಪ್ಪಿಸೋದೆ ಬೋ ಕಷ್ಟ..."

"ಯೇನು?...ಪಾರತಿ ಒಪ್ಪಬೇಕಾ?– ಅವಳೇನಾ ಒಪ್ಪೋದು?... ಮನೆ ಗಂಡಸಾಗಿದ್ದು ನೀ ಈ ಮಾತಾಡ್ತಾ ಇರೋದು ನೇರ್ಪಾಯ್ತು ಕನ ಬುಡು..." ಎಂದು ಚುಚ್ಚಿದಳು ನರಸಮ್ಮ.

"ಮಂತೇನಮಾಡಿ ಹೇಳಿರಿ...?"

"ನೀ ಒಂದು ಮನಸು ಮಾಡಿಬುಟ್ಟರೆ ನಾವು ಹೆಣ್ಣೆಂಗಸ್ರು ಯೇನು ಮಾಡೋಹಂಗಿದ್ದೇವು ?... ನಮಗೇನು ಗೊತ್ತಾದಾತು ?– ಒಳಗೆ ಕುಂತು ಹಿಟ್ಟಿನ ಮಡಕೆ ಕೆರೆಯೊ ಎಂಗಸರಿಗೆ ಲೋಕದ ಯವಾರ ಹೆಂಗೆ ತಿಳೀಬೇಕು ?... ಆಚೆ ಈಚೆ ಓಡಾಡಿಕೊಂಡು ನಾಕ್ಕುಕಡೆ ಹೋಗಿ ಬರೊ ನಿಮ್ಮಂತಾ ಗಂಡಸರಿಗಾರ ಯೆಲ್ಲ ತಿಳಿದಿರ್ತದೆ..." ಹೀಗೆಂದು ಪಾರ್ವತಮ್ಮನನ್ನು ಕೀಳು ಮಾಡಿ ನುಡಿಯುವಾಗ ವಿಷಕಂಠಯ್ಯ ಅಪಾರ್ಥ ಕಲ್ಪಿಸದಿರಲೆಂದು ತನ್ನನ್ನೂ ಬೆರೆಸಿಕೊಂಡಿದ್ದಳು.

ವಿಷಕಂಠಯ್ಯ ಏನು ಹೇಳಬೇಕೊ ಅವನಿಗೆ ತಿಳಿಯಲಿಲ್ಲ. ಅವನು ಸುಮ್ಮನಿದ್ದ.

"ನೀ ಒಂದು ಒಪ್ಪಿಕೊಂಬುಡು... ಬಾಕೀದು ನೋಡೂನಾ. ಯೆಲ್ಲ ಲಾಜದಲ್ಲಿ ನಡಸಿಬುಡ್ತೀನಿ... ಬೇಕಾದರೆ ಹೆಣ್ಣಿನ್ದೂ ಗಂಡಿನ್ದೂ ಎರಡು ಕಡೆ ಖರ್ಚೂ ನಾವೇ ವಯಿಸಿಕೊಂಡು ಲಗ್ನ ಮಾಡಕತ್ತೀವಿ. ನಿಂಗೊಂದು ಕಾಸೂ ಸಾಲ ಆಗದಂತೆ ನೋಡಿಕೊತ್ತೀವಿ..." ಎಂದೆಲ್ಲ ಆಸೆದೋರಿದಳು ನರಸಮ್ಮ.

ತನಗೆ ಕಷ್ಟವೇ ತಪ್ಪಿತೆಂದು ವಿಷಕಂಠಯ್ಯನ ಹೃದಯ ಒಪ್ಪಿತಾದರೂ, "ಅದೆಲ್ಲ ಸರಿ– ಆದ್ರೆ ನಮ್ಮ ಮಂಗಲಿ ಆ ನಟರಾಜನಿಗೆ ವೊಲಿದು ನಿಂತವ್ಳಲ್ಲತ್ತಿಗೆ ?" ಎಂದು ಸಂಶಯಪಟ್ಟ.

"ಆ ಅರೀದ ಮುಕ್ಕನದೂ ಒಂದು ಲೆಕ್ಕಕ್ಕೆ ತಕ್ಕೊ. ಚೆಂದಾಗಿ ಉದ್ದಾರ ಆಯ್ತಿದ್ದಿ... ಹೆಣ್ಣು ಮಕ್ಕಳ ಗ್ಯಾನ ಬುಡು. ತಂದುಕಂಡೋನು ಹೊಟ್ಟೆಗೆ ಹಿಟ್ಟೂವೆ ಮೈತುಂಬ ಒಡವೆನೂವೆ ಇಕ್ಕಿಬುಟ್ಟರೆ ಅದರೋಟಿಗೇನೇ ಉಟ್ತದೆ ಪಿರೀತಿ–" ಎಂದವಳು ಸ್ವಲ್ಪ ನಿಧಾನಿಸಿ "ಓಗ್ಲಿ ನಟ್ರಾಜ ಈಗೆಲ್ಲಿದ್ದಾನಾ– ಎಂಗಾರ ಮಾಡಿಬುಡಾವಾ ಅನ್ನಾಕೆ ?... ಆಮೇಕೆ ಪಾರತಿ ಏನಾರಾ ಕರಾರು ಜಿನ ಬದುಕೋಹಂಗಿದ್ದಾಳಾ ?... ತುಟಗಟ್ಟಾಗಿಬುಟ್ಟಿದೆ. ಕಣ್ಣಿಂದ ನೀನೇ ನೋಡ್ತಾ ಇದ್ದೀ ?... ಸುಮ್ಮಕೆ ದೇವರಮ್ಯಾಗೆ ಬಾರ ಆಕಿ, ಗಟ್ಟಿ ಮನಸು ಮಾಡು. ಮುಂದಿನದ್ನೆಲ್ಲಾ ನೋಡಿಕೋಳಾಕೆ ನಾ ಇವ್ನಿ..." ಎಂದು ಹುರಿದುಂಬಿಸಿದಳು.

ನರಸಮ್ಮನ ಮಾತುಗಳು ವಿಷಕಂಠಯ್ಯನ ಮನಸ್ಸಿನಲ್ಲಿ ಪೂರ್ಣವಾಗಿ ನಾಟಿದವು. ಅವಳ ವಾದದ ಸರಣಿ ಅವನಿಗೆ ಒಪ್ಪಿಗೆಯಾಯಿತು. ಅವಳು ಹೇಳಿದಂತೆಯೇ ಮಾಡುವುದೆಂದು ನಿರ್ಧಾರ ಮಾಡಿ, "ಆಗಲಿ ಕನತ್ತಿಗೆ... ಇನ್ನೊಂದೆಂಡು ಜಿನ ಕಳೀಲಿ... ಅವಳಿಗೂ ಒಂದು ಮಾತು ಆಕ್ತೀನಿ..." ಎಂದು ಅವನು ಒಪ್ಪಿಗೆ ಇತ್ತಾಗ ರಾತ್ರಿಯಾಗಲೇ ಬಹಳ ಮುಂದುವರಿದಿತ್ತು.

ಸಂಕಟದಿಂದ ಹೊರಳಾಡುತ್ತಿದ್ದ ಪಾರ್ವತಮ್ಮನಿಗೆ ಯಾವಾಗಲೋ ನಿದ್ದೆ ಬಂದಿತು. ಮಂಗಳೆಗೆ ಮಾತ್ರ 'ಅಯ್ಯನೂ ದೊಡ್ಡವ್ವನೂ ಏನು ಮಾತಾಡಿಕೊಳ್ಳುತ್ತಿರುವರೊ ?...' ಎಂಬ ಅಸ್ಪಷ್ಟ ಭೀತಿ ಅಲ್ಲಿಯತನಕ ನಿದ್ದೆಯನ್ನು ತಡೆದಿಟ್ಟಿತ್ತು.

ವಿಷಕಂಠಯ್ಯ ಕೋಣೆಯ ಬಾಗಿಲಿನಲ್ಲಿ ಇಣಿಕಿ ನೋಡಿದಾಗ ಮಂಗಳೆ ಎದ್ದು ಕುಳಿತಳು.

"ಮನಕ್ಕೊ, ಮನಕ್ಕೊ.... ಪಾರತೀಗೆ ಇನ್ನೂ ನಿದ್ದೆ ಹತ್ತಿತೊ, ಇಲ್ಲವೊ ಅಂತ ನೋಡಕ್ಕೆ ಬಂದೆ" ಎಂದು ಹೇಳುತ್ತಾ ಹೊರಟುಹೋದ ವಿಷಕಂಠಯ್ಯ.

೨೬

"ಆವೊತ್ತು ಮಂಗ್ಳಿ ಮದ್ವೆ ಮಾಡಿಬುಡಬೇಕು ಅಂತಿದ್ಯೆಲ್ಲಾ...? ಮಾಡಿ ಬುಡಾವಾ?"

ವಿಷಕಂಠಯ್ಯನ ಮಾತುಗಳನ್ನು ಆಲಿಸಿ ತೃಪ್ತಿಗೊಂಡಂತೆ ಕಣ್ಣರಳಿಸಿ ಪತಿಯ ಮುಖವನ್ನೇ ನಿಟ್ಟಿಸಿದಳು ಪಾರ್ವತಮ್ಮ.

"ನೀ ಒಪ್ಪಿಗೊಂಡರೆ ಈ ಉಗಾದಿ ಒಳಗೇ ಲಗ್ಣ ಇಡಿಸಿಬುಡ್ತೀವಿ..." ಎಂದು ರಾಗವೆಳೆದ ವಿಷಕಂಠಯ್ಯ.

ಪಾರ್ವತಮ್ಮನ ಮುಖ ಆ ಕಾಯಿಲೆಲ್ಲೂ ಹರ್ಷದಿಂದ ಹಿಗ್ಗಿತು.

"ಉಗಾದಿ ಒಳಗೆ–ಲಗ್ಣ!" ಎಂದು ಆಶ್ಚರ್ಯಪಟ್ಟಳು.

"ಊ. ಆಗದೇ ಯೇನಾ ?... ದುಡ್ಡು ಕಾಸಿಗೇನು ಯೋಚ್ನೆ ಮಾಡೋ ಹಂಗಿಲ್ಲ. ನಿನ್ನ ಮಗಳ ಪುಣ್ಯ ಒಂದು ಚೆಂದಾಗಿದ್ರೆ ಯೆಲ್ಲ ಸುಸೂತ್ರಾಗಿ ನಡದು ಓಯ್ತದೆ, ನಿನ್ನ ಕಾಯಿಲೆಯೂ ಗುಣ ಆಯ್ತದೆ..."

"ಅ?... ಹಂಗಾರೆ ಆಗ್ಲೆ ದುಡ್ಡು ಕಾಸ್ನೂ ಜೋಡಿಸಿಕೊಂಡಿದೀರಾ?..."

"ಅದಿರ್ಲಿ, ನೀ ನಿನ್ನ ಮಗಳೊಪ್ಪಿಸೋದು ಒಂದು ನೋಡಿಕೊ. ಉಳಿದ್ನೆಲ್ಲ ನಮಗೆ ಬುಟ್ಟುಬುಡು."

"ಇದರಲ್ಲಿ ನಾನು ಒಪ್ಪೋದೇನಾ ?... ಮನೆ ಯೆಜಮಾನ್ರು ನೀವು ಒಪ್ಪಿಕೊಂಡಮ್ಯಾಗೆ?" ಹಾಗೆಂದವಳು ಏನೋ ಯೋಚಿಸಿಕೊಂಡು "ಚಿಕ್ಕಯ್ಯನಿಂದ ಕಾಗಜ ಬಂದಿತಾ?... ನಟ್ರಾಜನ್ನ... ಬುಟ್ಟುಬುಟ್ಟವರಂತಾ...?" ಎಂದು ಕುತೂಹಲದಿಂದ ಕೇಳಿದಳು.

"ನಟರಾಜನ್ನ ಬುಡೋದು !... ಯಾವ ಬ್ರಮೆಯ ಇದು... ಅಂತ ಕೆಲಸ ಮಾಡಿ ಅವ್ನು ಜೈಲು ಸೇರವ್ನೆ... ಇನ್ನು ಅವ್ನ ಸುದ್ದಿ ಯಾಕೆ..."

"ಮಂತೆ... ಉಗಾದಿ ಒಳಗೇ ಲಗ್ಣ ಮಾಡತೀನಿ–ಅಂದ್ರೀ ?" ಒಂದೂ ಅರ್ಥವಾಗದೆ ಪ್ರಶ್ನಿಸಿದಳು ಮುಗ್ಧೆ ಪಾರ್ವತಮ್ಮ.

"ಹೂ, ಅಂದೆ... ನಟ್ರಾಜ ಒಬ್ಬ ಇಲ್ಲದೇ ಇದ್ರೆ ಲೋಕದ ಮ್ಯಾಲೆ ಗಂಡೂ ಅನ್ನೋದೆ ಇಲ್ಲವಾ ?"

ಪಾರ್ವತಮ್ಮ ಈಗಲೀಗ ಅವಾಕ್ಕಾಗಿ, "ಹಂಗಂದ್ರೆ?... ಯೇನಾ ನೀವು ಮಾತಾಡ್ತಾ ಇರೋದು ?" ಎಂದಳು.

"ನೋಡು. ಇಚಾರ ಹೀಂಗದೆ... ಅತ್ತಿಗೆ ಒಂದಿಗೆ ಯೆಲ್ಲಾನೂ ಮಾತಾಡಿವ್ನಿ. ಅವ್ಳೂ ದೊಡ್ಡ ಮನಸು ಮಾಡಿ ಒಪ್ಪಿಕೊಂಡವ್ಳೆ..."

ಬೆಪ್ಪಾದವಳಂತೆ ನರಸಮ್ಮನತ್ತ ಒಂದು ಬಾರಿ ದೃಷ್ಟಿಹರಿಸಿ, ಅನಂತರ "ನಂಗೊಂದೂ ಅರ್ತವೇ ಆಗ್ನಿಲ್ಲಾ"... ಎಂದಳು.

"ಇಲ್ನೋಡೂ ನಟ್ರಾಜನ್ನ ಈಗಲೆ ಬುಡೋ ಹಂಗೆ ಕಾಣ್ಲಿಲ್ಲ... ನೀನೂ ಇಂಗೆ ಸವೀತಾ ಬತ್ತಾ ಇದ್ದೀ... ಆದ್ಕೆ ನಿನ್ನ ಕಣ್ಣೆದುರಿಗೇ ಮಂಗಲಿ ಲಗ್ಣ ಮಾಡಿಬುಡಾವಾ ಅಂತ ನಿಚ್ಚಯಿಸಿ ನಮ್ಮ ಸುಬ್ರಾಯೀಗೆ ಕೊಟ್ಟು ಬುಡೋದು ಅವಳ್ನ ಅಂತ ಮಾಡಿಕೊಂಡಿವ್ನಿ..."

"ಆ–?" ಎಂದು ಬೆಚ್ಚಿದ ಪಾರ್ವತಮ್ಮ ಪತಿಯ ಮಾತುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಯತ್ನಿಸುತ್ತಿರುವಂತೆ ನಿಶ್ಚೇಷ್ಟಿತಳಾದಳು.

ಕಳವಳಗೊಂಡ ವಿಷಕಂಠಯ್ಯ ತಾನು ಹೊದೆದ ದುಪ್ಪಟಿಯ ಅಂಚಿನಿಂದ ಸೆಕೆ ಬೀಸಿದನು.

ಎಷ್ಟೋ ಕಾಲ ಕಳೆದ ಬಳಿಕ ಮೆಲ್ಲನೆ ಕಣ್ತೆರೆದ ಪಾರ್ವತಮ್ಮ, "ಇದ್ಯಾಕೆ–ಈ ಯೋಚ್ನೆ–ಮಾಡಿದ್ರಿ? ನಮ್ಮ ನಟ್ರಾಜ ಬರೋವರ್ಗೆ ಕಾಯಬೌದಾಗಿತ್ತಲ್ಲಾ...?" ಎಂದಳು.

"ನಿಂದು ಶಾತ್ರಿ ಇದ್ದರ್ರಾನೇಯ ನಾ ಕಾಯೋದು?... ಈಗ ಸುಬ್ರಾಯಿ ತಾನೆ ಯೇನಾಗಿದ್ದಾನು?... ಯೆಲ್ಲಾ ಕಡೀಕೂ ಅನುಕೂಲಾಗವ್ನೆ– ನಿನ್ನ ಮಗಳ ಹಣೇಲೂ ಚೆಂದಾಗಿ ಬಂದಿರೋ ಹಂಗದೆ ವಿಧಿಯಮ್ಮ..."

"......................"

"ಇದ್ಯಾಕೆ ಸುಮ್ಮಕಾದೇ?... ನಿನ್ನ ಮಗಳ ನಾ ಯೇನು ಹಳ್ಳಕ್ಕೆ ತಳ್ಳಾಕಿಬುಡಬೇಕು ಅಂತ ಮಾಡಿದ್ದೀನಾ?"

"......................"

"ಸುಮ್ಮಕೆ ಒಪ್ಪಿಕೊಂಬುಡು, ಅಣ್ಣನ್ನೂ ಕರೆಸಿ ಉಗಾದಿ ಒಳಗೆ ಲಗ್ನ ಕಟ್ಟಿಸಿಬುಡಾವಂತೆ...."

ನರಸಮ್ಮ ಅಲ್ಲಿ ಇದ್ದುದರಿಂದಲೊ ಏನೋ ಅವಳೆದುರಿಗೆ ಪತಿಗೆ ಎದುರಾಡಲು ಇಚ್ಛಿಸಲಿಲ್ಲ ಪಾರ್ವತಮ್ಮ. ಆದರೂ ಸುಮ್ಮನೆ ತನ್ನ ತಲೆಯನ್ನಲ್ಲಾಡಿಸಿ ಅತೃಪ್ತಿಯನ್ನು ಮಾತ್ರ ಸೂಚಿಸದೆ ಬಿಡಲಿಲ್ಲ.

"ಹಂಗಾರೆ ನಿಂಗಿಷ್ಟ ಇಲ್ಲವಾ?..."

"ಇಲ್ಲ" ಎನ್ನುವಂತೆ ಮತ್ತೆ ತಲೆಯಲ್ಲಾಡಿಸಿದಳು ಪಾರ್ವತಮ್ಮ.

"ನಂಗೇನಾ ಬುಡು. ನೀನೇ ಕಯ್ಯಾರ ನಿನ್ನ ಮಗಳ ಜೀವ್ನಾವ ಕೆಡಿಸಿದಂಗಾಯ್ತದೆ... ಈಗೇನಂತೆ ಲಗ್ನ ಗಿಗ್ನ ಯೇನೂ ಇಲ್ಲದೆ ಹಂಗೇ ನಿಂತಿರಲೇಳ" ಎಂದು ಸಿಡಾರನೆ ಎದ್ದು ಹೊರಗೆ ಹೊರಟುಹೋದ ವಿಷಕಂಠಯ್ಯ.

ನಡುಮನೆಯ ಬಾಗಿಲಿನ ಹಿಂದೆ ನಿಂತು ಈ ಮಾತುಗಳನ್ನೆಲ್ಲ ಆಲಿಸಿದ ಮಂಗಳೆ ತಂದೆ ಎದ್ದು ಹೋದ ಬಳಿಕ ಓಡಿ ಬಂದು ತಾಯಿಯ ಕೊರಳನ್ನು ತಬ್ಬಿಕೊಂಡು ಗಳಗಳನೆ ಅಳುತ್ತಾ ನರಸಮ್ಮ ಅಲ್ಲೇ ಕುಳಿತಿರುವುದನ್ನೂ ಲಕ್ಷಿಸದೆ, "ನಟ್ರಾಜ ಮಾವನ್ನಲ್ಲದೆ ಇನ್ಯಾರನ್ನೂ ನಾನು ಮದುವೆಯಾಗೋದಿಲ್ಲ... ಈ ಮದುವೆಗೆ ನೀನೇನಾದರೂ ಒಪ್ಪಿಬಿಟ್ರೆ ನಾನು ಪ್ರಾಣಾನೆ ಕಳಕೊಂಡು ಬಿಡ್ತೀನಿ..." ಎಂದಳು.

ಪಾರ್ವತಮ್ಮನೂ ರೋದಿಸುತ್ತಾ ನಿಶ್ಶಕ್ತಗೊಂಡಿದ್ದ ತನ್ನ ಕಯ್ಯನ್ನು ಎತ್ತಲಾರದೆ ಎತ್ತಿ ಮಗಳ ಕಣ್ಣೀರನ್ನು ಒರೆಸುತ್ತಾ, "ನಿಮ್ಮಜ್ಜಿ ಹೋದ ಮ್ಯಾಲ... ನಮ್ಮನ್ಯಾರವ್ವ ಕ್ಯಾಳೋರು ?–ಅವರೊಬ್ಬರಿದ್ದಿದ್ರೆ ನಿಮ್ಮಯ್ಯ ಈ ತರ ಯೋಚ್ನೆ ಮಾಡಾಕೆ ಆಯ್ತಿರ್ನಿಲ್ಲ..." ಎಂದವಳು, ದುಃಖ ಒತ್ತರಿಸಿ ಬಂದಂತಾಗಿ "ನಿನ್ನ ಹಣೇಲಿ ಯೆಂಗೆಂಗೆ ಬರದಿದ್ದಾತೊ ? ನಾ ಯೇನವ್ವ ಮಾಡೋ ಅಂಗಿದ್ದೇನೂ...?" ಎನ್ನುತ್ತಾ ಒಂದೇ ಸಮನೆ ಅಳತೊಡಗಿದಳು.

ನರಸಮ್ಮ ಮಧ್ಯದಲ್ಲೇ ಬಾಯಿ ಹಾಕಿ, "ಯಾಕ್ರವ್ವಾ ಹಿಂಗೆ ಅತ್ತೀರಿ? ಯೆಲ್ಲ ಶಿವನ ಯೆತ್ನ. ಆಗಕ್ಕಿಲ್ಲ ಆಯ್ತೀನಿ ಅನ್ನಕ್ಕೆ ನಮ್ಮದೇನವ್ವ ನಡೆದಾತು?..." ಎಂದವಳು, ಪಾರ್ವತಮ್ಮನನ್ನುದ್ದೇಶಿಸಿ "ಪಾರತಿ, ಮಂಗಲಿ ಆದ್ರೆ ಇನ್ನೂ ಚಿಕ್ಕೋಳು, ಪುಟ್ಟೋಳು. ನೀ ಯೇಟಾದ್ರೂ ಅನುಭವಸ್ತೆ... ನೀನಿಂಗೆ ಆಡೋದಾ !–ಯೇನೊ ನಿನ್ನ ಕಣ್ಣ ಮುಂದೆಯೇಯಾ ಮಗಳ ಲಗ್ನ ನೆರವೇರಿಸಿಬುಡೂನಾ ಅಂತ ಯೇರ್ಪಾಟು ಮಾಡ್ತಾ ಅವ್ನೆ ನಿನ್ನ ಗಂಡ... ಸುಮ್ಮಕೆ ಗಂಡಸರ ಮಾತಿಗೆ ಒಪ್ಪಿಕೊಂಬುಡು. ಇದ್ರಿಂದ ಯಾರಿಗೂ ಯೇನೂ ಅನ್ಯಾಯ ಆಯಕ್ಕಿಲ್ಲ. ನಿನ್ನ ತಮ್ಮನಿಗೆ ಯೆಣ್ಣು ಇಲ್ಲ ಅಂತ ಒದ್ದಾಡಿಕೊಂಡೀಯಾ ?... ಅವನು ಬಂದಂತಾ ಕಾಲಕ್ಕೆ ಯಾವುದಾರಾ ಒಂದೆಣ್ಣು ಇದ್ದೇ ಅದೆ..." ಇಷ್ಟು ಹೇಳಿ, ಮಂಗಳೆಯ ಕೈ ಹಿಡಿದುಕೊಂಡು ಸಮಾಧಾನಪಡಿಸುವ ಧ್ವನಿಯಲ್ಲಿ "ಹಿರಿಯೋರಿಗೆ ಎದುರು ಮಾತಾಡಬಾರದು ಕನವ್ವಾ... ಅವ್ವನಿಗೆ ನೀನು ಧೈರ್ಯ ಕೊಡದೆ ಈ ಕಾಯ್ಲೇಲಿ ಸುಮ್ಮಕೆ ಅವಳ್ಗೆ ಸಾಕು ಮಾಡ್ತಾ ಇದ್ದೀಯಲ್ಲಾ ? ನಿಮ್ಮಯ್ಯ ಮಗಳು ಸುಕವಾಗಿರ್ಲಿ ಅಂತ ಅಲ್ಲವಾ, ಚೆಂದಾಗಿ ಆಸ್ತಿ ಇರೊಕಡೀಕೆ ಕೊಡೋದು...ನೀನ್ನೇನು ಕಣ್ಣು ಕಟ್ಟಿ ಕಾಡಿಗೆ ಬುಟ್ಟೇವಾ? ನಾವೆಲ್ಲ ಇರಾಕಿಲ್ಲವ ಅಲ್ಲೀ?" ಎಂದಳು.

ಈ ಮಾತುಕತೆ ನಡೆದ ಮೇಲಂತೂ ಪಾರ್ವತಮ್ಮನ ಕಾಯಿಲೆ ಉಲ್ಬಣ ವ್ಯವಸ್ಥೆಗೆ ತಿರುಗಿತು. ಅವಳು ತನ್ನ ಪತಿಯ ಈ ಮದುವೆಯ ಏರ್ಪಾಟನ್ನು ಹೇಗಾದರೂ ನಿಲ್ಲಿಸಿಬಿಡಬೇಕೆಂದು ಪ್ರಯತ್ನಪಟ್ಟಳು. ಆದರೆ ನರಸಮ್ಮನ ಚಿತಾವಣೆಯಿಂದ ವಿಷಕಂಠಯ್ಯ, ಪಾರ್ವತಮ್ಮ ಮದುವೆಯ ಸುದ್ದಿ ಎತ್ತಿದಳು ಎಂದರೆ, ಅದೂ ಇದೂ ಲೋಕಾಭಿರಾಮವಾಗಿ ಮಾತಾಡಿ, ಕಾಯಿಲೆಯ ಕೋಣೆಯಿಂದ ಮೆಲ್ಲನೆ ಜಾರಿಬಿಡುತ್ತಿದ್ದನು.

ಇಷ್ಟರಲ್ಲಿ ಕೊತ್ತೇಗಾಲದಿಂದ ಕಾಳಯ್ಯನೂ ಬಂದನು.

"ಸುಬ್ಬರಾಯಿ ಬಾರಿ ಕುಳ. ಅಂತ ಗಂಡು ಯೆಲ್ಲಿ ಉಡುಕ್ಕೊಂಡು ಓದರೆ ತಾನೆ ಸಿಕ್ಕಾತು... ಆಗ್ಲೇ ಎರಡು ಮೂರು ಕಡಿಂದ ಯೆಣ್ಣು ಕೊಡ್ತೀವಿ ಅಂತಾನು ಬಂದಿದ್ರು ಸುಬ್ರಾಯೀಗೆ... ಮುಕ್ಯ ಅದ್ರುಷ್ಟ ಒಂದು ಬೇಕಲವ್ವಾ ಅವರಿಗೆಲ್ಲ–ನಿನ್ನ ಮಗಳು ಮಾಲೆ ಹಿಡಿದು ನಿಂತವ್ಳೆ...? ನೀ ಸುಮ್ಮಕೆ ಗಾಬರಿ ಮಾಡಿಕೊ ಬ್ಯಾಡ... ಹಿರಿಯೋರು ನಾವೆಲ್ಲಾ ಇರೋವಾಗ ನಿಂಗ್ಯಾಕೆ ಬಯ? ನಿನ್ನ ತಮ್ಮನಿಗೆ ವಂಚ್ನೆ ಆಯ್ತದೆ ಅಂತ ತಾನೆ ನಿನ್ನ

ಇರಾದೆ ?– ಈ ಕಂಕಣ ಕೂಡಿಬಂದದೆ. ಹೆಸರು ಬಲ ಯೆಲ್ಲ ಚೆಂದಾಗದೆ. ಇನ್ನು ಲಗ್ನ ಕಟ್ಸೋದೊಂದೇ ಬಾಕಿ... ನಿಮ್ಮಪ್ಪನ ಮನೆ ಹಾಳಮಾಡ್ಬೇಕು ಅಂತ ನಮಗೇನು ಇಷ್ಟವಾ ? ನಿನ್ನ ತಮ್ಮ ಬಂದಂತಾ ಕಾಲಕ್ಕೆ ನಾನೇ ನಿಂತು ಅವನಿಗೂ ಒಂದು ಮದ್ವೆ ಮಾಡಿಬುಡ್ತೀನಿ– ಅವ್ನ ಕಯ್ಯೂ ಬುಡಾಕಿಲ್ಲ ನಾನು. ನೀ ಯೆದರಬ್ಯಾಡ... ನೀ ಮಾತ್ರ ಒಸಿ ಧೈರ್ಯ ತಂದುಕೊಂಡು ಈ ಲಗ್ಣದ ಒತ್ತಿಗೆ ಉಸಾರು ಮಾಡಿಕೊ. ಬಾಕೀದ್ನೆಲ್ಲ ನಮಗೆ ಬುಟ್ಟುಬುಡು. ಇನ್ನೆಂಟು ಜಿನದೊಳಗೆ ಕಡ್ಲೆ ತಿಂದು ಕೈ ತೊಳೆದಂಗೆ ಕಾರ್ಯ ನೆರವೇರಿಸಿ ಬುಡ್ತೀವಿ..." ಎಂದು ಪಾರ್ವತಮ್ಮನಿಗೆ ಧೈರ್ಯ ಹೇಳಿದನು. ಪಾರ್ವತಮ್ಮ ಎಲ್ಲವನ್ನೂ ಸುಮ್ಮನೆ ಮೌನವಾಗಿ ಕೇಳಿಕೊಂಡಳೇ ವಿನಹ ಯಾವುದಕ್ಕೂ ಮಾತಾಡಲೇ ಇಲ್ಲ. ಇನ್ನು ಮಾತಾಡಿ ಉಪಯೋಗವಿಲ್ಲವೆಂದು ಅವಳು ಎಂದೋ ಅರಿತುಕೊಂಡಿದ್ದಳು.

ಮುಂದಿನ ದಿನಗಳಲ್ಲಿ ನೆಂಟರಿಷ್ಟರಿಂದ ಕೂಡಿದ ವಿಷಕಂಠಯ್ಯನ ಮನೆ ಗಿಜಿಗಿಜಿಯೆನ್ನುತ್ತಾ ಹೊಸ ಉತ್ಸಾಹ ತಾಳಿತು. ಮದುವೆಗೆ ಬೇಕಾದ ವಿಶಿಷ್ಟ ಸಾಮಗ್ರಿಯನ್ನೂ ಸುಬ್ಬರಾಯಿಯೇ ಸಂಭ್ರಮಪೂರ್ವಕ ಕೊತ್ತೇಗಾಲದಿಂದ ಗಾಡಿಯಲ್ಲಿ ತಂದುಹಾಕಿದ. ಕಾಳಯ್ಯನೂ ವಿಷಕಂಠಯ್ಯನೂ ಚಿಲಕುಂದಕ್ಕೆ ಹೋಗಿ ಸೂರಿಭಟ್ಟರಿಂದ ಉಗಾದಿಯೊಳಗೇ ಲಗ್ನ ಕಟ್ಟಿಸಿಕೊಂಡು ಬಂದರು.

ಆ ಬಳಿಕ ಲಗ್ಣ ನಿಶ್ಚಯವಾದ ವಿಚಾರವಾಗಿ ನಂಜುಂಡಸ್ವಾಮಿಗೆ ಕಾಗದ ಹಾಕಿದ ವಿಷಕಂಠಯ್ಯ.

ಪತ್ರವನ್ನು ನೋಡಿದ ನಂಜುಂಡಸ್ವಾಮಿಯೂ ಯಶೋದಮ್ಮನೂ ಚಕಿತರಾದರು. ಅನಂತನಂತೂ ನಟರಾಜನಿಗಾಗಿ ತುಂಬ ಮರುಗಿದನು. "ನಾಗಜ್ಜಿ ಇದ್ದಿದ್ದರೆ ಹೀಗಾಗಗೊಡುತ್ತಿರಲಿಲ್ಲ" ಎಂದು ತನ್ನ ಹೆಂಡತಿಯೊಡನೆ ಹೇಳಿದ ನಂಜುಂಡಸ್ವಾಮಿ. "ಹೋಗಲಿ, ಮುಂಚಿತವಾಗಿ ನಮ್ಮನ್ನೊಂದು ಮಾತಾದ್ರೂ ಕೇಳಬಾರದಾಗಿತ್ತಾ ?– ಆ ಮಂಗಲಿ ನಟ್ರಾಜನಿಗೇ ಅಂತಲೇ ಬೆಳೀತು. ಅವನ್ನಂತೂ ಅಷ್ಟು ಇಷ್ಟಪಡ್ತಾ ಇತ್ತು ಅದು... ಎರಡು ಅಕ್ಷರ ಬೇರೆ ಕಲಿತಿತ್ತು. ಅಂತಾ ಹುಡುಗೀನಾ ಆ ಗಮಾರಿಗೇ ಕೊಡಬೇಕಾಗಿತ್ತಾ ?... ಆ ಹುಡುಗಿ ಬಾಳು ಹಾಳುಮಾಡಿದರು" ಎಂದು ವ್ಯಥೆಪಟ್ಟುಕೊಂಡನು.

ಯಶೋದಮ್ಮನೂ ದುಃಖಪಡುತ್ತಾ, "ನಟ್ರಾಜ–ಮಂಗಳೆ ಇಬ್ಬರೂ ಒಳ್ಳೆ ಜೋಡಿ... ಅವರಿಬ್ಬರಿಗೂ ಹೊಂದುತ್ತಿದ್ದ ಹಂಗೆ ಇನ್ಯಾರಿಗೂ ಹೊಂದೋದಿಲ್ಲ... ಅಂತೂ ಆ ಹುಡುಗನ ಅದೃಷ್ಟ ಚೆಂದಾಗಿಲ್ಲ. ಓದು ಹೋಯಿತು, ಜೈಲಿಗೆ ಬಿದ್ದ, ಪ್ರೀತಿ ಮಾಡ್ತಾ ಇದ್ದ ಹುಡುಗಿಯೂ ತಪ್ಪಿಹೋಯ್ತು" ಎಂದಳು.

ಮಂಗಳೆ ನಟರಾಜನಿಗೆ ತಪ್ಪಿ ಹೋಗಿದ್ದುದರಿಂದ ಅವರಾರಿಗೂ ಮದುವೆಗೆ ಹೋಗುವುದೇ ಬೇಕಿರಲಿಲ್ಲ. ಆದರೆ ಪಾರ್ವತಮ್ಮನಿಗಾಗಿ ಯಶೋದಮ್ಮ ಕಲ್ಲಹಳ್ಳಿಗೆ

ಹೊರಡಲು ನಿಶ್ಚಯಿಸಿದಳು. ನಂಜುಂಡಸ್ವಾಮಿ ಮಾತ್ರ ಇವರೆಲ್ಲರನ್ನೂ ಕಳುಹಿಸಿಕೊಟ್ಟು "ವಿಷಕಂಠಯ್ಯ ಕೇಳಿದರೆ ರಜಾ ಸಿಕ್ಕಲಿಲ್ಲ ಅಂತ ಹೇಳು ಯಶೋದ" ಎಂದು ಮೈಸೂರಿನಲ್ಲೇ ಉಳಿದುಕೊಂಡನು.

ಯಶೋದಮ್ಮ ಜೊತೆಗೆ ವಿಶಾಲಿಯನ್ನೂ ಅನಂತನನ್ನೂ ಕರೆದುಕೊಂಡಿದ್ದಳು. ಅನಂತನಿಗೂ ಮದುವೆಗೆ ಹೋಗಲು ಮನಸ್ಸಿಲ್ಲ. ಇದು ತಿಳಿದರೆ ನಟರಾಜ ಎಷ್ಟು ಸಂಕಟಪಡಬಹುದೆಂದು ಅವನು ಊಹಿಸಬಲ್ಲ. ಆದರೂ ಮಂಗಳೆಗಾಗಿ ಅವಳ ಕಷ್ಟದಲ್ಲಿ ತಾನು ಅಲ್ಲಿರುವುದು ಮೇಲೆಂಬ ಅಭಿಪ್ರಾಯದಿಂದ ಅವನೂ ಕಲ್ಲಹಳ್ಳಿಯ ಬಸ್ಸು ಹತ್ತಿದ್ದನು.

ಧಾರೆಯ ಹಿಂದಿನ ರಾತ್ರಿ ಚಾಪೆಯ ಮೇಲೆ ಹೊರಳಾಡುತ್ತಿದ್ದ ಮಂಗಳೆಗೆ ಏನೇನೊ ಯೋಚನೆಗಳು ಬರುತ್ತಿದ್ದವು... ನಟರಾಜನೂ ತಾನೂ ಒಟ್ಟಿಗೇ ಕೂಡಿ ಬೆಳೆದದ್ದು... ಬಾಲ್ಯದಲ್ಲಿ ಕಾಡಿನಲ್ಲಿ ಅವನ ಜೊತೆಗೆ ಕಳೆದ ಸುಖದ ದಿನಗಳು... ನಾಗಜ್ಜಿ ಮಾತು ಮಾತಿಗೂ ತಮ್ಮಿಬ್ಬರನ್ನೇ ಗಂಡ ಹೆಂಡತಿಯರಾಗಿ ಮಾಡಿದ್ದುದು... ಚಾಮುಂಡಿ ಬೆಟ್ಟದಲ್ಲಿ ಗಳಿಗೆಯ ಮಟ್ಟಿಗಾದರೂ ತಾವಿಬ್ಬರೂ ಅನುಭವಿಸಿದ ಆನಂದ... ವಿಶಾಲಿಯ ಪ್ರಣಯ ಪತ್ರವನ್ನು ಚೂರು ಚೂರಾಗಿ ನಟರಾಜ ಹರಿದುಹಾಕಿದುದು... ವಿಶಾಲಿಯ ಮತ್ತು ತನ್ನ ಫೋಟೊಗಳ ವಿಚಾರ ಬಂದಾಗ ನಟರಾಜ "ನೀನೆಲ್ಲಿ ? ಅವಳೆಲ್ಲಿ ? ನಿನ್ನ ಮುಂದೆ ಅವಳ್ನ ನೀವಾಳಿ ತೆಗೀಬೇಕು" ಎಂದು ತನ್ನ ರೂಪನ್ನೇ ಮೆಚ್ಚಿಕೊಂಡಿದ್ದುದು–ಒಂದೊಂದನ್ನು ನೆನೆದಾಗಲೂ ದುಃಖದ ಕಂಬನಿ ಬುಗ್ಗೆ ಬುಗ್ಗೆಯಾಗಿ ಕಣ್ಣಿನಿಂದ ಹರಿಯುತ್ತಿತ್ತು. ಹಾಗೇ ಅವಳು ನಾಗಜ್ಜಿ ಸಾಯುವ ಮುನ್ನ ನಟರಾಜನ ಕಯ್ಯಲ್ಲಿ ತನ್ನ ಕಯ್ಯನಿಟ್ಟು "ನಂಗೊಂದೇಯ ಸಂಕಟ... ನಿಮ್ಮಿಬ್ಬರ್ರೂ ಲಗ್ಣ ನೋಡದೆ ಓಯ್ತಾ ಇವ್ನಲ್ಲಾ, ಅನ್ನಾ ಸಂಕಟ..." ಎಂದಾಡಿದ ಮಾತುಗಳನ್ನು ನೆನೆದು ನೆನೆದು ಸಂಕಟಪಡುತ್ತಿರುವಂತೆಯೇ ತನಗೆ ನಾಳೆ ಎಲ್ಲರೆದುರಿಗೆ ಸುಬ್ಬರಾಯಿ ತಾಲಿ ಕಟ್ಟುವ ದೃಶ್ಯವನ್ನು ಕಲ್ಪಿಸಿಕೊಂಡು ಉಸಿರು ಕಟ್ಟಿದಂತಾಯಿತು... ತಾನಿನ್ನು ಬದುಕಬಾರದು, ಬಾವಿಗೆ ಬಿದ್ದಾದರೂ ಈ ಸಂಕಟದಿಂದ ಪಾರಾಗಬೇಕು ಎಂದೆನಿಸಿತವಳಿಗೆ. ತಟ್ಟನೆ ಎದ್ದು ಹೊರಡಲುದ್ಯುಕ್ತಳಾಗಿ ಕೋಣೆಯ ಬಾಗಿಲಿನವರೆಗೆ ನಡೆದು ಹೋದಳು. ಅಷ್ಟರಲ್ಲಿ ಪಾರ್ವತಮ್ಮ ಎಚ್ಚರಗೊಂಡು "ಮಂಗ್ಲೀ–ಮಂಗ್ಲೀ... ಒಂದು ಗುಟುಕು ನೀರು ಕೊಡವ್ವಾ–" ಎಂದು ಕ್ಷೀಣಸ್ವರದಲ್ಲಿ ಕೂಗಿದಳು.

ಮಂಗಳೆಯ ನಿರ್ಧಾರವೆಲ್ಲ ಗಾಳಿ ಪಾಲಾಯಿತು. ಆ ಗಳಿಗೆಗೆ ಎಲ್ಲವನ್ನೂ ಮರೆತು ಬಂದು ತಾಯಿಗೆ ನೀರು ಕುಡಿಸುತ್ತಿರುವಂತೆ "ನಾನು ಸತ್ತುಹೋಗಿ ಬಿಟ್ಟರೆ ನನ್ನ ತಾಯಿಯನ್ನ ನೋಡಿಕೊಳ್ಳೋರು ಯಾರು?" ಎಂಬ ಸತ್ಯ ಎದ್ದು ನಿಂತಿತು. ಆ ಸತ್ಯದ ಜೊತೆ ಜೊತೆಗೇ "ಹೌದು ನಾನೊಂದು ಪಕ್ಷ ಬದುಕಿದ್ದರೆ ನನ್ನ ಬಾಳೆಲ್ಲ ಘೋರ ನರಕವಾಗುವುದಲ್ಲ?" ಎಂಬ ವಿಚಾರ ಕಠೋರವಾಗಿ ಅವಳ ಎದೆಯನ್ನಿರಿಯಿತು... ಈ ಹೊಯ್ದಾಟದಲ್ಲಿ ಕೆಲಕಾಲ

ಕಳೆದ ನಂತರ "ಸಾಯುವುದೇ ಸರಿ" ಎಂದು ಅವಳ ಹೃದಯ ನಿರ್ಧಾರ ಮಾಡಿತು. ಅಲ್ಲಿಂದೆದ್ದು ಹೊರಟು ಹೋಗುವುದೆಂದೇ ಅವಳು ಮನಸ್ಸು ಮಾಡಿದಳು, ಆದರೆ ಪಾರ್ವತಮ್ಮನಿಗೆ ಸಂಕಟ ಹೆಚ್ಚಿ ಅಲ್ಲಿಂದಾಚೆಗೆ ನಿದ್ದೆಯೆನ್ನುವುದೇ ಹತ್ತಲಿಲ್ಲ. ಮಂಗಳೆಯನ್ನು ಒರಗಿಕೊಂಡೇ ಕುಳಿತುಬಿಟ್ಟಳು. ತಾಯಿಯ ಶುಶ್ರೂಷೆಯಲ್ಲಿಯೇ ಬೆಳಕು ಹರಿಯಿತು! ಪಾರ್ವತಮ್ಮ ಈಗ ಮಲಗುವಳು, ಇನ್ನೊಂದು ಗಳಿಗೆಗೆ "ಸೆಕೆ ಸೆಕೆ" ಎನ್ನುತ್ತಾ ಎದ್ದು ಕೂರುವಳು, ಮತ್ತೆ ಮಲಗುವಳು, ಪುನಃ ಯಥಾಪ್ರಕಾರವಾಗಿ ಎದ್ದೇಳುವಳು. ಹೀಗೆ ರಾತ್ರಿಯೆಲ್ಲ ಕಳೆದು ಹೋಗಿತ್ತು!...

ಬೆಳಗಾದ ಮೇಲಂತೂ ಜನದ ತಿರುಗಾಟದಲ್ಲಿ ಮಂಗಳೆ ಆ ಕೋಣೆಯನ್ನು ಬಿಟ್ಟು ಒಬ್ಬಳೇ ಅಡುಗೆ ಮನೆಯವರೆಗೆ ಹೋಗಿಬರುವುದಕ್ಕೂ ಅವಕಾಶ ಸಿಗಲಿಲ್ಲ. ಪಂಜರದಲ್ಲಿ ಸಿಕ್ಕಿದ ಗಿಳಿಯಂತಾಗಿತ್ತು ಅವಳ ಆಗಿನ ಸ್ಥಿತಿ.

ನರಸಮ್ಮನ ಮೇಲ್ವಿಚಾರಣೆಯಲ್ಲಿ ವಿವಾಹ ವೈಭವದಿಂದ ನಡೆದು ಹೋಯಿತು.

ಅದೇ ಸಾಯಂಕಾಲ ಹಿತ್ತಲ ಬಾಗಿಲಲ್ಲಿ ಶೋಕಸಂತಪ್ತಳಾಗಿ, ಚೆಲುವಮ್ಮ ಆಡುವ ನೂರು ಮಾತಿಗೆ ತಾನು ಒಂದು ಮಾತು ಆಡುತ್ತಾ ಮಂಗಳೆ ನಿಂತಿದ್ದಳು. ಆಗ ಎಂದಿನಂತೆ ಊರಿಗೆ ಕಲಾಯಿ ಮಾಡಲು ಬಂದಿದ್ದ ಹುಸೇನ್ ಸಾಬಿ "ಮದ್ವೆ ತಿಂಡಿ ಯೆಲ್ಲ ಅಮ್ಮಣ್ಣೀ..." ಎನ್ನುತ್ತಾ ಹಿತ್ತಲ ಬಾಗಿಲಿಗೇ ಬಂದ.

ಅವನನ್ನು ನೋಡಿಯೂ ಮಂಗಳೆ ಸಪ್ಪೆ ಮುಖ ಮಾಡಿಕೊಂಡು ಸುಮ್ಮನಿದ್ದಳು. ಅವಳ ಮನಸಿನಾಳದಲ್ಲಿ ಜರುಗುತ್ತಿದ್ದ ಭಯಂಕರ ವಿಪ್ಲವದ ಸುಳಿವೂ ಮುದುಕ ಹುಸೇನನಿಗೆ ತಿಳಿದಿರಲಿಲ್ಲ. ಎಲ್ಲರಂತೆ ವಿವಾಹ ಸಮಯದಲ್ಲಿ ಅವಳ ಹೃದಯ ಆನಂದಸಾಗರದಲ್ಲಿ ತೇಲುತ್ತಿರಬೇಕೆಂದೇ ಅವನ ಭಾವನೆ... ಈಗ ಅವಳು ತನ್ನನ್ನು ಮಾತನಾಡಿಸದಿರುವುದು ಅವಳಿನ್ನೂ 'ಮದುವಣಗಿತ್ತಿ'ಯಾಗಿರುವುದರಿಂದ!– ಅವಳು ನಾಚುವುದು ಸಹಜವೇ ಎಂದುಕೊಂಡವನು, ಮಂಗಳೆಯನ್ನು ಹಿಂದಿನಂತೆ ಕೆಣಕುತ್ತಾ "ಯಾಕಾ ಅಮ್ಮಣ್ಣೀ ಮೋರೇನ ಐತಲ್ಲಾ ಸೋರೇಕಾಯಿನಂತೆ ಉದ್ದುದ್ದಕ್ಕೆ ಮಾಡಿಕಂಡಿದ್ದೀ?... ನಿನ್ನ ಗಂಡ ಏನಾರ ಹೊಡೆದ್ನಾ? ಆ ನಟ್ರಾಜಪ್ಪ ಎಲ್ಲವ್ನೆ ವಸಿ ತೋರಿಸು. 'ನಮ್ಮಮ್ಣಿಗ್ಗೀನ ಐತಲ್ಲ ಎಂಗೆ ಹೊಡ್ದೆ. ಅಂತ ಅವನ್ನ ತರಾಟೆ ತಕ್ಕಂದು ಬುಡ್ತೀನಿ..." ಎಂದು ಹೇಳುವಾಗ ಅವನು ದಾಡಿಯ ಮರೆಯಲ್ಲಿ ಹಿಂದಿನಂತೆ ನಗುತ್ತಿದ್ದ.

ಮಂಗಳೆಗೆ ಅಲ್ಲಿ ಇನ್ನೊಂದು ಗಳಿಗೆ ನಿಲ್ಲುವುದೂ ಶಕ್ಯವಿಲ್ಲವಾಯಿತು. ಹಿಂದಿನ ಚಿತ್ರಗಳು ಸುರುಳಿ ಬಿಡಿಸಿದಂತೆ ಅವಳ ಮನಸಿನ ವಿಸ್ತಾರಕ್ಕೆ ಹರಡಿಕೊಂಡವು. ದೀರ್ಘವಾಗಿ ಉಸಿರೆಳೆಯುತ್ತಾ ತಟ್ಟನೆ ಅಲ್ಲಿಂದ ಒಳಗೆ ನಡೆದಳು.

ಹುಸೇನನಿಗೆ ಅವಳ ವರ್ತನೆ ಅರ್ಥವಾಗದಿದ್ದರೂ ನಾಚಿಕೆಯಿಂದಲೇ ಹೀಗೆ ಅವಳು ನಡೆದುಕೊಂಡಿರಬೇಕೆಂದು ಭಾವಿಸಿ... "ಮಂತೆ ಬೆಳೆದ ಹುಡ್ಗಿ... ನಾಚಿಕೆ ಇರಾಕಿಲ್ಲವಾ ?– ನಾನೂ ಸರಿ. ಮೊದಲ್ನಂಗೆ ಆಡಾಕೆ ಆದಾತಾ ಅವ್ಳು ?" ಎಂದು ಸಮಾಧಾನ ತಂದುಕೊಂಡು ಹೊರಡುವಾಗ ಚೆಲುವಮ್ಮ "ಯಾನೊ ತಿಂಡಿ ಕೇಳಿದ್ರೀ ?– ಹೊಂಟೇಬುಟ್ಟಿರಲ್ಲಾ ?... ಇರಿ ಸಾಹೇಬ್ರೇ ತಂದುಕೊಡ್ತೀನಂತೆ" ಎಂದು ಒಳಗಿನಿಂದ ಕಜ್ಜಾಯ, ಖರ್ಜೀಕಾಯಿಗಳನ್ನು ತಂದಿತ್ತಳು.

ಆ ತಿನಸನ್ನೆಲ್ಲ ತನ್ನ ಮಕ್ಕಳಿಗೆಂದು ಆತ ಗಂಟು ಕಟ್ಟುತ್ತಿದ್ದಂತೆ ಚೆಲುವಮ್ಮ, "ನಟ್ರಾಜನಿಗಲ್ಲ ಸಾಹೇಬ್ರೆ ಮಂಗಳೆ ಕೊಟ್ಟದ್ದು–"

"ಮಂತೆ ಥಯ್ ?"

"ನಮ್ಮ ಮಾವ ಸುಬ್ರಾಯಿಗೆ–"

ಹುಸೇನನಿಗೆ ಮಾತೇ ನಿಂತುಹೋಯಿತು. ಅದರಲ್ಲೂ ಎಲ್ಲೋ ತನ್ನೊಳಗೇ ಹೇಳಿಕೊಳ್ಳುವವನಂತೆ ಹೇಳಿದ :

"ಅದ್ಕೇ ಥಯ್, ಆ ಮೊಗ ಹಂಗೆ ನಾ ಮದ್ವೆ ಸುದ್ದಿ ಎತ್ತಿದೇಟಿಗೆ ಅಳ್ತಾ ಹೊಂಟೋಯ್ತು–ಇಲ್ಲದೇ ಇದ್ರೆ ಯಾಪಾಟಿ ತುಂಟಾಟ ಆಡ್ಬೇಕು ಅವ್ಳು ನನ್ನ ತಾವು... ?"

ಹಿಂದಿನ ದಿನಗಳು ಅವನ ಸ್ಮರಣೆಗೆ ಬಂದವು–ತಾನು ಆ ಹಳ್ಳಿಗೆ ಬಂದಾಗಲೆಲ್ಲ ಅವಳಿಗೆ ಪೆಪ್ಪರ್‌ಮೆಂಟ್ ತಂದುಕೊಡುತ್ತಿದ್ದುದು, ಮಂಗಳೆ ಸಲಿಗೆಯಿಂದ ತನ್ನ ಜೇಬಿಗೇ ಕೈಹಾಕಿ ಎತ್ತಿಕೊಂಡಾಗ ನಟರಾಜನನ್ನು ಅವಳಿಗೆ ತೋರುತ್ತ "ಅಲ್ನೋಡು ನಿನ್ನ ಗಂಡ ಬತ್ತಾ ಅವ್ನೆ. ಅವನ್ಗೆ ಐತಲ್ಲಾ ಹೇಳಿ ನಿಂಗೆ ಚೆಂದಾಗಿ ಸಿಕ್ಸೆ ಮಾಡಸ್ತೀನಿ" ಎನ್ನುತ್ತಿದ್ದುದು... ಇವೆಲ್ಲ ನೆನಪಾಗಿ ಆಕಾಶದ ಕಡೆ ನೋಡುತ್ತ "ಪರವರದಿಗಾರ್... ಆ ಮೊಗಾನ ಐತೆಲ್ಲ ಚೆಂದಾಗಿಡಪ್ಪ" ಎಂದು ಪ್ರಾರ್ಥಿಸುತ್ತ ಅಲ್ಲಿಂದ ಮೌನವಾಗೆದ್ದು ಹೊರಟುಹೋದ.

೨೭

ಮದುವೆಯಾಗಿ ಕೆಲವು ದಿನಗಳು ಕಳೆದಿದ್ದವು. ನಟರಾಜನಿಗೆ ಇದೀಗ ಬಂದೀಖಾನೆ ಯಿಂದ ಬಿಡುಗಡೆಯಾಗಿತ್ತು.

ಕೆಲವು ತಿಂಗಳ ಜೇಲುವಾಸ ನಟರಾಜನ ಮೇಲೆ ವಿಶೇಷ ಪರಿಣಾಮ ಮಾಡಿತ್ತು. ಗಾಂಧೀವಾದದಲ್ಲಿ ಹಿಂದೆ ಅವನಿಗಿದ್ದ ಭಕ್ತಿ, ನಂಬಿಕೆ ಪೂರ್ಣವಾಗಿ ಅಳಿಸಿಹೋಗಿತ್ತು. ನಿಜವಾದ ಸ್ವಾತಂತ್ರ್ಯ ಗಳಿಸಬೇಕಾದರೆ ಬೇರೆ ಮಾರ್ಗ ಹಿಡಿಯಬೇಕು ಎಂಬುದರ ಅರಿವೂ ಸ್ವಲ್ಪ ಸ್ವಲ್ಪ ಆಗಿತ್ತು. ಈ ಹೊಸ ಹಾದಿಯನ್ನು ಅವನಿಗೆ ತೋರಿಕೊಟ್ಟವನು ಸೆರೆಯಲ್ಲಿ ಅವನ ಜೊತೆಗಿದ್ದ ಶ್ರೀಧರ !

ಶ್ರೀಧರ ಮಾರ್ಕ್ಸ್‌ವಾದಿ. ರಾಜಕೀಯವಾಗಲ್ಲದೆ, ಆರ್ಥಿಕವಾಗಿಯೂ ಸ್ವಾತಂತ್ರ್ಯ ಬೇಕೆನ್ನುವ ಕ್ರಾಂತಿಕಾರ.

"ಈ ಗಾಂಧೀ ತತ್ವದಿಂದ ನಮ್ಮ ದೇಶಕ್ಕೆ ಇನ್ನು ಸುಖ ಇಲ್ಲ ನಟರಾಜ" ಎಂದು ಅವನು ವಾದಕ್ಕೆ ಆರಂಭಿಸಿದರೆ "ಹಾಗಾದರೆ ಮಹಾತ್ಮ ಗಾಂಧಿಯವರಿಂದ ನಮ್ಮ ಭಾರತಕ್ಕೆ ಏನೂ ಉಪಕಾರ ಆಗಿಲ್ಲ ಅಂತ ಹೇಳ್ತೀಯಾ ?" ಎಂದು ಕೇಳುವನು ನಟರಾಜ.

"ನಾನೆಲ್ಲಿ ಹಾಗೆ ಹೇಳಿದೆ ?... ಗಾಂಧೀಜಿ ನಮ್ಮ ದೇಶಕ್ಕೆ ಮಹದುಪಕಾರ ಮಾಡಿದ್ದಾರೆ. ತಮ್ಮ ಹಿಂದಿನ ವೈಭವದ ಬದುಕನ್ನ, ಹಿರಿಯ ಸಂಸ್ಕೃತೀನ ಮರೆತು ಮಲಗಿದ ಭಾರತೀಯರ ಆತ್ಮಗಳನ್ನು ಮತ್ತೆ ಎಚ್ಚರಿಸಿ ಕಾರ್ಯೋನ್ಮುಖರಾಗಿ ಮಾಡಿದ್ದಾರೆ. ಮಣ್ಣಿನಂತಿದ್ದವರನ್ನ ಮನುಷ್ಯರನ್ನಾಗಿ ಮಾಡಿದ್ದಾರೆ. ಒಂದು ವ್ಯವಸ್ಥೆಯಿಂದ ಭಾರತೀಯರೆಲ್ಲ ಒಂದಾಗಿ ಹೋರಾಟ ನಡೆಸಿದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸುವುದು ಖಂಡಿತ ಅಂತ ತೋರಿಸಿಕೊಟ್ಟಿದ್ದಾರೆ."

"ಹೀಗಿದ್ದೂ ನೀನು ಅವರ ತತ್ವ ಸರಿಯಲ್ಲ ಅಂತ ಹೇಳಿದೆಯಲ್ಲಾ–?"

"ಹೌದು, ಹೇಳಿದೆ ಯಾಕೆ ಗೊತ್ತೆ ?–ನಮ್ಮ ಸ್ವಾತಂತ್ರ್ಯದ ಹೋರಾಟ ಈಗ ಒಂದು ಘಟ್ಟ ಮುಟ್ಟಿದೆ. ಗಾಂಧೀಜಿಯ ಶ್ರಮದಿಂದ ನಮ್ಮ ಜನತೇಲಿ ಈಗ ಒಂದು ಧೈರ್ಯ, ಒಂದು ಕೆಚ್ಚು ಕಾಣಿಸ್ತಾ ಇದೆ. ಜನತೇಲಿ ಈ ಸ್ಥೈರ್ಯ ತುಂಬೋದಕ್ಕೆ ಗಾಂಧೀಜಿಯ ಅಹಿಂಸಾತತ್ವ ಅವಶ್ಯವಾಗಿತ್ತು... ಈಗ ನಮ್ಮ ಜನರಲ್ಲಿ ಬ್ರಿಟಿಷರ ವಿರುದ್ಧ ಎದೆ ಸೆಟಸಿ ನಿಂತು ಲಾಠಿ, ಗುಂಡುಗಳ ಏಟು ಸಹಿಸೊ ಸಾಹಸ ಬಂದಿದೆ. ಈಗ ಒಂದು ವ್ಯವಸ್ಥೆಬೇಕು. ನಮ್ಮ ಹೋರಾಟವನ್ನ ಮುಂದಿನ ಘಟಕ್ಕೆ ತೆಗೆದುಕೊಂಡು ಹೋಗೋದಕ್ಕೆ ಒಂದು ಸರಿಯಾದ ಕ್ರಮಬೇಕು..."

"ಅದನ್ನ ಗಾಂಧೀಜಿ ಕೊಡಲಾರರು ಅಂತೀಯಾ?"– ನಟರಾಜ ತನ್ನ ಅನುಮಾನವನ್ನು ಹೇಳಿಕೊಂಡ.

"ಖಂಡಿತ ಕೊಡಲಾರರು. ಅವರಿಗೆ ಬೇಕಾಗಿರೋದು ಬರಿಯ ರಾಜಕೀಯ ಸ್ವಾತಂತ್ರ್ಯ ನಿಜವಾದ ಆರ್ಥಿಕ ಸ್ವಾತಂತ್ರ್ಯದೆಡೆ ಅವರ ಲಕ್ಷ್ಯ ಹೋಗಿಲ್ಲ. ಹೋಗುವುದೂ ಇಲ್ಲ... ಈಗ ನೋಡು. ೧೯೨೦ರಲ್ಲಿ ನಡೀತಲ್ಲ ಸ್ವಾತಂತ್ರ್ಯ ಸಮರ, ನಮ್ಮ ಜನ ಎಲ್ಲ ಒಟ್ಟಾಗಿ ಹೋರಾಡಿದರಲ್ಲ–ಆಗ ಗಾಂಧೀಜಿ ಏನು ಮಾಡಿದರು? ಎಲ್ಲೋ ಒಂದು ಕಡೆ ಒಬ್ಬ ಇಂಗ್ಲಿಷರವನನ್ನು ಒಂದು ಭಾರತೀಯ ಗುಂಪು ಕೊಂದುಹಾಕಿತು. ಅಷ್ಟಕ್ಕೇ ಗಾಂಧೀಜಿ 'I smell violence in the air' ಎನ್ನುತ್ತಾ ಅಹಿಂಸಾ ಚಳುವಳೀನಾ ನಿಲ್ಲಿಸಿಬಿಟ್ಟರು... ಈ ಬಾರಿ ನಡೆದ ಚಳುವಳೀಲೂ ಅಷ್ಟೆ. ಓಡಿಹೋಗಿ ವೈಸ್‌ರಾಯ್ ಇರ್‌ವಿನ್ ಸಂಗಡ

ಒಪ್ಪಂದ ಮಾಡಿಕೊಂಡು ಇದನ್ನೂ ಮುರಿದುಬಿಟ್ಟರು... ಅವರಿಗೆ ಜನಕೋಟಿ ಎಲ್ಲ ಒಟ್ಟಿಗೆ ಸೇರಿ ಹೋರಾಟ ನಡೆಸೋದೆ ಬೇಕಾಗಿಲ್ಲ..."

"ಅದು ಹೇಗೆ ಹೇಳ್ತೀಯೆ ?"

"ಹೌದು–ಒಪ್ಪಂದವೇ ಅವರ ರಾಜಕೀಯ–ಹೋರಾಟ ಅಲ್ಲ. ಜನಾನೆಲ್ಲ ಕಾಂಗ್ರೆಸ್ ಅಂತ ಕೂಟ ಕಟ್ಟಿರೋದು ಅವರೆಲ್ಲರ ಹೆಸರನ್ನ ಉಪಯೋಗಿಸಿಕೊಂಡು ಒಪ್ಪಂದ ಮಾಡಿಕೊಳ್ಳೋದಕ್ಕೆ!.... ಹೋರಾಟ ಅವರಿಗೆ ಬೇಕಾಗಿರೋದು ಅವರ ಒಪ್ಪಂದಕ್ಕೆ ಅನುಕೂಲವಾಗುವಷ್ಟು ಮಾತ್ರ. ಹೋರಾಟ ಅವರ ಈ ಒಂದು ಹತೋಟಿಯನ್ನು ಮೀರಿ ಕ್ರಾಂತಿ ಪಥಾನ ಹಿಡಿಯಿತು ಅನ್ನು. ಕೂಡಲೆ ಗಾಂಧೀಜಿ 'ಜನ ಅಹಿಂಸೆ ಪಾಲಿಸ್ತಾ ಇಲ್ಲ' ಎಂದು ಹೇಳಿ ಹೋರಾಟಾನ ನಿಲ್ಲಿಸಿಯೇ ಬಿಡ್ತಾರೆ..." ಎಂದು ನಕ್ಕ ಶ್ರೀಧರ.

"ಹಾಗಾದರೆ ಗಾಂಧೀಮಾರ್ಗದಿಂದ ನಮಗೆ ಸ್ವಾತಂತ್ರ್ಯ ಬರೋದಿಲ್ಲ ಅಂತೀಯಾ ?"

"ಒಪ್ಪಂದದಿಂದ ಬಂದ ಸ್ವಾತಂತ್ರ್ಯದಲ್ಲಿ ಸುಖವಿಲ್ಲ ನಟರಾಜ. ಹೋರಾಟದಿಂದ ಬಂದದ್ದೇ ಸಹಜವಾದ ಸ್ವಾತಂತ್ರ್ಯ. ಒಪ್ಪಂದವೆಂದ ಮೇಲೆ ಪೂರ್ಣ ಸ್ವಾತಂತ್ರ್ಯ ಸಾಧ್ಯವೇ ಇಲ್ಲ; ದಾಸ್ಯ ಒಂದಲ್ಲ ಒಂದು ರೀತೀಲಿ ಇದ್ದೇ ಇರುತ್ತದೆ..."

"ಹಾಗಾದರೆ ನಿಮ್ಮ ಸಮತಾವಾದಿ ಪಕ್ಷ ಒಪ್ಪಂದ ಮಾಡಿಕೊಳ್ಳದೇ ಹೋರಾಟ ನಡೆಸುತ್ತದೇನು ?"

"ಖಂಡಿತವಾಗಿ...ಏಕೆ ಗೊತ್ತೆ ? ನಮ್ಮದು ದೀನ, ದಲಿತರ ಪಕ್ಷ. ಹೊಟ್ಟೆ ಬಟ್ಟೆಗಿಲ್ಲದ ಜನತೆಯನ್ನು ಪ್ರತಿನಿಧಿಸೋರು ನಾವು. ವ್ಯಾಪಾರಸ್ಥರು, ಲಾಯರುಗಳಿಗಿಂತ ಹೆಚ್ಚಾಗಿ, ಬಡರೈತರಿಗೆ ಕೂಲಿಗಳಿಗೆ ಸ್ವಾತಂತ್ರ್ಯ ಬೇಕಾಗಿದೆ. ಏಕೆ ಅನುತ್ತೀಯೊ ? ಸ್ವಾತಂತ್ರ್ಯ ಬಂದರೆ, ನಮ್ಮ ರಾಷ್ಟ್ರದಿಂದ ಪರದೇಶಕ್ಕೆ ಹೊರಟುಹೋಗ್ತಾ ಇರೊ, ಸಂಪತ್ತೆಲ್ಲಾ ಇಲ್ಲೇ ಉಳಿಯುತ್ತೆ. ದೇಶ ಸುಭಿಕ್ಷವಾಗುತ್ತೆ. ರೈತ ಮತ್ತು ಕೂಲಿಗಳ ಜೀವನಮಟ್ಟ ಹೆಚ್ಚುತ್ತೆ... ಆದ್ದರಿಂದ ಹೊಟ್ಟೆ, ಬಟ್ಟೆಗೆ ಅನುಕೂಲ ಆಗತಕ್ಕಂಥಾ ಸ್ವಾತಂತ್ರ್ಯಕ್ಕಾಗಿ ಈ ಜನ ತನು ಮನ ಸಾಕ್ಷಿಯಾಗಿ, ಅವಶ್ಯಬಿದ್ದಲ್ಲಿ ತಮ್ಮ ರಕ್ತವನ್ನೂ ಬಸಿದು ಕೊಟ್ಟು, ಹೋರಾಡಲು ಸದಾ ಸಿದ್ಧರಾಗಿದ್ದಾರೆ. ಈ ರೈತ, ಕೂಲಿಗಳ ಪಕ್ಷವಾದ ನಾವೂ ಸಿದ್ಧರಿದ್ದೇವೆ..."

ಶ್ರೀಧರ ಆಡುತ್ತಿದ್ದ ಮಾತು, ಓದಲು ಕೊಡುತ್ತಿದ್ದ ಸಾಹಿತ್ಯ ನಟರಾಜನನ್ನು ಕೂಡಲೆ ಸಮತಾವಾದಿಯನ್ನಾಗಿ ಪರಿವರ್ತನಗೊಳಿಸದಿದ್ದರೂ ಗಾಂಧೀ ಪಂಥದಲ್ಲಿ ಅವನಿಗಿದ್ದ ಅಚಲ ವಿಶ್ವಾಸವನ್ನು ಕರಗಿಸಿತ್ತು...

ನಟರಾಜ ನೆರೆಮನೆಯಿಂದ ಹೊರಟು ನೇರವಾಗಿ ಇಟ್ಟಿಗೆಗೂಡಿನ ನಂಜುಂಡಸ್ವಾಮಿಯ ಮನೆಗೆ ಹೋದಾಗ ಅದಕ್ಕೆ ದಪ್ಪನೆಯ ರೈಲ್ವೆ ಬೀಗ ಹಾಕಿತ್ತು. ಯಾವುದೋ ಆಲೋಚನೆಯಲ್ಲಿ ಮಗ್ನನಾಗಿ ಆ ಬೀಗವನ್ನೇ ಒಂದೆರಡು ಬಾರಿ ಜಗ್ಗಿಸಿ ಅವನು ಹೊರಡಲುದ್ಯುಕ್ತನಾದಾಗ ನೆರೆಮನೆಯ ಹುಡುಗಿ ಸರಸಿ ಬೀಗದ ಕೈ ತಂದುಕೊಡುತ್ತಾ, "ತಗೋಳಿ. ನಿಮ್ಮ ಚಿಕ್ಕಪ್ಪ ನಮ್ಮ ಮನೇಲಿ ಕೊಟ್ಟುಬಿಟ್ಟು, ಅರಸೀಕೆರೆಗೋ ಏನೋ ಹೋಗಿದಾರ. 'ನಮ್ಮ ಮನೆ ಹೆಂಗಸ್ರು ಬಂದರೆ ಕೊಡಿ' ಅಂತ ಹೇಳಿದ್ರು..." ಎಂದು ಒಂದೇ ಉಸುರಿಗೆ ನುಡಿದಳು ಆ ಬಾಲೆ.

"ಹೆಂಗಸ್ರು ಎಲ್ಲಿ ಹೋಗಿದಾರೆಯೆ ಸರಸಿ ?" ಎಂದು ಅವಳನ್ನು ಮುದ್ದಿಸಿದ ನಟರಾಜ– ಆ ಮಗುವನ್ನು ಕಂಡರೆ ಅವನಿಗೆ ಬಹಳ ಪ್ರೀತಿ.

"ಅವ್ರೆಲ್ಲ ಕಲ್ಲಹಳ್ಳೀಗೆ ಹೋಗಿದಾರೆ–?"

"ಯಾಕೆ ?"

"ಅಲ್ಲಿ ಇವರ ನೆಂಟರದು ಯಾರದೋ ಮದುವೆಯಂತೆ."

"ಕಲ್ಲಹಳ್ಳೀಲಿ ಯಾರದಪ್ಪ ಅದು ಮದುವೆ..." ಎಂದು ನಟರಾಜ ಯೋಚಿಸುತ್ತಿರುವಂತೆ, ಆ ಹುಡುಗಿ ಬೀಗದ ಕೈಯನ್ನು ಅವನ ಮುಂದೆ ಹಿಡಿದು ಅಣಕಿಸುತ್ತಾ. "ಯಾರದಪ್ಪಾ– ಅದು–ಮದುವೆ !... ತಗೊಳಿ. ನೀವು ಯಾವಾಗ಼್ೂ ಹೀಗೆ, ನನ್ನ ಸತಾಯಿಸ್ತೀರಿ" ಎಂದು ಅವನ ಜೇಬಿಗೆ ಅದನ್ನು ತುರುಕಿ ಓಡಿಹೋಗುವುದರಲ್ಲಿದ್ದಳು.

ನಟರಾಜ ಅವಳನ್ನು ಹಿಡಿದುಕೊಂಡು, ಬೀಗದ ಕೈಯನ್ನು ಅವಳ ಕೈಗೇ ಇಡುತ್ತಾ, "ತಗೋ ಸರಸಿ, ಈ ಬೀಗದ ಕೈ ನನಗೀಗ ಬೇಕಾಗಿಲ್ಲ. ನನ್ನ ಚಿಕ್ಕಪ್ಪ ರೈಲಿನಿಂದ ಬಂದರೆ ನಾನೂ ಕಲ್ಲಹಳ್ಳೀಗೆ ಹೋದೆ ಅಂತ ಹೇಳಿಬಿಡು" ಎಂದು ಹೇಳಿ ಅಲ್ಲಿಂದ ಹೊರಟುಬಿಟ್ಟನು.

ಬಸ್ಸು ಹತ್ತುವಾಗಲೇ ಅವನಿಗೆ ದುಡ್ಡಿನ ಯೋಚನೆ ಬಂದುದು.

"ಕಲ್ಲಹಳ್ಳೀಗೊ ?... ಒಂದೂಕಾಲು ರೂಪಾಯಿ" ಎಂದು ಕಂಡಕ್ಟರ್ ಟಿಕೆಟ್ ಹರಿದು ಅವನ ಕೈಗಿತ್ತಾಗ ನಟರಾಜ ತನ್ನ ಜೇಬುಗಳನ್ನೆಲ್ಲಾ ಶೋಧಿಸಿಕೊಂಡ. ಸದ್ಯ, ಅನಂತನೊಮ್ಮೆ ಕಾರಾಗೃಹಕ್ಕೆ ಬಂದಿದ್ದಾಗ ಬೇಡ ಬೇಡವೆಂದರೂ ಎರಡು ರೂಪಾಯಿಗಳನ್ನು ಅವನ ಒಳಜೇಬಿಗೆ ತುರುಕಿ ಹೋಗಿದ್ದ. ಈಗ ಅದೇ ಹಣ ಅವನ ಮಾನವನ್ನುಳಿಸಿತು.

ಕಲ್ಲಹಳ್ಳಿಯ ಬಳಿ ಅವನು ಬಸ್ಸಿನಿಂದಿಳಿದು ಹಳ್ಳಿಯ ಮಾರ್ಗವನ್ನು ಹಿಡಿದನು. ಅಷ್ಟು ದೂರ ಬರುವುದರಲ್ಲಿ ದನಗಳನ್ನು ಮೇಯಿಸಲು ಅಟ್ಟಿಕೊಂಡು ಹೋಗುತ್ತಿದ್ದ ಮರಿನಿಂಗಿಯೂ, ಅವಳ ಸೊಸೆಯೂ ಅಡ್ಡಾದರು.

ಮರಿನಿಂಗಿ ಅವನ ಹತ್ತಿರ ಬಂದು ಪ್ರೀತಿಯಿಂದ ಅವನ ಮೈದಡವುತ್ತ, "ಯೇನಾ ಮೊಗಾ... ಜೈಲಿನಿಂದ ಬುಟ್ಬರಾ ?–" ಎಂದವಳು ಏನೋ ಧ್ಯಾನಿಸಿಕೊಂಡು "ಬುಡೋದುಬುಡ್ತ ವಸಿ ಬಿರ್ರನಾರು ಬುಟ್ಬಿತ್ತಾ ಆ ಆಳು ಸರ್ಕಾರ...?" ಎಂದಳು.

"ಹೂ, ಸರ್ಕಾರ ನಮ್ಮ ಚಿಕ್ಕಪ್ಪನದು" ಎಂದು ನಗೆಯಾಡಿದ ನಟರಾಜ. "ಅದು ಸರಿ. ನಮ್ಮ ಚಿಕ್ಕಯ್ಯನೋರ ಮನೆಯೋರೆಲ್ಲ ಮೈಸೂರಿನಿಂದ ಇಲ್ಲೀಗೆ ಬಂದವ್ರಂತಲ್ಲಾ ?... ಯಾರದು ಮದುವೆ ?–ಕೊತ್ತೇಗಾಲದ ನಮ್ಮ ಮಾವನ ಮೊಮ್ಮಗಳು ಇದ್ದಳಲ್ಲ, ದುರ್ಗಿ ಅವಳದೇನಾರಾ ಮದ್ವೆ ಏರ್ಪಾಟಾಗಿದೆಯಾ ?" ಎಂದು ಪ್ರಶ್ನಿಸಿದ.

ಮುದುಕಿಗೆ ಏನು ಉತ್ತರವೀಯಬೇಕೊ ತಿಳಿಯದಾಯಿತು. ಅವಳು ಸುಮ್ಮನಾದುದನ್ನು ಗಮನಿಸಿ, "ಹೇಳು" ಎಂದು ಒತ್ತಾಯ ಮಾಡಿದ ನಟರಾಜ.

ಬಹಳ ಹೊತ್ತಿನ ಮೇಲೆ, ಬಹು ಪ್ರಯಾಸದಿಂದ, "ದುರ್ಗೀದಲ್ಲ ಕನ ಮೊಗಾ ಲಗ್ಣಾ..."

"ಇನ್ಯಾರದು ?..." ನಟರಾಜನ ಎದೆ ಡವಡವನೆ ಹೊಡೆದುಕೊಳ್ಳಲು ಆರಂಭಿಸಿತು. ಅವಳು ಮುಂದಾಡಬಹುದಾದ ಮಾತಿನ ಕಲ್ಪನೆಯನ್ನು ತನ್ನ ಅಂತರಂಗದಲ್ಲಿಯೇ ಮಾಡಿಕೊಂಡು ಖೇದಗೊಂಡನು. ಅದು ಮಾತ್ರ ಆಗದಿರಲಿ ಎಂದು ದೇವರಲ್ಲಿ ದೀನವಾಗಿ ಮೊರೆಯಿಟ್ಟನು.

ಆದರೆ ನಿಷ್ಕರುಣಿ ದೈವ ಮರಿನಿಂಗಿಯ ಬಾಯಿಂದ "ಮಂಗಳೇದು" ಎಂದೇ ಹೇಳಿಸಿಬಿಟ್ಟಿತು.

ಆ ಒಂದು ಮಾತನ್ನು ಕೇಳಿದ ನಟರಾಜನ ತಲೆ ಸುತ್ತಿ ಬಂದಿತು. ನಿಂತಂತೆಯೇ ಅವನ ಕಾಲುಗಳು ಕುಸಿದು ಹೋಗುತ್ತಿದ್ದವು. ಜಗತ್ತೇ ಅವನ ದೃಷ್ಟಿಗೆ ಶೂನ್ಯವಾಗಿ ಕಂಡಿತು. ಮರಿನಿಂಗಿ ಅವನ ಪಕ್ಕದಲ್ಲಿಲ್ಲದಿದ್ದರೆ ಆ ಗಳಿಗೆಯಲ್ಲಿ ಅವನು ಕೆಳಗೆ ಬಿದ್ದೇಬೀಳುವುದು ಸಹಜವಾಗಿತ್ತು.

ಅವನ ವೇದನೆಯನ್ನು ನೋಡಲಾರದೆ ಮರಿನಿಂಗಿ, "ತಡಕಾ ಮೊಗಾ... ಯೆಲ್ಲಾ ಬಗವಂತನ ಮಾಯೆ..." ಎಂದು ಅವನನ್ನು ಸಮಾಧಾನಪಡಿಸಲು ಯತ್ನಿಸಿದಳು.

ಆ ಗಳಿಗೆಯಲ್ಲಿ ಅವನಿಗೆ ಅನಂತಕಾಲವೇ ಕಳೆದುಹೋದಂತೆ ಅನುಭವವಾಗಿತ್ತು.

ಹೀಗೆ ಬಹುಕಾಲ ಸಂದ ಬಳಿಕ ಬಳಲಿದವನಂತೆ ಕೇಳಿದ :

"ಗಂಡು ಯಾರು ?"

"ಕೊತ್ತೇಗಾಲದ ಸುಬ್ಬರಾಯಿ."

ಈ ಮಾತು ನಟರಾಜನನ್ನು ಮತ್ತೂ ಹಿಂಸೆ ಮಾಡಿತು, ಆ ಕುರೂಪಿಯನ್ನು ವಿವಾಹವಾಗಲು ಮಂಗಳೆ ಒಪ್ಪಿದಳೇ ?– ಎಂದು ಅಚ್ಚರಿಪಡುತ್ತಿದ್ದ... ಮರುಗಳಿಗೆಗೆ ಅಲ್ಲಿ ನಿಲ್ಲುವುದೇ ಬೇಡವಾಯಿತು ಅವನಿಗೆ. ಎಲ್ಲಿಗಾದರೂ ಹೋಗಿಬಿಡುವುದೆಂದು ಹೊರಡುವುದರಲ್ಲಿದ್ದ. ಆಗ ಮರಿನಿಂಗಿ ಅವನ ಕೈ ಹಿಡಿದುಕೊಂಡು ಹೇಳಿದಳು :

"ಇದೆಲ್ಲೀಗೆ ಮೊಗಾ ಹೊಂಟಿದ್ದೀ... ಇಲ್ಲಿ ನಿಮ್ಮಕ್ಕನಿಗೆ ಸಖತ್ತಾಯಿಲೆ ಆಗಿರೋವಾಗ ಅದೆತ್ಲಾಗ ಹೊಂಟೆ...?"

ಮುದುಕಿಯ ಮಾತುಗಳು ನಟರಾಜ ಮುಂದೆ ಅಡಿಯಿಡದಂತೆ ಮಾಡಿದವು. ಹಾಗೇ ನಿಂತುಕೊಂಡು "ಅಕ್ಕನಿಗೆ ಕಾಯಿಲೆ !– ಏನಾಗಿದೆ ?" ಎಂದು ತೊದಲಿದ.

"ಮಂತೆ ಪಾರತಿ ಕಾಯಿಲೆ ಇಂದಲೆ ಅಲ್ವಾ ಈಟೆಲ್ಲಾ ನಡೆದೋದದ್ದೂ."

"ಅಂದರೆ ?" ತಬ್ಬಿಬ್ಬಾದವನಂತೆ ಕೇಳಿದ ನಟರಾಜ.

"ನೋಡು ಮೊಗಾ... ಪಾರತೀಗೆ ಕಾಯಿಲೆ ಬಂದಿಲ್ಲದೇ ಇದ್ರೆ ಈ ಲಗ್ನಾನೆ ನಡೀತಾ ಇರ್ನಿಲ್ಲ. ಅವ್ರೆಲ್ಲಾರು ತೀರಿಕೊಂಡಾಳು ಅಂತ ಕಾರ್ಯ ನೆರವೇರಿಸಿ ಬುಟ್ಟರು... ನೀ ಬ್ಯಾರೆ ಬಂದೀಕಾನೇಲ್ಲಿದ್ದಿ. ನಿನ್ಯಾವಾಗ ಬುಟಾರೊ ಯೇನೋ ಅಂತ ನೆಚ್ಚಿಗೇನೇ ಇರ್ನಿಲ್ಲ– ಇತ್ಲಾಗಿ ನಿಮ್ಮಕ್ಕನಿಗೆ ತುಟಗಟ್ಟಾಗದೆ. ಅತ್ಲಾಗಿ ನೀನೂ ಬಂದೀಕಾನೇಲಿದ್ದಿ. ಮಂಗಲಿ ಲಗ್ನ ಮಾಡನೇಬೇಕಾಗಿದೆ. ಯೇನು ಮಾಡೋದು ?... ಇಂತ ಸಮಯ ಸಾಧಿಸಿ, ಅವ್ಳು ಅವ್ಳಲ್ಲ– ಮಾಯಾಂಗಿಣಿ–ನರಸಮ್ಮ–ಮೆತ್ತಗೆ ಇಸಕಂಟಯ್ಯನ ತನ್ನ ಕಯ್ನಲ್ಲಿ ಹಾಕ್ಕಂಡು ಜಟಪಟನೆ ಎಂಟೇ ಜಿನದಲ್ಲಿ ತನ್ನ ತಮ್ಮನಿಗೆ ತಾಲೀಯ ಕಟ್ಸಿಸೇ ಬುಟ್ಟಳು..."

ನಟರಾಜನಿಗೆ ಆಕಾಶವೇ ತನ್ನ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ಊರೊಳಗೆ ಹೋಗುವುದೇ? ಬೇಡವೇ?–ಎನ್ನುವುದೇ ಅವನಿಗೆ ದೊಡ್ಡ ಸಮಸ್ಯೆಯಾಗಿಟ್ಟುಕೊಂಡಿತು.

ಅವನ ಮನಸ್ಸು ಹೀಗೆ ತೂಗುಯ್ಯಾಲೆಯಾಗಿರುವುದನ್ನು ಗಮನಿಸಿದ ಮರಿನಿಂಗಿ, "ಯಾಕೆ ಮೊಗಾ ಹಿಂಗೆ ಚಿಂತೆ ಮಾಡ್ತಾ ನಿಂತುಬುಟ್ಟೇ?... ಅದ್ಯಾಕೆ ನಿನ್ನ ಕಾಲು ಹಂಗೆ ಮಾರ್ಗದ ಕಡೀಕೆ ತುಯ್ಯತಾ ಇದ್ದಾದು? ನಿಮ್ಮ ಹಟ್ಟೀಗೋಗಾಕೆ ಒಡಂಬಡದಾ ಮನಸು ?" ಎಂದಳು.

ನಟರಾಜ ಮೌನವಾಗೇ ತಲೆಯಲ್ಲಾಡಿಸಿ ಅದನ್ನು ಒಪ್ಪಿಕೊಂಡನು.

"ಉಂಟೇನಾ ಹಂಗೆ ಮಾಡೋದು...? ಸೊಂತ ಅಕ್ಕನಿಗೆ ಸಖತ್ತಾಯಿಲೆ ಆಗಿರೋವಾಗ ನೀ ಓಗಾದಾದ್ರೂ ಎಲ್ಲೀಗೆ...?" ಎಂದು ವಾದಿಸಿದಳು. ಮೃದುವಾಗಿ "ಸುಮ್ಮಕೆ ಮನೀಗೆ

ನಡಿ. ಉಚ್ಚುಚ್ಚಾಗಿ ಆಡಬ್ಯಾಡ..." ಎಂದು ಅವನ ಮನಸ್ಸು ತಿರುಗಿಸಲು ಯತ್ನಿಸಿದಳು ಮರಿನಿಂಗಿ.

ಆಳವಾಗಿ ಕೆಲವು ನಿಮಿಷ ಯೋಚಿಸುತ್ತಿದ್ದು 'ಅಕ್ಕನನ್ನು ಈ ಸ್ಥಿತಿಯಲ್ಲಿ ನೋಡದೆ ಹೋಗುವುದಾದರೂ ಹೇಗೆ?-ಅವಳನ್ನು ನೋಡಿದ ಬಳಿಕ ಮುಂದಿನ ಆಲೋಚನೆ ಮಾಡುವುದು' ಎಂಬ ನಿರ್ಧಾರಕ್ಕೆ ಬಂದಿದ್ದ ನಟರಾಜ.

ಅವನು ಮನೆಯ ಬಾಗಿಲಿಗೆ ಬರುವಷ್ಟರಲ್ಲಿ ಗಂಡಸರೆಲ್ಲ ಮಧ್ಯಾಹ್ನದ ಊಟ ಮುಗಿಸಿ ಜಗುಲಿಯ ಮೇಲೆ ತಾಂಬೂಲ ಸವಿಯುತ್ತ ಕುಳಿತಿದ್ದರು. ವಿಷಕಂಠಯ್ಯನೇ ನಟರಾಜನನ್ನು ಮೊದಲು ಮಾತನಾಡಿಸಿದನು.

"ಯಾವತ್ತು ಬುಟ್ಟರು ಮೊಗಾ ಜೈಲಿನಿಂದ-?"

ವಿಷಕಂಠಯ್ಯನ ಮಾತು ಮುಗಿಯುವುದರೊಳಗೇ ಕಾಳಯ್ಯ, "ಯೇನು ಜೈಲಿಗೋಗಿ ಸೊರಾಜ್ಯ ತಂದುಬುಟ್ಟೆಯೊ ನಮ್ಮ ದೇಸಕ್ಕೇ-?" ಎಂದು ಮೂದಲಿಸಿದನು.

ಅಲ್ಲಿದ್ದವರೆಲ್ಲ ನಕ್ಕರು. ಅದರಲ್ಲೂ ಸುಬ್ಬರಾಯಿ ಎಲ್ಲರಿಗಿಂತ ಸ್ವಲ್ಪ ಗಟ್ಟಿಯಾಗೇ ನಗುತ್ತಿದ್ದನು.

"ಒಂದೇ ತರ ಅದೆ...ಹೆಂಗೆ ಹೇಳೋದು ?"

ನಟರಾಜ ಮುಂದೇನೂ ಮಾತಾಡದೆ ನೇರವಾಗಿ ಅಕ್ಕನ ಕೋಣೆಗೆ ಹೊರಟವನು ಹೊಸಿಲ ಬಳಿ ಏನೋ ನೆನೆದುಕೊಂಡು "ಅನಂತ ಎಲ್ಲಿ ಕಾಣ್ತಾನೇ ಇಲ್ಲ ?" ಎಂದನು.

"ಅನಂತ ಹೆಂಗಸರು ಯೆಲ್ಲ ಈಗೊಂದು ಗಳಿಗೇಲಿ ಮೈಸೂರಿಗೋದರು... ಅವರು ಅತ್ತಲಾಗಿ ಓದರು, ನೀ ಇತ್ತಲಾಗಿ ಬಂದೆ..."

"ಅವನಾದರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು-" ಎಂದು ತನ್ನಲ್ಲಿಯೇ ಹೇಳಿಕೊಳ್ಳುತ್ತಿರುವಷ್ಟರಲ್ಲಿ ಅವನ ಹೆಜ್ಜೆಗಳು ಅಕ್ಕನ ಕೋಣೆಯ ಹೊಸ್ತಿಲನ್ನು ದಾಟಿದ್ದವು. ಒಳಗೆ ಚೆಲುವಮ್ಮ ಪಾರ್ವತಮ್ಮನನ್ನು ಒರಗಿಸಿಕೊಂಡು ಕುಳಿತಿದ್ದಳು. ಮಂಗಳೆ ಸೆಕೆ ಬೀಸುತ್ತಿದ್ದವಳು ಒಳಗೆ ಬಂದ ನಟರಾಜನನ್ನು ಹಠಾತ್ತನೆ ಕಂಡು ವಿಸ್ಮಿತಳಾದಳು. ಬೀಸಣಿಗೆ ಅವಳ ಕೈಯ್ಯಿಂದ ಜಾರಿಬಿದ್ದು ಹೋಯಿತು. ಅವಳು ನಿಶ್ಚೇಷ್ಟಿತಳಾಗಿ ಚಿತ್ರದ ಗೊಂಬೆಯಂತೆ ನಿಂತುಬಿಟ್ಟಳು. ನಟರಾಜನೂ ಕೆಲಕಾಲ ವಿವೇಕಶೂನ್ಯನಾದವನಂತೆ ಅವಳನ್ನೇ ನೋಡುತ್ತಿದ್ದು ಪ್ರಯಾಸದಿಂದ ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾ ಪಾರ್ವತಮ್ಮನ ಬಳಿಗೆ ಬಂದನು.

ಚೆಲುವಮ್ಮ ನಿಧಾನವಾಗಿ ಪಾರ್ವತಮ್ಮನ ಕಿವಿಯಲ್ಲಿ "ನಿನ್ನ ತಮ್ಮ ನಟ್ರಾಜ ಬಂದವ್ನೆ ಕನ ಚಿಕ್ಕವ್ವಾ..." ಎಂಬುದಾಗಿ ಮೆಲ್ಲನೆ ಉಸುರಿದಳು.

ಪಾರ್ವತಮ್ಮ ನಿಧಾನವಾಗಿ ಕಣ್ಣು ತೆರೆದು ನೋಡಿದಳು. ಎದುರಿಗೇ ನಟರಾಜ ನಿಂತಿದ್ದ...ಅವನನ್ನೇ ಮೌನವಾಗಿ ಸ್ವಲ್ಪ ಹೊತ್ತು ದುರುಗುಟ್ಟಿ ನೋಡುತ್ತಿದ್ದು ಹಠತ್ತಾನೆ "ಈಗ ಬಂದೆಯಾ ಮೊಗಾ...!" ಎಂದು ಬಿಕ್ಕಿಬಿಕ್ಕಿ ಅಳಲು ಆರಂಭಿಸಿದಳು. ನಟರಾಜ ಅವಳ ಪಕ್ಕದಲ್ಲಿ ಕುಳಿತು ತಾನೂ ಮಗುವಿನಂತೆ ಅತ್ತುಬಿಟ್ಟನು. ಮಂಗಳೆಯ ನಯನಗಳಲ್ಲಿ ದುಃಖದ ಕೋಡಿ ಹರಿಯಿತು. ಚೆಲುವಮ್ಮನೂ ಗಳಿಗೆ ಗಳಿಗೆಗೆ ಕಂಬನಿಯನ್ನು ಮಿಡಿದುಕೊಳ್ಳುತ್ತಿದ್ದಳು. ನರಸಮ್ಮನ ಕಣ್ಣಿನಲ್ಲಿ ಮಾತ್ರ ಒಂದು ಹನಿ ನೀರೂ ಕಾಣಿಸಿಕೊಳ್ಳಲಿಲ್ಲ !...

ಆ ರಾತ್ರಿಯೆಲ್ಲ ನಟರಾಜ ಅಕ್ಕನ ಮಗ್ಗುಲನ್ನು ಬಿಟ್ಟು ಏಳಲಿಲ್ಲ. ಅವರ ಶುಶ್ರೂಷೆಯನ್ನೆಲ್ಲಾ ತಾನೇ ವಹಿಸಿಕೊಂಡಿದ್ದ...

ಇಷ್ಟು ರಾತ್ರಿ ಕಣ್ಣಿಗೆ ಕೊಂಚವೂ ನಿದ್ದೆ ಬಾರದಿದ್ದುದು ಆ ರಾತ್ರಿ ಮಾತ್ರ ಪಾರ್ವತಮ್ಮನಿಗೆ ಸ್ವಲ್ಪ ನಿದ್ದೆ ಬಂದಿತು. ನಟರಾಜನನ್ನು ನೋಡಿದ್ದೇ ಆಕೆಗೆ ಏನೋ ಸಮಾಧಾನವನ್ನು ತಂದಂತಿತ್ತು...

೨೮

ಬೆಳಕು ಹರಿಯಿತು, ಮಧ್ಯಾಹ್ನವಾಯತು, ಸಂಜೆ ಬಂದು ರಾತ್ರಿಯಾಯಿತು. ದಿನ ಬಂದು ದಿನ ಹೋಯಿತು. ಪಾರ್ವತಮ್ಮ ಸ್ವಲ್ಪ ಸ್ವಲ್ಪವಾಗಿ ಗುಣಮುಖಳಾಗುತ್ತ ಬಂದಳು "ಅಂತೂ ನಟ್ರಾಜ ಬಂದು ಪಾರತೀನ ಉಳಿಸಿಕೊಂಬುಟ್ಟ" ಎಂದು ನರಸಮ್ಮನೇ ಹೊಗಳುವಂತಾಯಿತು.

ಹೀಗಿರುವಾಗ ಕಲ್ಲಹಳ್ಳಿಗೆ 'ಓಕುಳಿ ಹಬ್ಬ' ಬಂದಿತು.

'ಓಕುಳಿ ಹಬ್ಬ' ಕಲ್ಲಹಳ್ಳಿಯಲ್ಲಿ ನಡೆಯುವ ಹಬ್ಬಗಳಲ್ಲೆಲ್ಲಾ ಅತ್ಯಂತ ವಿಜೃಂಭಣೆಯಿಂದ ನಡೆಯುವ ಹಬ್ಬ. ಸಾಧಾರಣವಾಗಿ ವರ್ಷದ ಎಲ್ಲ ದಿನಗಳಲ್ಲಿಯೂ ನಿದ್ದೆ ಮಾಡುತ್ತಿರು ವಂತೆಯೇ ತೋರುವ ಆ ಚಿಕ್ಕ ಹಳ್ಳಿಯಲ್ಲಿ ಓಕುಳಿಯ ದಿನ ನೋಡಬೇಕು !... ಅಂದು ಪೊರೆ ಬಿಟ್ಟ ಹಾವಿನಂತೆ ಅದರ ಸ್ವರೂಪವೇ ಬದಲಿಸಿಬಿಡುತ್ತದೆ.

ಓಕುಳಿ ಬರುವ ಕಾಲವಾದರೂ ಸುಗ್ಗಿಯಲ್ಲಿ !–ಒಡ್ಡು ಬಡಿದು ಹಗಕ್ಕೆ ರಾಗಿ ತುಂಬಿ, ಇತರ ಕಾಳುಕಡ್ಡಿ ಮನೆಗೆ ಬಂದು ರೈತರಿಗೆ ಈಗ ವಿರಾಮಕಾಲ, ಮುಂಗಾರು ಮಳೆ ಬಂದು ಅವರು ಬಿತ್ತನೆಗೆ ಆರಂಭಿಸುವವರೆಗೂ ಅವರಿಗೆ ಬಿಡುವು. ಅಲ್ಲಿಯ ತನಕ

ಹಗಲೆಲ್ಲ ಬೇಸಾಯದ ಹಲವಾರು ಕೆಲಸಗಳಲ್ಲಿ ದುಡಿದು ಬೇಸತ್ತ ರೈತರ ಮನಸ್ಸು ಮುದುಡಿಕೊಂಡಿರುತ್ತದೆ. ಅದನ್ನು ಮುದಗೊಳಿಸಿ ಬದುಕಿನಲ್ಲಿ ಹೊಸ ಉತ್ಸಾಹ ತುಂಬಲು ಓಕುಳಿಯಂಥ ಹಬ್ಬಗಳು ಅತ್ಯಂತ ಸಹಕಾರಿ.

ಇದು ಸಾಮೂಹಿಕವಾಗಿ ಆಚರಿಸಲ್ಪಡುವ ಹಬ್ಬ. ಇದರಲ್ಲಿ ಹಳ್ಳಿಯ ಸಮಸ್ತ ಜನರೂ ಸೇರುತ್ತಾರೆ. ಹೀಗೆ ಅವರನ್ನೆಲ್ಲಾ ಒಟ್ಟುಗೂಡಿಸುವ ಕೆಲಸ ಊರಿನ ಯಜಮಾನನಿಗೆ ಸೇರಿದ್ದು. ಆತ ಊರಿನ ಮುಖಂಡರನ್ನು ಸೇರಿಸಿಕೊಂಡು ಪಂಚಾಯತಿ ನಡೆಸಿ ಗ್ರಾಮದ ಸಕಲ ಜನರಿಂದಲೂ 'ವರಿ' ಎತ್ತುತ್ತಾನೆ. 'ವರಿ' ಎಂದರೆ ಹಬ್ಬದ ಖರ್ಚಿಗಾಗಿ ಹಳ್ಳಿಯ ಪ್ರತಿಯೊಬ್ಬ ನಿವಾಸಿಯೂ ಯಜಮಾನನ ಕೈಗೆ ಕೊಡಬೇಕಾದ ಹಣ. ಈ 'ವರಿ' ಎತ್ತುವುದರಲ್ಲಿಯೂ ಒಂದು ಕ್ರಮ ಇರುತ್ತದೆ. ಜಮೀನು ಇರುವವರಿಂದ ಹೆಚ್ಚು ತೆಗೆದುಕೊಂಡರೂ ಬಡವರಿಗೂ ಗಂಡನ ನೆರವಿಲ್ಲದ ವಿಧವೆಯರಿಗೂ ರಿಯಾಯಿತಿ ತೋರಿಸಲ್ಪಡುತ್ತದೆ.

ಗ್ರಾಮದ ಯಜಮಾನ ಹೀಗೆ ಧನಸಹಾಯವನ್ನೂ ಜನಸಹಾಯವನ್ನೂ ಪಡೆದು ಇಂಥಿಂಥವರು ಇಂಥಿಂಥ ಕಾರ್ಯಗಳಲ್ಲಿ ನಿರತರಾಗಬೇಕೆಂದು ಕೆಲಸ ಹಂಚುತ್ತಾನೆ. ಇದರಲ್ಲಿ ಹಳ್ಳಿಯ ಸಮಸ್ತ ಜನತೆಯೂ ಭಾಗವಹಿಸಲೇಬೇಕು. ಸ್ತ್ರೀಯರು, ಮುದುಕರು, ಅಶಕ್ತರು, ರೋಗಿಗಳನ್ನುಳಿದು ಇತರರು ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದು ಅನೂಚಾನವಾಗಿ ನಮ್ಮ ಹಳ್ಳಿಗಳಲ್ಲಿ ನಡೆದುಬಂದ ಪದ್ಧತಿ. ಹೊಲೆಯರಿಗೂ, ಮಾದಿಗರಿಗೂ ಸಹ ಈ ಹಬ್ಬದಲ್ಲಿ ಭಾಗವಹಿಸಲು ಅವಕಾಶವಿರುತದೆ. ಹಬ್ಬದಲ್ಲಿ ತಮಟೆ ಬಾರಿಸುವವರು ಆ ಜನರೇ ! ಮಾದೇಶ್ವರ, ಬಸವೇಶ್ವರ ಮುಂತಾದ ದೇವ ವಿಗ್ರಹಗಳನ್ನು ಗುಡಿಗಳಿಂದ ಕುರ್ಜಿಗೆ ತರುವಾಗ ಉತ್ಸವ ಮೂರ್ತಿಗಳ ಮುಂದೆ ಕುಣಿತ ಮಾಡುವವರು ಆ ಜನರೇ !....

ಮಾರಿ ಗುಡಿಯ ಮುಂಭಾಗದಲ್ಲಿ ಕುರ್ಜು...ಕುರ್ಜು ಎಂದರೆ ನಾಲ್ಕು ಕಲ್ಲು ಕಂಬ ನಿಲ್ಲಿಸಲ್ಪಟ್ಟಿರುತ್ತದೆ. ಇವುಗಳ ಮಧ್ಯೆ ಒಂದು ಕಲ್ಲು ಕಂಬ. ನಾಲ್ಕು ಕಂಬದ ಮೇಲೂ ತೊಲೆಗಳಿವೆ. ಆ ತೊಲೆಗಳ ಮೇಲೆ, ಮಧ್ಯದ ಕಂಬವನ್ನೇರಿ ಹೋಗಿ, ಜನ ತೇರಿನ ಮಾದರಿಯ ಗೋಪುರಾಕಾರದ ಕಟ್ಟಡವನ್ನು ಕಟ್ಟುತ್ತಾರೆ.–ಇದೆಲ್ಲ ಮರದ್ದೇ ಕಟ್ಟಡ. ಈ ಗೋಪುರವನ್ನು ಬಣ್ಣ ಬಣ್ಣದ ಬಟ್ಟೆಯಿಂದ ಸುತ್ತುತ್ತಾರೆ; ಪುಟ್ಟ ಪುಟ್ಟ ಬಾವುಟಗಳಿಂದ ಶೃಂಗರಿಸುತ್ತಾರೆ. ಬಗೆಬಗೆಯ ಹೂವುಗಳ ಮತ್ತು ತೋರಣದ ಅಲಂಕಾರವನ್ನೂ ಮಾಡುತ್ತಾರೆ.

ಕುರ್ಜಿನ ಪಕ್ಕದಲ್ಲಿ ಓಕುಳಿ ಕೊಳ. ಅದರ ಸುತ್ತಲೂ ವಿಶಾಲವಾದ ಮೈದಾನ. ಕೊಳಕ್ಕೆ ನೆಲದಿಂದ ಇಟ್ಟಿಗೆ, ಗಾರೆಯ ಕಟ್ಟಡ ಮಾಡಿದೆ. ಅದಕ್ಕೆ ಎರಡು ಕಡೆ ಮೆಟ್ಟಲು.

ಈ ಹಬ್ಬದ ದಿನವನ್ನುಳಿದು ವರ್ಷಕ್ಕೆ ಹನ್ನೆರಡು ತಿಂಗಳೂ ಈ ಓಕುಳಿ ಕೊಳ ಉಪಯೋಗದಲ್ಲಿರುವುದಿಲ್ಲ. ಆ ಕಾರಣದಿಂದ ದನ ಕರು, ಮಕ್ಕಳು ಮರಿ ಬಿದ್ದಾರೆಂದು ಈ ಕೊಳವನ್ನು ಮಣ್ಣಿನಿಂದ ನೆಲಸಮಕ್ಕೆ ಮುಚ್ಚಿಬಿಟ್ಟಿರುತ್ತಾರೆ. ಹಬ್ಬದ ದಿನ ಮಾತ್ರ ಕೊಳದ ಮಣ್ಣೆತ್ತಿ ನೀರು ತುಂಬಲು ಅಣಿಗೊಳಿಸುತ್ತಾರೆ ಜನ.

ಓಕುಳಿ ಕೊಳಕ್ಕೆ ನೀರು ತುಂಬುವುದರಲ್ಲಿಯೂ ಒಂದು ಕ್ರಮವಿದೆ. ಊರಿನ ಐದು ಜನ ಮುತ್ತೈದೆಯರು ಕೆರೆಯಿಂದ ಕಳಶದಲ್ಲಿ ನೀರು ತರಲು ಹೋಗುತ್ತಾರೆ. ಕಳಶವನ್ನು ಹೊಂಬಾಳೆ, ವೀಳೆಯದೆಲೆ ಇವುಗಳಿಂದ ಸಿಂಗಾರಗೊಳಿಸಿರುತ್ತಾರೆ. ಮುತ್ತೈದೆಯರ ಜೊತೆಗೆ ಓಲಗದವರು (ಹಜಾಮರು) ದೀವಟಿಗೆ ಹಿಡಿಯುವವರು (ಅಗಸರು), ಛತ್ರಿ ಹಿಡಿಯುವವರು (ಹೆಗ್ಗಡಿಗಳು) ಇರುತ್ತಾರೆ. ಕಳಶದಲ್ಲಿ ನೀರು ತರುವ ಮುತ್ತೈದೆಯರನ್ನು ನೆಲದ ಮೇಲೆ ನಡೆಯಗೊಡುವುದಿಲ್ಲ. ಊರಿನ ಅಗಸ "ನಡೆಮುಡಿ" ಹಾಸಿಕೊಂಡು (ದಾರಿಯುದ್ದಕ್ಕೂ ಬಟ್ಟೆ ಹಾಸಿಕೊಂಡು) ಅವರನ್ನು ನಡೆಸಿಕೊಂಡು ಬರುತ್ತಾನೆ... ಹೀಗೆ ವಾದ್ಯ ಸಮೇತ, ಶಾಸ್ತ್ರೋಕ್ತವಾಗಿ ಕಳಶದಲ್ಲಿ ತಂದ ನೀರನ್ನು ಮುತ್ತೈದೆಯರು ಓಕುಳಿ ಕೊಳಕ್ಕೆ ಹುಯ್ಯುತ್ತಾರೆ. ಅನಂತರ ಮನೆ ಮನೆಗೆ–ಎತ್ತುಗಾಡಿ ಇರುವವರು–ಗಾಡಿ ಕಟ್ಟಬೇಕು. ಕೆರೆಗೆ ಹೋಗಿ ನೀರು ತಂದು ಓಕುಳಿ ಕೊಳವನ್ನು ತುಂಬಬೇಕು. ಹಳ್ಳಿಗರಿಗೆ ಗಾಡಿಯನ್ನು ಹೂಡಿ ನೀರು ತರುವುದೇ ಒಂದು ದೊಡ್ಡ ಸಂಭ್ರಮ. ವಿಶೇಷ ಉತ್ಸಾಹದಿಂದ ಎತ್ತುಗಳನ್ನು ಸಿಂಗರಿಸುತ್ತಾರೆ. ನೀರು ತರುವಾಗ ನಾನು ಮುಂದು, ತಾನು ಮುಂದು ಎಂಬ ಪಂದ್ಯವೂ ಅವರವರಲ್ಲಿ ನಡೆಯುವುದುಂಟು.

ಈ ವರ್ಷದ ಓಕುಳಿಯಲ್ಲಿ ಕೆರೆಗೆ ಕಳಶದ ನೀರು ತರಲು ಹೋಗಿದ್ದ ಮುತ್ತೈದೆಯರಲ್ಲಿ ಕೊತ್ತೇಗಾಲದ ಚೆಲುವಮ್ಮನ ಮಗಳು ದುರ್ಗಿಯೂ ಒಬ್ಬಳು. ನೀರು ತರುತ್ತಿರುವಂತೆ ಕಲ್ಲಹಳ್ಳಿಯ ತರುಣಿಯರಲ್ಲಿ ಪರಸ್ಪರ ಗುಸು ಗುಸು ಮಾತು ಹೊರಟಿತು...

"ಎಂಥಾ ಅನ್ಯಾಯ...!" ಎಂದು ಆರಂಭಿಸಿದಳು ಆಯರಳ್ಳಿ ಆಯ್ಯನ ಮಗಳು.

"ಯೇನಾ–?" ಅವರಲೊಬ್ಬಳು ಕೇಳಿದಳು.

"ಆ ಸುಬ್ರಾಯಿ ಅಂಥವನಿಗಾ ಕೊಡೋದು ನಮ್ಮ ಮಂಗ್ಲೀಯಾ ?"

"ದಿಟ ಕನಕ್ಕ...ಸುದ್ದ ತೆಪ್ಪು."

"ಒಳ್ಳಿ ಜಾತಿ ಮುತ್ತು ತಗೊಂಡೋಗಿ ಹಿತ್ತಾಳೆ ಸರಕ್ಕೆ ಬಿಗಿಸಿದಂಗಾಯ್ತು" ಎಂದು ಇನ್ನೊಬ್ಬಳು ನುಡಿದಾಗ ದುರ್ಗಿಯ ಮುಗ್ಧ ಹೃದಯವೂ 'ದಿಟ–ದಿಟ' ಎಂದು ಅನುಕಂಪದಿಂದ ಒಪ್ಪಿಕೊಂಡಿತು. ದುರ್ಗಿ ಕಳಶವನ್ನು ಹೊತ್ತು ನಡೆಯುತ್ತಿರುವಂತೆಯೇ ಒಂದುಸಲ ಭಾರವಾಗಿ ನಿಟ್ಟುಸಿರಿಸಿಟ್ಟಳು.

ದುರ್ಗಿಯ ದೀರ್ಘ ನಿಃಶ್ವಾಸದ ಸದ್ದು ಇತರ ಹೆಣ್ಣುಗಳ ಗಮನವನ್ನು ಅವಳತ್ತ ಸೆಳೆಯಿತು.

ಅಯ್ಯನ ಮಗಳು ತನ್ನ ಪಕ್ಕದಲ್ಲಿದ್ದವಳನ್ನು ಜಿಗುಟಿ, "ಸುಮ್ಮನಿರು... ದುರ್ಗಿ ಇಲ್ಲೆ ಅವಳೆ... ಸುಬ್ಬರಾಯಿ ಇವಳ ನೆಂಟ ಅಲ್ಲವಾ ?..." ಎಂದಳು.

ಎಲ್ಲರೂ ಹಠಾತ್ತಾಗಿ ಸುಮ್ಮನಾದುದನ್ನು ಕಂಡು ದುರ್ಗಿ ನೊಂದುಕೊಂಡು ಹೇಳಿದಳು :

"ಅದ್ಯಾಕರಕ್ಕ... ಓಟಕ್ಕೇ ಮಾತು ನಿಲ್ಲಿಸಿಬುಟ್ಟಿರೀ ? ನಮ್ಮ ಸುಬ್ರಾಯಿ ಚಿಕ್ಕಪ್ಪನ ಲಗ್ನಾ ಆಗೋದು ಮಂಗಳಕ್ಕನಿಗೆ ಇಂಕರಾನೂ ಇಷ್ಟಿರ್ನಿಲ್ಲ ಅಂತ ನಂಗೂ ಗೊತ್ತು... ಪಾಪ, ಮನಸಿದ್ದ ತಾವಕೆ ಮದ್ವೆ ಮಾಡದೇಯ ಅವಳ್ಗೆ ಅನ್ನಾಯ ಮಾಡದ್ರು..."

ದುರ್ಗಿಯೂ ತಮ್ಮಂತೆಯೇ ಮಂಗಳೆಯ ಪರ ವಕಾಲತ್ತು ವಹಿಸುತ್ತಿರುವುದನ್ನು ಕಂಡು ಇತರ ಹೆಣ್ಣುಗಳ ನಾಲಗೆ ಇನ್ನಷ್ಟು ಸಡಿಲವಾಯಿತು. ನಿರ್ಭಯವಾಗಿ ಅವರು ಮಾತಾಡತೊಡಗಿದು.

"ಅನ್ಯಾಯ ಅಂದೀಯವ್ವಾ... ಅವ್ಳ ಬಾಳ್ನೇ ಮುರಿದು ಆಕಿಬುಟ್ಟರು...."

"ನಟ್ರಾಜ ಅಂದ್ರೆ ಜೀವ ಬುಡಿಸಕತ್ತಿದ್ದಲುs..."

"ಆ ವಯ್ಯಾನು ಓಟೇಯಾ...ಪಾಪ, ಅವ್ನ ಮೊಕ ನೋಡಬ್ಯಾಡದು ಈಗ..."

"ಅವ್ನು ಮೈಸೂರಿನಿಂದ ಬಂದ ಜಿನ ನಮ್ಮತ್ತೆ 'ಮಂಗಳವ್ವನ ಲಗ್ಣ ಆಯ್ತು' ಅಂದಾಗ ನೋಡಬೇಕಾಗಿತ್ತು ಆ ವಯ್ಯನ ಮೊಕಾವ... ಯಾವತ್ತುs ಒಳ್ಳಿ ಬಿಳಿ ಶಾಲೆ ಹಂಗೆ ಬಿಳಿಚಿಕೊಂಬುಟ್ಟಿತ್ತು...." ಹೀಗೆ ಹೇಳುವ ಮರಿನಿಂಗಿಯ ಸೊಸೆಯ ಮಾತಿನಲ್ಲಿ 'ಇದರ ವಿಚಾರವಾಗಿ ಮೊದಲು ಅರಿತವಳು ತಾನು' ಎಂಬ ಭಾವವಿತ್ತು.

"ಯೆಲ್ಲಾ ಹಣೇಬರಾನವ್ವ...ನಮ್ಮ ಕೈಲಿ ಯೇನು ಇದ್ದಾತು ?..." ಎಂದು ತನ್ನ ವಯಸ್ಸಿಗೆ ಮೀರಿದ ಮಾತನ್ನಾಡಿದಳು ದುರ್ಗಿ.

ಇದೇ ರೀತಿಯಲ್ಲಿ ಮಾತು ಸಾಗಿದಂತೆ ಓಕುಳಿ ಕೊಳ ಸಮೀಪಿಸಿತು. ಆ ಯುವತಿಯರೆಲ್ಲರೂ ಕಳಶಗಳಲ್ಲಿ ತಾವು ಹೊತ್ತು ತಂದ ಜಲವನ್ನು ಕೊಳದೊಳಗೆ ಸುರಿದರು.

ಇಷ್ಟು ಹೊತ್ತಿಗಾಗಲೇ ಊರಿನ ಯುವಕರು ತಮ್ಮ ತಮ್ಮ ಎತ್ತು ಗಾಡಿಗಳನ್ನು ಸಿಂಗರಿಸಿಕೊಂಡು ಕೆರೆಯಿಂದ ನೀರು ಹೊಡೆದು ತರುತ್ತಿದ್ದರು. ಹಾಗೆ ಹೊಡೆದು ತರುತ್ತಿದ್ದವರಲ್ಲಿ ಸುಬ್ಬರಾಯಿಯೂ ಒಬ್ಬ. ತನ್ನ ಮಾವನ ಪರವಾಗಿ ತನ್ನ ಎತ್ತುಗಾಡಿಯನ್ನೇ ಹೂಡಿಕೊಂಡು ಹೊರಟಿದ್ದ ಆತ. ಎತ್ತುಗಳನ್ನು ದಪ್ಪ ಗೆಜ್ಜೆಗಳಿಂದಲೂ ಹೂಮಾಲೆಗಳಿಂದಲೂ

ಅಲಂಕರಿಸಿ ತನ್ನ ತಲೆಗೆ ರೇಷ್ಮೆ ವಸ್ತ್ರ ಸುತ್ತಿ ಬೆಳಗಿನ ಬಿಸಿಲಿನಲ್ಲಿ ಕಿವಿಗೆ ಹಾಕಿದ್ದ 'ಹತ್ತಕಡಕು' ಫಳಾರ್ ಎಂದು ಹೊಳೆಯುತ್ತಿರಲು ಶೀವಿಯಿಂದ ಹಗ್ಗವನ್ನು ಹಿಡಿದು 'ಹುಚ್-ಹುಚ್' ಎಂದು ಎತ್ತುಗಳ ನಡೆಯನ್ನು ತ್ವರೆಗೊಳಿಸಲು ಯತ್ನಿಸುತ್ತಿದ್ದ. ಗಾಡಿ ಹೊಡೆಯುವವರಲ್ಲಿ, ಈ ಸಂದರ್ಭದಲ್ಲಿ 'ನನ್ನ ಗಾಡಿ ಮೊದಲು ಹೋಗಿ ಓಕುಳಿ ಕೊಳದೊಳಕ್ಕೆ ಹೋಗಿ ಸುರಿಯಬೇಕು' ಎಂಬ ಹಿರಿಯಾಸೆ. ಈ ಬಾರಿಯೂ ಆ ಪೈಪೋಟಿ ತಪ್ಪಿರಲಿಲ್ಲ. ಆದರೆ ಸುಬ್ಬರಾಯಿಯ ಎತ್ತುಗಳು ತಿಂದು 'ಖುವತ್ತಾಗಿ' ಇದ್ದವು. ಪುಟ್ಟ, ಮರಿ, ಮುಂತಾದ ಕಲ್ಲಹಳ್ಳಿಯ 'ಕುಳ'ಗಳು ಎಷ್ಟೇ ಪ್ರಯತ್ನಪಟ್ಟರೂ ಸುಬ್ಬರಾಯಿಯೇ ಜಯಶೀಲನಾದನು.

ಓಕುಳಿಯ ಕೊಳವನ್ನು ಹೀಗೆ ತುಂಬುತ್ತಿರುವಂತೆ, ಇತ್ತ ಗುಡಿಗಳಿಂದ ಮಾದೇಶ್ವರ ಬಸವೇಶ್ವರ ಈ ದೇವರುಗಳ ಉತ್ಸವ ಮೂರ್ತಿಗಳನ್ನು ವಾದ್ಯ, ನರ್ತನ ಸಮೇತ ತಂದು ಶೃಂಗಾರಪೂರ್ಣವಾದ ಕುರ್ಜಿನೊಳಗೆ ಕೂರಿಸಿದರು ಜನ.

ಓಕುಳಿ ಕೊಳ ತುಂಬಿ, ದೇವರುಗಳನ್ನು ಕುರ್ಜಿಯ ಪೀಠದ ಮೇಲೆ ಕುಳ್ಳಿರಿಸಿ ಅಲಂಕಾರ ಮುಗಿಯಿತೆಂದರೆ ಓಕುಳಿ ಹಬ್ಬದ ಪೂಜೆಯಲ್ಲಿ ಒಂದು ಘಟ್ಟ ಮುಗಿಯಿತೆನ್ನಬೇಕು. ಆ ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗಿ ಊಟ ಮಾಡಿದರು.

ಪುನಃ ಮಧ್ಯಾಹ್ನ ಮೂರು ಅಥವಾ ನಾಲ್ಕು ಗಂಟೆಯ ವೇಳೆಗೆ ನೆರೆ ಹಳ್ಳಿಗಳ ಬಂಧು ಬಳಗದೊಡನೆ ಎಲ್ಲರೂ ಕುರ್ಜಿನ ಬಳಿ ಸೇರಿದರು.

ಸಿಸ್ತು ಮಾಡಿಕೊಂಡ ಹೆಂಗಸರು, ಮಕ್ಕಳು ಒಂದು ಕಡೆ ಪ್ರೇಕ್ಷಕರಾಗಿ ನೋಡುತ್ತ ಕುಳಿತರು. ಗಂಡಸರು-ತೀರ ವೃದ್ಧರನ್ನು ಬಿಟ್ಟು ಇತರರೆಲರು ಬಲಗೈಗೆ 'ಅಂಡೆ' ಕಟ್ಟಿಕೊಂಡರು.

'ಅಂಡೆ' ಎಂದರೆ ಎತ್ತಿನ ಕೊಂಬು. ಅದರ ಒಂದು ಪಾರ್ಶ್ವವನ್ನು ಚರ್ಮದಲ್ಲೋ ಬಟ್ಟೆಯಲ್ಲೋ ಮುಚ್ಚಿ ಅನಂತರ ಹುರಿ ಹಾಕಿ ಕಟ್ಟುತ್ತಾರೆ. ಒಳಹಸ್ತಕ್ಕೆ ಚರ್ಮದ ಅಥವ ಬಟ್ಟೆಯ ಬಾಯಿ ಇರುವಂತೆ ನೇರವಾಗಿ ಬಿಗಿಯುತ್ತಾರೆ. ಆ ಬಳಿಕ ಎಡಗೈಯಲ್ಲಿ ಚೆಂಬು ಹಿಡಿದು ಓಕುಳಿ ಕೊಳಕ್ಕೆ ಧಾವಿಸಿ, ಚೆಂಬಿನಿಂದ ನೀರು ಮೊಗೆದು ಅಂಡೆಗೆ ತುಂಬಿಕೊಳ್ಳುತ್ತಾರೆ. ಹಾಗೆ ಅಂಡೆಯಲ್ಲಿ ತುಂಬಿದ ನೀರಿನಿಂದ ಒಬ್ಬರಿಗೊಬ್ಬರು ಎರಚಾಡುತ್ತಾರೆ.

ಈ ಬಾರಿಯ ಓಕುಳಿಯನ್ನು ನೋಡಲು ಪಾರ್ವತಮ್ಮನಂತೂ ಬರುವಂತೆಯೇ ಇರಲಿಲ್ಲ. ವಿಷಕಂಠಯ್ಯನ ಮನೆಯಿಂದ ನರಸಮ್ಮ, ಚೆಲುವಮ್ಮ, ದುರ್ಗಿ ಮೊದಲಾದ ಹೆಂಗಸರು ಹೊರಬಿದ್ದರು. ಮಂಗಳೆಯನ್ನು ಎಷ್ಟೇ ಬಲಾತ್ಕರಿಸಿದರೂ ಅವಳು ಬರಲು ನಿರಾಕರಿಸಿದ್ದಳು.

ಗಂಡಸರ ಪೈಕಿ ವಿಷಕಂಠಯ್ಯ ಅಂಡೆ ಕಟ್ಟದಿದ್ದರೂ ಸುಬ್ಬರಾಯಿ, ಬಸವಾಚಾರಿ ಇಬ್ಬರೂ ಅದನ್ನು ಬಲ ಹಸ್ತಕ್ಕೆ ಬಿಗಿದು ರಂಗಕ್ಕೆ ಇಳಿದಿದ್ದರು. ನಟರಾಜ ಮಾತ್ರ "ನಾನು

ಅಕ್ಕನ್ನ ನೋಡಿಕೊಂಡು ಮನೆಯಲ್ಲೇ ಇರ್ತೀನಿ" ಎಂದುಬಿಟ್ಟಿದ್ದ. ಆಗ ನರಸಮ್ಮನಿಗೂ ಸುಬ್ಬರಾಯಿಗೂ ಅವನ ವಿಷಯದಲ್ಲಿ ಸಂಶಯ ಮೂಡಿದ್ದಿತು. ಆದರೆ ನಟರಾಜನ ಗೆಳೆಯರಾದ ಮರಿ, ಪುಟ್ಟ ಇಬ್ಬರೂ ಕುರ್ಜಿನ ಬಳಿ ಎಲ್ಲಿಯೂ ನಟರಾಜ ಕಾಣದಿರಲು ಅವನಲ್ಲಿಗೆ ಓಡಿ ಬಂದು "ನೀ ಬರದೇ ಹೋದ್ರೆ ನಾವೂ ಹೋಗಾಕ್ಕಿಲ್ಲ" ಎಂದು ಹಟಹಿಡಿದರು. ಮೈತ್ರಿಗೆ ಕಟ್ಟುಬಿದ್ದ ನಟರಾಜ ಬರಲೇಬೇಕಾದರೂ ಕೈಗೆ ಅಂಡೆ ಕಟ್ಟಲು ಮಾತ್ರ ಆತ ಒಡಂಬಡಲಿಲ್ಲ. ಅವನು ಪ್ರೇಕ್ಷಕರಲ್ಲಿ ತಾನೂ ಒಬ್ಬನಾಗಿ ಸುಮ್ಮನೆ, ಯಾವ ಉತ್ಸಾಹವೂ ಇಲ್ಲದೆ ನೋಡುತ್ತ ಕುಳಿತುಕೊಂಡನು.

ಬಯಲಿನ ರಂಗಕ್ಕೆ ಎಲ್ಲರಂತೆ ಇಳಿದು ಅಂಡೆ ಕಟ್ಟಿಕೊಂಡ ಪುಟ್ಟ, ಮರಿ ಇಬ್ಬರಿಗೂ ಸುಬ್ಬರಾಯಿಯ ಮೇಲೆಯೇ ಕಣ್ಣು! ತಮ್ಮ ನಟರಾಜನಿಗೆಂದು ಬೆಳೆದ ಮಂಗಳೆಯನ್ನು ಸುಬ್ಬರಾಯಿ ಹದ್ದಿನಂತೆ ಮಧ್ಯ ಬಂದು ಹಾರಿಸಿಕೊಂಡನೆಂದು ರೋಷ ಅವರಿಗೆ. ಅದರ ಮೇಲೆ ಸುಬ್ಬರಾಯಿ, ತಲೆಯೇ ನಿಲ್ಲದೆ ನಡೆದುಕೊಳ್ಳುತ್ತಿದ್ದ ರೀತಿ ಅವರ ರೋಷದ ಉರಿಗೆ ತುಪ್ಪ ಹುಯ್ಯುತ್ತಿತ್ತು. ಆ ಬೆಳಿಗ್ಗೆ ಬೇರೆ ಸುಬ್ಬರಾಯಿ ಕೆರೆಯಿಂದ ಗಾಡಿಯಲ್ಲಿ ನೀರು ತರುವಾಗ ಜೂಜಿನಲ್ಲಿ ಅವರ ಮೇಲೆ ಗೆದ್ದವನು ಹೆಮ್ಮೆಯಿಂದ "ಮುಕ್ಕಗಳು--ನನ್ನ ಮ್ಯಾಗೆ ಜೂಜಾಡಾಕೆ ಬಂದಿದ್ವಲ್ಲಾ ?... ಯೇನು ಹೇಳ್ಲಿ ಇವರ ಸಕುತೀಯಾ ?" ಎಂದು ತಿರಸ್ಕಾರವಾಗಿ ನಗುತ್ತಾ ನುಡಿದಿದ್ದ. ಈಗಲೂ ಅಂಡೆಯಿಂದ ಆತ ಎಲ್ಲರ ಮೇಲೂ ನೀರೆರಚುತ್ತಿದ್ದ ಠೀವಿಯಲ್ಲಿ 'ಎಲ್ಲರಿಗಿಂತ ನಾನು ಹೆಚ್ಚಿನವ' ಎಂಬ ಅಹಂಕಾರ ಒಡೆದು ತೋರುತ್ತಿತ್ತು.

ಮರಿ, ಪುಟ್ಟ ಇಬ್ಬರೂ ಸುಬ್ಬರಾಯಿಯ ಸೊಕ್ಕನ್ನಿಳಿಸಬೇಕೆಂದು ಮಾತಾಡಿಕೊಂಡರು. ಇತರರನ್ನು ಬಿಟ್ಟು ಅವನನ್ನೇ ತಮ್ಮಿಬ್ಬರ ಅಂಡೆಯ ನೀರಿನಿಂದ ಪ್ರಹರಿಸಲು ಆರಂಭಿಸಿದರು. ಒಂದು ಒಂದೂವರೆ ಗಂಟೆ ಕಳೆಯುವುದರೊಳಗೆ ಸುಬ್ಬರಾಯಿ ಸುಸ್ತಾಗಿ ಕುಳಿತುಕೊಂಡುಬಿಟ್ಟನು. ಹೊಸಮದುವೆ ಗಂಡಿಗೆ ಆದ ಈ ಅವಸ್ಥೆಯನ್ನು ಕಂಡು ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಗಹಗಹಿಸಿ ನಕ್ಕರು !...

ಓಕುಳಿ ಹೀಗೆ ರಭಸದಿಂದ ಸಾಗುತ್ತಿರಲು ಅದರ ಅಂಗವಾಗಿ ಇನ್ನೊಂದು 'ಆಟ'ದ ಪ್ರದರ್ಶನಕ್ಕೆ ಜನ ಕಾತರರಾಗಿ ನಿರೀಕ್ಷಿಸುತ್ತ ಕುಳಿತಿದ್ದರು.

ಕೆಲವು ನಿಮಿಷಗಳಲ್ಲಿ ಆ 'ಆಟ' ಆಡುವಾತನೂ ಬಂದನು... ಆತ ನಡುವಿಗೆ ಹರಕಲು ಚಾಪೆ ಸುತ್ತಿಕೊಂಡಿದ್ದ. ಮುಖಕ್ಕೆ ಮಸಿ, ಸುಣ್ಣ ಇವುಗಳಿಂದ ವಿಲಕ್ಷಣವಾಗಿ ಬರೆದುಕೊಂಡಿದ್ದ. ತಲೆಯ ಮೇಲೆ ನೀರು ತುಂಬಿದ ತೂತು ಮಡಿಕೆಯನ್ನು ಹೊತ್ತು, ನೀರೆಲ್ಲ ಮೈಮೇಲೆ ಸುರಿಯುತ್ತಿರಲು ಈ ವಿಚಿತ್ರ ಪುರುಷ ಹೆಂಗಸರ ಕಡೆ, ಮಕ್ಕಳ ಕಡೆ ಮುಖಮಾಡಿ ಹಲ್ಲು

ಕಿರಿದು, ನಾಲಗೆ ಹೊರಚಾಚಿದ. ಚಿಕ್ಕ ಮಕ್ಕಳು ಭಯದಿಂದ ಕಿರಿಚಿಕೊಂಡರು. ಆಗ ಆ ಮಕ್ಕಳ ತಾಯಂದಿರು "ಸುಮ್ಮಕಿರಾ... ಇದೊಂದು ಆಟ ಕನಾ... ಇದಕ್ಯಾಕಾ ಈಟೊಂದು ಅಂಜಿಕೊಂಡೀ ?" ಎಂದು ಅವರನ್ನು ಸಮಾಧಾನಪಡಿಸುತ್ತಿದ್ದರು. ಅಷ್ಟರಲ್ಲಿ ಆ ವ್ಯಕ್ತಿ ಇದ್ದಕ್ಕಿದ್ದಂತೆಯೇ ನೆಲದ ಮೇಲೆ ಕುಸಿದುಬಿದ್ದು ಸತ್ತೇ ಹೋದವನಂತೆ ನಟಿಸುತ್ತ ಮಲಗಿಕೊಂಡನು. ಜನ ಸೇರಿ ಅವನ 'ಹೆಣ'ದ ಕೈಕಾಲು 'ಮುರಿದು' ಒಂದೆರಡು ಹೆಜ್ಜೆ ಹೊತ್ತುಕೊಂಡು ಹೋಗುವುದರಲ್ಲಿ ಆತ "ಇದ್ಯಾಕರಲಾ ಅಪ್ಪಯ್ಯ... ನನ್ನ ಹಿಂಗೆ ಹೊತ್ತುಕೊಂಡು ಹೋದೀರಿ ?... ನಾ ಯೇನ ಹೆಣ ಕೆಟ್ಟುಹೋದೆನಾ ?..." ಎಂದು ಎದೆ ಬಡಿದುಕೊಳ್ಳುತ್ತಾ ಎದ್ದು ಆ ಜನದಿಂದ ಬಿಡಿಸಿಕೊಂಡು ಓಡಿಬಿಟ್ಟನು. ನೆರೆದ ಹಳ್ಳಿಯ ಜನಸ್ತೋಮವೆಲ್ಲ ಬಿದ್ದು ಬಿದ್ದು ನಗುತ್ತಿದ್ದರು.

ಆ ದೃಶ್ಯ ನಟರಾಜನಿಗೆ ಮಾತ್ರ ಅತ್ಯಂತ ದುಃಖಕರವಾಗಿತ್ತು. ಬಾಲ್ಯದ ದಿನಗಳು ಅವನ ಸ್ಮೃತಿಪಥದಲ್ಲಿ ಹಾದುಹೋದವು. ಚಿಕ್ಕಂದಿನಲ್ಲಿ ಮಂಗಳೆಯೂ ತಾನೂ ಈ 'ಆಟ'ವನ್ನು ನೋಡುವಾಗ ಹೆದರಿ ಹೆದರಿ, ಮಂಗಳೆ ಹೇಗೆ ತನ್ನನ್ನೆ ಅಪ್ಪುತ್ತಿದ್ದಳು. ಆ ಬಳಿಕ ಸತ್ತೇಹೋದವನಂತೆ ನಟಿಸಿದ ವ್ಯಕ್ತಿ ಇತರರು ಬಂದು ಅವನನ್ನು ಹೆಣದಂತೆ ಎತ್ತಿಕೊಂಡು ಹೋಗುವಾಗ ಸರಕ್ಕನೆ ಎದ್ದು ಬಾಯಿ ಬಡಿದುಕೊಳ್ಳುತ್ತಾ ಆತ ಓಡಿಹೋಗುವುದನ್ನು ಕಂಡು ಮಂಗಳೆಯೂ ತಾನೂ ಅದೆಷ್ಟು ಆನಂದದಿಂದ ಉಬ್ಬಿದ್ದರು–ಈ ಎಲ್ಲ ವಿಚಾರ ನಟರಾಜನ ಹೃದಯವನ್ನು ಹಿಸುಗಿದವು... 'ಆ ಸುಖದ ದಿನಗಳು ಇನ್ನು ಬರಲಾರವು' ಎಂದು ಅತೀವ ಯಾತನೆಯಿಂದ ಅವನು ಯೋಚಿಸಿದಂತೆ ಅವನ ಕಣ್ಣುಗಳಲ್ಲಿ ನೀರೂರಿದವು. ಆ ಸ್ಥಳದಿಂದೆದ್ದು ಹೋಗಿಬಿಡಬೇಕೆಂದೆನಿಸಿತು ಅವನಿಗೆ. ಆದರೆ ಎಲ್ಲರೂ ಸಂಭ್ರಮದಿಂದ ಸಂತೋಷಪಡುತ್ತಿರುವಾಗ ತಾನೊಬ್ಬ ಮುಖಚಿಕ್ಕದು ಮಾಡಿಕೊಂಡು ಎದ್ದು ಹೋದರೆ ಅದರಿಂದ ಇತರರ ಸುಖಕ್ಕೆ ತಣ್ಣೀರೆರಚಿದಂತಾಗುತ್ತದಲ್ಲಾ ಎಂದು ಬಗೆದು ಸುಮ್ಮನಾಗಿ ತಾನಿದ್ದಲ್ಲಿಯೇ ನಿಸ್ಸಹಾಯಕನಾಗಿ ಕುಳಿತುಕೊಂಡನು.

ಅತ್ತ ಓಕುಳಿಯ ಜೊತೆಗೆ ನಾನಾ ರೀತಿಯ ಕೂಗಾಟ. ಕಿರಿಚಾಟಗಳಾದ ಬಳಿಕ, ಸುಮಾರು ಆರು ಗಂಟೆಯ ಹೊತ್ತಿಗೆ ದೇವರಿಗೆ ಮಂಗಳಾರತಿ ಮಾಡಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಇಲ್ಲಿಗೆ ಓಕುಳಿ ಹಬ್ಬದ ಇನ್ನೊಂದು ಅಂಕ ಮುಗಿದಂತಾಯಿತು.

ಓಕುಳಿ ಆಡಿದ ಜನರು ಬಿಸಿನೀರಿನಿಂದ ಸ್ನಾನ ಮಾಡುವುದು ವಾಡಿಕೆ. ಅವರು ಯಾವ ಮನೆಯಲ್ಲಿ ಬೇಕಾದರೂ ಹೋಗಿ ಸ್ನಾನ ಮಾಡಬಹುದು. ಓಕುಳಿ ಸಾಮೂಹಿಕ ಕಾರ್ಯ; ಸರ್ವರ ಮನವನ್ನೂ ಮುದಗೊಳಿಸುವ ಕಾಯಕ. ಆದ್ದರಿಂದ ಎಲ್ಲೆಲ್ಲೂ ಅವರಿಗೆ ಆದರ, ಮನ್ನಣೆಗಳನ್ನು ತೋರುತ್ತಾರೆ.

ಆ ರಾತ್ರಿ ಎಲ್ಲರ ಮನೆಗಳಲ್ಲೂ ಹಬ್ಬದೂಟ !

ಅನಂತರ ಮತ್ತೆ ಕುರ್ಜಿನ ಬಳಿ ನೆರೆದರು ಜನ. ಅಲ್ಲಿ ಬೆಳಕಿಗಾಗಿ ಬೆಂಕಿ ಹತ್ತಿಸಿ ಉರಿಸುತ್ತಿರುತ್ತಾನೆ ಊರ ಕುಳವಾಡಿ (ಈಗ ಹೊಲೆಯರವನು). ಈ ಸಂದರ್ಭದಲ್ಲಿ ನೆರೆದ ಜನ ತಮ್ಮ ತಮ್ಮ ಶಕ್ತ್ಯಾನುಸಾರ ತಮ್ಮಲ್ಲಿರುವ ಕಲೆಗಳನ್ನು ಪ್ರದರ್ಶಿಸುವುದು ವಾಡಿಕೆ. ಕೋಲಾಟ, ಕುಣಿದಾಟ ಎಲ್ಲಾ ನಡೆಯುವುದು. ಸ್ವಲ್ಪ ಹೊತ್ತು ಬಿಟ್ಟು ಬಿಟ್ಟು ರಾತ್ರಿಯೆಲ್ಲಾ ನಡೆಯುವ ಆ ಕುಣಿತವನ್ನು "ರಂಗದ ಕುಣಿತ" ಎಂದು ಕರೆಯುತ್ತಾರೆ. ಯಾರು ಬೇಕಾದರೂ ಅಲ್ಲಿ ತಮ್ಮ ವಿದ್ಯೆಯನ್ನು, ತಮ್ಮ ಪ್ರತಿಭೆಯನ್ನು, ತಮ್ಮ ಸಾಮರ್ಥ್ಯವನ್ನು ತೋರಲು ಅವಕಾಶವಿದೆ. ಯಾವ ಕಲೆಯೂ ಇಲ್ಲದವರು ತಮ್ಮವೇ ಆದ ಜನರ ಕಲಾಪ್ರದರ್ಶನವನ್ನು ವೀಕ್ಷಿಸಿ ಆನಂದಿಸಬಹುದು. ಅಂತೂ ಇದು ನಮ್ಮ ಹಳ್ಳಿಗಳಲ್ಲಿ ನಡೆಯುವ ಒಂದು ರೀತಿಯ ವಿವಿಧ ವಿನೋದಾವಳಿ ಎನ್ನಬಹುದು...."

ಆ ರಾತ್ರಿ ಸುಬ್ಬರಾಯಿ ಈ ಸಮಾರಂಭದಲ್ಲಿ ಭಾಗವಹಿಸುವಂತಿರಲಿಲ್ಲ. ಅದೇ ಮಧ್ಯಾಹ್ನ ಪುಟ್ಟ, ಮರಿ ಇಬ್ಬರೂ ಅಂಡೆಯಿಂದ ನೀರೆರಚಿದ ಬಿರುಸಿಗೆ ಅವನ ಬೆನ್ನು ಬಾತುಕೊಂಡಿದ್ದಿತು. ಅದರಲ್ಲೂ ಅವನಿಗೆ ಆ ಹಳ್ಳಿಯ ಪ್ರದರ್ಶನವನ್ನು ನೋಡಬೇಕೆಂಬ ಹಂಬಲ !... ತನ್ನ ಅಪೇಕ್ಷೆಯನ್ನು ನರಸಮ್ಮನಲ್ಲಿ ಹೇಳಿಕೊಂಡ–

"ನಾನೂ ಮಂತೆ ಕುರ್ಜಿನ ತಾವಿಕೆ ಓಗಬೇಕೂಂತ ಇವ್ನಿ... ಒಸಿ ಉಪ್ಪಿನ ಸಾಕ ಕೊಟ್ಟು ಬುಡಕ್ಕ ಬೆನ್ನಿಗೆ..."

ನರಸಮ್ಮ ಅವನ ಬೆನ್ನಿಗೆ ಉಪ್ಪಿನ ಶಾಕ ಕೊಡುತ್ತ, "ನಾ ಮೊದ್ಲೇ ಏಳನಿಲ್ಲವಾ ನಿಂಗೇ?... ಇನ್ನೂ ಒಸ ಮದ್ವೆ ಗಂಡು... ಅರಿಶಿನದ ಎಣ್ಣೆ ಮಯ್ಯಿ... ನೀರಿಗಿಳೀ ಬ್ಯಾಡ ಅಂತ?–" ಎಂದಳು.

"ಯೇನಾದಾತು ಬುಡಕ್ಕ... ಆ ಬೊಡ್ಡಿ ಮಕ್ಕಳು ಜಿದ್ದಿನಿಂದ ಮಾಡಿದ ಕೆಲಸ !..."

"ನಾ ಯೇಳೋದು ಕೇಳು... ನಾಳೆ ನಾಡದ್ದು ಊರಿಗೆ ಒಂಡಾವ. ಸುಮ್ಮಕೆ ಬೆಚ್ಚಗ್ಲೊದ್ದು ಮನಕ್ಕೊ... ನ್ವಾಟವೂ ಬ್ಯಾಡ, ಯೇನೂ ಬ್ಯಾಡ..."

"ಇಲ್ಲ ಕನಕ್ಕ... ಬೋ ಚೆಂದಾಗಿರ್ತದೆ ಇದು ನಾ ನೋಡನೇಬೇಕು."

ಅಷ್ಟರಲ್ಲಿ ಮರಿನಿಂಗಿ ಬಂದಳು.

ಎಂದಿನಂತೆ ಎಲೆ ಅಡಿಕೆ ಕೇಳಿ ಈಸುಕೊಂಡು ಅಗಿಯುತ್ತ, "ಇದೇನರವ್ವ ಈಟು ತಡ ಮಾಡ್ತಾ ಇದ್ದೀರಿ ?... ಜಟಪಟನೆ ಒರಡಿರವ್ವಾ, ಒತ್ತಾಯ್ತದೆ. ತಮಾಸಿ ಇನ್ನ್ಯಾನ ಸುರು ಆಯಬುಡ್ತದೆ..." ಎಂದು ಬೇಗ ಹೊರಡಲೆಂದು ತ್ವರೆಗೊಳಿಸಿದಳು.

"...ನಮ್ಮ ಸುಬ್ರಾಯಿಗೆ ಸಾಕಾ ಕೊಡ್ತಾ ಇರೋದು ಕಾಣನಿಲ್ವಾ?... ಇದು ಮುಗಿಸಿ ಬತ್ತೀವಿ ತಾಳು... ಓಟರಲ್ಲಿ ಯೇನು ಸೂರೋದಾತು ?..."– ನನ್ನ ಮನೆ, ಇಲ್ಲಿ ಬಂದು ನನ್ನನ್ನು ಕರೆಯಲು ಇವಳು ಯಾರು ?– ಎನ್ನುವಂತಿತ್ತು ನರಸಮ್ಮನ ಮಾತು.

ಆ ಮಾತನ್ನು ಲಕ್ಷಿಸದೆ ಮರಿನಿಂಗಿ ಸುಬ್ಬರಾಯಿಯನ್ನುದ್ದೇಶಿಸಿ, "ಅವ್ವೀ !... ಯೇನು ಮೊಗಾ ಇದು–ಬೆನ್ನೆಲ್ಲ ಯಾವತ್ತೂ ಕಟ್ಟಿಗೇಲಿ ಬಡಿದಂಗಾಗದೆ ?" ಎಂದು ಕೇಳಿದಳು ನಗುತ್ತ. "ಓಕಳಿ ನೀರ್ನಿಂದ ಈಪಾಟಿ ಗಾಯ ಮಾಡಸಿಕೊಂಡೋರ್ನ ನಾ ಈತಾವಿಗಂಟ ಕಂಡೇ ಇರ್ನಿಲ್ಲ !... ಇದೂ ಉಂಟೇನಾ ಚೋಜಿಗ ?...ಈಟಕ್ಕೇ ಇಂಗಾಗೋಯ್ತಲ್ಲಾ ಇನ್ನು ನಿನ್ನ ರಣರಂಗಕ್ಕೇನಾರ ಕಳಸಿಗಿಳಿಸಿಬುಟ್ಟಿದ್ರೇ–ಯೇನಾ ಗತಿ ?..." ಎಂದಳು.

ಮರಿನಿಂಗಿಯ ಮಾತುಗಳನ್ನು ಕೇಳಿ ಸುಬ್ಬರಾಯಿ ಕಣ್ಣುಗಳನ್ನು ಕೋಪದಿಂದ ಕೆಂಪಗೆ ಮಾಡಿಕೊಂಡನೇ ಹೊರತು, ಆ ಮಾತುಗಳಿಗೆ ತಕ್ಕಂತೆ ಉತ್ತರ ಕೊಡುವ ವಿಧಾನ ಅವನಿಗೆ ತಿಳಿಯದೆ ಹೋಯಿತು.

ನರಸಮ್ಮ ಸಿಡುಕಿನಿಂದ, "ಆಟಗುಳಿ ಆಡೋ ಆಗ ಯೆಲ್ಲೋ ಹಂಗಾದ್ರೆ ನನ್ನ ತಮ್ಮಾ ಕಳಪೆ ಮಾಡಬ್ಯಾಡ ನೀನು...ಹಮ್ಮಾರ ಅವ್ನೆ ಉಡುಗ..." ಎಂದು ತನ್ನ ತಮ್ಮನ ಧೈರ್ಯವನ್ನು ಎತ್ತಿ ಆಡಿದಳು.

"ಯೇನು ಹಮ್ಮಾರನೊ ತಗಿ..." ಮರಿನಿಂಗಿಯ ತುದಿನಾಲಗೆಯವರೆಗೂ ಬಂದ ಮಾತು ಹಾಗೆಯೇ ಗೋಪ್ಯವಾಗಿ ಹಿಂದಿರುಗಿತು. 'ನರಸಮ್ಮನ್ನ ಮೊದ್ಲೇ ಕೇಳೋ ಹಂಗಿರ್ನಿಲ್ಲ... ಈಗ ಮಂಗ್ಳೀಯ ತನ್ನ ತಮ್ಮನಿಗೆ ತಂದ ಮ್ಯಾಲಂತೂ ಅವಳ್ನ ಇಡಿದು ನಿಲ್ಲಿಸೋರೇ ಇಲ್ಲ... ನಾನೇ ಈ ಅಟ್ಟಿ ಒಡತಿ ಅನ್ನೋ ಹಂಗೆ ಆಡ್ತಾ ಅವಳೆ... ಈಗೇನಾ ನಾಗಜ್ಜಿ ಇದ್ದಾಳಾ ಇವಳ ಸೊಕ್ಕು ಮುರಿದು ಮೂಲೇಲಿ ಕೂರಿಸಾಕೆ... ಇಂಗಿರೋವಾಗ ನಾ ಸುಮ್ಮಕೆ ಮಾತಾಡಿ ತಾನೇ ಯೇನು ಸುಕ ?' ಎಂದು ತನಗೆ ತಾನೇ ಹೇಳಿಕೊಂಡಳು ಮರಿನಿಂಗಿ.

ಅಷ್ಟರಲ್ಲಿ ನರಸಮ್ಮ ತನ್ನ ತಮ್ಮನಿಗೆ ಉಪ್ಪಿನ ಶಾಖವನ್ನು ಕೊಟ್ಟು ಮುಗಿದಿತ್ತು.

ಎಲ್ಲರೂ ಕುರ್ಜಿನ ಬಳಿ ತಮಾಷೆ ನೋಡಲು ಹೊರಟುನಿಂತರು. ಪಾರ್ವತಮ್ಮನ ಜೊತೆಗೆ ಮಂಗಳೆಯೂ ಉಳಿಯುತ್ತಿರುವುದನ್ನು ಗಮನಿಸಿ ಮರಿನಿಂಗಿ, "ಇದೇನವ್ವಾ ಮಂಗ್ಳೀ...ಒಳ್ಳಿ ಮುದುಕಿ ಅಂಗೆ ಹಟ್ಟೀಲೆ ಉಳಿಕೊತ್ತಾ ಇದ್ದೀ? ಬಾವ್ವಾ ಹೋಗೂನಾ. ನನ್ನಂಥಾ ಮುದುಕೀರೂ ಹೊಂಟಿರೋವಾಗ ನಿನ್ನಂತಾ ಹರೇದ ಹೆಣ್ಣುಗಳು ಮನೇಲಿ ಕುಂತಿರೋದು ಚೆಂದವೇನಾ? ಅದ್ರಲ್ಲೂ ಹೊಸ ಮದ್ವೆ ಹೆಣ್ಣು ನೀನುs... ಬಾವ್ವಾ–

ಮದಿನದಾಗೂ ಬರ್ರಿಲ್ಲ ನೀನು... ಬಾವ್ವಾ ಹೊಗೂನಾ..." ಎಂದು ಆದರಪೂರ್ವಕ ಒತ್ತಾಯಪಡಿಸಿದಳು.

"ಇಲ್ಲ. ನಾ ಬರಲಾರೆ. ಅವ್ವ ಒಬ್ಬಳೇ ಆಗ್ತಾಳೆ" ಮಧ್ಯಾಹ್ನದ ನೆಪವನ್ನೇ ಮುಂದು ಮಾಡಿ ನುಡಿದಳು ಮಂಗಳೆ. ಯಾಕೆಂದರೆ ಅದು ಯಶಸ್ವಿಯಾಗಿತ್ತು.

"ನಾ ಇರ್ತೀನಂತೆ ಚಿಕ್ಕವ್ವನ ತಾವು...ನೀ ಓಗಿದ್ದು ಬಾವ್ವಾ ಮಂಗ್ಲೀ–ಮದಿನ್ನದಾಗೂ ಹೋಗ್ನಿಲ್ಲ ನೀನು..." ಎಂದು ಚೆಲುವಮ್ಮ ತಾನು ಉಳಿದುಕೊಂಡು ಮಂಗಳೆಯನ್ನು ಕಳುಹಿಸಿಕೊಡಲು ಪ್ರಯತ್ನಪಟ್ಟಳು.

"ಊ...ಮದಿನ್ನ ಚೆಲುವಿ ಹೆಂಗೂ ಆಟ ನೋಡವ್ಳೆ. ನೀ ಬಾ ಸುಮ್ಮಕೆ–ಪಾರತೀನ ಆ ತನಕ ನೋಡಿಕೊತ್ತಾಳಂತೆ ಚೆಲುವಿ... ಮದ್ವೆ ಹೆಣ್ಣು ನೀ ಬಂದರೆ ಊರೆಲ್ಲ ಸಂತೋಷದಿಂದ ಹಿಗ್ಗಿ ಹೆಗ್ಗೋಡು ಆಯ್ತದೆ ಕನವ್ವಾ... ಬಾ" ಎಂದು ನರಸಮ್ಮನೂ ತುಂಬಿದ ಹೃದಯದಿಂದಲೇ ಆಹ್ವಾನಿಸಿದಳು.

ದಿಟ. ಮಂಗಳೆ ಬಂದರೆ ಊರಿನ ಜನರೆಲ್ಲ ಸಂತೋಷಪಡುತ್ತಾರೆ. ಆದರೆ ಸಂತೋಷವೆನ್ನುವುದು ಮಂಗಳೆಗೆ ಮಾತ್ರ ಇನ್ನು ಮುಂದೆ ಕನಸು ಕಂಡಂತೆ ! ಅದನ್ನು ನೆನೆದೇ ಮಂಗಳೆಯ ನಯನ ಅಶ್ರುಪೂರಿತವಾದವು. ಒತ್ತರಿಸಿ ಬರುವ ದುಃಖವನ್ನು ಬಹು ಪ್ರಯಾಸದಿಂದ ತಡೆದುಕೊಳ್ಳುತ್ತಾ, "ಇಲ್ಲ, ನೀವೇ ಹೋಗಿದ್ದು ಬನ್ನಿ ಅಕ್ಕ. ನಾನೇನು ವರ್ಷಾ ವರ್ಷ ನೋಡುತ್ತಲೇ ಇದ್ದೀನಿ... ನೀವು ತಾನೇ ಅಪರೂಪದ ಹಂಗೆ ಬಂದಿರೋದು" ಎಂದು ಮತ್ತೆ ತಪ್ಪಿಸಿಕೊಳ್ಳಲು ಹವಣಿಸಿದಳು.

"ಚೆಲುವವ್ವಾ... ಯಾಕ್ರವ್ವಾ ಹಂಗೆ ಚರ್ಚೆ ಮಾಡೀರಿ, ಬ್ಯಾಡದೇ ಇದ್ದೋಳೊಂದಿಗೆ ? ನೀವು ಸುಮ್ಮಕೆ ಓಗಿದ್ದು ಬನ್ನಿ. ಅವಳಿಲ್ಲಿ ನನ್ನ ತಾವು ಇರ್ಲಿ" ಎಂದು ಪಾರ್ವತಮ್ಮನೇ ಮಗಳು ಅನುಭವಿಸುತ್ತಿದ್ದ ಸಂಕಟದಿಂದ ಅವಳನ್ನು ಪಾರು ಮಾಡಿದಳು.

ವಿಧಿಯಿಲ್ಲದೆ ಹೊಸ ಮದುವೆಯ ಹೆಣ್ಣನ್ನು ಆ ರಾತ್ರಿಯೂ ಮನೆಯಲ್ಲಿ ಬಿಟ್ಟೇ ಇತರರು ಕುರ್ಜಿನ ಬಳಿಗೆ ನಡೆದರು.

ಕುಳವಾಡಿ ತಾನು ಹೊತ್ತಿಸಿದ ಬೆಂಕಿಯ ಮುಂದೆ ತಮ್ಮಟೆ ಬಾರಿಸಿಕೊಂಡು ಕುಣಿಯುತ್ತಿದ್ದ–ಆಗಲೇ ? ಅವನ ಜೊತೆಗೆ ಇನ್ನೂ ಕೆಲ ಹೊಲೆಯರು ಸೇರಿ ಕೊಂಬು ಕಹಳೆಗಳನ್ನೂದುತ್ತಿದ್ದರು. ಮತ್ತೆ ಕೆಲವರು ತಮ್ಮಟೆ ಬಾರಿಸುತ್ತಿದ್ದರು. ಬಹುಮಂದಿ ಜನರೂ ಬಂದು ನೆರೆದಿದ್ದರು.

ಇವರಂತೆ ಒಬ್ಬಿಬ್ಬರು ಸಾವಧಾನವಾಗಿ ಬರುತ್ತಿದ್ದುದು ಇವರ ಕಣ್ಣಿಗೆ ಬಿದ್ದಿತು.

"ಪರವಾಯಿಲ್ಲ ಕನಾ ತಡಮಾಡಿ ಬರೋದರಲ್ಲಿ ನಮ್ಮೂ ಮೀರಿಸಿದೋರು ಅವರೆ! ನಾ ಯಾನೋ ಅಂತಿದ್ದಿ..." ಎಂದು ನಗೆಯಾಡಿದಳು ಮರಿನಿಂಗಿ.

ಎಲ್ಲರೂ ಹೋಗಿ ಕುಳಿತುಕೊಂಡರು.

ಬರುವವರೆಲ್ಲ ಬಂದ ಮೇಲೆ 'ತಮಾಷೆ' ಆರಂಭವಾಯಿತು.

ಮೊದಲಿಗೆ 'ಕೋಲು ಕೋಲನ್ನ ಕೋಲೆ' ಎಂದು ಒಂದು ಯುವಕರ ತಂಡ ಕೋಲು ಹಾಕತೊಡಗಿತು.

ಕೋಲಾಟ ಮುಗಿದ ಬಳಿಕ ಒಬ್ಬ ಬುಡಬುಡಿಕೆ ವೇಷ ಹಾಕಿಕೊಂಡು ಬಂದವನು ಹೆಂಗಸರ ಗುಂಪಿನ ಬಳಿ ಸಾರಿ, "ಶುಭವಾಗುತ್ತೈತೆ ತಾಯಿ, ಶುಭವಾಗುತ್ತೈತೆ..." ಎನ್ನುತ್ತಾ ಬುಡುಬುಡಕೆಯನ್ನಲ್ಲಾಡಿಸಿ 'ಢರ್-ರ್-ರ್ರಟ್' ಎಂದು ಸದ್ದುಮಾಡಿ "ರಾತ್ರಿ ಆ ವೀಶಾನ್ಯದ ಮೂಲೇಲಿ ಒಂದು ಹಾಲು ಹಕ್ಕಿ ನುಡೀತು ಅಮ್ಮಣ್ಣಿ..." -ಡ-ರ್-ರ್-ರಟ್- "ಬಿಳೀ ಹೆಣ್ಣೀಗೆ ಕರೀ ಗಂಡು...ಕರೀ ಹೆಣ್ಣೀಗೆ ಬಿಳಿ ಗಂಡ-ಮದ್ವೆ ಆದೋರಿಗೆ ಮದ್ವೆ-ಮಕ್ಕಳಾದೋರಿಗೇ ಮಕ್ಕಳು...ಜಯವಾಗುತ್ತೈತೆ ಅಮ್ಮಣ್ಣಿ ಜಯವಾಗುತ್ತೈತೆ..." -ಎಂದಾಗ ಸ್ತ್ರೀ ವೃಂದ ಒಬ್ಬರನ್ನೊಬ್ಬರು ತಿವಿದುಕೊಂಡು ಕಿಲಕಿಲನೆ ನಕ್ಕರು. ಮುದುಕಿ ಮರಿನಿಂಗಿ "ಹೈಲುಗಾರ ಮುಕ್ಕನಿಗೆ ಐದಾರು ಕಚ್ಚೆ ಪಾವುಡೆ ಅಂತ ಈ ಆಳಾದ್ದು ಯಾನ್ಯಾನೊ ಯೋಳ್ತದೆ...ಮದ್ವೆ ಆದಾರಿಗೆ ಮದ್ವೆ-ಮಕ್ಕಳಾದಾರಿಗೆ ಮಕ್ಳು....ಒಸಿ ಸೋಟೀಗೆ ತಿವಿದು ಅಟ್ಟಿ ಮುಕ್ಕನ್ನ" ಎಂದು ಹುಸಿಸಿಟ್ಟಿನಿಂದ ನುಡಿದಾಗ ಸಮಸ್ತ ಸಭಿಕರಿಂದಲೂ ನಗು ಹಾಲು ಉಕ್ಕುವಂತೆ ಉಕ್ಕಿತು.

ಅನಂತರ ಒಬ್ಬ ಹಾವಾಡಿಗನ ವೇಷ ಹಾಕಿಕೊಂಡು ಪುಂಗಿ ಊದುತ್ತಾ ಬಂದ. ಮರಿನಿಂಗಿ ತಿರಸ್ಕಾರವಾಗಿ "ಇದೇನಾ ಇಲ್ಲಿ ಬಂದು ಇಂಗಾಡ್ತದೆ ಈ ಗಂಡು...? ಅಡವೀಗೆ ನಡೀಲಾ ಅಪ್ಪಯ್ಯ ಮಸ್ತಾಗಿ ಸಿಕ್ತಾವೆ ಹಾವು. ನನ್ನಂತಾ ಮುದುಕಿ ಮುಂದೆ ಪುಂಗಿ ಊದೆದ್ರೇನಾ ಸಿಕ್ತಾತು...?" ಎಂದು ಅಟಕಾಯಿಸಿದಳು.

ಆಮೇಲೆ ಒಬ್ಬ ದಾಸಯ್ಯನ ವೇಷ, ಒಬ್ಬ ಕಣಿ ಹೇಳುವ ಕೊರವಂಜಿಯ ಪಾತ್ರ, ಮತ್ತೊಬ್ಬ ಸೆಟ್ಟಿಯ ವೇಷ ಹಾಕಿಕೊಂಡು ಬಂದು ಸುಳಿದಾಡಿದರು. 'ಬಳೆಗಾರ' ಕುಚೋದ್ಯಕ್ಕೆ ವಿಧವೆ ರಾಮಕ್ಕನಿಗೆ ಬಳಿ ತೊಡಿಸಹೋಗಿ ಅವಳಿಂದ "ಇದ್ಯೇನು ಗ್ಯಾನ ಗೀನ ಸುದ್ದಾಗಿದ್ದಾತೊ ಇಲ್ಲವೊ!..." ಎಂದು ಬಯ್ಯಿಸಿಕೊಂಡನು.

ಇದಾದ ನಂತರ ಒಬ್ಬ ನುರಿಕಿ ಚಡಾವು ಮೆಟ್ಟಿಕೊಂಡು ಹೆಗಲ ಮೇಲೆ ರೇಷ್ಮೆ ವಸ್ತ್ರ ಹಾಕಿ, ತಾಂಬೂಲ ಸವಿಯುತ್ತಾ ರಂಗದಲ್ಲಿ, ಅಂದರೆ ಕುರ್ಜಿನ ಪಕ್ಕದ ಬಯಲಿನಲ್ಲಿ, ಬಂದು ಕುಳಿತುಕೊಂಡ... ಮುಂದೆ ನಡೆಯುವ ಪ್ರಸಂಗ ನೆರೆದವರೆಲ್ಲರಿಗೂ ಗೊತ್ತು.

ಏಕೆಂದರೆ ವರ್ಷ ವರ್ಷವೂ ಇದೇ 'ಆಟ'ವನ್ನವರು ನೋಡಿದ್ದರು. ಈ 'ಆಟ'ದಲ್ಲಿ ಹತ್ತಿರದ ಹುಣಸೂರಿನ ಸಾಬರ ಭಾಷೆಯ ಸಂಪರ್ಕ ಬಹಳವಾಗಿತ್ತು...ಬಂದು ಕುಳಿತವನು ಹಳ್ಳಿಯ ರಸಿಕ. ಅವನು ಪ್ರಿಯತಮೆಗಾಗಿ ಕಾಯುತ್ತಿದ್ದಾನೆ. ಸ್ವಲ್ಪ ಹೊತ್ತಿನಲ್ಲಿ ವಿಶೇಷಾಲಂಕಾರ ಮಾಡಿಕೊಂಡು, ಮದುವಣಗಿತ್ತಿಯ ಹಾಗೆ ನಡೆದು ಬರುತ್ತಾಳೆ ಅವನ 'ಪ್ರಿಯತಮೆ.'

ಅವಳು ದೃಷ್ಟಿಗೆ ಬಿದ್ದ ಕೂಡಲೆ ಅವಳ ಬಳಿಸಾರಿದ ರಸಿಕ ನಾಟ್ಯವಾಡುತ್ತಾ, ಒರಟು ನಾಟ್ಯವಾದರೂ ತನ್ನ ಅನುಮಾನವನ್ನು, ಶಂಕೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾ ದೀನನಾಗಿ "ವ್ಯಾಸ ಗೀಸ ಕ್ಯಾವೋರೆ--?" ಎಂದು ಪ್ರಶ್ನಿಸುತ್ತಾನೆ.

ಅವಳು ಬಜಾರಿ. ಬಿಂಕದಿಂದ ನರ್ತಿಸುತ್ತ, "ಮದುವೇಗೆ ಹೋಯ್ತೀನಿ ಜಾವೋರೆ," ಎನ್ನುತ್ತಾಳೆ.

ರಸಿಕ ಪ್ರಣಯಿಯ ಹೃದಯ ಬಿರಿಯುತ್ತದೆ-ಅವಳು ಬೇರೊಬ್ಬನ ಕೈ ಹಿಡಿಯಲು ಹೋಗುತ್ತಿದ್ದಾಳೆ; ಅದರಲ್ಲೂ ಲವವೇಶ ವ್ಯಥೆಯಿಲ್ಲದೆ ಸಾಗುತ್ತಿದ್ದಾಳೆ ಎನ್ನುವ ವಿಚಾರ ಅವನ ಎದೆಯನ್ನು ಕುಟ್ಟೆ ಹುಳುವಿನೋಪಾದಿಯಲ್ಲಿ ಕೊರೆಯುತ್ತದೆ.

ತರುಣಿ ಜಂಭದಿಂದ ಅಲ್ಲಿಂದ ಹೊರಟು ಹೋಗುತ್ತಾಳೆ.

ಆದರೆ ಹಾಗೆ ಹೋದವಳು ಮತ್ತೆ ಹೀಗೆ ಕಾಣಿಸಿಕೊಳ್ಳುತ್ತಾಳೆ.

ರಸಿಕನಿಗೆ ಅಚ್ಚರಿ...ಮದುವೆಗೆಂದು ತೆರಳಿದವಳು ಹಿಂದೆ ಬಂದಳಲ್ಲಾ! ಎಂದು...

ನಾಟ್ಯವಾಡುತ್ತ ತರುಣಿಯ ಮುಂದೆ ಹೋಗಿ, ಈಗ ಅವಳು ತಲೆಗೆ ಸೆರಗನ್ನು ಮುಸುಕು ಹಾಕಿರುವುದನ್ನು ಗಮನಿಸಿ, "ಮುಸುಗು ಗಿಸಗು ಕ್ಯಾವೋರೆ ?" ಎಂದನು.

ಹೆಣ್ಣು ವ್ಯಸನಸೂಚಿಯಾಗಿ ನರ್ತಿಸುತ್ತ, "ಮದುವೆಯಾದ ಗಂಡ ಪೋಯಾರೆ..." ಎಂದಳು.

ಆ ಮಾತು ಕಿವಿಗೆ ಬಿದ್ದ ಕೂಡಲೆ ರಸಿಕ ಆ ತರುಣಿಯ ಕೈ ಹಿಡಿದು ಆನಂದದಿಂದ ಕುಣಿದಾಡಿದ...

ಹಾಗೇ ಕುಣಿಯುತ್ತ ಕುಣಿಯುತ್ತ ಅವರಿಬ್ಬರೂ ನಿರ್ಗಮಿಸಿದ ನಂತರ ಕಾಲಿಗೆ ಗೆಜ್ಜೆ ಕಟ್ಟಿದ ಒಂದು ದೊಡ್ಡ ಗುಂಪು ಬಂದಿತು...

ಕಯ್ಯಲ್ಲಿ ವಸ್ತ್ರ ಹಿಡಿದು ಅವರೆಲ್ಲ 'ಝುಕ್ಕುಣಕ--ಝುಕ್ಕುಣಕ' ಎಂದು ಕುಣಿಯ ಲಾರಂಭಿಸಿದರು. ಅವರ ಕಾಲುಗಳಿಗೆ ಗೆಜ್ಜೆ ಕಟ್ಟಿದ್ದುದರಿಂದ ಅವರು ಪಾದಗಳನ್ನೆತ್ತಿಡುವಾಗ 'ಘಲಿರ್–ಘಲಿರ್' ಎಂದು ಅವು ಉಲಿಯುತ್ತ ಆ ಹಳ್ಳಿಯ ಮುಗ್ಧ ಸಭಿಕರ ಹೃದಯವನ್ನು

ಪುಲಕಗೊಳಿಸುತ್ತಿದ್ದವು. ಅವರು ಕುಣಿಯುತ್ತಿರುವಂತೆಯೇ ನೆಲ ಮುಟ್ಟುವಂತೆ ಕೈ ಬಾಗಿಸುತ್ತಿದ್ದರು. 'ಹೋ' ಎಂದೆನ್ನುತ್ತಾ ಅವರು ಕೈ ಮೇಲೆತ್ತುವಾಗ ಅವರು ಹಿಡಿದ ವಸ್ತ್ರಗಳೆಲ್ಲ ಬೆಂಕಿಯ ಬೆಳಕಿನಲ್ಲಿ ಮನೋಹರವಾಗಿ ಹಾರಾಡಿದವು. ಜೊತೆಗೆ ತಮ್ಮಟೆಯ 'ಡಮ್-ಡಮ್'- ಆ ಕುಣಿತಕ್ಕೆ ಸೊಗಸಾದ ಹಿಮ್ಮೇಳವಾಗಿತ್ತು.

ಈ ಗೆಜ್ಜೆ ಕುಣಿತದಲ್ಲಿ ಗ್ರಾಮಸ್ಥರಿಗೆ ವಿಶೇಷ ಪ್ರೇಮ. ಆದ್ದರಿಂದ ಬಹುಕಾಲ ಈ ಕಾರ್ಯಕ್ರಮವೇ ಜರುಗಿ-

ಕುಣಿತ ಮುಗಿದು, ಅವರೆಲ್ಲ ತೆರಳುತ್ತಿರುವಂತೆ ಮುದುಕಿ ಮರಿನಿಂಗಿ ಕುಹಕವಾಗಿ,

"ರಂಗದ ಕುಣಿತ
ರಾಮನ ಕುಣಿತ
ಭಂಗದ ಕುಣಿತ
ಭಾರತದ ಕುಣಿತ
ತುಂಗದ ಕುಣಿತ
ತುರುಕರ ಕುಣಿತ
ನಕ್ಕುಗಿಕ್ಕೇರಿ ಕನ ಮಕ್ಕಳಿರೇ..."

ಎಂದು ಹಾಡಿದಳು. ಎಲ್ಲರೂ ಘೊಳ್ಳೆಂದರು.

ಆಮೇಲೆ ಮರಿಯೂ, ಸ್ತ್ರೀ ವೇಷಧಾರಿಯಾದ ಪುಟ್ಟನೂ ರಂಗಕ್ಕಿಳಿದರು.

ಮರಿ ಠೀವಿಯಿಂದ ಯುವತಿಯ ಬಳಿಸಾರಿ, "ಬಾರೇ ಹುಡುಗಿ... ನನ್ ಹಿಂದೇ..." ಎಂದು ಹಾಡಿ ಕರೆದನು.

ಯುವತಿ ತನ್ನ ಕಯ್ಯನ್ನು ಅವನ ಹಿಡಿತದಿಂದ ಕೊಸಾರನೆ ಬಿಡಿಸಿಕೊಂಡು,

"ಬರಕ್ಕಿಲ್ಲ ಭಾಡಕಾವ್... ನಿನ್ನ ಹಿಂದೆ" ಎಂದು ಹಾಡಿ ತಟಸ್ಥಳಾಗಿ ನಿಂತುಬಿಟ್ಟಳು.

"ಯಾಕೆ ಬರೊಲ್ಲೇ ನನ್ನ ಜೊತೇಲಿ ?" ಎಂದು ಗಂಭೀರವಾಗಿ ನಸುಕೋಪ ಬೆರೆತ ಸ್ವರದಲ್ಲಿ ಕೇಳಿತು ಗಂಡು.

"ನೀ ಚೆಂದಾಗಿಲ್ಲ...ಅದ್ಕೆ" ಎನ್ನುತ್ತಾ ಹೆಣ್ಣು ಸುಬ್ಬರಾಯಿ ಕುಳಿತಲ್ಲಿಗೆ ವಯ್ಯಾರದಿಂದ ನಡೆದುಹೋಗಿ ನಿಂತುಕೊಂಡಳು.

"ನಾ ಚೆಂದಾಗಿಲ್ಲದೆ ಯೇನಾಗಿದ್ದೇನಾ ?" ಎನ್ನುತ್ತಾ ಆ ಗಂಡೂ ಅಲ್ಲಿಗೆ ಬಂದಿತು.

"ನಿನ್ನ ಮೋರೆ ನೋಡಿದರೇ ನಿನ್ನ ಹಿಂದುಗುಟ್ಟೆ ಬರೋ ಹಂಗದೆ..." ಎನ್ನುತ್ತಾ ಸುಬ್ಬರಾಯಿಯ ಮುಖವನ್ನು ನೋಡಿ ನಕ್ಕಳು ಹುಡುಗಿ.

"ಮಂತೆ ಆಟೊಂದು ದುಡ್ಡುಮಟ್ಟಿಸಿ ಮದ್ವೆ ಆಗ್ನಿಲ್ವಾ... ನಿಂಗೇ ಅಂತಲೆ ಓಟು ಒಡವೆ ಮಾಡಿಸಿ, ನಿಮ್ಮೂರಿಗೆ ಬಂದು ಮದ್ವೆ ಮಾಡಿಕೊಂಡಿವ್ನೀ..."

ಸುಬ್ಬರಾಯಿಗೆ ಈಗೀಗ ಇದು ತನಗಾಗೇ ಕುರಿತು ಮಾಡಿದ ಅಣಕ ಎಂಬ ಅರಿವಾಯಿತು. ಈ ರೀತಿ ಆಟ ಕಟ್ಟಿ ಎಲ್ಲರೆದುರೂ ತನ್ನನ್ನು ಈ ಮರಿ, ಪುಟ್ಟ ಇಬ್ಬರೂ ಅವಹೇಳನ ಮಾಡುತ್ತಿರುವುದು ಅವನಿಗೆ ಸಹಿಸದಾಯಿತು.

"ನನ್ನದೇಯು ಮದ್ವೆ ಮಾಡಿಕಂಡಿದ್ರೇನಾ ?– ನನ್ನ ಮನಸೂ ಮದ್ವೆ ಮಾಡಿಕಂಡಗಾಯ್ತಾ ?"

"ದಮ್ಮಯ್ಯಾಂತೀನಿ... ಬಾರೇ ಹುಡುಗಿ ನನ್ನ ಹಿಂದೇ."

"ಬರಕ್ಕಿಲ್ಲ ಭಾಡಕಾವ್ ನಿನ್ ಹಿಂದೇ..." ಎಂದು ಸ್ತ್ರೀವೇಷಧಾರಿಯಾದ ಪುಟ್ಟ ತನ್ನನ್ನು ಕುಹಕದಿಂದ ನೋಡಿದಾಗಲಂತೂ ರೋಷಾವೇಷದಿಂದ ಬುಸುಗುಟ್ಟುತ್ತಾ ಅವನನ್ನು ಹೊಡೆಯಲು ಹೋದನು ಸುಬ್ಬರಾಯಿ.

"ಅವ್ವೀ... ಇದ್ಯಾವದಪ್ಪಾ ಇದುಃ...ಕಾಡು ಮ್ರುಗಾ !– ನನ್ನ ಹಿಡಕೊಳಾಕೆ ಬತ್ತಾ ಅದೇ..." ಎಂದು ಭೀತಿಯನ್ನು ನಟಿಸಿ ಕೂಗುತ್ತಾ ಸ್ತ್ರೀ ವೇಷಧಾರಿಯಾದ ಪುಟ್ಟ ಓಡಿಹೋಗಿ ಹೆಂಗಸರ ಗುಂಪನ್ನು ಹೊಕ್ಕುಬಿಟ್ಟ, ಆ ನಾರಿಯರ ಗುಂಪಿನಲ್ಲಿ ಅವನನ್ನು ಹುಡುಕಲಾಗಲಿಲ್ಲ ಸುಬ್ಬರಾಯಿಗೆ ! ಅದರಿಂದ ಎಲ್ಲರ ನಗೆಗೂ ಈಡಾದುದೊಂದೇ ಅವನಿಗೆ ಸಿಕ್ಕಿದ ಭಾಗ್ಯ... ಕಾಳಯ್ಯ ವಿಷಕಂಠಯ್ಯ ಮತ್ತು ಊರಿನ ಇತರ ಹಿರಿಯರು ಅವನಿಗೆ ಬುದ್ಧಿ ಹೇಳಿ ಕರೆದುಕೊಂಡು ಹೋಗಿ ಸಮಾಧಾನಪಡಿಸಲೆತ್ನಿಸಿದರು...

ಈ ಪ್ರಸಂಗ ನಡೆದ ಮೇಲೂ ಇತರ ಕುಣಿತಗಳು, ವಿನೋದಗಳು ಬೆಳಕು ಹರಿಯುವವರೆಗೂ ಯಥಾವಿಧಿಯಾಗಿ ನಡೆದವು.

ಬೆಳಿಗ್ಗೆ ಸೂರ್ಯೋದಯವಾದ ಬಳಿಕ ದೇವರಿಗೆ ಮಂಗಳಾರತಿ ಮಾಡಿ ವಿಗ್ರಹಗಳನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಆಯಾ ಗುಡಿಗಳಲ್ಲಿ ಇಟ್ಟುಬಿಟ್ಟರು.

ಮನೆಗೆ ತೆರಳುತ್ತಿರುವಂತೆ ನರಸಮ್ಮ ತನ್ನೊಡನೆ ಹೆಜ್ಜೆ ಹಾಕುತ್ತಿದ್ದ ಐದಾರು ಹೆಂಗಸರೊಡನೆ, "ನೋಡಿದರೇನವ್ವ ಆ ಮರಿ, ಪುಟ್ಟ ಮಾಡಿದ ಕೆಲಸವಾ ? ಅವು ಹಟ್ಟೀ ತಾವಿಕೆ ಬರ್ಲಿ, ಸರೀಗೆ ಅಂದು ಕಳಸ್ತೀನಿ" ಎನ್ನುತ್ತಿದ್ದಳು.

ಅತ್ತ ಇನ್ನೊಂದು ಗುಂಪಿನಲ್ಲಿ ಮಾತು ಇದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಿತ್ತು–

"ಈ ಸಲದ ಓಕುಳಿ ಹಂಗೆ ಯಾವತ್ತೂ ಆಗಿರ್‍ನಿಲ್ಲ ಕನಕ್ಕ..."

"ಆ ಮರಿ, ಪುಟ್ಟನ ಆಟಾವಾ ನಾ ಬೋ ಮೆಚ್ಚಿಕಂದಿ."

"ಸರಿಯಾಗಿ ಮಾಡಿದರು... ಮಂತೆ ಅಂತಾ ಮುತ್ತಿನಂತಾ ಹುಡುಗೀಯಾ ಆ ಕೋಡಂಗೀಗೆ ಕೊಡೂನಾ ಅಂದ್ರೇನು ?" ಎಂದಳು. ಮಂಗಳೆಯ ಗೆಳತಿ ಆಯರಹಳ್ಳಿ ಅಯ್ಯನ ಮಗಳೂ ಉತ್ಸಾಹದಿಂದ ತನ್ನ ಸಮ್ಮತಿ ಸೂಚಿಸಿದಳು.

೨೯

ಓಕುಳಿ ಹಬ್ಬವಾದ ಮೂರು ದಿನಗಳಲ್ಲಿ ನರಸಮ್ಮನೂ ಕಾಳಯ್ಯನೂ ಹೆಣ್ಣು ಗಂಡು ಹೊರಡಿಸಿ ತಮ್ಮೂರಿಗೆ ತೆರಳಲು ಸಿದ್ಧರಾಗಿ ನಿಂತರು.

"ವರ್ಸಾನಾರ ಕಳೀದೆ... ಇರೊ ಒಬ್ಬ ಮಗ್ಳ... ಈಟು ಬ್ಯಾಗ ಕರಕೊಂಡು ಒಂಟುಬುಡಾದ ?... ನಂಗಿನ್ನೂ ನೆಟ್ಟಗೆ ಹಟ್ಟೀ ಬಾಗಿಲಗಂಟ ತಿರಗಾಡಾಕುಽ ಸಕುತಿ ಇಲ್ಲಾ !... ಯೇನೋ ಗೌರಿಹಬ್ಬದಗಂಟಲಾರೂ ಇರ್‍ಲಿ ಅಂದರೆ ಹಾಗೂ ಕೇಳೊಲ್ಲರಿ ?..." –ಭಾವನೂ ಓರಗಿತ್ತಿಯೂ ಅಷ್ಟು ಬೇಗ ಮಂಗಳೆಯನ್ನು ತೌರು ಬಿಡಿಸುತ್ತಿರುವುದರಿಂದ ತನಗುಂಟಾದ ವ್ಯಥೆಯನ್ನು ಪ್ರಕಟಿಸಿದಳು ಪಾರ್ವತಮ್ಮ.

"ನಮ್ಮನ್ಯಾಕವ್ವ ದೂರೀಯೆ?... ಸುಬ್ರಾಯಿ ಗೊತ್ತದಲ್ಲಾ ನಿಂಗೆ ಮೊದ್ಲಿಂದ್ಲೂ ಹಟಗಾರ ಅಂತ ನೀ ಕಂಡೇ ಇದ್ದಿಽ !... ನಾನೂ ಹೇಳೋವಷ್ಟು ಹೇಳದಿ. ಅವ್ನು ಕೇಳ್ನಿಲ್ಲ. ಕರಕೊಂಡೇ ಹೋಗಿಬುಡಬೇಕೂ ಅಂತ ಒಂದೇ ಪಟ್ಟು ಇಡಿದುಬುಟ್ಟವ್ನೆ–ಉಡ ಇಡಿಕೊಳೊ ಹಂಗೆ !... ನಾ ಯೇನವ್ವ ಮಾಡೂನ?" ಎಂದು ಉಸುರಿದ ನರಸಮ್ಮ ಪಾರ್ವತಮ್ಮನನ್ನು ಸಮಾಧಾನಪಡಿಸುವವಳಂತೆ "ಹೆಣ್ಣು ಮಕ್ಕಳು, ಉಟ್ಟಿದ ಮನೇಲಿ ಏಟು ಜಿನ ಇದ್ದಾವುಽ?... ಕೊಟ್ಟ ಹೆಣ್ಣು ಕುಲಕ್ಕೆ ಹೊರಗೇ ಅಂತಾ... ಅವ್ಳ ಚಿಂತೆ ಇನ್ಯಾಕೆನಿಂಗೇ?–ಅವಳುಂಟು ಅವಳ ಗಂಡ ಉಂಟು...ಅಲ್ಲಿ ತಾನೆ ನಾವಿಲ್ಲವಾ ನೋಡಿಕೋಳಾಕೆ?...ಓಗ್ಲಿ, ನಮ್ಮೂರಿಗೂ ನಿಮ್ಮೂರಿಗೂ ಕಾಸೀರಾಮೇಸರಕೋದಂಗೆ ಯೇನಾರಾ ದೂರವಾ?–ನೀರು ಹೊಳೆ ಹಾದಿ ಅಂಗೆ !–ಯಾವಾಗ ಬೇಕಾದರೂ ಬಂದು ಹೋಗಬೌದು. ಅದಕೇನಾ?" ಎಂದಳು.

ಹೆಂಡತಿಯ ಮಾತನ್ನೇ ಸಮರ್ಥಿಸಿ ಕಾಳಯ್ಯನೂ ಮಾತನಾಡಿದನು.

"ಮದುವ್ಯಾದ ಗಂಡ ತನ್ನೆಡತಿ ಕರಕೊಂಡು ಒಂಟರೆ ನೀನ್ಯಾಕೆ ಈಟು ಚಿಂತೆ ಮಾಡೀ ಪಾರತಿಽ...? ಈಗೇನ ನೀ ಹೇಳಿಕಳಿಸಿದಾಗ ಕರಕೊಂಡು ಬರಕ್ಕಿಲ್ಲ ಅಂತ

ಯೇನಾರಾ ಯೇಳಿದ್ದಾನಾ ಸುಬ್ರಾಯಿ?...ಒಂದೆಂಡು ಜಿನ ಕೊತ್ತೇಗಾಲದಲ್ಲಿದ್ದರೆ ಇನ್ನೊಂದೆಂಡು ಜಿನ ನಿಮ್ಮ ಕಲ್ಲಹಳ್ಳೀಲೆ ಇರ್ತಾಳೇಳು. ಅಲ್ಲೀಗಂಟ ದ್ರುಡವಾಗಿ ಒಸಿ ತಡಕೊ."

"ನೀವು ಕಂಡಂಗೆ ಇರೋಳೊಬ್ಬಳೇ ಮಗಳು ನಂಗೆ....ಎಡ ಬಲ ಇನ್ನೇನಾರಾ ಮಕ್ಕಳಿದ್ದಾವಾ?...ಯೇನೋ ಇನ್ನೊಂದೋಟು ಜಿನ ಇದ್ದುಬುಟ್ಟು ಕರಕೊಂಡೋಗಿದ್ರೆ ನಂಗೆ ಆಟು ದುಕ್ಕ ಅಯ್ತಾ ಇರ್ನಿಲ್ಲಾ–" ಎಂದು ಗೋಳಿಟ್ಟಳು ಪಾರ್ವತಮ್ಮ.

"ಯಾಕೆ ಇಂಗೆ ದುಕ್ಕ ಮಾಡಿ ನಮ್ಮವ್ವ....ಸುಮ್ಮಕಿರು....ಬ್ಯಾಗ ಬ್ಯಾಗ ನಿನ್ನ ಮಗಳ ಹೊಟ್ಟೇಲಿ ಮೂರು ಮಕ್ಕಳಾದರೆ ನೀನೂ ಒಂದು ಸಾಕ್ಕೋಳೀವಂತೆ...." ಎಂದು ನರಸಮ್ಮ 'ಎದ್ದು ಹೋಗೋ ಮಾತು ಬಿದ್ದು ಹೋಗಲಿ' ಎನ್ನುವ ಹಾಗೆ ಇಲ್ಲದ ನಾಲ್ಕು ಮಾತಾಡಿ ಪಾರ್ವತಮ್ಮನನ್ನು ಸಮಾಧಾನ ಪಡಿಸಲೆತ್ನಿಸಿದಳು.

ಪಾರ್ವತಮ್ಮ ಸೆರಗಿನಿಂದ ಕಣ್ಣೀರೊತ್ತಿಕೊಳ್ಳುತ್ತಿರುವಂತೆಯೇ ಕಾಳಯ್ಯ, "ಹಂಗಾರೆ ಬತ್ತೀವಿ ಕನ ಪಾರತಿಸ..." ಎನ್ನುತ್ತಾ ಬೀದಿಯ ಬಾಗಿಲವರೆಗೆ ಹೋದವನು ಸುಬ್ಬರಾಯಿ ಆಗಲೇ ಗಾಡಿ ಕಟ್ಟಿಕೊಂಡು ನಿಂತಿರುವುದನ್ನು ಕಂಡು, "ನೋಡರಿಲಾ ಅಪ್ಪಯ್ಯಾ...ಈ ಹೈದನಿಗೇಟು ಆತುರ ಆಗಬುಟ್ಟದೆ?–ಹೆಣ್ಣು ಏಟೊತ್ತಿಗೆ ಬಂದಾತು ಅಂತ ಜಪ ಮಾಡ್ತಾ ಕುಂತವ್ನೆ!" ಎಂದು ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತ ನಾಲ್ಕಾರು ಜನ ರೈತರೊಡನೆ ನಗೆಯಾಡಿದನು.

"ಅದರಲ್ಲಿ ಯೇನು ಚೋಜಿಗ ಬುಡಿ ಕಾಳಣ್ಣ...ಹೆಣ್ಣು ಅಂದರೆ ಹೆಬಗ(ನಪುಂಸಕ) ನಕ್ಕ ಅಂತ ಮೊದ್ಲೆ ಗಾದೆ ಮಾಡಿಲ್ವಾ?..." ಎಂದು ರೈತರ ಪೈಕಿ ಒಬ್ಬಾತ ನುಡಿದಾಗ ಹೊರಗಿದ್ದವರೆಲ್ಲರೂ ಗಹಗಹಿಸಿ ನಕ್ಕರು.

ಅತ್ತ ಮನೆ ಬಿಟ್ಟು ಹೊರಗೆ ಬರಬೇಕಾದರೆ ಮಂಗಳೆ ಪಟ್ಟ ಸಂಕಟ ಅಷ್ಟಿಷ್ಟಲ್ಲ. ನೂರಾರು ಚಿತ್ರಗಳು, ನೂರಾರು ನೆನಪುಗಳು ಅವಳ ಕಣ್ಣ ಮುಂದೆ ಬಂದು ನಿಲ್ಲುವುವು. ಅವಳು ಆ ಮನೆಯಲ್ಲಿ, ಆ ಹಳ್ಳಿಯಲ್ಲಿ ಕಳೆದ ಸುಖದ ದಿನಗಳು ಸಾವಿರ ಬಂಧನಗಳಿಂದ ಅವಳನ್ನು ಬಿಗಿದು ಮುಂದೆ ಅಡಿ ಇಡದಂತೆ ಮಾಡಿದ್ದವು...ಇಲ್ಲಿಯತನಕ ಮಂಡೆಯ ಕೂದಲು 'ಚುಳ್' ಎನ್ನದಂತೆ ಸಾಕಿ ಸಲಹಿದ ತಾಯಿ ಒಬ್ಬಳನ್ನೆ ಬಿಟ್ಟುಹೋಗುವುದೆಂದರೆ ಅವಳಿಗೆ ಎಲ್ಲಿಲ್ಲದ ಯಾತನೆಯಾಗಿ ಪರಿಣಮಿಸಿತ್ತು. ಅನಂತರ ಬಾಲ್ಯದಿಂದಲೂ ತನ್ನ ಒಡನಾಡಿಯಾಗಿ ತನ್ನ ಬಾಳಿನ ಉಸಿರಾಗಿ ಬೆಳೆದ ನಟರಾಜ!–ಅವನನ್ನೂ ಬಿಟ್ಟು ಹೋಗಬೇಕು....ಹೋಗಲೇಬೇಕು....ಗತ್ಯಂತರವೇ ಇಲ್ಲ–ಎಂದೆಲ್ಲ ಯೋಚಿಸಿದಾಗ ಅವಳ ತಲೆ ಸುತ್ತಿದಂತಾಯಿತು. ಹಾಗೆಯೇ ಒಂದು ಬಾರಿ ತಾಯಿಯ ಕುತ್ತಿಗೆಯನ್ನು ತಬ್ಬಿಕೊಂಡು

ಗಟ್ಟಿಯಾಗಿ ಗಳಗಳನೆ ಅತ್ತುಬಿಟ್ಟಳು....ಎಲ್ಲರೂ ಸೇರಿ ಸಮಾಧಾನಗೊಳಿಸಿ ಅವಳನ್ನು ಗಾಡಿಯ ಬಳಿಗೆ ಹೇಗೋ ಕರೆತಂದರು.

ಅಷ್ಟರಲ್ಲಿ "ಆಚಾರಿ ಹೆಣ್ಣು ಮಂಗ್ಲೀಯ್ಯಾ ಕೊತ್ತೇಗಾಲಕ್ಕೆ ಹೊರಡಿಸಿಕೊಂಡು ಹೊರಟಿದ್ದಾರಂತೇನಾ !" ಎಂದು ಎಷ್ಟೋಜನ ಹೆಂಗಸರೂ ಗಂಡಸರೂ ಗಾಡಿಯ ಬಳಿ ಬಂದು ನೆರೆದಿದ್ದರು.

ಗಾಡಿಗೆ ಹತ್ತುವ ಮೊದಲು ನರಸಮ್ಮ ಮಂಗಳೆಯನ್ನು ಕುರಿತು, "ಊ....ಹೊರಡಕ್ಕೆ ಮುಂಚೆ ಹಿರಿಯೋರಿಗೆಲ್ಲಾ ನಮಸ್ಕಾರ ಮಾಡಿಬುಟ್ಟು ಅವರ ಆಸೀರ್ವಾದ ತಕ್ಕೊಂಡು ಬಾ...." ಎಂದು ಆಜ್ಞಾಪಿಸಿದಳು.

ಮಂಗಳೆ ವಿಷಕಂಠಯ್ಯನಿಗೆ ನಮಸ್ಕರಿಸಿದಾಗ ಅವನೂ ಸಹ ಮೂಗು ಸೊರೆಯುತ್ತ ಕಣ್ಣೀರೊರೆಸಿಕೊಂಡ.

ಪಾರ್ವತಮ್ಮ ಗದ್ಗದಿತಳಾಗಿ ಮಗಳ ಕೈ ಹಿಡಿದುಕೊಂಡು, "ಕಂದಾ....ಹೊಸ ಜಾಗಕ್ಕೆ ಹೋಯ್ತಾ ಇದ್ದೀಯೆ. ಉಸಾರಾಗಿ ನಡಕೋಬೇಕು ಕನವ್ವ ನೀನು....ಇಲ್ಲಿ ನಿಮ್ಮವ್ವನತ್ತರ ಆಡಿದಂಗೆ ಅಲ್ಲೂ ಆಡಕೆ ಓಗಿಬುಟ್ಟೀ ಕನವ್ವಾ" ಎಂದವಳು, ತಾನೂ ಸಮಾಧಾನ ತಂದುಕೊಂಡವಳಂತೆ ಕರುಣಾಪೂರಿತ ಸ್ವರದಲ್ಲಿ "ಆದದ್ದು ಆಗೋಯ್ತು ಕನವ್ವಾ....ಮನಸಿನಲ್ಲಿ ಯಾವ ಚಿಂತೇನೂ ಇಟ್ಟುಕೋಬ್ಯಾಡ...ಯೆಲ್ಲಾನೂ ದೇವರ ಮ್ಯಾಗೆ ಬಾರ ಆಕಿಬುಟ್ಟು ನಿನ್ನ ಕೆಲಸ ನೀ ಮಾಡಿಕೊಂಡು ಓಗು...." ಎನ್ನುತ್ತಾ ಅವಳ ಗಲ್ಲವನ್ನು ಹಿಡಿದು ಮುದ್ದಿಸುತ್ತಾ "ಯೇನೇ ಬರಲಿ....ನಿನ್ನ ಹಟ್ಟಿ ಹೆಸರು ಮಾತ್ರ ಕೆಡಿಸಬ್ಯಾಡ ಕನವ್ವಾ...ನಾಕು ಜನ 'ಸೈ' ಅಂತ ಮೆಚ್ಚೋಹಂಗೆ ನಡಕೋವಾ...."ಎಂದು ತನಗೆ ತಿಳಿದ ನಾಲ್ಕು ಬುದ್ಧಿಯ ಮಾತುಗಳನ್ನಾಡಿ ಅಲ್ಲಿ ನೆರೆದಿದ್ದವರೆಲ್ಲರೂ 'ಸೈ' ಎಂದು ತಲೆದೂಗುವಂತೆ ಮಾಡಿದಳು.

ಆದರೆ ಮಂಗಳೆ ಗಾಡಿಗೆ ಹತ್ತಿ ಕುಳಿತಾಗ ಅದೇ ಪಾರ್ವತಮ್ಮ ಬಿಕ್ಕಿಬಿಕ್ಕಿ ಅಳಲು ಆರಂಭಿಸಿದಳು. ಅದನ್ನು ಕಂಡು ಚೆಲುವಮ್ಮ, "ಅವ್ವ...ನಾಯಿಲ್ಲೇ ಇಳಕೊತ್ತೀನಿ...ಚಿಕ್ಕವ್ವ ಒಬ್ಬಳೇ ಅಂಗೆ ಅಳೋದ ನೋಡನಾರಿ ನಾನು... ಅವ್ವ ಚೆಂದಾಗಿ ಉಸಾರಾಗೊವರೆಗೂ ಬೇಯಿಸಿ ಆಕ್ಕೊಂಡು ಇದ್ದುಬುಟ್ಟು ಬತ್ತೀನಂತೆ–ನೀವು ನಡೀರಿ..." ಎನ್ನುತ್ತಾ ಗಾಡಿಯಿಂದಿಳಿದುಬಿಟ್ಟಳು.

"ನಾನೂ ಅವ್ವನ ಅತ್ತರಾನೇ ಇರ್ತೀನಿ–" ಎಂದು ದುರ್ಗಿಯೂ ಅಲ್ಲೇ ಉಳಿದುಕೊಂಡಳು.

ಗಾಡಿ ಹೊರಟಿತು. ಊರು ಬಿಟ್ಟು ಹೊರಡುವ ಮುನ್ನ ನಟರಾಜನೂ ಎಲ್ಲರಂತೆ ನೋಡ ಸಿಗುವನೆಂದು ಬಗೆದಿದ್ದಳು ಮಂಗಳೆ. ಆದರೆ ಅವಳ ಊಹೆ ತಪ್ಪಾಯಿತು. ನಟರಾಜ ಅಲ್ಲೆಲ್ಲೂ ಇರಲಿಲ್ಲ. ಮಂಗಳೆಯ ನಯನಗಳು ನಟರಾಜನಿಗಾಗಿ ಹುಡುಕಿ

ಹುಡುಕಿ ನೋಡುತ್ತಿದ್ದವು. ಗಾಡಿ ಮುಂದೆ ಸಾಗಿದಂತೆ 'ನಟರಾಜ ಎಲ್ಲೋ ಹೊರಟುಹೋಗಿದ್ದಾನೆ' ಎಂದು ಖಚಿತಮಾಡಿಕೊಂಡ ಮಂಗಳೆಯ ಹೃದಯ ತನ್ನ ದೌರ್ಭಾಗ್ಯಕ್ಕೆ ತಾನೇ ಮರುಗಿ ಸಂಕಟಪಡುತ್ತಿತ್ತು.

ನಟರಾಜ ಅದೇ ಸಮಯದಲ್ಲಿ ಕೆರೆಯ ಬಳಿಯ ಕಲ್ಲಿನ ಮೇಲೆ ಕುಳಿತು ಒಂದೇಸಮನೆ ಕಣ್ಣೀರ್ಗರೆಯುತ್ತಿದ್ದನು. ಅವನ ಒಂದೊಂದು ಹನಿ ಕಂಬನಿಯೂ ಜಲದಲ್ಲಿ ಬಿದ್ದಂತೆ ಆ ಜಾಗದಲ್ಲಿ ಸಣ್ಣ ಸಣ್ಣ ತೆರೆಗಳು ಉಂಗುರ ಉಂಗುರವಾಗಿ ಏಳುತ್ತಿದ್ದವು.

* * *

ದಂಪತಿಗಳನ್ನು ಕೂರಿಸಿಕೊಂಡು ಗಾಡಿ ಸುರಕ್ಷಿತವಾಗಿ ಕೊತ್ತೇಗಾಲವನ್ನು ತಲುಪಿತು. ಅದೇ ಮಂಗಳೆಗೆ ತೀರ ದುಃಖವಾಗಿತ್ತು. ತನ್ನನ್ನು ನರಕಕ್ಕೆ ಎತ್ತಿಕೊಂಡು ಸಾಗುತ್ತಿರುವ ಗಾಡಿ ಹಾಗೇ ಆ ಕೊರಕಲು ಹಾದಿಯಲ್ಲಿ ಎಲ್ಲಾದರೂ ಮಗುಚಿಕೊಂಡು ತಾನು ಸಾಯುವಂತಾದರೆ ಎಷ್ಟು ಚೆನ್ನಾಗಿರುತ್ತದೆ, ಎಂದು ಅವಳ ಜೀವ ದಾರಿಯುದ್ದಕ್ಕೂ ಹಾರೈಸಿತ್ತು. ಆದರೆ ಆ ದೈವಕ್ಕೆ ಅವಳ ಮೇಲೆ ಕರುಣೆ ಬರಲಿಲ್ಲ. ತಾನು ಪ್ರೀತಿಸಿದ ನಟರಾಜನನ್ನು ತಪ್ಪಿಸಿ ಸುಬ್ಬರಾಯಿಗೆ ಲಗ್ನ ಮಾಡಿಸಿದುದಲ್ಲದೆ ಆ ಕಿರಾತಸದೃಶನೊಂದಿಗೆ ತನ್ನ ಜೀವವಿರುವ ಪರ್ಯಂತ ಬಾಳೂ ಸಾಗಿಸುವಂತೆ ಮಾಡಿತ್ತು ಕ್ರೂರ ವಿಧಿ ! ಇದನ್ನು ನೆನೆನೆನೆದಂತೆ ಅವಳ ಹೃದಯ ಕಿಚ್ಚುಹತ್ತಿ ಉರಿಯತೊಡಗುತ್ತಿತ್ತು. ಹಿಂದೆ ತಾನು ಚಿಕ್ಕವಳಾಗಿದ್ದಾಗ ಒಮ್ಮೆ ನರಸಮ್ಮ ಇಂಥದೇ ಗಾಡಿ ಪ್ರಯಾಣದಲ್ಲಿ ಕೇಳಿದ್ದಳು. "ನಮ್ಮ ಸುಬ್ಬರಾಯಿ ಲಗ್ನ ಆದೀಯಾ ಮಂಗಲೀ?" ಎಂದು. ಆಗ ತಾನು ಅವನ ವಿಕಾರ ರೂಪವನ್ನು ನೋಡಿ "ಉಹ್ಹು" ಎಂದು ನಿಷ್ಠುರವಾಗಿ ನುಡಿದಿದ್ದು ನೆನಪಿಗೆ ಬಂದಿತು. ಆದರೆ ಈಗ ಎಲ್ಲವೂ ತದ್ವಿರುದ್ಧವಾಗಿ ನಡೆದಿತ್ತು. ತನ್ನ ಆಸೆ ಸುಟ್ಟು ಬೂದಿಯಾಗಿತ್ತು. ಪಾಪಿ ವಿಧಿ ತನ್ನ ವಿರುದ್ಧ ನಿಂತು ಅಣಕವಾಡಿ ಗೆದ್ದಿತ್ತು. ತನಗೆ ಆಸೆಯಾದ ಹೂ ಕಿತ್ತು ಮುಡಿಯಲು ಹೋದರೆ ಅದು ಕೈಗೆ ಸಿಗದೆ ಅದರ ಬದಲು ಕಾರ್ಕೋಟಕ ವಿಷಪೂರಿತ ಸರ್ಪವೇ ಅವಳ ಕೈಗೆ ಬಂದಿತ್ತು. ಅವಳ ಹೃದಯದಲ್ಲಿ ಸಾವಿರ ಸುಂದರ ಕನಸುಗಳನ್ನು ಹೆಣೆಯುತ್ತಿದ್ದ ಹಂಬಲ ಇಂದು ಇಂಗಿಹೋಗಿತ್ತು. ಅವಳಿಗೀಗ ಬಾಳೇ ಬೇಸರವಾಗಿತ್ತು; ಬದುಕುವುದೇ ಒಂದು ದೊಡ್ಡ ಹೊರೆಯಾಗಿ ಪರಿಣಮಿಸಿತ್ತು.

ಅವಳಿಗೆ ಅಹರ್ನಿಶಿಯೂ ನಟರಾಜನದೇ ಯೋಚನೆ. ಕನಸು ಮನಸಿನಲ್ಲಿಯೂ ಅವನ ರೂಪೇ ಅವಳ ಮುಂದೆ ಬಂದು ನಿಂತಂತಾಗುತಿತ್ತು. ಎಷ್ಟೋ ವೇಳೆ ಸುಬ್ಬರಾಯಿ ಹೊರಗಿನಿಂದ ಮನೆಗೆ ಬಂದರೆ ಅವಳು ಮನಸ್ಸಿನಲ್ಲಿ ತನ್ನ ನಟರಾಜ ಬಂದನೆಂದೇ ಭ್ರಮಿಸುತ್ತಿದ್ದಳು. ಯಾವ ಕೆಲಸದಲ್ಲಿಯೂ ಅವಳಿಗೆ ಉತ್ಸಾಹವಿಲ್ಲ, ಶ್ರದ್ಧೆಯಿಲ್ಲ. ಅದರಿಂದಾಗಿ ನರಸಮ್ಮನಿಂದ ಸಾವಿರ ಬೈಗುಳ ತಾಳಬೇಕಾಗಿತ್ತು. ನರಸಮ್ಮ ಹೀನವಾಗಿ ಆಡುವುದನ್ನು

ಕೇಳಿ ಅವಳ ಹೃದಯ ಕ್ರುದ್ಧವಾಗಿ ಬಂಡಾಯವೇಳುತ್ತಿತ್ತು. ಅವಳ ಕುತಂತ್ರದಿಂದಲೇ ತಾನು ಈ ಮನೆಯನ್ನು ಹೊಗಬೇಕಾಗಿ ಬಂದಿತು. ತನ್ನ ತಾಯಿಯ ಕಾಯಿಲೆಯನ್ನು ಆ ಪಾಪಿ ದುರುಪಯೋಗಪಡಿಸಿಕೊಂಡಳು. ಅವಳಿಂದಲೇ ತನ್ನ ಬಾಳು ಹಾಳಾಯಿತು ಎಂದು ಅವಳ ಅಂತರಂಗ ಮೊರೆಯುತ್ತಿತ್ತು. ಆದರೆ ಅವಳ ರೋಷವೆಲ್ಲಾ ಕಡೆಗೆ ವಿಧಿಯಿಲ್ಲದೆ ನಿಸ್ಸಹಾಯಕತೆಯಲ್ಲಿ ಪರ್ಯವಸಾನಗೊಳ್ಳುವಂತಾಗುತ್ತಿತ್ತು. ಅವಳು ಈಗ ಏನನ್ನು ತಾನೇ ಮಾಡುವಂತಿತ್ತು? ಮಂಗಳ ಸೂತ್ರ ಕೊರಳಿಗೆ ಬಿದ್ದ ದಿನವೇ ಅವಳ ಕಥೆ ಪೂರ್ಣವಾಗಿ ಮುಗಿದುಹೋಗಿತ್ತು. ಈಗ ಅವಳು ಎಷ್ಟೇ ಹಾರಾಡಿದರೂ ಅದರಿಂದ ಏನೊಂದು ಉಪಯೋಗವೂ ಆಗುವಂತಿರಲಿಲ್ಲ. ವೃಥಾ ಆಯಾಸವಷ್ಟೇ ಅದರ ಫಲ. ತಾನು ಈಗ ಸುಬ್ಬರಾಯಿಯ ಸತಿ ಎನ್ನುವ ಕಠೋರ ಸತ್ಯ ಮಂಗಳೆಯ ಎದೆ ಇರಿಯಿತು. ಹಾಗೆ ಅನಿಸಿದಾಗಲೆಲ್ಲ ಒಂದು ಮೂಲೆ ಸೇರಿ ಕರುಳು ಕಿತ್ತು ಬರುವಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅಕಸ್ಮಾತ್ತಾಗಿ ಮಂಗಳೆಯು ಅಳುವುದು ಕಂಡರೆ ನರಸಮ್ಮ ಕಿಡಿಕಿಡಿಯಾಗುವಳು. "ನಿಂಗೇನು ಬಂದಿರೋದೂ?–ಹಿಂಗೆ ಒಂದೇ ಸಮ ಅಳಕ್ಕೆ?....ಗಮ್ಮನೆ ಎದ್ದು ಬಂದು ಕೇಮೆಮಾಡು. ಹಿಂಗಾದರೆ ನಿನ್ನ ಗಂಡನಿಗೆ ಚೆಂದಾಗಿ ಅಟ್ಟು ಹಾಕ್ತೀ!....ನಿಮ್ಮವ್ವ ಅದೇನಂತ ಹೆತ್ತುಬುಟ್ಲೋ ನಿನ್ನಂತ ಹೆಣ್ಣ?...." ಈ ಮಾತುಗಳನ್ನಾಲಿಸಿ ಮಂಗಳೆ ಇನ್ನೂ ಹೆಚ್ಚು ಹೆಚ್ಚು ಕಣ್ಣೀರು ಸುರಿಸುವಳು. ಮಾತು ಮಾತಿಗೆ ನರಸಮ್ಮ ಬೇಕೆಂತಲೇ 'ನಿನ್ನ ಗಂಡ–ನಿನ್ನ ಗಂಡ' ಎಂದು ಹೇಳಿ ಹೇಳಿ ಅಳುವಂತೆ ಮಾಡುತ್ತಿದ್ದಳು. ಈಗ ಅಷ್ಟೇ ಸಾಲದೆಂದು ಜೊತೆಗೆ ತನ್ನ ತಾಯಿಯನ್ನೂ ಬೆರೆಸಿಕೊಂಡುದು ಅವಳಿಗೆ ಸಹಿಸದಾಯಿತು : ಕಣ್ಣೀರು ಉಕ್ಕಿ ಉಕ್ಕಿ ಹರಿಯಿತು. "ಬೂಪಳಗಾತಿ.... ಬೂಪಳಗಾತಿ....ಏನೂ ಅರೀದ ಪಾಯಿ ಹಂಗೆ ಅಳ್ತಾ ಕುಂತವ್ಳೆ ಇಲ್ಲಿ, ಕೇಮೆ ಮಾಡಿದ್ರೆ ಕೆಟ್ಹೋಯ್ತೀನಿ ಅಂತಾವ, ಗೊತ್ತದೆ ನಿನ್ನ ಚಾಲೆಲ್ಲ, ಎದ್ದು ನಡೀಯೇ ಕಲಕೇತಿ ರಂಡೆ...." ಎಂದು ನರಸಮ್ಮ ಅಬ್ಬರಿಸಿದಳು.

ಒಂದು ರಾತ್ರಿ ಎಲ್ಲರೂ ತೊಟ್ಟಿಯಲ್ಲಿ ಮಲಗಿದ್ದರು. ಬೆಳಗಿನ ಝಾಮದ ಸಮಯದಲ್ಲಿ ಮಂಗಳೆ ಕನಸಿನಲ್ಲಿ ನಟರಾಜನನ್ನು ಕಂಡಳು. ತಾವಿಬ್ಬರೂ ಮುತ್ತರಾಯನ ಬೆಟ್ಟವನ್ನು ಹತ್ತಿ ಹೋಗುತ್ತಿದ್ದರು. ಆಗ ರಾತ್ರಿಯ ವೇಳೆ. ಎತ್ತೆತ್ತಲೂ ಅಂಧಕಾರ ಕವಿದುಕೊಂಡಿತ್ತು. ಮಂಗಳೆ ನಟರಾಜನ ಹಸ್ತವನ್ನು ಬಿಗಿಯಾಗಿ ಹಿಡಿದುಕೊಂಡಿದ್ದಳು. ಮೇಲೆ ಬಾನಿನಲ್ಲಿ ನಕ್ಷತ್ರ ಅಲ್ಲೊಂದು ಇಲ್ಲೊಂದು ಮಿನುಗುತ್ತಿದ್ದವು. ಜೀರುಂಡೆಗಳ ಜೀಕಾರರವ ಜೋಗುಳದಂತೆ ಅವಳ ಕಿವಿಯಲ್ಲಿ ಉಲಿಯುತ್ತಿತ್ತು. ಮಂಗಳೆಗೆ ಆ ಗಳಿಗೆಗೆ ಸ್ವರ್ಗದಲ್ಲೇ ತಾನು ನಡೆಯುತ್ತಿರುವಂತೆ ಅನುಭವವಾಗುತ್ತಿತ್ತು. ನಟರಾಜನೊಬ್ಬ ಅವಳ ಬಳಿಯಿದ್ದರೆ ಕಾಡೇ ಅವಳಿಗೆ ಸ್ವರ್ಗ!.... ಇಬ್ಬರೂ ಹಾಗೇ ಮುಂದೆ ಹೋಗಿ ಒಂದು ಮುತ್ತುಗದ ಮರದಡಿ ನಿಂತರು. ಅಲ್ಲಿ ಮುತ್ತುಗದ ಹೂವೊಂದನ್ನು ಕಿತ್ತು ನಟರಾಜ ಅವಳ ತುರುಬಿಗೆ ಸಿಕ್ಕಿಸುತ್ತಾ, "ನೀನೆಷ್ಟು ಸುಂದರಿಯೇ ಮಂಗಳೀ?" ಎಂದು ಬಾಚಿ ತಬ್ಬಿಕೊಂಡ. ಮಂಗಳೆಗೆ ತುಂಬ

ನಾಚಿಕೆಯಾಯಿತು. ಅವನ ತಲೆಯ ಕೂದಲಿನೊಡನೆ ಆಟವಾಡುತ್ತಾ "ನೀನು?" ಎಂದು ಬಿನ್ನಾಣದ ಪ್ರಶ್ನೆ ಹಾಕಿದಳು. ಹೊತ್ತು ಮಧುರವಾಗಿ ಕಳೆಯಿತು. ನಟರಾಜ ಮುತ್ತಿಟ್ಟಾಗಲಂತೂ ಮಂಗಳೆಯ ಧಮನಿಗಳಲ್ಲಿ ರಸಪ್ರವಾಹವೇ ಉಕ್ಕಿ ಉಕ್ಕಿ ಹರಿಯಿತು. ಅವನ ಕೊರಳಿಗೆ ತೆಕ್ಕೆಯಾಗಿ ಅಲ್ಲಿ ನಿಂತಂತೆ ಮಂಗಳೆಗೆ ಬಾಹ್ಯ ಜಗತ್ತಿನ ಪ್ರಜ್ಞೆಯೇ ತಪ್ಪಿಹೋದಂತಿತ್ತು. ಎಷ್ಟೋ ವೇಳೆ ಹೀಗೆ ಕಳೆದ ನಂತರ ಮಂಗಳೆ ಮೆಲ್ಲನೆ ನಟರಾಜನ ಕೆನ್ನೆಯನ್ನು ಸವರುತ್ತಾ, "ಇಷ್ಟು ದಿನ ಎಲ್ಲಗ್ಹೋಗಿದ್ದೆ ನನ್ನ ಬಿಟ್ಟುಬಿಟ್ಟು?" ಎಂದಳು.

"ನಟರಾಜ ಅವಳನ್ನು ಮತ್ತೊಮ್ಮೆ ಬರಸೆಳೆದು ಆಲಂಗಿಸಿ, ಇನ್ನೆಂದೆಂದಿಗೂ ನಿನ್ನನ್ನಗಲಿ ನಾನು ಹೋಗೋದಿಲ್ಲ. ಹೆದರಬೇಡ. ಇನ್ನು ಮುಂದೆ ನಾವಿಬ್ಬರೂ ಹೀಗೇ ಒಟ್ಟಿಗೇ ಇರುವವರು" ಎಂದು ಉಸುರುತ್ತಾ ಮೃದುವಾಗಿ, ಅತಿ ಮೃದುವಾಗಿ ಅವಳ ಕೆನ್ನೆಗೆ ತುಟಿ ತಾಗಿಸಿದ.

ಅವನ ಅಧರ ಸ್ಪರ್ಶದಿಂದ ಮಂಗಳೆ ಮತ್ತೊಮ್ಮೆ ಪುಳಕಿತಳಾದಳು. ಇನ್ನು ತನ್ನ ನಟರಾಜ ತನ್ನನೆಂದಿಗೂ ತೊರೆದುಹೋಗನೆಂದು ನಂಬಿದಳು. ಅವಳ ಹೃನ್ಮಂದಿರದಲ್ಲಿ ನೋವಿನ ಅಂಧಕಾರ ಅಳಿಸಿಹೋಗಿ ಸಂತಸದ ಸೂರ್ಯೋದಯವಾಗುವ ಸುಚಿಹ್ನೆ ಕಾಣಿಸಿತು. ಆದರೆ ಈ ಅನುಭವ ಕೆಲಗಳಿಗೆ ಮಾತ್ರ. ಹಠಾತ್ತನೆ ಬಲಿಷ್ಠ ವ್ಯಕ್ತಿಯೊಂದರ ಬಾಹುಗಳು ಅವಳನ್ನು ನಟರಾಜನಿಂದ ಪ್ರತ್ಯೇಕಿಸಿದವು. ಅನಂತರ ಆ ಬಲಿಷ್ಠ ವ್ಯಕ್ತಿ ಮಂಗಳೆಯನ್ನು ತನ್ನ ಬಂಧನದಲ್ಲಿ ಸಿಲುಕಿಸಿಕೊಂಡು ಎಲ್ಲಿಗೋ ಅವಳನ್ನು ಎಳೆದುಕೊಂಡು ಹೋಗುತ್ತಿತ್ತು. ಇದನ್ನೆಲ್ಲ ನಟರಾಜ ಸುಮ್ಮನೆ ನಿಸ್ಸಹಾಯನಾಗಿ ನೋಡುತ್ತ ನಿಂತಿದ್ದ. ಆ ಪ್ರಚಂಡ ಶಕ್ತಿಯೊಡನೆ ಹೋರಾಡಿ ತನ್ನನ್ನು ಉಳಿಸಿಕೊಳ್ಳುವ ಚೈತನ್ಯ ನಟರಾಜನಿಗಿಲ್ಲವೆಂದು ಮಂಗಳೆಯ ಮನಸ್ಸಿಗೆ ಸ್ವಲ್ಪ ಸ್ವಲ್ಪ ಅರಿವಾಯಿತು. ಆದರೂ ಮುಳುಗಿಹೋಗುತ್ತಿರುವವನು ಕೊನೆಯ ಪ್ರಯತ್ನ ಮಾಡುವಂತೆ "ನಟ್ರಾಜಾ–ನನ್ನ ಕೈ ಬಿಡಬೇಡ. ನೀನು ನನ್ನ ಸಹಾಯಕ್ಕೆ ಬರದಿದ್ದರೆ ನಾನು ಸತ್ತೇ ಹೋಗುತ್ತೇನೆ. ನೀನಿಲ್ಲದೆ ನನಗೆ ಈ ಜಗತ್ತೇ ಶೂನ್ಯ, ಬಾ ನನ್ನ ನೆರವಿಗೆ ಬಾ. ಈ ಕುತ್ತಿನಿಂದ ನನ್ನನ್ನು ಪಾರುಮಾಡು....ನಟ್ರಾಜ–ನಟ್ರಾಜ–" ಎಂದು ಚೀರಿಟ್ಟಳು.

ಆದರೆ ಅವಳ ಕರೆಗೆ ನಟರಾಜ ಓಗೊಡಲಿಲ್ಲ.

ಅವಳ ಪಕ್ಕದಲ್ಲಿ ಮಲಗಿದ್ದ ನರಸಮ್ಮ ಎಚ್ಚರಗೊಂಡು "ಅದ್ಯಾಕಿಂ ಹಂಗೆ ಅರಚಿಕಂಡೀ–ನಟರಾಜಾ ನಟರಾಜಾ ಅಂತಾವಾ?...ನಟರಾಜ ಎಲ್ಲಿದ್ದಾನು ಇಲ್ಲೀ? ಇಲ್ಲಿರೋನು ನಿನ್ನಗಂಡ ಸುಬ್ಬರಾಯಿ....ಎಂತ ನಾಚಿಗೆಟ್ಟ ಗರತಿಯಾ ನೀನು? ಲಗ್ನ ಮಾಡಿಕೊಂಡ ಮ್ಯಾಗೂ ಪರಪುರುಷನ ಧ್ಯಾನಮಾಡಕ್ಕೆ ನಾಚಿಕೆ ಆಗಕ್ಕಿಲ್ಲವಾ?...." ಎಂದು ನಿಷ್ಠುರವಾಗಿ

ಮೂದಲಿಸಿದಳು. ಹಠಾತ್ತನೆ ಕನಸೊಡೆದು ಎಚ್ಚರವಾಗಿ ಈ ಮಾತುಗಳನ್ನಾಲಿಸಿದ ಮಂಗಳೆ ತನ್ನ ದುರ್ವಿಧಿಯನ್ನು ಒಳಗೊಳಗೇ ಶಪಿಸಿದಳು. ತನಗಾದ ಅಪಾರ ನಷ್ಟವನ್ನು ನೆನೆನೆನೆದು ತನ್ನಲ್ಲೇ ಕೊರಗಿ ಕೃಶವಾದಳು.

೩೦

"ಕೊರಗಬ್ಯಾಡ ಕೊರಗಬ್ಯಾಡ ಅಂದರೆ ಯೇನವ್ವ ಮಾಡಲಿ ಚೆಲುವೀ? ನಾನೂ ಏಟೇಟೋ ಪರ್ಯತ್ನ ಮಾಡ್ತೀನಿ–ಸಮಾಧಾನ ತಂದುಕೊಳೂವಾ ಅಂತ....ಆದ್ರೂ ಆಗಕ್ಕಿಲ್ಲ ಕನಾ....ಅತ್ತಲಾ ಕಡೀಕೆ ಮಂಗಲೀ ಗೋಳನೇ ನೋಡೇನೊ.... ಇತ್ತಲಾ ಕಡೀಕೆ ನಟ್ರಾಜ ಸವೆದೂ ಸವೆದೂ ಕಡ್ಡಿ ಆಯ್ತಾ ಇರೋದ್ನೇ ನೋಡೇನೋ–ಯಾವ ಚೋರೀಕೆ ಯೋಚ್ಣೆ ಮಾಡಿದ್ರೂ ನನ್ನೆದೆ ಒಳ್ಳಿ ಅವಲಕ್ಕಿ ಕುಟ್ಟಿದಂಗೆ ದಬ ದಬ ಅಂತ ಬಡಕೊತ್ತದೆ ಕನವ್ವಾ...."

ಈಗಾರು ತಿಂಗಳಿಂದಲೂ ಪಾರ್ವತಮ್ಮನದು ಇದೇ ರಾಗ; ಇದೇ ಹಾಡು. ನಟರಾಜನ ಅಲೆದಾಟ ಅವಳಲ್ಲಿ ಕಳವಳವನ್ನುಂಟುಮಾಡಿತ್ತು. ಬೆಳಿಗ್ಗೆ ಕಾಡಿಗೆ ಹೋದವನು ಮನೆ ಸೇರಬೇಕಾದರೆ ರಾತ್ರಿಯಾಗುತ್ತಿತ್ತು. ಒಂದೊಂದು ಸಲ ಹುಣಸೂರಿಗೊ ಎಡತೊರೆಗೊ ಹೋಗಿ ದಿನಗಟ್ಟಲೆ ಊರಿಗೆ ಹಿಂದಿರುಗುತ್ತಿರಲಿಲ್ಲ. ಆ ದಿನಗಳಲ್ಲಿ ಅವನ ಬಾಲ್ಯಸ್ನೇಹಿತರಾದ ಮರಿಯೂ ಪುಟ್ಟನೂ ನಟರಾಜನ ಮನಸ್ಸನ್ನು ನೆಮ್ಮದಿಗೆ ತರಲು ಬಹಳವಾಗಿ ಸಾಹಸ ಮಾಡಿದರು. ಅವನು ಮನೆ ಬಿಟ್ಟು ಹೊರಟನೆಂದರೆ ಮರಿಯಾಗಲಿ–ಪುಟ್ಟನಾಗಲಿ ಒಬ್ಬ ತಪ್ಪಿದರೆ ಒಬ್ಬ–ಅವನ ಜೊತೆಗೆ ಇದ್ದೇ ಇರುತ್ತಿದ್ದರು. ಆ ವಿಷಮಪರಿಸ್ಥಿತಿಯಲ್ಲಿ ಅವರಿಬ್ಬರೂ ಹಾಗೆ ನಟರಾಜನನ್ನು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳದಿದ್ದರೆ ಅವನು ಏನಾಗುತ್ತಿದ್ದನೊ, ಏನೊ!

ನಟರಾಜನನ್ನು ಆ ಸ್ಥಿತಿಯಲ್ಲಿ ನೋಡಿದಾಗ ಚೆಲುವಮ್ಮನಿಗೂ ಮರುಕವುಂಟಾಗುವುದು. ಹುಡುಗ ದಿನೇ ದಿನೇ ಕೃಶವಾಗುತ್ತಿರುವುದನ್ನವಳು ನೋಡಿ ನಡುಗುವಳು–

"ಸುಮ್ಮಕೆ ಯೋಚ್ಣೆ ಮಾಡಿದರೆ ಯೇನು ಬತ್ತದೆ ಚಿಕ್ಕವ್ವ...ಒಂದು ಲಗ್ಣ ಅಂತಲಾರೂ ಮಾಡಿದರೆ ಒಂದು ಹದಕ್ಕೆ ಬಂದಾತು ಉಡುಗ...." ಎಂದು ಪಾರ್ವತಮ್ಮನಿಗೆ ಸಲಹೆ ಮಾಡುವಳು.

"ಅಯ್ಯೋ ಮಂಗಲಿ ಗೀಳು ಹಿಡಿಕೊಂಡಿರೋನು_ತಿರುಗ ಲಗ್ಣ ಆಗಕ್ಕೆ ಒಪ್ಪಾನಾ? ನಿಂಗೊಂದು ಒತ್ತೋಗದು...." ಎಂದು ಮೇಲೆ ಅಟಕಾಯಿಸಿದರೂ ಪಾರ್ವತಮ್ಮನ ಒಳಮನಸ್ಸು "ಹೌದು. ಲಗ್ನವನ್ನಾದರೂ ಮಾಡಿ ನೋಡಬೇಕು. ಆಗಲಾದರೂ ನಟರಾಜನ ಮನಸ್ಸಿಗೆ ಒಂದು ನೆಮ್ಮದಿ ಬಂದರೂ ಬರಬಹುದು" ಎಂದುಕೊಳ್ಳುತ್ತಿತ್ತು.

ಹೀಗಿರುವಾಗ ಒಂದು ದಿನ ಗಟ್ಟಿ ಮನಸ್ಸು ಮಾಡಿ ಪಾರ್ವತಮ್ಮ ನಟರಾಜನೊಡನೆ ಮದುವೆಯ ಪ್ರಸ್ತಾಪವನ್ನೆತ್ತಿಯೇಬಿಟ್ಟಳು.

"ಹಿಂಗಾದರೆ ಹೆಂಗಾ ಮೊಗಾ?....ಸುಮ್ಮಕೆ ಹಿಂಗೆ ತಿರುಗಿಕೊಂಡು ಕಾಲ ಕಳದುಬುಟ್ಟರೆ ಚೆಂದವಾ?....ಆದದ್ದಾಗೋಯ್ತು.... ಆಗೋದ್ದನ್ನೇ ಯೋಚ್ನೆಮಾಡ್ತಾ ಕುಂತುಕೊಂಡರೆ ಮುಂದಕ್ಕೆ ಬಾಳಾಟ ಮಾಡಕ್ಕಾದಾತಾಪ್ಪs ಯಾವುದಾರ ಹೆಣ್ಣು ಲಗ್ನಾಗಿ ಬದುಕಾಡೋದು ಕಂಡಿವ್ನೀ....."

ಪಾರ್ವತಮ್ಮ ತನ್ನ ಮಾತು ಪೂರ್ತಿ ಮಾಡುವುದರೊಳಗೆ ಊಟಮಾಡುತ್ತ ಕುಳಿತಿದ್ದ ನಟರಾಜ ಕಣ್ಣೀರಿಡುತ್ತ ಹಾಗೆಯೇ ತಟ್ಟೆಗೆ ಕೈ ತೊಳೆದು ಎದ್ದುಬಿಟ್ಟ.

ಆದರೆ ಪಾರ್ವತಮ್ಮ ಇಷ್ಟರಿಂದಲೇ ನಿರಾಶೆ ಹೊಂದಲಿಲ್ಲ. ಪದೇ ಪದೇ ತಮ್ಮನ ಮುಂದೆ ಒಂದಲ್ಲ ಒಂದು ನೆಪ ತೆಗೆದುಕೊಂಡು ವಿವಾಹದ ವಿಚಾರವನ್ನು ಎತ್ತುತ್ತಲೇ ಇದ್ದಳು. ಅಕ್ಕನ ಮಾತಿಗೆಲ್ಲಾ ನಟರಾಜನದು ಒಂದೇ ಉತ್ತರ–

"ನನಗೇಕೆ ಮದುವೆ ಅಕ್ಕೈಯ್ಯ?" ಎಂದು ನಗುತ್ತಿದ್ದ.

"ಹಂಗಂದ್ರೆ ಯೇನು?....ಮದ್ವೇನೆ ಆಗಕ್ಕಿಲ್ಲ ಅಂತಲಾ ನೀನುs...."

"ಹೌದು. ಆಗಲೇಬಾರದು ಅಂತ ನಿರ್ಧರಿಸಿಬಿಟ್ಟಿದೀನಿ" ಎಂದು ಖಡಾಖಂಡಿತವಾಗಿ ನುಡಿಯುತ್ತಿದ್ದನು ನಟರಾಜ.

ಹೀಗೆ ಮೂರು ನಾಲ್ಕು ತಿಂಗಳುಗಳು ಕಳೆದವು. ಪಾರ್ವತಮ್ಮನ ಕಾಯಿಲೆಯಲ್ಲಿ ಬಂದಿರದ ನಂಜುಂಡಸ್ವಾಮಿ ಈಗ ಅವಳನ್ನು ನೋಡಿಕೊಂಡು ಹೋಗಲು ಕಲ್ಲಹಳ್ಳಿಗೆ ಬಂದ.

ಒಂದೆರಡು ದಿನದಲ್ಲಿ ಅವನಿಗೂ ಮನೆ ಸೇರದೆ ಅಲೆಯುತ್ತಿದ್ದ ನಟರಾಜನ ವಿಷಯವಾಗಿ ಕಳವಳವುಂಟಾಯಿತು. ಪಾರ್ವತಮ್ಮನೊಡನೆ ಯಾವುದೋ ವಿಚಾರ ಮಾತನಾಡುತ್ತಿರುವಾಗ ಅದೇ ವಿಷಯವನ್ನೆತ್ತಿಕೊಂಡು, "ನಟರಾಜನ್ನ ಇನ್ನು ಹೀಗೆ ಬಿಡೋದು ಚೆನ್ನಾಗಿಲ್ಲ. ಏನೊ ಓದುತ್ತಾನೆ, ಒಂದು ಎಸ್.ಎಸ್.ಎಲ್.ಸಿ.ನಾದರೂ ಪ್ಯಾಸ್ ಮಾಡ್ತಾನೆ ಅಂತ ಆಸೆ ಇಟ್ಟುಕೊಂಡಿದ್ದೆ. ಉಹ್ಞು. ಇಲ್ಲ. ಅವನ ನಸೀಬು ಖೋತಾ. ಏನು ಮಾಡೋದು....ಹೋಗಲಿ ರೈಲಿನಲ್ಲಿ ಒಂದು ಅಂಡರ್‌ಗಾರ್ಡ್ ಕೆಲಸವಾದರೂ ಕೊಡಿಸಿಬಿಡ್ತೀನಿ" ಎಂದ.

ಆದರೆ ನಂಜುಂಡಸ್ವಾಮಿಯ ಈ ಮಾತಿಗೆ ಪಾರ್ವತಮ್ಮನ ಒಪ್ಪಿಗೆ ಸಿಕ್ಕಲಿಲ್ಲ.

"ನೀ ರೈಲಿನಲ್ಲಿ ಕೆಲಸ ಕೊಡಸೋದು ಯೇನೋ ಸರಿ....ಆದ್ರೆ ಅದಕ್ಕೆ ಮೊದ್ಲು ಅವನಿಗೆ ಒಂದು ಮದ್ವೆ ಅಂತ ಮಾಡಿಬುಡಬೇಕು...." ಎಂದವಳು ಏನನ್ನೊ

ನೆನೆದುಕೊಂಡವಳಂತೆ "ಚಿಕ್ಕ ಮೊಗೀನಿಂದಲೂ ಮಂಗಲಿ ನಟ್ರಾಜನಿಗೇ ಅಂತಲೇ ಬೆಳೆದ್ಲುಕ... ನಂಗೂ ಬರಬಾರದ ಕಾಯ್ಲೆ ಬಂದು, ನಟ್ರಾಜನೂ ಸೆರ್ಮನೆ ಸೇರಿ–ಆಗಬಾರದ್ದೆಲ್ಲ ಆಗೋಯ್ತು....ನಾ ಇದ್ನೆಲ್ಲಾ ಕಣ್ಣಲ್ಲಿ ನೋಡಿಕೊಂಡಿರಾಕೆ ಉಳಿಕೊಂಡಂಗಾಯ್ತು ಚಿಕ್ಕಯ್ಯ....." ಎಂದು ರೋದಿಸಲಾರಂಭಿಸಿದಳು.

"ಯಾಕೆ ಅಳ್ತೀಯೆ ಪಾರತೀ?.....ಋಣಾನುಸಂಬಂಧ ಹೆಂಗಿತ್ತೊ ಹಂಗೆ ಆಗಿಹೋಯ್ತು.....ಈಗಲೂ ಏನು, ನೀನು ಹೇಳಿದ ಹಾಗೆ ಎಲ್ಲಾದರು ಒಳ್ಳೇ ಕಡೆ ನೋಡಿ ಮದುವೆ ಮಾಡಿಬಿಡೋಣ ನಟರಾಜನಿಗೆ," ಎಂದು ಧೈರ್ಯ ಹೇಳಿದ ನಂಜುಂಡಸ್ವಾಮಿ.

"ಯೇನೋ ಯೆಲ್ಲ ನಿಮಗೇ ಬುಟ್ಟದ್ದು ಚಿಕ್ಕಯ್ಯ....ಚಿಕ್ಕಂದಿನಿಂದ ಇದ್ಯಾ ಬುದ್ಧಿ ಕಲಿಸಿ ಅವನ್ನ ನೋಡಿಕೊಂಡೋರು ನೀವೇಯಾ ! ಈಗಲೂ ಆ ತಬ್ಬಲಿ ಕಂದನಿಗೆ ಲಗ್ಣ ಅಂತ ಮಾಡಿ ಒಂದು ದಾರಿ ತೋರಬೇಕಾದ್ದೂ ನೀವೇಯಾ." ಎಲ್ಲ ಭಾರವನ್ನೂ ನಂಜುಂಡಸ್ವಾಮಿಯ ಮೇಲೆ ಹಾಕಿದಳು ಪಾರ್ವತಮ್ಮ.

"ಈಗೇನು ಪಾರತಿ. ಅವನಿಗೆ ಮನಸು ಒಪ್ಪಿದ ಕಡೆ ಹುಡುಕೋಣ. ಮೈಸೂರಿನಲ್ಲೂ ಬೇಕಾದರೆ ವಿಚಾರಿಸ್ತೇನೆ....ಅಂತೂ ನೀನು ಹೇಳಿದ ಹಾಗೆ ಈ ಸಾರಿ ನಟರಾಜನ ಮದುವೆ ಏರ್ಪಾಡು ಇಟ್ಟುಬಿಡೋಣ. ಅವನಿಗೊಂದು ಮದುವೆ ಅಂತ ಆದಮೇಲೆ ರೈಲು ಕೆಲಸಕ್ಕೂ ಸೇರಿಸಿಬಿಡ್ತೀನಿ....ಇನ್ನೇನು?"

"ಅದು ಸರಿಕನ ಚಿಕ್ಕಯ್ಯ. ಅದೆಲ್ಲ ಮಾಡ್ತೀ ಕನಂತೆ ನೀನೂ,...ಮೊದ್ಲು ನಟ್ರಾಜ ಒಪ್ಪಿಕೋಬೇಕಲ್ಲ–ಲಗ್ಣ ಆಯ್ತೀನಿ ಅಂತ...." ಎಂದು ಸಂದೇಹ ಪಟ್ಟಳು ಪಾರ್ವತಮ್ಮ.

"ಒಪ್ಪದೆ ಏನು ಮಾಡ್ತಾನೆ. ರಾತ್ರೆ ಅವನು ಮನೇಗೆ ಬಂದಾಗ ಯಾವುದನ್ನೂ ಇತ್ಯರ್ಥ ಮಾಡಿಬಿಡೋಣ."

ಅದೇ ರಾತ್ರಿ ಎಲ್ಲರೂ ಊಟವಾದ ನಂತರ ನಟರಾಜನನ್ನು ಜಗುಲಿಯ ಮೇಲೆ ಕೂರಿಸಿಕೊಂಡು ನಂಜುಂಡಸ್ವಾಮಿ ಮದುವೆಯ ಸುದ್ದಿ ಎತ್ತಿದನು. ಆದರೆ ಅವನು ಎಷ್ಟು ವಿಧವಾಗಿ ಹೇಳಿದರೂ ವಿವಾಹಕ್ಕೆ ಸಮ್ಮತಿಸಲು ನಟರಾಜನ ಮನಸ್ಸು ಒಡಂಬಡಲಿಲ್ಲ. ನಂಜುಂಡಸ್ವಾಮಿಗೆ ಇದರಿಂದ ತುಂಬ ನೋವಾಯಿತು. ಕಡೆಯದಾಗಿ ಒಂದು ಮಾತು ಹೇಳಿ ನೋಡುವುದೆಂದು, "ಮನುಷ್ಯ ಅಂತ ಹುಟ್ಟಿದ ಮೇಲೆ ಮದ್ವೆ ಆಗದೆ ಇರೋಕೆ ಆಗ್ತದೇನು? ನೋಡಿದೋರು ಏನಂದಾರು?–ಸುಮ್ಮನೆ ಒಪ್ಪಿಕೊಂಡುಬಿಡು" ಎಂದ.

"ಜನ ಅಂತಾರೆ ಅಂತ ಬಾವಿಬೀಳೋಕೆ ಆಗ್ತದಾ ಚಿಕ್ಕಯ್ಯ?"

ನಟರಾಜನಿಗೆ ಅರಿವಾಗದಂತೆಯೇ ಮಾತು ಹೊರಬಿದ್ದಿತ್ತು. ಮೊದಲೇ ಬೇಸರಗೊಂಡಿದ್ದ ನಂಜುಂಡಸ್ವಾಮಿಯ ಮನಸ್ಸನ್ನು ಈ ಮಾತೂ ಮತ್ತೂ ಘಾಸಿಗೊಳಿಸಿತು.

"ಹು. ಅದರ ಮೇಲೆ ನಿನ್ನ ಹಣೆಬರಹ" ಎಂದು ಎದ್ದುನಿಂತ.

ತನ್ನನ್ನು ತಂದೆಯಂತೆಯೇ ಪ್ರೀತಿಯಿಂದ ಕಾಣುತ್ತಿದ್ದ ನಂಜುಂಡಸ್ವಾಮಿಯ ಮಾತಿಗೆ ನಟರಾಜ ಎಂದೂ ಎದುರಾಡಿದವನಲ್ಲ. ಅವನೊಡನೆ ಸಂಭಾಷಿಸುವಾಗ ತಲೆ ತಗ್ಗಿಸಿ ಮಾತಾಡುವುದೇ ನಟರಾಜನ ಅಭ್ಯಾಸ. ಆದರೆ ಇಂದು ಅವನ ಬಾಳುವೆ ಒಡೆದ ಗಡಿಗೆಯಂತೆ ಚೂರು ಚೂರಾಗಿರುವಾಗ ಮೈ ಮರೆತು ಹಾಗೆ ನುಡಿದಿದ್ದ; ಅಷ್ಟೆ. ಆದರೂ ತನ್ನ ಮಾತಿನಿಂದ ನೊಂದುಕೊಂಡ ಚಿಕ್ಕಪ್ಪನ ಮುಖವನ್ನು ನೋಡ ನೋಡಿದಂತೆ ಅವನ ಹೃದಯದೊಳಗೆ ಯಾರೋ ಅಲಗನ್ನಿಟ್ಟು ತಿರುವಿದಂತಾಯಿತು.

ಅಷ್ಟರಲ್ಲಿ ಬೀದಿ ಬಾಗಿಲ ಮರೆಗೆ ನಿಂತು ಅವರಿಬ್ಬರ ಮಾತನ್ನು ಕುತೂಹಲದಿಂದ ಆಲಿಸುತ್ತಿದ್ದ ಪಾರ್ವತಮ್ಮ ಸರಕ್ಕನೆ ಜಗುಲಿಗೆ ಬಂದು ನಟರಾಜನ ಕೈಗಳೆರಡನ್ನೂ ಹಿಡಿದುಕೊಂಡು ಹೇಳಿದಳು:

"ಒಪ್ಪಿಕೊಂಬುಡು ನನ್ನ ಕಂದಕ... ಚಿಕ್ಕಯ್ಯನ ಮಾತನಾರೂ ತೆಗೆದು ಆಕಬ್ಯಾಡ....ನೀನು ಒಂದು ಲಗ್ಣ ಅಂತ ಆಗಿ ನಿನ್ನ ಹೊಟ್ಟೇಲಿ ಒಂದು ಕೊನೆ ಕಂಡೇನಾ–ನಮ್ಮ ವಂಸ ಇರೋ ನೀನೊಬ್ಬ ಗಂಡುಮಗನಿಂದ ಉದ್ಧಾರ ಆದಾತಾ–ಅಂತ–ಕುದೀತಾ ಅದೇ ನನ್ನ ಮನಸು. ಒಪ್ಪಿಕೊಪ್ಪಾ...."

ಹಾಗೆ ಹೇಳುವಾಗ ಅವಳ ಕಣ್ಣುಗಳಲ್ಲಿ ನೀರಾಡುತ್ತಿತ್ತು. ಕಂಠ ಗದ್ಗದಿತವಾಗಿತ್ತು. ಪಾರ್ವತಮ್ಮ ರೋದಿಸುವುದನ್ನು ಕಂಡ ನಂಜುಂಡಸ್ವಾಮಿಯ ನಯನಗಳೂ ಅಶ್ರುಪೂರಿತವಾದವು.

ಈ ಸಂದರ್ಭದಲ್ಲಿ ಏನು ಹೇಳುವುದಕ್ಕೂ ನಟರಾಜನಿಗೆ ತೋರದೆ ಹೋಯಿತು. ಒಂದು ಕಡೆ ಅಕ್ಕ ಇನ್ನೊಂದು ಕಡೆ ಚಿಕ್ಕಪ್ಪ–ಇಬ್ಬರೂ ತನ್ನ ಬಾಳಿನ ದೇಹಕ್ಕೆ ಎರಡು ಭುಜಗಳಾಗಿ ನಿಂತು ತನ್ನನ್ನು ದೊಡ್ಡವನನ್ನಾಗಿ ಬೆಳೆಸಿದರು.....ಅವರಿಬ್ಬರೂ ತನಗಾಗಿ ಮರುಗುತ್ತಿದ್ದಾರೆ–ತನಗಾಗಿ ಕಣ್ಣೀರು ಸುರಿಸುತ್ತಿದ್ದಾರೆ. ತನ್ನ ಬದುಕು ಒಂದು ನೆಲೆಗೆ ಬಂದು, ಶ್ರೇಯಸ್ಸಾದೀತೆ ? ಎಂದು ಹಂಬಲಿಸುತ್ತಿದ್ದಾರೆ–ಇವೆಲ್ಲದರ ಚಿಂತನೆ ನಟರಾಜನ ಹೃದಯವನ್ನು ಹಣ್ಣು ಮಾಡಿಬಿಟ್ಟಿತು. ಅವನು ಸ್ತಬ್ಧನಾಗಿ ಮಿಕಿಮಿಕಿ ನೋಡುತ್ತ ಕುಳಿತನು.

ಆದರೆ ನಟರಾಜನ ಮೌನ ಪಾರ್ವತಮ್ಮನನ್ನು ಮತ್ತಷ್ಟೂ ಭೀತಿಗೊಳಿಸಿತು, ಆ ಮೌನವಿವಾಹದ ಸಂಬಂಧದಲ್ಲಿ ಅವನ ಅಸಮ್ಮತಿಯನ್ನೇ ಸೂಚಿಸುವುದಾಗಿದೆ, ಎಂದು ಅನುಮಾನಿಸಿದಳಾಕೆ. ಕೂಡಲೇ–ಹೇಗಾದರೂ ಮಾಡಿ ಅವನನ್ನು ಒಪ್ಪಿಸಿಬಿಡಬೇಕೆಂದು ಆತುರದಲ್ಲಿ–ನಟರಾಜನ ಕಾಲುಗಳನ್ನು ತನ್ನೆರಡೂ ಕೈಗಳಿಂದ ತಬ್ಬಿ ಹಿಡಿದುಕೊಂಡು, "ಹಟ ಮಾಡಬ್ಯಾಡ ಕಂದಕ... ನಮ್ಮ ವಂಸ ಉದ್ದಾರ ಮಾಡಪ್ಪಾ..." ಎಂದು ಬೇಡಿದಳು.

"ನೀನೇನಾರ ಒಪ್ಪಿಕೊಳದೆ ಓದರೆ ಪ್ರಾಣಾನೆ ಕಳಕೊಂಬುಡ್ತೀನಿ ನಾನು" ಎಂದು ಬೆದರಿಕೆ ಹಾಕಿ, ಗಟ್ಟಿಯಾಗಿ ಅಳತೊಡಗಿದಳು.

ನಟರಾಜನಿಗೆ ಯಾರೊ ತನ್ನ ತಲೆಯನ್ನು ಹಿಡಿದು ಬುಗುರಿಯಂತೆ ಗಿರಗಿರನೆ ತಿರುಗಿಸಿದಂತಾಯಿತು. ಆ ಗಳಿಗೆಗೆ ಮನಸ್ಸಿನ ಸ್ಥಿಮಿತ ತಪ್ಪಿ, ವಿವೇಕಶೂನ್ಯನಾದವನಂತಾಗಿ, "ಹು...ಹೇಗಾದರೂ ಮಾಡಕ್ಕ" ಎಂದುಬಿಟ್ಟ.

ಪಾರ್ವತಮ್ಮನಿಗೆ ಅಷ್ಟೇ ಸಾಕಾಯಿತು. ಮೈಸೂರಿನಲ್ಲೆಲ್ಲಾದರೂ ಹೆಣ್ಣು ನೋಡಬೇಕೆಂದು ನಂಜುಂಡಸ್ವಾಮಿಗೆ ಗಂಟುಬಿದ್ದಳು. ಮಾರನೆಯ ದಿನ, ಕ್ಷಿಪ್ರದಲ್ಲಿಯೇ ಹುಡುಕುವುದಾಗಿ ಮಾತುಕೊಟ್ಟಲ್ಲದೆ ಮೈಸೂರಿನ ಬಸ್ಸು ಹತ್ತಲು ನಂಜುಂಡಸ್ವಾಮಿಯನ್ನು ಬಿಡಲಿಲ್ಲ ಪಾರ್ವತಮ್ಮ.

ಮುಂದೆ ಹದಿನೈದು ದಿನಗಳಲ್ಲಿ ನಟರಾಜ ಮೈಸೂರಿಗೆ ಹೊರಟು ಬರಬೇಕೆಂದು ನಂಜುಂಡಸ್ವಾಮಿಯಿಂದ ಪತ್ರ ಬಂದಿತು. ಆಗಲೂ ಅವನನ್ನು ಮೈಸೂರಿನ ಬಸ್ಸು ಹತ್ತಿಸಬೇಕಾದರೆ ಪಾರ್ವತಮ್ಮನಿಗೆ ಸಾಕುಸಾಕೆನಿಸಿತು.

ಮೈಸೂರಿನಲ್ಲಿ ನಂಜುಂಡಸ್ವಾಮಿ ಐದಾರು ಕಡೆಗೆ ನಟರಾಜನನ್ನು ಕರೆದುಕೊಂಡು ಹೋಗಿ ಹೆಣ್ಣುಗಳನ್ನು ತೋರಿಸಿದನು. ಆದರೆ 'ಬೇಕಿಲ್ಲ' ಎಂದು ಹೇಳುವುದರ ಬದಲು 'ಚೆನ್ನಾಗಿಲ್ಲ' ಎಂದು ಹೇಳಿ ಪ್ರತಿಯೊಂದು ಹೆಣ್ಣನ್ನೂ ನಿರಾಕರಿಸಿಬಿಟ್ಟನು ನಟರಾಜ.

ಇನ್ನೂ ಕೆಲವು ವಾರಗಳು ಕಳೆದವು. ಹುಣಸೂರಿನಲ್ಲೇ ಒಂದು ಕನ್ಯೆ ಇರುವುದೆಂದು ತಿಳಿದು ನಂಜುಂಡಸ್ವಾಮಿ ಒಂದು ಶನಿವಾರ ಹುಣಸೂರಿಗೆ ಕನ್ಯಾನ್ವೇಷಣೆಗಾಗಿ ಬಂದನು.

ಆದರೆ ಅಲ್ಲಿ ನಂಜುಂಡಸ್ವಾಮಿಗೇ ಮನಸ್ಸು ಒಡಂಬಡಲಿಲ್ಲ–

ಹುಡುಗಿಯೇನೋ ಚೆನ್ನಾಗಿದ್ದಿತು. ಆದರೆ ಆ ಹುಡುಗಿಯ ನಡತೆಯಾಗಲೀ ಆ ಮನೆಯವರ ನಡತೆಯಾಗಲೀ ಅವನಿಗೆ ಸರಿಬೀಳಲಿಲ್ಲ. ನೆರೆಹೊರೆಯವರೂ ಅವರ ವಿಚಾರವಾಗಿ ಅನೇಕ ಆರೋಪಗಳನ್ನು ಮಾಡಿದುದರಿಂದ ಹೆದರಿ ಅಲ್ಲಿಂದ ಹೊರಟು ನೇರವಾಗಿ ಕಲ್ಲಹಳ್ಳಿಗೆ ಬಂದು ವಿಚಾರಗಳನ್ನು ಪಾರ್ವತಮ್ಮನ ಮುಂದಿಟ್ಟನು.

ಆಕೆಗಂತೂ ದಿಕ್ಕೇ ತೋಚದಂತಾಯಿತು.

"ಯೇನೊ ಚಿಕ್ಕಯ್ಯ, ನಂಗೆ ಒಂದೂ ತಿಳೀನೆ ಒಲ್ಲದು....ಆ ಬಗವಂತನೆ ದಾರಿ ತೋರಿಸಬೇಕು" ಎಂದು ಹೇಳುತ್ತಿರುವಂತೆ ಅವಳ ಮೈಯೆಲ್ಲಾ ಚಳಿ ಚಳಿಯಾದಂತಾಯಿತು– ಈಗೀಗ, ನಟರಾಜ ಮೈಸೂರಿನಲ್ಲಿ ನಂಜುಂಡಸ್ವಾಮಿ ತೋರಿಸಿದ ಒಂದು ಹೆಣ್ಣನ್ನೂ ಒಪ್ಪದೇ ಹಿಂದಿರುಗಿದಂದಿನಿಂದ ಸಣ್ಣದಾಗಿ ಅವಳ ಮೈಯಲ್ಲಿ ಜ್ವರ ಕಾಯಲು ಆರಂಭಿಸಿತ್ತು.

ನಂಜುಂಡಸ್ವಾಮಿಯೂ ಗಾಢವಾದ ಆಲೋಚನೆಯಲ್ಲಿ ಮುಳುಗಿ ಮೌನವಾಗಿ ಕುಳಿತುಬಿಟ್ಟಿದ್ದನು.

ಹಾಗೆಯೇ ಕೆಲಕಾಲ ಕುಳಿತಿದ್ದು ಕತ್ತೆತ್ತಿದಾಗ ತಂಬಿಗೆಯಲ್ಲಿ ನೀರು ಹಿಡಿದು ನಿಂತ ದುರ್ಗಿ ಎದುರಿಗೇ ಕಾಣಿಸಿದಳು.

"ಓ ! ಕೈಕಾಲು ತೊಳೆದುಕೊಳ್ಳೋಕೆ ನೀರು ಸಿದ್ಧವಾಗಿದೆ. ಆಗಲೆ ಅಡಿಗೆ ಎಲ್ಲ ಆಯಿತಾ ದುರ್ಗೀ ?" ಎಂದು ದುರ್ಗಿಯನ್ನು ಮಾತಾಡಿಸಿದ ನಂಜುಂಡಸ್ವಾಮಿ.

"ಹೂ...." ಎಂದು ನಾಚಿಕೆಯಿಂದಲೇ ಅವನ ಕೈಕಾಲಿಗೆ ನೀರಿತ್ತು ಒಳಗೆ ನಡೆದಳು ದುರ್ಗಿ.

ಅವಳನ್ನು ನೋಡುತ್ತಿರುವಂತೆ ನಂಜುಂಡಸ್ವಾಮಿಯ ಮನಸ್ಸಿಗೆ ಏನೊ ಹೊಳೆದಂತಾಯಿತು. ಥಟ್ಟನೆ ಪಾರ್ವತಮ್ಮನ ಕೈಹಿಡಿದುಕೊಂಡು, "ಈ ದುರ್ಗಿ ಏನಾಗಿದ್ದಾಳೆ ಪಾರತಿ–ಇವಳ್ನೇ ಯಾಕೆ ನಮ್ಮ ನಟರಾಜನಿಗೆ ತಂದುಕೋ ಬಾರದು?"

"ಊ....ನಂಗೆ ಒಳಿನೇ ಬ್ಯಾಡದಾ?–ಹಟ್ಟೀಲೆ ಒಡವೆ ಮಡಗಿಕೊಂಡು ಬೀದೀಲೆಲ್ಲ ತಡಕಾಡಿದ ಹಂಗೆ !...." ಎಂದ ಪಾರ್ವತಮ್ಮ "ಆದ್ರೆ ನಟ್ರಾಜ ಒಪ್ಪಬೇಕಲ್ಲ?–" ಎಂದು ಶಂಕಿಸುತ್ತ ಬಿಸುಸುಯ್ದಳು.

"ಯಾಕೆ, ಸ್ವಲ್ಪ ಉಬ್ಬಲ್ಲಾದರೂ ನಾವು ನೋಡಿದ ಹೆಣ್ಣುಗಳಲ್ಲೆಲ್ಲ ಈ ದುರ್ಗಿಯೇ ವಾಸಿ ಅಂತ ಹೇಳಬೇಕು. ನಾನು ನೋಡಿದ ಮಟ್ಟಿಗೆ ಗುಣವೂ ಚೆನ್ನಾಗಿರೊ ಹಾಗೆ ತೋರುತ್ತದೆ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಸಂಬಂದದ್ದೇ....ಇದನ್ನೂ ಒಪ್ಪದೆ ಹೋದರೆ ಅವನ ಮದುವೆ ತಿಂಗಳ ಮಾವನ ಮದುವೆ ಹಾಗೆ ತಳ್ಳಿಕೊಂಡೇ ಹೋಗ್ತಾ ಇರ್ತದೆ, ಅಷ್ಟೆ"

"ಅದೇನೋ ದಿಟ ಕನ ಚಿಕ್ಕಯ್ಯ....ದುರ್ಗಿ ಬೋ ಗುಣವಂತ ಎಣ್ಣು... ನಟ್ರಾಜನ್ನ ಹೆಂಗಾರೂ ಒಪ್ಪಿಸಿಬುಡಬೇಕು."

ತಲೆಗೆ ಹೊಳೆದುದೇ ತಡ, ನಟರಾಜನನ್ನು ಒಪ್ಪಿಸುವ ಯತ್ನವೂ ನಡೆಯಿತು....ಇಬ್ಬರೂ ಸೇರಿ ನಟರಾಜನನ್ನು ಬೇಡಿ, ಕಾಡಿ ಅವನಿಂದ "ಹು, ನಿಮ್ಮಿಷ್ಟ ಬಂದಂತೆ ಮಾಡಿಕೊಳ್ಳಿ" ಎನ್ನಿಸಿಬಿಟ್ಟರು.

* * *

ಮದುವೆ ಕೊತ್ತೇಗಾಲದಲ್ಲೇ ನಡೆಯಿತು.

ನರಸಮ್ಮನಿಗೆ ಮೊಮ್ಮಗಳ ಮದುವೆ ಎಂದು ಸಂತೋಷ, ಚೆಲುವಮ್ಮನಿಗೆ ಒಳ್ಳೆಯ ಅಳಿಯ ಸಿಕ್ಕಿದನೆಂದು ಸಂತೋಷ. ಪಾರ್ವತಮ್ಮನಿಗೆ ತನ್ನ ತಮ್ಮ ಕಡೆಗಾದರೂ ಒಪ್ಪಿ ಮದುವೆಯಾಗುತ್ತಿದ್ದಾನೆ, ತನ್ನ ಮನೆತನ, ತನ್ನ ವಂಶ, ತನ್ನ ತೌರು ಉಳಿದಂತಾಯಿತು ಎಂಬ ಸಂತೋಷ...ಒಟ್ಟಿನಲ್ಲಿ ಎಲ್ಲರಿಗೂ ಸಂತೋಷ, ಎಲ್ಲರಿಗೂ ಸಂಭ್ರಮ. ತನ್ನ ನೋವನ್ನು ಸಾಹಸದಿಂದ ತನ್ನ ಹೃದಯದೊಳಗೇ ತುಳಿದಿಡಲು ಯತ್ನಿಸುತ್ತಾ ಮಂಗಳೆಯೂ ಆ ಸಂಭ್ರಮದಲ್ಲಿ ಭಾಗವಹಿಸಿದಳು. ಸಡಗರದಿಂದ ಓಡಾಡಿಕೊಂಡು ದುರ್ಗಿಗೆ ತಾನೇ 'ಸಿಸ್ತು' ಮಾಡಿದಳು. ತನ್ನ ಬಂಗಾರದ ಪೌಚಿಯನ್ನು ಕಳೆದು ಮದುವಣಗಿತ್ತಿಯ ಕೈಗೆ ತೊಡಿಸಿದಳು. ಸುಬ್ಬರಾಯಿ ಇತ್ತೀಚೆಗೆ ತನಗೆ ಪ್ರೀತಿಯಿಂದ ಮಾಡಿಸಿ ಕೊಟ್ಟಿದ್ದ ಚಿನ್ನದ ಬಂದಿಯನ್ನೂ ತೆಗೆದು ಅವಳ ಕೊರಳಿಗೆ ಹಾಕಿದಳು. ಅನಂತರ ತನ್ನ ಜೋಮಾಲೆ ಸರವನ್ನೂ ತೆಗೆಯಲು ಕೈಯಿಟ್ಟಾಗ ನರಸಮ್ಮನೇ ಮಂಗಳೆಯನ್ನು ತಡೆದು "ಯೆಲ್ಲಾನೂ ಹಿಂಗೆ ತಗದು ಆಕಿಬುಟ್ಟುಕ ನೀ ಬೋಳು ಬೋಳಾಗಿ ನಿಂತುಕೊಂಡೀಯೇನಾ ಮಂಗಲೀ? ಕತ್ತಿನಲ್ಲಿ ಆ ಜೋಮಾಲೆ ಸರವಾರೂ ಇದ್ದಕೊಂಡಿರ್ಲಿ ಬುಡು" ಎಂದಿದ್ದಳು.

ಧಾರೆ ನಿರಾತಂಕವಾಗಿ ನಡೆಯಿತು. ನಾಗೋಲೆಯ ದಿನ ಹೆಣ್ಣು ಗಂಡನ್ನು ದೇವರ ಮನೆಯಲ್ಲಿ 'ಅರಣೆ'ಯ (ಅಂದರೆ ಮದುವೆಯಲ್ಲಿ ಕಳಶದಲ್ಲಿ ತರುವ ನೀರು) ಮುಂದೆ ಕುಳ್ಳಿರಿಸಿ 'ಕಂಚು ಹತ್ತಿಸಿ'ದರು. ಅಂದರೆ ಗಂಡು ಹೆಣ್ಣಿನ ಮುಂದೆ ಕಜ್ಜಾಯ, ಕರ್ಜೀಕಾಯಿ ತುಪ್ಪ, ಬಾಳೆಹಣ್ಣು ಮುಂತಾದ ತಿನಿಸುಗಳಿಂದ ತುಂಬಿದ ಎರಡು ಕಂಚಿನ ಹರಿವಾಣಗಳನ್ನು ತಂದಿಟ್ಟರು. ಆ ತಟ್ಟೆಗಳನ್ನು ಮುತ್ತೈದೆಯರು ಒಬ್ಬೊಬ್ಬರಾಗಿ ಕೈಯಲ್ಲಿ ಹಿಡಿದು ಗಂಡಿನ ಮುಂದಿದ್ದ ತಟ್ಟೆಯನ್ನು ಹೆಣ್ಣಿನ ಮುಂದೂ ಹೆಣ್ಣಿನ ಮುಂದಿದ್ದ ತಟ್ಟೆಯನ್ನು ಗಂಡಿನ ಮುಂದೂ ಇಟ್ಟು ಅಕ್ಷತೆಯ ಕಾಳನ್ನು ವಧೂ–ವರರ ಮೇಲೆ ಎರಚಿ ಹೋಗುವಾಗ ಮದುವೆಯ ಹೆಣ್ಣು 'ನಿನ್ನ ಗಂಡನ ಹೆಸರು ಹೇಳು' ಎನ್ನುವಂತೆ ಪ್ರತಿಯೊಬ್ಬ ಮುತ್ತೈದೆಯ ಸೆರಗು ಹಿಡಿದುಕೊಳ್ಳುವುದೂ ವಾಡಿಕೆ....

ನಾಲ್ಕು ಜನ ಮುತ್ತೈದೆಯರು ಹೀಗೆ 'ಕಂಚು ಹತ್ತಿಸಿ' ಆದ ಬಳಿಕ ಐದನೆಯವಳಾಗಿ ಚೆಲುವಮ್ಮ ಹುಡುಕುತ್ತಿರುವುದನ್ನು ಗಮನಿಸಿದ ನರಸಮ್ಮ "ಯಾಕೆ ಚೆಲುವೀ–ಹಂಗೆ ಯೆಲ್ಲಾರ್ನೂ ಕೇಳಕೊಂಡು ತಡಕಾಡೀ–? ನಮ್ಮ ಮಂಗಲೀಯೇ ಇಲ್ಲವಾ....? ಅವಳ ಕೈಲೇ ಹತ್ತಿಸಿಬಿಡು" ಎಂದು ಸಲಹೆ ಕೊಟ್ಟಳು.

ತಾನು ಈ ಗೊಂದಲಕ್ಕೆ ಸಿಕ್ಕಬಾರದೆಂದು ಒಂದು ಮೂಲೆಗೆ ಅವಿತು ಕುಳಿತಿದ್ದ ಮಂಗಳೆಗೆ ಈ ಮಾತು ಕೇಳಿ ಹೌಹಾರಿದಂತಾಯಿತು. ತನ್ನಲ್ಲಿಯೇ "ಕೆಟ್ಟೆ" ಎಂದುಕೊಂಡಳು.

ಆದರೆ ಎಲ್ಲರ ಬಲವಂತಕ್ಕೆ ಎದ್ದುಹೋಗಿ ಅವಳೂ 'ಕಂಚು ಹತ್ತಿಸ'ಲೇ ಬೇಕಾಯಿತು.

ಅಕ್ಷತೆಯನ್ನು ವಧೂ-ವರರ ಮೇಲೆರಚಿ ಅವಳು ಹಿಂದಿರುಗುತ್ತಿರುವಂತೆ ಅವಳ ಸೆರಗು ಹಿಡಿಯದೆ ಸುಮ್ಮನೆ ಕುಳಿತಿದ್ದ ದುರ್ಗಿಗೆ ಯಾರೊ 'ಸುಮಾನಗಾರ' ಹೆಂಗಸು "ಇದ್ಯಾಕೆ ಒಳ್ಳಿ ಬೆಪ್ಪು ನಾಡ್ನಿಂದ ಬಂದೋಳ ಹಂಗೆ ಕುಂತು ಕೊಂಡಿದ್ದೀ....ನೀನೂ ಸರಿ-ಹಿಡಕೊಳಾ ಅವಳ ಸೆರಗಾ" ಎಂದು ಚುಚ್ಚಿದಳು.

ದುರ್ಗಿಗೆ ಹಾಗೆ ಮಾಡಲು ಲೇಶಮಾತ್ರವೂ ಇಷ್ಟವಿಲ್ಲ. ಆದರೆ ತನ್ನ ಬೆನ್ನಿಗೆ ನಿಂತು ಗಟ್ಟಿಯಾಗಿ ಒದರಾಡುತ್ತಿದ್ದ ಆ ಹೆಂಗಸಿನ ಬಾಯಿಗೆ ಅರ್ಧ ಹೆದರಿ ಮಂಗಳೆಯ ಸೀರೆಯ ಸೆರಗನ್ನು ಬಲವಾಗಿಯೆ ಹಿಡಿದುಬಿಟ್ಟಳು. ಆದರೆ ಮಂಗಳೆ ಏನೂ ಹೇಳದೆ ರಭಸದಿಂದ ತನ್ನ ಸೆರಗನ್ನೆಳೆದುಕೊಂಡು ಹೊರಟು ಹೋದಳು. ಆಗ ತನ್ನ 'ಪಟ್ಟೆ' ಸೀರೆಯ ಸೆರಗು ಹರಿಯುವುದನ್ನೂ ಅವಳು ಲಕ್ಷಿಸಲಿಲ್ಲ.

೩೧

ಮದುವೆಯಾದ ಎಂಟು ದಿನಗಳಲ್ಲಿ, ಮೈಸೂರಿನ ನೆಂಟರೊಡನೆ, ಗಂಡು-ಹೆಣ್ಣು ಕೂಡಿಕೊಂಡು ಪಾರ್ವತಮ್ಮನೂ ವಿಷಕಂಠಯ್ಯನೂ ಕಲ್ಲಹಳ್ಳಿಗೆ ಹಿಂದಿರುಗಿದರು.

ಮಾರನೆಯ ದಿನವೇ ನಂಜುಂಡಸ್ವಾಮಿ, ಯಶೋದಮ್ಮ, ಚೆನ್ನಸ್ವಾಮಿ, ಆದಿಲಕ್ಷ್ಮಿ-ಎಲ್ಲರೂ ಮೈಸೂರಿಗೆ ಹೊರಟು ನಿಂತರು. ಅನಂತ ಮಾತ್ರ ಇನ್ನೂ ಕೆಲವು ದಿನ ಕಲ್ಲಹಳ್ಳಿಯಲ್ಲೇ ಇದ್ದು ಬರುವೆನೆಂದು ಹೇಳಿದ. ಹಳ್ಳಿಯಲ್ಲಿ ಉಳಿದುಕೊಳ್ಳಲು ಕಿಂಚಿತ್ತೂ ಇಷ್ಟವಿಲ್ಲದಿದ್ದರೂ ಗಂಡನನ್ನು ಬಿಟ್ಟು ಹೊರಟು ಬಿಟ್ಟರೆ ದೊಡ್ಡವರೇನಾದರೂ ಅಂದುಕೊಂಡಾರೆಂದು ವಿಶಾಲಿಯೂ ಅಲ್ಲಿಯೆ ಇದ್ದುಬಿಟ್ಟಳು.

ಚೆನ್ನಸ್ವಾಮಿ ಹೊರಡುವಾಗ, "ಅಂಗಡಿ ಕೆಲಸ ತುಂಬ ಇದೆ ಅನಂತು. ಬಹಳ ದಿನ ನಿಲ್ಲಬೇಡ. ಬೇಗ ಬಂದುಬಿಡು" ಎಂದು ಎಚ್ಚರಿಸಿದನು.

ಚೆನ್ನಸ್ವಾಮಿಗೆ ಹಾಗೆ ಹೇಳುವುದು ರೂಢಿಯಾಗಿತ್ತು. ಅನಂತ ಮಾತ್ರ ಅಂಗಡಿಯಲ್ಲಿ ಒಂದು ಗಂಟೆ ಕೂಡ ಸ್ಥಿರವಾಗಿ ಕುಳಿತವನಲ್ಲ. ಈಗಲೂ ಚೆನ್ನಸ್ವಾಮಿಯೇ ಪ್ರತಿದಿನವೂ ಅಂಗಡಿಗೆ ಹೋಗಿ ಸಕಲ ಕಾರ್ಯಗಳನ್ನೂ ನಡೆಸಿಕೊಂಡು ಹೋಗುತ್ತಿದ್ದನು. ಚಿತ್ರಕಲೆಯ ಗುಂಗು ಹಿಡಿದಿದ್ದ ಅನಂತನಿಗೆ ಆ ಕಲೆಯ ಅಭ್ಯಾಸಕ್ಕೆ ದಿನಕ್ಕೆ ಇಪ್ಪತ್ತುನಾಲ್ಕು ಗಂಟೆಯಾದರೂ ಸಾಲದು. ಅಂತೂ ಅಭ್ಯಾಸಬಲದಿಂದ ಚೆನ್ನಸ್ವಾಮಿ ಹಾಗೆ ಹೇಳಿದನು.

ನಂಜುಂಡಸ್ವಾಮಿ ನಟರಾಜನನ್ನು ಬೀಳ್ಕೊಡುತ್ತಾ, "ರೈಲ್ವೇನಲ್ಲಿ ಕೆಲಸ ಸಿಕ್ಕೋ ಹಾಗೆ ಆದಕೂಡಲೆ ಕಾಗದ ಬರೀತಿನಿ. ಬಂದುಬಿಡಪ್ಪಾ" ಎಂದು ಹೇಳಿದ.

ಅನಂತನಿಗೆ ಕಲ್ಲಹಳ್ಳಿಯ ನೈಸರ್ಗಿಕ ವಾತಾವರಣ ತುಂಬ ಪ್ರಿಯವೆನಿಸಿತು. ನಟರಾಜನೊಡನೆ ಕಾಡು, ಮೇಡು ಅಲೆಯುವುದು, ಚಿತ್ರ ಬರೆಯುವುದು ಇವೇ ಅವನ ದಿನಚರಿಯಾಯಿತು. ಈಗೀಗ ಅವನ ಚಿತ್ರಗಳು ಹೆಚ್ಚು ಸಹಜವಾಗಿ, ಹೆಚ್ಚು ಸಮರ್ಪಕವಾಗಿ ಕಂಡುಬರುತ್ತಿದ್ದವು. ಅವನ ಆರಂಭದ ಚಿತ್ರಗಳನ್ನು ನೋಡಿದ್ದ ನಟರಾಜನಿಗೆ ಈಗಿನ ಚಿತ್ರಗಳನ್ನು ನೋಡಿದಾಗ "ಇವು ಅನಂತು ಬರೆದ ಚಿತ್ರಗಳೇ !" ಎಂಬ ಅನುಮಾನ ವುಂಟಾಗುತ್ತಿತ್ತು. ಒಂದು ನವಿಲು ನರ್ತಿಸುವುದನ್ನಾಗಲೀ ಕೆರೆಯ ನೀರಿನ ಮೇಲೆ ಮೀನು ಬೇಟೆಗಾಗಿ ಹಾರಿ ಬಂದು ಕೂರುವ ಬೆಳ್ಳಕ್ಕಿಗಳನ್ನಾಗಲೀ, ಹಳ್ಳಿಯ ಬಡಹಟ್ಟಿಯೊಂದರಿಂದ ದಾರ ದಾರವಾಗಿ ಏಳುತ್ತಿದ್ದ ಹೊಗೆಯನ್ನಾಗಲೀ, ರೈತ ಸ್ತ್ರೀಪುರುಷರು ಹೊಲದಲ್ಲಿ ಕಟಾವು ಮಾಡುವ ದೃಶ್ಯವನ್ನಾಗಲೀ, ಆ ಕುರುಚಲು ಕಾಡಿನ ಜೀವ ವೈವಿಧ್ಯವನ್ನಾಗಲೀ ಚಿತ್ರಿಸುವಾಗ ಅನಂತನ ಕುಂಚದಿಂದ ಪ್ರತಿಸೃಷ್ಟಿಯೇ ಆದಂತೆ ತೋರುತ್ತಿತ್ತು. ಅಷ್ಟು ಸ್ಫುಟವಾಗಿ, ಅಷ್ಟು ಸಾದೃಶ್ಯ ಪಡೆದಿರುತ್ತಿದ್ದವು ಅವನ ಚಿತ್ರಗಳು.

ಒಂದೆರಡು ವಾರ ಹೀಗೆ ಕಳೆಯಿತು. ಬೇಗ ಹೊರಟುಬರಬೇಕೆಂದು ಚೆನ್ನಸ್ವಾಮಿಯಿಂದ ಒತ್ತಾಯಪೂರ್ವಕವಾದ ಪತ್ರವೂ ಬಂದಿತು. ಎರಡು ದಿನ ಇದ್ದು ಬರುವೆನೆಂದು ಹೇಳಿ ಅನಂತ ಎರಡು ವಾರ ಕಳೆದಿದ್ದ. ವಿಶಾಲಿಯ ತಗಾದೆಯೂ ಬಲವಾಯಿತು. "ಈ ಹಳ್ಳೀಲಿ ಎಷ್ಟು ದಿನ ಹೀಗೆ ಕುಳಿತುಕೊಂಡಿರೋದು ?–ಮೂದೇವಿ ಹಾಗೆ ! ತೀರ ಬೇಜಾರಾಗ್ತದೆ. ಒಂದು ಸಿನಿಮಾ ಇಲ್ಲ. ಒಂದು ನಾಟಕ ಇಲ್ಲ. ಯಾವುದೂ ಇಲ್ಲ...ನಡೀರಿ ಹೋಗೋಣ" ಎಂದು ಪ್ರಬಲವಾಗಿ ಕಾಡತೊಡಗಿದಳು. ಆದರೂ "ಮಹಾರಾಣಿ ನೀನು !....ಹಳ್ಳಿ ಜೀವನ ನಿನಗೆ ಹೇಗೆ ಸರಿಬೀಳ್ತದೆ ಹೇಳು" ಎಂದು ಅವಳನ್ನು ಗೇಲಿಮಾಡಿ ಮತ್ತೆ ಒಂದು ವಾರವನ್ನು ಆ ಹಳ್ಳಿಯಲ್ಲಿಯೇ ಕಳೆದ ಅನಂತ.

ಆದರೆ ಆ ವಾರ ಕಳೆದ ಮೇಲಾದರೂ ಅವನು ಆ ಹಳ್ಳಿಯನ್ನು ಬಿಟ್ಟು ಹೊರಡಲೇಬೇಕಾಯಿತು. ಹೊರಡುವಾಗ ಮಾತ್ರ ವಿಶಾಲಿಯನ್ನು ಕುರಿತು "ನಡೀರಿ ಅಮ್ಮನವರೆ, ಪಟ್ಟಣದಲ್ಲಿ ನಿಮ್ಮ ಸಿನಿಮಾ ನಾಟಕ ಎಲ್ಲ ನಿಮ್ಮನ್ನೇ ಕಾಯ್ತಾ ಕುಳಿತಿವೆ" ಎಂದು ಎಲ್ಲರೆದುರೂ ಹಾಸ್ಯಮಾಡಿ ಅವಳ ಕಣ್ಣಿನಲ್ಲಿ ನೀರು ತರಿಸಿದ.

ಅನಂತ ಮೈಸೂರಿಗೆ ತೆರಳಿದ ಬಳಿಕ ನಟರಾಜನಿಗೆ ಮನೆಯಲ್ಲಿರುವುದೇ ಒಂದು ಹಿಂಸೆಯಾಗಿ ಪರಿಣಮಿಸತೊಡಗಿತು. ಗೆಳೆಯ ಅಲ್ಲಿರುವವರೆಗೂ ತನ್ನ ಹರಿದ ಬಾಳಿನ ಯಾತನೆಯನ್ನು ಅವನು ಹೇಗೋ ಮರೆತಿದ್ದನು. ಆದರೆ ಈಗ, ಅವನೂ ಹೊರಟುಹೋದ ನಂತರ, ತನ್ನ ಬಾಳುವೆಯ ಕರಾಳತೆ ನಿಷ್ಠುರವಾಗಿ ಎದುರು ಬಂದು ನಿಂತಂತಾಯಿತು. ದುರ್ಗಿ ಅವನ ಮುಂದೆ ಸುಳಿದಾಗಲೆಲ್ಲ ವಿಧಿ ಅವನನ್ನು ಕೆಣಕಿ ಅಣಕವಾಡಿದಂತಾಯಿತು. "ನಾನೇಕೆ ಈ ಮದುವೆಗೆ ಒಪ್ಪಿಕೊಂಡೆ" ಎಂದು ತನ್ನೊಳಗೇ ಹಲುಬುವನು ನಟರಾಜ.

ದುರ್ಗಿ ಊಟಕ್ಕೆ ಬಡಿಸಲು ಬಂದಾಗ, ಇಲ್ಲ ಯಾವುದೇ ವಿಷಯವನ್ನಾದರೂ ಹೇಳಲು ಬಂದಾಗ ಅಕಾರಣವಾಗಿ ರೇಗುವನು. ಅವಳು ಮಾತನಾಡದೆ ಮೌನವಾಗಿ ನಿಂತರೆ "ಏನು ಹಾಗೆ ಗೂಬೆ ಹಾಗೆ ಮಾತೇ ಆಡದೆ ನಿಂತಿದೀಯಲ್ಲ ?" ಎನ್ನುವನು. ಅವಳು ಹಾಗೆನ್ನುತ್ತಾನಲ್ಲಾ, ಎಂದು ಧೈರ್ಯಮಾಡಿ ತಾನು ಹೀಗೆ ಹೇಳುತ್ತಿದ್ದೆನೆಂದು ವಿಶದೀಕರಿಸಲು ಪ್ರಯತ್ನಿಸಿದರೆ "ಸಾಕು ಮುಚ್ಚು ಬಾಯಿ ಬಜಾರಿ!" ಎನ್ನುವನು.....ಕಾಲಕ್ರಮೇಣ ಅವಳನ್ನು ಹೊಡೆಯುವುದಕ್ಕೂ ಆರಂಭವಾಯಿತು.

ಒಂದು ದಿನ ಅವನು ದುರ್ಗಿಯನ್ನು ಬಹಳವಾಗಿ ಹೊಡೆಯುತ್ತಿದ್ದ. ಆಗ ಪಾರ್ವತಮ್ಮನೇ ಮಧ್ಯ ಹೋಗಿ ಬಿಡಿಸುತ್ತಾ, "ಇದೇನಾ ಮೊಗಾ....ಒಳ್ಳೆ ಬಟ್ಟೆ ಸೆಣಿಯೋ ಹಂಗೆ ಬಡೀತಾ ಇದ್ದಿ ಇವಳ್ನಾ? ಬುಡುಬುಡು....ಯೆಲ್ಲೋ ಕಾಣದೆ ಕೈ ತಪ್ಪಿ ಎಸರಿಗೆ ಒಂದೆರಡು ಹಳ್ಳು ಉಪ್ಪು ಜಾಸ್ತಿ ಆಕಿಬುಟ್ಟಲು ಅಂತ ಈಪಾಟಿ ಹೊಡೆಯೋದಾ ?....ಚೆಂದಾಗದೆ.....ಇದೇನಾ, ಕುಂತರೆ ತೆಪ್ಪೂ, ನಿಂತರೆ ತೆಪ್ಪೂ, ಅಂತ...ಲಗ್ಣ ಅದೇನಿಂದ ಕಂದನಿಗೆ ಕಣ್ಣೀರ್ನಲ್ಲೇ ಕೈ ತೊಳಸ್ತಾ ಇದ್ದೀಯಲ್ಲಾ? ಹಿಂಗಾದರೆ ಹೆಂಗಾ ಬಾಳಾಡೋದು" ಎಂದು ಆಕ್ಷೇಪಿಸಿ "ಯೇನೊ ಬ್ರಮ್ಮನ ಬರಾ-ಇವಳು ನಿನ್ನ ಹೆಂಡತಿ ಆಗಬೇಕು ಅಂತ ಹಣೇಲಿ ಬರೆದಿತ್ತು ಹಂಗಾಯ್ತು....ಪಾಲಿಗೆ ಬಂದದ್ದು ಪರಮಾನ್ನ ಅಂತ ಸುಮ್ಮಕೆ ಇವಳ್ನ ಬಳಸಿಕೂಂಡು ಓಗು. ನೋಡಿದೋರು ನೆಕ್ಕಾರು...." ಎಂದು ಬುದ್ಧಿ ಹೇಳಿದಳು.

ದುರ್ಗಿಯ ನಡತೆಯನ್ನು ಪಾರ್ವತಮ್ಮ ಬಹಳವಾಗಿ ಮೆಚ್ಚಿಕೊಂಡಿದ್ದಳು. ಯಾವ ಕೆಲಸವನ್ನಾದರೂ ದುರ್ಗಿ ಆಸಕ್ತಿ ವಹಿಸಿ ಪ್ರೀತಿಯಿಂದ ತುಂಬ ಅಚ್ಚುಕಟ್ಟಾಗಿ ಮಾಡುತ್ತಿದ್ದಳು. "ಒಂದು ದನಕರ ನೋಡಿಕೊಳ್ಳೋದರಲ್ಲಿ ಹೇಳಿಯೋ....ಗುಡಿಸಿ ಸಾರಿಸಿ ಹಟ್ಟೀಯಾ ಯಾವತ್ತೂ ಒಳ್ಳೆ ಕನ್ನಡಿ ನೋಡದಂಗೆ ಇಡೋದರಲ್ಲಿ ಕೇಳಿಯೋ...ಮನೀಗೆ ಬಂದೋರ್ನ ಬಾವಣಿಸೋದರಲ್ಲಿ ಕೇಳಿಯೋ....ಯಾತರಲ್ಲಿ ತಕ್ಕಂಡರೂ ನಮ್ಮ ದುರ್ಗಿ ಸಮ ಯಾವೋಳೂ ದುಡೀನಾರಳು" ಎಂದು ಪಾರ್ವತಮ್ಮ ಅವಳನ್ನು ಹಿರಿದುಮಾಡಿ ಮರಿನಿಂಗಿ ಮುಂತಾದ ಕಲ್ಲಹಳ್ಳಿಯ ಹೆಂಗಸರೊಡನೆ ಅನೇಕ ಬಾರಿ ಮಾತಾಡಿದ್ದುಂಟು.

ಅಂಥ ಸುಗುಣಿಯಾದ ಹುಡುಗಿಯನ್ನು ನಟರಾಜ ಹಾಗೆ ಹೊಡೆದು ಬೈದು ಹಿಂಸಿಸುತ್ತಿದ್ದುದು ಪಾರ್ವತಮ್ಮನಿಗೆ ಅತ್ಯಂತ ವ್ಯಥೆಯನ್ನುಂಟುಮಾಡಿತು. ನಟರಾಜ ಅವಳಿಗೆ ಹಿಂಸೆ ಕೊಡುವುದು ಹೆಚ್ಚಿದಂತೆ ಪಾರ್ವತಮ್ಮ ದುರ್ಗಿಯನ್ನು ಪ್ರೀತಿಸುವುದೂ ಹೆಚ್ಚಾಯಿತು. ಅವಳನ್ನು ಇನ್ನೂ ಆತ್ಮೀಯವಾಗಿ, ತನ್ನ ಸ್ವಂತ ಮಗಳಂತೆಯೇ ಕಾಣಲುಪಕ್ರಮಿಸಿದಳು. ಹೇಗೊ ಅವಳಿಂದ ತನ್ನ ತೌರಿನ ಹೆಸರು ಹೇಳುವಂತಾದರೆ ಸಾಕೆಂದು ಅವಳ ಉತ್ಕಟೇಚ್ಛೆ.

ಆದರೆ ಪಾರ್ವತಮ್ಮ ದುರ್ಗಿಗೆ ತೋರುತ್ತಿದ್ದ ಆದರ, ಪ್ರೇಮಗಳು ನಟರಾಜನ ಹೃದಯದಲ್ಲಿ ರೋಷದ ತೆರೆಗಳನ್ನೇಳಿಸುತ್ತಿದ್ದವು. ನಮಗೆ ಬೇಡದ ವಸ್ತುವನ್ನು ಮತ್ತಾರಾದರೂ

ಪ್ರೀತಿಯಿಂದ ಕಂಡರೆ ಅದು ನಮ್ಮನ್ನು ಇನ್ನೂ ಕೆರಳಿಸುತ್ತದೆ. ನಟರಾಜನಿಗಾದರೂ ಹಾಗೇ ಆಯಿತು. ದುರ್ಗಿಯನ್ನವನು ಇಂದಿಗೂ ತನ್ನ ಮಡದಿ ಎಂದು ಮನಸಾರೆ ಒಪ್ಪಿರಲಿಲ್ಲ. ತನಗೆ ಬೇಡದ ವಸ್ತು ಬಂದು ತನ್ನ ಕೊರಳನ್ನು ಸುತ್ತಿ ಬಿಗಿಯುತ್ತ, ತನ್ನ ಬಾಳನ್ನು ನರಕಸದೃಶವಾಗಿ ಮಾಡಿದೆ ಎಂದೇ ಅವನ ಭಾವನೆ. ಈ ಹಿಂಸೆಯನ್ನು ಈ ಯಾತನೆಯನ್ನು ಈ ಸಂಕಟವನ್ನು ತಾಳಿಕೊಳ್ಳುವ ಶಕ್ತಿಯಿಲ್ಲದೆ ತನ್ನ ಕಿಚ್ಚನ್ನೆಲ್ಲಾ ಅವನು ಆ ಬಡ ದುರ್ಗಿಯ ಮೇಲೇ ಕಾರುತ್ತಿದ್ದ....ಅವಳೂ ಮೂಕಪ್ರಾಣಿಯ ಹಾಗೆ ಅವನು ಕೊಡುತ್ತಿದ್ದ ಶಿಕ್ಷೆಗಳನ್ನೆಲ್ಲಾ ಸಹಿಸಿಕೊಂಡು ಹಸನ್ಮುಖಿಯಾಗಿಯೇ ತನ್ನ ಪಾಡಿಗೆ ತಾನು ಮನೆಯ ಎಲ್ಲ ಕೆಲಸಕಾರ್ಯಗಳನ್ನೂ ನಿರ್ವಹಿಸಿಕೊಂಡು ಹೋಗುತ್ತಿದ್ದಳು. ನಟರಾಜ ತನ್ನನ್ನು ಹೊಡೆದನೆಂದು ಅಥವಾ ಬೈದನೆಂದು ಒಂದು ದಿನವಾದರೂ ಪಾರ್ವತಮ್ಮನ ಸಂಗಡವಾಗಲಿ ಊರಿನ ಇತರ ಹೆಂಗಸರ ಸಂಗಡವಾಗಲಿ ಅವಳು ಹೇಳಿಕೊಂಡುದಿಲ್ಲ.

ಒಂದು ದಿನ ನಟರಾಜ ಯಾವುದೊ ಮಾತಿಗೆ ಆವೇಶದಿಂದ ಹೊಡೆಯಲು ಕೈಬೀಸಿದಾಗ ಅದು ಅವಳ ತುಟಿಗೆ ತಗುಲಿತು. ಒಡನೆಯೇ ಒಳಚರ್ಮ ಕಿತ್ತು ರಕ್ತ ಬಸಿಯತೊಡಗಿತು. ಹಾಗೆಯೇ ತನ್ನ ಸೀರೆಯ ಸೆರಗಿನಿಂದ ಆ ಗಾಯವನ್ನು ಒತ್ತಿ ಹಿಡಿದು ಗಟ್ಟಿಯಾಗಿ ಕೂಡ ರೋದಿಸದೆ ಅಡುಗೆ ಮನೆಗೆ ಹೋಗಿ ಡಬ್ಬಿಯಿಂದ ಅಷ್ಟು ಕೆಂಪು ಬೂರಾ ಸಕ್ಕರೆಯನ್ನು ತೆಗೆದು ಆ ಗಾಯಕ್ಕೆ ಮೆತ್ತಿದಳು. ಆ ಬಳಿಕ, ಮಾಮೂಲಿನಂತೆ ಬಿಂದಿಗೆಯನ್ನೆತ್ತಿಕೊಂಡು ನೀರು ಸೇದಿ ತರಲು ಬಾವಿಗೆ ನಡೆದಳು.

ಬಾವಿಯ ಬಳಿ ಹಳ್ಳಿಯ ಇತರ ಯುವತಿಯರು ಅವಳ ತುಟಿಯ ಗಾಯವನ್ನು ಅವಳು ಅಲ್ಲಿಗೆ ಹೋಗುತ್ತಿರುವಂತೆಯೇ ಗಮನಿಸಿದರು.

"ಇದೇನಾ ದುರ್ಗಿ....ನಿನ್ನ ತುಟಿಮ್ಯಾಗೆ ಈ ಗಾಯವಾಗಿದೆ ?" ಎಂದು ಒಬ್ಬಳು ಕೇಳಿಯೂ ಬಿಟ್ಟಳು.

ದುರ್ಗಿ ಉತ್ತರವೀಯದೆ ಬಿಂದಿಗೆಯ ಬಾಯಿಗೆ ಹಗ್ಗದ ಕುಣಿಕೆ ಹಾಕಿ ಬಾವಿಯೊಳಗೆ ಬಿಡುತ್ತಿದ್ದಳು.

"ರಾತ್ರಿ ಅವಳ ಗಂಡಯ್ಯಯೆಲ್ಲೋ ಅದ್ನ ತೊಂಡೆ ಹಣ್ಣು ಅಂತ ತೆಪ್ಪು ತಿಳಿಕೊಂಬುಟ್ಟು ಕಡಿದುಬುಟ್ಟಿರಬೌದು" ಎಂದು ಇನ್ನೊಬ್ಬಳು ನುಡಿದು, ಅನಂತರ ತನ್ನ ಧಾರ್ಷ್ಟ್ಯಕ್ಕೆ ತಾನೇ ನಾಚಿ ತುಟಿ ಕಚ್ಚಿಕೊಂಡಳು.

"ಹೂ....ಆ ಸೌಬಾಗ್ಯಾನೂ ತಂದದೆ ಆ ಮುಕ್ಕ !" ಎಂದು ಆಯರಹಳ್ಳಿ ಅಯ್ಯನ ಮಗಳು ಮರುಕ ತೋರಿದಾಗ ಎಲ್ಲ ನಾರಿಯರೂ ತುಟಿ ಬಿರುವುತ್ತ ಮೌನ ತಾಳಿದರು. ನಟರಾಜ ದುರ್ಗಿಯನ್ನು ಹೊಡೆಯುತ್ತಿರುವನೆಂಬ ಸುದ್ದಿ ಈಚೀಚೆಗೆ ಕಲ್ಲಹಳ್ಳಿಯಲ್ಲೆಲ್ಲಾ

ಹರಡಿಬಿಟ್ಟಿತ್ತು. ಹಾಗಿರುವಾಗ ಅದು ಅವರ ಕಿವಿಗೂ ಮುಟ್ಟದಿರಲು ಸಾಧ್ಯವೇ? ಆದರೂ ದುರ್ಗಿಯನ್ನು ನೋಡಿದಂತೆ ಮರುಕ, ಪರಿಹಾಸ್ಯ–ಎರಡು ಭಾವವೂ–ಒಡನೊಡನೆಯೇ ಅವರ ಹೃದಯದಲ್ಲಿ ಉದ್ಭವಿಸುತ್ತಿದ್ದವು.

ಈ ಸುದ್ದಿ ಕಾಲಕ್ರಮೇಣ ಕಲ್ಲಹಳ್ಳಿಯಲ್ಲೇ ಉಳಿಯದೆ ಕೊತ್ತೇಗಾಲಕ್ಕೂ ಪ್ರಯಾಣ ಬೆಳೆಸಿತು.

"ಆಳಾದ್ದು ಯೇನು ತೆಪ್ಪುಮಾಡಿತೊ, ಯೇನೊ ?" ಎಂದು ಚೆಲುವಮ್ಮ ಅಳಿಯನನ್ನೇ ವಹಿಸಿಕೊಂಡು ಮಾತನಾಡಿದಳು.

ಅದು ನರಸಮ್ಮನಿಗೆ ಸಹಿಸಲಿಲ್ಲ.

"ಊ. ತೆಪ್ಪು ಮಾಡಿತು ತೆಪ್ಪು!....ಒಲ್ಲದ ಗಂಡನಿಗೆ ಮೊಸರ್ನಲ್ಲಿ ಕಲ್ಲಿತ್ತುಽಅಂತ. ಹಿಡಬಿಟ್ಟಿ ಮ್ಯಾಗ ಮಾಡಿದರೆ ಹಂಗೇಯಾ ಅಗೋದು ಸಂಸಾರ...." ಎಂದವಳು. "ಯೇನೋ ಪಾರತಿ ಮೊಕ ನೋಡಿ ಕೊಟ್ಟಾಯ್ತು ಹೆಣ್ಣ. ಇಲ್ಲದೇ ಇದ್ರೆ ಆ ತಿರುಕನಿಗ್ಯಾರು ಕೊಡೋರಿದ್ದರು?" ಎಂದು ಕೂಗಾಡಿದಳು.

"ಅರಗಿಳಿ ಸಾಕಿ ಬೆಕ್ಕಿನ ಬಾಯಿಗೆ ಕೊಟ್ಟಂಗಾಯ್ತು...." ಹೀಗೆಂದು ಕಾಳಯ್ಯನೂ ತನ್ನ ಉದ್ವೇಗವನ್ನು ತೋರಿ "ಹಾಲು ಉಕ್ಕೋದಮ್ಯಾಗೆ ಮಾಡೋದು ಯೇನಾ ಅದೆ ?" ಎಂದು ನಿಟ್ಟುಸಿರಿಟ್ಟುಕೊಂಡನು.

ಎಲ್ಲರಿಗಿಂತ ಈ ಸುದ್ದಿ ಮಂಗಳೆಯ ಎದೆಯನ್ನು ಕಾಯಿಸಿ, ಬೇಯಿಸಿ ಹುಣ್ಣು ಮಾಡಿಟ್ಟಿತು. ನಟರಾಜ ಏಕೆ ಹಾಗೆ ಆಡುತ್ತಿರುವನೆಂದು ಅವಳಿಗೆ ಗೊತ್ತು. ತನ್ನ ಮೇಲಿನ ಮೋಹ ದುರ್ಗಿಯ ಬಗ್ಗೆ ದ್ವೇಷವಾಗಿ ಪರಿಣಮಿಸಿದೆ ಎಂಬ ಅರಿವಾಗಿತ್ತವಳಿಗೆ. "ಹೀಗೆ ಆದರೆ ನಟರಾಜನ ಗತಿಯೇನು? ಅವನ ಆರೋಗ್ಯ ಉಳಿಯುವುದೇ?" ಎಂದೆಲ್ಲ ಊಹಿಸಿ ಕಳವಳಗೊಂಡಳು. ದುರ್ಗಿಯಂಥ ಒಳ್ಳೆಯ ಸ್ವಭಾವದ ಹುಡುಗಿಗೆ ಬಂದೊದಗಿದ ದುಃಸ್ಥಿತಿಗಾಗಿ ಅವಳ ಹೃದಯ ಸಂತಾಪದಿಂದ ಪರಿತಪಿಸತೊಡಗಿತು.

ನರಸಮ್ಮ "ಹಿಂಗೆಲ್ಲ ಆದ್ರೆ ಹೆಂಗಾ?....ಆಪಾಟಿ ಚಚ್ಚಿಸಿಕೊಳಕ್ಕಿಂತ ದುರ್ಗಿ ಬಂದು ನಮ್ಮ ತಾವೇ ಇದ್ದುಕೊಳ್ಳಿ. ಒಂದು ತುತ್ತು ಇಟ್ಟು ಆಕಲಾರೆವಾ ನಾವು?" ಎಂದು ಒದರಾಡಿ, ದುರ್ಗಿಯನ್ನು ಕರೆದೇ ತರಬೇಕೆಂದು ತನ್ನ ಗಂಡ ಕಾಳಯ್ಯನನ್ನೂ, ದುರ್ಗಿಯ ಅಣ್ಣ ಬಸವಾಚಾರಿಯನ್ನೂ ಕಲ್ಲಹಳ್ಳಿಗೆ ಅಟ್ಟಿದಳು.

ಆದರೆ ಪಾರ್ವತಮ್ಮ ನರಸಮ್ಮನ ಮಾತನ್ನು ಹಾಯಗೊಡಲಿಲ್ಲ. ಅವರಿಬ್ಬರನ್ನೂ ಕೂರಿಸಿಕೊಂಡು ದುರ್ಗಿಯನ್ನು ಈಗಿನ ಪರಿಸ್ಥಿತಿಯಲ್ಲಿ ಕೊತ್ತೇಗಾಲಕ್ಕೆ ಕರೆದುಕೊಂಡು ಹೋಗಿಬಿಡುವುದರ ದುಷ್ಪರಿಣಾಮವನ್ನು ಮನ ಮುಟ್ಟುವಂತೆ ವಿವರಿಸಿದಳು–

"ಔದು. ದುರ್ಗೀಯಾ ಹೋಡಿತಾನೆ ಬಡೀತಾನೆ ನಟ್ರಾಜ.....ನನ್ನ ತಮ್ಮ ಅಂತ ನಾಯೇನೂ ಮುಚ್ಚಿಕೊಳಕ್ಕಿಲ್ಲ" ಎಂದವಳು "ನೋಡಿ ಭಾವ, ನೀವು ಇರಿಯೋರು. ನನ್ನತ್ತರ ಯೇನೂ ತಿಳುವಳಕೆ ಕಲೀಬೇಕಾಗಿಲ್ಲ ನೀವು....ಒಂದು ಪಕ್ಕಸ ನೀವೇನೋ ಕರಕಂಡೋಗಿ ಅನ್ನ ಆಕೀರಿ–ಹಾಗಂತ ಏಟು ವರ್ಸ ತಡಕೊಳಕ್ಕಾದಾತು ನೀವೇಯಾ....ಅವಳ ಗಂಡನ್ನ ಬುಡುಸಿ?" ಎಂದು ಅವರಿಗೆ ಕ್ರೂರ ಸತ್ಯದ ದರ್ಶನ ಮಾಡಿಸಿ "ನಿಮ್ಮ ಜೊತೇಲಿ ದುರ್ಗಿಯ ಕರಕೊಂಡೋಗೋ ಮಾತು ಮಾತ್ರ ಬುಟ್ಟುಬುಡಿ....ನಟರಾಜ ತಾನೇ ಏಟು ಜಿನ ಹಿಂಗಾಡಾನು? ಮಕ್ಕಳು ಮರಿ ಆದ್ರೆ ಯೆಲ್ಲ ಸರಿ ಓಯ್ತದೆ" ಎಂದು ಸಮಾಧಾನಪಡಿಸಿ ಅವರನ್ನು ಹಿಂದಿರುಗಿಸಿದಳು.

ಪಾರ್ವತಮ್ಮನ ವಿವೇಕ ವಚನಗಳನ್ನು ಗಂಡನಿಂದಲೂ ಮೊಮ್ಮಗನಿಂದಲೂ ಆಲಿಸಿದ ನರಸಮ್ಮ ಭಯಗೊಂಡು, "ಅದೂ ದಿಟವೇಯ....ಹೆಂಗಿದ್ದದ್ದು ಹೆಂಗೆ ತಿರುಗಿಕೊಂಡದೊ!–ಹೇಳಾಕೆ ಬರಕ್ಕಿಲ್ಲ" ಎಂದು ಸುಮ್ಮನಾದಳು.

ಈ ಭೀತಿಯಿಂದಲೇ ದುರ್ಗಿಯನ್ನು ಈ ಸಲದ ಗೌರಿ ಹಬ್ಬಕ್ಕೆ ಕರೆಯಲು ನರಸಮ್ಮ ಹೆದರಿದಳು. ಪಾರ್ವತಮ್ಮನೇನೋ ವಿಷಕಂಠಯ್ಯನನ್ನು ಕಳುಹಿಸಿ ಮಗಳನ್ನೂ ಅಳಿಯನನ್ನೂ ಕರೆಸಿಕೊಂಡಳು. ಬರುತ್ತಾ ಸುಬ್ಬರಾಯಿ ಹಬ್ಬಕ್ಕೆ ಬೇಕಾಗುವ ಸಮಸ್ತ ಸಾಮಗ್ರಿಯನ್ನೂ ತನ್ನ ಗಾಡಿಯಲ್ಲಿ ಹೇರಿತಂದ. ಅದರಲ್ಲಿ ತನ್ನ ತೋಟದಲ್ಲೇ ಬೆಳೆದಿದ್ದ ಎರಡು ಬೂದಿಬಾಳೆ ಗೊನೆಗಳನ್ನು ತನ್ನ ಮಾವನಿಗಾಗೇ–ವಿಷಕಂಠಯ್ಯನಿಗೆ ಬೂದಿ ಬಾಳೆ ಹಣ್ಣು ಎಂದರೆ ಪ್ರಾಣ–ತಂದಿದ್ದ.

ಗಾಡಿಯಿಂದ ಇಳಿದ ಕೂಡಲೇ ಪಾರ್ವತಮ್ಮ ಮಗಳನ್ನು ಅಪ್ಪಿಕೊಂಡು "ಇದ್ಯಾಕೀಟು ಬಡವಾಗಿಬುಟ್ಟಿದೀಯವ್ವಾ?" ಎಂದು ಅಳಲಾರಂಭಿಸಿದಳು.

"ನಮ್ಮ ಹಂಗೆ ಉಣ್ಣಾಕಿಲ್ಲವೊ?....ಅವಯ್ಯನ ಮನೇಲಿ ಯಾತಕ್ಕೆ ಕಡಿಮೆ ಮಾಡಿದ್ದಾನಾ ದೇವರು? ಈಪಾಟಿ ಹೇರಿಕೊಂಡು ಬಂದಿದ್ದಿನಿಂಗೆ ತಿನ್ನಾಕಿತ್ತಿಲ್ಲವಾ ಅಲ್ಲೀ?" ಎನ್ನುತ್ತ ಆಗತಾನೇ ಬಂದ ಮರಿನಿಂಗಿ ಬೆರಗು ಬಡಿದವಳಂತೆ, ಕೃಶಳಾದ ಮಂಗಳೆಯನ್ನೇ ನಿಟ್ಟಿಸುತ್ತ ಮೂಗಿನ ಮೇಲೆ ಬೆರಳಿಟ್ಟುಕೊಂಡಳು.

ಹಬ್ಬ ಮುಗಿಯುವವರೆಗೂ ಮಂಗಳೆಗಾಗಲಿ, ನಟರಾಜನಿಗಾಗಲಿ ಪರಸ್ಪರ ಸಂಭಾಷಿಸಲು ಅವಕಾಶ ಸಿಗಲಿಲ್ಲ. ಗೌರಿ ಕಳೆದ ಎರಡು ದಿನಗಳಲ್ಲಿ ಸುಬ್ಬರಾಯಿ ಕೊತ್ತೇಗಾಲಕ್ಕೆ ಹೊರಡಲನುವಾದ.

"ಇನ್ನೊಂದು ಎಂಟು ದಿನ ಇದ್ದು ಬುಟ್ಟು ಓದರೆ ಆಗಕ್ಕಿಲ್ಲವಾ ?.....ಈಗೇನಾ ಓಟು ಅವಸರ ಬಂದುಬುಟ್ಟಿರೋದು" ಎಂದು ವಿಷಕಂಠಯ್ಯ ಅವನನ್ನ ತಡೆದ.

"ನಮ್ಮ ಕಡೆ ಹೊಂಗೆ ಬಿತ್ತ ಮುಂಚ ಮುಂಚೇನೆ ಊದುಬುಟ್ಟು ಸಸಿ ಆಗಲೇ ಬಂದುಬುಟ್ಟಿವೆ....ನಾಳೆ ನಾಡಿದ್ದರಲ್ಲೆ ಹೊಲಕ್ಕೆ ಆಕಿಬುಡಬೇಕು."

"ಅಪರೂಪವಾಗಿ ಹಬ್ಬಕ್ಕೆ ಬಂದಿರೋದು, ಇನ್ನೂ ಒಂದು ನಾಕು ಜಿನ ಇದ್ದು ಓಯ್ತಾರೆ ಅಂತ ಅಂದುಕಂಡಿದ್ದೆ..." ಮಗಳನ್ನು ಇನ್ನೂ ಕೆಲವು ದಿನ ಕಲ್ಲಹಳ್ಳಿಯಲ್ಲೇ ಉಳಿಸಿಕೊಳ್ಳುವ ಅಪೇಕ್ಷೆಯಿಂದ ಈ ರೀತಿ ಪೀಠಿಕೆ ಹಾಕಿ ಆರಂಭಿಸಿದಳು ಪಾರ್ವತಮ್ಮ–ಅಷ್ಟರಲ್ಲಿ ಸುಬ್ಬರಾಯಿ, "ನಮ್ಮ ಕೆಲಸಯೆಲ್ಲ ಮುಗಿದಮ್ಯಾಗೆ ನಿಮಗೂ ಒಸಿ ಗೊಬ್ಬರ ಬೇಕು ಅಂತಿದ್ದೀರಿ....ಹೆಂಗೂ ಆಗ ಗೊಬ್ಬರದ ಗಾಡಿ ಹೊಡಿಸಿಕೊಂಡು ನಾನೂ ಬಂದೇ ಬತ್ತೀನಲ್ಲಾ" ಎಂದನು.

"ಹಂಗಾರೆ ಮಂಗಲೀಯ ಓಟು ಜಿನಗಂಟಾ ಇಲ್ಲೇ ಬುಡಬೌದಲ್ಲಾ? ಬುಟ್ಟಿದ್ದು, ಗೊಬ್ಬರ ಹೇರಿಸಿಕೊಂಡು ಬಂದಾಗ ಬೇಕಾರೆ ಜೊತೇಲೆ ಕರಕೊಂಡು ಓಗಬೌದು...." ಎಂದು ಮೃದುವಾಗಿ ಅಳಿಯನನ್ನು ಕೇಳಿಕೊಂಡಳು.

ಸುಬ್ಬರಾಯಿ ಅತ್ತೆಯ ಮಾತಿಗೆ ಒಪ್ಪಿಕೊಂಡು ಮಂಗಳೆಯನ್ನು ಕಲ್ಲಹಳ್ಳಿಯಲ್ಲಿಯೆ ಬಿಟ್ಟು ಹೊರಟ. ಹೋಗುವಾಗ ಮಂಗಳೆಯನ್ನು ಸಮೀಪಕ್ಕೆ ಕರೆದು, ಎಲ್ಲರೆದುರೂ ತನ್ನ ಶ್ರೀಮಂತಿಕೆಯನ್ನು ಮೆರೆಯುವ ಚಪಲದಿಂದ, "ನಿಂಗೆ ಇನ್ಯಾತಕಾರೂ ಬೇಕಾದ್ರೆ ಇರ್ಲಿ, ಇಟ್ಟುಕೊಂಡಿರ" ಎಂದು ಹತ್ತು ರೂಪಾಯಿಯ ಬೆಳ್ಳಿ ನಾಣ್ಯಗಳನ್ನು ಎಣಿಸಿ ಅವಳ ಕೈಗಿತ್ತನು.

ಮಂಗಳೆ ಬಹಳ ಬಡವಾಗಿರುವಳೆಂದು ಪಾರ್ವತಮ್ಮ ಅವಳಿಗೆ 'ಮೆಂತ್ಯದ ಹಿಟ್ಟು' ಮಾಡಿ ನಿತ್ಯವೂ ಕೊಡುತ್ತಿದ್ದಳು. 'ಮೆಂತ್ಯದ ಹಿಟ್ಟು' ಎಂದರೆ ಗೋಧಿ, ಮೆಂತ್ಯ, ಅಕ್ಕಿ ಇವುಗಳಿಂದ ತಯಾರಿಸಿದ ಹಿಟ್ಟು. ಇದನ್ನು ಊಟ ಮಾಡುವಾಗ ಸಕ್ಕರೆಯನ್ನು ಬಡಿಸುವುದರ ಜೊತೆಗೆ ಹಸುವಿನ ಬೆಣ್ಣೆ ಕಾಯಿಸಿದ ತುಪ್ಪವನ್ನೂ ಅನ್ನಕ್ಕೆ ಸಾರು ಸುರಿಯುವಂತೆ ಸುರಿಯುತ್ತಾರೆ. ಈ ಮೆಂತ್ಯದ ಹಿಟ್ಟು ಮೈ ಕಟ್ಟಿಸುವುದೆಂದು ಈ ಪ್ರಾಂತದ ಹಳ್ಳಿಗರೆಲ್ಲರ ಭಾವನೆ !

ಮಂಗಳೆಯ ದೇಹಕ್ಕೆ ಈ ರೀತಿ ಪೋಷಣೆ ದೊರೆಯುತ್ತಿದ್ದರೂ ಅವಳ ಮನಸ್ಸು ಮಾತ್ರ ಶಾಂತಿಯನ್ನೇ ಕಾಣದೆ ನಿರಾಸೆಯ ಬೀಡಾಗಿತ್ತು. ನಟರಾಜ ಈಗ ಸನಿಹದಲ್ಲೆ ಇದ್ದರೂ 'ತಾನು ಬೇರೊಬ್ಬನ ಮಡದಿ' ಎಂಬ ಸತ್ಯ ತನ್ನ ಮತ್ತು ಅವನ ಆತ್ಮಗಳ ನಡುವೆ ಒಂದು ಅಗಾಧವಾದ ಕಮರಿಯನ್ನೇ ಸೃಜಿಸಿ ನಿಲ್ಲಿಸಿದಂತಿತ್ತು. ಅಲ್ಲದೆ ಈಗ ಬೇರೊಂದು ಮದುವೆಯ ಬೂದಿ ಮುಚ್ಚಿದ ಅವಳ ಪ್ರೇಮದ ಬೆಂಕಿ ಆಸ್ಪದ ದೊರೆತರೆ ಯಾವ ಗಳಿಗೆಯಲ್ಲಿ ಪ್ರಬಲಿಸಿ ಊರಿದೋರುವುದೋ ಎಂಬ ಹೆದರಿಕೆ ಅವಳಿಗೆ.

ಹೀಗಿರುವಾಗ ಒಂದು ರಾತ್ರಿ ಮಂಗಳೆಯೂ ಪಾರ್ವತಮ್ಮನೂ ಎಂದಿನಂತೆ ಕೊತ್ತೇಗಾಲದ ಸುದ್ದಿ ಮಾತಾಡುತ್ತ ತೊಟ್ಟಿಯಲ್ಲಿ ಮಲಗಿಕೊಂಡಿದ್ದರು. ನಟರಾಜ ಮಲಗುತ್ತಿದ್ದ ಕೋಣೆಯಲ್ಲಿ ಇನ್ನೂ ಸೀಮೆಎಣ್ಣೆ ಬುಡ್ಡಿ ಉರಿಯುತ್ತಿತು. ಅವರಿಬ್ಬರಿಗೂ ಇನ್ನೇನು ನಿದ್ದೆ ಹತ್ತಿತ್ತು, ಎನ್ನುವಷ್ಟರಲ್ಲಿ ದುರ್ಗಿಯ ರೋದನ ಧ್ವನಿಯೂ ನಟರಾಜನ ಅಸ್ಪಷ್ಟ ಮಾತುಗಳೂ ಕೇಳಿಬಂದು ಇಬ್ಬರೂ ಹಠಾತ್ತನೆ ಎದ್ದು ಕುಳಿತರು..... "ಮುಚ್ಚು ಬಾಯಿ....ಸಾಕು....ಮುಟ್ಟಿದ್ರೇ ತಡ ಅಂತ...ಅರಚಿಕೊಳ್ತಾಳೆ...ಮುಚ್ಚೇ....ಎಳೆದು ಆಚೆಗೆ ಬಿಟ್ಟುಬಿಡ್ತೀನಿ ನೋಡು. ಮುಚ್ಚು ಅಂದರೆ.... ಮಾಡೋದು ಮಾಡಿಬಿಟ್ಟು ರಾವುಟ ತೆಗೀತಾಳೆ...." ಮಾತಿನ ಸುರಿಮಳೆಯ ಜೊತೆಗೆ ಏಟಿನ ಸಿಡಿಲೂ ಕೇಳಿ ಬರುತ್ತಿತ್ತು....

ಮಂಗಳೆ ದಿಂಬಿನ ಅಡಿಯಲ್ಲಿದ್ದ ಬೆಂಕಿಪೆಟ್ಟಿಗೆಯನ್ನು ತೆಗೆದುಕೊಂಡು ಹತ್ತಿರದಲ್ಲೇ ಇದ್ದ ಕೈ ಎಣ್ಣೆಯ ಮಣ್ಣಿನ ಹಣತೆಯನ್ನು ಹಚ್ಚಿದಳು. ತತ್‌ಕ್ಷಣವೇ ಕೋಣೆಯಿಂದ ಸಂತತವಾಗಿ ಹೊರಬೀಳುತ್ತಿದ್ದ ಮಾತಿನ ಸುರಿಮಳೆ ನಿಂತುಹೋಯಿತು.

ಪಾರ್ವತಮ್ಮನೂ ಮಂಗಳೆಯೂ ಅರ್ಥಪೂರ್ಣವಾಗಿ ಒಬ್ಬರೊಬ್ಬರ ಮುಖವನ್ನು ನೋಡಿಕೊಂಡರು. ಪಾರ್ವತಮ್ಮ ನಿಟ್ಟುಸಿರುಬಿಡುತ್ತಾ, "ಇದೇನು ಹೊಸದೇನೂ ಅಲ್ಲಾ ಕನವ್ವಾ....ಯೇನೊ ನೀ ಬಂದಾಗ್ನಿಂದ ಬುಟ್ಟವ್ನೆ ಅಂದರೆ ಮಂತೆ ಸುರು ಆಗದೆ.... ಆ ಹೆಣ್ಣಿನ ಪಾಡು ಬ್ಯಾಡ....ನಾ ಹೆಂಗೊ ಒಂದು ಮದುವೆ ಅಂತ ಮಾಡಿದ್ರೆ ಸರಿ ಓಗ್ತಾನೆ ಅಂತ ಅಂದುಕೊಂಡಿದ್ದೆ....ಈ ಹಗರಣ ನೋಡಾಕೆ ಇನ್ನೂ ಉಳಕಂಡಿವ್ನಿ ಕನವ್ವಾ" ಎನ್ನುತ್ತಾ 'ಗೊಳೋ' ಎಂದು ಅಳಲು ಆರಂಭಿಸಿದಳು.

"ನಾನು ಹುಟ್ಟಿ ಎಷ್ಟು ಜನಕ್ಕೆ ಕಷ್ಟ ಕೊಟ್ಟೆನವ್ವಾ?" ಎನ್ನುತ್ತಾ ಮಂಗಳೆಯೂ ಗಟ್ಟಿಯಾಗಿ ಅಳತೊಡಗಿದಳು.

ಆ ರಾತ್ರಿ ಅವರೆಲ್ಲರಿಗೂ ನಿದ್ರೆ ಬರಬೇಕಾದರೆ ಬಹಳ ಕಾಲ ಹಿಡಿಯಿತು, ಹೊರಗೆ ಜಗುಲಿಯ ಮೇಲೆ ಮಲಗಿದ್ದ ವಿಷಕಂಠಯ್ಯ ಮಾತ್ರ ನಿದ್ದೆಯಲ್ಲಿ ಪೂರ್ಣವಾಗಿ ಮೈಮರೆತಿದ್ದನು. ಆ ದಿನ ಹೊಗೆ ಹೊಲವನ್ನು ಉತ್ತು ಬಂದ ಆಯಾಸದಿಂದ ಚೆನ್ನಾಗಿ ನಿದ್ದೆ ಬಂದಿತ್ತು ಅವನಿಗೆ.

೩೨

ಬೆಳಿಗ್ಗೆ ದುರ್ಗಿಯನ್ನು ವಿಚಾರಿಸಿದಾಗ ವಿಷಯವೆಲ್ಲ ತಿಳಿಯಿತು. ಸಂದರ್ಭ ಹೀಗಿತ್ತು.....

ನಟರಾಜ ಸೀಮೆಎಣ್ಣೆ ಬುಡ್ಡಿಯ ಬೆಳಕಿನಲ್ಲಿ, ಅನಂತ ಈ ಬಾರಿ ಬಂದಾಗ ಅವನಿಗಾಗಿ ತಂದುಕೊಟ್ಟಿದ್ದ ವೆಂಕಟಾಚಾರ್ಯರ "ದೇವಿ ಚೌಧುರಾಣಿ" ಯನ್ನು ಓದುತ್ತಿದ್ದ. ಮಧ್ಯದಲ್ಲಿ

ಅವನಿಗೆ ಜಲಬಾಧೆಗೆ ಅವಸರವಾಗಿ ಹೊರಗೆ ಹೋದನು. ಒಬ್ಬಳೇ ನಿದ್ದೆ ಬಾರದೆ ಚಾಪೆಯಮೇಲೆ ಹೊರಳಾಡುತ್ತಿದ ದುರ್ಗಿ ನಟರಾಜ ಅತ್ತ ಹೋದ ಬಳಿಕ ಎದ್ದು ತನಗೆ ಅರ್ಥವಾಗದಿದ್ದರೂ "ನನ್ನೊಂದಿಗೆ ನನ್ನ ಗಂಡ ಮಾತಾಡದ ಹಂಗೆ ಮಾಡತಲ್ಲಾ.....! ಎಂತಾದ್ದು ಆ ಪುಸ್ತಕ...? ವಸಿ ನೋಡೂನಾ" ಎಂದು ಆ ಹೊತ್ತಿಗೆಯ ಹಾಳೆಗಳನ್ನು ಕುತೂಹಲದಿಂದ ಬಿಚ್ಚಿ ನೋಡಿದಳು. ತನಗೊಂದೂ ಅರ್ಥವಾಗದಿರಲು "ಹೆಂಗಸರಿಗ್ಯಾಕೆ ಇದ್ಯ?" ಎಂದು ತನ್ನನ್ನು ಓದು ಕಲಿಯದಂತೆ ಮಾಡಿದ ಅಜ್ಜಿ ನರಸಮ್ಮನನ್ನು ಮನದಲ್ಲೇ ಶಪಿಸಿಕೊಳ್ಳುತ್ತಾ ನಟರಾಜ ಇನ್ನೆಲ್ಲಿ ಬಂದುಬಿಡುವನೊ ಎಂಬ ದಿಗಿಲಿನಿಂದ ಹಿಂದೆ ಇದ್ದಂತೆ ದೀಪದ ಪಕ್ಕದಲ್ಲಿ ಆ ಹೊತ್ತಿಗೆಯನ್ನಿರಿಸುವುದರಲ್ಲಿ, ನಟರಾಜ ಬಾಗಿಲನ್ನು ಕಿರ್ರನೆ ಸದ್ದು ಮಾಡುತ್ತ ಒಳಗೆ ಬಂದನು. ಅವನಿನ್ನೇನೆಂದುಕೊಳ್ಳುವನೋ ಎಂಬ ಭೀತಿಯಿಂದ ದುರ್ಗಿ ಪುಸ್ತಕವನ್ನು ದೀಪದ ಅತಿ ಸಮೀಪದಲ್ಲಿಯೇ ಹಿಡಿದು ಕೈಬಿಟ್ಟು ಕೂಡಲೆ ನಟರಾಜನ ಕಡೆ ಮುಖ ತಿರುಗಿಸಿ ನಿಂತಳು. ಅವಳು ಹಾಗೆ ಆತುರದಲ್ಲಿ ಅಜಾಗರೂಕತೆಯಿಂದ ಕೆಳಗೆ ಹಾಕಿದ ಪುಸ್ತಕ ತೆರೆದುಕೊಂಡು ಅದರ ಕೆಲವು ಹಾಳೆಗಳು ಉರಿಯುತ್ತಿದ್ದ ದೀಪದ ಕುಡಿಗೆ ತಗುಲಿದವು. ಒಡನೆಯೇ ನಟರಾಜ "ಹೋಯಿತಲ್ಲ ಹೋಯಿತಲ್ಲ" ಎಂದು ಕೂಗುತ್ತ ಓಡಿ ಬಂದು ಹೊತ್ತಿಕೊಂಡಿದ್ದ ಪುಸ್ತಕದ ಹಾಳೆಗಳ ಬೆಂಕಿಯನ್ನು ಕೈಯಿಂದಲೇ ಬಡಿದು ಆರಿಸಿದನು. ಆದರೆ ಹಾಳೆಗಳು ಅರ್ಧಕ್ಕರ್ಧ ಸುಟ್ಟುಹೋಗಿದ್ದುದರಿಂದ ಆ ಪುಸ್ತಕ ಓದುವುದಕ್ಕೆ ಅಪ್ರಯೋಜಕವಾಗಿತ್ತು. ಈ ಪ್ರಕರಣ ನಟರಾಜನನ್ನು ಉದ್ರೇಕಗೊಳಿಸಿತು. "ನನ್ನ ಬಾಳನ್ನು ಹಾಳುಮಾಡಿದ್ದಲ್ಲದೆ ಹೀಗೆ ಮಾಡಿ ನನ್ನ ಜೀವಾನೂ ತಿಂದುಹಾಕಿಬಿಡಬೇಕು ಅಂತ ಮಾಡಿಕೊಂಡಿದೀಯಾ ?" ಎಂದು ರೇಗಿ ಅವಳನ್ನು ಪ್ರಹರಿಸತೊಡಗಿದನು.

ದುರ್ಗಿ ಇದನ್ನೆಲ್ಲ ಮತ್ತೊಮ್ಮೆ ಹೇಳುವಾಗ ಧಾರಾಕಾರವಾಗಿ ಅವಳ ಕಣ್ಣುಗಳಿಂದ ಕಂಬನಿ ಉರುಳುತ್ತಿತ್ತು. ಮಂಗಳೆಯ ಹೃದಯ ದುಃಖಾಗ್ನಿಯಲ್ಲಿ ಬೆಂದುಹೋಯಿತು. ದುರ್ಗಿಯ ಕಣ್ಣಿನಿಂದ ನೆಲಕ್ಕೆ ಬೀಳುತ್ತಿದ್ದ ಒಂದೊಂದು ಹನಿಯೂ "ನೀನೇ ತಪ್ಪಿತಸ್ಥೆ.... ನಿನ್ನಿಂದಲೇ ಇಷ್ಟೆಲ್ಲ ಗೋಳು" ಎಂದು ಅವಳನ್ನು ಹೀಯ್ಯಾಳಿಸಿದಂತಾಯ್ತು.

ಇದೆಲ್ಲವನ್ನು ಕೇಳಿ ಪಾರ್ವತಮ್ಮನಿಗೂ ಅತೀವವಾದ ಯಾತನೆಯಾದರೂ ಮಾಡಬೇಕಾದ ಕೆಲಸ ಅಗಾಧವಾಗಿದ್ದುದರಿಂದ ಆ ಕ್ಷಣಕ್ಕೆ ಅದನ್ನೆಲ್ಲ ಮರೆತಳು. ಶ್ರಮಜೀವಿಗಳಿಗೆ ತಮ್ಮೆದೆಯನ್ನು ಕೊರೆಯುತ್ತಿರುವ ನೋವನನುಭವಿಸುವುದಕ್ಕೆ ಬಿಡುವಿಲ್ಲ, ಅವಕಾಶವಿಲ್ಲ. ಅಂತೆಯೇ ಪಾರ್ವತಮ್ಮ ಸಂಕಟವನ್ನೆಲ್ಲಾ ಒತ್ತಟ್ಟಿಗಿಟ್ಟು, ತಂಗಳಕ್ಕೆ ಮಾಡಿದ್ದ ರೊಟ್ಟಿಯನ್ನು ಬೇಗ ಬೇಗ ತಿನ್ನಲಾರದ್ದಕ್ಕೆ ಹಾಗೆಯೇ ಅದನ್ನು ತನ್ನ ಸೀರೆಯ ಮಡಿಲಲ್ಲಿ ಕಟ್ಟಿಕೊಂಡು ರಾಗಿ ಹೊಲದ ಕಳೆ ಕೀಳಲು ಹೋದಳು.

ಈ ಕಾಲದಲ್ಲಿ ಎಲ್ಲ ಹೊಲಗಳಲ್ಲಿಯೂ ಬೆಳೆ ಇರುತ್ತದೆ. ಆದ್ದರಿಂದ ದನಕರುಗಳನ್ನು ಬೇಸಿಗೆಯಲ್ಲಿ ಬಿಡುವಂತೆ ಯಾರು ಸ್ವೇಚ್ಛೆಯಾಗಿ ಬಿಡುವುದಿಲ್ಲ. ಅವರವರ ದನಗಳನ್ನು

ಅವರವರಿಗೆ ಸೇರಿದ ಬಯಲು ಜಮೀನಲ್ಲೊ, ಇಲ್ಲವೇ ಕಾಡುಮೇಡಿನಲ್ಲೊ ಮೇಯಿಸಿಕೊಂಡು ಬರಬೇಕು. ಅದರಿಂದಲೇ ಈ ಕಾಲದಲ್ಲಿ ಹೊತ್ತಿಗೆ ಮುಂಚೆಯೇ ಎಲ್ಲರೂ ತಮ್ಮ ದನಕರುಗಳನ್ನು ಅಟ್ಟಿಕೊಂಡು ಹೋಗಬೇಕಾಗುತ್ತದೆ....ಬೇಗ ಬೇಗ ತಾನೇ ಕರುವನ್ನು ಬಿಟ್ಟು ದುರ್ಗಿಯು ಹಾಲು ಕರೆದುಕೊಂಡ ನಂತರ ದನಗಳನ್ನು ಕಾಡಿಗೆ ಪ್ರತಿ ಪ್ರಾತಃಕಾಲ ಹೊಡೆದುಕೊಂಡು ಹೋಗುವ ಹವ್ಯಾಸವನ್ನು ನಟರಾಜನೇ ವಹಿಸಿಕೊಂಡಿದ್ದನು.

ಈ ದಿನ ಅದೇ ರೀತಿ ಕರು ಬಿಟ್ಟು ದುರ್ಗಿಯ ಬರುವಿಕೆಗಾಗಿಯೇ ಕೊಟ್ಟಿಗೆಯಲ್ಲಿ ಕಾಯುತ್ತ ನಿಂತನು ನಟರಾಜ. ಆದರೆ ಇಂದೇಕೋ ಕೊಟ್ಟಿಗೆಗೆ ಹೋಗಿ ಹಾಲು ಕರೆದುಕೊಳ್ಳಲು ದುರ್ಗಿಗೆ ಮನಸ್ಸೇ ಬಾರದು. ಮಂಗಳೆಗೆ ಗೊತ್ತಾಗುವಂತೆಯೇ ತಾನು ತಿಂದ ಪೆಟ್ಟು ಅವಳನ್ನು ನಾಚಿಸಿತ್ತು, ಖಿನ್ನಗೊಳಿಸಿತ್ತು. "ಸರೀಕರೆದುರಿಗೆ ಚೆಂದಾಗಿ ಬಾಳಾಟ ಮಾಡದೇ ಇದ್ದಮ್ಯಾಗೆ ಬದುಕಿದ್ದು ಸುಖವೇನಾ?" ಎಂದು ಅವಳ ಮನಸ್ಸು ತೀರ ಮುರಿದಿತ್ತು. ಒಂದು ಪಕ್ಷ ಎಲ್ಲವನ್ನೂ ಸಹಿಸಿಕೊಂಡು ಅವಳು ಹಾಲು ಕರೆಯಲು ಹೋದಾಗ ಮತ್ತೆ ಅವನು ಏನಾದರೂ ನೆಪ ತೆಗೆದುಕೊಂಡು ಮಂಗಳೆಯೆದುರು 'ಹಾಡಿದ ಹಗಲೇ' ಹೊಡೆಯುವುದಿಲ್ಲವೆಂದು ಯಾವ ನಂಬಿಕೆ? ಹೀಗೆಲ್ಲ ಯೋಚಿಸಿದ ದುರ್ಗಿ ಮಂಗಳೆಯ ಕೈ ಹಿಡಿದುಕೊಂಡು, "ಈವತ್ತು ನೀನು ನನಗೊಂದು ಉಪಕಾರ ಮಾಡಿಕೊಡಬೇಕಲ್ಲಾ ಮಂಗಳಕ್ಕ?" ಎಂದು ಬೇಡುವ ಸ್ವರದಲ್ಲಿ ಕೇಳಿದಳು.

"ಏನು ದುರ್ಗೀ?"

"ಈವತ್ತು ವಸಿ ನೀನೇ ಕೊಟ್ಟಿಗೆಗೋಗಿ ಹಾಲು ಕರೆದುಕೊಂಡು ಬರಬೇಕು."

"ಯಾಕವ್ವಾ, ನೀನೇ ಹೋಗು. ಇದೇ ಒಂದು ನೆಪ ತಕ್ಕೊಂಡು ಹೊಡೆದಾನು."

"ಅಯ್ಯೊ ಅವರು ಹೊಡಿದರೆ ಯಾನಾದಾತು ಬುಡಕ್ಕ" ಎಂದು ಅದರಲ್ಲೂ ಗಂಡನನ್ನು ಬಿಟ್ಟುಕೊಡದೆ "ಈ ಬೆರಳಿಗೆ ಏಟು ಬಿದ್ದುಬುಟ್ಟಿದೆ. ಹಾಲು ಕರೆಯಾಕೆ ಆಗಕ್ಕಿಲ್ಲ" ಎಂದು ಸ್ವಲ್ಪ ಏಟು ಬಿದ್ದುದನ್ನೇ ದೊಡ್ಡದು ಮಾಡಿ ತಪ್ಪಿಸಿಕೊಳ್ಳಲು ಹವಣಿಸಿದಳು.

ಮಂಗಳೆ ವಿಧಿಯಿಲ್ಲದೆ ಹೋಗಲೇಬೇಕಾಗಿ ಬಂದಿತು. ದುರ್ಗಿಯ ಕಯ್ಯಿಂದ ಹಾಲು ಕರೆಯುವ ಚೆಂಬನ್ನು ಈಸುಕೊಂಡು ಹಾರುತ್ತಿರುವ ಹೃದಯಕ್ಕೆ ಒಳಗೊಳಗೇ ಸಮಾಧಾನ ಹೇಳಿಕೊಳ್ಳುತ್ತಾ ಮೆಲ್ಲಮೆಲ್ಲನೆ ಕೊಟ್ಟಿಗೆಗೆ ಹೋದಳು.

ಇಷ್ಟರಲ್ಲಿ ನಟರಾಜನಾಗಲೇ ಕರುವಿಗೆ ಮೊಲೆಯುಣ್ಣಿಸಿ 'ದೊಡ್ಡ ಹಸ' ಸೊರ ಬಿಟ್ಟುದನ್ನು ನೋಡಿ ಕರುವನ್ನೆಳೆದು ಹಸುವಿನ ಮುಂದಿನ ಗೂಟಕ್ಕೆ ಕಟ್ಟುತ್ತಿದ್ದನು. ಆಗ ಹಿಂದಿನಿಂದ ಬಳೆಗಳ ಸದ್ದಾಗಲು ಕರುವನ್ನು ಗೂಟಕ್ಕೆ ಕಟ್ಟುತ್ತಿರುವಂತೆಯೇ ರೇಗಿ, "ಎಷ್ಟು ಹೊತ್ತಾಯ್ತು ನಾನು ಕರು ಬಿಟ್ಟು?......ಬೇಗ ಬರಬೇಕು ಅಂತ ಜ್ಞಾನ ಇಲ್ಲ_" ಎಂದನು.

ಎಂದಿನಂತೆ ದುರ್ಗಿ ಬಂದಿರುವಳೆಂದೇ ಅವನ ಭಾವನೆ.

ಮಂಗಳೆಯ ಹೃದಯ ನಟರಾಜನಲ್ಲಾಗಿದ್ದ ವೈಪರೀತ್ಯವನ್ನು ಕಂಡು ಮರುಕದಿಂದ ಮತ್ತೂ ಮೃದುವಾಯಿತು. ತನ್ನ ನಟರಾಜ ಹೀಗಾಗುವನೆಂದು ಅವಳೆಂದೂ ಭಾವಿಸಿರಲಿಲ್ಲ.

ಹೊತ್ತಾಗಿ ಬಂದುದೂ ಅಲ್ಲದೆ ತಾನು ಕೇಳುತ್ತಿರುವ ಪ್ರಶ್ನೆಗೂ ಉತ್ತರವೀಯದೆ ದುರ್ಗಿ ನಿರ್ಲಕ್ಷಿಸುತ್ತಿರುವಳೆಂದು ನಟರಾಜನಿಗೆ ತಾಳ್ಮೆ ತಪ್ಪಿತು. ಹಗ್ಗವನ್ನು ಗೂಟಕ್ಕೆ ಬೇಗ ಬೇಗ ಬಿಗಿದು ಹಸುವಿನ ಮುಂದೆ ಬಿದ್ದಿದ್ದ ಜೋಳದ ಕಡ್ಡಿಯೊಂದನ್ನು ಎತ್ತಿಕೊಂಡು "ನಿನಗೇ ಸಾಲದು !_" ಎಂದು ಹಲ್ಲು ಕಡಿಯುತ್ತಾ ಹೊಡೆಯುವವನಂತೆ ಎದ್ದು ಬಂದನು. ಆದರೆ ಕತ್ತೆತ್ತಿ ನೋಡಿದ ಕೂಡಲೆ ತನ್ನೆದುರಿಗೆ ನಿಂತವಳು ದುರ್ಗಿಯಲ್ಲ, ಮಂಗಳೇ ಎಂಬ ಅರಿವಾಯಿತು. ಹೊಡೆಯಲು ಎತ್ತಿದ್ದ ಕಡ್ಡಿ ಹಾಗೇ ಬಿದ್ದುಹೋಯಿತು_

"ನೀನಾ?....ದುರ್ಗಿ ಅಂದುಕೊಂಡಿದ್ದೆ" ಎಂದು ನಾಚಿ ನಾಚಿ ಹಸುವಿನ ಹತ್ತಿರ ನಡೆದು ಅದರ ಕತ್ತನ್ನು ತುರಿಸುತ್ತಾ ನಿಂತನು.

ಹಸುವಿನ ಕೆಚ್ಚಲಿಗೆ ನೀರೆರಚುತ್ತಾ ಮಂಗಳೆ "ಬೆರಳು ಮುರಿಯೋ ಹಾಗೆ ಹೊಡೆದರೆ ದುರ್ಗಿ ಹೇಗೆ ಬರ್ತಾಳೆ?" ಎಂದಳು.

ನಟರಾಜ ಪೆಚ್ಚಾದವನಂತೆ ಮೌನ ತಳೆದ.

ಎರಡು ಕೈಯಿಂದಲೂ ಹಾಲು ಹಿಂಡುತ್ತಿರುವಂತೆ, "ನಮ್ಮ ನಮ್ಮ ಕರ್ಮಕ್ಕೆ ಇನ್ನೊಂದು ಜೀವ ಗೋಳು ಹುಯ್ದುಕೊಳ್ಳೋದು ಯಾಕೆ?" ಎಂದಳು.

ನಟರಾಜ ತುರಿಸುವುದನ್ನು ಬಿಟ್ಟು ಪ್ರತಿಮೆಯಂತೆ ನಿಶ್ಚಲವಾಗಿ ನಿಂತನು.

"ಅದೂ ಒಳ್ಳೆ ಹೆಣ್ಣು....ಇನ್ಯಾರಾರ ಆಗಿದ್ದರೆ ಎಷ್ಟು ರಂಪ ಮಾಡಿರೋರೋ, ಏನೋ....ಹಾಗೆ ಒಂದೂ ತಪ್ಪು ಮಾಡದೇ ಇರೋ ದೇವತೆ ಎಲ್ಲಿದ್ದಾಳೆ?"

"ಓ ! ಇನ್ನು ಯಾತಕ್ಕೆ ಮಾತು ಬಿಡು. ಬಾಯಲ್ಲಿ ಹೇಳೋ ಹಾಗಲ್ಲ ಅನುಭವಿಸೋರಿಗೆ ಗೊತ್ತು ಅದೆಷ್ಟು ಕಷ್ಟ ಅಂತ."

"ನನಗೆ ನೀನು ಅನುಭವಿಸ್ತಾ ಇರೋ ಸಂಕಟ ಗೊತ್ತಾಗದೆ ಇಲ್ಲ. ಆದರೆ ಏನು ಮಾಡೋದು? ಎಲ್ಲ ನಮ್ಮ ಕರ್ಮ...ಏನೊ ಇರೋವರೆಗೆ ಎಷ್ಟೇ ಬೇಡ ಅನ್ನಿಸಿದರೂ ಈ ಜನ್ಮ ಹೊರೀಬೇಕು" ಎಂದು ಹೇಳುತ್ತಿರುವಂತೆಯೇ ತನ್ನ ಕಷ್ಟಮಯ ಬಾಳುವೆಯನ್ನು ನೆನೆದು ಕಣ್ಣೀರಿಡಲು ಆರಂಭಿಸಿದಳು. ಇಲ್ಲಿಯವರೆಗೂ ತನ್ನ ಸುತ್ತಲೂ ಸದೃಢವಾಗಿ ಅವಳು ಕಟ್ಟಿಕೊಂಡಿದ್ದ ಧೈರ್ಯದ ಕೋಟೆ ಮುರಿದುಬಿದ್ದಿತ್ತು...ಅಳುತ್ತಳುತ್ತಲೇ, "ಆದದ್ದೆಲ್ಲಾ.....ಆಗೋಯ್ತು ಇನ್ನು....ನನ್ನ.....ನೀನು ಮರೆತುಬಿಡು" ಎಂದಳು.

ನಟರಾಜನೂ ಹಸುವಿನ ಕತ್ತಿಗೆ ತನ್ನ ತಲೆಯನ್ನು ಒರಗಿಸಿದಂತೆಯೇ ಮೌನವಾಗಿ ಕಂಬನಿ ಸುರಿಸತೊಡಗಿದನು.

ಅತ್ತ ದುರ್ಗಿಯ ಹೃದಯ ನಟರಾಜ ಏನೆಂದುಕೊಳ್ಳುತ್ತಾನೋ, ಏನೊ ಎಂದು ಒಳಗೊಳಗೇ ಮಿಡುಕುತ್ತಿತ್ತು. 'ಕೆಂದಹಸು'ವನ್ನು ಕರೆಯುವಾಗ ಕಲಗಚ್ಚನ್ನು ಇಟ್ಟೇ ಇಡಬೇಕು. ಇಲ್ಲದಿದ್ದರೆ ಅದು ಸೊರವನ್ನೇ ಬಿಡುತ್ತಿರಲಿಲ್ಲ–ಹಸುಗಳಲ್ಲೂ ಮನುಷ್ಯರಲ್ಲಿರುವಂತೆಯೇ ತರಹಾವಾರಿ ಸ್ವಭಾವವಿರುತ್ತದೆ. ಕೆಲವಕ್ಕೆ ಹಾಲು ಕರೆದುಕೊಳ್ಳುವಾಗ ಜೋಳದ ಕಡ್ಡಿ ಹಾಕಬೇಕು. ಕೆಲವಕ್ಕೆ ಆ ಸಮಯದಲ್ಲಿ ಕಡ್ಡಿ ಬೇಡ; ಕಲಗಚ್ಚು ಬೇಕು. ಕೆಲವಕ್ಕಂತೂ ಮುಂದೆ ಕಡ್ಡಿಯಾಗಲಿ, ಕಲಗಚ್ಚಾಗಲಿ ಇದ್ದು ಬಿಟ್ಟರೆ ಸೊರ ಬಿಡುವುದೇ ಸಾಧ್ಯವಿಲ್ಲ. ಸಂದರ್ಭ ಹೀಗಿದ್ದುದರಿಂದ 'ಕೆಂದ' ಹಸುವಿಗೆ ಕಲಗಚ್ಚನ್ನಿಟ್ಟ ಹೊರತೂ ಅದರ ಹಾಲು ಕರೆದುಕೊಳ್ಳುವಂತಿರಲಿಲ್ಲ. ಆದರೆ ತೊಟ್ಟಿಯೊಳಗಿದ್ದ ಕಲಗಚ್ಚನ್ನು ಮಂಗಳೆ ಎಷ್ಟು ವೇಳೆಯಾದರೂ ಬಂದು ತೆಗೆದುಕೊಂಡು ಹೋಗದಿದ್ದುದು ದುರ್ಗಿಯಲ್ಲಿ ಕಳವಳವನ್ನು ಉಂಟುಮಾಡಿತ್ತು. ಕರೆಯುವಾಗ ಕಲಗಚ್ಚಿಲ್ಲದಿದ್ದರೆ ನಟರಾಜ ಎಲ್ಲಿ ರೇಗಿಬೀಳುವನೊ, ಎಂಬ ನಡುಕ. ಆದರೆ 'ದೊಡ್ಡ ಹಸ'ವನ್ನು ಕರೆದುಕೊಂಡ ಬಳಿಕ ಮಂಗಳೆಯೇ ಬರಬಹುದೆಂದು ಅವಳ ಊಹೆ, ಅದರಿಂದಲೇ "ಮಂಗಳಕ್ಕ ಆಗ ಬತ್ತಾಳೆ–ಈಗ ಬತ್ತಾಳೆ" ಎಂದು ಕಾದು ನೋಡಿದಳು. ಹಾಗೂ ಮಂಗಳೆಯ ಸುಳಿವು ಕಾಣದಿರಲು, ಒಂದೆರಡು ಬಾರಿ "ಮಂಗಳಕ್ಕಾ–ಮಂಗಳಕ್ಕಾ_" ಎಂದು ಕೂಗಿ ನೋಡಿದಳು. ಆದರೆ ಇವಳ ಕೂಗು ನಟರಾಜನಿಗಾಗಲಿ, ಮಂಗಳೆಗಾಗಲಿ ಕೇಳದಿದ್ದುದರಿಂದ ಅವರಿಬ್ಬರೂ ಉತ್ತರವೀಯಲಿಲ್ಲ. ಹಾಗೆ ನೋಡಿ, ಹೀಗೆ ನೋಡಿ, ಕಡೆಗೆ ತಾನೇ ಹೋಗಿ ಬಿಡುವುದೆಂದು ನಿರ್ಧರಿಸಿ ಕಲಗಚ್ಚಿನ ಬಾನಿಯನ್ನೆತ್ತಿಕೊಂಡು ಕೊಟ್ಟಿಗೆಗೆ ಹೋದಳು. ಅಲ್ಲಿ ತನ್ನ ಗಂಡನೂ ಮಂಗಳೆಯೂ ಅಳುತ್ತಿರುವುದನ್ನು ನೋಡಿ ಕಂಡೂ ಕಾಣದವಳಂತೆ ಕಲಗಚ್ಚಿನ ಬಾನಿಯನ್ನು 'ಕೆಂದ' ಹಸುವಿನ ಮುಂದಿಡುತ್ತಾ ಕತ್ತೆತ್ತದೆ, ನಟರಾಜನನ್ನುದ್ದೇಶಿಸಿ, "ಮಂಗಳಕ್ಕ ಬ್ಯಾಗ ಬರ್ನಿಲ್ಲ... ಅದ್ಕೆ ನಾನೆ ತಕ್ಕೊಂಡು ಬಂದೆ–ಅದಿಲ್ಲದೇ ಓದರೆ ಕೆಂದ ಹಸ ಹಾಲು ಕರೆಯಕ್ಕಿಲ್ಲ ಅಂತಾವ...." ಎಂದು ಬಾನಿಯನ್ನೇ ನಿಟ್ಟಿಸುತ್ತ ನುಡಿದಳು ದುರ್ಗಿ.

ನಟರಾಜನ ದೃಷ್ಟಿ ನೇರವಾಗಿ ದುರ್ಗಿಯಲ್ಲೇ ನಾಟಿತು. "ನಾನು ಬಯಸದ ಈ ಹೆಣ್ಣಿನ ಕೂಡ ನನ್ನ ಇಡೀ ಬಾಳುವೆಯನ್ನು ಹೇಗೆ ಸಾಗಿಸಲಿ?" ಎಂದು ಅವನ ಹೃದಯದ ವೇದನೆ, ಪರಿತಾಪವನ್ನೆಲ್ಲ ಹೊರಸೂಸುವಂತಿತ್ತು ಆ ನೋಟ. ಮಂಗಳೆ ಗೋಳಿನಿಂದ ಗಾಸಿಯಾದ ನಟರಾಜನ ಮುಖವನ್ನು ನೋಡಲಾರದೆ ತನ್ನ ಶಿರವನ್ನು ಸಂಕಟದಿಂದ ಬಾಗಿಸಿಕೊಂಡಳು, ಅವಳ ಕಣ್ಣು ಕಂಬನಿಯ ಕಡಲಾಯಿತು.

೩೩

ನಟರಾಜ ಬಹು ಪ್ರಯಾಸದಿಂದ ತನ್ನ ದುಃಖವನ್ನು ನುಂಗಿಕೊಂಡು ದನಕರುಗಳನ್ನು ಮೇಯಿಸಲು ಕಾಡಿಗೆ ಅಟ್ಟಿಕೊಂಡು ಹೋದನು. ಓತಿ ಬೆಟ್ಟದ ಕಡೆಯಿಂದ ಹತ್ತಿ ಇಳಿದು ಮುತ್ತರಾಯನ ಬೆಟ್ಟವನ್ನು ಸೇರಿದನು. ಮುತ್ತರಾಯನ ಗುಡಿಯನ್ನು ದಾಟಿ ಅದರ ಹಿಂಭಾಗಕ್ಕಿದ್ದ ಬಂಡೆಯ ಮೇಲೆ ಹೋಗಿ ಕುಳಿತನು. ಮುಂದೆ ಬೆಟ್ಟದ ಕೆಳಭಾಗದಲ್ಲಿ ದಟ್ಟೈಸಿ ಹರಡಿದ ಕಾಡುನೆಲಕ್ಕೆ ಹಸಿರು ಉಡೆಯನ್ನುಡಿಸಿದಂತೆ ಮನೋಹರವಾಗಿ ಹಾಸಿತ್ತು. ಅದರಾಚೆಗೆ ಮುತ್ತರಾಯನ ಹೊಸ ಹಳ್ಳಿಯ ಹೆಂಚಿನ ಮನೆಗಳಿಂದ ಊದು ಬತ್ತಿಯಿಂದೇಳುವ ಹೊಗೆಯಂತೆ ಸಣ್ಣದಾಗಿ ಹೊಗೆಯೇಳುತ್ತಿತ್ತು. ಬಲಭಾಗಕ್ಕೆ ದೊಡ್ಡ ಬೆಟ್ಟ. ದೊಡ್ಡ ಬೆಟ್ಟಕ್ಕೂ ಓತಿಯ ಬೆಟ್ಟಕ್ಕೂ ನಡುವೆ ಮಹತ್ತರವಾದ ವಿಪಿನ. ಭಾರಿ ಭಾರಿ ಹುಲಿಗಳ ಆವಾಸ ಸ್ಥಾನ ಎಂದು ಪ್ರಸಿದ್ಧವಾದ ಸ್ಥಳ. ನಟರಾಜನ ದೃಷ್ಟಿ ಹಾಗೆ ಎಡಭಾಗಕ್ಕೆ ನಾಲ್ಕೈದು ಮೈಲಿ ಘಾಸಲೆಯ ಹೈರಿಗೆ ಕೆರೆಯನ್ನೂ ದಾಟಿ ಹರಡಿತ್ತು. ಕಲ್ಲಹಳ್ಳಿಯ ಹಿಂಭಾಗಕ್ಕಿದ್ದ, ಮೈಸೂರಿನಿಂದ ಗೋಣಿಕೊಪ್ಪಲಿಗೆ ಹೋಗುವ ಹೆದ್ದಾರಿ ಆ ಅರಣ್ಯವನ್ನು ಸೀಳಿ ಬಿಳಿಯ ದಾರದಂತೆ ಹರಿದಿತ್ತು.

ಘಾಸಿಗೊಂಡಿದ್ದ ನಟರಾಜನ ಮನಸ್ಸಿನ ಮೇಲೆ ಈ ದೃಶ್ಯ ಒಳ್ಳೆಯ ಪರಿಣಾಮ ಮಾಡಿತು. ಅವನ ನೇತ್ರಗಳಿಂದ ಆಗಾಗ ನೀರು ಚಿಮ್ಮುತ್ತಿದ್ದರೂ ಅವನ ಅಂತರಂಗದ ಹೊಯ್ದಾಟ ಒಂದು ನೆಮ್ಮದಿ ಪಡೆಯಿತು. ದನಕರುಗಳು ಹಳ್ಳಿಯ ಇತರ ದನಕರುಗಳೊಡನೆ ಎದುರಿಗೇ ಬೆಟ್ಟದ ಇಳಿಜಾರಿನಲ್ಲಿ ಹಾಯಾಗಿ ಮೇಯುತ್ತಿದ್ದವು. ರಾತ್ರಿಯೆಲ್ಲಾ ನಿದ್ದೆ ಕೆಟ್ಟಿದ್ದ ನಟರಾಜ ತಾನು ಕುಳಿತಿದ್ದ ಬಂಡೆಯ ಪಕ್ಕದಲ್ಲಿ ದೊಡ್ಡದಾಗಿ ನಿಂತಿದ್ದ ಬಂಡೆಯನ್ನೊರಗಿ ಕಣ್ಣು ಮುಚ್ಚಿದನು. ನಿದ್ರೆ ಯಾವಾಗ ಕವಿಯಿತೊ ಅವನಿಗೇ ತಿಳಿಯದು.

ಅವನಿಗೆ ಎಚ್ಚರವಾದಾಗ ಸೂರ್ಯನಾಗಲೇ ಪಶ್ಚಿಮಕ್ಕಿಳಿದು ಆ ದಿಕ್ಕಿನ ಮೇಘಗಳಿಗೆ ಕೆಂಪು ಬಣ್ಣವನ್ನೆರೆದಿದ್ದ. ಎಷ್ಟು ಹೊತ್ತು ಮಲಗಿದೆನೆಂದು ಕಣ್ಣುಜ್ಜುತ್ತಾ ಎದ್ದುನಿಂತ ನಟರಾಜನಿಗೆ ಹಸಿವೆ ಕಾಣಿಸಿತು. ಪ್ರಾತಃಕಾಲ ದುರ್ಗಿ 'ಉದುರು ಅಕ್ಕಿ ಕಡಬು' ಮಾಡಿ ತಂದಾಗ ಅವನು ಅದನ್ನು ಮುಟ್ಟದೆ ಎದ್ದು ಬಂದಿದ್ದ. ಈಗ ಹಸಿದ ಹೊಟ್ಟೆ ಉಪದ್ರವಕೊಡಲು ಆರಂಭಿಸಿತು. ಮುಖ ಸಣ್ಣಗೆಮಾಡಿ ದನಕರುಗಳು ಮೇಯುತ್ತಿದ್ದೆಡೆಗೆ ದೃಷ್ಟಿ ಹಾಯಿಸಿದ. ಅವನ ಕಣ್ಣಿಗೆ ಒಂದು ದನಕರುವೂ ಕಂಡುಬರಲಿಲ್ಲ. ಭಾರವಾದ ಹೆಜ್ಜೆಯನ್ನಿಡುತ್ತಾ ಅವುಗಳನ್ನರಸಲು ಆರಂಭಿಸಿದನು. ಆದರೆ ಎಲ್ಲಿ ಹುಡುಕಿದರೂ ಇವರ ದನಕರುಗಳೇ ಕಾಣಲಿಲ್ಲ. "ನಾನೂ ಮಲಗಿಬಿಟ್ಟಿದ್ದೆ. ಹೇಳುವವರು ಕೇಳುವವರು ಯಾರೂ ಇಲ್ಲದೆ ಅವೂ ಮನೆಯ ಕಡೆಗೇ ನಡೆದಿರಬೇಕು" ಎಂದುಕೊಳ್ಳುತ್ತಾ ಕಡೆಗೆ ಅವನೂ ಊರಿಗಭಿಮುಖವಾಗಿ ಹೊರಟ. ದಾರಿಯಲ್ಲಿ ತನ್ನ ಹಸುಗಳನ್ನಟ್ಟಿ ಹಿಂದಿರುಗುತ್ತಿದ್ದ ಮರಿ ಜೊತೆಯಾದ.

"ಎಲ್ಲೀಗೆ ಹೊಂಟೋಗಿದ್ದೆಯೊ ಮಾರಾಯ. ಹನ್ನೊಂದು ಗಂಟೇಗೆ ಹಸ ಅಟ್ಟಿಕೊಂಡು ಹೋದೋನು ಇನ್ನೂ ಬಂದಿಲ್ಲಾ ಅಂತ ನಿಮ್ಮ ಹಟ್ಟೀಲೆಲ್ಲಾ ಪೇಚಾಡ್ತಾ ಇದ್ದರು," ಎನ್ನುತ್ತಾ ನಟರಾಜನ ಭುಜದ ಮೇಲೆ ವಿಶ್ವಾಸದಿಂದ ಕೈ ಹಾಕಿದ.

"ನೀನೆಷ್ಟು ಹೊತ್ತಿಗೆ ಬಂದೇ ?" ಎಂದಷ್ಟೆ ಕೇಳಿದ ನಟರಾಜ.

"ನಾನೂ ಉಂಡುಕೊಂಡು ನಿಮ್ಮ ಹಟ್ಟೀಕಡೆ ಹೋಗಿದ್ದು, ಸುಮಾರು ಹನ್ನೆರಡು ಗಂಟೆ ಟೈಂಗೆ ನಮ್ಮ ದನ ಅಟ್ಟಿಕೊಂಡು ಬಂದೆ. ಇಲ್ಲಿ ನೀನೆಲ್ಲೂ ಕಾಣಲೇ ಇಲ್ಲವಲ್ಲ? ಎಲ್ಲಿ ಹೊಂಟೋಗಿದ್ದೆಯೋ ಮಾರಾಯ?

"ಎಲ್ಲೂ ಹೋಗಿರಲಿಲ್ಲ. ಮುತ್ತರಾಯನ ಗುಡಿ ಹಿಂಭಾಗದ ಬಂಡೆ ಒರಗಿ ಕುಳಿತಿದ್ದೆ. ಹಾಗೇ ನಿದ್ದೆ ಬಂದುಬಿಡ್ತು ಎದ್ದಾಗ ಆಗಲೇ ಸಂಜೆಗೆ ತಿರುಗಿತ್ತು."

"ಸರಿಯಪ್ಪಾ. ನಿನ್ನ ಹಸಕರ ಎಲ್ಲೊ?"

"ನನ್ನ ಸದ್ದು ಎಲ್ಲೂ ಕೇಳದೆ ಅವೂ ಮನೆ ಕಡೆ ನಡೆದಿರಬೇಕು."

"ಊಟಕ್ಕೇನು ಮಾಡಿದೆ?"

"ಮಾಡೋದೇನು?"

"ಇಷ್ಟು ಹೊತ್ತಿನ ತನಕ ಹಸಿದೇ ಇದ್ದೆಯಾ?"

"ಹೂ" ಎನ್ನುವಂತೆ ವಿಷಾದದಿಂದ ತಲೆಯಲ್ಲಾಡಿಸಿದ ನಟರಾಜ.

"ಒಳ್ಳೆ ಮಾರಾಯ" ಎನ್ನುತ್ತಾ ತನ್ನ ಟವಲ್ಲಿನಲ್ಲಿ ಗಂಟು ಹಾಕಿದ್ದ ಬೇಲದ ಹಣ್ಣುಗಳಲ್ಲಿ ಕೆಲವನ್ನು ಅವನಿಗೆ ಕೊಡುತ್ತಾ "ಹೋಗಲಿ ತಗೊ. ಇವನ್ನಾದರೂ ತಿನ್ನು" ಎಂದನು ಮರಿ.

ಬೇಲದ ಹಣ್ಣನ್ನು ತಿನ್ನುತ್ತಿರುವಂತೆ ನಟರಾಜನಿಗೆ ಮತ್ತೊಮ್ಮೆ ಕಣ್ಣೀರು ಕಾಣಿಸಿತು. ಆದರೆ ಈ ಬಾರಿಯ ಕಂಬನಿ ತನ್ನ ಮಿತ್ರ ತನ್ನಲ್ಲಿಟ್ಟಿರುವ ವಿಶ್ವಾಸಕ್ಕೆ, ಪ್ರೇಮಕ್ಕೆ ಮಾರುಹೋಗಿ ತನ್ನ ಹೃದಯ ಹೊರಚಿಮ್ಮಿದ ಹರ್ಷ ಜಲ!

ನಟರಾಜ ಹಟ್ಟಿಯೊಳಗೆ ಕಾಲಿಟ್ಟಾಗ ಮಂಗಳೆ ಒಬ್ಬಳೇ ತೊಟ್ಟಿಯಲ್ಲಿ ಕುಳಿತು ರಾಗಿ ಬೀಸುತ್ತಿದ್ದಳು. ಅವನ ಹೆಜ್ಜೆಯ ಸಪ್ಪಳ ಕೇಳಿ ಸರಕ್ಕನೆ ಹಿಂದಿರುಗಿ ನೋಡಿದಳು. ಅವಳ ನೋಟದಲ್ಲಿ ತುಂಬಿದ್ದ ಕಾತರತೆ, ಅಂತಃಕರಣಗಳನ್ನು ಗಮನಿಸಿದ ನಟರಾಜನಿಗೆ ಆಕೆ ಬೇರೊಬ್ಬನ ಮಡದಿ ಎಂಬುದೇ ಮರೆತುಹೋಯಿತು. ಆ ಕ್ಷಣಕ್ಕೆ ಅವಳು ತನ್ನವಳು, ತನ್ನವಳೇ ಎಂಬ ಭಾವ ಸ್ಫುರಿಸಿತು. ಮಂಗಳೆ ರಾಗಿ ಬೀಸುವುದನ್ನು ನಿಲ್ಲಿಸಿ, "ಮಧ್ಯಾಹ್ನ ಊಟಕ್ಕೆ ಯಾಕೆ ಬರಲಿಲ್ಲ?" ಎಂದು ಕೇಳಿದಳು.

ಅವಳ ಪ್ರಶ್ನೆಗೆ ಏನೊಂದುತ್ತರವನ್ನೂ ಕೊಡದೆ ನಟರಾಜ ಸುಮ್ಮನೆ ಅವಳನ್ನೇ ನಿಟ್ಟಿಸುತ್ತಿದ್ದ. ಅಂದು ಅಭ್ಯಂಜನ ಸ್ನಾನ ಮಾಡಿದ್ದುದರಿಂದ ಮಂಗಳೆಗೆ ಹೊಸ ಚೆಲುವು ಬಂದಂತಿತ್ತು, ಮುಖಕ್ಕೆ ಕೆಂಪಡರಿ ಅದು ಮನೋಹರವಾಗಿ ಕಾಣುತ್ತಿತ್ತು.

ನಟರಾಜ ತನ್ನನ್ನೇ ತಿನ್ನುವಂತೆ ನೋಡುತ್ತಿದ್ದುದು ಮಂಗಳೆಯನ್ನು ನಾಚಿಸಿತು. ಅವಳಿಗೆ ದುಃಖವಾಯಿತು.

"ಯಾಕೆ ಊಟಕ್ಕೆ ಬರಲಿಲ್ಲ?" ಎಂದು ಮತ್ತೊಮ್ಮೆ ಪ್ರಶ್ನಿಸಿದಳು.

ಅವಳು ಹಾಗೆ ಕೇಳುವಾಗ ಅವಳ ಧ್ವನಿಯಲ್ಲಿದ್ದ ಮಾಧುರ್ಯ, ಪ್ರೀತಿಗಳು ಆಕೆ ತನ್ನ ಪ್ರೇಯಸಿಯೇ ಎನ್ನುವಷ್ಟು ಆತ್ಮೀಯತೆಯನ್ನು ನಟರಾಜನಲ್ಲುಂಟುಮಾಡಿತ್ತು.

ಅಷ್ಟರಲ್ಲಿ ಅಡುಗೆ ಮನೆಯಲ್ಲಿ ಮಡಕೆ, ಕುಡಿಕೆಗಳನ್ನು ತೊಳೆದಿಡುತ್ತಿದ್ದ ದುರ್ಗಿ, ಮಂಗಳೆಯ ಪ್ರಶ್ನೆಯಿಂದ ತನ್ನ ಪತಿ ಬಂದಿರಬೇಕೆಂದು ಊಹಿಸಿ, ಹಿತ್ತಾಳೆಯ ಚೆಂಬಿನಲ್ಲಿ ಬಿಸಿ ನೀರು ತೆಗೆದುಕೊಂಡು ಬಂದಳು.

ಅವಳನ್ನು ನೋಡಿದೊಡನೆಯೇ ನಟರಾಜನ ಕನಸು ಒಡೆಯಿತು. ನಗ್ನ ಸತ್ಯ ದುರ್ಗಿಯ ರೂಪದಲ್ಲಿ ಅವನಿಗೆ ಇದಿರಾಗಿತ್ತು. ಖೇದದಿಂದ ವಿಷಣ್ಣವದನನಾಗಿ ಭಾರವಾಗಿ ನಿಟ್ಟುಸಿರಿಡುತ್ತ ನಿಂತುಬಿಟ್ಟನು.

ಮಂಗಳೆಗೆ ಸಕಲವೂ ಅರ್ಥವಾಯಿತು. ಕೂಡಲೇ ರಾಗಿ ಬೀಸುವುದನ್ನು ನಿಲ್ಲಿಸಿ ಎದ್ದು ಬಂದು ತಾನೇ ದುರ್ಗಿಯ ಕಯ್ಯಿಂದ ಮೆಲ್ಲನೆ ಚೆಂಬನ್ನು ತೆಗೆದುಕೊಂಡು "ಬಾ ಮಾವ. ಬೆಳಗಿನಿಂದ ಏನೂ ತೆಗೆದುಕೊಂಡಿಲ್ಲ ಊಟ ಮಾಡು ಬಾ" ಎನ್ನುತ್ತ ಅವನ ಕೈ ಕಾಲುಗಳಿಗೆ ನೀರಿತ್ತಳು. ನಟರಾಜ ಯಾಂತ್ರಿಕವಾಗಿ ಕೈಕಾಲು ತೊಳೆದು ನಡುಮನೆಗೆ ಕಾಲಿರಿಸುತ್ತಿರುವಂತೆ ಕೊಟ್ಟಿಗೆಯಿಂದ ಪ್ರವೇಶಿಸಿದ ಪಾರ್ವತಮ್ಮ ಕೇಳಿದಳು :

"ಕೆಂದಹಸ ಬರನೇ ಇಲ್ಲವಲ್ಲ ಮೊಗಾ?"

ನಟರಾಜ ಅವಾಕ್ಕಾಗಿ ತಿರುಗಿ ನಿಂತ.

"ಏನು, ಕೆಂದಹಸ ಬರಲಿಲ್ಲವಾ?"

"ಇಲ್ಲ ಕನ ಮೊಗಾ. ನಿಂಗೇನು ಸುಳ್ಳು ಹೇಳಬೇಕಾ? .... ಬಾಕಿಯೆಲ್ಲ ಹಸಗಳೂ ಬಂದೊ. ಈ ಕೆಂದಹಸ ಒಂದು ಮಾತ್ರ ಇನ್ನೂ ಬರ್ನಿಲ್ಲ. ನಿನ್ನ ಜೊತೇಲಿ ಬರಬೌದು ಅಂತ ಸುಮ್ಮಕೆ ಆದೊ. ಮದ್ದಿನದಿಂದ ನೀನೂ ಬರ್ನಿಲ್ಲ ಅದೂ ಬರ್ನಿಲ್ಲ."

ಅಕ್ಕನ ಮಾತುಗಳನ್ನಾಲಿಸಿ ನಟರಾಜ ಕಳವಳಗೊಂಡ. ತನ್ನ ಅವಿವೇಕದಿಂದ, ತಾನು ಪ್ರಜ್ಞೆ ತಪ್ಪಿದುದರಿಂದ ವಿಷಕಂಠಯ್ಯನ ಗೋವುಗಳಲ್ಲಿ ಅತ್ಯುತ್ಕೃಷ್ಟ ಗೋವು ಗುಂಪೊಡೆದು ಕಾಡಿನಲ್ಲೆಲ್ಲೋ ತಪ್ಪಿಸಿಕೊಂಡಿತ್ತು. ಅದನ್ನು ತನ್ನ ಅಕ್ಕನೂ, ಭಾವನೂ ಎಷ್ಟು ಪ್ರೀತಿಸುತ್ತಿದ್ದರೆಂಬುದನ್ನು ನಟರಾಜ ಚೆನ್ನಾಗಿ ಬಲ್ಲ. ಅದು ಹುಲಿಯ ಬಾಯಿಗೊ, ಕಿರುಬನ ಬಾಯಿಗೊ ಬಿದ್ದುಬಿಟ್ಟರೆ ಏನು ಗತಿ, ಎಂದು ಅವನಿಗೆ ವಿಪರೀತ ಗಾಬರಿಯಾಯಿತು. ತನ್ನ ಅಜಾಗರೂಕತೆಯಿಂದ ಅಕ್ಕನ ಮನೆಗೆ ಅಷ್ಟು ನಷ್ಟ ಸಂಭವಿಸಲು ಬಿಡಕೂಡದೆಂದು ಅವನ ಹೃದಯ ಮೊರೆಯಿತು, ತತ್‌ಕ್ಷಣ "ಹಸ ಹುಡುಕಿಕೊಂಡು ಬರ್ತೀನಿ" ಎನ್ನುತ್ತಾ ಕಾಡಿಗೆ ಹೊರಟೇಬಿಟ್ಟ, "ಊಟಮಾಡಿ ಹೋಗಬಾರದಾ?" ಎಂದು ಮಂಗಳೆ ಕೂಗುತ್ತಿದ್ದರೂ ಅವನಿಗೆ ನಿಲ್ಲುವ ಮನಸ್ಸಾಗಲಿಲ್ಲ.

ಎಂಟು ಗಂಟೆಯ ಸುಮಾರಿಗೆ ಊರೊಳಗಿನಿಂದ ವಿಷಕಂಠಯ್ಯ ಬಂದ. ಅವನು ಮನೆ ಸೇರುತ್ತಲೂ ಕೆಂದಹಸು ತಪ್ಪಿಸಿಕೊಂಡಿರುವುದೆಂದೂ ನಟರಾಜ ಅದನ್ನು ಹುಡುಕಲು ಅಡವಿಗೆ ಹೋದನೆಂದೂ ಪಾರ್ವತಮ್ಮ ಹೇಳಿದಳು. ವಿಷಕಂಠಯ್ಯ ಆ ಸಮಾಚಾರ ಕೇಳಿ ದಿಗ್ಭ್ರಮೆಗೊಂಡ. "ಆಯ್ಯೊ ದೇವರೆ, ನನ್ನ ಹತ್ತಿರ ಯೇನೂ ಹತ್ತಾರು ರಾಸು ಇದ್ದಾತಾ? ಇರೊ ಒಂದೆರಡು ಹಸಾನು ಕಿರುಬನ ಬಾಯಿಗೆ ಹೋದರೆ ಯೇನು ಮಾಡೋದು?" ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತುಬಿಟ್ಟ, ಆಗ ಮಂಗಳೇ ಅವನ ಬಳಿಗೆ ಬಂದು "ಹೀಗೆ ಅಧೈರ್ಯಪಟ್ಟು ಕುಳಿತುಬಿಟ್ಟರೆ ಹೇಗೆ?...ಬಾ ಅಯ್ಯ, ನಾವೂ ಕಾಡಿಗೆ ಹೋಗಿ ಹುಡುಕೋಣ" ಎಂದು ಸಮಾಧಾನಪಡಿಸುವ ಧ್ವನಿಯಲ್ಲಿ ಹೇಳಿದಳು.

ವಿಷಕಂಠಯ್ಯನಿಗೆ ಮಂಗಳೆಯ ಸಲಹೆ ಸೂಕ್ತವಾಗಿ ಕಂಡಿತು. "ಅದೂ ಸರಿ ನಡಿ ಹೋಗೂನ. ಸಕ್ಕರೆ ಹಂಗೆ ಹಾಲು ಕೊಡೊ ಹಸ ಕಳಕೊಂಡ ಮ್ಯಾಗೆ ನಮಗುಳಿಯೊ ಭಾಗ್ಯವಾದರೂ ಏನು?" ಎನ್ನುತ್ತಾ ಲಾಟೀನು ಹತ್ತಿಸಿ ಹೊರಡಲನುವಾದನು.

* * *

"ನೀನ್ಯಾಕೆ ಕತ್ತಲೆ ಕಾವಳದಲ್ಲಿ ಗಂಡಸರ ಸಮ ಅಡವೀಲೆಲ್ಲ ಅಲೀಬೇಕು, ಸುಮ್ಮನೆ ಉಂಡುಕೊಂಡು ಮನಕ್ಕೊ. ಅವರು ಹೋಗಿ ತಡಕ್ಕೊಂಡು ಬರ್‍ತಾರಂತೆ" ಎಂದು ಪಾರ್ವತಮ್ಮ ಎಷ್ಟೆಷ್ಟೋ ವಿಧವಾಗಿ ತಡೆದರೂ "ಅಯ್ಯನೊಂದಿಗೆ ನಾನೂ ಹೋಗ್ತೀನಿ" ಎಂದು ಹಟಮಾಡಿ ಹೊರಟಿದ್ದಳು ಮಂಗಳೆ.

ಮಗಳ ಶರತ್ವಕ್ಕೆ ತಾಯಿ ನೊಂದುಕೊಂಡಳು. "ನಿನ್ನ ಗಂಡ ನಾಳೀಕೆ ಆಕ್ಷೇಪಣೆ ಮಾಡಾನು ಕನವ್ವ" ಎಂದು ಕಡೆಯದಾಗಿ ಅಂದುಬಿಟ್ಟಳು.

ತಾಯಿಯುಪಯೋಗಿಸಿದ 'ಗಂಡ' ಎಂಬ ಪದ ಮಂಗಳೆಯನ್ನು ಶಲ್ಯದಂತೆ ಬಂದಿರಿಯಿತು. ಸುಬ್ಬರಾಯಿ ತನ್ನ ಗಂಡ ಎಂದು ಅವಳ ಆಂತರಂಗ ಸರ್ವಥಾ ಒಪ್ಪಿರಲಿಲ್ಲ.

ತನ್ನ ದುರ್ದೈವ ಸುಬ್ಬರಾಯಿಯ ಕಯ್ಯಲ್ಲಿ ತನ್ನ ಕುತ್ತಿಗೆಗೆ ತಾಲಿಯೆಂಬ ಉರುಳನ್ನು ಬಿಗಿಯಿತೆಂದೇ ಅವಳು ಭಾವಿಸಿದ್ದಳು. ಯಾರಾದರೂ ಸುಬ್ಬರಾಯಿಯ ವಿಚಾರವಾಗಿ ಅವಳೊಡನೆ ಪ್ರಸ್ತಾಪಿಸುವಾಗ ನಿನ್ನ 'ಗಂಡ' ಎಂದರೆ ಅವಳಿಗೆ ಸಹಿಸಲಾಗದ ಹಿಂಸೆಯಾಗುತ್ತಿತ್ತು. ಅದನ್ನರಿತೊ ಏನೊ ನರಸಮ್ಮ ಒಂದಲ್ಲ ಒಂದು ನೆಪ ತೆಗೆದು "ನಿನ್ನ ಗಂಡನ್ನ ಕರಿ–ನಿನ್ನ ಗಂಡನ್ನ ಯೆಲ್ಲೀಗೆ ಕಳಸಿಬುಟ್ಟೇ? ಆ ನಟ್ರಾಜ ನಿನ್ನ ಗಂಡನ ಪಾದ ಉಜ್ಜಾಕು ಯೋಗ್ಯತೆ ಇಲ್ಲ...." ಎಂದೆಲ್ಲ ಚುಚ್ಚಿ, ಚುಚ್ಚಿ ನೋಯಿಸುತ್ತಿದ್ದಳು. ಆಗ ಮಂಗಳೆ ತಡೆಯಲಾಗದೆ ರೋದಿಸಿದರೆ "ಐ, ಗಂಡ ಅಂದರೆ ಹೆಂಗಾದಾತು ನಿಂಗೇ? ತಾಲಿ ಕಟ್ಟಿದಮ್ಯಾಗೆ ಅವ್ನು ಗಂಡನೇಯ. ನೀನು ಹೆಂಡತಿಯೇಯ. ಸುಮ್ಮಕೆ ಅತ್ತರೆ ಅ ಬ್ರಮ್ಮ ಹಾಕಿದ ಗಂಟು ಕಿತ್ತೋದಾತ?" ಎಂದು ನಿರ್ದಾಕ್ಷಿಣ್ಯವಾಗಿ ನುಡಿದು ಮಂಗಳೆ ಮತ್ತಷ್ಟು ಅಳುವಂತೆ ಮಾಡುತ್ತಿದ್ದಳು.

ಆದರೆ ಹೊರಗಿನವರು ಏನಂದರೂ ಮಂಗಳೆ ಈಗೀಗ ಹೇಗೊ ಸಹಿಸ ಬಲ್ಲವಳಾಗಿದ್ದಳು. ಕಟಕು ಮಾತಿನ, ಕಟಕು ನಡತೆಯ ನರಸಮ್ಮನನ್ನ 'ಹೊರಗಿನವಳು' ಎಂದು ಅವಳ ಹೃದಯ ಎಂದೋ ಭಾವಿಸಿಬಿಟ್ಟಿತ್ತು. ಆದರೆ ತನ್ನ ತಾಯಿ ತನ್ನ ಸ್ವಭಾವವನ್ನು ಚೆನ್ನಾಗಿ ಬಲ್ಲವಳು. ತನ್ನ ಮತ್ತು ಸುಬ್ಬರಾಯಿಯ ಸಂಬಂಧವನ್ನೆಲ್ಲಾ ಸವಿಸ್ತಾರವಾಗಿ ತಿಳಿದವಳು, ಅವಳೂ ಸಹ 'ನಿನ್ನ ಗಂಡ' ಎಂದು ನುಡಿದುದು ಮಂಗಳೆಗೆ ಅತೀವ ಯಾತನೆಯಾಯಿತು. ಕೂಡಲೆ ಕಣ್ಣಿನಲ್ಲಿ ನೀರು ತುಂಬಿ ಹರಿಯತೊಡಗಿತು.

ಮಗಳ ನಯನಗಳಿಂದ ನೀರುರುಳುವುದನ್ನು ನೋಡಿ ಪಾರ್ವತಮ್ಮನಿಗೆ ದುಃಖವಾಯಿತು. ಸುಬ್ಬರಾಯಿಯ ವಿಚಾರವೆತ್ತಿತೆಂದರೆ ತನ್ನ ಮಗಳು ಕಂಬನಿ ಕರೆಯುವಳೆಂದು ಅವಳಿಗೆ ಗೊತ್ತು. ಆದುದರಿಂದಲೇ ಯಾವಾಗ ಅವಳೊಡನೆ ಸಂಭಾಷಿಸುವಾಗಲೂ ಎಲ್ಲಿ ಕಾಣದೆ ಸುಬ್ಬರಾಯಿಯ ಹೆಸರೆತ್ತಿ ಬಿಡುವೆನೋ ಎಂಬ ಭೀತಿಯಿಂದ ಅತ್ಯಂತ ಜಾಗರೂಕಳಾಗಿರುತ್ತಿದ್ದಳು. ಆದರೆ ಇಂದು ಯಾವುದೊ ಜ್ಞಾನದಲ್ಲಿ ಎಚ್ಚರ ತಪ್ಪಿ ಮಗಳೆದುರಿಗೆ ಯಾವುದನ್ನು ಆಡಬಾರದಾಗಿತ್ತೊ ಅದನ್ನೇ ಆಡಿಬಿಟ್ಟಿದ್ದಳು.

ತನ್ನ ಅಚಾತುರ್ಯವನ್ನು ಸಾವಿರ ಸಲ ಹಳಿದುಕೊಂಡಳು. ಅನಂತರ ಮಗಳನ್ನು ಹೇಗಾದರೂ ಸಮಾಧಾನಪಡಿಸಬೇಕೆಂದು ಬಗೆದು ಅವಳ ಕಣ್ಣೀರನ್ನು ತನ್ನ ಸೆರಗಿನ ಕೊನೆಯಿಂದ ಒರೆಸುತ್ತಾ "ನಾ ಹಂಗಂದದ್ದು ತೆಪ್ಪಾಯ್ತು ನನ್ನ ಕಂದಾ. ನಿಮ್ಮಯ್ಯನ ಜೊತೇಲಿ ಮಾರಾಯಗಿತ್ತಿ ಹಂಗೆ ಓಗಿದ್ದು ಬಾ" ಎಂದು ಮೃದುವಾಗಿ ನುಡಿದಳು.

ತಾಯಿಯ ಅಂತಃಕರಣದಿಂದ ತುಂಬಿಬಂದ ಮಾತುಗಳು ಮಂಗಳೆಯ ತಾಪವನ್ನು ಬಹುಮಟ್ಟಿಗೆ ಶಮನ ಮಾಡಿದವು. ಮತ್ತೆ ನಗುವನ್ನು ಮುಖದ ಮೇಲೆ ತಂದುಕೊಂಡು,

ಇಷ್ಟು ಸಹಾನುಭೂತಿಯುಳ್ಳ ತಾಯಿಯನ್ನು ಪಡೆದ ತಾನೇ ಧನ್ಯಳೆಂದುಕೊಳ್ಳುತ್ತಾ ವಿಷಕಂಠಯ್ಯನೊಡನೆ ಕಾಡಿಗೆ ಹೊರಟಳು.

ದಾರಿಯುದ್ದಕ್ಕೂ ವಿಷಕಂಠಯ್ಯ "ಆ ಕೆಂದಹಸ ಏನಾರ ಕಿರುಬನ ಬಾಯಿಗೆ ಬಿದ್ದಿದ್ದರೆ ಗತಿಯೇನು?" ಎಂಬ ಒಂದೇ ಮಂತ್ರವನ್ನು ಜಪಿಸುತ್ತ ಸಾಗಿದ್ದ. ಆ ಪಶುವಿನ ಗುಣಾತಿಶಯಗಳನ್ನು ಅಡಿಗಡಿಗೆ ನೆನೆಯುತ್ತಾ ಮಂಗಳೆಯೂ ನೆನೆಯುವಂತೆ ಮಾಡಿದ್ದ.

ಅವರಿಬ್ಬರೂ ಓತಿ ಬೆಟ್ಟವನ್ನು ಹತ್ತಿ ಮುತ್ತರಾಯನ ಬೆಟ್ಟದ ಕಡೆಗೆ ಇಳಿಯುತ್ತಿದ್ದರು. ಬೆಳದಿಂಗಳು ತನ್ನ ಬೆಳಕನ್ನು ಎಲ್ಲ ಕಡೆಯೂ ಪಸರಿಸಿತ್ತು. ಆಗ ಮುತ್ತರಾಯನ ಬೆಟ್ಟದ ಬುಡದ ಕಾಡಿನಿಂದ ಕೆಂದ ಹಸುವನ್ನಟ್ಟಿಕೊಂಡು ಬೆಟ್ಟವನ್ನೇರಿ ಬರುತ್ತಿದ್ದ ನಟರಾಜ ಅವರ ದೃಗ್ಗೋಚರನಾದನು. ಅವನನ್ನು ಕಂಡ ಕೂಡಲೆ ಕಳೆದ ಸಂಪತ್ತು ಸಿಕ್ಕಿದವನಂತೆ "ಓ ! ಕೆಂದಹಸ ಸಿಕ್ಕಿ ಬುಡ್ತು ಕೆಂದಹಸ ಸಿಕ್ಕಿ ಬುಡ್ತು" ಎಂದು ವಿಷಕಂಠಯ್ಯ ಆ ಮುದಿ ವಯಸ್ಸಿನಲ್ಲೂ ಚಿಕ್ಕ ಮಕ್ಕಳಂತೆ ಕುಣಿದಾಡಿದ.

ಅವರು ಒಬ್ಬರನ್ನೊಬ್ಬರು ಸಂಧಿಸಲು ಕೆಲಕಾಲ ಹಿಡಿಯಿತು. ನಟರಾಜ ಸಮೀಪಿಸಿದೊಡನೆಯೇ ವಿಷಕಂಠಯ್ಯ ಕುತೂಹಲದಿಂದ ಕೇಳಿದ :

"ಎಲ್ಲಿತ್ತು ಮೊಗಾ?....ಹೆಂಗೆ ಸಿಕ್ಕಿತ್ತು?"

"ಅಯ್ಯೊ, ಅದೊಂದು ದೊಡ್ಡ ಕಥೆ ಭಾವ" ಎಂದು ನಟರಾಜ ನಿಟ್ಟುಸಿರಿನೊಡನೆ ಉದ್ಗಾರ ತೆಗೆದ.

ವಿಷಕಂಠಯ್ಯನ ಕುತೂಹಲ ಮತ್ತೂ ಉಲ್ಬಣಿಸಿತು.

"ಹಂಗಂದರೆ ಯೇನು ಮೊಗಾ?" ಎಂದು ಚಕಿತನಾಗಿ ಕೇಳಿದ.

ನಡೆದ ಸಂಗತಿಯನ್ನೆಲ್ಲ ನಟರಾಜ ಸವಿಸ್ತಾರವಾಗಿ ಹೇಳತೊಡಗಿದ :

"ನೋಡು ಭಾವ, ನಾನೂ ಈ ಹಸು ಹುಡುಕಬೇಕಾದರೆ ತುಂಬ ಶ್ರಮ ಪಟ್ಟೆ. ಓತಿಬೆಟ್ಟ ಮುತ್ತರಾಯನ ಬೆಟ್ಟ ಇವುಗಳ ಸಂದಿ ಸಂದೀಲೂ ಹುಡಕಿ ನೋಡಿದೆ. ಎಲ್ಲೂ ದನ ಕಣ್ಣಿಗೆ ಬೀಳಲೇ ಇಲ್ಲ. ನಾನು 'ಗಂಗೇ-ಗಂಗೇ' ಅಂತ ಇದರ ಹೆಸರು ಹಿಡಿದು ಕೂಗಿದೆ. ಉಪಯೋಗವಾಗಲಿಲ್ಲ_"

"ಅಮ್ಯಾಗೆ ?"

"ಆಮೇಲೆ ಕೆಳಗಿನ ಕಾಡಿನೊಳಗೆಲ್ಲೊ ಹೊರಟು ಹೋಗಿರಬೇಕು ಅಂತ ಮುತ್ತರಾಯನ ಬೆಟ್ಟಕ್ಕೂ ಓತಿ ಬೆಟ್ಟಕ್ಕೂ ಇರುವ ತಗ್ಗಿನ ಪ್ರದೇಶದಲ್ಲಿ ಇಳಿದು ಹೋದೆ. ಆ ಕಾಡು ನೀನು

ನೋಡೇ ಇದ್ದೀಯೆ. ಎಂಥವರಿಗಾದರೂ ರಾತ್ರಿ ಹೊತ್ತಿನಲ್ಲಿ ಎದೆ ಝುಲ್ ಅನ್ನಿಸ್ತದೆ, ಅಲ್ಲಿಗೆ ಹೋದರೆ, ನಾನು ಹೇಗೊ ಧೈರ್ಯಮಾಡಿ ಕೆಳಕಾಡಿನ ಅಂಚಿನಲ್ಲೆಲ್ಲ ಅದನ್ನರಸ್ತಾ ಸುತ್ತಾಡಿದೆ...."

"ಹೂ, ಆಮ್ಯಾಗೆ ?"

"ಹತ್ತಿರದಲ್ಲೆಲ್ಲೂ ದನ ಕಾಣಲಿಲ್ಲ. ಅದು ಕಿರುಬನ ಬಾಯಿಗೆ ಬಿದ್ದಿರೋದೆ ಖಂಡಿತ ಅಂತ ನಿರ್ಧಾರಕ್ಕೆ ಬಂದು ಹಿಂದಿರುಗ್ತಾ ಇದ್ದೆ....."

"ಹೂ?"

"ಆಗ ಮುತ್ತರಾಯನ ಬೆಟ್ಟದ ಉತ್ತರ ಭಾಗದಲ್ಲಿ ಕಾಡಿನ ಒಳಗೆ ಯಾವುದೊ ದನ 'ಅಂಬಾ–ಅಂಬಾ' ಎಂದು ಅರಚಿದ ಸದ್ದು ಕೇಳಿತು...."

"ಇನ್ನೇನು ನಮ್ಮ ಗಂಗೆಯೇ ಇರಬೇಕು...."

"ಕೇಳು ಭಾವ. ನಾನು ಹಾಗೇ ತಿಳಿದುಕೊಂಡೆ. ಕಡೆಗಾದರೂ ಸಿಕ್ಕಿತಲ್ಲ. ಅಂತ ಬಹಳ ಸಂತೋಷ ಆಯಿತು ನನಗೆ ಆಗ. ನಾನು ಆ ದಿಕ್ಕಿನಲ್ಲಿ ಹೆಜ್ಜೆ ಇಡ್ತಾ ಇರೋ ಹಾಗೆ ಇದ್ದಕ್ಕಿದ್ದಂತೆ ಅದು ಜೋರಾಗಿ ಅರಚೋದಕ್ಕೆ ಆರಂಭ ಮಾಡಿತು... ಅದು ಹೇಗೆ ಅರಚುತಾ ಇತ್ತು ಗೊತ್ತಾ ಭಾವ ? ಗುಮ್ಮ ಬಂತು ಅಂತ ಹೆದರಿಸಿದರೆ ಮಕ್ಕಳು ಕಿರಿಚಿಕೊಳೋದಿಲ್ಲವಾ ಭಾವ, ಹಾಗೆ ಒಂದೇ ಸಮನೆ ಕಿರುಚಿಕೊಳ್ತಾ ಇತು..."

"ಅಯ್ಯೋ ಶಿವನೆ !..."

"ನನಗೆ ಏನೊಂದೂ ಅರ್ಥವಾಗಲಿಲ್ಲ. ಆ ಹಸು ಯಾಕೆ ಹಾಗೆ ಅರಚುತಾ ಇದೆ, ಏನು ಸಮಾಚಾರ ಒಂದೂ ನನಗೆ ತಿಳೀಲಿಲ್ಲ. ಆತುರಾತುರವಾಗಿ ಹೆಜ್ಜೆಯಿಡತೊಡಗಿದೆ...."

"ಹೂ....?"

"ನಾನು ಅಷ್ಟು ದೂರ ಹೋದ ಮೇಲೆ ನನಗೆ ತಿಳೀತು ನಮ್ಮ ಗಂಗೆ ಯಾಕೆ ಹಾಗೆ ಕಿರಿಚಿಕೊಳ್ತಾ ಇತ್ತು ಅನ್ನೋದು...ಅದೊಂದೆ ಮೆಳೇಲಿ ಒಂಟಿಯಾಗಿ ನಿಂತುಕೊಂಡಿತ್ತು. ಮುತ್ತುರಾಯನ ಬೆಟ್ಟದ ಮೇಲಿನಿಂದ ನೇರವಾಗಿ ಅದು ಇದ್ದ ಕಡೆಗೇ ಒಂದು ಕಿರುಬ ಸರಸರನೆ ಇಳಿದು ಬರ್‍ತಾ ಇತ್ತು...."

"ಕಿರುಬ! ಆಮ್ಯಾಗೆ?"

"ಆ ಕಿರುಬನ್ನ ನೋಡೇ ಗಂಗೆ ಹಾಗೆ ಕಿರಿಚಿಕೊಳ್ತಾ ಇತ್ತು. ನಾನು ಹೊಗೋದು ಸ್ವಲ್ಪ ತಡ ಆಗಿದ್ದರೆ ಆ ಕಿರುಬ ನಮ್ಮ ಗಂಗೇನಾ ಖಂಡಿತ ಅಲುಬಿಹಾಕಿಬಿಡ್ತಾ ಇತ್ತು.

ಅಷ್ಟರಲ್ಲಿ ನಾನು 'ಅಡ್ಡಡ್ಡೋ' ಅಂತ ಗಟ್ಟಿಯಾಗಿ ಕೂಗಿಕೊಳ್ತಾ ಅಲ್ಲಿಗೆ ಧಾವಿಸಿದೆ. ನನ್ನ ಆರ್ಭಟಕ್ಕೆ ಹೆದರಿದ ಆ ಕಿರುಬ ಸರಕ್ಕನೆ ಕಾಡಿನ ಎಡಭಾಗದ ಗರ್ಭಕ್ಕೆ ಹಾರಿಹೋಯಿತು...."

"ಸದ್ಯಕ್ಕೆ ಹೆಂಗಾರು ಆಗಲಿ ಬುಡು ಮೊಗಾ, ಆ ಮುತ್ತರಾಯಸ್ವಾಮಿ ದಯದಿಂದ ನಮ್ಮ ಹಸ ಆ ಕಿರುಬನ ಬಾಯಿಂದ ಪಾರಾಯ್ತು" ಎಂದು ನಿಟ್ಟುಸಿರಿಟ್ಟುಕೊಂಡ ವಿಷಕಂಠಯ್ಯ "ಹೂ, ಅದಕೂ ನಮಗೂ ಋಣ ಇನ್ನೂ ಹರಿದಿಲ್ಲ ಅಂತ ಕಾಣ್ತದೆ. ಇನ್ನೂ ವಸಿ ಜಿನ ಅದರ ಅಮೃತ ಕುಡಿಯೊ ಯೋಗ ನಮಗಿರೋ ಹಂಗದೆ" ಎಂದು ಹಸನ್ಮುಖಿಯಾದನು.

"ನಾನು ಅದರ ಹತ್ತಿರ ಹೋದಾಗ ಗಂಗೆ ಥರ ಥರ ಅಂತ ನಡಗುತಾ ಇತ್ತು....."

"ಕೆಟ್ಟ ರಂಡೆ ಮಂತೆ ಯಾಕೆ ತಪ್ಪಿಸಿಕೊಬೇಕಾಗಿತ್ತು ಗುಂಪಿನಿಂದಾವಾ?"

ಹೀಗೆ ನಿಷ್ಠುರವಾಗಿ ಮೇಲೆ ಗಂಗೆಯನ್ನು ಹೀನವಾಗಿ ಬಯ್ದರೂ ವಿಷಕಂಠಯ್ಯನ ಅಂತಃಕರಣ ಆ ಹಸುವಿಗೊದಗಿದ್ದ ವಿಪತ್ತಿಗಾಗಿ ತೀರ ಕಳವಳಗೊಂಡಿತ್ತು. ಈಗ ಅದು ಅಂಥ ಗಂಡಾಂತರದಿಂದ ಪಾರಾದುದು ಅವನ ಹೃದಯಕ್ಕೆ ಅತ್ಯಂತ ಆನಂದ ತಂದಿತ್ತು. ಅದನ್ನು ಆದರದಿಂದ ತಟ್ಟಿ ತಾನೇ ಅಟ್ಟಿಕೊಂಡು ಮುಂದೆ ಮುಂದೆ ನಡೆಯುತ್ತಾ– "ಸದ್ಯ ನಿನ್ನಿಂದ ನಮ್ಮ ಹಸ ಉಳೀತು ಮೊಗಾ, ಆ ಕಿರುಬನ ಬಾಯಿನಿಂದ ತಪ್ಸಿಹಾಕಿದೆಲ್ಲ– ಭೇಸ್" ಎಂದು ನಟರಾಜನನ್ನು ಹೃತ್ಪೂರ್ವಕವಾಗಿ, ಕಳಕಳಿಯಿಂದ ಪ್ರಶಂಸಿಸಿದನು.

ನಟರಾಜ, ಮಂಗಳೆಯರಿಬ್ಬರೂ ಸ್ವಲ್ಪ ಹಿಂದಾಗಿ ಬರುತ್ತಿದ್ದರು. ತಂದೆಯ ಮಾತುಗಳನ್ನಾಲಿಸಿದ ಮಂಗಳೆ ಒಡನೆಯೇ ಉದ್ವೇಗದಿಂದ ನಟರಾಜನ ಕೈಹಿಡಿದುಕೊಂಡು ತಂದೆಗೆ ಕೇಳದಂತೆ, "ಆ ಹಸುವನ್ನೇನೋ ಕಿರುಬನ ಬಾಯಿನಿಂದ ತಪ್ಸಿಸಿದೆ. ಆದರೆ ನನ್ನನ್ನು ಈ ಕಿರಾತನ ಬಾಯಿನಿಂದ ಉಳಿಸಿಕೊಳ್ಳೋಕೆ ಮಾತ್ರ ನೀನು ಸಮರ್ಥನಾಗಲಿಲ್ಲ....." ಎಂದು ಹಲುಬಿದಳು.

ಮಂಗಳೆಯ ಮಾತಿಗೆ ಉತ್ತರವಾಗಿ ನಟರಾಜ ಕಣ್ಣೀರು ಸುರಿಸುತ್ತ ನಡೆದನು.

೩೪

"ಓ ! ಕೊತ್ತೇಗಾಲದಿಂದ ಸುಬ್ಬರಾಯಿ ಚಿಕ್ಕಯ್ಯನ ಗಾಡಿ ಬಂದೇಬುಡ್ತು. ನೀನಿನ್ನೂ ಒಂದು ನಾಕು ಜಿನ ಇಲ್ಲೇ ಇರ್ತಾಳೆ ಅಂತ ಅಂದುಕೊಂಡಿದ್ದೆ ಕನ ಮಂಗಳಕ್ಕ....."

ಮುಗ್ಧೆಯಾದ ದುರ್ಗಿ ಮಂಗಳೆ–ನಟರಾಜ ಇಬ್ಬರೂ ಕೊಟ್ಟಿಗೆಯಲ್ಲಿ ಅಳುತ್ತಿದ್ದುದನ್ನು ನೋಡಿಯೂ ಅಸೂಯೆ ಪಡಲಿಲ್ಲ. ಅವಳಿಗೆ ಕಾಣುತ್ತಿದ್ದುದು ಒಂದೇ–ಮಂಗಳೆ ಕೊಟ್ಟಿಗೆಯಲ್ಲಿ ಅತ್ತ ದಿನದಿಂದ ನಟರಾಜ ತನ್ನನ್ನು ಯಾವು ಯಾವುದೋ ನೆಪ ತಗೆದು ನಿಷ್ಕಾರಣವಾಗಿ

ದಂಡಿಸುವುದನ್ನು ನಿಲ್ಲಿಸಿದ್ದ!.... ಮಂಗಳೆ ತನ್ನ ಪರ ವಹಿಸಿ ಏನೋ ಹೇಳಿರಬೇಕೆಂದು ಅವಳ ಭಾವನೆ....ಆ ಕಾರಣದಿಂದಲೇ ಅವಳು ಸುಬ್ಬರಾಯಿ ಗೊಬ್ಬರದ ಗಾಡಿ ಹೊಡೆಸಿಕೊಂಡು ಬಂದಿರುವುದನ್ನು ಕಂಡು 'ಇನ್ನೆಲ್ಲಿ ಮಂಗಳೆ ಹೊರಟುಬಿಡುವಳೊ!' ಎಂಬ ತನ್ನ ಎದೆಯ ಕುದಿಯನ್ನು ಮಂಗಳೆಗೆ ಕಾತರದಿಂದ ವ್ಯಕ್ತಪಡಿಸಿದಳು. ಆದರೆ ಮಂಗಳೆ ಅವಳಿಗಾಗಿ ನಿಲ್ಲುವಂತಿರಲಿಲ್ಲ. ಸುಬ್ಬರಾಯಿ ಅಷ್ಟು ದಿನವಾದರೂ ಅವಳನ್ನಲ್ಲಿ ಬಿಟ್ಟಿದ್ದುದೇ ಹೆಚ್ಚು.

ಮುಂದೆ ಎರಡು ದಿನಗಳಲ್ಲಿ ಮಂಗಳೆ ಸುಬ್ಬರಾಯಿಯೊಡನೆ ಗಾಡಿಯಲ್ಲಿ ಕುಳಿತು ಕೊತ್ತೇಗಾಲಕ್ಕೆ ಹೊರಟಾಗ ಪಾರ್ವತಮ್ಮ "ದೇವರೇ....ಬಿರಬಿರನೆ ನನ್ನ ಮಗಳ ಒಟ್ಟೇಲಿ ನಾಕು ಮಕ್ಕಳಾದಾವಾ?....ಹಂಗೇನಾರ ಅದ್ರೆ ನಮ್ಮ ನರಸಕ್ಕ ಯೇಳಿದ ಹಂಗೆ ನಾನೂ ಒಂದು ಕೊನೇಯ ದತ್ತುಃ ಅಂತ ತಕ್ಕೊಂಡು ನನ್ನ ಹಟ್ಟಿ ಬೆಳಕು ಮಾಡಿಕೊಂಡೇನು" ಎಂದು ಬಯಸಿ, ತನ್ನ ಬಯಕೆ ಜಾಗ್ರತೆ ಸಫಲವಾಗಲೆಂದು ಹರಸಿಕೊಂಡು ನಾಲ್ಕಾಣೆಯ ಬೆಳ್ಳಿಯ ನಾಣ್ಯವನ್ನು ತೊಳೆದು ಅರಿಸಿನದ ಬಟ್ಟೆ ಚೂರಿನಲ್ಲಿ ಅದನ್ನು ಕಟ್ಟಿ ತನ್ನ ಮನೆ ದೇವರಿಗೆ ಮುಡುಪಾಗಿಟ್ಟಳು.

ಗಾಡಿಯಲ್ಲಿ ಸಾಗುತ್ತಿರುವಂತೆ ಮಂಗಳೆ ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ನಟರಾಜ ತನ್ನ ಹೊಟ್ಟೆಯುರಿಯನ್ನು ದುರ್ಗಿಯನ್ನು ಹೊಡೆದಾದರೂ ತೀರಿಸಿಕೊಳ್ಳುತ್ತಿದ್ದ. ಆದರೆ ಮಂಗಳೆ ತನ್ನ ಸಂಕಟದ ಕಿಚ್ಚನ್ನು ಯಾರ ಮೇಲೆ ತೋರಬೇಕು? ಅವಳ ವೇದನೆಯನ್ನವಳು ಯಾವ ರೀತಿಯಲ್ಲಿ ಯಾರೊಡನೆಯೂ ಹೊರಪಡಿಸುವಂತಿಲ್ಲ. ಹೃದಯ ಕೊರೆಯುತ್ತಿದ್ದರೂ ಮೌನವಾಗಿ ಅನುಭವಿಸಬೇಕು. ಈ ಮೂಕ ಸಂಕಟ ಅವಳ ಚಿತ್ತವನ್ನು ಹಿಂಡಿ ತಿನ್ನುತ್ತಿತ್ತು.

* * *

ಕೆಲ ಕಾಲ ಕಳೆದಿತ್ತು. ಒಂದು ಮಧ್ಯಾಹ್ನ ಪಾರ್ವತಮ್ಮನೂ ವಿಷಕಂಠಯ್ಯನೂ ಇನ್ನೂ ಹೊಲದಲ್ಲಿ ಹರಳುಕಾಯಿ ಮುರಿಯುತ್ತಿದ್ದರು. ಅದುವರೆಗೆ ನಟರಾಜ ಎತ್ತುಗಳ ರಾತ್ರೆಮೇವಿಗೆಂದು ಹೊಲದ ಬದುವಿನಲ್ಲಿ ಬಂದಿದ್ದ ಹಸಿ ಹುಲ್ಲನ್ನು ಕೊಯ್ದು ಹೊರೆ ಕಟ್ಟುತ್ತಿದ್ದನು. ಆಗ ಪಾರ್ವತಮ್ಮ ನಟರಾಜನನ್ನು ಉದ್ದೇಶಿಸಿ, "ಇನ್ನೊಂದು ವಸಿ ಹಳ್ಳು ಮುರಿದುಬುಟ್ಟರೆ ಹಳ್ಳನ ಕೆಲಸವೇಯ ಈ ಜಿನಕ್ಕೆ ಮುಗಿದೋಯ್ತದೆ.... ಅದಕ್ಕೊಂದು ಸತ್ತಿ ನಾವೂ ಯಾಕೆ ಹಟ್ಟಿಕ ತಾವಿಕಂಟ ಉಣ್ಣಾಕೆ ಬರೋದು....ನೀನೂ ಉಂಡು.... ಹಂಗೇಯ ನಮಗೂ ಉಣ್ಣಕ್ಕೆ ತಂದುಬಡು.... ಒಂದೇಸಲ ತೀರಿಸಿ ಹೊಂಟೋಗೂನ...." ಎಂದಳು.

"ಹಾಗೇ ಆಗಲಿ" ಎಂದು ನಟರಾಜ ಹೊರೆಯನ್ನು ಹೊತ್ತು ತಂದು ಜಗುಲಿಯ ಮೇಲೆ ಹಾಕುತ್ತಿದ್ದನು.

ಅಷ್ಟರಲ್ಲೇ ದುರ್ಗಿ ಯಾವತ್ತೂ ತೋರದ ಸಡಗರದಿಂದ ಒಂದು ಪೋಸ್ಟ್‌ಕವರನ್ನು ಕಯ್ಯಲ್ಲಿ ಹಿಡಿದು ಹೊರ ಬಾಗಿಲ ಹೊಸಲನ್ನು ದಾಟಿ ಬಂದು : "ನಿಮಗೊಂದು ಕಾಗಜ ಬಂದದೆ....ಮೈಸೂರಿನಿಂದ ಬಂದದೆ ಅಂತ ಯೇಳಿ ಪುಟ್ಟನೇ ಕೊಟ್ಟುಬುಟ್ಟು ಓದ" ಎನ್ನುತ್ತಾ ಅದನ್ನು ನಟರಾಜನ ಕೈಗಿತ್ತಳು.

ನಟರಾಜ ಅದನ್ನು ಆತುರವಾಗಿ ತೆಗೆದುಕೊಂಡು ಒಡೆದು ಓದಿದ. ನಂಜುಂಡಸ್ವಾಮಿ ಅವನಿಗೆ ಕೆಲಸ ಸಿಕ್ಕಿರುವುದಾಗಿಯೂ, ಅವನು ಕೂಡಲೇ ಮೈಸೂರಿಗೆ ಹೊರಟುಬರಬೇಕೆಂದೂ ನಮೂದಿಸಿ ಪತ್ರ ಬರೆದಿದ್ದ. ಪತ್ರವನ್ನೋದಿ ನಟರಾಜ ಆ ಕಷ್ಟದಲ್ಲೂ ಒಂದು ಅಪೂರ್ವ ಸುಖವನ್ನನುಭವಿಸಿದ. ತಾನು ಇನ್ನೊಬ್ಬರ ಮೇಲೆ ಹೊರೆಯಾಗಿ ಬಾಳು ಸಾಗಿಸುತ್ತಿದ್ದುದು ಅವನಿಗೆ ಎಲ್ಲಕ್ಕಿಂತಲೂ ಅನುಭವಿಸಲಾಗದ ವ್ಯಥೆಯಾಗಿತ್ತು. ಈಗ ಅದು ತಪ್ಪಿ ತಾನೇ ಸಂಪಾದನೆಯನ್ನಾದರೂ ಮಾಡುವಂತಾಗುವುದಲ್ಲಾ ಎಂದು ಅವನಿಗೆ ಹಿಗ್ಗು. ಅದರಿಂದಲೇ ಅವನು ವಿಷಕಂಠಯ್ಯನ ದುಡಿಮೆಯಲ್ಲಿ ಆದಷ್ಟು ನೆರವಾಗಲು ಯತ್ನಿಸುತ್ತಿದ್ದ. ತನ್ನ ನೋವನ್ನು ಮರೆತು ಹೊಲ, ಮನೆಗೆಲಸಗಳೆಲ್ಲದರಲ್ಲಿಯೂ ನಿರ್ವಂಚನೆಯಿಂದ ದುಡಿಯುತ್ತಿದ್ದ.

ಈ ಸುದ್ದಿಯನ್ನು ಕೇಳಿ ಪಾರ್ವತಮ್ಮ ತುಂಬ ಹರ್ಷಪಟ್ಟಳು. ವಿಷಕಂಠಯ್ಯನಿಗೆ ಸಂತೋಷವಾದರೂ "ನೀ ಯಿದ್ದದ್ದು ನಂಗೆ ನಾಕು ಭುಜ ಆಗಿತ್ತು ಕನ ಮೊಗಾ....ಈ ಯವಸಾಯದ ಕೆಲಸಕ್ಕೆ ಏಟು ಜನ ಇದ್ದರೂ ಸಾಲದು....ಆದ್ರೂ ಅವರವರ ಸಂಸಾರ ಅವರವರು ನೀಸಿಕಂಡೋಗೋದೆ ಚೆಂದ" ಎಂದ.

* * *

ರೈಲ್ವೆ ಅಂಡರ್‌ಗಾರ್ಡ್ ಕೆಲಸಕ್ಕೆ ಸೇರಿದರೂ ನಟರಾಜ ನಂಜುಂಡಸ್ವಾಮಿಯ ಮನೆಯಲ್ಲೇ ಇದ್ದುಕೊಂಡ. ತನಗೆ ಬರುವ ಇಪ್ಪತ್ತೊಂದು ರೂಪಾಯಿಗಳಲ್ಲಿ ಬೇರೆ ಮನೆ ಮಾಡುವುದಾದರೂ ಹೇಗೆ? ಎಂದು ನೆಪ ಹೇಳುತ್ತಾ ಹೆಂಡತಿಯನ್ನು ಕರೆತರದಿರಲು ಒಂದು ಕಾರಣ ಕಲ್ಪಿಸಿಕೊಂಡ. "ಈಗ ನಾವೆಲ್ಲ ಇಲ್ಲವೇ ಇಲ್ಲವಾ?.....ಬರೋ ಸಂಬಳದಲ್ಲೇ ಹೇಗೋ ಸಂಸಾರ ನೀಸಬೇಕು. ನಿನ್ನ ಹೆಂಡತೀನ ಒಬ್ಬಳನ್ನೇ ಹಳ್ಳೀಲಿ ಎಷ್ಟು ದಿನ ಬಿಟ್ಟಿರೋಕಾಗ್ತದೆ" ಎಂದು ನಂಜುಂಡಸ್ವಾಮಿ ಕೇಳಿದ.

"ಒಬ್ಬಳೇ ಯಾಕಿದ್ದಾಳು ಚಿಕ್ಕಪ್ಪ. ಜೊತೆಗೆ ನಮ್ಮಕ್ಕ, ಭಾವ ಎಲ್ಲ ಇಲ್ಲವೇ?" ಎನ್ನುವನು ನಟರಾಜ.

ಇನ್ನು ಹೆಚ್ಚು ಹೇಳಿದರೆ ತಾನು ಅನ್ನ ಹಾಕಲಾರದ್ದಕ್ಕೆ ಹೀಗೆಲ್ಲ ನುಡಿಯುತ್ತಿರುವನೆಂದು ಎಲ್ಲಿ ಭಾವಿಸುವನೊ, ಎಂದು ಹೆದರಿ ನಂಜುಂಡಸ್ವಾಮಿ ಮುಂದೇನೂ ಮಾತಾಡದೆ ಸುಮ್ಮನಾದ.

ನಟರಾಜನಿಗೆ ರೈಲ್ವೆಯಲ್ಲಿ ಕೆಲಸ ಸಿಕ್ಕಿದ ಸಮಾಚಾರವನ್ನು ಯಾವುದೊ ಕಾರ್ಯಾರ್ಥವಾಗಿ ಕೊತ್ತೇಗಾಲಕ್ಕೆ ಹೋಗಿದ್ದ ಮರಿ ಮಂಗಳೆಗೆ ತಿಳಿಸಿದನು. ಮಂಗಳೆ ಆನಂದದಿಂದ ಒಳಗೆ ಅಡಿಗೆ ಮಾಡುತ್ತಿದ್ದ ಚೆಲುವಮ್ಮನಿಗೆ ಸುದ್ದಿ ಮುಟ್ಟಿಸಿದಳು "ನಮ್ಮ ನಟ್ರಾಜ ಮಾವನಿಗೆ ಕಡೇಗೂ ಕೆಲಸ ಸಿಕ್ಕಿತಂತೆ ಕಣ ಚೆಲುವಕ್ಕ..." ಎಂದು ಹೇಳುವಾಗ ತನ್ನ ನಟರಾಜ ಯಾರಿಗೂ ಕಡಿಮೆಯಿಲ್ಲ ಎಂಬ ಭಾವ ತುಂಬಿತ್ತು. ಕೂಡಲೆ ಬಳಿಯಲ್ಲೇ ಮೊಸರು ಕಡೆಯುತ್ತಿದ್ದ ನರಸಮ್ಮನೊಡನೆ ಚೆಲುವಮ್ಮ ಹೇಳಿದಳು :

"ನೋಡಿದೆಯವ್ವಾ....ನನ್ನ ಅಳಿಯ ಯಾತಕೂ ಜಮಾಕಿಲ್ಲದೋನು, ಕಂಡೋರ ಹಿಟ್ಟಿಗೆ ಕೈಯೊಡ್ಡಿ ಕುಂತವ್ನೆ ಅಂತಿದ್ದೆಯಲ್ಲಾ!"

"ಬುಡು ಬುಡು. ಇನ್ನು ಯೇನಂತೆ!–ರೈಲಿನಲ್ಲಿ ಅವನಿಗೆ ಕೆಲಸ ಸಿಕ್ಕಿದ ಮ್ಯಾಗೆ ಮೈಸೂರು ದೊರೆತನವೇ ಬಂದಂಗಾಯ್ತು ಕನಂತೆ!" ಎಂದು ಪರಿಹಾಸ್ಯ ಮಾಡಿದ ನರಸಮ್ಮ "ಇನ್ನೂ ನಿನ್ನ ಮಗಳ ಕರಕೊಂಡೋಗಿ ಸಂಸಾರ ಹೂಡದಾಗಲ್ಲವಾ ಮಾತು!" ಎಂದು ಕೊಂಕು ನುಡಿದಳು.

"ಕರಕೊಂಡು ಹೋಗದೆ ಏನು ಮಾಡಾನು ಬಿಡು ದೊಡ್ಡವ್ವ...ನಮ್ಮ ಮಾವ ಎಷ್ಟಾದರೂ ವಿದ್ಯಾ ಕಲಿತೋನು. ಎಲ್ಲಿ ಹೋದರೂ ನಾಲಕ್ಕು ಕಾಸು ಸಂಪಾದನೆ ಮಾಡಬಲ್ಲ" ಎಂದು ತನ್ನ ನಟರಾಜನ ವಕಾಲತ್ತು ವಹಿಸಿ ಮಾತನಾಡಿದಳು ಮಂಗಳೆ.

"ಹೂ....ನಿಮ್ಮ ಮಾವ ಸಂಪಾದನೆ ಮಾಡ್ತಾನೆ, ನೆಚ್ಚಿಕೊಂಡಿರು–ಅವನು ಪಟ್ಟಣಕ್ಕೋಗಿ ಇನ್ನೇಟ್ಟೇ ದುಡಿದ್ರೂವೆ ನಮ್ಮ ಸುಬ್ರಾಯಿ ಒಂದು ಜೊತೆ ಎತ್ತು ಸಾಕಿ ಮಾರಿದ ಬೆಲೆ ಬರೋದಿಲ್ಲ.....ನೀ ಯೇನು ನಿಮ್ಮ ಮಾವನ ಆಟೊಂದು ಹೊಗಳಿಕೊಂಡಿ ತಗಿ" ಎಂದು ಮಂಗಳೆಯ ಮುಖ ಮುರಿಯುವಂತೆ ಮಾತನಾಡಿದಳು ನರಸಮ್ಮ.

* * *

ನಟರಾಜನಿಗೆ ಮೈಸೂರಿನಲ್ಲಿ ಅನಂತನ ಜೊತೆ ಸಿಕ್ಕಿದ್ದು ಅವನ ಅಶಾಂತ ಮನಕ್ಕೆ ಬಹುದಿನದಿಂದಲೂ ಕಾಣದ ಒಂದು ನೆಮ್ಮದಿ ತಂದಿತ್ತು. ಅನಂತನನ್ನು ಕೂಡಿ ಕಾಲ ಕಳೆಯುವಾಗ 'ತನಗೆ ಮದುವೆಯಾಗಿದೆ' ಎಂಬ ಕಹಿ ನೆನಪು ಸಹ ಅವನ ಚಿತ್ತದಿಂದ ಸಂಪೂರ್ಣವಾಗಿ ಅಳಿಸಿಹೋಗುತ್ತಿತ್ತು. ಅನಂತ ನಟರಾಜನನ್ನು ಆದಷ್ಟು ಸಂತೋಷದಲ್ಲಿಡಲು ಪ್ರಯತ್ನಿಸುತ್ತಿದ್ದನು. ಅವನನ್ನು ತನ್ನ ಜೊತೆಯಲ್ಲೇ ಹೋಟೆಲು, ಸಿನಿಮಾಗಳಿಗೆ ಕರೆದುಕೊಂಡು ಹೋಗಿ ತೀರ ನೊಂದಿದ್ದ ನಟರಾಜನ ಬಾಳಿಗೆ ತನ್ನ ಅಪರಿಮಿತ ಸ್ನೇಹದ ಅಮೃತ ಸೇವನೆ ಮಾಡಿಸುತ್ತಿದ್ದನು.

ಹೀಗಿರುವಾಗ ಒಂದು ಸಂಜೆ ನಟರಾಜ ತನ್ನ ಕೆಲಸ ಮುಗಿಸಿಕೊಂಡು ಸ್ಟೇಷನ್ನಿನಿಂದ ಮನೆಗೆ ಬಂದನು. ಅವನು ಅನಂತನ ಕೋಣೆಗೆ ಕಾಲಿಡುತ್ತಿರುವಂತೆ ಚಕಿತಗೊಂಡು ಹಾಗೆಯೇ ಸ್ತಂಭೀಭೂತನಾಗಿ ನಿಂತುಬಿಟ್ಟನು–

ಎದುರಿಗೆ ಅನಂತ ಕುಳಿತಿದ್ದಾನೆ, ಅವನ ಕಣ್ಣಿನಿಂದ ನೀರು ಬುಗ್ಗೆಯಾಗಿ ತುಳುಕುತ್ತಿದೆ. ಅವನ ಮುಂದೆ ಅವನು ಅದೇ ಚಿತ್ರಿಸಿ ಮುಗಿದ ವರ್ಣ ತೈಲಚಿತ್ರ ಇದೆ. ಕುಂಚದ ಹಿಂಭಾಗವನ್ನು ಕೆನ್ನೆಗೆ ಊರುಗೊಟ್ಟು ತಾನು ಬರೆದ ಚಿತ್ರವನ್ನೇ ಅಮಿತವಾದ ಏಕಾಗ್ರತೆಯಿಂದ ದಿಟ್ಟಿಸುತ್ತಿದ್ದಾನೆ. ದಿಟ್ಟಿಸಿದಂತೆ ದುಃಖಾಶ್ರು ಧಾರೆಧಾರೆಯಾಗಿ ಅವನ ನಯನಗಳಿಂದ ಉರುಳುತ್ತಿವೆ...

ನಟರಾಜ ದಿಗಿಲುಗೊಂಡ.

"ಯಾಕೋ ಅನಂತು.....ಅಳ್ತೀಯೆ?"

ಅನಂತ ಪ್ರಯಾಸದಿಂದ ಕತ್ತೆತ್ತಿ ನಟರಾಜನಿಗೆ ಉತ್ತರವೀಯುವಷ್ಟರಲ್ಲಿಯೇ ಅವನಿಗೆ ಚಿತ್ರಕಲೆ ಕಲಿಸಿಕೊಟ್ಟ ಶ್ರೀಕಂಠಪ್ಪ ಬಂದರು. ಅವರೂ ಅಳುತ್ತಿರುವ ಅನಂತನನ್ನು ಕಂಡು ಗಾಬರಿಯಾದರು.

"ಯಾಕಪ್ಪ.....ಅಳ್ತಾ ಇದ್ದೀಯೆ?" ಎಂದು ಅವರು ಕೇಳಿದರು.

ಅನಂತ ಬಹಳ ಕಷ್ಟದಿಂದ ಸಮಾಧಾನ ತಂದುಕೊಳ್ಳುತ್ತಾ ಹೇಳಿದ:

"ನೋಡಿ ಗುರುಗಳೆ..ನನ್ನ ಮನಸ್ಸಿನಲ್ಲಿ ಬರ್ತಾ ಇರೋ ಭಾವನೆಗಳನ್ನೆಲ್ಲಾ ಈ ಕುಂಚದಿಂದ ಚಿತ್ರಿಸೋದಕ್ಕೆ ಆಗ್ತಾ ಇಲ್ಲ!_ ಅದಕ್ಕಾಗಿ ಅಳು ಬಂತು."

ಗುರು ಶ್ರೀಕಂಠಪ್ಪ ಅವಾಕ್ಕಾದರು. ಅವರು ಇದೇ ಮಾತನ್ನು ಪ್ರಸಿದ್ಧ ಸಂಗೀತ ವಿದ್ವಾಂಸರಾದ ವೀಣೆ ಸುಬ್ಬಣ್ಣನವರ ಬಾಯಿಂದ ಕೇಳಿದ್ದರು.... ಒಂದು ಸಲ ವೀಣೆ ಸುಬ್ಬಣ್ಣನವರು, ಆ ಕಾಲಕ್ಕೆ ಸಂಗೀತ ಜಗತ್ತಿನಲ್ಲಿ ವೈಣಿಕ ವಿದ್ಯೆಯಲ್ಲಿ ಅದ್ವಿತೀಯರೆನಿಸಿಕೊಂಡಿದ್ದ ವೀಣೆ ಶೇಷಣ್ಣನವರ ಮನೆಗೆ ಹೋಗಿದ್ದರಂತೆ. ಅಲ್ಲಿ ಶೇಷಣ್ಣನವರ ವೀಣಾವಾದನವನ್ನು ಆಲಿಸಬೇಕೆಂಬ ಅಪೇಕ್ಷೆಯಿಂದ ಬಂದಿರುವುದಾಗಿ ಶೇಷಣ್ಣನವರಿಗೆ ತಿಳಿಸಿದರಂತೆ. ಶೇಷಣ್ಣನವರಿಗೆ ಸುಬ್ಬಣ್ಣನನ್ನು ಕಂಡರೆ ತುಂಬ ಪ್ರೇಮ. ಕೂಡಲೆ ಸಂತೋಷದಿಂದ ಒಪ್ಪಿಕೊಂಡು ವೀಣೆಯನ್ನು ನುಡಿಸಲು ಆರಂಭಿಸಿದರಂತೆ. ಕೀರ್ತನೆಯ ಮೇಲೆ ಕೀರ್ತನೆ ವೀಣೆಯಿಂದ ಸುಮಧುರವಾಗಿ ಹೊಮ್ಮಿದಂತೆ ಸುಬ್ಬಣ್ಣ ಮಂತ್ರಮುಗ್ಧರಾಗಿ ಹೋದರು. ಅಂತಹ ವೀಣಾವಾದನವನ್ನವರು ತಮ್ಮ ಇಡೀ ಬಾಳುವೆಯಲ್ಲಿ ಕೇಳಿದ್ದು ಅದೇ ಮೊದಲ

ಬಾರಿ! ಶೇಷಣ್ಣನವರೇ ಹಿಂದೆ ಎಷ್ಟೋ ಬಾರಿ ತಮ್ಮೆದುರು ನುಡಿಸಿದ್ದರೂ ಆ ದಿನದಷ್ಟು ಅದ್ಭುತವಾಗಿ ಅವರೆಂದೂ ನುಡಿಸಿದ್ದಿಲ್ಲ. ಶೇಷಣ್ಣನವರ ದೈವಿಕ ಹಸ್ತದಲ್ಲಿ ಆ ವೀಣೆ ಈಗ ಮಗುವಿನಂತೆ ಮುದ್ದುಮುದ್ದಾಗಿ ಮಾತಾಡುವುದು. ಇನ್ನೊಂದು ಗಳಿಗೆಯಲ್ಲಿ ತನಗೆ ಬೇಕಾದ ವಸ್ತುವನ್ನು ತನ್ನ ರಮಣನಿಂದ ತರಿಸಿಕೊಳ್ಳಲು ನಲಿಯುವ ನಲ್ಲೆಯಂತೆ ಮಧುರವಾಗಿ ಲಲ್ಲೆಗರೆಯುವುದು. ಮಗದೊಮ್ಮೆ ತನ್ನ ಕಂದನಿಗಾಗಿ ಹರಿಯುವ ಮಾತೆಯ ಅನಂತ ಪ್ರೇಮದಂತೆ ಹಠಾತ್ತನೆ ಉಕ್ಕಿ ಉಕ್ಕಿ ಉಲಿಯುವುದು–ಹೀಗೆ ಬಾಳಿನ ಒಲವು, ಚೆಲುವು, ನಲಿವು, ನೋವುಗಳನ್ನೆಲ್ಲಾ ಶೇಷಣ್ಣನವರು ತಮ್ಮ ವೀಣೆಯಲ್ಲಿ ಚಿಮ್ಮಿಸುತ್ತಿದ್ದವರು ಇದ್ದಕ್ಕಿದ್ದಂತೆ ಆ ವೀಣೆಯನ್ನು ಕೆಳಗಿಟ್ಟು ಗಳಗಳನೆ ಕಣ್ಣೀರಿಡಲು ಉಪಕ್ರಮಿಸಿದರು. ಸುಬ್ಬಣ್ಣ ಗಾಬರಿಯಾಗಿ "ಯಾಕೆ ಶೇಷಣ್ಣ?" ಎಂದು ಕೇಳಿದರು. ಆಗ ಶೇಷಣ್ಣ– "ಅಲ್ಲಾ ಕಣೊ ಸುಬ್ಬು.....ನನ್ನ ಹೃದಯದಲ್ಲಿ ಹುಟ್ಟುತಾ ಇರೊ ಭಾವನೆಗಳ್ನೆಲ್ಲಾ ಈ ಹಾಳು ವೀಣೆ ನುಡಿಯೊಲ್ಲ ಅನ್ನುತ್ತಲ್ಲೋ?...." ಎಂದು ಅಳತೊಡಗಿದರು....

ಶೇಷಣ್ಣನವರಂತೆಯೇ ನುಡಿಯುತ್ತಿರುವ ಅನಂತನ ಕಲಾಪ್ರಜ್ಞೆಯನ್ನು ಕಂಡು ಶ್ರೀಕಂಠಪ್ಪ ಬೆರಗಾದರು. ತಮ್ಮ ಶಿಷ್ಯನ ಪ್ರತಿಭೆಗೆ ಹರ್ಷಿಸಿ ಆನಂದಾಶ್ರುಗಳು ಕಣ್ಣುಗಳಿಂದ ಉರುಳುತ್ತಿರಲು "ನಿನ್ನಂಥಾ ಶಿಷ್ಯನನ್ನು ಪಡೆದ ನಾನೇ ಧನ್ಯ !" ಎಂದು ಹಿಗ್ಗಿ "ನಮ್ಮ ಕರ್ಣಾಟಕದ, ನಮ್ಮ ಭಾರತದ ಕಲಾಜ್ಯೋತಿ ನೀನು....ಶೇಷಣ್ಣನವರ ವಿಶಿಷ್ಟ ಪರಂಪರೆಯನ್ನು ಕಾಯುತ್ತಿರುವವರು ನಿಮ್ಮಂಥವರೇ" ಎಂದು ಮನಸಾರೆ ಕೊಂಡಾಡಿದರು.

ಅಷ್ಟರಲ್ಲಿ ರೈಲು ಕೆಲಸ ಮುಗಿಸಿಕೊಂಡು ಅದೇತಾನೆ ಒಳಗೆ ಬಂದ ನಂಜುಂಡಸ್ವಾಮಿಗೆ ಶ್ರೀಕಂಠಪ್ಪನವರು ಆಡಿದ ಪ್ರಶಂಸೆಯ ನುಡಿಗಳು ಕೇಳಿ ಬಂದವು. ಆ ಮಾತುಗಳನ್ನು ಸವಿದಂತೆ ಅವನಿಗೆ ಅತ್ಯಂತ ಸಂತೋಷವಾಯಿತು. "ಎಷ್ಟೇ ಆದರೂ ನಮ್ಮಜ್ಜ ವಾಸಾಚಾರಿಯ ರಕ್ತ" ಎಂದು ಎದೆ ಉಬ್ಬಿಸಿಕೊಂಡು ಹೆಮ್ಮೆಯಿಂದ ಒಳಗೆ ನಡೆದ.

ಶ್ರೀಕಂಠಪ್ಪನವರ ಮಾತಿನಿಂದ ನಟರಾಜನ ಹೃದಯವೂ ಹಿಗ್ಗಿ ಹಿಗ್ಗಿ ನಲಿಯಿತು. ತನ್ನ ಬಂಧು, ತನ್ನ ಗೆಳೆಯ ಅನಂತುವಿಗೆ ಗುರುಗಳಿಂದ ದೊರೆತ ಪ್ರಶಸ್ತಿ ತನಗೇ ಬಂದಂತೆ ಸಂತೋಷಪಟ್ಟ.

೩೫

ಅನಂತನೂ ನಟರಾಜನೂ ಒಂದು ಮಧ್ಯಾಹ್ನ ಊಟಕ್ಕೆ ಕುಳಿತಿದ್ದರು. ಯಶೋದಮ್ಮ ಚಿನ್ನಸ್ವಾಮಿಯ ಮನೆಗೆ ತೆರಳಿದ್ದರಿಂದ ವಿಶಾಲಿಯೇ ಬಡಿಸುತ್ತಿದ್ದಳು, ಇಬ್ಬರಿಗೂ ಅನ್ನ ಬಡಿಸಿ, ತುಪ್ಪವನ್ನು ಹಾಕುವಾಗ ಎರಡು ಚೆಂಚವನ್ನು ತನ್ನ ಗಂಡನಿಗೂ ಒಂದು ಚೆಂಚವನ್ನು ನಟರಾಜನಿಗೂ ಹಾಕಿದಳು. ಅದು ಅನಂತನನ್ನು ಕೆರಳಿಸಿತು.

"ಯಾಕೆ ಹಾಗೆ ಮಾಡ್ತೀಯಾ?" ಎಂದು ಕೇಳಿದ.

"ಏನು ಮಾಡಿದೆ?"

"ನನಗೆ ಎರಡು ಚೆಂಚ ತುಪ್ಪ ಸುರಿದು ನಟ್ರಾಜನಿಗೆ ಮಾತ್ರ ಯಾಕೆ ಒಂದೇ ಚೆಂಚ ತುಪ್ಪ ಬಡಿಸಿದೆ?"

"ಕಂಡ ಕಂಡೋರಿಗೆಲ್ಲ ತುಪ್ಪ ಸುರಿಯೋಕೆ ಇದೇನು ಛತ್ರ ಕೆಟ್ಟು ಹೋಗಲಿಲ್ಲಾ...."

"ಯಾರೆ ಕಂಡಕಂಡೋರು?...ನಟ್ರಾಜ ಕಂಡ ಕಂಡೋನೇನೇ?"

ವಿಶಾಲಿಯಿಂದ ಅದಕ್ಕೆ ಉತ್ತರ ಬರಲಿಲ್ಲ

"ಬಂದು ಅವನಿಗೆ ಇನ್ನೊಂದು ಚೆಂಚ ಬಡಿಸ್ತೀಯೋ ಇಲ್ಲವೇ?...."

"ಇಲ್ಲ. ನಾನಾ ಬಡಿಸೋಲ್ಲ" ವಿಶಾಲಿ ಹಟ ಮಾಡಿದಳು

"ನನ್ನನ್ನು ರೇಗಿಸಬೇಡ ನೋಡು...."

ವಿಶಾಲಿ ಉತ್ತರ ಕೊಡದೆ ತಿರಸ್ಕಾರದಿಂದ ನೆರಿಗೆಯನ್ನು ಚಿಮ್ಮುತ್ತ ಅಡುಗೆ ಕೋಣೆಯೊಳಕ್ಕೆ ಹೊರಟುಹೋದಳು.

ತನ್ನ ಹೆಂಡತಿಯ ಭೇದವನ್ನು ಕಂಡು ಅನಂತನಿಗೆ ವಿಷವೇರುವಂತೆ ರೋಷ ಹತ್ತಿತ್ತು. ಹಾಗೆಯೇ ಊಟ ಮಾಡುತ್ತಿದ್ದ ತಟ್ಟೆಗೆ ಕೈ ತೊಳೆದು, ನಟರಾಜ ಎಷ್ಟೇ ತಡೆದರೂ ಕೇಳದೆ, ರಭಸದಿಂದ ಅಡುಗೆ ಮನೆಯನ್ನು ಹೊಕ್ಕು ಅವಳನ್ನು ಹಿಗ್ಗಾ ಮುಗ್ಗಾ ದಂಡಿಸಿದ. ವಿಶಾಲಿ ಒಂದಕ್ಕೆ ಹತ್ತುಮಾಡಿ ಅಳಲಾರಂಭಿಸಿದಳು.

ವಿಶಾಲಿಯ ಈ ವರ್ತನೆಯಿಂದ ನಟರಾಜನ ಮನಸ್ಸು ರೋಸಿತು. ಅವಳು ಹೀಗಾಡುತ್ತಿದ್ದುದು ಇಂದೇನೂ ಹೊಸದಾಗಿ ಅಲ್ಲ. ನಟರಾಜ ಆ ಮನೆಯಲ್ಲಿ ಇರಲು ಆರಂಭಿಸಿದ ಈಗ್ಯೆದು ತಿಂಗಳಿಂದಲೂ ಅವಳು ಇದೇ ರೀತಿ ಏಕಪ್ರಕಾರವಾಗಿ ವಂಚನೆಮಾಡುತ್ತಾ ಬಂದಿದ್ದಳು. ಅನಂತನೂ ಹಲವಾರು ಬಾರಿ ಬೈದಿದ್ದನು. ಆದರೂ ಅವಳು ತನ್ನ ಆಟವನ್ನು ಬಿಟ್ಟಿರಲಿಲ್ಲ. ಇಂದಂತೂ ಅವಳ ನಡತೆ ನಟರಾಜನನ್ನು ತುಂಬ ಹೀನಾಯಕ್ಕೀಡುಮಾಡಿತ್ತು. ತಾನೇ ಸ್ವತಃ ಸಂಪಾದನೆ ಮಾಡುತ್ತಿರುವಾಗ ಈ ರೀತಿ ಏಕೆ ಮಾತು ಕೇಳಬೇಕೆಂದು ಅವನು ತನ್ನನ್ನು ತಾನೇ ಪ್ರಶ್ನಿಸಿಕೊಂಡ. ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮಂದಿರಿಗೇನೊ ತಾನು ಮನೆಯಲ್ಲಿರುವುದು ಪ್ರಿಯವೇ ಆಗಿತ್ತು. ಆದರೆ ಹಾಗೊಂದು ಪಕ್ಷ ತಾನಿದ್ದು ವಿಶಾಲಿಗೂ ಅನಂತನಿಗೂ ವಾರಕ್ಕಾರು ಬಾರಿ ಹೀಗೆ ಕಲಹಕ್ಕಾರಂಭವಾದರೆ ಅನಂತನಂಥ ಕಲಾವಿದನಿಗೆ ತನ್ನ ಕೆಲಸದಲ್ಲಿ ಅವಶ್ಯಕವಾಗಿ ಬೇಕೇ ಬೇಕಾದ ಶಾಂತಿ

ಎಲ್ಲಿರುತ್ತದೆ? ಎಂದು ಗಾಢವಾಗಿ ಚಿಂತಿಸಿದ.... ಕಡೆಗೆ ಆ ಮನೆಬಿಟ್ಟು ಹೋಗದೆ ನಿರ್ವಾಹವಿಲ್ಲ ಎಂಬ ಸತ್ಯವನ್ನು ಮನಗಂಡು ಹತ್ತಿರದಲ್ಲೇ ಇನ್ನೊಬ್ಬರ ಮನೆಯಲ್ಲಿ ಕೋಣೆಯೊಂದನ್ನು ಬಾಡಿಗೆಗೆ ಗೊತ್ತುಮಾಡಿ ಅಲ್ಲಿಗೆ ಅದೇ ದಿನವೇ ಅನಂತನಿಲ್ಲದ ವೇಳೆ ಸಾಧಿಸಿ, ಹೋರಟುಹೋದ.

ನಟರಾಜ ಹೀಗೆ ಮನೆಬಿಟ್ಟು ಹೋದದ್ದು ವಿಶಾಲಿಗೆ ತೃಪ್ತಿಯನ್ನು ತಂದಿತ್ತು. ಅವಳಿಗೆ ನಟರಾಜನ ಮೇಲೆ ತಿರಸ್ಕೃತ ಸ್ತ್ರೀಗೆ ಸಹಜವಾದ ಸಿಟ್ಟಿತ್ತು. ಹಿಂದೆ, ಅವನು ಓದುತ್ತಿದ್ದಾಗ, ಅವಳು ಬರೆದಿದ್ದ ಪ್ರಣಯ ಪತ್ರಕ್ಕೆ ಅವನು ಉತ್ತರವನ್ನೂ ಸಹ ಕೊಡದೆ ಅದನ್ನು ಅವಳೆದುರಿಗೆ ಅವಳ ಹೃದಯವನ್ನೇ ಹರಿಯುವಂತೆ ಚೂರು ಚೂರಾಗಿ ಹರಿದುಹಾಕಿದ್ದ. ಆ ಎಲ್ಲ ವಿಷ ಸುಪ್ತವಾಗಿದ್ದು ಈಗ ಅವಳನ್ನು ಹೀಗಾಡಿಸಿತ್ತು.

ನಟರಾಜ ಮನೆಬಿಟ್ಟು ಹೋದುದನ್ನು ಕೇಳಿ ಅನಂತನಿಗೆ ಹೇಳಲಾಗದ ಸಂಕಟವಾಯಿತು. ವಿಶಾಲಿಯನ್ನು ಕಡಿದುಹಾಕಿಬಿಡುವಷ್ಟು ರೋಷವುಕ್ಕೇರಿತು. ಆದರೆ ನಂಜುಂಡಸ್ವಾಮಿಗೂ ಯಶೋದಮ್ಮನಿಗೂ ಈ ಸುದ್ದಿ ಖೇದದ ಬದಲು ಸಂತೋಷವನ್ನೇ ಉಂಟುಮಾಡಿತು. ಏಕೆಂದರೆ ಅವರಿಗೆ ನಟರಾಜನ ಭವಿತವ್ಯದ ಕಡೆಗೆ ಗಮನವಿತ್ತು. ಅವನ ಸಂಸಾರವನ್ನು ಹೇಗಾದರೂ ಒಂದುಗೂಡಿಸುವುದು ಅವರಿಬ್ಬರ ಪ್ರಬಲವಾದ ಆಕಾಂಕ್ಷೆಯಾಗಿತ್ತು. ತಮ್ಮ ಮನೆಯಲ್ಲೇ ಇದ್ದರೆ ಅವನು ತನ್ನ ಹೆಂಡತಿಯನ್ನು ಹಾಗೆಯೇ ಹಳ್ಳಿಯಲ್ಲಿ ಕೈಬಿಡಬಹುದೆಂಬ ಸಂದೇಹ ಅವರನ್ನು ಕಾಡಿತು. ಆದರೂ ನಂಜುಂಡಸ್ವಾಮಿ "ಯಾಕೊ ನಟ್ರಾಜ ಹೀಗೆ ಹೇಳದೆ ಕೇಳದೆ ಅವಿವೇಕ ಮಾಡಿಬಿಟ್ಟೆ. ವಿಶಾಲಿ ಹಾಗಾಡಿದ ಮಾತ್ರಕ್ಕೇ ಮನೆಬಿಟ್ಟು ಹೋಗಬೇಕು ಅಂತೇನು?" ಎಂದು ಹೇಳಿ ಅದಕ್ಕೆ ನಟರಾಜನಿಂದ ಯಾವೊಂದು ಉತ್ತರವೂ ಬರದಿರಲು "ಹೋಗಲಿ ಬೇಕಾದ್ರೆ ಆ ರೂಮಿನಲ್ಲೆ ಇದ್ದು ಕೋಳೀವಂತೆ. ಊಟ ಮಾತ್ರ ನಮ್ಮ ಮನೇಗೆ ಬಂದು ಮಾಡು" ಎಂದು ತುಂಬು ಹೃದಯದಿಂದಲೇ ಆಹ್ವಾನಿಸಿದನು. ನಟರಾಜ, ತಾನು ಬಂದು ಮನೆಯ ಶಾಂತಿಯನ್ನು ಕೆಡಿಸಲಿಚ್ಛಿಸುವುದಿಲ್ಲವೆಂದು ಹೇಳಿ ಹೋಟೆಲಿನಿಂದ ಅನ್ನ ತರಿಸಿಕೊಳ್ಳಲು ಆರಂಭಿಸಿದ.

ಒಂದು ವರ್ಷ ಹೀಗೆಯೇ ಉರುಳಿತು.

ಯಶೋದಮ್ಮ-ನಂಜುಂಡಸ್ವಾಮಿ ಇಬ್ಬರೂ ನಟರಾಜನಿಗೆ ಹೋಟಲು ಅಡಿಗೆ ಬೇಸರವಾಗಿ ತನ್ನ ಮಡದಿಯನ್ನು 'ಆಗ ಕರೆಸಿಕೊಳ್ಳುತ್ತಾನೆ-ಈಗ ಕರೆಸಿಕೊಳ್ಳುತ್ತಾನೆ' ಎಂದು ಬಯಕೆಯ ಎಣಿಕೆ ಹಾಕುತ್ತಿದ್ದರು. ಆದರೆ ತಿಂಗಳುಗಳು ಉರುಳಿದರೂ ನಟರಾಜ ಹೊಟೇಲು ಅಡುಗೆಯನ್ನು ಮೈಗೆ ಒಗ್ಗಿಸಿಕೊಂಡು ಹೆಂಡತಿಯ ಯೋಚನೆಯನ್ನೂ ಸಹ ಮಾಡಿದಿದ್ದುದು ಅವರನ್ನು ಕಾತರಗೊಳಿಸಿತು.

೩೬

"ಬೋ ಜಿನದಿಂದ ನಾವೆಲ್ಲ ಇದ್ನೇ ಬಯಸಿಕೊಂಡಿದ್ದೊ–ಯಾವತ್ತೂ ಒಳ್ಳಿ ಜಾತಕ ಪಕ್ಕಿಸಿ ಹಂಗೆ 'ಇವತ್ತು ಆದಾಳಾ?....ನಾಳೀಕಾದಾಳಾ ?' ಅಂತ ಈಗೆರಡು ಎರಡೂವರೆ ವರ್ಷದಿಂದ್ಲೂವೆ ಕಾಯಿಕೊಂಡಿದ್ದೂ....ಯೇನೊ ದೇವರು ಕಣ್ಣುಬುಟ್ಟು ನೋಡಿದ ಕನ ಪಾರತಿ..." ಹರ್ಷಜಲವನ್ನು ಸೆರಗಿನಿಂದ ಒತ್ತಿಕೊಳ್ಳುತ್ತಾ ನುಡಿದಳು ನರಸಮ್ಮ.

ಅದೇ ತಾನೆ ಕೊತ್ತೇಗಾಲಕ್ಕೆ ಬಂದಿದ್ದ ಪಾರ್ವತಮ್ಮ ಮಗಳ ಅಂಗಾಂಗವನ್ನು ಸಂತೋಷದಿಂದ ದೃಷ್ಟಿಸಿ ನೋಡುತ್ತಾ, "ನಾನೂ ಇದ್ನೇ ತ್ರವಿಸಿ ಕೊಂಡಿದ್ದೆ...ನನ್ನ ಮುನಿಯಮ್ಮ ನನ್ನ ಹರಕೇಯ ನೆರವೇರಿಸಿಕೊಟ್ಲು...." ಎಂದು ಕಣ್ಣೀರು ಮಿಡಿದು "ಭಾವ ಬಂದು ಸುದ್ದಿ ಯೇಳಿದಾಗ ನಂಗೆ ನಂಬಕ್ಕೇ ಆಗ್ನಿಲ್ಲ.... ಎಂದಳು.

ಮಂಗಳೆ ಗರ್ಭಿಣಿಯಾಗಿದ್ದುದು ಎಲ್ಲರಿಗೂ ಆನಂದವನ್ನುಂಟುಮಾಡಿತ್ತು. ಆದರೆ ಅವಳಿಗೆ ಮಾತ್ರ ಆ ಬಸಿರು ಒಂದು ಹೊರಲಾರದ ಹೊರೆಯಾಗಿತ್ತು. ತಾನು ಸುಬ್ಬರಾಯಿಗೆ ಗರ್ಭಧಾರಣೆ ಮಾಡಿದ್ದುದು ಅವಳಿಗೆ ಸಹಿಸಲಾರದ ಹಿಂಸೆಯಾಗಿತ್ತು. ತನ್ನ ಆತ್ಮ, ದೇಹಗಳೆರಡನ್ನೂ ಅವಳು ಎಂದೋ ತನ್ನ ಮನದಲ್ಲಿ ನಟರಾಜನಿಗೆ ಅರ್ಪಣೆ ಮಾಡಿದ್ದಳು. ಸುಬ್ಬರಾಯಿಗೆ ಅವಳು ಲೋಕಾಭಿರಾಮವಾಗಿ ವಿವಾಹವಾಗಿದ್ದರೂ ಅವಳು ಆತ್ಮಸಾಕ್ಷಿಯಾಗಿ ತನ್ನೊಳಗೆ ನಟರಾಜನನ್ನು ಎಂದೋ ವರಿಸಿದಳು....ಸತ್ಯವನ್ನು ಹೇಳಬೇಕಾದರೆ ಅವಳು ಇನ್ನೂ ಜೀವ ಉಳಿಸಿಕೊಂಡಿದ್ದುದ್ದು ತನ್ನ ಕಣಕಣವೂ ಪ್ರೀತಿಸುವ ನಟರಾಜನಿಗಾಗಿ!.... ಹೀಗಿರುವಾಗ ಮನಸೊಪ್ಪದ ಬೇರೊಬ್ಬನಿಗೆ ದುರದೃಷ್ಟವಶಾತ್ ದೇಹವನ್ನರ್ಪಿಸಿದುದರ ಜೊತೆಗೆ ಈಗ ಬೇಡದವನ ಪ್ರತಿರೂಪವನ್ನು ತನ್ನ ಶಿಶು ಎಂದು ಕರೆದುಕೊಳ್ಳಲು ಅವಳ ಮನ ಒಡಂಬಡಲಿಲ್ಲ....ಆದರೆ ಕಾರ್ಯ ಮಿಂಚಿದ ಬಳಿಕ ಮಾಡುವುದಾದರೂ ಏನಿದೆ?– ಗರ್ಭಿಣಿಯಾದಂದಿನಿಂದ ಅವಳು ಅನುಭವಿಸಿದ ಸಂಕಟ ಹೇಳತೀರದು!...

ಹೀಗೆ ಇತ್ತ ಮಂಗಳೆ ದುಃಖಪಡುತ್ತಿದ್ದರೆ, ಅತ್ತ ಸುಬ್ಬರಾಯಿಯ ಆನಂದ ಮೇರೆ ಮೀರಿತ್ತು–ಜೀವನವೇ ಹಾಗೆ! ಒಬ್ಬರು ಅಳುವಾಗ ಇನ್ನೊಬ್ಬರು ನಗುತ್ತಿರುತ್ತಾರೆ!..... ಸುಬ್ಬರಾಯಿಗೆ ತಾನೀಗ ತಂದೆಯಾಗುವೆನೆಂದು ಹೆಮ್ಮೆ. ಮೊದಲೇ ಗರ್ವಿಯಾದ ಅವನನ್ನು ಈಗ ಯಾರೂ ಮಾತಾಡಿಸುವಂತೆಯೇ ಇರಲಿಲ್ಲ–ಆದರೆ ಜಂಭದ ಜೊತೆಗೆ ಅವನ ಸ್ವಭಾವದಲ್ಲಿ ಧಾರಾಳ ಬುದ್ಧಿಯೂ ವಿಚಿತ್ರವಾಗಿ ಹೆಣೆಗೆಯಾಗಿತ್ತು. ತನ್ನ ಹೆಂಡತಿ ಗರ್ಭವತಿಯಾಗಿರುವಳೆಂದು ತಿಳಿದ ಮೇಲಂತೂ ದಾನಶೂರನಾದ ಕರ್ಣನೇ ಆಗಿ ಅವನು ಮಾರ್ಪಾಟಾದಂತಿತ್ತು. 'ಹಟ್ಟೀಲಿ ತಿನ್ನಾಕೇನೂ ಇಲ್ಲ ಬುದ್ದೀ' ಎಂದು ಯಾವನಾದರೂ ಜೀತದಾಳು ಬೇಡುವುದೇ ತಡ, ಹಿಂದು ಮುಂದು ವಿಚಾರಿಸದೆ ಅವನು ಕೇಳಿದಷ್ಟು

ರಾಗಿಯನ್ನು ಸುರಿದು ಕಳಿಸುತ್ತಿದ್ದನು. ಮನೆಗೆ ಬೇಕಾಗುವ ಸಾಮಾನನ್ನು ಪ್ರತಿವಾರ ಹುಣಸೂರು ಸಂತೆಯಿಂದ ತರುವಾಗ ಒಂದಕ್ಕೆರಡು ತಂದು ನರಸಮ್ಮನಿಂದ "ಇದೇನಾ ಈ ಪಾಟಿ ಸೂರೆಮಾಡಿ....? ಹಿಡಿತ ಮಿಡಿತ ಅನ್ನೋದೇ ಬ್ಯಾಡವಾ....? ಯೆಲ್ಲೊ ಹೈಲು ಹತ್ತುಬುಟ್ಟದೆ ಮುಕ್ಕನಿಗೆ...ಹೆಂಡತಿ ಬಸರಾದ್ಲು ಅಂತ ಸಂತೇನೆ ತಂದು ಹಟ್ಟೀಗೆ ಕೆಡೀಕೊತ್ತಾ ಅವ್ನಲ್ಲಾ....?" ಎಂದು ಬೈಸಿಕೊಂಡನು. ಅಲ್ಲದೆ ಸಂತೆಯಿಂದ ಬರುವಾಗ ಒಂದು ಮಿಠಾಯಿ ಪೊಟ್ಟಣವನ್ನು ಕಟ್ಟಿಸಿಕೊಂಡು ಬಂದು, ಪ್ರತಿಸಲವೂ ಅವಳು ಬೇಡ, ಬೇಡವೆನ್ನುತ್ತಿದ್ದರೂ ಬಿಡದೆ ಬಲಾತ್ಕಾರವಾಗಿ ಆ ಪೊಟ್ಟಣವನ್ನು ಅವಳ ಕೈಯಲ್ಲಿಡುತ್ತಿದ್ದನು. ಇಷ್ಟಲ್ಲದೆ ಮಗಳ ಬಸಿರನ್ನು ನೋಡಲು ಬಂದಿದ್ದ ಅತ್ತೆ ಕೆಲವು ದಿನಗಳಲ್ಲಿ ಕಲ್ಲಹಳ್ಳಿಗೆ ಹೊರಟು ನಿಂತಾಗ ಯಾರನ್ನೂ ಹೇಳದೆ ಕೇಳದೆ, ಅಂಗಡಿಯವನು ಕೇಳಿದಷ್ಟು ಹಣ ಸುರಿದು ಒಂದು ಪರಮಾಶಿಯಾದ 'ಕೊತ್ತಾಲ ಸೀರೆ'ಯನ್ನು ತಂದು ಅತ್ತೆಗೆ ಉಡಿಸಿದನು. ತನ್ನನ್ನು ಕೇಳದೆ ಸೀರೆಯನ್ನು ಕೊಂಡುದಕ್ಕಾಗಿ ನರಸಮ್ಮ ಕೋಪಗೊಂಡರೂ ತನ್ನ ಓರಗಿತ್ತಿಯ ಮುಂದೆ ಅದನ್ನು ತೋರಲಿಚ್ಚಿಸದೆ, "ಇದ್ಕೆ ಏಟು ಹಣ ಕೊಟ್ಟೆ ಮೊಗಾ ?" ಎಂದು ಸುಬ್ಬರಾಯಿಯನ್ನು ಕೇಳಿದಳು. "ನಲವತ್ತುಮೂರು ರೂಪಾಯಿ ಕೊಟ್ಟೆ."

ಆ ಸೀರೆಗೆ ಅಷ್ಟು ಹಣ ಸುರಿದಿರುವನೆಂದು ಕೇಳಿ ನರಸಮ್ಮ ದಿಗ್ಭ್ರಾಂತಳಾದವಳಂತೆ ಕಣ್ಣುಬಿಡುತ್ತಾ, "ಯೇನು....? ಈ ಸ್ಯಾಲೇಗೆ ನಲವತ್ತು ಮೂರು ರೂಪಾಯಿ ಕೊಟ್ಟೆಯಾ....? ಬದುಕಿದಂಗೇ ಆಯ್ತು...ನಮ್ಮ ಚೆಲುವಿ ಸುತ್ತಿರೊ ಸ್ಯಾಲೆ ನೋಡು ಪಾರತಿ, ಅದೂ ಈ ತೀರನ್‌ದೇಯ. ಹೋದ ಗೌರೀಲಿ ಅದ್ನ ಹುಣಸೂರಿನ ರಾಮಸೆಟ್ಟಿ ಅಂಗಡೀಲಿ ಇಪ್ಪತ್ತೆಂಟೇ ರೂಪಾಯಿಗೆ ಹಾರಿಸಿಕೊಂಡು ಬಂದೆ...." ಎಂದಳು.

ಮಂಗಳೆಯ ಬಸಿರು ಎಲ್ಲರಂತೆ ಚೆಲುವಮ್ಮನ ಹೃದಯವನ್ನೂ ಮುಗ್ಧಗೊಳಿಸಿತು. ಆದರೆ ಚೆಲುವಮ್ಮ ತುಂಬ ಸಂಯಮ ಜೀವಿ. ಅನಿರೀಕ್ಷಿತವಾಗಿ ತನಗೆ ಸುಖ ಪ್ರಾಪ್ತಿಯಾದರೆ ಇತರರಂತೆ ಸಂಯಮ ತಪ್ಪಿ ಕುಣಿದಾಡುತ್ತಿರಲಿಲ್ಲ; ದುಃಖವೊದಗಿದರೂ ಇದೇ ರೀತಿ–ತಾಳ್ಮೆಯಿಂದ ಸಹಿಸಿಕೊಳ್ಳುತ್ತಿದ್ದಳು....ಅವಳ ಸಂತೋಷ ಈಗ ವ್ಯಕ್ತವಾಯಿತೆನ್ನಬಹುದಾದರೆ ಅವಳು ಕೆಲಸ ಮಾಡುವಾಗ ಕಾಣುತ್ತಿದ್ದ ಸ್ವಲ್ಪ ಹೆಚ್ಚೆನ್ನಬಹುದಾದ ಅವಳ ಸಡಗರವೇ ಅದಕ್ಕೆ ಕಾರಣ.

ಪಾರ್ವತಮ್ಮ ಹೊರಡುವಾಗ ನರಸಮ್ಮನನ್ನುದ್ದೇಶಿಸಿ ಪರಿಹಾಸ್ಯ ಮಾಡಿದಳು :

"ನೀ ಯೋಳಿರೋದು ಗೆಪ್ತೀಲಿ ಇರಲಿ ನರಸಕ್ಕಕ್ಕ... ನನ್ನ ಮಗಳ ಹೊಟ್ಟೇಲಿ ಗಂಡು ಏನಾರಾ ಹುಟ್ಟಿದರೆ ಅದ್ನ ನಾನೇ ಕೊಂಡೋಗಿ ಸಾಕೊತ್ತೀನಿ..."

ಅದಕ್ಕೆ ನರಸಮ್ಮನೂ ನಗುತ್ತಾ ಉತ್ತರ ಕೊಟ್ಟಳು :

"ಇನ್ನೂ ಗಂಡು ಹುಟ್ಟಿದ ಮ್ಯಾಗಲ್ಲವಾ...ಆ ಮಾತು."

ಗಾಡಿಯನ್ನು ಹತ್ತುತ್ತಿರುವಂತೆ ಪಾರ್ವತಮ್ಮ ಒಂದೇ ಸಮನೆ ಕಣ್ಣೀರಿಡುವ ಮಂಗಳೆಯನ್ನು ಅಪ್ಪಿಕೊಂಡು ಮುದ್ದಿಸುತ್ತಾ, "ಇದ್ಯಾಕವ್ವಾ...ಹಿಂಗತ್ತೀ....ಹೊಟ್ಟೇಲಿ ಕೂಸು ಬೆಳೀತಾ ಇರೋವಾಗ ನಗ್ತಾ ನುಡೀತಾ ಇರಬೇಕು ಕನವ್ವಾ....ಹಿಂಗೆಲ್ಲ ಅತ್ತು ಸಾಕು ಮಾಡಿಕೋಬ್ಯಾಡದು" ಎಂದು ಸಮಾಧಾನ ಹೇಳುತ್ತಾ; ಪ್ರೀತಿಯಿಂದ ಗಲ್ಲ ಹಿಡಿದು, ಗೋಗರೆಯುವ ದನಿಯಲ್ಲಿ "ನನ್ನಾಣೆ ನೀ ಹಿಂಗೆಲ್ಲ ಆಡಿದರೆ....ಇನ್ನೊಂದೆರಡು ತಿಂಗಳಲ್ಲಿ ಕರೆಸಿಕೊತ್ತೀನಿ....ಅಲ್ಲೀಗಂಟ ಒಸಿ ಚೆಂದಾಗಿ ನೋಡಿಕೊವ್ವಾ.....ನಿಂಗೆ ಚಿಕ್ಕಂದ್ನಿಂದ ಕಾರ ಅಂದರೆ ಬೊ ಪ್ರೇಮ. ಅದ ಒಸಿ ಕಡಿಮೆ ಮಾಡವ್ವಾ....ಆಮ್ಯಾಗೆ ನಿಂಗೆ ಏಟೇ ಅಪೇಕ್ಷೆ ಆದರೂ ಬೆಲ್ಲ, ಪರಂಗಿ ಹಣ್ಣು ಇವ್ನ ಇಸ ಕಂಡಂಗೆ ಕಾಣವ್ವಾ....." ಎಂದೆಲ್ಲ ವಿವೇಕ ಹೇಳಿದಳು.

೩೭

ಆ ಭಾನುವಾರ ಸಂಜೆಗೆ ಕೆಲಸ ತೀರಿದ ನಂತರ ನಟರಾಜ ಸ್ಟೇಷನ್ನಿನಿಂದ ಹಾಗೇ ನಡೆದು ಹೋಟಲಿಗೆ ಹೋಗಿ ಉಂಡು, ಅನಂತನನ್ನೂ, ರೈಲ್ವೆಯಲ್ಲಿ ಇವನಂತೆಯೇ ಕೆಲಸ ಮಾಡುತ್ತಿದ್ದ ಇನ್ನಿಬ್ಬರು ಹೊಸ ಗೆಳೆಯರನ್ನೂ ಕೂಡಿಕೊಂಡು ಕೃಷ್ಣ ಚಿತ್ರಮಂದಿರದಲ್ಲಿ ನಡೆಯುತ್ತಿದ್ದ 'ಬೆನ್‌ಹರ್ (Benhur) ಚಿತ್ರದ ರಾತ್ರಿ ಆಟಕ್ಕೆ ಹೋಗಿದ್ದನು. ಆಟ ಮುಗಿದು ಗೆಳೆಯರೆಲ್ಲ ತಮ್ಮ ತಮ್ಮ ಮನೆಗಳಿಗೆ ತೆರಳಿದ ಮೇಲೆ ನಟರಾಜ ಅನಂತನೊಡನೆ ಇಟ್ಟಿಗೆ ಗೂಡಿನ ದಾರಿ ಹಿಡಿದನು. ಅನಂತನ ಮನೆಗೆ ಹೋಗುವಾಗ ನಟರಾಜನ 'ಮನೆ' ಮೊದಲೇ ಸಿಗುತ್ತಿತ್ತು.

ತನ್ನ ಕೋಣೆ ಸಮೀಪಿಸುತ್ತಿರುವಂತೆ ನಟರಾಜ ಅನಂತನ ತೋಳು ಜಗ್ಗಿಸಿ ನಿಲ್ಲಿಸಿದನು.

"ಅಲ್ಲಿ ನೋಡಿದೆಯಾ ಅನಂತು?" ಎಂದು ಉದ್ವೇಗದಿಂದ ನುಡಿದ.

"ಏನೋ?"

"ಇದೇನು ಕೇಡೋ?–ನನ್ನ ಕೋಣೇಲಿ ದೀಪ ಉರೀತಾ ಇದೆ ನೋಡೋ!" ಎಂದು ತನ್ನ ಕೋಣೆಯೆಡೆಗೆ ಬೆಟ್ಟು ಮಾಡಿ ತೋರಿದ.

ಹೌದು. ಅದರಲ್ಲಿ ಅನುಮಾನವೇ ಇರಲಿಲ್ಲ. ನಟರಾಜನ ಕೋಣೆಯಲ್ಲಿ ದೀಪ ಚೆನ್ನಾಗೇ ಉರಿಯುತ್ತಿತ್ತು.

"ಎಲ್ಲೋ ನೀನೇ ಬೆಳಿಗ್ಗೆ ಸ್ಟೇಷನ್ನಿಗೆ ಹೋಗುವ ಆತುರದಲ್ಲಿ ರಾತ್ರಿ ಹಚ್ಚಿದ ದೀಪಾನ ಆರಿಸದೆ ಹಾಗೇ ಮರೆತುಹೋಗಿಬಿಟ್ಟಿರಬಹುದು...."

"ಅದು ಹೇಗೋ ಸಾಧ್ಯ? ರಾತ್ರಿ ಹಚ್ಚಿದ ದೀಪ, ಮಲಗಿಕೊಳ್ಳೊ ವೇಳೇಲಿ ಕೆಡಿಸಿಬಿಡೋಲ್ಲವೇನೋ? ಇನ್ನು ಬೆಳಗ್ಗೆ ಎಲ್ಲೋ ಇರುತ್ತೆ ಅನಂತೂ ಅದು?"

"ಅದೇನೋ ದಿಟ.....ಹಾಗಾದರೆ ಈ ಪವಾಡ ಹೇಗಯ್ಯಾ ಉತ್ಪನ್ನವಾಯಿತು ?"

"ಅದೆ ನನಗೂ ಸೋಜಿಗವಾಗಿದೆ."

ಅನಂತ ಸ್ವಲ್ಪ ಕಾಲ ಹಾಗೇ ಆಲೋಚಿಸಿದ.

"ಅಲ್ಲಿ ಇನ್ನು ಯಾರು ಬರ್ತಾರಯ್ಯ?–ಆ ಮನೆಯೋರೆ ತೆಗೆದು ಏನೋ ಮಾಡ್ತಾ ಇರಬೇಕು" ಎಂದನು.

ನಟರಾಜನಿಗೆ ಈ ಸೂಚನೆ ಸರಿಯೆಂದೆನಿಸಲಿಲ್ಲ. ಆ ಮನೆಯ ಯಜಮಾನ ಶ್ರೀರಾಮುಲುನಾಯ್ಡು ಗೌರವಸ್ಥ. ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಆತನಿಗೆ ಕೆಲಸವಿತ್ತು. ನೂರು ರೂಪಾಯಿಗಳವರೆಗೂ ಸಂಬಳ ಬರುತ್ತಿತ್ತು. ಆತನ ಕುಟುಂಬ ಚಂದ್ರಮ್ಮ ತುಂಬಾ ಸುಗುಣಿ ಹೆಂಗಸು. ತನ್ನನ್ನು ಅಲ್ಲಿಯ ತನಕ ಸ್ವಂತ ಮಗನಂತೆ ನೋಡಿಕೊಂಡಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳೂ ಮೂವರು ಗಂಡುಮಕ್ಕಳೂ ಅಷ್ಟೇ. ಎಲ್ಲ ಒಳ್ಳೇ ನಡತೆಯ ಜನ !

"ಇಲ್ಲಾ ಕಣೊ ಅನಂತೂ...ಅವರೆಂದಿಗೂ ಅಂಥ ಕೆಲಸಕ್ಕೆ ಹೋಗೋದಿಲ್ಲ."

"ಹೇಗಯ್ಯ ಹೇಳೋಣ?" ಅನಂತನಿಗೆ ಇನ್ನೂ ಆ ಮನೆಯವರ ಮೇಲೇ ಗುಮಾನಿ.

"ಅವರೇ ಅಷ್ಟು ಅನುಕೂಲಸ್ಥರು. ನನ್ನ ಹರಕು ಷರಟು, ಕೋಟು ತಗೊಂಡು ಏನು ಮಾಡಿಕೊಳ್ತಾರಯ್ಯ–ಅವರು?....ಬರೋದು ಎರಡು ಕಾಸೂ ಹೋಟೆಲಿಗೆ ಹೋಗ್ತದೆ. ಅಲ್ಲೇನಯ್ಯ ಇದೆ?"

"ನಂಗೊಂದೂ ಅರ್ಥವಾಗೋದಿಲ್ಲಪ್ಪಾ" ಎಂದು ಅನಂತನೂ ಮುಂದೆ ಹೇಳಲೂ ತೋರದೆ ಸುಮ್ಮನಾದ.

ಆ ಮನೆಯ ಮುಂದಿನ ಕಲ್ಲು ಮೆಟ್ಟಲುಗಳನ್ನು ಅವರಿಬ್ಬರೂ ಏರುತ್ತಿರುವಂತೆ ಒಳಗಿನ ಹಜಾರದಲ್ಲೂ ಕೂಡ ಇನ್ನೂ ದೀಪ ಉರಿಯುತ್ತಿದ್ದುದು ಅವರ ದೃಷ್ಟಿಗೆ ಬಿದ್ದು ಅವರನ್ನು ಮತ್ತಷ್ಟು ಚಕಿತಗೊಳಿಸಿತು.

ನಟರಾಜ ತನ್ನ ಕೋಣೆಯ ಮುಂದೆ ನಿಂತು "ಯಾರು ಒಳಗೆ" ಎಂದು ಕೂಗಿದ.

ಯಾರೂ ಉತ್ತರಿಸಲಿಲ್ಲ. ಒಳಗಿನಿಂದ ಬಳೆಗಳ ಸದ್ದು ಮಾತ್ರ ಕೇಳಿ ಬಂದಿತು.

ಕೋಪ ಬಂದು ಗಟ್ಟಿಯಾಗಿ ಬಾಗಿಲು ತಟ್ಟಿದ ನಟರಾಜ.

ಒಳಗಿನ ತಾಪಾಳು ಹಾಕದಿದ್ದುದರಿಂದ ಕದ ಕಿರ್, ಕಿರ್ ಎನ್ನುತ್ತಾ ಕೊಂಚ ಓರೆಯಾಯಿತು.

ನಟರಾಜ ಅದನ್ನು ದಢಾರನೆ ಹಿಂದೆ ತಳ್ಳಿ ಒಳಗೆ ಪ್ರವೇಶಿಸಿದ.

ಆದರೆ ಅವನು ಒಳಗೆ ಕಾಲಿಟ್ಟೊಡನೆಯೇ ಸಾವಿರ ಅದೃಶ್ಯ ಹಸ್ತಗಳು ಅವನನ್ನು ಹಿಂದೆ ದಬ್ಬಿದ ಅನುಭವವಾಯಿತು–

ದುರ್ಗಿ!... ಇಲ್ಲಿ !!...ಮತ್ತೆ ಈ ಪ್ರಾರಬ್ಧ !!.....

ತನ್ನೆದುರಿಗೇ ಮೂಲೆಗೆ ಮುದುರಿ ಕುಳಿತ ದುರ್ಗಿಯನ್ನು ಕಂಡು ಅವನ ಹೃದಯದ ಒಂದು ಬಡಿತವೇ ನಿಂತಂತಾಯಿತು. ಮನೆಯೊಳಗೆ ಚೇಳು ಬಂದಿತೆಂದು ಹುಡುಕುವಾಗ ಹಠಾತ್ತನೆ ಸರ್ಪದರ್ಶನವಾದವನಂತೆ ಭಯಭ್ರಾಂತನಾದ.

"ಇದು ಸತ್ಯವಿರಲಾರದು.....ಇದೆಲ್ಲ ನನ್ನ ಮನಸ್ಸಿನ ಭ್ರಮೆಯಿರಬೇಕು" ಎಂದು ಹೆದರಿ ಹಿಮ್ಮೆಟ್ಟುತ್ತಿರುವಂತೆ ದುರ್ಗಿ ಮೆಲ್ಲನೆ ಹೆದರುತ್ತ ಹೆದರುತ್ತ ಒದರಿದಳು :

"ನಂಜುಂಡ ಮಾವ...ಊರಿಗೆ ಬಂದು....ನನ್ನನ್ನು ಕರಕೊಂಡು ಬಂದರು. ಇಲ್ಲೀಗೆ....ಈ ಮದ್ದಿನ್ನ..."

ನಟರಾಜನ ಒಂಟಿ ಜೀವನವನ್ನ ಹೇಗಾದರೂ ಮಾಡಿ ಕೊನೆಗಾಣಿಸಬೇಕೆಂದು ನಂಜುಂಡಸ್ವಾಮಿ ಮತ್ತು ಯಶೋದಮ್ಮ ಯೋಚಿಸಿದ್ದರು.

"ಹಾಗೆಲ್ಲ ಬಿಟ್ಟರೆ ಆಗೋದಿಲ್ಲಾಂದ್ರೆ...." ಎಂದಿದ್ದಳು ಯಶೋದಮ್ಮ.

"ಏನು ಮಾಡಬೇಕೂಂತೀಯೆ?"

"ಹೇಗಾದರೂ ಮಾಡಿ ಆ ಗಂಡ ಹೆಂಡತೀರ್ನ ಒಟ್ಟು ಸೇರಿಸಬೇಕು."

"ಹೇಗೆ ಸಾಧ್ಯವೇ ಅದು ಯಶೋದ?" ಎಂದು ನಂಜುಂಡಸ್ವಾಮಿ ಪ್ರಶ್ನಿಸಿದ್ದ.

"ಸಾಧ್ಯ. ಇಲ್ಲಿ ಕೇಳಿ. ನೀವು ನಾಳೇನೋ ನಾಡಿದ್ದೊ ಕಲ್ಲಹಳ್ಳಿಗೆ ಹೋಗಿ ದುರ್ಗೀನ ಕರಕೊಂಡು ಬಂದು ನಟರಾಜನ ಕೋಣೆಗೆ ಸೇರಿಸಿಬಿಡಿ. ಆಮೇಲೆ ಎಲ್ಲ ಸರಿಹೋಗ್ತದಂತೆ" ಎಂದು ಸಲಹೆ ಮಾಡಿದ್ದಳು.

ಯಶೋದಮ್ಮನ ಈ ಸಲಹೆಯ ಮೇರೆಗೆ ನಂಜುಂಡಸ್ವಾಮಿ ಕಲ್ಲಹಳ್ಳಿಗೆ ತೆರಳಿ ದುರ್ಗಿಯನ್ನು ಕರೆದುಕೊಂಡು ಬಂದಿದ್ದ. ಆ ದಿನ ನಟರಾಜ ರೈಲ್ವೆ ಸ್ಟೇಷನ್ನಿಗೆ ಕೆಲಸಕ್ಕೆ ಹೋಗಿದ್ದ ಸಮಯ ಸಾಧಿಸಿ, ಕೋಣೆಯ ಬೀಗದ ಕೀಲಿಯ ಕೈಯನ್ನು ಮನೆಯವರಿಂದ ಪಡೆದು–ನಟರಾಜ ಯಾವಾಗಲೂ ತಾನು ಕೆಲಸಕ್ಕೆ ಹೋಗುವಾಗ ಕೋಣೆಯ ಕೀಲಿ

ಕೈಯ್ಯನ್ನು ಮನೆಯವರ ವಶಕ್ಕೆ ಕೊಟ್ಟು ಹೋಗುತ್ತಿದ್ದ-ದುರ್ಗಿಯನ್ನು ಕೋಣೆಯಲ್ಲಿ ಬಿಟ್ಟು ಹೋಗಿದ್ದ ....

ನಟರಾಜನಿಗೆ ಸಕಲವೂ ವೇದ್ಯವಾಯಿತು. ನಂಜುಂಡಸ್ವಾಮಿ ಹೀಗೆ ದುರ್ಗಿಯನ್ನು ಕರೆದು ತಂದುಬಿಡುವನೆಂದು ಅವನು ಕನಸಿನಲ್ಲಿಯೂ ಸಹ ಎಣಿಸಿರಲಿಲ್ಲ. ತನಗೆ ಬೇಡದ ದುರ್ಗಿಯನ್ನು ಹೀಗೇಕೆ ಕರೆದುತಂದನೆಂದು ಅವನಿಗೆ ಬಹಳ ರೇಗಿತು. ಆ ಗಳಿಗೆಗೆ ಜೀವನವೇ ಬೇಸರವಾದಂತಾಗಿ ಎಲ್ಲಿಗಾದರೂ ಹೊರಟುಹೋಗಬೇಕೆಂದೆನಿಸಿ, ಅನಂತ ಎಷ್ಟು ತಡೆದರೂ ಲಕ್ಷಿಸದೆ ಮುಂದಿನ ಬೀದಿಯನ್ನು ಸೇರಿದನು.

ಆದರೆ ಅನಂತ ಅಷ್ಟಕ್ಕೇ ಬಿಡಲಿಲ್ಲ. ನಟರಾಜನನ್ನು ಬೀದಿಯಲ್ಲಿ ಅಡ್ಡ ಹಾಕಿ ಹುಚ್ಚನಂತೆ ಹೋಗಕೂಡದೆಂದು ಬೇಡಿಕೊಂಡನು ....

"ನೋಡು ಆ ಮನೆಯೋರು ಇನ್ನೂ ಎಚ್ಚರವಾಗಿದಾರೆ. ನೀನು ಹೀಗೆ ಹೊರಟು ಹೋದರೆ ಅವರೆಲ್ಲ ಏನೆಂದುಕೊಳ್ಳುತ್ತಾರೆ?" ಎಂದು ಎಚ್ಚರಿಸಿ, "ನೀನು ಹೀಗೆ ಮಾಡಿದರೆ ನಮ್ಮ ತಂದೆತಾಯಿಗಳು ತುಂಬ ಕೊರಗಿಹೋಗ್ತಾರೆ. ಚೆನ್ನಾಗಿ ಯೋಚನೆಮಾಡು. ಅವರು ನಿನ್ನನ್ನೂ ತಮ್ಮ ಮಗನ ಹಾಗೇ ಸಾಕಿದಾರೆ ...."

"ಅವರು ಸಾಕಿದಾರೆ ಅಂತ ನನ್ನ ಪ್ರಾಣ ಕಳೆದುಕೊಂಡುಬಿಡಬೇಕಾ?" ಎಂದು ನಟರಾಜ ಹೊರಡಲುಜ್ಜುಗಿಸಿದನು.

"ಬೇಡ. ಹೋಗಬೇಡ .... ಆ ಹುಡುಗಿ ನಿನಗೇನು ಮಾಡಿದೆ? – ಅಷ್ಟು ಇಷ್ಟ ಇಲ್ಲದೆ ಇದ್ದೋನು ಎಲ್ಲರೂ ವಿವಾಹ ಮಾಡ್ತೀನಿ ಅಂದಾಗಲೇ ನಿಷ್ಠುರವಾಗಿ ನಿರಾಕರಿಸಬೇಕಾಗಿತ್ತು .... ಅದು ಬಿಟ್ಟು ಹೀಗಾಡಿ ಒಂದು ಹೆಣ್ಣಿನ ಭವಿಷ್ಯಾನೇ ಹಾಳುಮಾಡಬೇಕೂಂತಿಯಾ?...."

ಅನಂತ ಬಿರುಸಿನಿಂದಲೇ ಮಾತನಾಡುತ್ತಿದ್ದನು, ನಟರಾಜ ದುರ್ಗಿಯನ್ನು ನಡೆಸಿಕೊಳ್ಳುತ್ತಿದ್ದ ರೀತಿ ಎಂದೂ ಅವನ ಒಪ್ಪಿಗೆ ಪಡೆದಿರಲಿಲ್ಲ. ಅವನ ಮತ್ತು ಮಂಗಳೆಯಲ್ಲಿ ಪರಸ್ಪರವಾಗಿ ಬೆಳೆದಿದ್ದ ಪ್ರೇಮವನ್ನು ಆತ ಮೊದಲಿನಿಂದಲೂ ಬಲ್ಲ. ಆದರೆ ವಿಧಿಯ ಸಂಕಲ್ಪ ಈ ರೀತಿಯದ್ದು, ನಟರಾಜನ ಬಾಳಿನ ಮಡಿಲಿಗೆ ದುರ್ಗಿಯಂಥ ಮುಗ್ಧ ಹೆಣ್ಣನ್ನು ಆ ವಿಧಿ ತಂದು ಒಗೆದಾಗ, ಅವಳನ್ನು ಸರಿಯಾಗಿ ನೋಡಿಕೊಳ್ಳುವುದು ನಟರಾಜನ ಆದ್ಯ ಕರ್ತವ್ಯ ಎಂದು ಅವನು ಬಗೆದಿದ್ದ.

ಅನಂತ ಈ ರೀತಿ ಮಾತನಾಡುವನೆಂದು ನಟರಾಜ ತಿಳಿದಿರಲಿಲ್ಲ. ಅನಂತನಿಗೆ ಉತ್ತರ ಕೊಡಲು ಚೈತನ್ಯವಿಲ್ಲದೆ ಅವನ ನಾಲಗೆ ಮೌನವಾಗಬೇಕಾಯಿತು. ಅನಂತನ ಮಾತಿನಲ್ಲಿ ಕ್ರೂರ ಸತ್ಯ ಇರುವುದನ್ನು ನಟರಾಜ ಗಮನಿಸದಿರುವುದು ಸಾಧ್ಯವಿರಲಿಲ್ಲ.

ಅನಂತ ತನ್ನ ವಾದ ಸರಣಿಯನ್ನು ಮುಂದುವರಿಸಿದ :

"ನೀನು ಅವಳನ್ನು ಬಿಟ್ಟುಹೋಗೋದು ಅಷ್ಟು ಸುಲಭವಲ್ಲ ನಟರಾಜ !.... ಯಾವತ್ತು ಅಗ್ನಿಸಾಕ್ಷಿಯಾಗಿ ಅವಳ ಕುತ್ತಿಗೆಗೆ ತಾಳಿ ಕಟ್ಟಿದೆಯೋ ಅವತ್ತೇ ಅವಳ್ನ ಸಂರಕ್ಷಿಸೋ ಭಾರಾನೂ ನಿನ್ನ ಕುತ್ತಿಗೇಗೆ ಬಿಗಿದು ಕಟ್ಟಿಕೊಂಡೆ, ಅಂತ ತಿಳಿ...ನೀನೇನೊ ಗಂಡಸು. ಏನಾದರೂ ಮಾಡ್ತೀಯೆ. ಅವಳು ಯಾರ ಹತ್ತಿರ ಹೋಗಬೇಕು?.... ಗಂಡ ಬಿಟ್ಟ ಹುಡುಗೀನಾ ತವರು ಕೂಡ 'ಹತ್ತಿರ ಸುಳೀಬೇಡ, ನಡಿ ಆಚೆ' ಅಂತ ಅಟ್ಟಿಬಿಡುತ್ತೆ...."

ಅನಂತನ ಮಾತುಗಳು ನಟರಾಜನ ಆಂತರ್ಯವನ್ನು ಮುಟ್ಟಿ ಅವನಿಗೆ ದಿಕ್ಕೇ ತೋಚದಂತೆ ಮಾಡಿದುವು. ದುರ್ಗಿಯ ವಿಷಯದಲ್ಲಿ ಅವನ ಎದೆಯಲ್ಲಿ ಕರುಣೆ ಹುಟ್ಟಿತೆಂದಲ್ಲ--ತಾನು ಸಿಕ್ಕಿರುವ ಗೋಜಲಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ, ಎಂಬ ಸತ್ಯವನ್ನು ಅನಂತನ ಮಾತುಗಳು ಮನದಟ್ಟು ಮಾಡುತ್ತಿದ್ದವು. ಆದ್ದರಿಂದ ಅವನು ತಬ್ಬಿಬ್ಬಾದ.

"ನೀ ಏನೇ ಅನ್ನು ನಟ್ರಾಜ .... ಆ ವಿಶಾಲಿಗಿಂತ ದುರ್ಗಿ ಸಾವಿರ ಪಾಲು ವಾಸಿ. ನನಗೆ ಅಂಥ ಒಳ್ಳೇ ಹುಡುಗಿ ಹೆಂಡತಿಯಾಗಿ ಸಿಕ್ಕಿದ್ದರೆ ಇನ್ನೂ ಎಷ್ಟು ಸರಾಗವಾಗಿ ಚಿತ್ರಗಳನ್ನು ಬರೀತಿದ್ದೆನೊ.... ನಾನು ಅಂಥಾವಳ ನಡತೆ ಸಹಿಸಿಕೊಂಡಿರಬಹುದಂತೆ, ಇಂಥ ಒಳ್ಳೆ ಹುಡುಗೀನ ನೀನು ಬಳೆಸಲಾರೆಯಾ?.... ಏನೂ ತಿಳೀದ್ದು ಹಳ್ಳಿ ಹುಡುಗಿ ಒಂದು ತಪ್ಪೇ ಮಾಡಿತು ಅಂತ ಇಟ್ಟುಕೊ. ಅದನ್ನ ಸಹಿಸಿಕೊಂಡು ಹೋಗಬೇಕಪ್ಪಾ...ಅದೇ ಜೀವನ."

ನಟರಾಜ ಏನೊಂದು ಪ್ರತ್ಯುತ್ತರ ಕೊಡಲಿಲ್ಲ. ಅವನ ಕಣ್ಣಿನಿಂದ ನೀರು ತಡೆಯಿಲ್ಲದೆ ಸುಮ್ಮನೆ ಸುರಿಯುತ್ತಿತ್ತು. ಅನಂತ ಹೇಳುವುದಲ್ಲ ಸರಿಯೆ, ಆದರೆ ಈ ಪ್ರಾರಬ್ಧದೊಡನೆ ಹೇಗೆ ಕಾಲ ನೂಕಲಿ?--ಎಂದು ಅವನ ಎದೆ ಒಳಗೊಳಗೇ ಕುದಿಯುತ್ತಿತ್ತು.

ನಟರಾಜ ಮೆತ್ತಗಾದುದನ್ನು ಕಂಡು 'ಇದೇ ಒಳ್ಳೆ ಸಮಯ, ಇನ್ನು ಹೀಗೇ ಬಿಟ್ಟರೆ ಅನರ್ಥವಾಗುವುದರಲ್ಲಿ ಸಂಶಯವಿಲ್ಲ' ಎಂದು ಬಗೆದ ಅನಂತ ಅವನ ಕೈ ಹಿಡಿದುಕೊಂಡು, "ನೀನು ಸುಮ್ಮನೆ ನನ್ನ ಜೊತೆ ಬಾ. ಎಲ್ಲ ಸರಿ ಹೋಗುತ್ತೆ" ಎಂದು ಅವನನ್ನು ಮೆಲ್ಲನೆ ನಡೆಸಿಕೊಂಡು ಒಳಗೆ ಕರೆದು ತಂದು ಕೋಣೆಗೆ ಸೇರಿಸಿದ. ನಟರಾಜ ನಿರುಪಾಯನಾಗಿ ತಲೆಯನ್ನು ಕಯ್ಯಲ್ಲಿ ಹೊತ್ತು ಕುಳಿತುಬಿಟ್ಟ.

೩೮

ಈಗ ಮಂಗಳೆ ನಾಲ್ಕು ತಿಂಗಳ ಬಸುರಿ. ಸುಬ್ಬರಾಯ ಅವಳನ್ನು ಒಂದು ತಿಂಗಳ ಹಿಂದೆಯೇ ತನ್ನ ಸ್ವಂತ ಮನೆಗೆ ಕರೆದುಕೊಂಡು ಬಂದಿದ್ದನು. ಅಕ್ಕನ ಮನೆಯಲ್ಲಿ ಬಿಟ್ಟರೆ ಗರ್ಭಿಣಿಯಾದ ತನ್ನ ಹೆಂಡತಿ 'ಆ ಕತ್ತೆ ಚಾಕರಿ'ಯಲ್ಲಿ ಸವೆದು ಸಣ್ಣಾಗುವಳೆಂದು ಅವನ ಕಲ್ಪನೆ ....

"ಬಸರಿ ಹೆಣ್ಣ.... ಈಗಲೆ ನಿನ್ನ ಹಟ್ಟೀಗೆ ಕರಕೊಂಡು ಓಗಿ ನೀ ಯೆಲ್ಲಿ ಪೇಚಾಡಿ ಮೊಗಾ?.... ಅವಳ ಅವ್ವ ಕರೆಸಿಕೊಳ್ಳೋವರ್ಗೆ ನಮ್ಮನ್ಲೇ ಇರಲಿ, ಸುಮ್ಕಿರು" ಎಂದು ನರಸಮ್ಮ ಎಷ್ಟೋ ಬಗೆಯಲ್ಲಿ ಹೇಳಿದರೂ ಅದು ಸುಬ್ಬರಾಯಿಯ ಒರಟು ಬುದ್ಧಿಗೆ ಸಮ್ಮತವಾಗಲಿಲ್ಲ.

ಹೀಗೆ ಸುಬ್ಬರಾಯಿಯ ಮನೆಯನ್ನು ಸೇರಿದ ಬಳಿಕ ಮಂಗಳೆಗೆ 'ಸ್ವತಂತ್ರ'ವಾಗಿ ಉಸಿರಾಡುವಂತಾಯಿತು. ಕಾಳಯ್ಯನ ಮನೆಯಲ್ಲಿ ನರಸಮ್ಮನಾಗಲಿ, ಚೆಲುವಮ್ಮನಾಗಲಿ ಯಾವುದೇ ರೀತಿಯಲ್ಲಿ ಕಿರುಕುಳ ಕೊಡದಿದ್ದರೂ ಅವರೆಲ್ಲರೂ ತನ್ನ ಗರ್ಭದಲ್ಲಿದ್ದ ಪಿಂಡ ಶಿಶುವಾಗಿ ಎಂದು ಜನಿಸುವುದೋ ಎಂಬುದಾಗಿ ಹಂಬಲಿಸುತ್ತಿದ್ದುದು, ತನಗೆ ಬೇಡದ ಶಿಶುವನ್ನು ಅವರೆಲ್ಲ ಆಶಿಸುತ್ತಿದ್ದುದು ಮಂಗಳೆಗೆ ಚಿತ್ರಹಿಂಸೆಯಾಗಿತ್ತು; ಹುಚ್ಚು ಹಿಡಿಸುತ್ತಿತ್ತು.

ಆದರೆ ಹೊಸ ಮನೆಗೆ ಬಂದರೂ ಮಂಗಳೆಗೆ ಆ ಜನಿಸದ ಶಿಶುವಿನ ಕಾಟ ತಪ್ಪಲಿಲ್ಲ. ದಿನಕ್ಕಾರು ಬಾರಿ ಸುಬ್ಬರಾಯ ಒಂದಲ್ಲ ಒಂದು ನೆಪ ಮಾಡಿಕೊಂಡು ಅವಳ ಬಸುರಿನ ನೆನಪು ಮಾಡುವನು .... "ಸ್ವಸ್ತಾಗಿ ಇದ್ದೀಯಾ?" "ಎಚ್ಚಗೆ ಕೆಲಸ ಮಾಡಿ ಸಾಕುಮಾಡಿಕೊಬ್ಯಾಡ, ಹೊಟ್ಟೇಲಿರೋ ನಿನ್ನ ಮೊಗೀಗೆ ತೊಂದರೆ ಆದಾತು".... ಮಂಗಳೆ ಆ ಮಾತು ಕೇಳಿ "ಈ ಹಾಳು ಕಾಟ ಯಾವತ್ತು ತಪ್ಪುದಪ್ಪಾ–" ಎಂದು ಮಮ್ಮಲ ಮರಗುವಳು.

ಹೀಗಿರುವಾಗ, ಒಂದು ದಿನ ಆಗಾಗ ಬರುತ್ತಿದ್ದ ಬಸವಾಚಾರಿ ಮನೆಗೆ ಬಂದ. ಬಂದವನು ಸರಾಗವಾಗಿ ಅಡುಗೆ ಮನೆಗೆ ನುಗ್ಗಿ, ಕಾಯಿ ಚಚ್ಚಿ ತಿನ್ನುತ್ತಾ ಏನೋ ನೆನೆದುಕೊಂಡು, "ಸುಬ್ಬರಾಯಿ ಚಿಕ್ಕಯ್ಯ ಇನ್ನೂ ಮನೇಗೇ ಬರ್ಲಿಲ್ಲವಾ?" ಎಂದು ಕೇಳಿದ.

ತನ್ನನ್ನು ಕೇಳದೆ ಅಡುಗೆ ಮನೆಗೆ ನುಗ್ಗಿ ಕಾಯಿ ತೆಗೆದುಕೊಂಡದ್ದು, ಮಂಗಳೆಗೆ ಕೋಪ ಹತ್ತಿಸಿತು. ಆದ್ದರಿಂದಲೇ ಅವಳು ಅವನಿಗೆ ಉತ್ತರವೀಯದೆ ಮೌನವಾಗಿದ್ದಳು.

ಸೂಕ್ಷ್ಮಗ್ರಾಹಿಯಾದ ಬಸವಾಚಾರಿ ಕೇಳದೆ ಕಾಯಿ ತೆಗೆದುಕೊಂಡದ್ದಕ್ಕೆ ಮಂಗಳೆ ತನ್ನ ಮೇಲೆ ಕುಪಿತಳಾಗಿರುವಳೆಂದು ಗ್ರಹಿಸಿದ.

"ನಿನ್ನ ಕೇಳದೆ ಕಾಯಿ ತಕ್ಕೊಂಡೆ ಅಂತ ಕೋಪವಾಕ್ಕಾ?"

ಮಂಗಳೆ ಹುಬ್ಬುಗಂಟಿಕ್ಕಿದಂತೆಯೇ ಸುಮ್ಮನಿದ್ದಳು.

"ಹೋಗಲಿ ಬುಡು. ಕೇಳದೆ ತಕ್ಕೊಂಡು ನಿನಗ್ಯಾಕೆ ಕೋಪ ಬರಿಸಬೇಕು?... ನೀ ಯೇನು ಕೇಳಿದ್ರೆ ಕೊಡಾಕಿಲ್ಲ ಅಂತೀಯಾ?"

ಹೀಗೆ ಬಸವಾಚಾರಿ ನಗೆಯಾಡಿದರೂ ಮಂಗಳೆಯ ಸಿಟ್ಟು ಇಳಿಯಲಿಲ್ಲ.

"ನಿನ್ನ ದಮ್ಮಯ್ಯ ಅಂತೀನಿ ರೇಗಿಕೋಬ್ಯಾಡ ಕಣಕ್ಕ....ನನ್ನ ಆಣೆ ಇಟ್ಟು ಹೇಳ್ತೀನಿ ಕೇಳು–ಇನ್ನು ಮೇಲೆ ಕೇಳದ ಮಾಡದೆ ಖಂಡಿತ ಕಾಯಿಚೂರು ಗೀಯಿಚೂರು ತಕ್ಕೊಳಾಕಿಲ್ಲ....ಸರಿಯಾ?" ಎಂದು ಬೇಡಿಕೊಳ್ಳುವ ದನಿಯಲ್ಲಿ ಬಸವಾಚಾರಿ ಹೇಳಿದ.

ಮಂಗಳೆಯ ಆ ಸ್ಥಿತಿಯಲ್ಲಿಯೂ ಬಸವಾಚಾರಿಯ ಆಟವನ್ನು ನೋಡಿ ನಗು ಬಂದಿತು :

"ನಿನ್ನ ಮಾತು ನಂಬಿಕೊ. ಸತ್ಯ ಪ್ರಮಾಣ ಸರಾಗವಾಗಿ ಮಾಡಿಬಿಡ್ತೀಯೆ... ಆದರೆ ಈ ಗಳಿಗೇಲಿ ಹೇಳಿದ್ದು ಇನ್ನೊಂದು ಗಳಿಗೇಗೆ ಇಲ್ಲ" ಎಂದು ನಗುತ್ತಲೆ ಮಂಗಳೆ ನುಡಿದಳು.

"ಹು, ಹೋಗಲಿ...." ಎಂದು ಮಾತು ತೇಲಿಸಿ "ಸುಬ್ಬರಾಯಿ ಚಿಕ್ಕಯ್ಯ ಬರ್ಲಿಲ್ಲವಾ ಇನ್ನೂವೆ?" ಎಂದು ಬಸವಾಚಾರಿ ಪ್ರಶ್ನಿಸಿದ.

"ಇಲ್ಲ."

"ಒಳ್ಳೆ ಸುಬ್ಬರಾಯ ಚಿಕ್ಕಯ್ಯ...." ಎಂದು ಮುಂದೇನೂ ಹೇಳದೆ ನಗುವುದಕ್ಕೆ ಆರಂಭಿಸಿದ.

"ಅದೇನು ಮುಂದಕ್ಕೆ ಹೇಳು" ಎಂದು ಮಂಗಳೆ ಹುಬ್ಬುಗಂಟಿಕ್ಕಿ ಕೇಳಿದಳು.

"ಅಯ್ಯೊ, ಈವೊತ್ತು ಒಳ್ಳೆ ತಮಾಸಿ ಆಗೋಯ್ತು ಮಂಗಳಕ್ಕ...." ಎಂದು ಕಾಯಿಚೂರನ್ನು ಕರಟದಿಂದ ಕಡಿದು ತಿನ್ನುತ್ತಾ "ಸುಬ್ಬರಾಯಿ ಚಿಕ್ಕಯ್ಯ ತೋಟದಲ್ಲಿ ಆಳುಗಳನ್ನು ಸೇರಿಸಿಕಂಡು ಕೆಲಸ ಮಾಡ್ತಿದ್ದ....ಆಗ ನಾನು ಅಲ್ಲಿಗೆ ಹೋದೆ. ಚಿಕ್ಕಯ್ಯನ ಮುಖ ನೋಡಿ ನಂಗೆ ಯಾಕೊ ನಗು ಬಂತು ಽ..." ಎಂದು ಅವನು ಹೇಳುತ್ತಿರುವಂತೆಯೇ ಮಂಗಳೆ ಕೋಪಿಸಿಕೊಂಡು "ಸಾಕು. ನೀ ಹೇಳೋದ್ನೆಲ್ಲ ನೀನೆ ಇಟ್ಕೊಂಡು ನಡೀ ಆಚೆಗೆ" ಎಂದಳು.

"ಕೋಪಿಸ್ಕೊಬೇಡ ಕೇಳಕ್ಕ...ಚಿಕ್ಕಯ್ಯನ ಮುಖ ನೋಡಿದ್ರೆ ಯಾವಾಗಲೂ ಅವನ ಗೇಲಿ ಮಾಡೊ ಹಂಗೆ ಆಯ್ತಾ ಇರ್ತದೆ ನಂಗೆ....! ಈವತ್ತು ಏನಾಯ್ತು ಅಂತಿಯೆ....? ನಾನು ಅವನ ಹತ್ತಿರ ಹೋಗಿ 'ಚಿಕ್ಕಯ್ಯ, ಚಿಕ್ಕಯ್ಯ' ಅಂದೆ. 'ಏನು?' ಅಂದ. 'ನಿಂಗೆ ಹುಟ್ಟೊ ಮೊಗ ಹೆಣ್ಣೊ? ಗಂಡೊ?' ಎಂದೆ. 'ಅದ್ಯಾರಿಗೆಲ್ಲಾ ಅಪ್ಪಯ್ಯ ಗೊತ್ತಾಗ್ತದೆ' ಅಂದ. 'ಇನ್ಯಾಕೊ ಇಲ್ಲಾ ಕಣ ಚಿಕ್ಕಯ್ಯ, ನಿಂಗೆ ಗಂಡುಮೊಗ ಹುಟ್ಟಿದರೇನೊ ಸಮ. ಒಂದು ಪಕ್ಕಸ ಹೆಣ್ಣೇನರ ಹುಟ್ಟಿಗಿಟ್ಟಿದರೆ ಅದು ನಿನ್ನ ರೂಪ ಹೋಲದೇ ಇರಲಿ ಅಂತ

ದೇವರಿಗೆ ಪ್ರಾರ್ಥಿಸಿಕೊತ್ತೀನಿ....' ಅಂದೆ. ಆಳುಗಳೂ ಕದ್ದೂ ಕಾಣದಂಗೆ ನಕ್ಕೊಂಡರು. ಚಿಕ್ಕಯ್ಯ ನನ್ನ ಹೊಡೆಯಕ್ಕೆ ಅಟ್ಟಿಸಿಕೊಂಡು ಬಂದ. ನಾನು ಅವನ ಕೈಗೆ ಸಿಕ್ಕದೆ ತಪ್ಪಿಸಿ ಓಡಿಬಂದು ಬುಟ್ಟೆ...." ಎಂದು ಸವಿವರವಾಗಿ ಹೇಳಿ ಘಕಘಕನೆ ನಗುತ್ತ ಕುಳಿತ ಬಸವಾಚಾರಿ.

ಮಂಗಳೆಗೆ ಬೇಡದ ವಿಚಾರವನ್ನೇ ಬಸವಾಚಾರಿ ತಿಳಿಯದೇ ಮಾತಾಡಿದ್ದ. ಪೆಟ್ಟು ತಗುಲಿದ ಕಾಲಿಗೇ ಪೆಟ್ಟು ತಾಗುವಂತೆ ಬಸವಾಚಾರಿಯೂ ಯಾವುದೋ ಮಾತನಾಡುತ್ತಾ ಕಡೆಗೆ ಆ 'ಮಗು'ವಿನ ಸುದ್ದಿಯನ್ನೇ ಆಡಿ ಅವಳ ಮನದ ಗಾಯವನ್ನು ಕೆದಕಿ ಮತ್ತಷ್ಟು ಗಾಯ ಮಾಡಿದ್ದ.

ಅದೇ ರಾತ್ರಿ ಮಂಗಳೆ ಹಾಲಿಗೆ ಹೆಪ್ಪು ಹಾಕಿದ ಮಡಕೆಯನ್ನು ನೆಲುವಿನ ಮೇಲಿಟ್ಟು ಒಂದು ಚಾಪೆಯ ಮೇಲೆ ಉರುಳಿಕೊಂಡಿದ್ದಳು. ಆಗ ಹೊರಗೆ ಜೀತದಾಳುಗಳಿಗೆ "ನಾಳೆ ಸಂತೆಗೆ ಈಳೇದೆಲೆನೂ ತೆಂಗಿನ ಕಾಯ್ನೂವೆ ತಕ್ಕೊಂಡು ಓಗಾನೆ–ಹೊನ್ನ, ಮಾದ ನೀವಿಬ್ರೂವೆ–ನಾಳೀಕೆ ಹೊತ್ತು ಹುಟ್ಟಕ್ಕೆ ಮುಂಚೆ ಬಂದುಬುಡಿ" ಎಂದು ಅನುಜ್ಞೆ ಮಾಡಿ ಬೀದಿಯ ಬಾಗಿಲಿನ ಅಗಣಿಯನ್ನು ಹಾಕಿ ನಡುಮನೆಗೆ ಬರುತ್ತಿದ್ದ ತನ್ನ ಗಂಡನ ಹೆಜ್ಜೆಯ ಸಪ್ಪಳವನ್ನಾಲಿಸಿ ಮಂಗಳೆ ಉದ್ವಿಗ್ನಳಾದಳು...ದಿನವೂ ಇದೇ ಭಯಂಕರ ಸನ್ನಿವೇಶ. ದಿನವೂ ಇದನ್ನವಳು ಬಾಯಿ ಮುಚ್ಚಿ ಸಹಿಸಬೇಕಾಗಿತ್ತು; ಅನುಭವಿಸಬೇಕಾಗಿತ್ತು. ದಿನವೂ ಅವಳು ಸುಬ್ಬರಾಯಿ ತನ್ನ ಮಗ್ಗುಲಿಗೆ ಬಂದ ವೇಳೆಯಲ್ಲಿ ತಾನು ಸತ್ತುಹೋದಂತೆಯೇ ಅಸಹನೀಯ ವೇದನೆಯನ್ನನುಭವಿಸಿದ್ದಳು. ಅದರಿಂದಲೇ ಇಂದು ಅವನು ಬರುತ್ತಿರುವುದನ್ನು ಗಮನಿಸಿ ಜಾಡಿಯನ್ನು (ಕುರಿ ತುಪ್ಪಟದಿಂದ ಹಳ್ಳಿಯಲ್ಲೇ ಕೈಮಗ್ಗದಲ್ಲಿ ತಯಾರಿಸಲ್ಪಟ್ಟ ಕಂಬಳಿ) ಮುಖದ ತುಂಬ ಹೊದೆದು, ಮಗ್ಗುಲಾಗಿ ಮಲಗಿಬಿಟ್ಟಳು.

ನಡುಮನೆಯೊಳಗೆ ಬಂದ ಸುಬ್ಬರಾಯಿ ಮಂಗಳೆಯಾಗಲೇ ಹೊದೆದು ಮಲಗಿರುವುದನ್ನು ನೋಡಿ "ಆಗಲೇ ನಿದ್ದೆ ಬಂದುಬುಡ್ತಾ?" ಎನ್ನುತ್ತಾ ಅವಳ ಪಕ್ಕದಲ್ಲಿ ಒರಟಾಗಿ ಮಲಗಿ, ಮೆಲ್ಲನೆ ಅವಳ ಜಾಡಿಯ ಮುಸುಗು ತೆಗೆದು, ಅವಳ ಮುಖವನ್ನು ತನ್ನೆಡೆಗೆ ಮುಖಕ್ಕೆ ಮುಖ ಸೋಕುವಂತೆ, ಹಿಡಿದುಕೊಂಡ. ಪಕ್ಕದಲ್ಲಿ ಮರದ ಕಂಬದ ಮೇಲೆ ಉರಿಯುತ್ತಿದ್ದ ದೀಪದ ಬೆಳಕು ಸುಬ್ಬರಾಯಿಯ ಮುಖದ ಮೇಲೆ ಪ್ರಖರವಾಗಿ ಬಿದ್ದು ಆ ಮುಖದ ವಿಕಾರವನ್ನು ಅಸಹ್ಯ ಬರುವಂತೆ ಪ್ರದರ್ಶಿಸಿತ್ತು. ಮಂಗಳೆಯ ಆತ್ಮ ತನ್ನ ದುರವಸ್ಥೆಯನ್ನು ನೆನೆದು ನೀರಿನಿಂದ ಬೇರ್ಪಡಿಸಿದ ಮೀನಿನಂತೆ ಮಿಲಮಿಲನೆ ಒದೆದಾಡುತ್ತಿತ್ತು.

ಸುಬ್ಬರಾಯಿ ಅವಳ ಕೆನ್ನೆ ಸವರುತ್ತಾ, "ನಮಗೆ ಗಂಡು ಮೊಗಾ ಆದ್ರೆ... ನಮ್ಮಯ್ಯನ ಹೆಸರ್ನೇ ಇಡೋವಾ?" ಎಂದು ಕೇಳಿದನು.

ಆ ಮಾತು ಕೇಳಿದ ಕೂಡಲೆ ಮಂಗಳೆ ಗಳಗಳನೆ ರೋದಿಸುತ್ತಾ ಹಠಾತ್ತನೆ ಬೇರೊಂದು ಮಗ್ಗುಲಿಗೆ ಹೊರಳಿಕೊಂಡು ಹಾಡಿಯನ್ನು ಮುಖದ ತುಂಬ ಎಳೆದುಕೊಂಡಳು.

ಆ ಗಳಿಗೆಗೆ ಮಂಗಳೆಯ ನಡತೆ ಅರ್ಥವಾಗದೆ ಕಕ್ಕಾವಿಕ್ಕಿಯಾಯಿತು ಸುಬ್ಬರಾಯಿಯ ಮನಸ್ಸು. ಆದರೆ ಸಮಾಧಾನದಿಂದ ಅವನು ಆಲೋಚಿಸಿದಂತೆ 'ನನ್ನ ಹೆಂಡತೀಗೆ ನಿಸ್ಸಕ್ತಿ. ಹೆರಿಗೇಲಿ ಯೇನೊ, ಎಂತೊ? ಅಂತ ಹೆದರಿಕೊಂಡು ಅವ್ಳೇ....ಅದ್ಕೇ ನಾನು ಮೊಗೀನ ಸುದ್ದಿ ಎತ್ತಿದೇಟಿಗೆ ಯೇನೊ, ಎಂತೋ ಅಂತ ಅವಳಿಗೆ ಗಾಬರಿಯಾಗಿ ಅಳು ಬಂದುಬುಡ್ತು' ಎಂದು ಬಗೆದು "ಯಾಕೆ ಈಟು ಬಯಪಡ್ತೀ?.... ದೇವರು ಯೆಲ್ಲ ಒಳ್ಳೇದು ಮಾಡ್ತಾನೆ. ಧೈರ್ಯ ತಕ್ಕೋ-ಸುಸೂತ್ರಾಗಿ ಹೆರಿಗೆ ಆಯ್ತದಂತೆ.... ಈಗೇನಾ ನಿಂಗೆ ಓಟು ಬಯವಾದರೆ ಅತ್ತೆಯೋರ್ನೇ ನಾಕು ಜಿನ ಇಲ್ಲಿಗೆ ಕರೆಸಿಕೊಳೋವಾ...." ಎಂದು ಸಮಾಧಾನ ಪಡಿಸಲೆತ್ನಿಸಿದನು.

ಆದರೆ ಆ ಮಾತುಗಳು ಮಂಗಳೆಗೆ ಸಮಾಧಾನ ತರುವುದರ ಬದಲು ಅವಳ ಎದೆಯನ್ನು ದಹಿಸುತ್ತಿದ್ದ ಬೆಂಕಿಗೆ ತೀವ್ರವಾಗಿ ಗಾಳಿ ಹಾಕಿತ್ತು...

ಮಂಗಳೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು...ತಾನು ಸಾಯುವವರೆಗೂ ಸುಬ್ಬರಾಯಿಯನ್ನು ಗಂಡನಾಗಿ ಸಹಿಸಿಕೊಳ್ಳುವುದೇ ಸಾಕಾಗಿತ್ತವಳಿಗೆ. ಇನ್ನು ಅವನಿಗೆ ಒಂದು ಮಗುವನ್ನು ಹೆರಲು ಅವಳ ಮನಸ್ಸು ಒಡಂಬಡಲಿಲ್ಲ.

೩೯

ದುರ್ಗಿ ತನ್ನ ಕೋಣೆಗೆ ಬಂದ ರಾತ್ರಿ ನಟರಾಜನಿಗೆ ನಿದ್ದೆಯೇ ಬರಲಿಲ್ಲ. ಬೆಳಿಗ್ಗೆ ಏಳುವಾಗಲೂ 'ಈ ಪೀಡೆ ನನ್ನ ಜನ್ಮಕ್ಕೆ ಅಂಟಿದ್ದು' ಎಂದು ಗೊಣಗುತ್ತಲೇ ಇದ್ದ.

ಆದರೆ ಅವನು ಹಾಗೆನ್ನುತ್ತ ಸುಮ್ಮನೆ ಕುಳಿತುಕೊಳ್ಳುವಂತಿರಲಿಲ್ಲ. ದುರ್ಗಿ ರಾತ್ರಿಯೂ ಊಟ ಮಾಡದೆ ಹಸಿದಿದ್ದಳು. ನಟರಾಜ ಅವಳನ್ನಿಷ್ಟಪಡದಿದ್ದರೂ ತನ್ನ ಜೊತೆಗಿದ್ದ ಇನ್ನೊಂದು ಜೀವ ಹಸಿವಿನಿಂದ ಬಳಲುವುದನ್ನು ನೋಡಿ ನೋಡಿ ಸುಮ್ಮನಿರುವಷ್ಟು ನಿಷ್ಕರುಣಿಯಾಗಿರಲಿಲ್ಲ. ಹೋಟೆಲಿನಿಂದ ಏನಾದರೂ ತರುವುದೆಂದು ಮನಸ್ಸು ಮಾಡಿ, ಮುಖ ತೊಳೆದು ಸಿದ್ಧನಾದ. ಅಷ್ಟರಲ್ಲಿ ಉಪ್ಪಿಟ್ಟು, ಕಾಫಿ ತೆಗೆದುಕೊಂಡು ಯಶೋದಮ್ಮನೇ ಬಂದಳು. ನಟರಾಜನ ಕೈಗೀಯುವಾಗ, "ನೀನೆಲ್ಲಿ ಪೇಚಾಡ್ತೀಯೋ ಅಂತ ನಾನೇ ಮಾಡಿಕೊಂಡು ಬಂದೆ" ಎಂದು ನುಡಿದಳು ಯಶೋದಮ್ಮ.

"ಇನ್ನೇನು ಪೇಚಾಡೋ ಹಾಗೆ ಮಾಡಿದ್ದೀರಲ್ಲಾ? ಹೇಳದೆ ಕೇಳದೆ ಕರಕೊಂಡು ಬಂದು ಬಿಟ್ಟುಬಿಟ್ಟಿರಲ್ಲಾ, ಅಡಿಗೆ ಮಾಡೋದೆಲ್ಲಿ...ಇರೋದು ಒಂದು ರೂಮಿನಲ್ಲಿ?.... ಪಾತ್ರೆ ಪದಾರ್ಥ ಎಲ್ಲಿಂದ ತರಲಿ ನಾನು?..."

ನಟರಾಜನಿಗೆ ಹಠಾತ್ತನೆ ಸಂಸಾರ ಹೂಡುವುದು ವಾಸ್ತವವಾಗಿಯೂ ದೊಡ್ಡ ಪೇಚಾಟವೇ ಆಗಿತ್ತು.

ಯಶೋದಮ್ಮ ಇದೆಲ್ಲಕ್ಕೂ ಸಮಾಧಾನ ಹೇಳಿದಳು :

"ಅದಕ್ಕೆಲ್ಲಾ ಮೊನ್ನೆಯೇ ನಾನು ಏರ್ಪಾಡು ಮಾಡಿದೀನಿ. ನಿನ್ನ ಕೋಣೆ ಪಕ್ಕದ ಕೋಣೆನೂ ಬಿಟ್ಟುಕೊಡೋಕೆ ಒಪ್ಪಿಕೊಂಡಿದ್ದಾರೆ ಚಂದ್ರಮ್ಮನೋರು, ಸದ್ಯಕ್ಕೆ ತಮ್ಮ ಹತ್ತಿರ ಇರೋ ಅಗ್ಗಿಷ್ಟಿಕೇನೆ ಕೊಡ್ತೀನಿ ಅಂತಲೂ ಹೇಳಿದಾರೆ ಅವರು. ಅಲ್ಲೇ ಅಡಿಗೇನೂ ಮಾಡಿಕೊಬಹುದು. ನಿಮ್ಮ ಸಂಸಾರಕ್ಕೆ ಒಂದು ತಿಂಗಳವರೆಗೂ ಬೇಕಾಗೊ ಅಕ್ಕಿ, ಬೇಳೆ ಮೊದಲ್ಗೊಂಡು ಸಮಸ್ತ ಸಾಮಾನನ್ನೂ ನಮ್ಮ ಮನೆಯಿಂದಲೇ ಕೊಡುವಂತೆ ಹೇಳಿದಾರೆ ನಿಮ್ಮ ಚಿಕ್ಕಪ್ಪ."

ಬೇಡ ಬೇಡವೆಂದು ತಾನು ಹಟ ಹಿಡಿದಷ್ಟೂ ದುರ್ಗಿಯನ್ನು ತನ್ನ ಬದುಕಿಗೆ ಮತ್ತಷ್ಟು ನಿಕಟವಾಗಿ ಬಿಗಿಯುತ್ತಿರುವ ವಿಧಿ ವಿಲಾಸಕ್ಕೆ ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿಪಡುತ್ತಿದ್ದ ನಟರಾಜ.

ಅದೇ ಸಂಜೆಗೆ ನಟರಾಜ ಅನಂತನನ್ನು ಹುಡುಕಿಕೊಂಡು ಅವನ ಕೋಣೆಗೆ ಹೋದನು.

ನಟರಾಜ ಕೋಣೆಯೊಳಗೆ ಕಾಲಿಟ್ಟಾಗ ಅನಂತ ಅಲ್ಲಿರಲಿಲ್ಲ. ಅವನೆಲ್ಲೊ ಓತ್ತಲಿನಲ್ಲಿದ್ದನು. ನಟರಾಜನೇನೊ ಆ ಕೋಣೆಯನ್ನು ಪ್ರವೇಶಿಸಿ ಬಿಟ್ಟನು. ಆದರೆ ಅಲ್ಲಿಂದ ಮುಂದೆ ಒಂದು ಹೆಜ್ಜೆಯನ್ನಿಡುವುದೂ ಅವನಿಂದಾಗಲಿಲ್ಲ !...

ಎದುರಿನ ಗೋಡೆಗೆ ಒರಗಿಸಿಟ್ಟ ತೈಲಚಿತ್ರ ಅವನ ಗಮನವನ್ನು ಸೆಳೆದಿತ್ತು.

ಒಂದು ಕೋಣೆ ಅದರೊಳಗೆ ದುರ್ಗಿಯ ವಯಸ್ಸಿನ ಹೆಣ್ಣು. ದುರ್ಗಿಯಂತೆಯೇ ರೂಪು. ಎದ್ದು ನಿಲ್ಲುತ್ತಿದ್ದಾಳೆ. ಅವಳ ನೋಟ ಕೋಣೆಯ ಬಾಗಿಲನ್ನು ತೆರೆದು ಒಳಗೆ ಅಡಿಯಿಡುತ್ತಿರುವ ಯುವಕನಲ್ಲಿ ನಾಟಿದೆ. ಅವಳು ಆ ಯುವಕನನ್ನು ನೋಡುತ್ತಿರುವ ರೀತಿಯಲ್ಲಿ ಭೀತಿ ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಮುಂದೇನಾಗುವುದೋ ಎಂಬ ಕಳವಳ ಅವಳ ಮುಖದಗಲ ಹರಡಿದೆ. ಆ ಭಯದ ಜತೆಗೆ ಅವಳು ನಿಂತ ನಿಲುವಿನಲ್ಲಿ, 'ನನಗೆ ನೀನೇ ಗತಿ, ಎಲ್ಲಾದರೂ ನನ್ನ ಕೈ ಬಿಟ್ಟೀಯೆ ದಮ್ಮಯ್ಯ' ಎಂಬ ಭಾವ ಸೂಸುತ್ತಿದೆ. ಆ ಭಾವದ ಬೆನ್ನಿಗೇ 'ಇಲ್ಲ. ನನ್ನ ಕೈ ಬಿಡಲಾರ' ಎಂಬ ಪ್ರಬಲವಾದ ಆಸೆಯೂ ತೀವ್ರವಾಗಿದೆ....

ಈ ಎಲ್ಲ ಹೊಯ್ದಾಟದ ಎಳೆ ಎಳೆಯನ್ನೂ ಅನಂತ ಸೂಕ್ಷ್ಮವಾಗಿ ನೋಡಿದವರ ಮನ ಕರಗುವಂತೆ ಚಿತ್ರಿಸಿ, ಆ ಚಿತ್ರಕ್ಕೆ "ನಿರೀಕ್ಷೆ" ಎಂದು ಹೆಸರಿಟ್ಟಿದ್ದ.

ಆ ಚಿತ್ರವನ್ನೇ ನಿರುಕಿಸಿದಂತೆ ಹಿಂದಿನ ರಾತ್ರಿ ತಾನೂ ಅನಂತನೂ ಸಿನೆಮಾದಿಂದ ಹಿಂದಿರುಗಿ ಕೋಣೆಯ ಕದವನ್ನು ತೆರೆದಾಗ ಕಾಣಿಸಿದ ದುರ್ಗಿಯ ನಿಸ್ಸಹಾಯಕತೆಯ ಚಿತ್ರವೇ ಇದಾಗಿರಬಹುದೇ, ಎಂದು ಊಹಿಸಿದ. ತನ್ನ ಕೋಪದಲ್ಲಿ ಆಗ ದುರ್ಗಿ ಯಾವ ರೀತಿ ಇದ್ದಳು, ಎಂದು ಶಾಂತಿಯಿಂದ ನೋಡುವ ಸಹನೆ ಎಲ್ಲಿ ಬರಬೇಕು?... ಈಗ ಅನಂತ ಬರೆದ ಚಿತ್ರವನ್ನು ನೋಡುತ್ತಲೂ ದುರ್ಗಿಯ ಮನಸ್ಸಿನಲ್ಲಾಗಿರಬಹುದಾದ ವಿಪ್ಲವದ ಕಿಂಚಿತ್ ದರ್ಶನವಾದಂತಾಗಿ ಒಂದು ಭಾರಿ ನಿಟ್ಟುಸಿರು ಅವನಿಗರಿವಿಲ್ಲದೆಯೇ ಹೊರಬಿದ್ದಿತ್ತು.

ಅಷ್ಟರಲ್ಲಿ ಕೋಣೆಯೊಳಗೆ ಬಂದ ಅನಂತ,

"ಬರೀ ನಿರೀಕ್ಷೆಯಲ್ಲೇ ಆ ಬಡ ಹುಡುಗೀನ ಬೇಯಿಸಬೇಡಪ್ಪ" ಎಂದು ನಗೆಯಾಡಿದ.

ಅಂತೂ ಹೇಗೋ ಹೊಂದಿಕೊಂಡು ತನಗೆ ಅಪ್ರಿಯಳಾದವಳನ್ನು ಮಡದಿ ಎಂದು ಒಪ್ಪಿ ಸಂಸಾರ ನೀಸಬೇಕಾಯಿತು ನಟರಾಜ.

* * * * *

ಮಂಗಳೆಗೆ ಈಗ ಒಂದು ಆಲೋಚನೆ-ಹೇಗಾದರೂ ಮಾಡಿ ತನಗೆ ಬೇಡದ ಬಸಿರನ್ನು ಕಳೆದುಕೊಳ್ಳಬೇಕು !... ಈಗೊಂದು ತಿಂಗಳಿನಿಂದಲೂ ಅದಕ್ಕಾಗಿ ಸರ್ವಸಾಹಸ ಮಾಡಿದ್ದಳು. ತನ್ನ ತಾಯಿ ಖಂಡಿತ ತಿನ್ನಬಾರದೆಂದು ನಿಷೇಧಿಸಿದ್ದ ಬೆಲ್ಲ, ಎಳ್ಳು, ಖಾರ, ಪರಂಗಿಹಣ್ಣು, ಶುಂಠಿ ಮೊದಲಾದ ಪದಾರ್ಥಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸೇವಿಸಿದ್ದಳು. ಆದರೆ ಅಷ್ಟೆಲ್ಲ ಮಾಡಿದರೂ ಆ ಹಾಳು ಗರ್ಭ ಅಲ್ಲಾಡದೆ ನಿಂತಿತ್ತು !-

ಏನೂ ತೋಚದೆ, ಒಂದು ಮಧ್ಯಾಹ್ನ ಹಾಗೇ ಚಾಪೆಯಮೇಲೆ ಉರುಳಿಕೊಂಡಿದ್ದಳು. ಇದ್ದಕ್ಕಿದ್ದಂತೆ ತಲೆಯಲ್ಲಿ ಏನೋ ವಿಚಾರ ಹೊಳೆದು ಹಸನ್ಮುಖಿಯಾಗಿ ಎದ್ದು ಕುಳಿತಳು. ಹಿಂದೆ ತಾನು ವಿವಾಹವಾದ ತರುಣದಲ್ಲಿ ಅವಳು ಕೇಳಿದ್ದ ಒಂದು ಸಮಾಚಾರ ನೆನಪಿಗೆ ಬಂದಿತ್ತು. ಕಾಳಯ್ಯನ ಮನೆಯಲ್ಲಿ ಕೊಟ್ಟಿಗೆ ಗುಡಿಸುತ್ತಿದ್ದ ಹೊಲೆಯರ ಚೆನ್ನಿ ಗಂಡ ಸತ್ತ ಬಳಿಕ ಯಾರಿಗೊ ಗರ್ಭಧಾರಣೆ ಮಾಡಿದ್ದಳು. ಆ ಗರ್ಭವನ್ನವಳು ಕಳೆದುಕೊಂಡ ರೀತಿಯನ್ನು ವರ್ಣಿಸುತ್ತಾ ಚೆಲುವಮ್ಮನೊಡನೆ "ಆ ಚೆನ್ನಿ ಇಲ್ಲವೇನಾ ಚೆಲುವೀ... ಅವ್ಳು.... ಈ ಮದ್ದು ಕುಡಿದು ತನ್ನ ಬೊಸಿರ ಕಳಕೊಂಬುಟ್ಟಲಂತೆ ಕನಾ..." ಎಂದಿದ್ದಳು ನರಸಮ್ಮ. ಅದು ಈಗ ನೆನಪಿಗೆ ಬಂದೊಡನೆಯೇ ವಿಳಂಬ ಮಾಡಿದಷ್ಟೂ ಕೇಡೆಂದು ಬಗೆದ ಮಂಗಳೆ, ಕೂಡಲೇ ತೋಟಕ್ಕೆ ನಡೆದು, ಆಳುಗಳು ಊಟಕ್ಕೆ ಹೋಗುವ ಸಮಯ ಸಾಧಿಸಿ ಅಷ್ಟು ಮದ್ದಿನ ಸೊಪ್ಪನ್ನು ತರೆದು ತಂದಳು. ಆಮೇಲೆ ಅದನ್ನು ಒಂದು ಪಾತ್ರೆಗೆ ಹಾಕಿ ಬೇಯಿಸಿ ಯಾರೂ ಕಾಣದಂತೆ ಕುಡಿದೂಬಿಟ್ಟಳು.

ಇದರಿಂದಾದ ಪರಿಣಾಮದಿಂದ ತನ್ನ ತಾಯಿ ನರಸಮ್ಮ, ಸುಬ್ಬರಾಯ ಚೆಲುವಮ್ಮ ಎಲ್ಲರಿಗೂ ವ್ಯಥೆಯಾದರೂ ಮಂಗಳೆಯೊಬ್ಬಳು 'ಗೆದ್ದೆ'ನೆಂದು ಹಿಗ್ಗಿದಳು. ಆದರೆ ಇದರಿಂದ ಅವಳು ತೀರ ನಿಶ್ಶಕ್ತಿ ಹೊಂದಿ ಕಾಯಿಲೆ ಮಲಗಿದಳು. ಅವಳ ಉಪಚಾರಕ್ಕೆ ಕಲ್ಲಹಳ್ಳಿಯಿಂದ ಪಾರ್ವತಮ್ಮನನ್ನೂ ಕರೆಸಬೇಕಾಯಿತು.

೪೦

"ಯಾಕೆ ಯಾವಾಗ ನೋಡಿದರೂ ಯೋಚನೆ ಮಾಡುತ್ತಲೇ ಇರ್ತೀಯಲ್ಲ ದುರ್ಗೀ? ಅವ್ವನ್ನ ನೋಡ್ಬೇಕೂಂತ ಆಸೆಯಾಗಿದ್ದಾತವ್ವಾ?.... ಬಂದು ವರ್ಷ ಆಯ್ತು. ಬೇಕಾದ್ರೆ ನಿನ್ನ ಗಂಡನಿಗೂ ಹೇಳಿ ಕೊತ್ತೇಗಾಲಕ್ಕೆ ಕಳಿಸಿಕೊಡ್ತೀನಿ." ಯಶೋದಮ್ಮ ದುರ್ಗಿಯ ಮಂಡೆಯನ್ನು ನೇವರಿಸುತ್ತ ಹೇಳಿದಳು.

"ಬ್ಯಾಡಿ ಕಣತ್ತೆ. ನಮ್ಮವ್ವ 'ನಿನ್ನ ಗಂಡ ಕಡಿದುಹಾಕಿದ್ರೂ ಅವನ ಹತ್ತಿರಾನೇ ಬಾಳಾಟ ಮಾಡಬೇಕು' ಅಂತ ಹೇಳಿ ಕಳಿಸವ್ಳೆ" ಎಂದಳು.

ಯಶೋದಮ್ಮ ತನ್ನ ಮನಸ್ಸಿನಲ್ಲೇ "ಅಯ್ಯೊ ಈ ಹುಡುಗಿಯಾದ್ರೂ ನನ್ನ ಸೊಸೆ ಆಗಬಾರದಾಗಿತ್ತಾ?– ನಟರಾಜ ಎಷ್ಟು ತಿರಸ್ಕಾರವಾಗಿ ಕಂಡರೂ ಅದೇನು ಪ್ರೀತಿಯಿಂದ ಅವನಿಗಾಗಿ ಕೆಲಸ ಮಾಡ್ತಾಳೆ!– 'ನನ್ನ ಗಂಡನಿಗೆ ನಾನು ಮಾಡೊ ಸಾರು ಚೆಂದಾಗಿರೋದಿಲ್ಲ. ನೀವು ಚೆಂದಾಗಿ ಮಾಡ್ತೀರಿ. ನಂಗೂ ಹೇಳಿಕೊಡಿ ಅತ್ತೇ' ಎಂದು ನನ್ನ ಕಯ್ಯಲ್ಲಿ ಅಡುಗೆಯ ನಾನಾ ವಿಧಾನಗಳನ್ನು ಹೇಳಿಸಿಕೊಂಡು ಕಲಿತು ಅದೆಷ್ಟು ವಿತರಣೆಯಿಂದ ಈಗ ಸಂಸಾರ ನಡೆಸುತ್ತಿದ್ದಾಳೆ ! ಈಗ ಅವಳ ಭಾಷೆಯೂ ಸುಧಾರಿಸಿದೆ. ಅವನಿಗಾಗಿ ತನ್ನ ಗ್ರಾಮ್ಯವನ್ನು ಆದಷ್ಟು ಬಿಟ್ಟು ಮೈಸೂರಿನವರಂತೆ ಸಂಭಾಷಿಸಲು ಯತ್ನಿಸುತ್ತಿದ್ದಾಳೆ. ಹೀಗಲ್ಲವೇ ಇರಬೇಕು ಸಂಸಾರಗಿತ್ತಿಯಾದವಳು?– ಇಂಥವಳನ್ನು ಎಂತಹ ಕಲ್ಲುಮನಸ್ಸಿನ ಗಂಡನೂ ಒಂದಲ್ಲ ಒಂದು ವೇಳೆ ಸಹೃದಯದಿಂದ ಕಾಣಬೇಕಾಗುತ್ತೆ–ಹೀಗಿರುವುದು ಬಿಟ್ಟು ನನ್ನ ಸೊಸೆ ವಿಶಾಲಿ ಗಂಡ ಹೇಳಿದ ಮಾತು ಅಂತ ಲಕ್ಷಿಸದೆ, ಮನೆ ಮನೆ ಅಲೆದುಕೊಂಡು ಒಂದು ಅಡಿಗೆ ಮಾಡೋದನ್ನೂ ಸರಿಯಾಗಿ ಕಲೀದೆ, ನಾಟಕ, ಸಿನಿಮ ಅಂತ ತಿರುಗಿಕೊಂಡು ಕಾಲಹರಣ ಮಾಡ್ತಾಳಲ್ಲಾ, ಏನು ಹೇಳಲಿ...." ಎಂದುಕೊಂಡಳು.

ನಟರಾಜನಿಗೆ ರೈಲ್ವೆ ಕೆಲಸದಲ್ಲಿ ಈಗೀಗ ಬಿಡುವೇ ಸಿಗುತ್ತಿರಲಿಲ್ಲ. ಅಂಡರ್ ಗಾರ್ಡ್ ಕೆಲಸ ಅವನನ್ನು ಮೈಸೂರಿನ ಮೂಲೆ ಮೂಲೆಗೆ ಅಟ್ಟುತ್ತಿತ್ತು.

ಒಂದು ಬಾರಿ ರಾತ್ರಿಯ ಗುಡ್ಸ್ ಟ್ರೇನಿನಲ್ಲಿ ಬೆಂಗಳೂರಿಗೆ ಹೋಗಿದ್ದ ಅವನು ಮತ್ತೆ ಮೈಸೂರಿಗೆ ಹಿಂದಿರುವುದು ಮಧ್ಯಾಹ್ನ ಒಂದು ಗಂಟೆಗಾದ್ದರಿಂದ ಅವನಿಗೆ ಅಲ್ಲಿಯ ತನಕ ವಿರಾಮವಿತ್ತು. ಆ ವಿರಾಮಕಾಲವನ್ನು ಆತ ರೈಲ್ವೆ ನಿಲ್ದಾಣದಲ್ಲಿಯೇ ಕಳೆಯುವುದೆಂದು

ನಿರ್ಧರಿಸಿದ. ರೈಲ್ವೆ ನೌಕರರೆಲ್ಲರೂ ಅಷ್ಟೆ. ಎಷ್ಟೇ ವಿರಾಮವಿದ್ದರೂ ನಿಲ್ದಾಣದಲ್ಲಿಯೇ ಸುತ್ತುತ್ತಿರುತ್ತಾರೆ.

ನಟರಾಜ ಹೀಗೆ ನಿಲ್ದಾಣದಲ್ಲಿ ಓಡಾಡುತ್ತಿರಬೇಕಾದರೆ, ಒಂದು ವಿಶೇಷ ನಡೆಯಿತು. ಬೆಂಗಳೂರಿನಿಂದ ಹಿಂದೂಪುರಕ್ಕೆ ಹೊರಡುವ ಪ್ರಾತಃಕಾಲದ ನಂ. ೬೭ನೇ ಟ್ರೇನು ಹಠಾತ್ತನೆ ನಿಂತು ಹೋಯಿತು. ಲೋಕೋ ಷೆಡ್ಡಿನ ಕೂಲಿಗಳು, ಪಾಯಿಂಟ್ಸ್‌ಮೆನ್‌ಗಳು ಕೆಲಸಮಾಡುವುದನ್ನು ನಿಲ್ಲಿಸಿದರು. ಟ್ರೇನು ಎಂಜಿನ್ನೇ ನಿಲ್ದಾಣಕ್ಕೆ ಬರಲಿಲ್ಲ.

ನಟರಾಜ ಅಚ್ಚರಿಯಿಂದ ಎಲ್ಲವನ್ನೂ ನೋಡಿದ. ರೈಲ್ವೆ ಕಾರ್ಮಿಕರೆಲ್ಲರೂ ತಾವು ಯಾವ ಯಾವ ಸ್ಥಳಗಳಲ್ಲಿರಬೇಕೋ ಆಯಾಯ ಸ್ಥಾನಗಳಲಿದ್ದರು. ಆದರೆ ಕೆಲಸ ಮಾಡಲು ಮಾತ್ರ ನಿರಾಕರಿಸಿದ್ದರು....ಈ ಬಗೆಯ "ಇದ್ದೆಡೆಯೇ ಮುಷ್ಕರ ಮೈಸೂರು (Stay-in-strikle) " ರೈಲ್ವೆ ಇತಿಹಾಸದಲ್ಲಿ ಇದೇ ಮೊದಲು.

ಎರಡನೆಯ ಮಹಾಯುದ್ಧ ಬಿರುಸಿನಿಂದ ಸಾಗಿತ್ತು. ಅದರ ಬಿಸಿ ಎಲ್ಲರಂತೆ ಮೈಸೂರು ರೈಲ್ವೆ ಕಾರ್ಮಿಕರ ಹೊಟ್ಟೆಗೂ ಹೊಡೆದಿತ್ತು. ಹಾಗಿದ್ದೂ ಅವರಿಗೆ ದೊರೆಯುತ್ತಿದ್ದ ತುಟ್ಟಿ ಭತ್ಯ ಕೇವಲ ಎಂಟಾಣೆ ! ಅದೇ ಪಕ್ಕದ ಬ್ರಾಡ್‌ಗೇಜ್ ಎಂ.ಎಸ್.ಎಂ. ರೈಲ್ವೆಯಲ್ಲಿ ಹದಿನೈದು ರೂಪಾಯಿ ತುಟ್ಟಿಭತ್ಯ ಕೊಡುತ್ತಿದ್ದರು.

ಈ ಅನ್ಯಾಯವನ್ನು ಸಹಿಸಿ ಸಹಿಸಿ ಸಾಕಾಗಿ ಬೆಂಗಳೂರಿನ ರೈಲ್ವೆ ಕಾರ್ಮಿಕರು ರೊಚ್ಚಿಗೆದ್ದು ಸಂಪು ಹೂಡಿದ್ದರು.

ಈ ಸಂಪು ಮುರಿಯಲು ಸರ್ಕಾರ ವಿಶೇಷ ಪ್ರಯತ್ನ ಮಾಡಿತು. ಆದರೆ ಕಾರ್ಮಿಕರು ಜಗ್ಗಲಿಲ್ಲ. ಮೇಲಿನ ಅಧಿಕಾರಿಗಳ ಒತ್ತಾಯಕ್ಕೆ ಸ್ಟೇಷನ್ ಮಾಸ್ಟರು ಷೆಡ್ಡಿನಲ್ಲಿ ಎಂಜಿನ್ ಮೇಲೆ ಕುಳಿತ ಡ್ರೈವರನಿಗೆ ಎಂಜಿನ್ ತಂದು 'ಬೋಗೀ'ಗಳಿಗೆ 'ಅಟಾಚ್' ಮಾಡುವಂತೆ ಹೇಳಿದ. ಅದಕ್ಕೆ ಡ್ರೈವರು, "ಪಾಯಿಂಟ್ ಸೆಟ್ ಮಾಡದೇನೆ ಎಂಜಿನ್ ಮುಂದೆ ಬಿಡೋದು ಹೇಗೆ?" ಎಂದು ಕೇಳಿದ. ಡ್ರೈವರು ಹೇಳಿದ ರೀತಿಯಲ್ಲಿ, 'ಇದು ಒಂದು ಕುಂಟು ನೆಪ. ಎಂಜಿನ್ ಮುಂದೆ ಬಿಡಲು ಅವನಿಗೂ ಇಚ್ಛೆಯಿಲ್ಲ' ಎಂದು ಯಾರಿಗಾದರೂ ಅನಿಸುತ್ತಿತ್ತು. ಆಗ ಸ್ಟೇಷನ್ ಮಾಸ್ಟರೇ ಪಾಯಿಂಟ್‌ಗಳನ್ನು 'ಸೆಟ್' ಮಾಡಲು ಹೋಗುತ್ತಿರಲು ಡ್ರೈವರ್ ಅಂಥೋಣಿ, 'ಏನ್ರಿ, ನಿಮಗೆ ನಾಚಿಕೆ ಆಗಕ್ಕಿಲ್ಲವೇನ್ರಿ? ನಾಳೆ ತುಟ್ಟಿಭತ್ಯ ಜಾಸ್ತಿ ಬಂದರೆ ನೀವೂ ತಕ್ಕೊಳೋಲ್ಲವೇ? ಬಿಟ್ಟು ಹೋಗರಿ ಪಾಯಿಂಟನ್ನ –' ಎಂದು ಬೈದು, ಅನಂತರ ತಾನು ತಪ್ಪಿನಿಂದ ಪಾರಾಗಲು "'ಕ್ವಾಲಿಫೈಡ್' ಫೈರ್‌ಮನ್ ಇಲ್ಲದೆ ನಾನು ಹೇಗೆ ಟ್ರೇನನ್ನ ಓಡಿಸಲಿ? ದಾರೀಲಿ ಹೆಚ್ಚು ಕಡಿಮೆ ಆದರೆ ಜವಾಬ್ದಾರರು ಯಾರು?" ಎಂದು ಹೇಳಿ ಹೊರಳಿಕೊಂಡ.

ಇದನ್ನೆಲ್ಲ ತನ್ನ ಗೆಳೆಯರೊಡನೆ ನಿರುಕಿಸಿದ ನಟರಾಜ 'ಭಲೆ' ಎಂದುಕೊಂಡ.

ಆ ಬಳಿಕ ರೈಲ್ವೆ ಕಾರ್ಮಿಕರೆಲ್ಲ ನಿಲ್ದಾಣದ ಒಳಾಂಗಣದಲ್ಲಿ ಸಭೆ ಸೇರಿ ಪ್ರಯಾಣಿಕರಿಗೆ ತಮ್ಮ ಕಷ್ಟಗಳನ್ನು ವಿವರಿಸಿ, ಅವರ ಸಹಾನುಭೂತಿಯನ್ನು ಸಂಪಾದಿಸಿದರು.

ಅಷ್ಟರಲ್ಲಿ ಜನರಲ್ ಮ್ಯಾನೇಜರ್ ಸವಾರಿ ಬಂದಿತು. ಸರ್ಕಾರಕ್ಕೆ ಶಿಫಾರಸು ಮಾಡಿ ಇನ್ನೊಂದು ವಾರದಲ್ಲಿ ಅವರ ತುಟ್ಟಿಭತ್ಯೆವನ್ನು ಹೆಚ್ಚಿಸುವುದಾಗಿ ಅವರು ವಾಗ್ದಾನ ಮಾಡಿದ ನಂತರವೇ ಎಲ್ಲ ನೌಕರರೂ ಕೆಲಸಕ್ಕೆ ಹೋಗಲು ಒಪ್ಪಿದರು.

ರೈಲ್ವೆ ಕಾರ್ಮಿಕರ ವಿಜಯ ನಟರಾಜನ ಕಣ್ಣು ತೆರೆಯಿತು. ತಾನು ಒಬ್ಬ ರೈಲ್ವೆ ನೌಕರ. ತಾನೂ ಹೀಗೆ ಇತರ ಕಾರ್ಮಿಕರೊಡನೆ ಸೇರಿ ಹೋರಾಟ ನಡೆಸದಿದ್ದರೆ ತನ್ನ ಸ್ಥಿತಿ ಉತ್ತಮಗೊಳ್ಳದೆನ್ನುವ ಸತ್ಯವನ್ನು ಮನಗಂಡ, ಆ ಕಾರ್ಮಿಕರ ಹೋರಾಟದಿಂದಾಗಿ ಅವನಿಗೂ ಎಂಟು ರೂಪಾಯಿ ತುಟ್ಟಿ ಭತ್ಯ ಬರುವಂತಾಗಿತ್ತು. ಅವನಿಗೆ ೧೯೩೦ನೇ ಇಸವಿಯಲ್ಲಿ ಕಾರಾಗೃಹದಲ್ಲಿದ್ದಾಗ, ಸಮತಾವಾದಿ ಸಾಹಿತ್ಯ ಒದಗಿಸುತ್ತಿದ್ದ ಶ್ರೀಧರ ಹೇಳುತ್ತಿದ್ದ ಮಾತುಗಳು ನೆನಪಿಗೆ ಬಂದವು : "ಕೂಲಿಗಳು ಒಂದಾಗಿ ಹೋರಾಟ ನಡೆಸಿದರೆ ಜಗತ್ತನ್ನೇ ಜಯಿಸಬಹುದು."

ನಟರಾಜನ ಆಲೋಚನೆ ಹೀಗೆ ಹರಿಯುತ್ತಿರುವಾಗ ಮತ್ತೆ ಅವನಿಗೆ ಶ್ರೀಧರನ ಭೆಟ್ಟಿಯಾಯಿತು. ಕೂಲಿಕಾರ ಪಾರ್ಟಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರ ಅಕಸ್ಮಾತ್ತಾಗಿ ಮೈಸೂರು ರೈಲ್ವೆ ನಿಲ್ದಾಣದಲ್ಲಿ ನಟರಾಜನನ್ನು ಕಂಡು ತನ್ನ ಸಂತೋಷವನ್ನು ವ್ಯಕ್ತಪಡಿಸಿದ. ಶ್ರೀಧರನಂತಹ ತಿಳುವಳಿಕೆಯುಳ್ಳ ವ್ಯಕ್ತಿಯನ್ನು ಕಾಣಲು ನಟರಾಜನಿಗೂ ಆನಂದವೇ....! ಬರಬರುತ್ತಾ ಅವರಿಬ್ಬರ ಪರಿಚಯ ಸ್ನೇಹವಾಗಿ ಬೆಳೆಯತೊಡಗಿತು. ದಿನಗಳುರುಳಿದಂತೆ, ಸತ್ಯ ತನಗೇ ಮನವರಿಕೆಯಾದಂತೆ, ನಟರಾಜನ ಚಿತ್ತವೂ ಸಮತಾವಾದವನ್ನು ಒಪ್ಪಿ, ಕಡೆಗೆ ಅವನು ಪಕ್ಷದ ಸದಸ್ಯನೂ ಆದ.

* * * * *

ಆರು ತಿಂಗಳು ಹೀಗೆ ಕಳೆದವು.

ಒಂದು ಸಂಜೆ ರೈಲಿನಿಂದ ಬರುವಾಗ ಹಾಗೆಯೇ ಮಾರ್ಕೆಟ್ಟಿನಿಂದ ಒಂದು ಕುಚ್ಚು ಮಲ್ಲಿಗೆ ಹೂವನ್ನು ತಂದು ದುರ್ಗಿಯ ಕೈಗಿತ್ತನು ನಟರಾಜ.

ದುರ್ಗಿ ದಂಗು ಬಡಿದವಳಂತೆ ಕೆಲ ನಿಮಿಷ ಸುಮ್ಮನೆ ನಿಂತುಬಿಟ್ಟಳು. ಎಂದೂ ತನ್ನನ್ನು ಸರಿಯಾಗಿ ಕೂಡ ಮಾತಾಡಿಸದ ತನ್ನ ಪತಿ ಇಂದು ಘಮ ಘಮಿಸುವ ಮಲ್ಲಿಗೆ ಹೂವನ್ನೇ ಪ್ರೀತಿಯಿಂದ ತಂದುಕೊಟ್ಟುದು ಅವಳನ್ನು ಚಕಿತಗೊಳಿಸಿತು....

ಬೆಪ್ಪು ಹಿಡಿದವಳಂತೆ ನಿಂತ ತನ್ನ ಸತಿಯ ಕೈಹಿಡಿದು ಕುಳ್ಳಿರಿಸಿ ಮೃದುವಾಗಿ ಅವಳ ಮುಂಗುರುಳು ತಿದ್ದುತ್ತಾ, "ನಿನಗೆ ತುಂಬಾ ಹೊಟ್ಟೆ ಉರಿಸಿದ್ದೀನಿ ದುರ್ಗೀ...." ಎಂದ ನಟರಾಜ. ದುರ್ಗಿಗೆ ಇದೆಲ್ಲ ಹೊಸದು. ಪತಿಯ ಪಕ್ಕದಲ್ಲಿ ಕುಳಿತು ಅವನಿಂದ ಮುಂಗುರುಳು ತಿದ್ದಿಸಿಕೊಳ್ಳುವುದು ಅವಳ ಇನ್ನೊಂದು ಜನ್ಮದ ಕನಸಾಗಿತ್ತು. ಆದರೆ ಈಗ ಕನಸು ಈ ಜನ್ಮದಲ್ಲೇ ನನಸಾದುದು ಸುಶ್ರಾವ್ಯವಾದ ಗೀತದಂತೆ ಅವಳ ಎದೆಯನ್ನು ಮೃದುವಾಗಿ ತಟ್ಟಿ ಆಡಿಸಿತು.

"ನಿನ್ನನ್ನು ಬಹಳವಾಗಿ ಬೈದೆ. ಹೊಡೆದೆ. ಆದರೆ ಅದನ್ನೆಲ್ಲ ನೀನು ಸಹಿಸಿಕೊಂಡೆ. ನೀನು ತುಂಬ ದೊಡ್ಡವಳು...." ಹೀಗೆನ್ನುವಾಗ ನಟರಾಜನ ನಯನಗಳಲ್ಲಿ ನೀರಾಡಿತು.

"ನಿನಗೆ ಗೊತ್ತು. ನಾನು ಮಂಗಳೇನಾ ಬಹುವಾಗಿ ಪ್ರೀತಿಸ್ತಾ ಇದ್ದೆ. ಅವಳೂ ನನ್ನಲ್ಲೇ ಪ್ರಾಣ ಇಟ್ಟಿದ್ದಳು. ಚಿಕ್ಕಂದಿನಿಂದಲೂ ನಾವಿಬ್ಬರೂ ದಂಪತಿಗಳ ಹಾಗೇ ಬೆಳೆದೊ. ನಮ್ಮ ಅಜ್ಜೀನೂ ನಮ್ಮನ್ನ ಹಾಗೇ ಬೆಳೆಸಿದಳು. ಆದರೆ ನಮ್ಮಜ್ಜಿ ತೀರಿಹೋದ ಮೇಲೆ ಏನೇನೋ ಆಗಿಹೋಯ್ತು. ಅದೆಲ್ಲ ನಿನಗೆ ಗೊತ್ತಿದೆ. ಮಂಗಳೆಗೆ ಒಂದು ಕಡೆ, ನನಗೆ ಒಂದು ಕಡೆ ಮದುವೆ ಮಾಡಿಬಿಟ್ಟರು... ಮಂಗಳೇನ ಬಿಟ್ಟು ನಿನ್ನ ಮುಖ ನೋಡಿದರೇ ನನಗೆ ವಿಪರೀತ ರೇಗ್ತಾ ಇತ್ತು. ನಿನ್ನ ಚೆನ್ನಾಗಿ ಹೊಡೆದು ಬಡಿದು ಹಿಂಸೆ ಮಾಡಿದ್ರೆ ಮಾತ್ರ ನಂಗೆ ಸಂತೋಷ ಆಗ್ತಾ ಇತ್ತು.... ಆದರೆ ಮೊನ್ನೆ ಮೊನ್ನೆ ನಾನು ಸಮತಾವಾದಿ ಪಕ್ಷವನ್ನು ಸೇರಿದ ಮೇಲೆ ನಿನ್ನಂಥಾ ಮುಗ್ಧ ಹುಡುಗೀನಾ ಪ್ರೀತಿ ಮಾಡೋಕಾಗದೇ ಇದ್ದರೆ ದಯಾರಸವಾಗಾದ್ರೂ ಕಾಣಬೇಕು ಅನ್ನೋ ಸತ್ಯಾನ ಮನಗಂಡೆ. ಇನ್ನು ಮೇಲೆ ನಿನ್ನನ್ನೆಂದಿಗೂ ಕೀಳಾಗಿ ಕಾಣೊಲ್ಲ. ಹೆದರಿಕೋಬೇಡ. ಆದಷ್ಟು ಚೆನ್ನಾಗಿ ನೋಡಿಕೊಳ್ತೀನಿ."

ದುರ್ಗಿ ನಟರಾಜನನ್ನೇ ಅರಳಿದ ನಯನಗಳಿಂದ ನಿಟ್ಟಿಸುತ್ತಿದ್ದಳು. ಅವನ ಮಾತುಗಳು ಅವಳಿಗೆ ಅಮೃತಪಾನ ಮಾಡಿಸಿದ್ದವು. ಕಡೆಗಾದರೂ ತನ್ನ ಪತಿ ತನ್ನನ್ನು ಆದರದಿಂದ ಕಾಣುವಂತೆ ಮಾಡಿದ ಆ ಸಮತಾವಾದಿ ಪಕ್ಷವನ್ನು ಮನಸ್ಸಿನಲ್ಲಿಯೇ ಕೃತಜ್ಞತೆಯಿಂದ ಅಭಿನಂದಿಸಿದಳು.

೪೧

ಬಸವಾಚಾರಿಗೆ ಹುಣಿಸೇಗಾಲದ ವೀರಾಚಾರಿಯ ಪುತ್ರಿ ಪುಟ್ಟತಾಯಿಯೊಡನೆ ವಿವಾಹ ಹುಣಸೇಗಾಲದಲ್ಲೇ ನಡೆಯುವದಾಗಿತ್ತು.

ತನ್ನ ಮದುವೆಯ ಸಮಾರಂಭಕ್ಕೆ ಬೇಕಾಗುವ ಉಡುಪನ್ನು ಮೈಸೂರಿನಲ್ಲೇ ಹೊಲಿಸಿದರೆ ಚೆನ್ನ ಎಂದು ಬಗೆದ ಬಸವಾಚಾರಿ ಕಾಳಯ್ಯನೊಡನೆ ಹೇಳಿದ :

"ಮೈಸೂರಿಗೆ ನೀನೊಂದು ಸಲ ಯಾಕೆ ಹೋಗಬೇಕು ಅಜ್ಜ? ನಾನೇ ಹೋಗಿ ಬಟ್ಟೇನೂ ಹೊಲಿಸಿಕೊಂಡು ಹಂಗೇ ಮೈಸೂರಿನ ನಂಟರ್ರೂನ್ನೂ ಕರೆದುಬುಟ್ಟು ಬರ್ತೀನಿ."

"ಹಂಗೇ ಮಾಡು ಮಗ. ನಂಗೆ ಇಲ್ಲೇ ಅಪ್ಪಾರ ಕೆಲ್ಸ ಅದೆ" ಎಂದ ಕಾಳಯ್ಯ.

ಮೈಸೂರಿನಲ್ಲಿ ಬಟ್ಟೆ ಹೊಲಿಸಿ, ನಂಜುಂಡಸ್ವಾಮಿಯ ಮನೆಯವರನ್ನು ಕರೆದು, ಕಡೆಗೆ ನಟರಾಜನ ಮನೆಗೆ ಬಂದ ಬಸವಾಚಾರಿ.

ನಟರಾಜ ತನಗೆ ಬಹಳ ಕೆಲಸವಿದ್ದುದರಿಂದ ತಾನು ಮದುವೆಗೆ ಬರುವುದು ಅಸಂಭವವೆಂದೂ ತಿಳಿಸಿದ.

ಬಸವಾಚಾರಿ ಅದಕ್ಕೊಪ್ಪಲಿಲ್ಲ.

"ಉಂಟೆ ಭಾವ....! ನೀನು ಬಂದೇ ಬರಬೇಕು. ಒಂದು ಪಕ್ಕಸ ನೀ ಬರದೇ ಹೋದರೆ ನಾನು ಮದುವೇನೇ ಆಗಕ್ಕಿಲ್ಲ" ಎಂದು ಮುಷ್ಕರ ಹೂಡಿದ.

ನಿರ್ವಾಹವಿಲ್ಲದೆ ಬಸವಾಚಾರಿಯ ಬಲತ್ಕಾರಕ್ಕೆ ನಟರಾಜನೂ ಬರಲೊಪ್ಪಿದ.

'ಮೈ ಇಳಿದು' ಸ್ವಸ್ಥ ತಪ್ಪಿದ ಮಂಗಳೆಗೆ ಈಗ ಸ್ವಲ್ಪ ಗುಣಮುಖವಾಗಿದ್ದರೂ ಹುಣಿಸೇಗಾಲದಷ್ಟು ದೂರ–ಹುಣಿಸೇಗಾಲ ಕಲ್ಲಹಳ್ಳಿಯಾಚೆಗೆ ಸುಮಾರು ಒಂದು ಮೈಲಿ–ಎತ್ತಿನ ಗಾಡಿಯಲ್ಲಿ ಪಯಣ ಹೋಗುವಷ್ಟು ತ್ರಾಣ ಪಡೆದಿರಲಿಲ್ಲ ಅವಳು.

ಬಸವಾಚಾರಿಯ ಮದುವೆಯಲ್ಲಿ ಎಲ್ಲಕ್ಕೂ ಮಿಗಿಲಾಗಿ ಬಸವಾಚಾರಿಯ ಬಳಗದ ಹೆಂಗಸರನ್ನು ಒಂದು ವಿಚಾರ ಸೋಜಿಗಗೊಳಿಸಿತ್ತು–ಈಗ ನಟರಾಜ ತನ್ನ ಹೆಂಡತಿ ದುರ್ಗಿಯನ್ನು ಚೆನ್ನಾಗಿ 'ಬಳಸು'ತ್ತಿದ್ದನೆಂಬುದೇ ಆ ವಿಚಾರ; ಎಲ್ಲರಿಗಿಂತ ಹೆಚ್ಚಾಗಿ ಈ ಸುದ್ದಿ ಪಾರ್ವತಮ್ಮನ ಹೃದಯವನ್ನು ಅತಿಶಯವಾದ ಸಂತೋಷದಿಂದ ಹಿಗ್ಗಿಸಿತು. "ದೇವರೇ, ಇನ್ನಾರೂ ನಮ್ಮ ತೌರ ಭಾಗ್ಯ ಬೆಳಗಿಸಪ್ಪ..." ಎಂದು ದೇವರಲ್ಲಿ ಮೊರೆಯಿಟ್ಟಳು.

ಮದುವೆ ಮುಗಿದು ಎಲ್ಲ ಜನವೂ ತಮ್ಮ ತಮ್ಮ ಊರುಗಳಿಗೆ ಹೊರಟು ನಿಂತಾಗ ಚೆಲುವಮ್ಮ ಅಳಿಯನನ್ನು ಪಕ್ಕಕ್ಕೆ ಕರೆದಳು.

"ದುರ್ಗೀನೂ ಕರಕೊಂಡು ಎಂಡು ಜಿನ ನಮ್ಮೂರಿಗೆ ಬಂದಿದ್ದು ಓಗಪ್ಪಾ.... ಬೋ ಕಾಲ ಆಗೋಯ್ತು" ಎಂದು ಪ್ರೀತಿಯಿಂದ ಆಹ್ವಾನಿಸಿದಳು.

ಆದರೆ ನಟರಾಜನಿಗೆ ಆ ದಿನಕ್ಕೇ ರಜ ಮುಗಿದಿತ್ತು.

"ಇಲ್ಲ. ಈಗ ರಜ ಮುಗಿದುಹೋಯ್ತು. ಇನ್ನೊಂದು ಸಲ ಬರ್ತೀನಿ. ಈಗ ಬೇಕಾದರೆ ನಿಮ್ಮ ಮಗಳ್ನ ಕರೆದುಕೊಂಡು ಹೋಗಿ" ಎಂದು ನುಡಿದನು ನಟರಾಜ.

ಅವನು ಬಸ್ಸಿಗೆ ಹೊರಡುತ್ತಿರುವಂತೆ ದುರ್ಗಿ ಅವನೊಡನೆ ತಗ್ಗಿದ ದನಿಯಲ್ಲಿ, "ನಿಮ್ಮ ಆರೋಗ್ಯ ಸ್ವಲ್ಪ ಹುಷಾರಾಗಿ ನೋಡಿಕೊಳ್ಳಿ. ಪಾರ್ಟಿ ಕೆಲಸ ಅಂತ ಸುಮ್ಮನೆ ಸಾಕುಮಾಡಿಕೊಳ್ತೀರಿ" ಎಂದು ಒಲುಮೆಯ ಸಲಹೆ ಮಾಡಿದಳು.

ನಟರಾಜ ಹುಸಿನಗು ನಗುತ್ತಾ ಬಸ್ಸು ಹತ್ತಲು ಹೋದ.

೪೨

ಐದು ವರ್ಷ ಒಂದರ ಹಿಂದೊಂದು ಬಂದು ಹೋಗಿದ್ದವು.

ಮಂಗಳೆ ಈಗಾಗಲೇ ನಾಲ್ಕುಬಾರಿ ಗರ್ಭವತಿಯಾಗಿ ನಾಲ್ಕು ಬಾರಿಯೂ ಆ ಗರ್ಭವನ್ನು ಕಳೆದುಕೊಂಡಿದ್ದಳು.

ಇದು ಎಲ್ಲರಿಗೂ ದುಃಖದ ಪ್ರಸಂಗವಾದರೂ ನರಸಮ್ಮನನ್ನು ಎಲ್ಲರಿಗಿಂತ ವಿಪರೀತವಾಗಿ ವಿಷಾದಗೊಳಿಸಿತು. ಒಂದೊಂದು ಸಲ ಮಂಗಳೆ ಗರ್ಭಧಾರಣೆ ಮಾಡಿದಾಲೂ "ಈ ಸಲ ನಿಂತಾತೇನೊ?–ಈ ಸಲ ನಿಂತಾತೇನೊ?" ಎಂದು ಹಂಬಲಿಸಿ ಹಂಬಲಿಸಿ ಕಡೆಗೆ ಪ್ರತಿ ಬಾರಿಯೂ ಅವಳ ಹೃದಯ ನಿರಾಶೆಯ ಚಿತೆಯಲ್ಲಿ ಬೇಯುತ್ತಿತ್ತು.

ಹೀಗಿರುವಾಗ ಇವರ ಮನೆಗೆ ಆಗಾಗ ಬರುತ್ತಿದ್ದ ನೆರೆಯೂರಿನ ರಾಮಕ್ಕ ನರಸಮ್ಮನ ಪ್ರಲಾಪವನ್ನು ಕೇಳಿ, "ಪಟ್ಟಲದಮ್ಮನಿಗೆ ಹರಸಿಕೊಳ್ರವ್ವಾ... ಮೊಗ ಲಾಜಾದಲ್ಲಿ ಆಯ್ತದೆ. ಅದೇನು ಬೋ ಸುದ್ದಿ...ನನ್ನ ಸೊಸೇಗೂ ಹಿಂಗೆ ಬಂಜೆಯಾಗಿ ನಿಂತಿರೊ ಗತಿಯೇ ಬಂದಿತ್ತು ಕನ್ರವ್ವಾ, ಯಾರೋ ಪುಣ್ಯಾತ್ಗಿತ್ತಿ ಹೇಳಿದ್ಲು, ಪಟ್ಟಲದಮ್ಮನ ಪೂಜೆಮಾಡಿಸೂಂತ !.... ಹಂಗೆ ಮಾಡಿಸ್ದ ಎರಡೇ ತಿಂಗಳಲ್ಲಿ ನೋಡ್ರವ್ವಾ ಮಾಯದಲ್ಲೇ ಅವಳಿಗೆ ಮುಟ್ಟು ನಿಲ್ಲತು. ಒಂಬತ್ತು ತಿಂಗಳು ಕಳೀತ್ಲೂವೆ ಯಾವತ್ತೂ ಒಳ್ಳಿ ಕೆಂಜಿಗದ ಊವಿನಂತ ಮೊಗ ಉಟ್ಟಿ ನನ್ನ ಮನೆ ಉದ್ಧಾರ ಆಯ್ತು" ಎಂದು ಸಲಹೆ ಮಾಡಿದಳು.

ರಾಮಕ್ಕನ ಮಾತು ನರಸಮ್ಮನ ಎದೆಯಲ್ಲೂ ಆಸೆಯ ಬೀಜವನ್ನು ಬಿತ್ತಿತ್ತು. ಪಟ್ಟಲದಮ್ಮನ ಪೂಜೆಯನ್ನು ಮಾಡಿಸಿಯಾದರೂ ನೋಡುವುದೆಂದು ನಿಶ್ಚಯಿಸಿದಳು.

ನರಸಮ್ಮನ ನಿರ್ಧಾರ ಕೇಳಿ ಪಾರ್ವತಮ್ಮನ ಕುದಿಯುವ ಎದೆಗೂ ಸ್ವಲ್ಪ ಶಾಂತಿ ದೊರೆತಂತಾಯಿತು. ಕಲ್ಲಹಳ್ಳಿಯ ಊರ ದೇವತೆಯಾದ ಪಟ್ಟಲದಮ್ಮನ 'ಸತ್ಯ'ದಲ್ಲಿ ಅವಳಿಗೆ ವಿಶೇಷ ನಂಬಿಕೆಯಿತ್ತು. ಆ ಅಮ್ಮನಿಗೆ ಪೂಜೆ ಮಾಡಿಸಿದರೆ ತನ್ನ ಮಗಳ ಗರ್ಭ ಖಂಡಿತ ಉಳಿಯುವುದೆಂದು ಅವಳು ನಂಬಿದಳು.

ಕಲ್ಲಹಳ್ಳಿಯ ಈಶಾನ್ಯ ದಿಕ್ಕಿಗೆ ಸುಮಾರು ಅರ್ಧ ಮೈಲಿ ದೂರದಲ್ಲಿ ಮಂಗಳೂರು–ಮೈಸೂರು ಮಾರ್ಗದ ಆಚೆಯ ಪಕ್ಕಕ್ಕೆ ಕಲ್ಲಹಳ್ಳೀ ಕೊತ್ತೇಗಾಲ ನಡುವೆ ಒಂದು ಮಾವಿನ

ತೋಪು ಇದೆ. ಆ ತೋಪಿನಲ್ಲಿ ಒಂದು ಆಳು ಪ್ರಮಾಣದ ಕಲ್ಲು ಗುಡಿ, ಆ ಗುಡಿಯ ಮಧ್ಯೆ ಒಂದು ಮೊಳದ ಉದ್ದದ ಕಲ್ಲು ನೆಟ್ಟಿದೆ. ಅದೇ ಪಟ್ಟಲದಮ್ಮ. ಆ ಗುಡಿಯ ಒಂದು ಪಕ್ಕಕ್ಕೆ ಅಮ್ಮನವರ ಪೂಜೆಗೆ ಸದಾ ಹೂವು ಇರಲೆಂದು ಯಾರೋ ಪುಣ್ಯಾತ್ಮ ನಡೆಸಿದ ದೇವಗಣಗಲೆಯ ಮರವೊಂದಿದೆ.

ಉಗಾದಿ ಹಬ್ಬಕ್ಕೆ ಮುನ್ನವೇ ಅಮ್ಮನ ಪೂಜೆ....ಕಲ್ಲಹಳ್ಳಿಯವರಿಗೆ ಇವಳು ಗ್ರಾಮದೇವತೆಯಾದ್ದರಿಂದ ಪೂಜೆಗೆ ಸರ್ವ ಸಿದ್ಧತೆಗಳನ್ನು ಮಾಡುವವರೂ ಅವರೇ! ಮನೆ ಮನೆಯಿಂದಲೂ ಒಂದೊಂದು ಆಳು ಹೊರಡಬೇಕು ಈ ಕೆಲಸಗಳಿಗೆ....ಆ ದಿನ ಬೆಳಿಗ್ಗೆಯೇ ಕೆಲವರು ಗುಡಿಸಿ ಸಾರಿಸಿ, ಚಪ್ಪರ ಹಾಕುತ್ತಾರೆ. ಇನ್ನು ಕೆಲವರು ಕಾಡಿಗೆ ಹೋಗಿ ಸೌದೆ ಕಡಿದು ತಂದು ಗುಡಿಯ ಮುಂದಿರುವ ಕೊಂಡದ ಗುಂಡಿಯಲ್ಲಿ ಆ ಸೌದೆಯನ್ನೆಲ್ಲಾ ಒಟ್ಟಿ ಬೆಂಕಿ ಹಚ್ಚಿ ಅದನ್ನು ಸುಡುತ್ತಾರೆ. ಸುಟ್ಟ ಕಾಡುಸೌದೆ ಗಣಗಣನೆ ಕಾದು ಕೆಂಪಗೆ ಜ್ವಲಿಸುವ ತಳಿ ಕೆಂಡವಾಗುತ್ತದೆ. ಆ ಕೊಂಡದ ಗುಂಡಿ ಸುಮಾರು ಆರೇಳು ಅಡಿ ಉದ್ದವೂ, ನಾಲ್ಕಡಿಯಷ್ಟು ಅಗಲವೂ ಇರುತ್ತದೆ. ಅಲ್ಲಿ ಹಾಗೆ ಬಿದ್ದ ಕೆಂಡದಿಂದ ಬೂದಿಯನ್ನು ಹೊಡೆದು ತಳಿ ಕೆಂಡವನ್ನು ಸಿದ್ಧಪಡಿಸುತ್ತಾರೆ. ಇಷ್ಟರಲ್ಲಿ ರಾತ್ರಿಯಾಗುತ್ತದೆ.

ಸಂಜೆಗೇ ಊಟ ಮುಗಿಸಿ, ಸುಮಾರು ಎಂಟು, ಎಂಟೂವರೆ ಗಂಟೆಯ ವೇಳೆಗೆ ಪಟ್ಟಲದಮ್ಮನ ಗುಡಿಯ ಕಡೆಗೆ ಜನ ಹೊರಡುತ್ತಾರೆ. ದೇವತೆಗೆ ಹರಕೆ ಹೊತ್ತಿರುವ ಭಕ್ತಾದಿಗಳು ಕಲ್ಲಹಳ್ಳಿಯಿಂದಲ್ಲದೆ ನೆರೆಹೊರೆಯ ಹಳ್ಳಿಗಳಾದ ಹುಣಿಸೇಗಾಲ, ಆಡಗನಹಳ್ಳಿ, ಮುತ್ತರಾಯನ ಹೊಸಳ್ಳಿ, ನಾಗಮಂಗಲ, ಕೊತ್ತೇಗಾಲ, ಅತ್ತಿಗುಪ್ಪೆ, ಹಬ್ಬನ ಕುಪ್ಪೆ, ಯಮ್ಮೆಗುಂಬ ಮುಂತಾದ ಗ್ರಾಮಗಳಿಂದಲೂ ಕುರಿ, ಹೋತ, ಕೋಳಿ ಇವನ್ನೆಲ್ಲಾ ತೆಗೆದುಕೊಂಡು ಬರುತ್ತಾರೆ.

ಈ ಪೂಜೆಗೆ ಅಲ್ಲಿಗೆ ಸುಮಾರು ಹನ್ನೆರಡು ಮೈಲಿ ದೂರವಿರುವ ಹೊಸಕೋಟೆಯಿಂದ 'ಬ್ಯಾಂಡು' ಬರುತ್ತದೆ. ಪೂಜಾರಪ್ಪ ಕಲ್ಲಹಳ್ಳಿಗೆ ದಕ್ಷಿಣಕ್ಕೆ ಸುಮಾರು ಮೂರೂವರೆ ಮೈಲಿ ದೂರದಲ್ಲಿರುವ ಹೆಗ್ಗಂದೂರಿನವರು. ಆ ಪೂಜೆಗೆ ಅವನೇ ಬರಬೇಕು. ಅವನಿಲ್ಲದೆ ಆ ಪೂಜೆಯೇ ನಡೆಯುವಂತಿಲ್ಲ!– ತೆಂಗಿನಕಾಯಿ, ಬಾಳೆಹಣ್ಣು, ಮತ್ತಿತರ ಪೂಜಾಸಾಮಗ್ರಿಗಳ ಜೊತೆಗೆ 'ವರಿ' ಎತ್ತಿದ ದುಡ್ಡಿನಲ್ಲಿ ಒಂದು ಕುರಿಯ ಮರಿಯನ್ನೂ ಕಲ್ಲಹಳ್ಳಿಯ 'ಯಜಮಾನ' ಕಂಪಲಾಪುರದ 'ಆಯಿತಾರ' ಸಂತೆಯಲ್ಲಿ ಕೊಂಡು ತರುತ್ತಾನೆ. ಏಕೆಂದರೆ, ಹುಣಸೂರು ಸಂತೆಯಲ್ಲಿ ಕುರಿ ಮಾರಾಟ ಇರುವುದಿಲ್ಲ.

ಈ ಸಲದ ಪೂಜೆಗೆ ಮಂಗಳೆಯನ್ನು ಕರೆದುಕೊಂಡು ಕೊತ್ತೇಗಾಲದಿಂದ ನರಸಮ್ಮನೂ ಚೆಲುವಮ್ಮನೂ ಬಂದಿದ್ದರು. ಅವರು ಕಲ್ಲಹಳ್ಳಿಗೆ ಆ ಮಧ್ಯಾಹ್ನವೇ ಹೋಗಿ ಅಲ್ಲಿಂದ ಪಾರ್ವತಮ್ಮನನ್ನೂ ಕೂಡಿಕೊಂಡು ಬಂದಿದ್ದರು.

ಪೂಜೆ ಆರಂಭವಾದಾಗ ಬ್ಯಾಂಡು ನಡೆಯಿತು. ಪೂಜಾರಿ ಹಣ್ಣುಕಾಯಿ ಒಡೆದು ಎಲ್ಲರಿಗೂ ಪ್ರಸಾದಕೊಟ್ಟ.

ಅದಾದ ಬಳಿಕ ಒಬ್ಬೊಬ್ಬರಾಗಿ ಕೊಂಡ ಹಾಯಲು ಆರಂಭಿಸಿದರು...

ಮಂಗಳೆ ಕೊಂಡ ಹಾಯಲು ಹೋದಳು. ಅವಳಿಗೆ ನರಸಮ್ಮ ತಮ್ಮ ಹತ್ತಿರವಿದ್ದ ನಗಗಳನ್ನೆಲ್ಲಾ ತೊಡಿಸಿ ಕಲಾಪತ್ತಿನ ನವಿಲು ವರ್ಣದ ಸೀರೆ ಉಡಿಸಿ ಅಲಂಕಾರ ಮಾಡಿದ್ದಳು.

ಮಂಗಳೆ ಕೊಂಡ ಹಾಯುತ್ತಿರುವಂತೆ ತೆಳು ಮಾಣಿಕ್ಯದ ರಂಗು ಅವಳ ಮೇಲೆ ಚೆಲ್ಲಿ ಆ ಕಾಡಿನ ಮಧ್ಯದಲ್ಲಿ ಅವಳು ಶೋಭಾಯಮಾನವಾಗಿ ಬೆಳಗುತ್ತಿದ್ದಳು.

ಆಗ ಅವಳಿಗೆ ಸಮೀಪದಲ್ಲಿಯೇ ನಿಂತ ಅಡಗನಹಳ್ಳಿಯ ಹೆಂಗಸೊಬ್ಬಳು ಇನ್ನೊಬ್ಬಳನ್ನು ತಿವಿದು, "ಹೆಂಗೆ ಒಳ್ಳಿ ಲಕ್ಷ್ಮಿದೇವಿಯಂಗೆ ಅವ್ಳೆ ನೋಡಾ ! ... ದೇವರು ಇವಳಿಗೆ ರೂಪು ಕೊಟ್ಟವ್ನೆ, ಐಸ್ವರ್ಯ ಕೊಟ್ಟವ್ನೆ ಏಟು ಪುಣ್ಯವಂತೆಯಾ ಇವ್ಳೂ!" ಎಂದು ಕರುಬಿದಳು.

ಆ ಮಾತುಗಳು ಕಿವಿಗೆ ಬೀಳುತ್ತಲೂ ಮಂಗಳೆ ತನ್ನೊಳಗೇ–

'ನನಗೆ ಈ ರೂಪೂ ಬ್ಯಾಡ. ಈ ಐಶ್ವರ್ಯವೂ ಬ್ಯಾಡ. ನಟರಾಜ ಒಬ್ಬ ನನ್ನವನಾಗಿದ್ದರೆ ಎಲ್ಲಾ ಸಂಪತ್ತು ಸಿಕ್ಕಿದಹಾಗೆ ಆಗಿತ್ತು' ಎಂದುಕೊಳ್ಳುತ್ತ ಮರುಗಿದಳು.

ಎಲ್ಲರೂ ಕೊಂಡ ಹಾಯ್ದು ಮುಗಿದ ನಂತರ ಒಬ್ಬೊಬ್ಬರಾಗಿ ಕುರಿ, ಹೋತ, ಕೋಳಿಗಳನ್ನು ಕಡಿದರು. ಹಾಗೆ ಕತ್ತರಿಸಿದ ಮಾಂಸದ ಚೂರುಗಳನ್ನು ದಿಕ್ಕು ದಿಕ್ಕಿಗೂ ಎಸೆದರು. ಹಾಗೆ ಎರಚಿದರೆ ಆ ಮಾಂಸದ ತುಂಡುಗಳನ್ನು ಭೂತಪ್ರೇತಾದಿಗಳು ತಿಂದು ಸಂತೋಷಿಸುವುದೆಂದು ಅವರ ನಂಬಿಕೆ.

ಇದಾದನಂತರ ಗಾಡಿಗಳನ್ನು ಕಟ್ಟಿಕೊಂಡು ಎಲ್ಲರೂ ತಮ್ಮ ತಮ್ಮ ಮನೆಯ ಹಾದಿ ಹಿಡಿದು ಹೊರಟರು.

ಮನೆಗೆ ಹಿಂದಿರುತ್ತಿರುವಂತೆ ತಾನೆ ಗಾಡಿ ಹೊಡೆಯುತ್ತಿದ್ದ ಸುಬ್ಬರಾಯಿ, "ಪೂಜೇನೂ ಮಾಡಿಸಾಯ್ತು. ಇನ್ನು ಯೇನಂತೆ, ಮಕ್ಕಳು ಉಳಿದೇ ಉಳೀತವೆ !" ಅಂದುಕೊಂಡ.

೪೩

ಪಟ್ಟಲದಮ್ಮನ ಪೂಜೆಮಾಡಿ ಮೂರು ವರ್ಷ ಕಳೆದರೂ ಮಂಗಳೆಗೆ ಮಕ್ಕಳುಳಿಯುವ ಸೂಚನೆಯೇ ಕಂಡುಬರಲಿಲ್ಲ. ಅದರಿಂದ ಪಾರ್ವತಮ್ಮನಂತೆ ನರಸಮ್ಮನೂ ತೀರ ನಿರಾಶೆಗೊಂಡಿದ್ದಳು.

ಮಂಗಳೆಗೆ ಮೈಯಿಳಿದಾಗ, ಎರಡು ಮೂರು ವಾರ ಸ್ವಾಸ್ಥ್ಯ ತಪ್ಪಿದರೂ ಆಮೇಲೆ ಅವಳು ಎಂದಿನಂತೆ ಮೈತುಂಬಿಕೊಂಡು ನೋಡಿದವರ ಕಣ್ಣಿಗೆ ಆರೋಗ್ಯವಾಗಿಯೇ ಚೆಲುವಾಗಿಯೇ ಕಾಣುತ್ತಿದ್ದಳು.... ಅದರಲ್ಲೂ ಬಸವಾಚಾರಿಯ ದೃಷ್ಟಿಗೆ ಮಂಗಳೆಯ ರೂಪು ಹುಚ್ಚನ್ನೇ ಹಿಡಿಸಿತ್ತು–

ಬಸವಾಚಾರಿ ಎಲ್ಲಿದ್ದರೂ, ಮಂಗಳೆಯ ರೂಪನ್ನೇ ನೆನೆಯುವನು. ಅವಳ ಬಳಿ ಅವನಿದ್ದಾಗಲಂತೂ ತೀರಿತು, ಅವಳ ಅಂಗಾಂಗಗಳನ್ನು ತಿಂದು ಬಿಡುವವನಂತೆ ದೃಷ್ಟಿಸಿ ನೋಡುವನು.

ಅವನಿಗೆ ಮದುವೆಯಾದ ಮೇಲಂತೂ ಮಂಗಳೆಯ ಮನೆಗೆ ಅವನು ಹೋಗಿ ಬರುವುದು ಹೆಚ್ಚಾಯಿತು. ಆಗ ಒಂದು ದಿನ ಮಂಗಳೆ, "ನಿನ್ನ ಪುಟ್ಟತಾಯಿ ಬಹಳ ಒಳ್ಳೇ ಹುಡುಗಿ. ಚೆಂದುಳ್ಳಿ ಹೆಣ್ಣು" ಎಂದು ಬಸವಾಚಾರಿಯ ಮಡದಿಯನ್ನು ತುಂಬು ಹೃದಯದಿಂದ ಶ್ಲಾಘಿಸಿದಳು.

ಪುಟ್ಟತಾಯಿ ದಿಟ್ಟವಾಗಿ ತೆಳ್ಳಗೆ, ಬೆಳ್ಳಗೆ ಚೆನ್ನಾಗಿಯೇ ಇದ್ದಳು.

ಆದರೆ ಬಸವಾಚಾರಿ ಆ ಮಾತನ್ನೊಪ್ಪದೆ, "ನಿನ್ನ ಮುಂದೆ ಅವಳದು ಎಂಥ ರೂಪ ತೆಗೆಯಕ್ಕ.... ನಿನ್ನ ಮುಂದೆ ಅವಳ್ನಾ ನೀವಾಳಿ ತಗೀಬೇಕು" ಎಂದನು.

ಮಂಗಳೆ ಬಸವಾಚಾರಿಯ ಮಾತು ಕೇಳಿ ಬೆಚ್ಚಿದಳು. ಆದರೂ 'ಹುಡುಗ' ಎಂದುಕೊಂಡು ಸುಮ್ಮನಾದಳು.

ಆದರೆ ಬಸವಾಚಾರಿಯಾಗಲೇ ಕೆಟ್ಟು ಹೋಗಿದ್ದ. ಹಲವಾರು ಹೆಂಗಸರ ಸಹವಾಸದಿಂದ ಹೆಂಗಸು ಎಂದರೇ ಅವನಿಗೆ ಗೌರವ ಹೋಗಿತ್ತು. ತನ್ನ ರೂಪಿಗೆ ಯಾವ ಹೆಂಗಸಾದರೂ ಒಲಿದು ಬರುವಳೆಂದು ಅವರ ಭ್ರಾಂತಿ. ಅದರಲ್ಲೂ ಸುಬ್ಬರಾಯಿಯಂಥ ಕುರೂಪಿ ಪತಿಯೊಡನೆ ತನ್ನ ಜೀವಮಾನವನ್ನೆಲ್ಲಾ ಸಾಗಿಸಬೇಕಾದ ಮಂಗಳೆಯಂಥ ತರುಣಿ ತನ್ನಂಥವನಿಗೆ ಬೀಳದೆ ಏನು ತಾನೆ ಮಾಡಿಯಾಳು? ಎಂದು ಅವನ ತರ್ಕ.

ಹೀಗಿರುವಾಗ ಸುಬ್ಬರಾಯಿ ಮೈಸೂರಿಗೆ ಹೋಗಬೇಕಾದ ಪ್ರಮೇಯ ಒದಗಿತು. ಅವನು ಈ ಬಾರಿ ಕಟ್ಟಿದ ಹೊಗೆ ಚಪ್ಪರವನ್ನು ಮೈಸೂರಿನ ಜಾನಿ ಸಾಹೇಬರು ಕೊಂಡಿದ್ದರು. ಆದರೆ ಪೂರ್ತಾ ದುಡ್ಡು ಕೊಟ್ಟಿರಲಿಲ್ಲ. ಆ ಬಾಕಿ ಹಣವನ್ನು ವಸೂಲು ಮಾಡುವುದಕ್ಕಾಗಿ ಸುಬ್ಬರಾಯಿ ಮೈಸೂರಿಗೆ ಹೊರಟನು. 'ಮೈಸೂರು ನೆಂಟರ್ನ ನೋಡಿ ಬೋ ಜಿನ ಆಯ್ತು' ಎಂದು ನೆಪ ತೆಗೆದು ನರಸಮ್ಮನೂ ಮೊಮ್ಮಗಳ ಮನೆಗೆ ಹೊರಟಳು, ತನಗೂ ತನ್ನ ಮಗಳು ದುರ್ಗಿಯನ್ನು ಸಂದರ್ಶಿಸುವ ಹಿರಿಯಾಸೆಯಿದ್ದರೂ ಚೆಲುವಮ್ಮ ಮಲೇರಿಯಾ ಜ್ವರ ಪೀಡಿತಳಾಗಿ ಮಲಗಿದ್ದುದರಿಂದ ವಿಧಿಯಿಲ್ಲದೆ ಸುಮ್ಮನಾಗಬೇಕಾಯಿತು.

ಹಾಗೆ ಸುಬ್ಬರಾಯ ಮನೆ ಬಿಟ್ಟು ಎಲ್ಲಾದರೂ ಪಯಣ ಬೆಳೆಸಿದಾಗ ನರಸಮ್ಮನಾಗಲಿ, ಚೆಲುವಮ್ಮನಾಗಲಿ ಮಂಗಳೆಯ ಮನೆಯಲ್ಲಿ ಮಲಗಿ ರಾತ್ರಿ ತುಂಬಿಸುವುದು ರೂಢಿಯಾಗಿತ್ತು. ಅದು ಆ ಬೀದಿಯಲ್ಲಿ ಕೊನೆಯ ಮನೆಯಾದ್ದರಿಂದ ಅವರ ಜೊತೆಗೆ ಬಸವಾಚಾರಿಯು ಅಲ್ಲೇ ಮಲಗುತ್ತಿದ್ದ.

ಜ್ವರ ಪೀಡಿತಳಾದ ಚೆಲುವಮ್ಮ ಈ ಸಲ ಮಂಗಳೆಯ ಮನೆಗೆ ಮಲಗಲು ಹೋಗುವಂತಿರಲಿಲ್ಲ. ಆ ಕಾರಣದಿಂದವಳು ಪುಟ್ಟತಾಯಿಯನ್ನು ಕೂಗಿ, "ಒಳಗಿನ ಕೆಲ್ಸ ಯೆಲ್ಲ ಮುಗಿದಿದ್ರೆ.... ಈ ಜಿನ ಮಂಗಳಿ ಹಟ್ಟೀಗೋಗಿ ಮನಕ್ಕೊ. ನಂಗೆ ಈ ಸಳಿ ಜರ ಬರದೇ ಇದ್ದರೆ ನಾನೇ ಓಯ್ತಿದ್ದಿ..." ಎಂದಳು.

ಅಲ್ಲೇ ಇದ್ದ ಬಸವಾಚಾರಿಗೆ ಈ ಮಾತು ಕೇಳಿತು. ತಕ್ಷಣವೇ ಅವನು, "ಅವಳ್ನೂ ಕಳಿಸಿಬುಟ್ಟರೆ ನಿಂಗೆ ನೀರು ನಿಡಿ ಕೊಡಕ್ಕೆ ಬ್ಯಾಡವವ್ವಾ?" ಎಂದು ಕೇಳಿದ.

ಹಾಗೆ ಕೇಳುವಾಗ ಅವನ ಮನಸ್ಸು ಏನೇನೋ ಗುಣಾಕಾರ ಹಾಕುತ್ತಿತ್ತು.

"ತಲೆ ದಸೀಲೆ ಒಂದು ಚಂಬು ನೀರು ಮಡಗಿಬುಟ್ಟು ಹೋಗಲೇಳು."

"ಅದೆಲ್ಲ ಯಾಕೆ ಕಷ್ಟ?.... ಅವಳುಽ... ನಿನ್ನತ್ತರ ಬೆಂಕಿ, ಬಿಸಿನೀರು ಕೊಟ್ಟುಕೊಂಡಿರ್ಲಿ. ನಾನೇ ಓಗಿ ಮನಕ್ಕೊತ್ತೀನಂತೆ...." ಎಂದು ಹೇಳಿ ಚೆಲುವಮ್ಮ ಏನೊ ಹೇಳಬೇಕೆಂದಿರುವಷ್ಟರಲ್ಲೇ ಬೀದಿ ಬಾಗಿಲನ್ನೆಳೆದು ನಡೆದೆಬಿಟ್ಟ.

ಬಸವಾಚಾರಿ ಮಂಗಳೆಯ ಮನೆಗೆ ಬಂದಾಗ ಆಳುಗಳು ಯಾರೂ ಇರದೇ ಮಂಗಳೆ ಒಬ್ಬಳೇ ಇದ್ದಳು. ಬಸವಾಚಾರಿಯನ್ನು ಕಂಡು ಮಂಗಳೆ, "ನೀನು ಯಾಕೆ ಬರೋಕೆ ಹೋದೆ. ನಾನು ನಮ್ಮ ಜೀತದಾಳವ್ನಲ್ಲಾ ಹೊನ್ನ, ಅವನಿಗೇ 'ಅವರು ಬರೋವರೆಗೆ ವಸಿ ಇಲ್ಲೇ ಬಂದು ಮಲಗಿಕೊಪ್ಪಾ' ಅಂತ ಹೇಳಿದ್ದೀನಿ" ಎಂದಳು.

ಹೊನ್ನ ಬಂದು ಮಲಗುತ್ತಾನೆಂದು ಕೇಳಿ ಬಸವಾಚಾರಿಯ ಮುಖ ಅನಿರೀಕ್ಷಿತವಾಗಿ ತನ್ನ ಉತ್ಸಾಹವನ್ನು ಕಳೆದುಕೊಂಡು ಸೊರಗಿತು. ಅವನು ಬರುವುದರೊಳಗೇ ತನ್ನ ಕಾರ್ಯ ಸಾಧಿಸಬೇಕೆಂದು ಬಗೆದು, "ನಾನೇ ಬತ್ತಿದ್ನೆಲ್ಲಾ...ಅವನ್ನೂ ಒಂದುಸಲ ಯಾಕೆ ಬರಹೇಳಿದ್ಯಕ್ಕಾ-?" ಎಂದ.

ಈ ಮಾತಿನ ಜೊತೆಗೆ ಬಸವಾಚಾರಿ ತನ್ನನ್ನು ನೋಡುತ್ತಿದ್ದ ರೀತಿಯೂ ಅನುಮಾನ ಹುಟ್ಟಿಸುವಂತಿತ್ತು. ಆದರೂ ಮಂಗಳೆ ಇದರಿಂದ ತನ್ನಲ್ಲುಂಟಾದ ಭೀತಿಯನ್ನು ಪ್ರಕಟಿಸದೆ, "ನಿಮಗೆಲ್ಲ ಯಾಕಪ್ಪ ತೊಂದರೆ ನಿಂದೂ ಸಂಸಾರ ಅಲ್ಲವಾ?" ಎಂದಳು.

"ಅಯ್ಯೋ ಸಂಸಾರ ಇದ್ದೇ ಇರ್ತದೆ ಬುಡಕ್ಕ... ಈವೊತ್ತು ಒಂದಿನ ಇಲ್ಲಿ ಮನಗಿಕೊಂಡುಬಿಟ್ಟರೆ ಯೇನೂ ಮುಳುಗಿ ಹೋಗಕ್ಕಿಲ್ಲ..."

ನಿರುಪಾಯಳಾದ ಮಂಗಳೆ, ಯಾವ ರೀತಿ ಈ ವ್ಯಕ್ತಿಯನ್ನು ಇಲ್ಲಿಂದ ಸಾಗಹಾಕುವುದೆಂದು ಯೋಚಿಸುತ್ತ ನಿಂತಳು.

"ಅದಕ್ಯಾಕಕ್ಕ ಇಷ್ಟು ಯೋಚ್ನೆ ಮಾಡೀ?.... ಇದರಿಂದ ನಂಗೇನೂ ತೊಂದರೆ ಆಗಕ್ಕಿಲ್ಲ..." ಎಂದು ನಗುತ್ತಾ ಬಸವಾಚಾರಿ ನಡುಮನೆಯಲ್ಲೇ ಕುಳಿತುಕೊಂಡ. ಅಷ್ಟೇ ಅಲ್ಲದೆ, "ಹೂ, ಹಂಗೆ ವಸಿ ಎಲಡಕೆ ಕೊಡು.... ನಿಮ್ಮ ತೋಟದೆಲೆ ಬಾಳ ರುಚಿ" ಎಂದು ಅವಳನ್ನೇ ದುರುಗುಟ್ಟಿ ನೋಡಿದ.

'ನಿಮ್ಮ ತೋಟದೆಲೆ ಬಾಳ ರುಚಿ' ಎಂದು ಹೇಳುವುದರ ಮರೆಯಲ್ಲಿ 'ನೀನು ಬಾಳ ರುಚಿ' ಎಂಬ ಅರ್ಥವನ್ನು ಅವಿಸಿಟ್ಟಂತಿತ್ತು ಬಸವಾಚಾರಿ.

ಅವನ ಮಾತಿನ ಧೋರಣೆ ಮಂಗಳೆಯನ್ನು ದಿಗಿಲುಗೊಳಿಸಿತು.

ಬಸವಾಚಾರಿ ಅತಿಯಾಗಿ ಹಸಿದವನು ಇನ್ನೊಬ್ಬರ ತಟ್ಟೆಯ ಅನ್ನವನ್ನು ನೋಡುವಂತೆ ಮಂಗಳೆಯನ್ನೇ ಎವೆಯಿಕ್ಕದೆ ನಿಟ್ಟಿಸುತ್ತಿದ್ದ. ಅವನು ಹಾಗೆ ನಿರ್ಲಜ್ಜೆಯಿಂದ ನೋಡುವಾಗ ಆ ಗಳಿಗೆಗೆ ತಾನು ಯಾವೊಂದು ಬಟ್ಟೆಯನ್ನೂ ಮೈಮೇಲೆ ಧರಿಸಿರದಂತೆ, ನಗ್ನಳಾಗಿ ಅವನ ಮುಂದೆ ನಿಂತಿರುವಂತೆ ಅನುಭವವಾಯಿತು ಮಂಗಳೆಗೆ. ಆ ಭಾವ ಅವಳ ಹೃದಯವನ್ನು ಮುತ್ತಿದಂತೆ ಅತಿಯಾಗಿ ನಾಚಿದಳು ಮಂಗಳೆ.

ಅವನಿಗೆ ಬೇಗ ಬೇಗ ಎಲೆ ಅಡಿಕೆ ತಂದುಕೊಟ್ಟು, "ಹು...ಹಂಗಾರೆ.... ಈ ಸಾರಿ ನೀನು ನಿಮ್ಮ ಹಟ್ಟೀಗೆ ಹೋಗಿ ಮಲಗಿಕೊ ಹೋಗು. ನಂಗೂ ಕಣ್ಣು ಎಳೀತಾ ಅವೆ" ಎಂದಳು.

"ಯೇನು ಇಷ್ಟೊತ್ತಿಗೆ ಮನಗಿಕೊತ್ತೀನಿ ಅಂದಿ ಬಾಕ್ಕ ಕುಂತುಕೊ, ಮಾತಾಡವಾ..." ಎನ್ನುತ್ತಾ ಬಸವಾಚಾರಿ ಮಂಗಳೆಯ ಕೈ ಹಿಡಿದು ಎಳೆದು ತನ್ನ ಪಕ್ಕದಲ್ಲಿ ಕೂರಿಸಿಕೊಳ್ಳಲು ಯತ್ನಿಸಿದ.

ಸರಕ್ಕನೆ ಕೈ ಕೊಡಹಿ ಬಿಡಿಸಿಕೊಂಡ ಮಂಗಳೆ, ಕೋಪದಿಂದ ಬುಸುಗುಟ್ಟುತ್ತಾ, "ನಿನ್ನ ಹತ್ತರ ಕೂತುಗೊಂಡು ಮಾತಾಡೋಕೆ ನಾನೇನು ನಿನ್ನ ಹೆಂಡತಿ ಕೆಟ್ಟುಹೋಗಲಿಲ್ಲ... ಗಮ್ಮನೆದ್ದು ನಿಮ್ಮ ಹಟ್ಟಿಗೋಗಿ ಮಲಗಿಕೊ" ಎಂದಳು.

'ಇವಳಿಗೇ...ಹಿಂಗಲ್ಲ–ಸರಿಯಾಗಿ ಮಾಡ್ತೀನಿ' ಎಂದು ತನ್ನ ಮನಸ್ಸಿನಲ್ಲೇ ಅಂದುಕೊಂಡ ಬಸವಾಚಾರಿ, "ಇದ್ಯಾಕಿಷ್ಟು ಕೋಪ ಮಾಡಿಕೊಂಡಿ. ವಸಿ ಕೆಂಡ ಕೊಟ್ಟುಬುಡು ಹೊಂಟೋಯ್ತಿನಿ" ಎಂದನು.

'ಪಿಶಾಚಿ ಹೇಗಾದರೂ ತೊಲಗಲಿ–' ಎಂದು ಶಪಿಸಿಕೊಳ್ಳುತ್ತಾ ಕೆಂಡವನ್ನು ತರಲು ನಡುಮನೆಯಿಂದ ಅಡುಗೆ ಕೋಣೆಗೆ ಹೋದಳು ಮಂಗಳೆ.

ಬಸವಾಚಾರಿ ಇದೇ ಸಮಯವೆಂದು ಹೊಂಚು ಹಾಕಿ, ಮೆಲ್ಲನೆದ್ದು ಹಿಂದಿನಿಂದ ಹೋಗಿ ಮಂಗಳೆಯನ್ನು ಹಠಾತ್ತನೆ ತಬ್ಬಿಕೊಂಡ.

ಇದರಿಂದ ಸಿಂಹಿಣಿಯಂತೆ ಕೆರಳಿದ ಮಂಗಳೆ ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಅವನನ್ನು ಒದರಿಬಿಟ್ಟಳು. ಮೊದಲೇ ಶಕ್ತಿ ಕಳೆದುಕೊಂಡು ನಿರ್ವೀರ್ಯನಾಗಿದ್ದ ಬಸವಾಚಾರಿ ಅವಳ ಒಂದು ನೂಕಿಗೇ ಕೆಳಗೆ ಬಿದ್ದನು.

"ಯೇನ್ರವ್ವ ಅದು ಸದ್ದೂ....?"

ಅದೇತಾನೆ ಬಂದು ಹೊರ ಜಗುಲಿಯಲ್ಲಿ ಚಾಪೆ ಬಿಡಿಸುತ್ತಿದ್ದ ಹೊನ್ನ ಕೂಗಿಕೊಂಡ.

ಕೆಳಗೆ ಬಿದ್ದ ಬಸವಾಚಾರಿಯನ್ನು ಮಂಗಳೆ ಅರ್ಥಪೂರ್ಣವಾಗಿ ಅರೆಕ್ಷಣ ನೋಡಿದಳು.

"ನಿನ್ನ ದಮ್ಮಯ್ಯ ನಾನಿದ್ದೀನಿ ಅಂತ ಹೇಳಬೇಡ" ಎನ್ನುವಂತೆ ದೀನನಾಗಿ ಕೈ ಮುಗಿಯುತ್ತಿದ್ದ ಬಸವಾಚಾರಿ...ಹೊನ್ನ ದಷ್ಟಪುಷ್ಟವಾದ ಆಳು. ಎಲ್ಲಿ ಅವನಿಂದ ಒದೆ ತಿನ್ನಬೇಕಾಗುವುದೊ ಎಂದು ನಡುಗುತ್ತಿದ್ದ ಬಸವಾಚಾರಿ.

'ಹೋಗಲಿ ಪಾಪ' ಎಂದು ಮಂಗಳೆ "ಯೇನು ಇಲ್ಲ ಕಣೋ ಹೊನ್ನಾ ಅಟ್ಟದಿಂದ ಮಂದಲಿಗೆ ಎಳಕೊತ್ತಾ ಇದ್ದೆ. ಅದು ಕೈತಪ್ಪಿ ಕೆಳಕ್ಕೆ ಬಿದ್ದು ಹೋಯ್ತು" ಎಂದು ಕೂಗಿ ಹೇಳಿದಳು.

"ಓಟೇಯಾ? ಹು, ಮನಕ್ಕನ್ನಿ ಅಂಗಾರೆ."

ಹೊನ್ನನ ಮಾತು ಮುಗಿದಂತೆ ಬಸವಾಚಾರಿಗೆ 'ನನ್ನ ಹಿಂದೆ ಎದ್ದು ಬಾ' ಎನ್ನುವಂತೆ ಸನ್ನೆ ಮಾಡಿ ಮುಂದೆ ನಡೆದಳು ಮಂಗಳೆ. ಬಾಲ ಮುದುರಿಕೊಂಡ ನಾಯಿಯಂತೆ ಬಸವಾಚಾರಿ ಅವಳ ಹಿಂದೆ ಹಿಂದೆ ನಡೆದ.

ನಡುಮನೆ ದಾಟಿ ತೊಟ್ಟಿಗೆ ಹೋಗಿ ಹಿತ್ತಲ ಬಾಗಿಲನ್ನು ಮೆಲ್ಲನೆ ತೆರದು ಬಸವಾಚಾರಿಯನ್ನು ಆಚೆಗೆ ನೂಕುತ್ತ, "ಮೂದೇವಿ...ಮಾನವಾಗಿ ಬಾಳ್ಮಾಡು–ನಾನೇನಾರೂ ಈಗ ಹೊನ್ನನಿಗೆ ಹೇಳಿದ್ರೆ ಯೇನು ಗತಿ ಆಯ್ತಿದ್ದಯೊ... ಮುತ್ತಿನಂತಾ ಹೆಂಡತಿ ಮನೇಲಿದಾಳೆ. ನಿಂಗೇನು ಬಂದಿದೆ, ಕೇಡು?" ಎಂದು ಮೆಲ್ಲನಾದರೂ ದೃಢವಾಗಿ ನುಡಿದಳು.

'ಬದುಕಿದೆಯಾ ಬಡಜೀವವೇ' ಎನ್ನುತ್ತಾ ಬಸವಾಚಾರಿ ಹೊರಗಿನ ಕತ್ತಲೆಯಲ್ಲಿ ಕರಗಿಹೋದ.

೪೪

ಕಳೆದ ಮೂರು ದಿನಗಳಿಂದಲೂ ಮೈಸೂರು ನಗರದ ಬೀಡಿ ಕೆಲಸಗಾರರು ಮಾಲೀಕರ ವಿರುದ್ಧ ಮುಷ್ಕರ ಹೂಡಿದ್ದರು. ಆ ಸಂಪನ್ನು ಯಶಸ್ವಿಯಾದ ಘಟ್ಟ ಮುಟ್ಟಿಸುವ ಸಮಸ್ತ ಜವಾಬ್ದಾರಿಯನ್ನು ಹೊತ್ತ ಮೈಸೂರು ಸಿಟಿ ಸಮತಾವಾದಿ ಪಕ್ಷದ ಮುಖಂಡರಲ್ಲಿ ನಟರಾಜನೂ ಒಬ್ಬ.

ಹೀಗಾಗಿ, ಅವನು ಬೆಳಿಗ್ಗೆ ಎದ್ದು ಸ್ನಾನ ಮಾಡಿದವನು, ಕಾಫಿಯನ್ನು ಕುಡಿಯಲೂ ಅವನಿಗೆ ಪುರುಸತ್ತಿರಲಿಲ್ಲ.

ಹೀಗಿರುವಾಗ ಆ ರಾತ್ರಿ ಎಂದಿನಂತೆ ಒಂದು ಗಂಟೆಯ ಸುಮಾರಿಗೆ ಮನೆಗೆ ಹಿಂದಿರುಗಿದ ನಟರಾಜನಿಗೆ ಊಟಕ್ಕೆ ಬಡಿಸಿದ ನಂತರ ದುರ್ಗಿ ಕೇಳಿದಳು :

"ಸಮತಾವಾದಿ ಪಕ್ಷದ ಕೆಲಸ ಅಂತೀರಲ್ಲಾ....ಹಾಂಗಂದ್ರೇನು?– ಬಹಳ ದಿನದಿಂದ ನಾ ಕೇಳಬೇಕು ಅಂತಿದ್ದೇ...."

"ನನಗೂ ಹೇಳಬೇಕು ಅಂತ ಹೊಳೀಲಿಲ್ಲ...ಹೋಗಲಿ ಕೇಳು. ಸಮತಾವಾದಿ ಪಕ್ಷ ಅಂದರೆ ಕೂಲಿಕಾರರ ಪಕ್ಷ..." ಅನ್ನುತ್ತಿರುವಾಗ ದುರ್ಗಿ, "ಅಂದರೆ?" ಎಂದು ಅರ್ಥವಾಗದೆ ಮಿಕಿಮಿಕಿ ಕಣ್ಣು ಬಿಡುತ್ತಿದ್ದಳು.

"ಅಂದರೇ–ನೋಡು ದುರ್ಗಿ, ಕೆಲವರು ಕೆಲಸಮಾಡ್ತಾರೆ, "ಕೆಲವರು ಹಾಗೇ ಕುಳಿತಿರ್ತಾರೆ....ಈಗ ಅನಂತು ಮಾವ ಚಿನ್ನಸ್ವಾಮಿ ಇದಾರೆ ನೋಡು ಅವರು ತಾವೇ ಕುಳಿತುಕೊಂಡು ಕೆಲಸ ಮಾಡೋದಿಲ್ಲ...."

"ಹೌದು."

"ಆಳುಗಳ್ನ ಇಟ್ಟುಕೊಂಡು ಕೆಲಸ ಮಾಡಿಸ್ತಾರಲ್ಲ, ಅವರು ಆ ಆಳುಗಳಿಗೆ ಎಷ್ಟು ಮಜೂರಿ ಕೊಡ್ತಾರೆ ಗೊತ್ತಾ?– ದಿನಕ್ಕೆ ಎಂಟು ಆಣೇನೊ ಹತ್ತಾಣೇನೊ ಅಷ್ಟೆ. ಅವರಿಗೆ ಮಾತ್ರ ತಿಂಗಳಿಗೆ ಇನ್ನೂರು ಮುನ್ನೂರು ರೂಪಾಯಿ ಕೂತಕಡೆ ಬಂದು ಬಿಡ್ತದೆ....ಯಾರು ಕೆಲಸ ಮಾಡ್ತಾರೊ ಅವರಿಗೆ ಹೊಟ್ಟೇಗೆ ಇಲ್ಲ. ಸುಮ್ಮನೆ ಕೂತುಕೊಂಡಿರೋರಿಗೆ ಮಾತ್ರ ಬೊಜ್ಜು ಬೆಳೀತಾ ಹೋಗ್ತದೆ..."

"ಅದು ಶುದ್ಧ ತಪ್ಪು."

"ನೋಡು ಹಾಗೇನೆ ಎಲ್ಲಾ....ದುಡ್ಡಿರೋರು ಏನು ಮಾಡ್ತಾರೆ ಅಂದರೆ ತಮ್ಮ ಹತ್ತಿರ ಇರೊ ಹಣ ಹಾಕಿ ಒಂದು ಫ್ಯಾಕ್ಟರೀನೊ ಒಂದು ಗಿರಣೀನೊ ತೆಗೀತಾರೆ. ಇಲ್ಲ, ಹಳ್ಳಿಗಳಲ್ಲಾದರೆ ನೀನು ನೋಡಿದ ಹಾಗೆ ಜಮೀನು ಕೊಳ್ತಾರೆ. ಆಮೇಲೆ ಕೂಲಿಗಳನ್ನಿಟ್ಟು

ಕೆಲಸ ಮಾಡಿಸ್ತಾರೆ. ಅವರ್ನ ಚೆನ್ನಾಗಿ ದುಡಿಸಿ, ಸರಿಯಾಗಿ ಕೂಲೀನೂ ಕೊಡದೆ ತಾವು ದುಡ್ಡು ಮಾಡಿಕೊಳ್ತಾರೆ.... ಇದು ನಿನಗೆ 'ಶುದ್ಧ ತಪ್ಪು' ಅನ್ನಿಸಿದ ಹಾಗೆ ಇನ್ನೂ ಒಬ್ಬನಿಗೆ ಅನ್ನಿಸಿತು– ಅವನ ಹೆಸರು ಮಾರ್ಕ್ಸ್!?"

"ಯಾರು ಅವನು?"

ನಟರಾಜ ಎದ್ದು ಹೋಗಿ ತನ್ನ ಮೇಜಿನ ಖಾನೆಯಲ್ಲಿ ಮಡಿಸಿಟ್ಟ ಭೂಪಟವನ್ನು ತಂದು ಅದನ್ನು ಅವಳ ಮುಂದೆ ಹರಡಿ ತೋರಿಸುತ್ತಾ ಹೇಳಿದ :

"ಇಲ್ಲಿ ನೋಡು ಇದು ನಾವಿರೊ ಮೈಸೂರು ಸಂಸ್ಥಾನ. ಇದೆಲ್ಲ ಭಾರತ–ನಮ್ಮ ದೇಶ !.... ಇದು ನೋಡಿದೆಯಾ ಇದೆಲ್ಲ ಯೂರೋಪು ಖಂಡ–ಇದರಲ್ಲಿ ಇದಿಷ್ಟು ಮಾತ್ರ ಜರ್ಮನಿ ದೇಶ. ಇಲ್ಲಿ ಹುಟ್ಟಿದೋನು ಆ ಮಾರ್ಕ್ಸ್ ಅನ್ನೋನು. ಅವನು ಬೆಳೆದು ದೊಡ್ಡವನಾಗಿ ಓದಿ, ನೋಡಿ, ಮಾಡಿದ ಮೇಲೆ ಪ್ರಪಂಚಕ್ಕಿರೊ ಕಷ್ಟಕ್ಕೆಲ್ಲಾ ಒಂದೇ ಕಾರಣ ಅಂತ ಅವನಿಗೆ ಹೊಳೀತು– ದುಡ್ಡಿರೋರು, ದುಡ್ಡಿಲ್ಲದ ಕೂಲಿಗಳು ಅನ್ನೋ ಭೇದ ಹೋಗಬೇಕು, ಆ ಭೇದ ಹೋಗಬೇಕಾದರೆ ಕೂಲಿಗಳೆಲ್ಲ ಒಟ್ಟಾಗಿ ಸೇರಿಕೊಂಡು ಒಂದು ಪಕ್ಷ ಅಂತ ಮಾಡಿಕೋಬೇಕು. ಆ ಪಕ್ಷದ ಮೂಲಕ ಹೋರಾಟ ನಡೆಸಬೇಕು.... ಹೀಗಂತ ತೀರ್ಮಾನಕ್ಕೆ ಬಂದ."

"ಹೂ" ಎಂದು ಕುತೂಹಲದಿಂದ ಕೇಳುತ್ತ ಕುಳಿತಳು ದುರ್ಗಿ.

"ನೋಡು ದುರ್ಗಿ. ಈಗ ನಾನಿದ್ದೀನಿ ನನಗೆ ರೈಲಿನಲ್ಲಿ ಇಪ್ಪತ್ತೊಂದು ರೂಪಾಯಿ ಸಂಬಳ ಕೊಡ್ತಾರೆ. ಇದು ನಮ್ಮ ಸಂಸಾರ ನಡೆಸೋಕೆ ಸಾಕಾಗ್ತದಾ?"

"ಖಂಡಿತ ಇಲ್ಲ."

"ಅದಕ್ಕೆ 'ನನಗೆ ಸಂಸಾರಕ್ಕೆ ನೀವು ಕೊಡ್ತಾ ಇರೋ ಸಂಬಳ ಸಾಲೋದಿಲ್ಲ. ನನ್ನ ಸಂಬಳ ಹೆಚ್ಚು ಮಾಡಿಕೊಡಿ' ಅಂತ ನಾನುಹೋಗಿ ರೈಲ್ವೆ ಅಧಿಕಾರಿಗಳನ್ನು ಬೇಡಿದೆ ಅನ್ನು. ಅವರು ಎಂದಿಗೂ ನನ್ನ ಸಂಬಳ ಹೆಚ್ಚಿಸೋದಿಲ್ಲ...ನಾವು ರೈಲ್ವೆ ಕೂಲಿಕಾರರೆಲ್ಲ ಸೇರಿಕೊಂಡು–ಹನ್ನೊಂದು ಸಾವಿರ ರೈಲ್ವೆ ಜನವೂವೆ ಒಟ್ಟಾಗಿ 'ನಮಗೆಲ್ಲ ಸಂಬಳ ಹೆಚ್ಚಿಸಿ. ಇಲ್ಲದೇ ಹೋದರೆ ನಾವೊಬ್ಬರೂ ಕೆಲಸಕ್ಕೆ ಬರೋದಿಲ್ಲಾ' ಅಂತ ಮುಷ್ಕರ ಹೂಡಿದರೆ?"

"ರೈಲೇ ನಡೆಯೋಲ್ಲ !"

"ಹೂ, ನೋಡು ಜಾಣೆ. ರೈಲೇ ನಡೆಯೊಲ್ಲ. ಅದರಿಂದ ಲಾಭ ಹೊಡಿತಾ ಇರೋ ಸರ್ಕಾರಕ್ಕೆ ಬರೋ ದುಡ್ಡು ನಿಂತುಹೋಗ್ತದೆ. ಆಗ ಸರ್ಕಾರದೋರು ಏನು ಮಾಡುತ್ತಾರೆ?

ರೈಲ್ವೆ ಕೆಲಸಗಾರರನ್ನ ಕರೆಸಿ 'ನಿಮ್ಮ ದಮ್ಮಯ್ಯ. ನೀವು ಕೇಳಿದ್ದೆಲ್ಲ ಕೊಡ್ತೀವಿ. ಕೆಲಸಕ್ಕೆ ಬನ್ನಿ' ಅಂತ ಅವರೇ ಬೇಡಿಕೊಳ್ತಾರೆ!"

"ಹಾಗಿದ್ದರೆ ಅದಾದರೂ ಮಾಡಿ."

ದುರ್ಗಿಯ ಮುಗ್ಧತೆಗೆ ನಟರಾಜ ನಕ್ಕ.

"ಅದು ಅಷ್ಟು ಸುಲಭ ಅಲ್ಲ ದುರ್ಗೀ....ಕೂಲಿಕಾರರೆಲ್ಲರೂ ಬೇಗ ಒಟ್ಟಾಗಿ ಸೇರೋದಿಲ್ಲ. ಸಂಘಬಲ ಅವರಿಗಿನ್ನೂ ತಿಳಿದಿಲ್ಲ, ಅವರೆಲ್ಲ ಹೆದರ್ತಾರೆ. ಹಾಗೆಲ್ಲ ತಾವು ಸಂಘ ಅಂತ ಕಟ್ಟಿದರೆ ನಾಳೆ ದಿನ ಸರ್ಕಾರದೋರೆಲ್ಲ ತಮ್ಮನ್ನ ಕೆಲಸದಿಂದ ತೆಗೆದುಹಾಕಿಬಿಟ್ಟಾರೊ ಅಂತ!... ಆದ್ದರಿಂದ ಅವರಿಗೆಲ್ಲ ಹುರಿದುಂಬಿಸಿ, 'ನಾವಿದ್ದೀವಿ ಕಣ್ರಯ್ಯ, ನೀವು ಹೆದರಬೇಡಿ. ನೀವೆಲ್ಲ ಒಟ್ಟಾಗಿ, ನೀವು ಜಗತ್ತೇ ಬೇಕಾರೂ ಜಯಿಸಬಹುದು' ಅಂತ ಯಾರಾದರೂ ಅವರಿಗೆ ಧೈರ್ಯ ಕೊಟ್ಟರೆ ಅವರು ಒಟ್ಟಾಗಿ ಹೋರಾಡ್ತಾರೊ, ಇಲ್ಲವೋ?"

"ಧೈರ್ಯ ಕೊಡೋರೊಬ್ಬರಿದ್ದರೆ ಯಾಕೆ ಹೋರಾಡೋದಿಲ್ಲ?"

"ಹಾಗೆ ಕೂಲಿಕಾರರಿಗೆ 'ನೀವೆಲ್ಲ ಒಗ್ಗಟ್ಟಾಗಿ ಹೋರಾಡಿ. ಗೆದ್ದೇಗೆಲ್ತೀರಿ' ಅಂತ ಭರವಸೆ ಕೊಡೊ ಪಕ್ಷ ಅಂದರೆ ಸಮತಾವಾದಿ ಪಕ್ಷ. ನೀನು ಪ್ರಾರಂಭದಲ್ಲೇ ಕೇಳಿದೇ ನೋಡು 'ಸಮತಾವಾದಿ ಪಕ್ಷ ಅಂದರೆ ಏನು?' ಅಂತ. ಹಾಗಂದರೆ ಇದೇ! ಈ ಜಗತ್ತಿನಲ್ಲಿರೊ ಕೂಲಿಕಾರರ್ನೆಲ್ಲಾ ಒಟ್ಟುಗೂಡಿಸಿ, ಅವರ ಹೊಟ್ಟೆ, ಬಟ್ಟೆಗಾಗಿ ಹೋರಾಟ ನಡೆಸೋದು ಈ ಸಮತಾವಾದಿ ಪಕ್ಷದ ಕೆಲಸ. ಈ ಪಕ್ಷದಲ್ಲಿ ಪಟ್ಟಣದಲ್ಲಿರೊ ಕೂಲಿಗಳು, ಹಳ್ಳಿಗಾಡಿನ ರೈತರು ಇವರೆ ಹೆಚ್ಚಾಗಿ ಇರೋರು. ಓದೋ ವಿದ್ಯಾರ್ಥಿಗಳು ಬಡ ಲಾಯರುಗಳು, ಬಡ ಉಪಾಧ್ಯಾಯರು ಇವರುಗಳು ಕೂಡ ಅನೇಕ ಸಲ ಈ ಪಕ್ಷಕ್ಕೆ ಸೇರಿಕೊಂಡು ಬಡವರಿಗಾಗಿ, ಕೂಲಿಗಳಿಗಾಗಿ ಕೆಲಸಮಾಡ್ತಾರೆ."

"ಓ! ನನಗೆ ಈಗ ಗೊತ್ತಾಯ್ತು, ನೀವು ಯಾಕೆ ಈ ಸಮತಾವಾದಿ ಪಕ್ಷವನ್ನು ಸೇರಿಕೊಂಡಿರೀ ಅಂತ–ಬಡವರಿಗಾಗಿ ಹೊಡೆದಾಡೋದಕ್ಕೆ! ಅಲ್ಲವಾ?"

"ಹೌದು."

"ಸರಿಯೇ ರೈಲು ಕೆಲಸಾನೂ ನೋಡಿಕೊಂಡು ಈ ಸಮತಾವಾದಿ ಪಾರ್ಟಿ ಅಂತ ಇನ್ನೊಂದು ಕೆಲಸ ಮಾಡ್ತೀರಲ್ಲಾ–ನಿಮಗೇನು ಸಂಬಳ ಕೊಡ್ತಾರೆ?"

ಫಕ್ಕನೆ ನಕ್ಕ ನಟರಾಜು.

"ಹುಚ್ಚಿ, ನನಗೆ ಹಾಗೆ ಸಂಬಳ ಬಂದಿದ್ದರೆ ನಿನ್ನ ಕೈಗೆ ತಂದುಕೊಡ್ತಾ ಇರಲಿಲ್ಲವೇನೆ?.... ಇದೆಲ್ಲ ನಮ್ಮ ಸ್ವಂತ ಇರಾದೆಯಿಂದ ಮಾಡೊ ಕೆಲಸ."

"ಹೌದು.... ಈ ಕೆಲಸ ಮಾಡಿ ಎಲ್ಲಾರ್ರೂ ಉದ್ದಾರ ಮಾಡ್ತೀನೀಂತ ಹೊತ್ತು ಹೊತ್ತಿಗೆ ಅನ್ನ, ನೀರಿಲ್ಲದೆ ಅಲೀತಾ ದಿನಾ ಒಣಗಿ ಒಣಗಿ ಕಡ್ಡೀ ಹಾಗೆ ಆಗ್ತಾ ಇದ್ದೀರಲ್ಲಾ, ನಾಳೆ ನಿಮ್ಮನ್ನ ನೋಡ್ಕೋರ್‍ಯಾರು?"

ದುರ್ಗಿಯ ಮಾತು ಕೇಳಿ ನಟರಾಜ ಆಶ್ಚರ್ಯಪಟ್ಟನು. ಮೈಸೂರಿಗೆ ಬಂದ ತರುಣದಲ್ಲಿ ಅವಳು ಹೆದರಿ ಆಡುತ್ತಿದ್ದ ಗ್ರಾಮ್ಯ ಭಾಷೆಗೂ ಈಗವಳು ಧೈರ್ಯವಾಗಿ ಆಡುತ್ತಿದ್ದ ಶುದ್ಧ ಭಾಷೆಗೂ ಇದ್ದ ಅಂತರ ಯಾರಿಗಾದರೂ ವಿಸ್ಮಯ ಹುಟ್ಟಿಸುವಂತಿತ್ತು. ನಟರಾಜನು ಅವಳಿಗೆ ಅಕ್ಷರ ಕಲಿಸಿ ಓದು ಬರಹ ಬರುವಂತೆ ಮಾಡಿದ್ದನು. ಆದ್ದರಿಂದ ಅವಳ ಶುದ್ಧ ಭಾಷೆಗಿಂತ ನಟರಾಜನಿಗೆ ಅವಳ ಧೈರ್ಯ ಆಶ್ಚರ್ಯವನ್ನೂ ಸಂತೋಷವನ್ನೂ ತಂದಿತು... ಹುಸಿನಗು ನಗುತ್ತಲೇ, "ಆ ತ್ಯಾಗಕ್ಕೆಲ್ಲ ಸಿದ್ಧವಾಗಿರಬೇಕು" ಎಂದನು.

ಆ ರಾತ್ರಿ ಬಹಳ ಹೊತ್ತಿನತನಕ ದುರ್ಗಿಯ ಕಣ್ಣಿಗೆ ನಿದ್ದೆಯೇ ಹತ್ತಲಿಲ್ಲ. ನಟರಾಜ ಹೇಳಿದ ಒಂದೊಂದು ಮಾತನ್ನೂ ಸವಿಯುತ್ತಾ ಮಲಗಿದ್ದಳು.

ಬೀಡಿ ಕಾರ್ಮಿಕರ ಸಂಪು ಒಂದೇ ಸಮನೆ ನಡೆದಿತ್ತು. ನಟರಾಜ ದುರ್ಗಿಗೆ ಹೇಳುತ್ತಿದ್ದಂತೆ ಈ ಕೂಲಿಕಾರರು ತಮ್ಮ ಬೆವರು, ರಕ್ತ ಸುರಿಸಿ ಕಟ್ಟಿದ ಬೀಡಿಗಳನ್ನು ಮಾರಿ ಲಕ್ಷಾಂತರ ರೂಪಾಯಿಗಳ ಲಾಭ ಪಡೆಯುತ್ತಿದ್ದರು ಬೀಡಿ ಕಾರ್ಖಾನೆಗಳ ಮಾಲೀಕರು. ಸ್ವತಃ ಒಂದು ಬೀಡಿಯನ್ನೂ ಕಟ್ಟದೆ ದಿನವಹಿ ಮಾಲೀಕ ಸಾವಿರಾರು ರೂಪಾಯಿ ಗಳಿಸಿದರೆ, ಸಾವಿರ ಬೀಡಿ ಕಟ್ಟುತ್ತಿದ್ದ ಕಾರ್ಮಿಕನಿಗೆ ಗಿಟ್ಟುತ್ತಿದ್ದ ಕೂಲಿ ಕೇವಲ ಒಂದೂವರೆ ರೂಪಾಯಿ!...

ಇದಕ್ಕೆ ತಕ್ಕಂತೆ ಎರಡನೇ ಮಹಾಯುದ್ಧ ಬೇರೆ ಆರಂಭವಾಗಿ ಪದಾರ್ಥಗಳ ಬೆಲೆ ಒಂದಕ್ಕೆ ನಾಲ್ಕರಂತೆ ಏರಿತ್ತು. ಆದರೆ, ಅದಕ್ಕೆ ಸರಿಯಾಗಿ ಕಾರ್ಮಿಕನ ಕೂಲಿ ಮಾತ್ರ ಹೆಚ್ಚಲಿಲ್ಲ. ಆದ್ದರಿಂದ ಬೀಡಿ ಕಾರ್ಮಿಕರಿಗೆ ಜೀವನ ಸಾಗಿಸುವುದೇ ದುರ್ಲಭವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅವರು ಕೇಳುತ್ತಿದ್ದುದು ಕೇವಲ ಎರಡು ತಿಂಗಳ ಬೋನಸ್ಸು– ಮತ್ತು ಬೀಡಿ ಕೆಲಸಗಾರರ ಸಂಘಕ್ಕಾಗಿ ದುಡಿಯುತ್ತಿರುವರೆಂದು ಕೆಲಸದಿಂದ ವಜಾ ಮಾಡಲ್ಪಟ್ಟ ಎಂಟು ಜನ ಕೂಲಿಕಾರರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವುದು!.... ಆದರೆ ಇಷ್ಟು ಅಲ್ಪ ಬೇಡಿಕೆಗಳನ್ನೂ ಮಾಲೀಕರು ನಿರಾಕರಿಸಿ ಕಾರ್ಮಿಕರು ಮುಷ್ಕರ ಹೂಡುವಂತೆ ಮಾಡಿದ್ದರು.

ಮೈಸೂರು ನಗರದ ಬೀಡಿ ಕೆಲಸಗಾರರಲ್ಲಿ ಬಹುಮಂದಿ ಮುಸ್ಲಿಮರು. ಬೀಡಿ ಕಾರ್ಖಾನೆಗಳ ಮಾಲೀಕರಲ್ಲೂ ಬಹುಮಂದಿ ಮುಸಲ್ಮಾನರೇ!.... ತಮ್ಮ ಮತ್ತು ಕೂಲಿಕಾರರಲ್ಲಿದ್ದ ಈ ಮತ ಸಂಬಂಧವನ್ನು ದುರುಪಯೋಗಪಡಿಸಿ ಮುಷ್ಕರ ಮುರಿಯಲು ಹವಣಿಸಿದರು ಮಾಲೀಕರು...ಸಿಟಿ 'ಮುಸ್ಲಿಂಲೀಗಿ'ನ ಒಬ್ಬ ಮುಖಂಡನಿಗೆ ಹೇರಳವಾಗಿ

ಹಣ ಸುರಿದು ಅವನ ಸಹಾಯ ಬೇಡಿದರು. ಅವರಿಂದ ಪಡೆದ ಹಣದ ಬದಲಾಗಿ ಕೂಲಿಗಳಿಗೆ ಬುದ್ಧಿ ಹೇಳಿ ಒಲಿಸಿ ಕಾರ್ಮಿಕ ಮುಷ್ಕರವನ್ನು ಮುರಿಯಬೇಕಿತ್ತು ಆ ಮುಖಂಡ!

ಸರಿ. ಆತ ಮದೀನ ಹೋಟೆಲಿನ ಮೇಲ್ಭಾಗದ ಕೋಣೆಯೊಂದರಲ್ಲಿ ಇಳಿದುಕೊಂಡು, ಸಂಪು ನಡೆಸುತ್ತಿದ್ದ ಬೀಡಿ ಕೆಲಸಗಾರರ ಸಂಘದ ಮುಸ್ಲಿಂ ಮುಖಂಡರಿಗೆ ಒಂದು ಪತ್ರ ಬರೆದ. ಕೂಲಿಕಾರ–ಮಾಲೀಕರ ಮಧ್ಯೆ ಎದ್ದಿರುವ ಮನಸ್ತಾಪವನ್ನು ತಕ್ಷಣ ನಿಲ್ಲಿಸುವುದು ಸೂಕ್ತವೆಂದೂ ಮಾಲೀಕರೊಡನೆ ಮಾತಾಡಿ ಇಬ್ಬರಿಗೂ ರಾಜಿ ಮಾಡಿಸಲು ತಾನು ಶ್ರಮಿಸುವುದಾಗಿಯೂ, ಅದಕ್ಕಾಗಿ ಕೂಡಲೆ ತನ್ನನ್ನು ಬಂದು ಕಾಣುವುದೆಂದೂ ಆ ಪತ್ರದಲ್ಲಿ ನಮೂದಿಸಿದ್ದ.

ಆತನ ಪತ್ರವನ್ನು ಕೂಲಿಕಾರರ 'ಮುಷ್ಕರ ಸಮಿತಿ'ಯಲ್ಲಿ ಪರಿಶೀಲಿಸಲಾಯಿತು. ನಟರಾಜನ "ಹೋಗಿ ಅವನನ್ನು ಕಾಣುವುದರಲ್ಲಿ ತಪ್ಪೇನಿಲ್ಲ. ಗೌರವಯುತವಾದ ಒಪ್ಪಂದಕ್ಕೆ ಬರಲು ನಾವು ಸದಾ ಸಿದ್ಧ" ಎಂಬ ಮಾತನ್ನು ಎಲ್ಲರೂ ಒಪ್ಪಿದರು. ಹುಸೇನ್ ಮತ್ತು ಮಹಮ್ಮದ್ ಪೀರ್ ಇಬ್ಬರೂ ಹೋಗಿ ಆ ಮುಸ್ಲಿಂಲೀಗಿನ ಮುಖಂಡರನ್ನು ಭೇಟಿ ಮಾಡುವುದೆಂದು ತೀರ್ಮಾನಿಸಲಾಯಿತು.

ನಿರ್ಣಯದಂತೆ ಹುಸೇನ್ ಮತ್ತು ಪೀರ್ ಮದೀನ ಹೋಟೆಲಿನ ಮೇಲುಗಡೆಯ ಕೋಣೆಯನ್ನು ಹೊಕ್ಕಾಗ ಆ ಮುಖಂಡ ಹಾಸಿಗೆಯ ಮೇಲೆ ಸಿಗರೇಟ್ ಸೇದುತ್ತಾ ಕಾಲು ಚಾಚಿ ಮಲಗಿದ್ದ. ಚಾಚಿದ ಕಾಲನ್ನು ಹಿಂದೆಳೆದು ಕೇವಲ ಕೂಲಿಗಳಿಗೆ ಗೌರವ ತೋರಿಸುವುದು ಸಿರಿವಂತನಾದ ಆತನಿಗೆ ಹೀನಾಯವಾಗಿತ್ತು. ಆದ್ದರಿಂದ ಚಾಚಿದ ಕಾಲನ್ನು ಚಾಚಿಕೊಂಡು "ಅವ್ ಬೈಠೋ–" ಎಂದ.

ಅವನು ಎದುರಿಗೆ ಕೂರಲು ತೋರಿಸಿದ ಜಾಗ–ನೆಲ!

ನುರಿತ ಕಾರ್ಮಿಕ ಮುಖಂಡರಾದ ಹುಸೇನ್ ಮತ್ತು ಪೀರ್ ಇಬ್ಬರೂ 'ಇರಲಿ' ಎಂದು ನೆಲದ ಮೇಲೆ ಮಂಡಿಸಿದರು.

ಆ ಉರಿಬೇಸಿಗೆಯ ಮಧ್ಯಾಹ್ನದಲ್ಲೂ ದಪ್ಪನೆಯ ಷರ್ವಾನಿ ಹಾಕಿ, ಪಾಯಿಜಾಮ ಧರಿಸಿದ್ದ ಆತ.

ಉರಿದು ಬಂದ ಸಿಗರೇಟ್ ತುಂಡಿನ ಕೆಂಡದಲ್ಲಿ ಮತ್ತೊಂದು ಸಿಗರೇಟ್ ಹಚ್ಚಿ ನಿಧಾನವಾಗಿ 'ದಂ' ಎಳದು ಅವರ ಕಡೆಗೆ ದೃಷ್ಟಿ ಹೊರಳಿಸಿದ :

"ನಿಮ್ಮ ಹೆಸರು?"

"ನನ್ನ ಹೆಸರು ಹುಸೇನ್–ಈತ ಪೀರ್–ಮಹಮದ್ ಪೀರ್" ಹುಸೇನ್ ಪರಿಚಯ ಮಾಡಿಕೊಟ್ಟ.

"ಬಹಳ ಸಂತೋಷ."

ಸ್ವಲ್ಪ ಹೊತ್ತು ಮೌನ. ಸಿಗರೇಟಿನ ಹೊಗೆ ಗಾಳಿಯಲ್ಲಿ ನುಲಿದು ನುಲಿದು ಮೇಲೆದ್ದು ಕೋಣೆಯಲ್ಲೆಲ್ಲಾ ಹರಡುತ್ತಿತ್ತು. ಸಿಗರೇಟಿನ ತೆರೆಯ ಹಿಂದೆ ಆ ಮುಖಂಡ ಖಾದಿರನ ಮುಖ ನರಿಯಂತೆ ಕುಹಕವಾಗಿ ಹುಸೇನನಿಂದ ಪೀರನಿಗೆ ಪೀರನಿಂದ ಹುಸೇನನೆಡೆಗೆ ತನ್ನ ದೃಷ್ಟಿ ಹರಿಸುತ್ತಿತ್ತು. ಹಾಗೆ ನೋಡಿ ಅವರಿಬ್ಬರ ಯೋಗ್ಯತೆಯ ತುಲನೆ ಮಾಡುತ್ತಿತ್ತು. ಧಾಳಿ ಮಾಡುವ ಮೊದಲು ಶತ್ರುವಿನ ಬಲಹೀನ ಜಾಗಗಳನ್ನು ಅರಸುತ್ತಿತ್ತು.

ಹುಸೇನ್ ಮತ್ತು ಪೀರ್ ಇಬ್ಬರೂ ಸಮಾಧಾನವಾಗಿ ಶಾಂತಚಿತ್ತರಾಗಿ ಅವನನ್ನೇ ದಿಟ್ಟಿಸುತ್ತ ಕುಳಿತಿದ್ದರು.

ಖಾದಿರ್ ಸಿಗರೇಟ್ ಹೊತ್ತಿಸುತ್ತಾ ಅವರ ಕಡೆ ನೋಡದೆಯೇ ಹೇಳಿದ :

"ನಾನು ಮಾಲೀಕರ ಹತ್ತಿರ ಐತಲ್ಲಾ ಮಾತಾಡಿದ್ದೀನಿ, ಚಾಕರೀ ಇಂದ ತಗದು ಹಾಕಿರೋ ಕೂಲಿಗಳ್ನ ಹಿಂದಕ್ಕೆ ತಕ್ಕಳಾಕೆ ಅವರೆಲ್ಲ ಒಪ್ಪಗಂಡವ್ರೆ, ಆದ್ರೆ ಒಂದೇ ಷರತ್ತು...." ಎಂದು ಗಾಳಿಯಲ್ಲಿ ಕರಗುತ್ತಿದ್ದ ಸಿಗರೇಟಿನ ಹೊಗೆಯನ್ನೇ ನೋಡುತ್ತಿದ್ದ.

"ಏನು ಷರತ್ತು?" ಹುಸೇನ್ ಮತ್ತು ಪೀರ್ ಇಬ್ಬರೂ ಒಟ್ಟಿಗೇ ಕೇಳಿದರು.

ಸಿಗರೇಟಿನ ಬೂದಿಯನ್ನು ತುದಿ ಬೆರಳಿನಿಂದ ಮಿಡಿದು, "ಷರತ್ತು ಅಂತಾ ದೊಡ್ಡದೇನೂ ಅಲ್ಲ. ಆ ಸಮತಾವಾದಿಗಳ್ನ ನಿಮ್ಮ ಸಂಘದಿಂದ ಒದ್ದು ಓಡಿಸಬೇಕು, ಅಷ್ಟೆ ನೀವು ಮಾಡಿದ್ರೆ ಐತಲ್ಲಾ ಬಾಕೀದು ನಾನು ನೋಡಕೊತ್ತೀನಿ" ಎಂದು ಹೇಳಿದ ಖಾದಿರ್.

"ಅರೆ ! ಅದು ಹೆಂಗೆ ಆಯಿತ್ಯೆತೆ? ನಮ್ಮ ಸಂಘ ಕಟ್ಟಿದೋರೇ ಅವರು! ಅವರಿಲ್ಲದೇ ಹೋಗಿದ್ರೆ ನಮ್ಮ ಪರವಾಗಿ ಯಾರು ಹೊಡೆದಾಡ್ತಾ ಇದ್ದರು? ಹಿಂದೆ ಒಂದು ಸಲ ಹೊಡೆದಾಟ ನಡೆಸಿ ಕೂಲಿ ಹೆಚ್ಚಿಸಿಕೊಟ್ರಲ್ಲಾ, ಅದ್ನ ಇನ್ನಾರು ಗೆದ್ದು ಕೊಡ್ತಾ ಇದ್ದರು?" ಹುಸೇನ್ ರಭಸದಿಂದಲೇ ಮಾತಾಡುತ್ತಿದ್ದ.

"ಏ ಕ್ಯಾ ಹುಸೇನ್?...ಹಿಂಗೆ ಮಾತಾಡ್ತೀ–ಸಮತಾವಾದಿ ಪಕ್ಷ ಹೊಂಟೋದ್ರೆ ನಮ್ಮ ಮುಸ್ಲಿಂಲೀಗ್ ಇಲ್ಲಾ?– ಅದ್ನ ಸೇರಿಕೊಂಡ್ರೆ ಆಯ್ತು.... ನಾವು ಐತಲ್ಲಾ ಒಂದು ಕೂಲಿಕಾರ್‍ರ ಸಂಘ ಕಟ್ಟಬೇಕು ಅಂತ ಇದ್ದೀವಿ– ನೀವೆಲ್ಲ ಜಾತೀಲಿ ಮುಸಲ್ಮಾನರು. ಅದ್ಕೇ ಸೇರಬೇಕು. ಮುಸಲ್ಮಾನ್ ಆಗಿ ಹುಟ್ಟಿದ ಮೇಲೆ ಮುಸ್ಲಿಂಲೀಗಿಗೆ ಸೇರದೆ ಇರೋದು ದೊಡ್ಡ ತೆಪ್ಪು. ಹರಾಮಖೋರ್ ಹಿಂದುಗಳ ಜೊತೆ ಸೇರೋದು ಐತಲ್ಲಾ ಇನ್ನೂ ದೊಡ್ಡ ತೆಪ್ಪು."

ಖಾದಿರ್ ಹಿಂದೂ–ಮುಸ್ಲಿಂ ಭೇದ ತೆಗೆದದ್ದು ನೋಡಿ ಕೃದ್ಧನಾದ ಹುಸೇನ್.

"ನಮ್ಮ ಕೂಲಿಕಾರರಿಗೆ ಯಾವ ಜಾತಿ ಭೇದಾನೂ ಇಲ್ಲ. ನಾವೆಲ್ಲ ಒಂದೇ ಜಾತಿ–ಕೂಲಿ ಮಾಡೋ ಜಾತಿ–ನಮಗೆಲ್ಲ ಇರೋದು ಒಂದೇ ಗೋಳು ಹಸಿವು !.... ಹಿಂದೂ ಕೂಲಿ, ಮುಸ್ಲಿಂ ಕೂಲಿ ಅಂತ ಇಲ್ಲ ನಮ್ಮ ತಾವು. ಹೊಟ್ಟೆ ಹೊಡೆದಾಟದಲ್ಲಿ ನಾವೆಲ್ಲ ಒಂದೇ...ನಮ್ಮ ರಕ್ತ ಕುಡಿದು ಮೈ ಬೆಳೆಸ್ತಾ ಇರೋ ಮಾಲೀಕರು, ಹಿಂದೂ ಆಗ್ಲಿ, ಮುಸ್ಲಿಂ ಆಗ್ಲೀ ಎಲ್ಲ ಒಂದೇ ಕಳ್ಳ ಗುಂಪಿಗೆ ಸೇರಿದೋರು, ಅವರದೇ ಬೇರೆ ಒಂದು 'ಜಾತಿ' ಅಂತ ನಮಗೆ ಯಾವತ್ತೋ ಗೊತ್ತಾಗಿ ಹೋಗೈತೆ...."

ಸಿಗರೇಟನ್ನು ಉದ್ವೇಗದಿಂದ ಬೇಗ ಬೇಗ ಸೇದುತ್ತಾ ಏನೋ ಹೇಳುವುದರಲ್ಲಿದ್ದ ಖಾದಿರ್. ಅಷ್ಟರಲ್ಲಿ ಪೀರ್ ಏನನ್ನೊ ನೆನೆದುಕೊಂಡು ಹೇಳತೊಡಗಿದ "ನಿಂಗೆ ಗೆಪ್ತಿ ಐತಾ ಹುಸೇನ್? ಹೋದ ವರ್ಸ ಆ 'ಲಕ್ಸ್ಮಿ ಬೀಡಿ' ಕಾರ್ಕಾನೇಲಿ ಮುಸ್ಕರ ನಡೀತಲ್ಲಾ–ಆಗ ಆ ಹಿಂದೂ ಮಾಲೀಕನ ಜೊತೇಗೆ ಸೇರಿಕೊಂಡು ಮುಷ್ಕರ ಮುರಿದು ಹಾಕ್ನಿಲ್ಲವಾ ಈ ಮುಸ್ಲಿಂ ಮಾಲೀಕರು? ಇದೆಲ್ಲಾ ಬಿಲ್‌ಕುಲ್ ಸುಳ್ಳು. ಹಿಂದೂ ಮಾಲೀಕ ಮುಸ್ಲಿಂ ಮಾಲೀಕ ಇಬ್ಬರಿಗೂ ಇರೋದು ಒಂದೇ ಆಸೆ–ನಮ್ಮಂತಾ ಗರೀಬರ ಕೈಲಿ, ನಾವು ಹಿಂದೂಗಳಾಗ್ಲೀ, ಮುಸಲ್ಮಾನರಾಗ್ಲೀ, ಚೆಂದಾಗಿ ಗೇಯಿಸಿಕೊಂಡು ದುಡ್ಡುಮಾಡಿ, ಬಾರಿ ಬಾರಿ ಮನೆ ಕಟ್ಟಿಸಿಕೊಂಡು ದೊಡ್ಡ ದೊಡ್ಡ ಮೋಟಾರ್ ಕೊಂಡುಕೊಂಡು ಮಜಾ ಮಾಡೋದೊಂದೇ ಅವರಿಗೆ ಬೇಕಾದ್ದು. ನಾನೂ ಮುಸಲ್ಮಾನ ಅಂತ ತಿಳಕೊಂಡು ಐತಲ್ಲಾ ಯಾವನಾದ್ರೂ ಕೂಲಿ ಈ ಮುಸ್ಲಿಂ ಮಾಲೀಕರ ಮನೆಗೆ ಹೋದ್ರೆ, ಕುತ್ತಿಗೆ ಮಿಲಾಯಿಸಿ ಆಚೆಗೆ ದಬ್ಬಿಸ್ತಾರೆ... ಜವಾನ್ರ ಕೈಲಿ, ಒಂದು ಒಳ್ಳೇ ಮಾತೂ ಆಡಾಕ್ಕಿಲ್ಲ...." ಎನ್ನುತಾ ಖಾದಿರನನ್ನೇ ಕಣ್ಣು ಕೆಂಪಗೆ ಮಾಡಿಕೊಂಡು ನೋಡಿದ ಪೀರ್.

ಖಾದಿರ್ ಪೀರನ ಮುಖವನ್ನು ಹೆದರುತ್ತ ಹೆದರುತ್ತ ನೋಡಿದ.

ಹುಸೇನ್ ಮತ್ತೆ ಪ್ರಾರಂಭಿಸಿದ :

"ನಿಮ್ಮ ಮುಸ್ಲಿಂಲೀಗು ಕಟ್ಕೊಂಡು ನಮ್ಮಂತಾ ಗರೀಬರಿಗೆ ಏನು ಬಂತು ಖಾದಿರ್‌ಸಾಬ್?... ಈ ಹಿಂದೂ ಮಾಸಭೆ, ಕಾಂಗ್ರೆಸ್ಸೂ, ಮುಸ್ಲಿಂಲೀಗು ಯಾವುದೂ ಬೇಡ ನಮ್‌ಗೆ. ನಮ್ಮಂತಾ ಕೂಲಿಕಾರರಿಗೆಲ್ಲ ಜಗತ್ತಿನಲ್ಲಿರೋದು ಐತಲ್ಲಾ ಒಂದೇ ಪಕ್ಷ–ಸಮತಾವಾದಿ ಪಕ್ಷ! ಬಾಕಿ ಪಾರ್ಟಿಗೋಳೆಲ್ಲ ದುಡ್ಡಿರೋರ ಪಾರ್ಟಿಗೋಳು. ಅವು ನಮ್ಮಂತಾರ್ನ ತಮ್ಮ ಪಾರ್ಟಿಗೋಳಿಗೆ ಸೇರಿಸಿಕೊಳ್ಳೋದು ಯಾಕೆ ಅಂದ್ರೆ 'ನಾವು ಬಡವರ ಸೇವೆ ಮಾಡ್ತೀವಿ' ಅಂತ ತೋರಿಸ್‌ಕೊಂಡು, ಒಳಗೇ ತಮ್ಮ ಪಾರ್ಟಿ ಬಲ ಮಾಡಿಕೊಂಡು ಆಟ ಆಡಕ್ಕೇ...."

ಪುಂಖಾನುಪುಂಖವಾಗಿ ಹುಸೇನ್ ಮತ್ತು ಪೀರ್ ಇಬ್ಬರಿಂದಲೂ ಬಂದ ಮಾತುಗಳ ಬಿರುಸಿಗೆ ತತ್ತರಿಸುತ್ತ, ಮಿಕಿ ಮಿಕಿ ಕಣ್ಣು ಬಿಡುತ್ತಿದ್ದ ಖಾದಿರ್.

"ಹಂಗಾದ್ರೆ ಈ ಷರತ್ತಿಗೆ ನೀವು ಒಪ್ಪಾಕಿಲ್ಲವಾ?"–ನರಿಯಂತೆಯೇ ಬಂದಿತು ಖಾದಿರನ ಪ್ರಶ್ನೆ.

"ಖಂಡ್ತಾ ಒಪ್ಪಾಕಿಲ್ಲ. ಯಾವ ಷರತ್ತೂ ಇಲ್ದೆ ನಮ್ಮ ಕೂಲಿಕಾರ ಸಿನೇಹಿತರ್ನ ಹಿಂದಕ್ಕೆ ತಕ್ಕೋಬೇಕು. ನಾವು ಕೇಳಿರೊ ಎಲ್ಡು ತಿಂಗಳು ಬೋನಸ್ ಕೊಟ್ಟುಬುಡಬೇಕು ಹಂಗಿದ್ದರೇ ರಾಜಿ–!" ಎಂದು ನಿಷ್ಠುರವಾಗಿ ನುಡಿದ ಹುಸೇನ್.

ನಿರುತ್ತರನಾದ ಖಾದಿರ್ ಸಿಗರೇಟಿನ ತುದಿಯ ಕೆಂಪನ್ನೇ ದಾರ್ಶನಿಕನಂತೆ ನಿಟ್ಟಿಸುತ್ತಿದ್ದ.

"ನಮ್ಮ ಷರತ್ತಿಗೆ ಐತಲ್ಲಾ ನಿಮ್ಮದು ಉತ್ತರ ಏನು ಖಾದಿರ್ ಸಾಹೇಬ್?" ಎಂದು ಕೇಳಿಯೆಬಿಟ್ಟ ಪೀರ್.

ಖಾದಿರ್ ಉಸಿರೆತ್ತದೆ ಮೌನವಾಗಿ ಸಿಗರೇಟನ್ನು ಸೇದುತ್ತಲೇ ಇದ್ದ.

* * * * *

ಮತದ ಹೆಸರಿನಲ್ಲಿ ಮುಷ್ಕರವನ್ನು ಮುರಿಯಲು ಹೀಗೆ ವಿಫಲರಾದ ಮಾಲೀಕ ವರ್ಗ 'ಪುಂಡ'ರಿಗೆ ದುಡ್ಡುಕೊಟ್ಟು ಪುಸಲಾಯಿಸಿ ನಟರಾಜ ಮೊದಲಾದ ಕಾರ್ಮಿಕ ಮುಖಂಡರನ್ನು ಚೆನ್ನಾಗಿ ಹೊಡೆದು ಹಾಕುವಂತೆ ಏರ್ಪಾಟು ಮಾಡಿದರು.

ಒಂದು ರಾತ್ರಿ ಬೀಡಿ ಮುಷ್ಕರಕಾರರನ್ನು ಸಂಧಿಸಿ ಮಾತಾಡಿಕೊಂಡು ಮಂಡಿಯಿಂದ ನಟರಾಜನೊಬ್ಬನೇ ತನ್ನ ಮನೆಗೆ ಹಿಂದಿರುತ್ತಿದ್ದನು. ಆ ಸಮರಾತ್ರಿಯ ಕತ್ತಲಿನಲ್ಲಿ ಅವನು ನಡೆಯುತ್ತಿರುವಾಗ ಮಾಲೀಕ ವರ್ಗ ಗೊತ್ತು ಮಾಡಿದ್ದ 'ಪುಂಡ'ರ ತಂಡ ಹೊಂಚು ಸಾಧಿಸಿ ಹಿಂದಿನಿಂದ ಬಂದು ಮೇಲೆ ಬಿದ್ದರು. ತನಗೇನಾಗುತ್ತಿದೆ ಎನ್ನುವುದರ ಅರಿವಾಗುವುದರಲ್ಲಿ ನಟರಾಜನನ್ನು ಕೆಳಗೆ ಕೆಡವಿ 'ಹಣ್ಣುಗಾಯಿ, ನೀರುಗಾಯಿ' ಆಗುವಂತೆ ಚೆನ್ನಾಗಿ ಜಜ್ಜಿದರು. ಅಷ್ಟರಲ್ಲಿ ಅದೇ ದಾರಿಯಲ್ಲಿ ಬರುತ್ತಿದ್ದ ಯಾರೊ ಮೂರು ಜನರು 'ಇಲ್ಲೇನೋ ಆಗುತ್ತಿದೆ. ನೋಡೋಣ' ಎಂದು ಹತ್ತಿರ ಬರುವಷ್ಟರಲ್ಲಿ ಆ ಪುಂಡರು ಹೆದರಿ ಪಲಾಯನ ಮಾಡಿದರು.

ಆ ಮೂವರು ಭೂಮಿ ಕಚ್ಚಿದ ನಟರಾಜನನ್ನೆತ್ತಿ ಕೂರಿಸಿ ಗಾಳಿ ಹಾಕಿ ಉಪಚರಿಸಿದರು. ಸ್ವಲ್ಪ ಹೊತ್ತಿನ ಬಳಿಕ ನಟರಾಜನಿಗೆ ಹೋಗಿದ್ದ ಪ್ರಜ್ಞೆ ಮರಳಿತು. ಅವನಿಂದ ಅವನ ಮನೆಯೆಲ್ಲಿರುವುದೆಂದು ಗೊತ್ತು ಮಾಡಿಕೊಂಡು, ಟಾಂಗಾ ಗಾಡಿಯಲ್ಲಿ ಅವನನ್ನು ಕರೆದುತಂದು ಅವನ ಮನೆಗೆ ಬಿಟ್ಟು ಹೋದರು, ಆ ಜನ.

ನಟರಾಜನನ್ನು ಆ ಅವಸ್ಥೆಯಲ್ಲಿ ನೋಡಿದ ದುರ್ಗಿ ದಿಗ್ಭ್ರಾಂತಳಾದಳು. ನಟರಾಜನ ಮೈ ಮುಖಗಳೆಲ್ಲ ಕಿತ್ತು ಗಾಯಗಳಾಗಿ, ಅವುಗಳಿಂದ ಸೋರಿದ ರಕ್ತದಲ್ಲಿ ಅವನ ಅಂಗಿಯೆಲ್ಲಾ ತೋಯ್ದು ಭಯಂಕರವಾಗಿತ್ತು. ಆ ಸಮಯದಲ್ಲಿ ಮನೆಯ ಯಜಮಾನ ಶ್ರೀರಾಮುಲು ನಾಯಿಡು ಮತ್ತು ಆತನ ಪತ್ನಿ ಅವಳ ಸಹಾಯಕ್ಕೆ ಬರದಿದ್ದರೆ ಅವಳಿಗೆ ಏನು ಮಾಡಬೇಕೆಂಬುದೇ ತೋರುತ್ತಿರಲಿಲ್ಲ. ನಾಯಿಡು ಅಷ್ಟು ಹೊತ್ತಿನಲ್ಲಿ ಎದ್ದು ಹೋಗಿ ಆಚೆ ಬೀದಿಯಲ್ಲಿದ್ದ ಡಾಕ್ಟರ್ ಮುನಿಸ್ವಾಮಿಯವರನ್ನು ಏಳಿಸಿಕೊಂಡು ಬಂದು ಆ ಗಾಯಗಳಿಗೆಲ್ಲ ಔಷಧ ಹಾಕಿಸಿದ. ಹಾಗೆ ಔಷಧ ಹಾಕಿ ಹೊರಗೆ ಬಂದ ಡಾಕ್ಟರ್ ಮುನಿಸ್ವಾಮಿ ನಾಯಿಡುವಿನೊಡನೆ "ಈತನಿಗೆ ಬಹಳ ಏಟು ಬಿದ್ದುಬಿಟ್ಟಿದೆ ಮಿಸ್ಟರ್ ನಾಯಿಡು. ಮೊದಲೇ ಬಡಕಲ ಶರೀರ, ಹೀಗೆ ಅವರು ಜಜ್ಜಿ ಹಾಕಿರೋವಾಗ ಈತ ಹೆಚ್ಚು ಕಾಲ ಬದುಕೊ ಹಾಗೆ ಕಾಣಲಿಲ್ಲ. ಶ್ವಾಸಕೋಶಕ್ಕಂತೂ ತುಂಬಾ ಜಖಂ ಆಗಿದೆ" ಎಂದು ಹೇಳಿ ಹೋದರು.

ಮುಂದೆ ಹತ್ತು ಹದಿನೈದು ದಿನ ನಿದ್ರಾಹಾರಗಳಿಲ್ಲದೆ ಎಚ್ಚರಿಕೆಯಿಂದ ತನ್ನ ಪತಿಯ ಮಗ್ಗುಲಲ್ಲೇ ಕುಳಿತು ಶುಶ್ರೂಷೆ ಮಾಡಿದಳು ದುರ್ಗಿ. ಅವಳು ಗಂಡನಿಗೆ ಮಾಡುತ್ತಿದ್ದ ಉಪಚಾರದಲ್ಲಿ ಆ ಮನೆಯವರೂ, ಯಶೋದಮ್ಮ, ಅನಂತ, ನಂಜುಂಡಸ್ವಾಮಿಯವರೂ ಹಲವಾರು ಬಗೆಯಲ್ಲಿ ನೆರವಾದರು.

ನಟರಾಜನಿಗೆ ಏಟು ಬಿದ್ದ ರಾತ್ರಿ ಉಳಿದ ಕಾರ್ಮಿಕ ಮುಖಂಡರನ್ನೂ ಚೆಚ್ಚಿಸಬೇಕೆಂಬ ಹಂಚಿಕೆ ಮಾಲೀಕರದಾಗಿತ್ತು. ಆದರೆ ಆ ದಿನ ಉಳಿದ ಮುಖಂಡರು ಇನ್ನಾವುದೊ ಕೆಲಸಗಳನ್ನು ಹಚ್ಚಿಕೊಂಡು ಬೇರೆ ಜಾಗಗಳಿಗೆ ಹೋಗಿದ್ದುದರಿಂದ ಅವರೆಲ್ಲ ಮಾಲೀಕರ ದೌಷ್ಟ್ಯದಿಂದ ತಪ್ಪಿಸಿಕೊಂಡಂತಾಗಿತ್ತು. ನಟರಾಜನಿಗೆ ಏಟು ಬಿದ್ದುದನ್ನು ತಿಳಿದು ಅವರು ಮತ್ತೂ ಜಾಗರೂಕರಾದರು. ಇದರಿಂದ ಪುಂಡರಿಗೆ ಅವರನ್ನು ಹೊಡೆಯಲು ಅವಕಾಶವೇ ಸಿಗಲಿಲ್ಲ.

ನಟರಾಜನ ಮೇಲೆ ಈ ರೀತಿ ಮಾಲೀಕರ ವರ್ಗ ನಡೆಸಿದ ಅತ್ಯಾಚಾರ ಇಡೀ ಬೀಡಿ ಕೆಲಸಗಾರರನ್ನು ರೊಚ್ಚಿಗೆಬ್ಬಿಸಿ, ಅವರ ನಿರ್ಧಾರದ ಉಕ್ಕನ್ನು ಮತ್ತೂ ಹರಿತಗೊಳಿಸಿತು ... ಮುಷ್ಕರ ಎಂದಿನಂತೆ ನಿಲ್ಲದೆ ಸಾಗಿತು. ಹಾಸಿಗೆ ಹಿಡಿದು ಮಲಗಿದ್ದರೂ ಕಾರ್ಮಿಕ ಮುಖಂಡರು ನಟರಾಜನಲ್ಲಿಗೇ ಬಂದು ಸಲಹೆ ಪಡೆದು ಹೋಗುತ್ತಿದ್ದರು. ಇದರ ಸುಳಿವು ತಿಳಿದ ಮಾಲೀಕ ವರ್ಗ ನಟರಾಜನೊಬ್ಬನನ್ನು ಜೈಲಿಗೆ ಸೇರಿಸಿದರೆ ಈ ಪುಂಡಾಟವೆಲ್ಲ ನಿಂತು ಹೋಗುವುದೆಂದು ಬಗೆದು ಸರ್ಕಾರದ ನೆರವು ಬೇಡಿತು. ಸಮತಾವಾದಿ ಪಕ್ಷವನ್ನು ಪ್ರತಿಪಕ್ಷವಾಗಿ ಭಾವಿಸಿದ್ದ ಸರ್ಕಾರವೂ ತನಗೆ ವಿರುದ್ಧವಾದ ಶಕ್ತಿಯನ್ನು ಮೊಳಕೆಯಲ್ಲೇ ಹೊಸಕಿ ಹಾಕಲು ಹಾತೊರೆದು ಮುಂದೆ ಬಂದಿತು... ಮಧ್ಯರಾತ್ರಿಯ ಸಮಯದಲ್ಲಿ,

ಎಲ್ಲರೂ ಮಲಗಿದ್ದ ವೇಳೆ ನಟರಾಜನಿಗಿನ್ನೂ ಸರಿಯಾಗಿ ತಿರುಗಾಡುವಷ್ಟು ಶಕ್ತಿಯು ಇಲ್ಲದಿರುವಾಗ ಸರ್ಕಾರ ಕಳುಹಿಸಿದ ಪೋಲೀಸರು ಅವನನ್ನು ಬಂಧಿಸಿ ಸೆರೆಮನೆ ಸೇರಿಸಿದರು.

ದಿಕ್ಕು ತೋರದೆ, ಗೋಳುಗರೆಯುತ್ತ, ಇತ್ತ ಕರ್ತವ್ಯತಾಮೂಢಳಾಗಿ ಕುಳಿತಿದ್ದ ದುರ್ಗಿಗೆ ಮಾರನೆಯ ದಿನ ಯಶೋದಮ್ಮ, ನಂಜುಂಡಸ್ವಾಮಿಯರು ಬಂದು "ಹೆದರಿಕೊಬೇಡ ದುರ್ಗಿ. ಇವತ್ತು ನಾಳೆ ಬಿಟ್ಟುಬಿಡ್ತಾರೆ" ಎಂದು ಧೈರ್ಯ ಹೇಳಿದರು.

"ಬಿಡದೆ !–ಅವರೇನು ಕದ್ದಿದಾರ?"– ಕಣ್ಣೀರು ಸುರಿಸುತ್ತಿದ್ದರೂ ಅವಳು ಹಾಗೆಂದಾಗ ಎಲ್ಲರೂ ದುರ್ಗಿಯಲ್ಲಾಗಿದ್ದ ಮಾರ್ಪಾಟಿಗೆ ಅಚ್ಚರಿಪಟ್ಟರು.

"ಹೋಗಲಿ ನಟರಾಜನ್ನ ಜೈಲಿನಿಂದ ಬಿಡೋವರೆಗೆ ಇಲ್ಲಿ ನೀನೊಬ್ಬಳು ತಾನೆ ಹೆಂಗೆ ಇರ್ತೀ. ಬಾ, ನಮ್ಮನೇಲಿದ್ದುಕೊ. ನಿನ್ನ ಗಂಡ ಬಂದ ಮೇಲೆ ಬೇಕಾರೆ ಬರೀವಂತೆ" ಎಂದು ಅವಳ ಪರಿಸ್ಥಿತಿ ಗಮನಿಸಿ ಮನೆಗೆ ಕರೆದನು ನಂಜುಂಡಸ್ವಾಮಿ.

ದುರ್ಗಿ ಒಪ್ಪದೆ ಗತ್ಯಂತರವಿರಲಿಲ್ಲ. ತನ್ನ ಪತಿಯನ್ನು ಯಾವಾಗ ಬಿಡುತ್ತಾರೊ, ಏನೊ? ಅಲ್ಲಿಯವರೆಗೆ ಆ ಮನೆಯಲ್ಲಿ ಒಬ್ಬಳೇ ಇರುವುದಾದರೂ ಹೇಗೆ?–ಊರಿಗೆ ಹೋಗೋಣವೆಂದರೆ, ಅಷ್ಟರಲ್ಲಿ ತನ್ನ ಗಂಡನನ್ನು ಬಂದೀಖಾನೆಯಿಂದ ಬಿಟ್ಟುಬಿಟ್ಟರೊ?– ಆಗ ಅವರನ್ನು ನೋಡಿಕೊಳ್ಳಲು ತಾನು ಹತ್ತಿರ ಇರಬೇಡವೇ?– ನಂಜುಂಡ ಮಾವನ ಮನೆಯಲ್ಲಿದ್ದರೆ ಯಾವುದಕ್ಕೂ ಒಳ್ಳೆಯದು–ಹೀಗೆಲ್ಲ ಚಿಂತಿಸಿ ದುರ್ಗಿ ತಮ್ಮ 'ಮನೆ'ಯ ಬಾಗಿಲು ಬೀಗ ಹಾಕಿಕೊಂಡು ನಂಜುಂಡಸ್ವಾಮಿಯ ಮನೆಗೆ ಹೋಗಿ ಇದ್ದುಕೊಂಡಳು.

ಒಂದು ದಿನ, ಎರಡು ದಿನ, ಹತ್ತು, ಇಪ್ಪತ್ತು ದಿನಗಳುರುಳಿದವು. ತಿಂಗಳ ಹಿಂದೆ ತಿಂಗಳು ಬಂದುಹೋಯಿತು. ನಟರಾಜನಿಗೆ ಬಿಡುಗಡೆಯಾಗುವ ಸೂಚನೆಯೇ ಕಾಣಲಿಲ್ಲ. ದುರ್ಗಿ ಉತ್ಕಂಠಿತಳಾಗಿ ನಟರಾಜನ ಬಿಡುಗಡೆಯ ದಿನವನ್ನೇ ಎದುರು ನೋಡುತ್ತಿದ್ದಳು.

೪೫

"ಇನ್ನೇಟು ಜೀನ ಹಿಂಗೆ ನಿರೀಕ್ಷ್ಣೆ ಮಾಡಿಕೊಂಡು ಕುಂತುಕೊಂಡಿದ್ದಿ ಮೊಗಾ? ಎಂದು ಒಂಬೊತ್ತು ವರ್ಷದಿಂದ ಈತಾವಿಗಂಟ 'ಈ ಸಲೀದುಳಿತದೆ– ಆ ಸಲೀದುಳೀತದೆ' ಅಂತ ಕಾದು ಕಾದು ಸಾಕಾಗೋಯ್ತು–ಒಂದೂ ಉಳೀನಿಲ್ಲ...ಯೇನೋ ಇವಳಿಗೆ ಮಕ್ಕಳ ಫಲ ಇರೋದು ಕಾಣೆ. ಇನ್ನೂ ತಡಮಾಡಿ ಸುಕವೇನಾ–ಇನ್ನ್ಯೊಂದೆಲ್ಲಾದರೂ ಹೆಣ್ಣು ನೋಡಿ ಸುಮ್ಮಕೆ ಇನ್ನೊಂದು ಲಗ್ಣ ಮಾಡಿಕೊ...."

ಮಂಗಳೆಯಲ್ಲಿ ಇದುವರೆಗೆ ಮಕ್ಕಳುಳಿಯಲಿಲ್ಲವೆಂದು ಸುಬ್ಬರಾಯಿ ನೊಂದು ಕೊಂಡಿದ್ದರೂ ಮಕ್ಕಳಿಗೋಸ್ಕರ ಬೇರೊಂದು ಮದುವೆಯಾಗಲು ಅವನಿಗೆ ಸುತಾರಾಂ

ಬೇಕಿರಲಿಲ್ಲ. ಆ ಕಾರಣದಿಂದ ಅಕ್ಕನ ಮಾತನ್ನು ಎಂದಿನಂತೆ ಪುರಸ್ಕರಿಸುವುದಾಗಲಿಲ್ಲ ಅವನಿಗೆ.

"ಅಯ್ಯೊ ಲಗ್ಣಾನೂ ಬ್ಯಾಡ ಯೇನೂ ಬ್ಯಾಡ ಬುಡು. ನಮ್ಮ ಹಣೇಲಿ ಬರದಂಗಾಯ್ತದಂತೆ" ಎಂದು ನಿರುತ್ತೇಜಕವಾಗಿ ನುಡಿದ.

ಆದರೆ ನರಸಮ್ಮ ಅಷ್ಟಕ್ಕೆ ಸುಮ್ಮನಾಗುವ ಪ್ರಕೃತಿಯೇ?– ಅವಳ ತಲೆಗೆ ಒಂದು ಗುಂಗು ಹೊಕ್ಕಿತೆಂದರೆ ತೀರಿತು. ಅದನ್ನು ಕೊನೆ ಮುಟ್ಟಿಸುವವರೆಗೆ ಅವಳಿಗೆ, ಮರಿನಿಂಗಿ ಹೇಳುವಂತೆ 'ನಿದ್ದೆಯಿಲ್ಲ, ನಿರಾಳವಿಲ್ಲ.'

"ಬ್ಯಾಡ ಅಂದ್ರೆ ಹೆಂಗಾದಾತು?... ತೌರು ಉಳಿ ಬಾಡದ? ಯಾಕೆ ನಿನ್ನ ಹೆಂಡತಿ ಯೇನಾರ ಅಂದುಕೊಂಡಾಳು ಅಂತಲಾ?" ಎಂದು ಅಲ್ಲೇ ಇದ್ದ ಮಂಗಳೆಯ ಮುಖವನ್ನು ನಿರೀಕ್ಷಿಸಿದಳು. ಮಂಗಳೆ ಅವಳ ಮಾತಿಗೆ ಯಾವ ವಿಧವಾದ ಭಾವವನ್ನೂ ಪ್ರಕಟಿಸದೆ ಮೌನವಾಗಿರಲು "ಇವಳು ಯೇನು ಅನ್ನೋದದೆ....ಇವಳೊಬ್ಬಳ ನೋಡಿಕೊಂಡು ಮನೇನೇಯ, ಒಂದು ಕೊನೇಗೂ ಇಲ್ಲದಂಗೆ, ತೊಡೆದುಬುಡಾಕಾದಾತಾ?" ಎಂದಳು.

ಸುಬ್ಬರಾಯಿ ಒಂದು ಸಲ ಕಳವಳದಿಂದ ಮಂಗಳೆಯತ್ತ ದೃಷ್ಟಿ ಹರಿಸಿದ.

"ಈಗೇನು ಓಟು ಸೂರುಹೋಗಿರೋದು?... ಇನ್ನೂ ಒಂದು ನಾಕು ವರ್ಸ ನೋಡಿಬುಡಾವೇಳು."

"ಇನ್ನೂ ನಾಕು ವರ್ಸ ನೋಡೇದೇನದೆ?– ಈವತ್ತು ಬೇಯದೇ ಇದ್ದ ಬ್ಯಾಳೇಕಾಳು ನಾಳೀಕೆ ಬೆಂದಾವಾ?–ಯೆಲ್ಲಾ ಹೇಳಿದಂಗೆ ಹರಕೇನೂ ಮಾಡಿದ್ದಾಯ್ತು....ಸುಮ್ಮಕೆ ನಾ ಹೇಳಿದಂಗೆ ಕೇಳಿ ಲಗ್ಣ ಮಾಡಿಕೊ" ಎಂದು ಒತ್ತಾಯಪಡಿಸಿದಳು.

ಈಗೆರಡು ತಿಂಗಳಿಂದ 'ಲಗ್ಣ ಆಗು–ಲಗ್ಣ ಆಗು' ಎಂಬ ಒಂದೇ ಪಲ್ಲವಿಯನ್ನು ನರಸಮ್ಮನ ಬಾಯಿಂದ ಕೇಳಿ ಕೇಳಿ ಬೇಸತ್ತಿದ್ದ ಸುಬ್ಬರಾಯಿ. ಆದರೆ ಚಿಕ್ಕಂದಿನಿಂದಲೂ ಅಕ್ಕನ ಆಡಳಿತದಲ್ಲೇ ಬೆಳೆದ ಈತ ಇನ್ನು ಹೆಚ್ಚು ಕಾಲ ನರಸಮ್ಮನ ಇಚ್ಛೆಗೆ ವಿರುದ್ಧ ವರ್ತಿಸುವುದು ಶಕ್ಯವಿರಲಿಲ್ಲ. ಹೀಗಿರುವಾಗ ಒಂದು ದಿನ ಮಂಗಳೆ ಅವನಿಗೆ ಊಟ ಬಡಿಸುತ್ತಾ ಹೇಳಿದಳು :

"ಯಾಕೆ ಹಾಗೆ ಹಟ ಮಾಡೀರಿ?– ದೊಡ್ಡವ್ವ ಹೇಳೋದು ಸರಿ. ನೀವು ಸಂಪಾದನೆ ಮಾಡೋದೆಲ್ಲ ಯಾರು ಊಟ ಮಾಡಬೇಕು?– ನಿಮ್ಮದೂ ಅಂತ ಒಂದು ಕೊನೆ ಆದರೆ ಇದ್ನೆಲ್ಲ ಅನುಭವಿಸಕ್ಕಾದರೂ ಆಗ್ತದೆ..."

"ಹಗಂತ ಬಂದೋಳಿಗೆ ಎರಡು ಮಕ್ಕಳಾದ್ರೆ ನಿನ್ನ ಪಾಡೋ?" ಎಂದು ಕಣ್ಣೀರು ತಂದುಕೊಂಡ ಸುಬ್ಬರಾಯಿ.

"ನನ್ನ ಕಟ್ಟಿಕೊಂಡು ಮನೆ ಹಾಳು ಮಾಡಿಕೊಳ್ಳಾಕೆ ಆದಾತಾ?.... ನಾನೆಲ್ಲಿ ಹೋದೇನು?–ಸುಮ್ಮನೆ ಇನ್ನೊಬ್ಬಳ ಮಾಡಿಕೊಂಡು ಮನೆ ಉದ್ಧಾರ ಮಾಡೋದು ನೋಡಿ."

ಮಂಗಳೆಯೂ ಹೀಗೆ ನುಡಿದ ಬಳಿಕ 'ಮದುವೆಯಾಗಲೇಬಾರದು' ಎಂದಿದ್ದ ಸುಬ್ಬರಾಯಿಯ ನಿರ್ಧಾರ ಸ್ವಲ್ಪವಾಗಿ ಸಡಿಲವಾಗುತ್ತ ಬಂದು ಕಡೆಗೆ ನರಸಮ್ಮನ ಹಟವೇ ಗೆಲ್ಲುವಂತಾಯಿತು. ಪುಟ್ಟತಾಯಿಯ ತಂಗಿ ಗಿರಿಜೆಯನ್ನೇ ತಂದುಕೊಳ್ಳುವುದೆಂದು ತೀರ್ಮಾನಿಸಿಯೂ ಬಿಟ್ಟಳು ನರಸಮ್ಮ.... ತನ್ನ ಮಗಳ ಗಂಡ ಮತ್ತೊಂದು ವಿವಾಹವಾಗುವನೆಂಬ ಸಮಾಚಾರ ಕೇಳಿ ಪಾರ್ವತಮ್ಮ ಎದೆ ಎದೆ ಬಡಿದು ಅತ್ತಳು.

ಮಂಗಳೆಗೆ ಇದಾವುದೂ ಬೇಕಾಗಿರಲಿಲ್ಲ. ನಟರಾಜನನ್ನು ಹೊಡೆದು ಕಾರಗೃಹಕ್ಕೆ ಹಾಕಿದ ಸುದ್ದಿಯನ್ನು ಕೇಳಿದಂದಿನಿಂದ ಅವಳಿಗೆ ಜಗತ್ತೇ ಶೂನ್ಯವಾಗಿ ಪರಿಣಮಿಸಿತ್ತು. ಅವನೆಲ್ಲಿದ್ದರೂ ಚೆನ್ನಾಗಿದ್ದಾನೆ ಎಂಬ ಒಂದೇ ಯೋಚನೆ ಅವಳ ಎದೆಗುದಿಯನ್ನು ಮೆಟ್ಟಿ ಅವಳು ಹೇಗೊ ಎಲ್ಲವನ್ನೂ ಸಹಿಸಿಕೊಂಡು ಬದುಕು ಸಾಗಿಸುವಂತೆ ಮಾಡಿತ್ತು. ದುರ್ಗಿಯನ್ನು ಹೊಡೆಯುವುದು ನಿಲ್ಲಿಸಿ, ಅವಳಿಗೆ ಹೊಂದಿ ನಡೆಯುತ್ತಿದ್ದಾನೆಂದು ಕೇಳಿ ತೃಪ್ತಿಪಟ್ಟಿದ್ದಳು. ತನ್ನ ನಟರಾಜ ಮನುಷ್ಯತ್ವವನ್ನು ಕಳೆದುಕೊಂಡು ದುರ್ಗಿಯನ್ನು ರಾಕ್ಷಸನಂತೆ ಹಿಂದೆ ಹಿಂಸೆ ಮಾಡುತ್ತಿದ್ದುದು ಅವಳನ್ನು ಚಿಂತೆಗೀಡುಮಾಡಿತ್ತು. ಈಗ ಆತನ ಬಾಳು ಒಂದು ನೆಲೆಗೆ ಬಂದಿತೆನ್ನುವಾಗ ನಟರಾಜನನ್ನು ಬಂದೀಖಾನೆಗೆ ಒಯ್ದರೆನ್ನುವ ಸುದ್ದಿ ಅವಳ ಆಸೆಯನ್ನು ನಿರ್ದಾಕ್ಷಿಣ್ಯವಾಗಿ ಬುಡಮೇಲು ಮಾಡಿತ್ತು.

ಒಂದು ದಿನ ಅವರ ಮನೆಗೆ ಕಲ್ಲಹಳ್ಳಿಯಿಂದ ವಿಷಕಂಠಯ್ಯ ಬಂದಿಳಿದನು. ಅವನ ಜೊತೆಗೆ ಒಂದು ಸುದ್ದಿಯೂ ಬಂದಿತು–ಈಗಾರು ತಿಂಗಳಿಂದಲೂ ಜೈಲಿನಲ್ಲಿ ಕೊಳೆಯುತ್ತಿದ್ದ ನಟರಾಜನಿಗೆ ಬಿಡುಗಡೆಯಾಗಿರುವುದೆಂದು ವಿಷಕಂಠಯ್ಯ ಸಂತೋಷ ಸಮಾಚಾರವನ್ನು ಎಲ್ಲರಿಗೂ ತಿಳಿಸಿದನು. ಆ ಸುದ್ದಿಯನ್ನು ಕೇಳಿ ಮಂಗಳೆಯಷ್ಟೇ ಸಂತೋಷಪಟ್ಟವಳೆಂದರೆ–ಚೆಲುವಮ್ಮನೊಬ್ಬಳೆ ! "ಕಡೀಕಾದ್ರೂ ಬುಟ್ಟರಲ್ಲವ್ವಾ !–ನಾ ಯೇನೂ ಬುಡನೇವಲ್ಲರೇನೊ ಅಂದುಕೊಂಡಿದ್ದೆ" ಎಂದು ನಿಟ್ಟುಸಿರುಬಿಟ್ಟವಳು "ಅಯ್ಯೊ. ನನ್ನ ಮಗಳು ಜಿನಗಂಟ ಏಟುಗೋಳಾಡಿದ್ದದೋ" ಎಂದು ಹಲುಬಿದಳು.

"ಈಗ ಹೇಗಿದ್ದಾನಂತೆ ಮಾವ?"

ನಟರಾಜನ ಸದ್ಯದ ಸ್ಥಿತಿಯನ್ನು ಅರಿಯುವ ಕುತೂಹಲದಲ್ಲಿ ಯಾರಿದ್ದಾರೆ, ಯಾರಿಲ್ಲ ಎಂಬ ಪರಿವೆಯೇ ಇಲ್ಲದೆ ಕೇಳಿಬಿಟ್ಟಳು ಮಂಗಳೆ.

"ಸಣ್ಣಕೆ ಜರ ಬತ್ತಾ ಇದ್ದಾವಂತೆ."

"ಔಸ್ದ ಯೇನಾರ ಕೊಡಸ್ತಾ ಇದ್ದಾರಂತ ಚಿಕ್ಕಯ್ಯ" ಚೆಲುವಮ್ಮ ತವಕದಿಂದ ಪ್ರಶ್ನಿಸಿದಳು.

"ಕೊಡಸ್ದೇ ಇದ್ದಾರ ಮೈಸೂರು ಪಟ್ಟಣದಲ್ಲಿದ್ದುಕೊಂಡು?–ನಂಜುಂಡಸ್ವಾಮಿ ಅವ್ರೆ, ನೋಡಕೊತ್ತಾರೆ" ಎಂದ ವಿಷಕಂಠಯ್ಯ "ನಮ್ಮ ಪಾರತೀಯೂ ಒಂಟವ್ಳೆ ಮೈಸೂರಿಗೆ, ಅವನ್ನ ನೋಡಿಕೊಂಡು ಬರಾವ ಅಂತ....ಅದ್ಕೇ ಮಂಗ್ಳಿ ಯೇನಾರ ಬರೋದಿದ್ದರೆ ಕರಕೊಂಡು ಬನ್ನಿ ಅಂತ ಕಳಿಸವ್ಳೆ ನನ್ನ" ಎಂದು ತಾನು ಕೊತ್ತೇಗಾಲಕ್ಕೆ ಬಂದ ಕಾರಣ ತಿಳಿಸಿದನು.

ಒಡನೆಯೇ ಚೆಲುವಮ್ಮ, "ನಾನೂ ಬರ್ತೀನ ಕನ ಚಿಕ್ಕಯ್ಯ" ಎಂದು ಹೊರಟು ನಿಂತಳು.

೪೬

ಮೊದಲೇ ಪುಂಡರಿಂದ ಏಟು ತಿಂದು ಜರ್ಝರಿತವಾಗಿದ್ದ ನಟರಾಜನ ಶ್ವಾಸಕೋಶವನ್ನು ಆರು ತಿಂಗಳ ಜೈಲುವಾಸ ಮತ್ತೂ ಹದಗೆಡಿಸಿತ್ತು. ಜ್ವರ ಬರುತ್ತಿದ್ದುದರಿಂದ ಜೊತೆಗೆ ಕೆಮ್ಮೂ ಆರಂಭವಾಗಿತ್ತು. ಜೈಲಿನಲ್ಲಿ ಅವನನ್ನು ಒಂದು ಪ್ರಾಣಿಗಿಂತಲೂ ಕಡೆಯಾಗಿ ಕಂಡು ಹೊರಗೆ ನೂಕಿದ್ದರು. ಅವನನ್ನು ಹೀಗೆ ಕನಿಷ್ಠವಾಗಿ ಕಾಣಲು ಅವನು ಸಮತಾವಾದಿ ಆಗಿದ್ದನೆಂಬುದೇ ಬಹುತೇಕ ಕಾರಣವಾಗಿತ್ತು. ಹಿಂದೆ ಅವನು ವಿದ್ಯಾರ್ಥಿಯಾಗಿದ್ದು ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿದ್ದಾಗ ಜೈಲಿನಲ್ಲಿ ಅವನನ್ನು ಇಷ್ಟು ಕಠಿಣವಾಗಿ ಕಂಡಿರಲಿಲ್ಲ !– ಅಲ್ಲದೆ ಅವನನ್ನು ಆರು ತಿಂಗಳ ಕಾಲ ಕಾರಾಗೃಹದಲ್ಲಿಡಲು ಯಾವ ಸಕಾರಣಗಳೂ ಇರಲಿಲ್ಲ. ಮಾಲೀಕರ ಸುಳ್ಳು ಆಪಾದನೆಗಳು ಮತ್ತು ಸುಳ್ಳು ಸಾಕ್ಷ್ಯಗಳು ಅವನನ್ನು ಅಷ್ಟು ದೀರ್ಘಕಾಲ ಸೆರೆಯಲ್ಲಿ ಕೊಳೆಯುವಂತೆ ಮಾಡಿದ್ದವು.

ಜೈಲಿನಿಂದ ಬಿಡುಗಡೆಯಾದ ನಟರಾಜನನ್ನು ನಂಜುಂಡಸ್ವಾಮಿ ತನ್ನ ಮನೆಗೇ ಕರೆದು ತಂದು ಇರಿಸಿಕೊಂಡ. ಅವನು ಮನೆಗೆ ಬಂದ ಏಳೆಂಟು ದಿನಗಳಲ್ಲಿ ಪಾರ್ವತಮ್ಮ, ಚೆಲುವಮ್ಮ, ಮಂಗಳೆಯರೂ ಬಂದರು. ನಟರಾಜನನ್ನು ನೋಡುತ್ತಲೂ ಪಾರ್ವತಮ್ಮ, "ಅಯ್ಯೋ ನನ್ನ ಕಂದಾ–ಚಕಳ ಮೂಳೆ ಬುಟ್ಟುಕೊಂಡದಲ್ಲಾ !– ಉಣ್ಣಕ್ಕೆ ಕೊಡ್ತಿದ್ದರೊ ಇಲ್ಲವಪ್ಪ ಅಲ್ಲೀ?–" ಎಂದು ಅಳುವುದಕ್ಕೆ ಪ್ರಾರಂಭಿಸಿದಳು.

ಜೊತೆಗೆ ಚೆಲುವಮ್ಮ, ಮಂಗಳೆಯರೂ ಬಿಕ್ಕಿ ಬಿಕ್ಕಿ ರೋದಿಸಲುಪಕ್ರಮಿಸಿದರು. ಯಶೋದಮ್ಮ, ಆದಿಲಕ್ಷ್ಮಿಯರು ಎಷ್ಟು ಹೇಳಿದರೂ ಅವರಿಬ್ಬರಿಗೂ ದುಃಖ ಶಮನವಾಗಲಿಲ್ಲ.

ಕಡೆಗೆ ನಟರಾಜ ಅಕ್ಕನನ್ನುದ್ದೇಶಿಸಿ, "ಇದ್ಯಾಕಕ್ಕ ಹೀಗೆ ದುಃಖ ಮಾಡ್ತೀಯೆ?... ನನಗೇನಾಗಿದೆ ಅಂತ?– ಸ್ವಲ್ಪ ದಿನ ಸುಧಾರಿಸಿಕೊಂಡರೆ ಎಲ್ಲ ಸರಿಯಾಗ್ತದೆ" ಎಂದು

ಧೈರ್ಯ ಹೇಳಿದ ಬಳಿಕ, ಬಹಳ ಹೊತ್ತಿನ ಮೇಲೆ, ಬಹು ಪ್ರಯಾಸದಿಂದ ಎಲ್ಲರೂ ಕಣ್ಣೀರೊರೆಸಿಕೊಂಡರು.

ಅವರೆಲ್ಲರೂ ಬಂದ ದಿನ ಹೀಗೆ ಭಯಂಕರವಾಗಿ ಕಂಡ ನಟರಾಜನ ಕಾಯಲೆ ಕಾಲಕ್ರಮೇಣ ಉತ್ತಮಗೊಳ್ಳುವ ಚಿಹ್ನೆ ತೋರುತ್ತಾ ಬಂದಿತು. ಜ್ವರ ಸಣ್ಣದಾಗಿ ಬರುತ್ತಲೇ ಇದ್ದರೂ ಕೆಮ್ಮಲು ನಿಂತಂತಿತ್ತು.

ಒಂದು ರಾತ್ರಿ ಮನೆಯವರೆಲ್ಲ ಒಟ್ಟಿಗೆ ಸೇರಿರುವಾಗ ನಂಜುಂಡಸ್ವಾಮಿಯನ್ನುದ್ದೇಶಿಸಿ ಪಾರ್ವತಮ್ಮ, "ನಮ್ಮ ನಟ್ರಾಜನ ಕೆಲಸದ ಇಚಾರ ಯೇನು ಚಿಕ್ಕಯ್ಯ..ಮಂತೆ ಆ ರೈಲಿನಲ್ಲೇ ಸೇರಿಸಿಕೊಂಡಾರಾ?" ಎಂದು ಕೇಳಿದಳು.

"ಇನ್ನು ಅದರ ಸುದ್ದಿ ಯಾಕೆ ಪಾರತೀ?–ಅವನನ್ನು ಜೈಲಿಗೆ ಹಾಕಿದಾಗಲೇ ಆ ಕೆಲಸದಿಂದಲೂ ತೆಗೆದುಹಾಕಿಬಿಟ್ಟರು...ನಾನೂ ಮೊದಲಿನಿಂದ ಅವನಿಗೆ 'ಹುಷಾರಾಗಿರು, ಹುಷಾರಾಗಿರು' ಅಂತ ಹೇಳುತ್ತಲೇ ಬಂದೆ. ಆದ್ರೆ ಅವನು ಕೇಳಲಿಲ್ಲ. ಏನೋ ಬಡವರಿಗೆಲ್ಲ ಸಹಾಯ ಮಾಡ್ತೀನಿ ಅಂತ ಹೊರಟ. ಆದ್ರೆ ದುಡ್ಡಿರೋರು ಸುಮ್ಮನೆ ಇದ್ದಾರಾ?–ಸರ್ಕಾರವೇ ಅವರದಾಗಿರೋವಾಗ ಅವರೇನು ಬೇಕಾದರೂ ಮಾಡಬಹುದು–ಪುಂಡರನ್ನು ಬಿಟ್ಟು ಹೊಡೆಸಿದ್ರು, ಆಮೇಲೆ ಸುಳ್ಳು ನೆಪ ತೆಗೆದು ಜೈಲಿಗೂ ಸೇರಿಸಿಬಿಟ್ಟರು. ಮುಖ್ಯ ಇವನು ಹುಷಾರಾಗಿರಲಿಲ್ಲ. ಒಂದೇ ಏಟಿಗೆ ಪ್ರಪಂಚಾನೇ ತಳಕೆಳಕ ಮಾಡಿ ದುಡ್ಡಿಲ್ಲದೇ ಇರೋರಿಗೆಲ್ಲ ದುಡ್ಡು ಕೊಡಿಸ್ತೀನಿ ಅಂತ ಹೊರಟ. ಈಗಲೇ ಅದೆಲ್ಲ ಹ್ಯಾಗೆ ಸಾಧ್ಯ ಹೇಳು?"

ನಟರಾಜನಿಗೆ ಕೆಲಸ ಹೋಯಿತೆಂದು ತಿಳಿದು ಪಾರ್ವತಮ್ಮ ದಿಙ್ಮೂಢಳಾದಳು.

"ಮುಂದೆ ಯೇನಪ್ಪ ಗತಿ–? ಆಯಿಕೊಂಡು ತಿನ್ನುತ್ತಿದ್ದ ಕೋಳಿ ಕಾಲು ಮುರಿದ್ರು ಅನ್ನೋ ಹಂಗೆ ಆಯ್ತಲ್ಲಾ? ಬರೋ ಇಪ್ಪತ್ತೊಂದು ರೂಪಾಯಿಗೂ ಕಲ್ಲು ಬಿತ್ತಾ...." ಎಂದು ಒಂದೇ ಸಮನೆ ಪ್ರಲಾಪ ಮಾಡತೊಡಗಿದಳು.

ಆಗ ಅನಂತ ಅವಳನ್ನು ಸಮಾಧಾನಪಡಿಸುತ್ತಾ, "ಅಳಬೇಡ ಸುಮ್ಮನಿರಕ್ಕಾ... ಕೆಲಸ ಹೋದ್ರೆ ಏನಂತೆ?–ನಾವೆಲ್ಲ ಇಲ್ಲವಾ?.... ನನ್ನ ಜೊತೇಲಿ ನಮ್ಮ ಅಂಗಡೀಲೆ ಕೆಲಸ ನೋಡಿಕೊಂಡಿದ್ರೆ ಆಯ್ತು" ಎಂದು ತನ್ನ ಮಾವನ ಕಡೆ ಮುಖ ತಿರುಗಿಸಿದನು.

ಚಿನ್ನಸ್ವಾಮಿಯೂ ಸಂತೋಷದಿಂದ ಒಪ್ಪಿಕೊಂಡ.

"ಅದೂ ಒಳ್ಳೇದೆ. ನಂಗೂ ಅಂಗಡೀಲಿ ಕೂತುಕೊಳ್ಳೋಕೆ ಈಗ ಆಗ್ತಾ ಇಲ್ಲ. ನೀನಂತು ಯಾವಾಗಲೂ ಚಿತ್ರ ಬರಿತ್ಲೇ ಕುಳಿತಿರ್ತೀಯೆ. ನಟ್ರಾಜ ಆದರೆ ಒಂದು ಕೆಲಸ

ಹಿಡೀತು ಅಂದರೆ ಅದನ್ನ ಕೊನೆ ಮುಟ್ಟಿಸೋತನಕ ಕೈ ಬಿಡೋದಿಲ್ಲ. ಅವನು ನಿನ್ನ ಜೊತೆ ಸೇರಿಬಿಟ್ಟರಂತೂ ನಂಗೆ ಸಂತೋಷವೇ– ನಮ್ಮ ಅಂಗಡೀನ ಅವನು ಅಭಿವೃದ್ಧಿಪಡಿಸ್ತಾನೇ ಅನ್ನೋದರಲ್ಲಿ ಯಾವ ಸಂದೇಹವೂ ಇಲ್ಲ" ಎಂದು ಹೇಳಿ ನಟರಾಜನ ಕಾರ್ಯತತ್ಪರತೆಯಲ್ಲಿ ತನಗಿದ್ದ ವಿಶ್ವಾಸವನ್ನು ಚಿನ್ನಸ್ವಾಮಿ ವ್ಯಕ್ತಪಡಿಸಿದ.

ಈ ಮಾತು ಕೇಳಿ ಎಲ್ಲರಿಗೂ ಸಂತೋಷವಾಯಿತು.

ಪಾರ್ವತಮ್ಮನಂತೂ ಅನಂತನನ್ನು ಅಪ್ಪಿಕೊಂಡು, "ನನ್ನ ಕಂದಾ... ದೇವರು ನಿನ್ನ ಚೆಂದಾಗಿ ಮಡಗಲಿ" ಎನ್ನುತ್ತಾ ಆನಂದಭಾಷ್ಪ ಸುರಿಸಿದಳು.

ನಟರಾಜನಿಗೆ ಇದಕ್ಕಿಂತ ಆನಂದಭಾಷ್ಪ ಹರಿಸುವ ವಸ್ತು ಆ ಮನೆಯಲ್ಲಿ ಆಗಲೇ ಹುಟ್ಟಿತ್ತು–ಅದು ಅನಂತನ ಮಗಳು ಲೀಲಾ !

ಒಂದು ವರ್ಷದ ಹಿಂದೆ ಆ ಶಿಶುವನ್ನೆತ್ತಿ ನಟರಾಜ ಎಲ್ಲರೊಡನೆಯೂ ಹಾಸ್ಯವಾಗಿ, "ನೋಡಿ ಎಲ್ಲಾ ಈ ಲೀಲ ನಮ್ಮ ಅನಂತೂ ತದ್ರೂಪು !.... ಅವನ ಹಾಗೆ ಸಣ್ಣ ಕಣ್ಣು....ತುಂಡು ಮೂಗು....ನೋಡಿ ನೋಡಿ ಅವನ ಹಾಗೆ ಹುಬ್ಬು ಗಂಟುಹಾಕಿಕೊಳ್ತಾ ಇರೋದನ್ನ!" ಎನ್ನುತ್ತಿರುವಂತೆ, ಪಾರ್ವತಮ್ಮ, "ದಿಟ ದಿಟ.... ಅವರಪ್ಪನ ರೂಪ್ನೇ ಹರಿದು ಹತ್ತಿಸಿಕೊಂಡು ಬಂದಿದೆ" ಎಂದಳು.

ಆಗ ವಿಶಾಲಿ ಕುಹಕವಾಗಿ, "ಅದೆಲ್ಲ ಸರಿ. ಆದ್ರೆ ಬಣ್ಣದಲ್ಲಿ ಮಾತ್ರ ಸದ್ಯ ಅಪ್ಪನ್ನ ಹೋಲಲ್ಲ" ಎಂದು ತನ್ನ ಬಣ್ಣವನ್ನು ಹಿರಿದು ಮಾಡಿ ಜಂಭ ಕೊಚ್ಚಿದಳು.

ವಿಶಾಲಿಯ ಮಾತು ಅನಂತನನ್ನು ಕೆಣಕಿತು. ಅವನು ತಟ್ಟನೆ, "ಸಾಕು ಸುಮ್ಮನಿರೆ. ನೀನು ಹೊಳೆದು ಹೋಗದು ಅಷ್ಟರಲ್ಲೇ ಇದೆ. ನೀನು ದಿನಾ ಹುಯ್ದುಕೊಳ್ಳೋ ಒಂದು ಇಂಚು ಪೌಡರ್ ತೊಳೆದುಹಾಕಿಬಿಟ್ಟರೆ ನಿಂದೂ ನನ್ನ ಹಾಗೇ ಗ್ಯಾರಂಟಿ ಬಣ್ಣ!" ಎಂದು ಹೇಳಿ ಎಲ್ಲರನ್ನೂ ನಗಿಸಿದ.

ಹೀಗೆ ದಿನಕಳೆದಂತೆ ನಟರಾಜ ಗುಣಮುಖನಾಗುತ್ತಿರುವಂತೆ ತೋರಿತು. ಇನ್ನು ಭಯವಿಲ್ಲವೆಂದು ಪಾರ್ವತಮ್ಮನೂ ಚೆಲುವಮ್ಮನೂ ಊರಿಗೆ ತೆರಳಲು ಅನುವಾದರು. ಹಾಗೆ ಅವರು ಅಷ್ಟು ಬೇಗ ಊರಿಗೆ ಮರಳಲು ಇನ್ನೂ ಒಂದು ಮಹತ್ತರ ಕಾರಣವಿತ್ತು– ಪಾರ್ವತಮ್ಮನಿಗೆ ಎಂಟು ತಿಂಗಳು ತುಂಬಿತ್ತು!... ಅವಳ ಹೆರಿಗೆಗೆ ಚೆಲುವಮ್ಮನೂ ಹೊರಟಿದ್ದರು. ಜೊತೆಗೆ ಮಂಗಳೆಯೂ ಹೊರಟಳು.

ಪಾರ್ವತಮ್ಮ ನಂಜುಂಡಸ್ವಾಮಿಯೊಡನೆ, "ಚಿಕ್ಕಯ್ಯ....ನಟ್ರಾಜ್ನ ನಮ್ಮೊಂದಿಗೇ ಊರಿಗೆ ವಸಿ ಜಿನ ಕರಕೊಂಡೋಗಿ ಉಪಚಾರ ಮಾಡಬೇಕು ಅಂತ ಚೆಲುವೀನೂ ನಾನೂವೆ ಮಾಡಿಕೊಂಡಿವಿ...." ಎಂದು ತಮ್ಮಿಬ್ಬರ ಅಪೇಕ್ಷೆಯನ್ನು ವ್ಯಕ್ತಪಡಿಸಿದಳು.

"ಅದು ಹೇಗೆ ಆಗ್ತದೆ ಪಾರತಿ?.... ಮುನಿಸ್ವಾಮಿ ಡಾಕ್ಟರು ಇನ್ನೂ ಔಷಧ ಕೊಡೋದು ನಿಲ್ಲಿಸೇ ಇಲ್ಲ!... ನೀವು ಹಳ್ಳೀಗೆ ಕರಕೊಂಡು ಹೋಗಿ ಎಲ್ಲಿ ಪಂಚಾಯಿತಿ ಹತ್ತುತ್ತೀರಿ ಬೇಡ ಸುಮ್ಮನಿರಿ. ಚೆಂದಾಗಿ ವಾಸಿಯಾದ ಮೇಲೆ ಬೇಕಾದ್ರೆ ಒಂದೆರುಡು ತಿಂಗಳು ಇದ್ದು ಬರ್ತ್ತಾನಂತೆ."

ನಂಜುಂಡಸ್ವಾಮಿಯ ಮಾತು ಅವರಿಗೂ ಸೂಕ್ತವೆಂದೆನಿಸಿ ಇಬ್ಬರೂ ಸುಮ್ಮನಾದರು.

ಬಸ್ಸಿಗೆ ಹೊರಡುವಾಗ ಪಾರ್ವತಮ್ಮ ಇಪ್ಪತ್ತು ರೂಪಾಯಿಗಳನ್ನು ತನ್ನ ಸೊಂಟದಿಂದ ತೆಗೆದು ನಂಜುಂಡಸ್ವಾಮಿಯ ಕೈಗಿಡುತ್ತಾ, "ನಟ್ರಾಜ್ನ ಔಸ್ದಿ ಕರ್ಚಿಗೆ...ಅದ್ಕೆ ಇದ್ಕೆ....ಬೇಕಾಯ್ತದೆ. ಇಟ್ಟುಕೊ ಚಿಕ್ಕಯ್ಯ" ಎಂದಳು.

"ಇದೇನು ಪಾರತಿ?.... ತಕ್ಕೊ, ತಕ್ಕೊ" ಎಂದು ನಂಜುಂಡಸ್ವಾಮಿ ಅವಳಿತ್ತ ಹಣವನ್ನು ಅವಳ ಕೈಗೇ ಪುನಃ ಇಡಲು ಹೋದನು.

"ಸುಮ್ಮಕೆ ಮಡಕ್ಕೊ ಚಿಕ್ಕಯ್ಯ. ಸಂಪಾದನೆ ಮಾಡೋನು ಒಬ್ಬ.... ತಿನ್ನೋರು ನಾಕು ಜನ...ಔಸ್ದಿ ಕರ್ಚೇನು ಕಮ್ಮಿ ಅದಾತಾ?.... ಅದರಲ್ಲೂ ನಾಯೇನು ಬೋ ಕೊಡ್ತಾ ಇದ್ದೇನು–ಪ್ರತಿಯೊಂದನ್ನೂ ನೀನೇಯ ಮಾಡೋನು.... ನಾ ಕೊಡೋದು ಯಾವಾ ಮೂಲೆಗಾ...ಇಟ್ಟುಕೊ" ಎಂದಳು.

ಚೆಲುವಮ್ಮನೂ ಮಗಳ ಕಯ್ಯಲ್ಲಿ ನೂರು ರೂಪಾಯಿಗಳನ್ನು "ಮನಿ ಕರ್ಚಿಗಿಲ್ಲಿ ತಕ್ಕೊ" ಎಂದಿತ್ತು ನಟರಾಜನ ಬಳಿಗೆ ಬಂದು, "ದುಡ್ಡು, ಕಾಸು ಇಲ್ಲ ಅಂತ ಮನಸು ಕಿನ್ನ ಮಾಡಕೊಬ್ಯಾಡಿ. ನಮ್ಮ ಬಸವಾಚಾರಿಯೂವೆ ಅವರಯ್ಯನ ಮನೇಗೆ ದತ್ತು ಆಗವ್ನೆ... ಇನ್ನು ನನ್ನ ಆಸ್ತಿ ಉಣ್ಣಾಕೆ ಯಾರಿದ್ದಾರು? ಅದಷ್ಟೂ ನಿಮ್ಮದೇಯ" ಎಂದು ತುಂಬಿದ ಹೃದಯದಿಂದ ಅಳಿಯನನ್ನೇ ನೋಡುತ್ತ ನುಡಿದಳು.

ಅತ್ತೆಯ ಈ ಮಾತಿನಲ್ಲಿ ನಟರಾಜನಿಗೆ ಹಳ್ಳಿಯ ಮುಗ್ಧಜೀವಿಗಳ ನಿಷ್ಕಲ್ಮಷ ಅಂತರಂಗದ ದರ್ಶನವಾದಂತಾಯಿತು. ಅವನ ಕಣ್ಣಲ್ಲಿ ಕೃತಜ್ಞತೆಯ ನೀರು ತುಳುಕಾಡಿತು.

"ಹಂಗಾರೆ ಬತ್ತೀವಿ" ಎಂದು ನುಡಿದು ಪಾರ್ವತಮ್ಮ ಚೆಲುವಮ್ಮ ಇಬ್ಬರೂ ಮಂಗಳೆಯೊಡನೆ ಹೊರಡುತ್ತಿರುವಂತೆ, ದುರ್ಗಿ ಕಣ್ಣೀರಿಡುತ್ತ ನಿಂತಳು.

ಅದನ್ನು ಕಂಡು ಪಾರ್ವತಮ್ಮ, ಚೆಲುವಮ್ಮ ಇಬ್ಬರೂ, "ಇದ್ಯಾಕೇ ದುರ್ಗೀ?" ಎಂದರು.

"ನೀವೆಲ್ಲ ಹೊರಟೋಗ್ತಾ ಇರೋದು ನಂಗೆ ಏನೋ ಒಂದು ತರ ಆಗ್ತಾ ಅದೆ....ಜೊತೇಗೆ ಮಂಗಳಕ್ಕನಾರೂ ಇದ್ದಿದ್ದರೆ ಚೆಂದಾಗಿತ್ತುಽ..." ಎಂದಳು.

ಅಪ್ರಕಟಿತವಾದರೂ ನಟರಾಜನ ಉತ್ಕಟೇಚ್ಛೆಯೂ ಅದೇ ಆಗಿತ್ತು.

ಪಾರ್ವತಮ್ಮ ಮಂಗಳೆಯನ್ನುದ್ದೇಶಿಸಿ, "ನಿನ್ನ ಗಂಡ ಹೆಂಗಿದ್ದರೂವೆ ಬ್ಯಾರೆ ಲಗ್ನ ಮಾಡಿಕೊತ್ತಾನೆ....ನೀನು ಅಲ್ಲೋಗಿ ಮಾಡೋದು ಯೇನು ಇದ್ದಾತು?" ಎಂದು ಉಸುರಿ, ಸುಬ್ಬರಾಯಿ ಬೇರೆ ಮದುವೆಯಾಗುತ್ತಿರುವುದರಿಂದ ತನ್ನಲ್ಲುದ್ಭವಿಸಿದ, ಮಾತೃ ಹೃದಯದ ಕಿಚ್ಚನ್ನು ಹೊರಗೆಡಹಿ ಆ ಬಳಿಕ "ವಸಿ ಜಿನ ಇಲ್ಲೇ ಇದ್ದು ದುರ್ಗಿ ಜತ್ಗೆ ನಟ್ರಾಜ್ನಾರೂ ನೋಡಿಕೊ" ಎಂದಳು.

ತನ್ನ ಮಾತಿಗೆ ಪಾರ್ವತಜ್ಜಿಯಿಂದ ದೊರೆತ ಮನ್ನಣೆಗಾಗಿ ದುರ್ಗಿ ಹಿಗ್ಗಿದಳು.

ಪಾರ್ವತಮ್ಮ ಮಂಗಳೆಯನ್ನು ಬಿಟ್ಟು ಹೋಗಲೊಪ್ಪಿದುದು ನಟರಾಜನಿಗೆ ಅಮಿತಾನಂದವನ್ನುಂಟುಮಾಡಿತು. ಮಂಗಳೆಗಂತೂ ತಾನೊಪ್ಪಿ ವಿವಾಹವಾದ ಪತಿಯ ಗೃಹದಲ್ಲಿ ತೌರಿನವರು ಬಿಟ್ಟು ಹೋದಷ್ಟು ಸುಖವುಂಟಾಯಿತು.

ಪಾರ್ವತಮ್ಮ ಚೆಲುವಮ್ಮನೊಡನೆ ಹೊರಬಾಗಿಲವರೆಗೂ ನಡೆದು ಹೋದವಳು ಮತ್ತೆ ಅದೇಕೊ ಹಿಂದಿರುಗಿ ಬಂದು ನಟರಾಜನನ್ನು ಗಟ್ಟಿಯಾಗಿ ತಬ್ಬಿಕೊಂಡು ಗೋಳಿಡುತ್ತಾ, "ನನ್ನ ಕಂದಾ....ನನ್ನೆದೆ ಯಾಕೊ ಒಂದೇ ಸಮ್ಕೆ ಹುಯ್ಕೊತ್ತಾ ಅದೆ.....ನಾ ನಿನ್ನ ಮಂತೆ ನೋಡೇನೊ, ಇಲ್ಲವೊ...ಎಡಗಾಲದಲ್ಲಿ ಈ ಬೊಸರು ಒಂದು ನಂಗೆ ಯೇನೊ, ಯೆಂತೊ ಅಂತ ಬೋ ಬಯವಾಗದೆ ಕನಪ್ಪಾ" ಎಂದು ತನ್ನ ಹೃದಯದ ಭೀತಿಯನ್ನು ವ್ಯಕ್ತಪಡಿಸಿದಳು.

ನಟರಾಜನಿಗೂ ದುಃಖ ಒತ್ತರಿಸಿ ಬಂದು ಕಣ್ಣು ಕಂಬನಿಗೆರೆದವು. ಅಳುತ್ತಲೇ, ಪಾರ್ವತಮ್ಮನ ಸೆರಗಿನಿಂದ ಅವಳ ಕಣ್ಣೀರೊರಸಿ, "ಭಯಪಡಬೇಡ ಕಣಕ್ಕ. ದೇವರೆಲ್ಲ ಒಳ್ಳೇದು ಮಾಡ್ತಾನೆ. ನೀನೇ ಹಿಂಗೆ ಭಯಪಟ್ಟುಕೊಂಡರೆ ನಮ್ಮ ಗತಿಯೇನು?" ಎಂದು ಅಕ್ಕನನ್ನು ಸಮಾಧಾನಪಡಿಸಿದ.

ಅಕ್ಕನೂ ಚೆಲುವತ್ತೆಯೂ ಊರಿಗೆ ತೆರಳಿದ ಬಳಿಕ ಇನ್ನೂ ಕೆಲ ದಿನ ನಟರಾಜ ಸಂತೋಷದಿಂದಲೇ ಕಾಲ ಕಳೆದ.

ಆದರೆ ದಿನಗಳೆದಂತೆ ಪ್ರಬಲವಾದ ಚಿಂತೆಯೊಂದು ಅವನ ಹೃದಯವನ್ನು ಕಾಡಿತು...ಅವನು ಅಲ್ಲಿದ್ದುದರಿಂದ ಅವನ ಕಾರ್ಮಿಕ ಗೆಳೆಯರು ಅಲ್ಲಿಗೆ ಸರಾಗವಾಗಿ ಬರುವಂತಿರಲಿಲ್ಲ. ತನ್ನ ಚಿಕ್ಕಯ್ಯನಿಗೆ ಅದರಿಂದ ತೊಂದರೆಯಾಗಬಹುದೆಂದು ಅವನೇ ಅವರಿಗೆ ಬರಕೂಡದೆಂದು ನಿಷೇಧಿಸಿದ್ದನು. ಅದರಲ್ಲೂ ಅಷ್ಟು ತಿಳಿವಳಿಕೆಯಿಲ್ಲದ ಆ ಜನ ಕದ್ದೂ ಕಾಣದಂತೆ ಬಂದು ವಿಚಾರ ತಿಳಿಸಿ ಹೋಗುತ್ತಿದ್ದರು. ಆದರೆ ಹೆಚ್ಚು ಕಾಲ ಹೀಗೆ ನಡೆಯಗೊಡುವ ಇಚ್ಛೆ ನಟರಾಜನಿಗಿರಲಿಲ್ಲ. ಆದಕಾರಣ ನಂಜುಂಡಸ್ವಾಮಿಯೊಡನೆ ಅವನು, "ನಂಗೂ ಇನ್ನೇನು ದಿನಕ್ರಮೇಣ ಗುಣ ಆಗ್ತಾ ಇದೆ. ಈಗೆಷ್ಟೋ ವಾಸಿ ಆಗಲೆ.

ನಾನು, ದುರ್ಗಿ, ಮಂಗಳೆ ಎಲ್ಲರೂವೆ ನಮ್ಮ ಚಿಕ್ಕಮನೇಲೆ ಹೋಗಿ ಇದ್ದುಕೊಳ್ತೀವಿ. ಇನ್ನೆಷ್ಟು ದಿನ ನಿಮಗೆ ಸುಮ್ಮನೆ ತೊಂದರೆ ಕೊಡ್ತಾ ಇರೋದು" ಎಂದನು.

"ತೊಂದರೆ ಏನು ಮಹಾ. ಇಲ್ಲೇ ಇನ್ನೂ ಸ್ವಲ್ಪ ದಿನ ಇದ್ದುಕೊಂಡು ಚೆನ್ನಾಗೇ ವಾಸಿ ಮಾಡಿಕೊಂಡು ಹೋಗಬಹುದಲ್ಲಾ?" ಎಂದು ನಂಜುಂಡಸ್ವಾಮಿ ವಾದಿಸಿದನು.

ಅನಂತನೂ ತನ್ನ ತಂದೆಯ ಪರ ವಹಿಸಿ ನಟರಾಜನನ್ನು ತಮ್ಮ ಮನೆಯಲ್ಲೇ ಉಳಿಸಿಕೊಳ್ಳಲು ಯತ್ನಿಸಿದನು.

"ಇಲ್ಲ. ಇಲ್ಲಿ ನನಗೆ ಜನದ ಜಂಜು ಬಹಳ. ಶಾಂತಿ ಬೇಕು ನನಗೆ. ಅದರಿಂದ ಹೋಗಬೇಕಾಗಿದೆ. ಅಷ್ಟೆ" ಎಂದು ಕಡೆಗೆ ನಟರಾಜ ಸುಳ್ಳನ್ನಾಶ್ರಯಿಸಿದ ಮೇಲೆ ನಂಜುಂಡಸ್ವಾಮಿಯೂ ಅನಂತನೂ ನಿರುಪಾಯರಾಗಿ ಅವನನ್ನು ಚಿಕ್ಕಮನೆಗೆ ಕಳುಹಿಸಿಕೊಡಬೇಕಾಯಿತು.

೪೭

ಚಿಕ್ಕಮನೆಗೆ ಬಂದ ತರುವಾಯ ಮಂಗಳೆ, ದುರ್ಗಿಯ ನೆರವು ಪಡೆದು ಅತ್ಯಾದರದಿಂದ ನಟರಾಜನ ಶುಶ್ರೂಷೆಯಲ್ಲಿ ನಿರತಳಾದಳು. ಅವಳು ತನ್ನ ಊಟ, ನಿದ್ರಾದಿಗಳಿಗೆ ಲಕ್ಷ್ಯಕೊಡದೆ ನಟರಾಜನನ್ನು ನೋಡಿಕೊಳ್ಳುತ್ತಿದ್ದ ರೀತಿ ನಾಯಿಡುರವರ ಪತ್ನಿಗೆ ಆಶ್ಚರ್ಯಕರವಾಗಿ ತೋರಿತು. ತಮ್ಮ ಅಚ್ಚರಿಯನ್ನು, ಪ್ರತಿನಿತ್ಯ ತಪ್ಪದೆ ನಟರಾಜನನ್ನು ನೋಡಲು ಬರುತ್ತಿದ್ದ ಯಶೋದಮ್ಮನೊಡನೆ, ಒಂದು ದಿನ ಆಕೆ ಪ್ರಸ್ತಾಪ ಮಾಡಿದರು.

"ಆತನಿಗಾಗಿ ಅದೇನು ಸಾಯುತ್ತರೀ ಆ ಮಂಗಳೆ ಅನ್ನೋ ಹುಡುಗಿ. ಬೆಳಿಗ್ಗೆ ನಾಲ್ಕು ಗಂಟೇಗೆ ಎದ್ದುಬಿಟ್ಟರೆ ರಾತ್ರಿ ಒಂದು, ಒಂದೂವರೆವರೆಗೂ ಕತ್ತೆ ಹಾಗೆ ದುಡಿಯುತ್ತೆ.....ಮದುವೆಯಾದ ಹೆಂಡತಿ ಕೂಡ ಅಷ್ಟು ಮಾಡೊಲ್ಲ ತನ್ನ ಗಂಡನಿಗೆ !"

"ಹೌದಮ್ಮ, ಮಂಗಳೆ ಆತನಿಗೇ ಅಂತಲೇ ಬೆಳೆದಳು. ಏನು ಮಾಡೋದು ಅವಳ ಹಣೇಲಿ ಅದು ಬರೀಲಿಲ್ಲ–ಬೇರೆ ನಮ್ಮ ಸಂಬಂಧದಲ್ಲೇ ಇನ್ನೊಬ್ಬನಿಗೆ ಅವಳನ್ನು ಕೊಟ್ಟು ಲಗ್ನ ಆಯಿತು....ಈಗ ಅವನೂವೆ ಇವಳಿಗೆ ಹುಟ್ಟಿದ ಮಕ್ಕಳು ಉಳೀತಾ ಇಲ್ಲ ಅಂತ ಬೇರೆ ಮದುವೆ ಮಾಡಿಕೊಳೋಕೆ ಏರ್ಪಾಡಾಗ್ತಾ ಇದೆಯಂತೆ..." ಎಂದು ಸೂಕ್ಷ್ಮವಾಗಿ ಎಲ್ಲವನ್ನೂ ಹೇಳಿದಳು ಯಶೋದಮ್ಮ.

ಯಶೋದಮ್ಮ ಮಂಗಳೆಯ ಗೋಳಿನ ಬಾಳನ್ನು ವಿವರಿಸಿದಂತೆ ನಾಯಿಡುರವರ ಪತ್ನಿ ಅನುಕಂಪದಿಂದ ಬಿಸಿಯುಸಿರು ಬಿಟ್ಟರು :

"ಅಯ್ಯೋ ಪಾಪ !... ಆ ದುರ್ಗಮ್ಮ ಒಳ್ಳೆ ಹುಡುಗಿ, ಆದ್ರೂ ಆತನಿಗೂ ಈ ಮಂಗಳೇಗೂ ವರಸಾಮ್ಯ ಸರಿಹೋಗುತ್ತೆ, ನೋಡಿ. ಯಾವತ್ತೂ ಒಳ್ಳೆ ಹೇಳಿ ಮಾಡಿಸಿದ ಹಾಗಿದೆ ಜೋಡಿ....ಹೀಗೇನೆ ಕಾಣ್ರಿ," ಜೀವನದಲ್ಲಿ ತಮ್ಮ ರೂಪಿಗೆ ಅನುರೂಪವಾಗಿಲ್ಲದ ತಮ್ಮ ಪತಿ ಶ್ರೀರಾಮುಲು ನಾಯಿಡುರವರನ್ನು ಆಕೆ ತಮ್ಮ ಅಂತರಂಗದಲ್ಲೇ ಚಿತ್ರಿಸಿಕೊಂಡರೊ, ಏನೊ!

ಅಂತೂ ತನ್ನ ಮನೆಯಲ್ಲಿ ಮಂಗಳೆ ಸಡಗರದಿಂದ ಓಡಿಯಾಡುತ್ತಿದ್ದುದು ನಟರಾಜನಿಗೂ ತನ್ನ ಬಾಳಿನ ಒಂದು ಅಪೂರ್ಣತೆಯನ್ನು ತುಂಬಿದಂತಾಗಿತ್ತು. ಆ ದಿನಗಳಲ್ಲವನು ಅವಳು ಅನ್ಯನೊಬ್ಬನಿಗೆ ವಿವಾಹವಾಗಿದ್ದ ವಿಚಾರವನ್ನೇ ಮರೆತು ಅವಳು ತನಗೆ ಮದುವೆಯಾದ ಮಡದಿಯಂತೆಯೇ ಕಾಣುತ್ತಿದ್ದನು.

ಅವನಿಗೆ ಬೇಸರವಾದಾಗಲ್ಲೆಲ್ಲ ಮಂಗಳೆ ಹೋಗಿ ಅನಂತನ ಮಗುವನ್ನು ಎತ್ತಿ ತರುತ್ತಿದ್ದಳು. ಆ ಪುಟ್ಟ ಲೀಲಳೊಂದಿಗೆ ಆಡುತ್ತಾ ಕಾಲ ಕಳೆಯುವುದು ನಟರಾಜನಿಗೆ ಅತ್ಯಂತ ಹಿತವಾದ ವಿನೋದವಾಗಿತ್ತು.

ಹೀಗೆ ಕಾಲ ತಳ್ಳಿದಂತೆ, ಒಂದು ಸಂಜೆ ಬಾರಿ ಮಳೆ ಹೊಯ್ದು ನಿಂತಿತ್ತು. ಆ ದಿನವೆಲ್ಲಾ ಅನಂತನನ್ನು ಕಾಣದೆ ನಟರಾಜನ ಚಿತ್ತದೊಳಗೆ ತಳಮಳವುಂಟಾಗಿತ್ತು. ಏಕೆ ಬರಲಿಲ್ಲವೊ, ಎಂದು ಅವನು ತನ್ನಲ್ಲೇ ಅಂದುಕೊಂಡಂತೆ ಅನಂತ ಬಟ್ಟೆ ಮುಚ್ಚಿದ ಚಿತ್ರಪಟವನ್ನು ಹಿಡಿದು, ನಟರಾಜನ ಕೋಣೆಯೊಳಗೆ ಉತ್ಸಾಹದಿಂದ ಪ್ರವೇಶಿಸಿದ.

"ನಿಂಗೆ ನೂರು ವರ್ಷ ಆಯಸ್ಸು, ಬಾರೊ ಅನಂತೂ....ನಾನಿದೇ ತಾನೆ ನೀನ್ಯಾಕೆ ಬರಲಿಲ್ಲವೊ ಅಂತ ನಿನ್ನ ಯೋಚನೇನೆ ಮಾಡ್ತಾ ಇದ್ದೆ" ಎಂದನು ನಟರಾಜ.

ಚಾಪೆಯ ಮೇಲೆ ಕುಸಿದು ಕುಳಿತುಕೊಳ್ಳುತ್ತಾ, "ಒಳ್ಳೆ ಮಾರಾಯ ನೀನು. ನೂರು ವರ್ಷ ಬದುಕಿ ಆ ವಿಶಾಲಿ ಒಂದಿಗೇ ಎಪ್ಪತ್ತು, ಎಪ್ಪತ್ತೈದು ವರ್ಷ ಸಾಗಿಸು ಅಂತ ಹರಸ್ತೀಯಾ?.... ನೀನೂ ಒಳ್ಳೆ ಹಿತೈಷಿ ಕಣಯ್ಯ ನಂಗೆ. ಪರವಾಗಿಲ್ಲ" ಎಂದು ಅನಂತ ಹುಸಿ ಮುನಿಸು ತೋರುತ್ತಾ ನುಡಿದಾಗ, ನಟರಾಜನಿಗೆ 'ಅಯ್ಯೋ' ಎನಿಸಿತು. ವಿಶಾಲಿಯಂಥ ಹೆಂಗಸಿನೊಡನೆ ತನ್ನ ಬಾಳು ಸಾಗಿಸುವುದು ಅನಂತನಿಗೆಷ್ಟು ದುಸ್ಸಹವಾಗಿತ್ತೆಂದು ಅರಿತಿದ್ದ ನಟರಾಜ. ಅದೇ ವಿಚಾರ ಮಾತಾಡಿ ನೋವುಂಟುಮಾಡುವುದು ಸರಿಯಲ್ಲವೆಂದು ಮಾತನ್ನು ಬೇರೆ ದಿಸೆಯಲ್ಲಿ ತಿರುಗಿಸಲೆತ್ನಿಸಿದನು.

"ಹೋಗಲಿ ಅದೇನೊ ಹೊಸದಾಗಿ ಚಿತ್ರಿಸಿರೊ ಹಾಗಿದೆ. ನೋಡೋಣ ಇಲ್ಲಿ ತಾ" ಎಂದು ತಂದಿದ್ದ ಚಿತ್ರಪಟದತ್ತ ದೃಷ್ಟಿ ಹೊರಳಿಸಿದನು.

ಚಿತ್ರಪಟದ ಹೆಸರೆತ್ತಿದ ಕೂಡಲೆ ಅನಂತ ಹಿಂದಿನ ಮಾತನ್ನು ಮರೆತು ಗಹಗಹಿಸಿ ನಗಲಾರಂಭಿಸಿದನು.

ನಟರಾಜನಿಗೆ ಏನೊಂದೂ ಅರ್ಥವಾಗದೆ ಬೆಪ್ಪಾಗಿ, "ಅದೇನಪ್ಪ, ನನ್ನ ಪ್ರಶ್ನೆ ಅಷ್ಟು ನಗಸ್ತಾ ಇದೆ ಈ ದಿನ ನಿನ್ನ?" ಎಂದನು.

ಬಹಳ ಹೊತ್ತು, ಕಣ್ಣಿನಲ್ಲಿ ನೀರೂರುವ ತನಕವೂ, ನಕ್ಕು ಪ್ರಯಾಸದಿಂದ ಸಮಾಧಾನ ತಂದುಕೊಳ್ಳುತ್ತಾ, "ಇಲ್ಲಿ ನೋಡು ನಾನು ಈ ದಿನ ಬರೆದಿರುವ ಅತ್ಯದ್ಭುತವಾದ ಚಿತ್ರ!" ಎಂದು ಆ ಚಿತ್ರಪಟವನ್ನೆತ್ತಿ ನಟರಾಜನ ಕೈಗಿಟ್ಟನು.

ಅನಂತ ಯಾವಾಗಲೂ ತನ್ನ ಕೃತಿಯ ವಿಷಯದಲ್ಲಿ ಜಂಭದಿಂದ ಮಾತಾಡಿದವನಲ್ಲ. ನಟರಾಜನೇ ಹೊಗಳಿದಾಗಲೂ "ಅದರಲ್ಲೇನಿದೆ ಬಿಡೊ, ಅದಕ್ಕಿಂತ ಉತ್ತಮ ಚಿತ್ರ ಬರೆಯೋರು ನಮ್ಮ ನಾಡಿನಲ್ಲಿ ಎಷ್ಟೋ ಜನ ಇದ್ದಾರೆ" ಎಂದು ಬಿಡುತ್ತಿದ್ದ. ಆದರೆ ಇಂದು ಅವನೇ ತನ್ನ ಚಿತ್ರವನ್ನು "ಅತ್ಯದ್ಭುತವಾದ ಚಿತ್ರ" ಎಂದದ್ದು ಕೇಳಿ ನಟರಾಜನಿಗೇ ಸೋಜಿಗವಾಯಿತು. ಅನಂತರ ವಾಸ್ತವವಾಗಿಯೂ ಅತ್ಯದ್ಭುತವಾದ ಚಿತ್ರವನ್ನೇ ಬರೆದಿರಬೇಕು, ಇಲ್ಲದಿದ್ದರೆ ಅವನು ಹಾಗೆ ಹೇಳಲಾರ, ಎಂದು ಬಗೆದ ನಟರಾಜ ವಿಪರೀತವಾದ ಕುತೂಹಲ, ನಿರೀಕ್ಷೆಗಳಿಂದ ಆ ಚಿತ್ರಪಟಕ್ಕೆ ಹೊದಿಸಿದ್ದ ಬಟ್ಟೆಯನ್ನು ಬಹು ಮೃದುವಾಗಿ ತೆರೆದು ನೋಡಿದನು. ಆಗವನು ಅಲ್ಲಿ ಕಂಡ ದೃಶ್ಯ ಅವನನ್ನು ಬೆರಗುಗೊಳಿಸಿತು. ಮೂಕನಂತೆ, ಶೂನ್ಯ ದೃಷ್ಟಿಯಿಂದ ಅದನ್ನೇ ನಿಟ್ಟಿಸುತ್ತ, "ಇದೇಯೇನೊ ಅನಂತು ನೀನು ಬರೆದಿರೊ ಅದ್ಭುತ ಚಿತ್ರ" ಎಂದು ತನಗೆ ತಾನೆ ಹೇಳಿಕೊಂಡವನಂತೆ, ಮಾತಾಡಿದನು.

ಮಂಗಳೆ, ದುರ್ಗಿಯರೂ ಕುತೂಹಲದಿಂದ ನಟರಾಜನ ಬೆನ್ನ ಹಿಂದೆ ಹೋಗಿ ಆ 'ಅದ್ಭುತ ಚಿತ್ರ'ವನ್ನು ನೋಡಿದರು–

ತಕ್ಷಣವೇ ಮಂಗಳೆ, "ಇದೇನೊ ಅನಂತೂ....ಇಲ್ಲೇನೂ ಬರೆದೇ ಇಲ್ಲವಲ್ಲೋ?" ಎಂದು ಉದ್ಗಾರ ತೆಗೆದಳು.

ಆಗ ಅನಂತ ನಗುತ್ತಾ ಹೇಳಿದ.

"ಇದೆಲ್ಲ ಒಂದ ಕತೆ ಹೇಳ್ತಿನಿ ಕೇಳಿ....ಈವೊತ್ತು ಮಧ್ಯಾಹ್ನ ಚಿತ್ರ ಬರೆಯೊ ಗುಂಗು ಹತ್ತಿ ಕುಕ್ಕರಹಳ್ಳಿ ಕೆರೆ ಆಚೆ ಬಯಲಿನಲ್ಲಿ ಹೋಗಿ ಕುಳಿತುಕೊಂಡೆ. ಬೇಸಿಗೆ ಬಿಸಿಲು ಪ್ರಖರವಾಗಿ ಬಿದ್ದು, ಮರಗಳ ಎಲೆ ಹಸರ್ನ ಕಪ್ಪು ಬಣ್ಣಕ್ಕೆ ತಿರುಗಿಸ್ತಾ ಇತ್ತು. ನಾನು ಒಂದು ವಿಶಾಲವಾದ ಆಲದ ಮರದ ಕೆಳಗೆ ಕೂತುಕೊಂಡು, ನನ್ನ ಮುಂದಿನ ಬಯಲು ಅದರಾಚೆ ಗಗನಚುಂಬಿಯಾಗಿ ಬೆಳಕೊಂಡಿದ್ದ ಅಡಿಕೆ, ತೆಂಗು, ಮಾವಿನ ತೋಟ–ಅದರ ಹಿಂದೆ

ಅದಕ್ಕೆ ಹಿನ್ನೆಲೆಯಾಗಿ ಕಂಗೊಳಿಸುತ್ತಾ ಇದ್ದ ಆಕಾಶದ ನೀಲಿಮೆ ಎಲ್ಲಾನು ನನ್ನ ಚಿತ್ರಪಟದ ಮೇಲೆ ಚಿತ್ರಿಸ್ತಾ ಹೋದೆ...ಆ ಸುಂದರ ದೃಶ್ಯಾನ ನಾನು ಚಿತ್ರಿಸಿ ಮುಗಿದು, ನನ್ನ ಚಿತ್ರಪಟವನ್ನು ಕೈಗೆತ್ತಿಕೊಂಡು 'ಚೆನ್ನಾಗಿ ಬಂದಿದೆಯೇ. ಇಲ್ಲವೇ?' ಎಂದು ಪರೀಕ್ಷಿಸಿ ನೋಡಿದೆ–ಆ ದೃಶ್ಯಾನೂ ನನ್ನ ಚಿತ್ರಾನೂ ನೋಡಿದಂತೆ ನನ್ನ ಚಿತ್ರಕ್ಕೂ ಆ ದೃಶ್ಯಕ್ಕೂ ಇದ್ದ ಸಾದೃಶ್ಯ ನನಗೆ ದಂಗು ಹಿಡಿಸ್ತು....ಹಾಗೇ ಆ ದೃಶ್ಯಾನೇ ನಾನು ನೋಡ್ತಾ ಕುಳಿತುಕೊಂಡ ಹಾಗೆ ಗರಿಗರಿಯಾಗಿದ್ದ ಬಿಳಿ ಮೋಡಗಳು ಆ ತೋಟದ ಮೇಲೆ ದಟ್ಟೈಸಿ ಕಂದು ಬಣ್ಣದ ಉಣ್ಣೆಯ ರಾಶಿಯಂತೆ ಕಾಣತೊಡಗಿತು. ಆ ಉಣ್ಣೆ ಮುಗಿಲುಗಳ ಅಂಚುಗಳ ಸ್ವರ್ಣಲೇಪಿತವಾಗಿದ್ದೊ–ಅದನ್ನೆಲ್ಲ ನಾನು ಅದೆ ಅದೇ ವರ್ಣಗಳಲ್ಲಿ ನನ್ನ ಕುಂಚದಿಂದ ಚಿತ್ರಿಸ್ತಾ ಹೋದೆ. ನಾನು ಚಿತ್ರಿಸ್ತಾ ಇರೋವಾಗ ಕಂದುಬಣ್ಣದ ಮೇಘರಾಶಿಯಲ್ಲಿ ಕಪ್ಪು ಮಿಶ್ರಿತವಾಗುತ್ತಿತ್ತು....ಅದನ್ನೂ ನಾನು ಚಿತ್ರಿಸ್ದೆ...ಹಾಗೆಯೇ ಆ ಮೇಘ ರಾಶಿಯಿಂದ ಮಳೆಯ ದಪ್ಪ ದಪ್ಪ ಹನಿ ನಿಧಾನವಾಗಿ ಬೀಳೋದಕ್ಕೆ ಆರಂಭಿಸ್ತು....ಅದನ್ನೂ ಬರೆದೆ ನಾನು....ಈಗ ಮಳೆ ಬೀಳೋದು ಸ್ವಲ್ಪ ಹೆಚ್ಚಿ ಹನಿ ದಾರ ದಾರವಾಯಿತು...ಅದನ್ನೂ ಉತ್ಸುಕತೆಯಿಂದ ಚಿತ್ರಿಸ್ತಾ ಹೋದೆ ನಾನು. ಆ ಮಳೆಯ ತೆಳುವಾದ ತೆರೇ ಹಿಂದೆ ಸುಂದರವಾಗಿ ಕಾಣ್ತಾ ಇದ್ದ ತೋಟಾನ ನನ್ನ ಚಿತ್ರದಲ್ಲಿ ಕಡೆದಿಡೋದಕ್ಕೆ ಯತ್ನಿಸ್ದೆ...ಮಳೆ ಬೀಳೋದು ಇನ್ನೂ ಜಾಸ್ತಿ ಆಯ್ತು–ಹಾಗೆ ಮಳೆ ಬೀಳೋದು ಹೆಚ್ಚಿದಂತೆ ಚಿತ್ರಪಟದ ಮೇಲೆ ನನ್ನ ಕುಂಚದ ಓಡಾಟವೂ ಹೆಚ್ಚಿತು. ಆಗ ನಾನು ಒಳ್ಳೆ ಹುಚ್ಚನ ಹಾಗೆ ಕೆಲ್ಸ ಮಾಡ್ತಾ ಇದ್ದೆ...ಆದ್ರೆ ಮಳೆ ಈಗ ವಿಪರೀತವಾಗಿ ಹುಯ್ಯೋದಕ್ಕಾರಂಭವಾಗಿ ಮರದ ಕೆಳಗೆ ಇಷ್ಟು ಹೊತ್ತಿನ ತನಕ ಎರಚಲಿನ ಕಾಟದಿಂದ ತಪ್ಪಿಸ್ಕೊಂಡಿದ್ದ ನನ್ನನ್ನು ಏಳೋ ಹಾಗೆ ಮಾಡಿತು. ಬರೆಯೋ ಬಾಕಿ ಉಪಕರಣಗಳನ್ನು ತೆಗೆದುಕೊಂಡು ಮಳೆ ಬೀಳದ ಹಾಗೆ ಮರಕ್ಕೆ ಒತ್ತಿಕೊಂಡು ನಿಂತುಕೊಂಡೆ–ಮಳೆ ನಿಲ್ಲೋವರೆಗೂ ಹಾಗೆ ಸುಮ್ಮನೆ ನಿಂತಿದ್ದು ಅದು ಬಿಟ್ಟ ಮೇಲೆ ಮನೆ ಕಡೆ ಹೆಜ್ಜೆ ಹಾಕೋದಕ್ಕಾರಂಭಿಸಿದೆ. ಬಯಲಿನಲ್ಲಿ ನಾನು ನಡೆದು ಬರ್ತಾ ಇರೋವಾಗ ನನ್ನ ಹಾಗೆ ಮಳೆ ನಿಲ್ಲೋವರ್ಗೂ ತನ್ನ ಕುರಿಗಳನ್ನೆಲ್ಲ ಒಂದು ಮರದ ಕೆಳಗೆ ಮೇಯಿಸಿಕೊಂಡು ನಿಂತಿದ್ದ ಒಂದು ಚಿಕ್ಕ ಕುರಿ ಕಾಯೊ ಹುಡುಗಿ ನಾನು ಕಂಕುಳಲ್ಲಿ ಬಟ್ಟೆ ಮುಚ್ಚಿ ಹೊತ್ತಿದ್ದ ಚಿತ್ರಪಟಾನ ನೋಡಿ 'ಅದೇನು ಅಯ್ನೋರೆ, ಹಂಗೆ ಹೊತ್ತುಕೊಂಡೋಗ್ತಾ ಇದ್ದೀರಿ?' ಅಂದಿತು. ಅದಕ್ಕೆ ನಾನು 'ಇದರಲ್ಲಿ ನಾನು ಒಂದು ಚಿತ್ರ ಬರೆದಿದ್ದೀನಿ' ಅಂತ ಸ್ವಲ್ಪ ಹೆಮ್ಮೆಯಿಂದಲೇ ಹೇಳಿದೆ. 'ಎಲ್ಲಿ ಅಯ್ನೋರೆ ನಿಮ್ಮ ಚಿತ್ರ ವಸಿ ನೋಡಾನ ಹಂಗಾರೆ' ಅಂತ ಹೇಳಿ ಆ ಹುಡುಗಿ ನನ್ನ ಚಿತ್ರಪಟ ಈಸುಕೊಂಡು ಮೊದಲೆ ಹೊದಿಸಿದ್ದ ಬಟ್ಟೆ ತೆಗೆದು ನೋಡಿತು. ಹಾಗೆ ನೋಡಿದೋಳು ಕೂಡಲೆ 'ಇದೇನು ಅಯ್ನೋರೆ. ಇಲ್ಲಿ ಚಿತ್ರ ಬರೀನೇ ಇಲ್ಲ–ಯಾತಾವು ಇದ್ದದು ನಿಮ್ಮ ಚಿತ್ರ' ಅಂತ ಹೇಳಿದಾಗ ನಂಗೆ ಆಶ್ಚರ್ಯ ಆಯ್ತು. ನಾನು ಅಷ್ಟು ತ್ರಿಕರಣಪೂರ್ವಕವಾಗಿ ರಚಿಸಿದಂಥಾ ಚಿತ್ರಾನ ಆ ಚಿಕ್ಕ ಹುಡುಗಿ

'ಏನು ಅಯ್ನೋರೆ, ಇಲ್ಲಿ ಚಿತ್ರ ಬರೀನೇ ಇಲ್ಲ' ಅಂದದ್ದು ನನಗೆ ಸ್ವಲ್ಪ ವ್ಯಥೇನೇ ಉಂಟು ಮಾಡ್ತು. ಆಮೇಲೆ ಏನೂ ಅರೀದ ಹುಡುಗೀ ಕೈಲಿ ನನ್ನ ಅತ್ಯುತ್ತಮ ಕಲಾಕೃತೀನ ಕೊಟ್ಟರೆ ಅದು ಇನ್ನೇನು ಹೇಳೋದಿಲ್ಲ ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡು ಆ ಚಿತ್ರಪಟಾನ ಆ ಹುಡುಗಿ ಕೈಯಿಂದ ಕಿತ್ತುಕೊಂಡು ನಾನೇ ನೋಡಿದೆ– ನೋಡಿದೆ ಕೂಡಲೆ ಚಕಿತನಾಗಿ 'ಏನಿದು?' ಅಂತ ಗಟ್ಟಿಯಾಗೆ, ಕಿರುಚಿಕೊಂಡೆ.... ಅಲ್ಲಿ ಆ ಹುಡುಗಿ ಹೇಳಿದ ಹಾಗೆ ಯಾವ ಚಿತ್ರಾನೂ ಬರದೇ ಇರಲಿಲ್ಲ !... ನಾನೂ ಬೆಪ್ಪಾಗಿ ಬೆವತುಹೋದೆ. ಸ್ವಲ್ಪ ಕಾಲ ಕಳೆದ ಬಳಿಕ ನನಗೆ ಹೊಳೀತು–ರಭಸವಾಗಿ ಬೀಳೋ ಮಳೆ ಚಿತ್ರಿಸೋಕೆ ಹೋಗಿ ಕುಂಚದಿಂದ ನನ್ನ ಚಿತ್ರ ಪಟಾನೆಲ್ಲ ಬೆಳ್ಳಗೆ ಮಾಡಿದ್ದೆ ನಾನು, ಅಂತ ! ಅದನ್ನೇ ಮತ್ತೆ ಮತ್ತೆ ನಾನೇ ನೋಡಿಕೊಂಡಂತೆ ನನಗೇ ನಗು ಬಂತು. ನಿಮಗೆಲ್ಲರಿಗೂ ತೋರಿಸಿ, ಇನ್ನೂ ಅಷ್ಟು ನಗೋಣ ಅಂತ ಅದ್ನ ಹಾಗೇ ಇಲ್ಲಿಗೆ ತಗೊಂಡು ಬಂದೆ."

ಹೀಗೆಂದು ನುಡಿದು ನಗುತ್ತಾ, ಕುಳಿತನು ಅನಂತ. ಅವನ ಕತೆಯನ್ನು ಕೇಳಿ ಮಂಗಳೆ, ದುರ್ಗಿಯರು ಗಟ್ಟಿಯಾಗಿ ನಗಲಾರಂಭಿಸಿದರು. ನಟರಾಜ ಮಾತ್ರ ಮೇಲೆ ಎಲ್ಲರಂತೆ ನಕ್ಕರೂ ತನ್ನ ಮನಸ್ಸಿನಲ್ಲಿ "ಎಂಥ ಕಲೆಗಾರ ನಮ್ಮ ಅನಂತು !" ಎಂದು ಅಭಿಮಾನಪಡುತ್ತಿದ್ದ.

* * * * *

ಆದರೆ ಅನಂತನ ಕಲೆ ಅಭಿವೃದ್ಧಿ ಹೊಂದಿ ಒಂದು ಘಟ್ಟ ಮುಟ್ಟಿದ್ದಿತಾದರೂ ಅವನ ಬಾಳು ಒಡೆದು ಹೋದ ದೋಣಿಯಂತಾಗಿತ್ತು. ಹಾಗೆ ಅವನ ಬಾಳು ಒಡೆಯುವುದರಲ್ಲಿ ಅವನ ಸತಿ ವಿಶಾಲಿ ಪ್ರಮುಖ ಪಾತ್ರ ವಹಿಸಿದ್ದಳು.

ವಿಶಾಲಿ ಅನಂತನನ್ನಾಗಲಿ, ಅವನ ಕಲೆಯನ್ನಾಗಲೀ ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗಿರಲಿಲ್ಲ. ತನ್ನಿಚ್ಛೆ ಬಂದಂತೆ ವರ್ತಿಸಿ ಮಾತೆತ್ತಿತೆಂದರೆ ಅನಂತನ ವಿರುದ್ಧ ನಿಂತು ಅವನ ಮನಸ್ಸಿನ ಶಾಂತಿಯನ್ನು ಕದಡಿದ್ದಳು.

ಮೊದಮೊದಲು ತನ್ನ ಪತ್ನಿ 'ಜಗಳಗಂಟಿ' ಎಂದು ಮಾತ್ರ ಬೇಸರಪಡುತ್ತಿದ್ದ ಅನಂತನಿಗೆ ಈಗೀಗ ವಿಶಾಲಿಯ ಸ್ವಭಾವದ ಪೂರ್ಣ ಪರಿಚಯವಾಗುತ್ತಿತ್ತು. ಅವಳು ಯಾವುದಾದರೂ ನೆಪಮಾಡಿಕೊಂಡು ತನ್ನ ಗೆಳತಿಯರ ಮನೆಗಳಲ್ಲಿಯೇ ಹೆಚ್ಚಾಗಿ ಕಾಲ ಕಳೆಯುತ್ತಿದ್ದಳು. ಆರಂಭದಲ್ಲಿ "ಒಳ್ಳೆಯದೇ ಆಯಿತು, ಮನೆಯಲ್ಲಿ ಸ್ವಲ್ಪ ಕಾಲ ಜಗಳ ತಪ್ಪಿತು" ಎಂದೆನಿಸಿದರೂ ಅವಳು ಆ ಮನೆಗಳಿಗೆ ಹೋಗುತ್ತಿದ್ದ ನಿಜವಾದ ಕಾರಣ ತಿಳಿದ ಮೇಲೆ ಅನಂತರ ಎದೆ ಅವಮಾನದಿಂದ ಬೆಂದು ಹೋಯಿತು. ಅವಳು ಆ ಮನೆಗಳಿಗೆ ಗಂಡಸರೊಡನೆ ಸ್ನೇಹ ಬೆಳೆಸಲು ಹೋಗುತ್ತಿದ್ದಾಳೆ, ಎಂದು ಯಶೋದಮ್ಮ ಮೊದಲಿಗೇ ಹೇಳಿದಾಗ ಅನಂತ ತಾಯಿಯ ಮಾತಿನಲ್ಲಿ ಅಷ್ಟಾಗಿ ಭರವಸೆ ಇಡಲಿಲ್ಲ. ವಿಶಾಲಿ 'ಚೆಲ್ಲು' ಹುಡುಗಿ, ಹಟಮಾರಿ,

ಜಗಳಗಂಟಿ, ಎಂದು ಮಾತ್ರ ಅವನು ತಿಳಿದುಕೊಂಡಿದ್ದ. ಹಾಗೆಂದು ತಾಯಿಯೊಡನೆಯೂ ವಾದ ಮಾಡಿದ್ದ.

"ಹೌದು ಹಾಗೇ ತಿಳಿದುಕೊ ನನಗೇನಂತೆ. ಅವಳು ಎಂಥ ಹರಾಮಿ ಅಂತ ನಿನಗಿನ್ನೂ ಗೊತ್ತಿಲ್ಲ... ಇನ್ನ್ಯಾರನ್ನಾದರೂ ಮಾಡಿಕೊಂಡು ನಿನಗೆ ವಿಷ ಹಾಕೋದಿಕ್ಕೂ ಹೇಸೂದಿಲ್ಲ ಆಕೆ" ಹೀಗೆಂದು ಯಶೋದಮ್ಮ ನುಡಿದಾಗಲೂ ಅನಂತನಿಗೆ ತಾಯಿಯ ಮಾತನ್ನು ನಂಬಲು ಅನುಮಾನ.

ಹೀಗಿರುವಾಗ ಒಂದು ದಿನ ಮಾರ್ಕೆಟ್ಟಿನಲ್ಲಿ ಅವರ ಎದಿರು ಮನೆಯ ಗೋವಿಂದಶೆಟ್ಟರು ಸಿಕ್ಕಿದರು. ವಯಸ್ಸಾದ ಗೋವಿಂದಶೆಟ್ಟರಿಗೆ ಅನಂತನಲ್ಲಿ ಅತಿಯಾದ ಸಲುಗೆ. ಅವನನ್ನು ಒಂದು ಪಕ್ಕಕ್ಕೆ ಕರೆದು, "ನಿನಗೆ ಮೊನ್ನೆಯಿಂದ ಹೇಳಬೇಕು ಅಂತಿದ್ದೆ. ನೀನು ಸಿಕ್ಕಲೇ ಇಲ್ಲ" ಎಂದರು.

"ಏನು?"

ಆ ಕಡೆ ಈ ಕಡೆ ನೋಡುತ್ತಾ ದನಿಯನ್ನು ತಗ್ಗಿಸಿದ ಶೆಟ್ಟರು, "ನಿಮ್ಮ ತಂದೆ ಆ ಹುಡುಗೀನಾ ನಿನಗೆ ತಂದುಕೊಳ್ಳುವಾಗಲೇ 'ಬೇಡ ಬೇಡ' ಅಂತ ಹೇಳಿದೆ. ಅವರು ಕೇಳಲಿಲ್ಲ...." ಎನ್ನುತ್ತಾ ಮೂಗಿಗೆ ನಶ್ಯವನ್ನೇರಿಸಿದರು.

ಅನಂತನಿಗೆ ಏನೊಂದೂ ಅರ್ಥವಾಗಲಿಲ್ಲ.

"ಈಗೇನಂತೆ?"

"ಸರ್ವನಾಶ....ಆ ಹುಡುಗಿ ಕಂಡ ಕಂಡ ಗಂಡಸರೊಂದಿಗೆ 'ಆಟ' ಆಡೋಕೆ ಶುರು ಮಾಡಿದೆ...ನೋಡು. ನಮ್ಮ ಹುಡುಗ ಗೋಪಾಲ ಇದಾನಲ್ಲಾ ಅವನನ್ನೂ ಬಲೇಗೆ ಹಾಕಿಕೊಂಡುಬಿಟ್ಟಿತ್ತು. ಇದು ನನ್ನ ಹೆಂಡತೀಗೆ ಗೊತ್ತಾಗಿ 'ನೀನು ಇನ್ನು ಮೇಲೆ ನಮ್ಮ ಮನೇಗೆ ಕಾಲು ಗೀಲು ಹಾಕೀಯೆ ಜೋಕೆ' ಅಂತ ಬೈದು ಕಳಿಸಿದಳಂತೆ."

ಈ ಸುದ್ದಿಯನ್ನು ಕೇಳಿ ಅನಂತನ ಎದೆಯಲ್ಲಿ ರೋಷ ಕುದಿಯಿತು. ಮನೆಗೆ ಬಂದವನೇ ವಿಶಾಲಿಯನ್ನು ಮನಸ್ವೀ ದಂಡಿಸಿದನು. ವಿಶಾಲಿ ಲಬಲಬನೆ ಬಾಯಿ ಬಡಿಯುತ್ತಾ ಹುಯಿಲೆಬ್ಬಿಸಿದಳು. ಒಂದನ್ನು ನೂರುಮಾಡಿ ಅವಳು ಅಳುತ್ತಿದ್ದುದು ಅನಂತನ ಕೋಪದ ಕಿಚ್ಚಿಗೆ ತುಪ್ಪ ಹೊಯ್ದಂತಾಗಿತ್ತು. ಒಂದು ಬಾರಿ ಅವನು ಕೆನ್ನೆಗೆ ಹೊಡೆದಾಗ ವಿಶಾಲಿ ಸಿಂಹಿಣಿಯಂತೆ ಅವನ ಮೇಲೆ ಬಿದ್ದು ಕೈಯುಗುರುಗಳಿಂದ ಅನಂತನ ಮುಖವನ್ನು ಪರಚಿ ಗಾಯಗೊಳಿಸಿದಳು. ಗಾಯಗಳಿಂದ ಚಿಲ್ಲನೆ ಹೊರಟ ರಕ್ತದ ಧಾರೆಯನ್ನು ತನ್ನ

ಪಂಚೆಯ ತುದಿಯಿಂದ ಒತ್ತುತ್ತಾ, "ಅಬ್ಬಾ, ಹೀಗಾಡೋಳು ನೀನು ಒಂದಲ್ಲ ಒಂದು ದಿನ ನನಗೆ ವಿಷ ಹಾಕಿ ಪ್ರಾಣ ತೆಗೆಯೋಕೊ ಹೇಸೋದಿಲ್ಲ...."

"ಇದ್ನೊಂದು ಸಲ ಏನಾರ ನನ್ನ ಮೈಮೇಲೆ ಕೈಯಿಟ್ಟರೆ, ವಿಷಾನೇ ಹಾಕಿ ಬಿಡ್ತೀನಿ" ಹೀಗೆನ್ನುವಾಗ ವಿಶಾಲಿಯ ಕಣ್ಣುಗಳು ಕೆಂಡವನ್ನುಗುಳುತ್ತಿದ್ದುವು.

೪೮

ನಟರಾಜ ಕ್ಷಯಿಸುತ್ತಿರುವಾಗಲೂ ಕಾರ್ಮಿಕರ ಮುಖಂಡರು ಅವನ ಬಳಿಗೆ ಸಲಹೆಗಾಗಿ ಬರುತ್ತಲೇ ಇದ್ದರು.

ಒಂದು ದಿನ ಹುಸೇನ್ ಅವನನ್ನು ಕಾಣಲು ಬಂದ.

"ನೀವು ನಿಂತುಕಂಡಿ ಐತಲ್ಲಾ ನಮ್ಮ ಪರ ವಹ್ಸಿ ಹೊಡದಾಡಿ ನಮ್ಗೆ ಬಾಳ ಉಪಕಾರನೇನೊ ಮಾಡಿದ್ರಿ, ಆಗ ಇಪ್ಪತ್ತೆಂಟು ದಿನದವರ್ಗೆ ನಾವು ಮುಷ್ಕರ ನಡಸ್ದಮ್ಯಾಗೆ ಮಾಲೀಕ್ರು ತೆಪ್ಗೆ ಸದ್ದುಮಾಡದೆ ನಾವು ಕೇಳ್ತಾ ಇದ್ದ ಎಲ್ಡು ತಿಂಗಳ ಬೋನಸ್ಸು, ಮತ್ತೆ ತೆಗ್ದು ಹಾಕಿದ್ದ ಕೂಲಿಕಾರ್ನ ಕೆಲಸದ ಮ್ಯಾಗ ತಕ್ಕೊಳ್ಳೊದು–ಯೆಲ್ಲಾಕೂ ಒಪ್ಪಿಕೊಂಡರು– ಆದ್ರೆ ಈಗ ಮತ್ತೆ ಇನ್ನೊಂದು ತಕರಾರು–" ಎಂದು ಈಗ ಪುನಃ ಮಾಲೀಕರು ಕೆಲವು ಕೂಲಿಕಾರರಿಗೆ ಲಂಚ ಕೊಟ್ಟು ತಮ್ಮ ಕಡೆಗೆ ತೆಗೆದುಕೊಂಡು ಹೇಗೆ ತಮ್ಮ ಬೀಡಿ ಕಾರ್ಮಿಕರ ಸಂಘವನ್ನೇ ಕುಹಕದಿಂದ ಒಡೆಯಲು ಯತ್ನಿಸುತ್ತಿರುವರೆಂಬ ವಿಚಾರವನ್ನು ಸವಿವರವಾಗಿ ನಟರಾಜನಿಗೆ ತಿಳಿಸಿ, ಅವನ ಸಲಹೆ ಬೇಡಿದನು ಹುಸೇನ್... ಮುಂದಿನ ದಿನಗಳಲ್ಲಿ ನಟರಾಜನ ಮನಸ್ಸು ಈ ಹೊಸ ಸಮಸ್ಯೆಯನ್ನು ಚಿಂತಿಸುವುದರಲ್ಲಿಯೇ ಮಗ್ನವಾಗಿತ್ತು.

ಆದರೆ ಹೀಗೆ ನಟರಾಜನು ಕಾರ್ಮಿಕ ಮುಖಂಡರೊಡನೆ ವಾದ, ವಿವಾದ ಮಾಡಿ ಅತಿಯಾಗಿ ದಣಿವು ಮಾಡಿಕೊಳ್ಳುತ್ತಿದ್ದುದನ್ನು ಕಂಡು ಮಂಗಳೆ ಸಹಿಸದಾದಳು. ಒಂದು ದಿನವಂತೂ ನಟರಾಜನೊಡನೆ ರಾತ್ರಿ ಬಹಳ ಹೊತ್ತಿನ ತನಕ ಚರ್ಚಿಸುತ್ತ ಕುಳಿತ ಹುಸೇನನಿಗೆ "ಹೀಗಾದ್ರೆ, ನೀವುಗಳೆ ಸೇರಿಕೊಂಡು ಅವರ ಆರೋಗ್ಯ ಕೆಡಿಸಿದ ಹಾಗಾಗ್ತದೆ" ಎಂದು ಬಿರುಸಿನಿಂದ ನುಡಿದಳು. ತಕ್ಷಣ ತನ್ನ ತಪ್ಪು ತಿಳಿದು ತನ್ನ ಕಯ್ಯಿಂದ ತನ್ನೆರಡೂ ಕೆನ್ನೆಗಳಿಗೆ 'ತೋಬಾ–ತೋಬಾ' ಎಂದು ಹೊಡೆದುಕೊಂಡು ಹೊರಡಲನುವಾಗುತ್ತ ನಟರಾಜನೊಡನೆ ಹುಸೇನ್ "ಈ ಅಮ್ಮಣ್ಣಿ ನಿಮ್ಗೆ ಹೆಡತಿ ಆಗಿದ್ರೆ ಚೆಂದಾಗಿತ್ತು. ನಿಮ್ನ ಚೆಂದಾಗಿ ನೋಡಿಕತ್ತದೆ–ಆ ಇನ್ನೊಂದಮ್ಮಣ್ಣಿ ತುಂಬ ಹೆದರ್ತದೆ" ಎಂದು ನಗೆಯಾಡಿದ.

ಮಂಗಳೆ ಹೀಗೆ ಸರ್ಪಕಾವಲು ನಿಂತು ನಟರಾಜನ ಆರೈಕೆಯಲ್ಲಿ ತನ್ನ ತನುಮನಗಳೆರಡನ್ನೂ ಧಾರೆಯೆರೆದು ದುಡಿಯುತ್ತಿದ್ದಳು.

ಒಂದು ರಾತ್ರಿ ನಟರಾಜ, ಮಂಗಳೆ, ದುರ್ಗಿ ಮೂವರೂ ನಿದ್ರಿಸುತ್ತ ಮಲಗಿದ್ದರು. ಮಧ್ಯರಾತ್ರಿಯ ಸಮಯಕ್ಕೆ ಕೆಮ್ಮಲು ಹಠಾತ್ತನೆ ಬಂದು ನಟರಾಜ ಎದ್ದು ಕುಳಿತ. ಅವನು ಕೆಮ್ಮುವ ಸದ್ದು ಮಂಗಳೆಯನ್ನು ಎಚ್ಚರಗೊಳಿಸಿತು. ದುರ್ಗಿ ಮಾತ್ರ ಎಚ್ಚರವಾಗದೆ ಗಾಢನಿದ್ರೆಯಲ್ಲವಳು ಗೊರಕೆ ಹೊಡೆಯುತ್ತ ಮಲಗಿದ್ದಳು.

ಪೂರ್ಣವಾಗಿ ನಿಂತಿದ್ದ ಕೆಮ್ಮಲು ಈಗವನು ಕಾರ್ಮಿಕರೊಡನೆ ವಿಪರೀತವಾಗಿ ಹೊತ್ತು ಗೊತ್ತೆನ್ನದೆ, ಮಾತುಕತೆಯಾಡುತ್ತಿದ್ದುದರಿಂದಲೊ ಏನೊ ಮತ್ತೆ ಕಾಣಿಸಿಕೊಂಡಂತಿತ್ತು.

ಕೆಲ ನಿಮಿಷಗಳು ಏಕಪ್ರಕಾರ ಕೆಮ್ಮುತ್ತಿದ್ದ ನಟರಾಜನ ಬಳಿ ಸೇರಿ, ಅವನ ಬಾಗಿದ ಶಿರವನ್ನು ಹಿಡಿದು ನಿಂತಳು ಮಂಗಳೆ. ಕೆಮ್ಮು ನಿಂತ ಬಳಿಕ ಸ್ವಲ್ಪ ಕಿತ್ತಲೆ ಹಣ್ಣಿನ ರಸ ಕುಡಿಸಿ, ಅವನನ್ನು ಮೃದುವಾಗಿ ಹಾಸಿಗೆಯ ಮೇಲೆ ಮಲಗಿಸಿದಳು. ಅನಂತರ ಅವನ ಶಾಲು ಹೊದಿಸಿ ಮಲಗಲು ತೆರಳುತ್ತಿದ್ದ ಮಂಗಳೆಯ ಕೈಹಿಡಿದು ತನ್ನ ಪಕ್ಕದಲ್ಲಿ ಕೂರಿಸಿಕೊಂಡ ನಟರಾಜ.

ನಟರಾಜ ಹೀಗೆ ಪ್ರೀತಿಯಿಂದ ಕೈಹಿಡಿದಾಗ ಮಂಗಳೆಯ ಮೈಯೊಳಗೆ ವಿದ್ಯುತ್ ಸಂಚಾರವಾದಂತಾಯಿತು. ಅವಳನ್ನೇ ಪ್ರೇಮ ತುಂಬಿದ ನಯನಗಳಿಂದ ನೋಡುತ್ತಾ, "ಮಂಗ್ಲೀ....ನನಗಾಗಿ ಅದೆಷ್ಟು ತೊಂದರೆ ತಗೊಳ್ತಾ ಇದ್ದೀಯ ನೀನು?" ಎಂದನು.

ನಟರಾಜ ಹಿಂದೆ ಕರೆಯುತ್ತಿದ್ದ 'ಮಂಗ್ಲೀ' ಎಂದದ್ದು, ಮಂಗಳೆಗೆ ನಟರಾಜ, ತಾನು ಇಬ್ಬರೂ ಒಟ್ಟಿಗೇ ಕಳೆದ ಬಾಲ್ಯದ ಸುಖದ ದಿನಗಳ ಸವಿ ನೆನಪಾಯಿತು...ತಾವಿಬ್ಬರೂ ಚಿಕ್ಕವರಾಗಿದ್ದಾಗ ಕಾಡಿಗೆ ಹೋಗುತ್ತಿದ್ದುದೂ ಅಲ್ಲಿ ಅವರ ಆಟ, ನಾಗಜ್ಜಿ ಅವರಿಬ್ಬರನ್ನೂ ಕೂರಿಸಿಕೊಂಡು ಕಥೆ ಹೇಳುತ್ತಲಿದ್ದುದು, ಒಂದೊಂದನ್ನೂ ಅವಳ ಮನ ನೆನೆಯಿತು....

ಮಂಗಳೆ ಮೌನವಾದುದನ್ನು ಕಂಡ ನಟರಾಜ, "ಏನೇ ಮಂಗ್ಲೀ.... ಭಾಳ ದೀರ್ಘಾಲೋಚನೆ ಮಾಡ್ತಾ ಇರೋ ಹಾಗಿದೆ !" ಎಂದು ನಗೆಯಾಡಿದನು.

ಮಂಗಳೆ ತನ್ನ ಚಿತ್ತಕ್ಕೆ ಹೊಳೆದ ಸಕಲ ವಿಚಾರಗಳನ್ನೂ ಅವನ ಮುಂದಿಟ್ಟಳು. ಅದನ್ನೆಲ್ಲ ಕೇಳಿ ನಟರಾಜನ ಮನಸ್ಸೂ ಗತಕಾಲಕ್ಕೆ ಹರಿದು ಹಿಂದಿನ ಸುಖಗಳನ್ನು ಚಪ್ಪರಿಸಿ ಮತ್ತೊಮ್ಮೆ ಸವಿಯತೊಡಗಿತು....

"ನಾನೂ ನೀನು ಕಾಡಿನಲ್ಲಿ ಆ ಬಂಡೆ ಮೇಲೆ ನಿಂತುಕೊಂಡು ಒಬ್ಬರನ್ನೊಬ್ಬರ್ನ ಹೇಗೆ ಅಣಕಿಸಿಕೊಳ್ತಾ ಇದ್ದೊ?–ನಾನು ನಿನ್ನನ್ನ 'ಮಂಗೀ' ಅಂತ ಕರೆದಾಗ ನೀನು ರೇಗಿಕೊಂಡು ನನ್ನನ್ನು 'ಹುಚ್ಚಾ' ಅಂತ ಕರೆದಿದ್ದೆ" ಎಂದು ಹೇಳಿ ನಗಲಾರಂಭಿಸಿದ.

ನಗು ಯಾವಾಗಲೂ ಸಾಂಕ್ರಾಮಿಕ. ನಟರಾಜನೊಡನೆ ಹಾಸ್ಯಸಂಗತಿಯನ್ನ ನೆನೆಯುತ್ತಾ ಮಂಗಳೆಯು ನಗಲಾರಂಭಿಸಿದಳು.

ಆದರೆ ಸ್ವಲ್ಪ ಹೊತ್ತು ಹಾಗೆ ನಕ್ಕವಳು ಏನೋ ಹೊಳೆದು ಥಟ್ಟನೆ ನಗು ನಿಲ್ಲಿಸಿ ಚಿಂತೆಯಿಂದ ಹುಬ್ಬು ಗಂಟಿಕ್ಕಿದಳು–ಮಿಂಚು ಕೆಲ ಕ್ಷಣ ಹೊಳೆದು ಕಾರ್ಮೋಡ ಮುಸುಗಿದಂತಾಗಿತ್ತು, ಅವಳ ಮುಖವನ್ನೇ ನಿರೀಕ್ಷಿಸುತ್ತಿದ್ದ ನಟರಾಜನಿಗೆ! ಹಠಾತ್ತನೆ ಹೀಗೆ ಅವಳಲ್ಲಾದ ಮಾರ್ಪಾಡನ್ನು ನೋಡಿ ದಿಗ್ಭ್ರಮೆಗೊಂಡ ನಟರಾಜ, "ಯಾಕೆ ಮಂಗ್ಲೀ.... ಇದ್ದಕ್ಕಿದ್ದ ಹಾಗೇ ಹೀಗಾಗಿ ಬಿಟ್ಟೆ?" ಎಂದು ಕೇಳಿದ.

ಮಂಗಳೆ ಭಾರವಾಗಿ ಬಿಸಿಯುಸಿರು ಬಿಡುತ್ತಾ, ಎಲ್ಲೋ ಕನಸಿನಲ್ಲಿ ಮಾತಾಡುತ್ತಿರುವವಳಂತೆ, "ನಾನು ನಿನಗೆ ಇಷ್ಟು ಹತ್ತಿರ ಇದ್ದರೂ ನನಗೂ ನಿನಗೂ ಇರೋ ಅಂತರ ಗಮನಿಸಿದರೆ ನನ್ನ ಎದೆ ಒಡೆದುಹೋಗ್ತದೆ" ಎಂದು ಹೇಳಿ, ಬಿಕ್ಕುತ್ತ ಅಳಲಾರಂಭಿಸಿದಳು.

ನಟರಾಜ ಮಲಗಿದ್ದಂತೆಯೇ ಅವಳನ್ನು ಬರಸೆಳೆದು ಅಪ್ಪಿ, ಅವಳ ಕಣ್ಣೀರು ಮಿಡಿಯುತ್ತಾ "ಅಳಬೇಡ ಮಂಗ್ಲೀ...ನೀನು ನನಗೆಷ್ಟು ದೂರದಲ್ಲಿದ್ದರೂ ನನ್ನ ಹೃದಯಕ್ಕೆ ಮಾತ್ರ ಅತಿ ಸಮೀಪದಲ್ಲಿದ್ದೀಯೆ" ಎಂದ.

ಆ ಮಾತನ್ನಾಲಿಸಿದ ಮಂಗಳೆ ತೃಪ್ತಿಯಿಂದ ನಟರಾಜನ ಎದೆಯಮೇಲೆ ತನ್ನ ಶಿರಸ್ಸನ್ನಿರಿಸಿಕೊಂಡು ಹರ್ಷಾಶ್ರುಗಳನ್ನು ಸುರಿಸಿದಳು. ಅದರಿಂದ ನಟರಾಜನ ಆತ್ಮಕ್ಕೆ ಉಂಟಾದ ಸುಖ ಅವನ ಕಣ್ಣುಗಳಿಂದಲೂ ಕಂಬನಿಯಾಗಿ ಉದುರಿತು.

ಅವನನಪ್ಪಿ ಒರಗಿದಂತೆ, ಮಂಗಳೆಗೆ 'ನಾನು ಹೀಗೇ ಪ್ರಾಣ ಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆ !' ಎಂದೆನಿಸಿತು.

ಕೆಲಹೊತ್ತು ಹೀಗೆ ಕಳೆದದ್ದು ಮಂಗಳೆಯ ಮನಸ್ಸಿಗೆ ಕೆಲವು ಯುಗಗಳೇ ಕಳೆದುಹೋದಂತೆ ಭಾಸವಾಗಿ, ಎಚ್ಚತ್ತು, "ನಾನು ಇದೇನು ತಿಳುವಳಿಕೆಯಿಲ್ಲದೆ ಹೀಗೆ ಮಾಡ್ತಾ ಇದ್ದೀನಿ?–ನಟರಾಜನ್ನ ಅಳಿಸಿ ಮಾಡಿ, ಸಾಕು ಮಾಡ್ತಾ ಇದ್ದೀನಲ್ಲಾ" ಎಂದು ಹೇಳಿಕೊಳ್ಳುತ್ತಾ ಎದ್ದು ನಿಂತು, ನಟರಾಜನ ಕಣ್ಣೀರನ್ನು ತನ್ನ ಸೀರೆಯ ಸೆರಗಿನಿಂದ ಒರೆಸಿ, "ಈಗ ಅದ್ಯಾವುದೂ ಯೋಚ್ನೆ ಬೇಡ. ಸುಮ್ಮನೆ ಮಲಗಿಕೋ. ಸಾಕಾಗ್ತದೆ" ಎಂದು ಅವನಿಗೆ ಹೊದೆಸಿ ಮಲಗಿಸಿ, ತಾನೂ ಬಂದು ತನ್ನ ಚಾಪೆಯ ಮೇಲೆ ಉರುಳಿದಳು.

ಹಾಗೆ ಮಲಗಿದ ಮಂಗಳೆಗೆ ಬಹುಕಾಲ ನಿದ್ದೆ ಹತ್ತಲಿಲ್ಲ. ಬೆಳಗಿನ ಜಾವದಲ್ಲೆಲ್ಲೋ ಸ್ವಲ್ಪ ನಿದ್ದೆ ಬಂದಿತು. ಅದರಲ್ಲೂ ನಿದ್ದೆಗಿಂತ ಕನಸೇ ಹೆಚ್ಚು!... ಅವಳಿಗೆ ಬಿದ್ದ ಕನಸೂ ವಿಚಿತ್ರವಾಗೇ ಇತ್ತು–

ನಟರಾಜ ಮಂಗಳೆಯನ್ನು ತನ್ನ ಪಕ್ಕದಲ್ಲಿ ಕೂರಿಸಿಕೊಂಡು, "ನಾನು ನಿನ್ನನ್ನ ಮದುವೆ ಆಗ್ತೀನಿ ಮಂಗಳೆ" ಎಂದು ಹೇಳುತ್ತಿದ್ದ.

"ಅದು ಹೇಗೆ ಸಾಧ್ಯ?" ಎಂದು ತಬ್ಬಿಬ್ಬಾಗಿ ಪ್ರಶ್ನಿಸುತ್ತಿದ್ದಳು ಮಂಗಳೆ.

"ನನ್ನ ಹೃದಯ ಯಾವತ್ತೊ ನಿನ್ನನ್ನ ವರಿಸಿ ಆಗಿದೆ. ಈಗ ಉಳಿದಿರುವುದು ಬರಿಯ ಶಾಸ್ತ್ರ ಮಾತ್ರ!"

"ನಾನು ಬೇರೊಬ್ಬನಿಗೆ ವಿವಾಹವಾಗಿದ್ದೇನಲ್ಲಾ?"

"ಆಗಿದ್ದರೇನಂತೆ....ಆತ ನಿನ್ನನ್ನು ಬಿಟ್ಟು ಬೇರೊಂದು ಮದುವೆಯಾಗ್ತಾ ಇಲ್ಲವೇ?"

"ಆದರೆ....ದುರ್ಗಿ ಇರುವಳಲ್ಲಾ?"

"ಅವಳನ್ನು ಹೃದಯ ಮೆಚ್ಚಿ ಲಗ್ನವಾಗಿಲ್ಲ. ಬಲಾತ್ಕಾರಕ್ಕೆ ಕಟ್ಟುಬಿದ್ದು ಆದದ್ದು... ಅವಳು ಒಳ್ಳೆಯ ಗುಣವಂತೆಯಾದ ಹುಡುಗಿಯಾದ್ದರಿಂದ ಏನೊ ನಾನು ಅವಳ ಜೊತೆಯಲ್ಲಿರಲು ಒಪ್ಪಿ ಎಲ್ಲವನ್ನೂ ಸೈರಿಸಿದ್ದಾಯಿತು.... ಆದರೆ ನಿನ್ನ ವಿಷಯ ಬೇರೆ !... ಚಿಕ್ಕಂದಿನಿಂದಲೂ ನಾನು ನಿನ್ನಲ್ಲಿ ಅನುರಕ್ತನಾಗಿದ್ದೇನೆ... ನೀನೆ ನನ್ನ ಪಟ್ಟ ಮಹಿಷಿ !... ನೀನಿಲ್ಲದೆ ನನ್ನ ಬಾಳು ಪೂರ್ಣವಾಗುವುದಿಲ್ಲ–ನೀನು ನನಗೆ ಬೇಕು. ನೀನು ನನಗೆ ಬೇಕು" ಎಂದಂತಾಗಿ, ಹಿಗ್ಗಿ ಹಿಗ್ಗಿ ಹೃದಯ ನಲಿಯುತ್ತಿರಲು ಎದ್ದು ಕುಳಿತಳು ಮಂಗಳೆ ....

ಆಗಲೇ ಶ್ರೀರಾಮುಲು ನಾಯಿಡುರವರು ಸಾಕಿದ್ದ ಕೋಳಿಗಳು ಎಚ್ಚೆತ್ತು "ಇನ್ನೂ ಏಕೆ ಮಲಗಿದೀರಿ, ಆಗಲೇ ಬೆಳಕು ಹರಿದಿದೆ. ಏಳಿ ಏಳಿ" ಎಂದು ಆ ಮನೆಯ ಸುತ್ತಿನ ಜಗತ್ತನ್ನು ತಮ್ಮ 'ಕೊ–ಕ್ಕೊ–ಕ್ಕೋ'ವಿನಿಂದ ಏಳಿಸುತ್ತಿರುವಂತೆ ಧ್ವನಿ ಮಾಡುತ್ತಿದ್ದವು. ಮಂಗಳೆ ಮಲಗಿದ ನಟರಾಜನನ್ನೊಮ್ಮೆ, ದುರ್ಗಿಯನ್ನೊಮ್ಮೆ ನೋಡಿ. "ನನ್ನ ಕನಸು ದಿಟವಾಗೂ ನನಸಾಗುವುದೇ?" ಎಂದು ಆಳವಾಗಿ ಚಿಂತಿಸಿ, ಆ ಬಳಿಕ "ಅದೆಲ್ಲಿ ಸಾಧ್ಯ?" ಎಂದು ನಿಡಿದಾಗಿ ಉಸಿರ್ಗರೆದು, ನಟರಾಜನೇಳುವುದರಲ್ಲಿ ಕಾಫಿ ಸಿದ್ಧಪಡಿಸಬೇಕಾದ್ದರಿಂದ, ಆತುರವಾಗೆದ್ದು ಸ್ನಾನಗೃಹದತ್ತ ಧಾವಿಸಿದಳು.

ಸ್ನಾನ ಮುಗಿಸಿ ಮಂಗಳೆ, ಬೇಗ ಬೇಗ ಉರಿ ಹಚ್ಚಿ ಕಾಫಿಗಿಟ್ಟು ಬಂದು ದುರ್ಗಿಯನ್ನೆಬ್ಬಿಸಿದಳು. ಅನಂತರ ದುರ್ಗಿ ಸ್ನಾನ ಮಾಡುತ್ತಿರುವಂತೆ ಹಾಲಿನವಳು ತಂದ ಹಾಲು ಕಾಯಿಸಿ ಕಾಫಿ ಬೆರೆಸಿದಳು. ಒಂದು ಲೋಟ ಕಾಫಿಯನ್ನು, ಸ್ನಾನ ಮಾಡಿ ಬಂದ ದುರ್ಗಿಗೆ ಕೊಟ್ಟು, ತಾನು ನಟರಾಜನಿಗೆ ಕಾಫಿ ಕೊಟ್ಟು ಬಂದ ಬಳಿಕ ಕಾಫಿ ಬೆರೆಸಿಕೊಳ್ಳುವುದಾಗಿ ಹೇಳಿ, ಇನ್ನೊಂದು ಲೋಟ ಕಾಫಿಯನ್ನು ಕೈಯಲ್ಲಿ ಹಿಡಿದು ನಟರಾಜ ಮಲಗಿದ್ದ ಕೋಣೆಯ ಕಡೆ ನಡೆದಳು. ಆಗ ಕಾಫಿಯನ್ನು ಕುಡಿದು ದುರ್ಗಿ ಅಡುಗೆಯ ಇತರ ಕೆಲಸಗಳಲ್ಲಿ ನಿರತಳಾಗಿ ಅಡುಗೆ ಮನೆಯಲ್ಲೇ ಉಳಿದಳು.

ಮಂಗಳೆ ನಟರಾಜನ ಕೋಣೆಗೆ ಕಾಲಿಟ್ಟಂತೆ ಅವಳು ಕಂಡ ದೃಶ್ಯ ಅವಳನ್ನು ಚಕಿತಗೊಳಿಸಿತು.

* * * * *

ನಟರಾಜನಾಗಲೇ ಕಣ್ಣು ಬಿಟ್ಟು ತೆರೆದ ಕಿಟಕಿಯಲ್ಲಿ ಕಾಣುತ್ತಿದ್ದ ಸೂರ್ಯೋದಯವನ್ನೇ ವೀಕ್ಷಿಸುತ್ತ ಮಲಗಿದ್ದ.

ಪೂರ್ವ ದಿಗಂತದಲ್ಲಿ ಕೆಂಪು–ಹಳದಿಯಾಗಿ–ಕಿತ್ತಲೆಯಾಗುತ್ತಿತ್ತು. ರವಿಯ ಬಂಗಾರಗಿರಣಗಳು ನಟರಾಜನ ಕೋಣೆಯ ಹೊರಗಿದ್ದ ಸಂಪಗೆ ಎಲೆಗಳ ಹಸುರಿನ ಮೇಲೆ ಚೆಲ್ಲಾಟವಾಡಿ ಬಂದು ನಟರಾಜನ ಸೊರಗಿದ್ದ ಮುಖವನ್ನು ಬೆಳಗುತ್ತಿದ್ದುವು.

ಹೊರಗೆ ಬಗೆಬಗೆಯ ಹಕ್ಕಿಗಳು ಉದಯರಾಗವನ್ನು ಇನಿದನಿಯಲ್ಲಿ ಹಾಡುತ್ತಿದ್ದವು.... ಅದನ್ನು ಆಲಿಸಿದಂತೆ ನಟರಾಜನ ಆತ್ಮ, ಸೃಷ್ಟಿಯ ಅಮರಗಾನದಲ್ಲಿ ತೇಲಿದಂತಾಯಿತು–

ಸಂಭ್ರಮದಿಂದ ಹಸುರು ಸೀರೆಯ ನಿರಿ ಚಿಮ್ಮುತ್ತ, ಬಳಕುವ ಬಾಳೆಯಂತೆ ತೇಲಿ ನಡೆದು ಬಂದು ಮಂಗಳೆ ಕೋಣೆಯ ಬಾಗಿಲ ಬಳಿ ಕ್ಷಣಕಾಲ ತಡೆದು ನಿಂತಳು.

ಅವಳು ಹಾಗೆ ನಡೆದು ಬಂದು ನಿಂತಾಗ ರೂಪು, ಯೌವನಗಳೆರಡೂ, ಅವಳ ಜತೆ ಜತೆಯೇ ಅವಳನ್ನು ಕೂಡಿಯೇ ಹರಿದು ಬಂದು ನಿಂತಂತಾಯಿತು. .... ರೂಪಿಗೆ ತಕ್ಕ ಹರಯ, ಹರಯಕ್ಕೆ ತಕ್ಕ ರೂಪು ! ಬಗಸೆಗಂಗಳ, ನೀಳವೇಣಿಯ, ವಕ್ರರೇಖಾ ಸಮೂಹದ ಬಳ್ಳಿ ದೇಹವುಳ್ಳ ಆ ಸುಂದರಿಯು ಹಸುರುಡೆಯುಟ್ಟ ಬನದೇವಿಯಂತೆ ಶೋಭಿಸಿದಳು.

ಕಾಫಿಯ ಲೋಟ ಕೈಯಲ್ಲಿ ಹಿಡಿದು ಹಾಗೆ ನಿಂತ ಮಂಗಳೆ ಕಿಟಕಿಯ ಬಳಿ ಮಂಚದ ಮೇಲೆ ಮಲಗಿದ ನಟರಾಜನನ್ನೇ ಎವೆಯಿಕ್ಕದೆ ನಿರುಕಿಸಿದಳು.

ಯಾವುದೊ ಅವ್ಯಕ್ತ ಶಕ್ತಿಯ ಪ್ರಭಾವದಲ್ಲಿ ಆತನಿಗೆ ಹೊಸ ಚೈತನ್ಯ ಬಂದಂತಿತ್ತು. ಬಾಡಿ, ಸೊರಗಿದ್ದ ಆ ಮುಖ, ಅತುಲ ಆನಂದದಲ್ಲಿ ಮಿಂದು ಅವಳು ಮುಡಿದ ಮಲ್ಲಿಗೆಯಂತೆ ಮೋಹಕವಾಗಿತ್ತು....ನಟರಾಜ ಆ ಬೆಳಗಿನಲ್ಲಿ ಅತ್ಯಂತ ಸುಖಿಯಾಗಿ ತೋರಿದ–ರಾತ್ರೆ ಮಂಗಳೆಯ ಮತ್ತು ತನ್ನ ಹೃದಯಗಳು ಬಹುಕಾಲದ ನಂತರ ಮತ್ತೆ ಒಂದಾಗಿ ಸ್ನೇಹ ಬೆಳೆಸಿದ ಉಲ್ಲಾಸ ಬಹುಶಃ ನಟರಾಜನ ಈ ಆತ್ಮತೃಪ್ತಿಗೆ ಕಾರಣವಿದ್ದರೂ ಇರಬಹುದು– ನಟರಾಜ ಸಣ್ಣದಾಗಿ ಹಾಡಿಕೊಳ್ಳುವುದಕ್ಕೂ ಆರಂಭಿಸಿದ.

ನಟರಾಜ ಹಾಗೆ ಸುಖಿಯಾಗಿದ್ದುದನ್ನು ಮಂಗಳೆ ನೋಡಿ ಎಷ್ಟೋ ಕಾಲವಾಗಿತ್ತು. ಆ ಸುಖದಲ್ಲಿ ಮಂಗಳೆಯೂ ಸುಖಿಯಾದಳು....

ನಿಸರ್ಗದ ಮೋಡಿಯಿಂದ ಮಂಗಳೆ ಎಚ್ಚೆತ್ತಾಗ, ಅವಳ ಕಯ್ಯಲ್ಲಿನ ಕಾಫಿ ಆಗಲೇ ಆರುವುದರಲ್ಲಿತ್ತು "ಎಂಥ ಹುಚ್ಚು!" ಎಂದು ಮಂಗಳೆಗೆ ನಗುವುಕ್ಕಿತು. ಅವಳ ಚಿತ್ತವೂ ರಾತ್ರೆಯ ಸುಮಧುರ ವಾತಾವರಣವನ್ನು ಚಿತ್ರಿಸಿಕೊಳ್ಳುತ್ತಿತ್ತೇನೋ?... ನಾಚಿ ನಾಚಿ ಮುನ್ನಡೆದು ಬಂದಳು ಮಂಗಳೆ.

ಉಷಾ ಸುಂದರಿಯಲ್ಲಿ ಲೀನವಾದ ನಟರಾಜನ ಮನಸ್ಸು ಇನ್ನೂ ಅವಳಲ್ಲೇ ಇತ್ತು. ಅವನ ಪಕ್ಕದಲ್ಲಿ ಬಂದು ನಿಂತ ಮಂಗಳೆ "ಕಾಫಿ" ಎಂದಾಗಲೇ ನಟರಾಜನಿಗೆ ಎಚ್ಚರ!

"ಕಾಫಿ?–ಯಾವಾಗ ಬಂದೆಯೇ ಮಂಗ್ಲೀ?" ಎಂದು ಹೇಳುತ್ತ ಎದ್ದು ಕುಳಿತ ನಟರಾಜ.

"ಕೊಂಚ ಹೊತ್ತಾಯ್ತು."

"ಕೊಂಚ ಅಂದರೆ?" ಎಂದು ಹುಸಿನಗು ನಗುತ್ತಾ ಕೇಳಿದ.

ನಟರಾಜನ ಪ್ರಶ್ನೆ ಮಂಗಳೆಯ ಮುಖಕ್ಕೆ ಕುಂಕುಮವನ್ನೆರಚಿತು. ಹೊಸ ನಾಚಿಕೆಯನ್ನನುಭವಿಸಿ, "ಕಾಫಿ ಆರಿದೆ" ಎಂದಳು.

"ಚಿಂತೆಯಿಲ್ಲ."

"ಹೇಳಲೇಬೇಕೇನು?" ಮಂಗಳೆಯ ತುಟಿಯ ಮೇಲೆ ನಾಜೂಕು ನಗುವಿನ ತೆರೆ ಮೂಡಿತು.

"ಹೂ" ಎಂದ ನಟರಾಜ ಹುಸಿಸಿಟ್ಟಿನಿಂದ.

"ರಾಯರ ಸಂಗೀತ ಕಚೇರಿ ನಡೆಯುತ್ತಿದ್ದಾಗ!"

"ಸಂಗೀತ ಕಚೇರಿ!" – ನಟರಾಜ ನಕ್ಕ.

ಮಂಗಳೆಯೂ ನಕ್ಕಳು. ಆ ಬೆಳಗು ಎಷ್ಟು ಹಿತಕರವಾಗಿತ್ತು! ಹಾಗೆ ನಗುತ್ತಿದ್ದಂತೆ ನಟರಾಜ ನಗುವನ್ನು ನಿಲ್ಲಿಸಿ ಹಠಾತ್ತನೆ "ಮಂಗ್ಲೀ–ಮಂಗ್ಲೀ–" ಎಂದು ಕೂಗಲಾರಂಭಿಸಿದ. ಅವನ ಹುಬ್ಬು ಗಂಟಿಕ್ಕಿತ್ತು. ಕಣ್ಣಿನಲ್ಲಿ ತೀವ್ರವಾದ ಯಾತನೆಯ ಪ್ರವಾಹ ಉಕ್ಕುತ್ತಿತ್ತು.

ಮಂಗಳೆಗೆ ಗಾಬರಿಯಾಯಿತು.

"ಏನು?"

"ಅಲ್ಲಿ ನೋಡು!"

ನಟರಾಜನ ಕೈ ಬೀದಿಯ ಕಡೆ ತೋರುತ್ತಿತ್ತು–ಮಂಗಳೆ ನೋಡಿದಳು. ಉದ್ದವಾದ ಬರಲನ್ನು ಹಿಡಿದ ಝಾಡಮಾಲಿ ಹೆಂಗಸೊಬ್ಬಳು ಬೀದಿಯ ಕಸವನ್ನು ಗುಡಿಸುತ್ತಿದ್ದಾಳೆ. ಜೀರ್ಣವಾದ ಅವಳ ದೇಹ, ಅವಳು ಹಿಡಿದ ಬರಲನ್ನೂ ನಾಚಿಸುವಷ್ಟು ಒಣಗಿ ಕಡ್ಡಿಯಾಗಿದೆ. ಆ ದೇಹವನ್ನು ಅರೆ ಮರೆಯಾಗಿ ಸುತ್ತಿದ ಚಿಂದಿಬಟ್ಟೆ ಅವಳ ಹೀನಸ್ಥಿತಿಯ ನಗ್ನಾವಸ್ಥೆಯನ್ನು ಎತ್ತಿ ತೋರುತ್ತಿದೆ.

ಅಷ್ಟು ದೂರದಲ್ಲಿ ರಸ್ತೆಯ ಬದಿಗೆ ಹುಡಿಮಣ್ಣಿನಲ್ಲಿ ಎಲುಬಿನ ಹಂದರವಾಗಿದ್ದ ಒಂದು ಒಂದೂವರೆ ವರ್ಷದ ಅವಳ ಕೂಸು ನಿಶ್ಚೇಷ್ಟಿತವಾಗಿ ಮಲಗಿದೆ. ಅದು ಆಗಿಂದಾಗ್ಗೆ ವಿಕಾರವಾದ ಕ್ಷೀಣ ಸ್ವರದಲ್ಲಿ ರೋದಿಸದಿದ್ದರೆ ಆ ಮಗುವಿಗೆ ಜೀವವಿದೆ ಎಂದು ಯಾರೂ ನಂಬುವಂತಿರಲಿಲ್ಲ.

ತನ್ನ ಕಂದನ ಹೊಟ್ಟೆಯ ಆತುರವನ್ನು ಗ್ರಹಿಸಿ ಬೇಗ ಬೇಗ ಕಸ ಗುಡಿಸುತ್ತಿದ್ದ ಆ ಝಾಡಮಾಲಿಗೆ ಅಂದಿನ ಅದ್ಭುತ ರವಿಯುದಯದ ಅರಿವೇ ಆದಂತಿರಲ್ಲಿಲ್ಲ. ಅಲ್ಲದೆ, ಇಡೀ ವಿಶ್ವವನ್ನೇ ತನ್ನ ಸಂಗೀತದ ಪುಷ್ಕರಣಿಯಲ್ಲಿ ಮುಳುಗಿಸಿದ್ದ ಪ್ರಭಾತದ ದಿವ್ಯಗಾನ ಅವಳ ಹೃದಯದ ಅಂಚನ್ನೂ ಮುಟ್ಟಿದಂತೆ ತೋರಲಿಲ್ಲ. ಅವಳಿಗೆ ಆಗಿಂದಾಗ ಕೇಳಿ ಬರುತ್ತಿದ್ದ ಒಂದೇ ಒಂದು ಸಂಗೀತದ ಚರಣವೆಂದರೆ ಅವಳ ಕೂಸಿನ ತೀರದ ಹಸಿವಿನ ಗೋಳಿನ ರಾಗ!

ಆ ಝಾಡಮಾಲಿ ಹೆಂಗಸನ್ನೇ ನೋಡುತ್ತಾ ನಟರಾಜ ಹೇಳಿದ :

"ಮಂಗ್ಲೀ, ಆ ಹೆಂಗಸನ್ನು ನೋಡು. ತಲೆ ತಗ್ಗಿಸಿ ಒಂದು ಗಳಿಗೆಯೂ ಬಿಡುವಿಲ್ಲದೆ ತನ್ನ ಪಾಡಿಗೆ ತಾನು ಒಂದೇ ಸಮನೆ ದುಡಿಯುತ್ತಿದ್ದಾಳೆ. ಸೂರ್ಯೋದಯದ ಸೌಂದರ್ಯದ ಅರಿವೇ ಆಕೆಗಿಲ್ಲ...."

ಮಂಗಳೆ ಚಿಂತಿಸುತ್ತಿದ್ದಳು.

ಹೌದು. ಮುಗಿಯದ ಹೊಟ್ಟೆಯ ಹೋರಾಟದಲ್ಲಿ ಇಂಥ ಶ್ರಮಜೀವಿಗಳ ಬಾಳು ಸೆರೆಯಾಗಿದೆ. ಹೊಟ್ಟೆಯ ಚಿಂತನೆಯಲ್ಲದೆ ಮತ್ತಾವ ವಿಚಾರಕ್ಕೂ ಅಲ್ಲಿ ಆಸ್ಪದವೇ ಇಲ್ಲ–

ಗದ್ಗದಿತ ಕಂಠನಾಗಿ ನಟರಾಜ ಮಾತು ಬೆಳೆಸಿದ :

"ಸೂರ್ಯೋದಯ ಸೂರ್ಯಾಸ್ತಗಳನ್ನು ನೋಡಿ ಹಿಗ್ಗುವಷ್ಟು ಸಂಸ್ಕೃತಿ ಈ ಬಡ ಕೂಲಿಗಳಿಗೂ ಇದೆ ಮಂಗ್ಲೀ. ಆದರೆ ನಿಸರ್ಗದ ಚೆಲುವನ್ನು ಸವಿಯಲು ಇವರಿಗೆ ಪುರಸತ್ತಿಲ್ಲ. ಗಂಟೆಗಟ್ಟಲೆ, ದಿನಗಟ್ಟಲೆ, ವರ್ಷಗಟ್ಟಲೆ ರಕ್ತವನ್ನು ನೀರು ಮಾಡುವ ಕೂಲಿಯೇ ಇವರ ಸೂರ್ಯೋದಯ ಸೂರ್ಯಾಸ್ತ!"

ಒಳಗಿನಿಂದ ಶೋಕದ ಬುಗ್ಗೆ ಉಕ್ಕಿ, ಕಣ್ಣು ಹನಿಯಾಯಿತು.

ನಟರಾಜನ ಮಾತಿನ ಸುತ್ತ ಸಂಕಟ ಬೆರೆತಿತ್ತು.

"ಇವರನ್ನು ನೋಡಿ ತಪ್ಪು ಮಾಡಿದವನಂತೆ, ಅತೀವ ಯಾತನೆಯಿಂದ ನನ್ನ ಎದೆ ಮಿಡಿಯುತ್ತಿದೆ.... ನನ್ನ ನಾಡಿನ, ನನ್ನ ಕರ್ಣಾಟಕದ, ನನ್ನ ಭಾರತದ, ಸಹಸ್ರ ಸಹಸ್ರ ಜನತೆ

ಹಿಡಿ ಕೂಳಿಗಾಗಿ ಒರಲುತ್ತಿರುವಾಗ ನಾನು-ಓ ! ನಾನು ಸೌಂದರ್ಯದ ದಂತದ ಗುಡಿಯ ಪೂಜಾರಿಯಾದೆನಲ್ಲಾ !... ಅಪರಾಧ....ಅಪರಾಧ"

ಮಾತು ಮಾತು 'ಅಯ್ಯೊ' ಎಂದು ನರಳುವಂತಿತ್ತು.

ಹನಿಯ ಹಿಂದೆ ಹನಿ ಜಾರಿತು.

ದಾರ ದಾರವಾಗಿ ಹರಿದ ನೀರು ಬತ್ತಿದ ಕೆನ್ನೆಗಳ ಮೇಲಿಂದ ಹಾಸಿಗೆಗೆ ಉರುಳಿತು.

ನಟರಾಜನನ್ನೇ ನೋಡುತ್ತಿದ್ದ ಮಂಗಳೆಯ ಹೆಣ್ಣು ಹೃದಯ ಮಮ್ಮಲ ಮರುಗಿತು. ಅವಳ ಎರಡೂ ಕಣ್ಣುಗಳಿಂದ ಕಣ್ಣೀರಿನ ಮಳೆಯೇ ಕರೆಯಿತು... ಗಂಡಸೇ ಅತ್ತಾಗ ಹೆಂಗಸಿನದೇನು? ಅದರಲ್ಲೂ ಅವಳ ನಟರಾಜ ಅತ್ತಾಗ.

ಬರಬರುತ್ತಾ ದುಃಖ ದಮನವಾಗಿ ಕಣ್ಣೀರಿನ ಮಳೆ ಕೊಂಚವಾಗಿ ನಿಲ್ಲುತ್ತ ಬಂದಿತು.

ನೀರಿನ ತೆರೆಯಲ್ಲಿಯೇ ಮತ್ತೊಮ್ಮೆ ನಟರಾಜನ ಕಡೆ ತಿರುಗಿದಳು–

ಭವ್ಯವಾದ ಹಣೆ; ಗಂಟಿಕ್ಕಿದ ಹುಬ್ಬು; ಸಂಕಟವಿದ್ದರೂ, ಮೊನೆಯಾದ ನೋಟ : ಬಿಗಿದ ತುಟಿ–

ಎಲ್ಲದರಲ್ಲಿಯೂ ನಟರಾಜನ ದಯಾರ್ದ್ರ ಹೃದಯ ಇಣುಕುತ್ತಿತ್ತು.

೪೯

ಅದೇ ಮಧ್ಯಾಹ್ನ–

ಕಲ್ಲಹಳ್ಳಿಯಿಂದ ಬಂದ ಪುಟ್ಟ ಹೆರಿಗೆ ಕಷ್ಟವಾಗಿ ಪಾರ್ವತಮ್ಮ ತೀರಿಕೊಂಡ ಸುದ್ದಿ ತಂದು ಎಲ್ಲರನ್ನೂ ದುಃಖಸಾಗರದಲ್ಲಿ ಮುಳುಗಿಸಿದನು. ನಟರಾಜನಿಗಂತೂ ಅದು ನಂಬಲಾಗದ ಸುದ್ದಿಯಾಗಿತ್ತು : "ನನ್ನೋಳು ಅಂತ ಹೇಳಿಕೊಳ್ಳೋಕೆ ಅವಳೊಬ್ಬಳೇ ಹಿರಿಯೋಳಿದ್ದಳು. ಅವಳ್ನೂ ಕಳೆದುಕೊಂಡು ಇವತ್ತೀಗ ಖಂಡಿತವಾಗಿ ತಬ್ಬಲಿಯಾದೆ" ಎಂದು ಮಂಗಳೆಯೊಡನೆ ಹೇಳಿಕೊಂಡು ಗಳಗಳನೆ ಕಣ್ಣೀರಿಟ್ಟನು ನಟರಾಜ. ತಾಯಿಯನ್ನು ಕಳೆದುಕೊಂಡ ಮಂಗಳೆಗೂ ಅಪಾರ ಶೋಕ. 'ಪಾರ್ವತಜ್ಜಿ'ಯನ್ನು ಬಹುವಾಗಿ ಪ್ರೀತಿಸುತ್ತಿದ್ದ ದುರ್ಗಿಯೂ ಅವಳ ಮರಣವಾರ್ತೆ ಕೇಳಿ ಅಳತೊಡಗಿದಳು. ಅಂತೂ ಆ ದಿನ ಚಿಕ್ಕ ಮನೆ ಗೋಳಿನ ಮನೆಯಾಗಿ ಪರಿಣಮಿಸಿತ್ತು.

ಹೀಗೆ ಬಹಳವಾಗಿ ಅಳುತ್ತಿರುವಾಗ ನಟರಾಜನಿಗೆ ಅಸಾಧ್ಯ ಕೆಮ್ಮು ಬಂದಿತು. ಬಾಯಿಗೆ ಟವಲ್ಲನ್ನು ಇಟ್ಟು ಕೆಮ್ಮಿದ–ಸ್ವಲ್ಪ ಹೊತ್ತು ಬಿಟ್ಟು ನೋಡಿದಾಗ ಅವನು ರಕ್ತ ಕಾರಿದ್ದುದು ಮಂಗಳೆಯ ಗಮನಕ್ಕೆ ಬಂತು !– ಅವಳು ಅಳುತ್ತಲೇ ಹೋಗಿ (ನಾಯಿಡು

ಇಲ್ಲದಿರಲು) ನಂಜುಂಡಸ್ವಾಮಿಗೆ ಹೇಳಿ ಡಾಕ್ಟರ್ ಮುನಿಸ್ವಾಮಿಯನ್ನು ಕರೆಸಿದಳು. ಡಾಕ್ಟರ್ ಮುನಿಸ್ವಾಮಿ ಬಂದು ನೋಡಿ ಗಾಬರಿಗೊಂಡು "ಸೀರಿಯಸ್ ಕೇಸ್ !" ಎಂದುಕೊಳ್ಳುತ್ತಾ ಅವನನ್ನು ಕ್ಷಯದ ಆಸ್ಪತ್ರೆಗೆ ತಮ್ಮ ಮೋಟಾರಿನಲ್ಲೇ ಕೂರಿಸಿಕೊಂಡು ಹೋಗಿ ನಟರಾಜನ ಎದೆಯನ್ನು 'ಸ್ಕ್ರೀನ್' (Screen) ಮಾಡಿಸಿದನು. ಆ ಪರೀಕ್ಷೆಯಿಂದ ನಟರಾಜನಿಗೆ ಕ್ಷಯರೋಗ ಅಂಟಿದೆಯೆಂದೂ, ಅವನನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿಬಿಡಬೇಕೆಂದೂ ಅಲ್ಲಿಯ ಡಾಕ್ಟರುಗಳು ಅಭಿಪ್ರಾಯಪಟ್ಟರು. ಅದರಂತೆ ನಟರಾಜನನ್ನು ಕ್ಷಯದ ಆಸ್ಪತ್ರೆಗೆ ಅದೇ ರಾತ್ರಿ ಸೇರಿಸಲಾಯಿತು.

ಮಂಗಳೆಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ತನ್ನ ಜೀವದಂತಿದ್ದ ತಾಯಿಯ ಅಂತ್ಯಕ್ರಿಯೆಗೆ ಹೋಗುವುದೇ, ಬೇಡವೇ ಎಂದು ಬಹಳವಾಗಿ ಯೋಚಿಸಿ ಕಡೆಗೆ 'ನಟ್ರಾಜನನ್ನಾದ್ರೂ ಉಳಿಸಿಕೋಬೇಕು–ಈ ಕಾರ್ಯ ನಮ್ಮ ತಾಯಿ ಆತ್ಮಕ್ಕೆ ಅತ್ಯಂತ ಪ್ರಿಯ' ಎಂದು ನಿರ್ಧರಿಸಿ, ತನ್ನ ನಿರ್ಧಾರವನ್ನು ಪುಟ್ಟನ ಮೂಲಕ ತಂದೆಗೆ ಮುಟ್ಟಿಸಿ, ನಟರಾಜನ ಶುಶ್ರೂಷೆಗಾಗಿ ಭಾರವಾದ ಹೃದಯದಿಂದ ಮೈಸೂರಿನಲ್ಲೇ ಉಳಿದುಕೊಂಡಳು.

ದಿನ ಕಳೆದಂತೆ ಆಸ್ಪತ್ರೆಯಲ್ಲಿ ನಟರಾಜ ಕ್ಷಯಿಸುತ್ತಾ ಬಂದ. ಮಂಗಳೆ ತನ್ನ ಶಕ್ತಿ ಮೀರಿ ಅವನಿಗೆ ಉಪಚಾರ ಮಾಡಿದಳು. ಗರ್ಭಿಣಿಯಾಗಿದ್ದ ದುರ್ಗಿಯನ್ನು ಮನೆಯಲ್ಲಿ ಅಡುಗೆ ಮಾಡಲು ಬಿಟ್ಟು ತಾನೇ ಆಸ್ಪತ್ರೆಯಲ್ಲಿ ಮಲಗುವುದು ಮೊದಲುಗೊಂಡು ಸಕಲೋಪಚಾರಗಳನ್ನೂ ಮಾಡುತ್ತಿದ್ದಳು. ಒಂದೊಂದು ವೇಳೆ ಅವನ ಹತ್ತಿರ ಕುಳಿತಂತೆ ಅವನ ಉಗುಳಿನ ತುಂತುರು ಅವಳ ಮುಖಕ್ಕೆಲ್ಲಾ ಹಾರುವುದು. ಅವಳು ಅದ್ಯಾವುದಕ್ಕೂ ಲಕ್ಷ್ಯ ಕೊಡುತ್ತಿರಲಿಲ್ಲ. ತನ್ನ ನಟರಾಜನಿಗೆ ಈ ಕೆಟ್ಟ ಕಾಯಿಲೆಯಿಂದ ಗುಣವಾಗಬೇಕು, ಎಂಬ ಒಂದೇ ಯೋಚನೆ ಅವಳಿಗೆ! ಇವಳ ಅಸಾಧಾರಣ ಶುಶ್ರೂಷೆಯನ್ನು ನೋಡಿದ ಆಸ್ಪತ್ರೆಯ ನರ್ಸುಗಳು "ಆ ಪೇಶಂಟ್ ಹತ್ತಿರ ನಾವೇನೂ ಹೋಗಬೇಕಾಗಿಲ್ಲ. ಮಂಗಳಾ ಆತನ್ನ ನಮಗಿಂತಲೂ ಸೊಗಸಾಗಿ ನರ್ಸ್ ಮಾಡ್ತಾಳೆ" ಎಂದು ಅವಳಲ್ಲಿ ಪೂರ್ಣ ನಂಬುಗೆಯಿಟ್ಟು ಹೆಚ್ಚಾಗಿ ಆ ಕಡೆ ಸುಳಿಯದೆ ಅಷ್ಟು ಕಾಲ ತಮಗೆ ಅಗತ್ಯವಾಗಿ ಬೇಕಾಗಿದ್ದ ವಿರಾಮ ತೆಗೆದುಕೊಳ್ಳುತ್ತಿದ್ದರು.

ನಟರಾಜನನ್ನು ನೋಡಲು ಬರುತ್ತಿದ್ದವರಲ್ಲಿ ಹೆಚ್ಚಾಗಿ ಕಾರ್ಮಿಕರೇ ಇರುತ್ತಿದ್ದರು. ಅವರು ಬರುವಾಗ ತಪ್ಪದೇ ಒಂದು ಕಿತ್ತಲೆಹಣ್ಣನ್ನೊ, ಇಲ್ಲವೇ ಚಪ್ಪರದ ದ್ರಾಕ್ಷಿಯನ್ನೊ ಜೊತೆಯಲ್ಲಿ ತರುತ್ತಿದ್ದರು. ಅವರು ಹೊರಟು ಹೋದ ನಂತರ ನಟರಾಜ ಆ ವಿಷಯವಾಗಿ ಮಂಗಳೆಯ ಸಂಗಡ ಪ್ರಸ್ತಾಪಿಸುತ್ತ, "ನೋಡು ಮಂಗ್ಲೀ–ಈ ಬಡ ಜನರ ಹೃದಯದಲ್ಲಿ ಎಷ್ಟು ಐಶ್ವರ್ಯ ತುಂಬಿದೆ! ದಯಾ, ನೀತಿ, ಸತ್ಯ ಉಳಿದಿರೋದು ಈ ಜನದಲ್ಲೇ, ಶ್ರೀಮಂತರಲ್ಲಲ್ಲ–" ಎನ್ನುವನು.

ಹೀಗಿರುವಾಗ ಒಂದು ದಿನ ನಟರಾಜ, ಮಂಗಳೆ ತನಗೆ ಕಿತ್ತಳೆ ಹಣ್ಣಿನ ತೊಳೆಗಳನ್ನು ಸುಲಿದು ಬಾಯಗಿಡುತ್ತಿರುವಂತೆ, "ಅನಂತು ಎಲ್ಲಿ? ಅಷ್ಟು ದಿನದಿಂದ ಕಾಣ್ತಾ ಇಲ್ಲವಲ್ಲಾ?" ಎಂದು ಕೇಳಿದನು.

ದಿನವೂ ಏನಾದರೊಂದು ಸುಳ್ಳು ಹೇಳಿ ಪಾರಾಗುತ್ತಿದ್ದ ಮಂಗಳೆಗೆ ಇಂದು ಸತ್ಯ ನುಡಿಯದೆ ನಿರ್ವಾಹವಿಲ್ಲ, ಎನಿಸಿತು. ಅವಳು ನಡೆದುದನ್ನೆಲ್ಲ ಸಾಂಗವಾಗಿ ಹೇಳಬೇಕಾಯಿತು–

ಅನಂತನನ್ನು ವಿಶಾಲಿ ವಿಷವುಣಿಸಿ ಕೊಂದಿದ್ದಳು. ಅವಳ ಪಕ್ಕದ ಮನೆಯಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಓದಲು ಬಂದಿದ್ದ ಆ ಮನೆಯವರ ದೂರದ ಸಂಬಂಧದ ತರುಣನಲ್ಲಿ ಮೋಹಿತಳಾಗಿ ಸ್ನೇಹ ಬೆಳೆಸಿದ್ದುದು ಅನಂತನಿಗೆ ಕಾಲಕ್ರಮೇಣ ತಿಳಿದು, ಅವನಿಗೆ ರೇಗಿ ಒಂದು ರಾತ್ರಿ ಅವಳಿಗೆ ವಿಪರೀತವಾಗಿ ಹೊಡೆದು ಶಿಕ್ಷಿಸಿದನು. ನಂತರ ಆ ಮನೆಗೆ ಕಾಲಿಟ್ಟರೆ ಕತ್ತರಿಸಿಬಿಡುವುದಾಗಿ ಬೆದರಿಕೆ ಹಾಕಿದನು. ವಿಶಾಲಿ ಇದರಿಂದ ಕೃದ್ಧಳಾಗಿ, ಮೆಟ್ಟಿದ ಹಾವಿನಂತೆ ಬುಸುಗುಟ್ಟುತ್ತಾ ಆ ಮೆಡಿಕಲ್ ವಿದ್ಯಾರ್ಥಿಯ ನೆರವನ್ನು ಹೇಗೊ ಕದ್ದೂ ಕಾಣದಂತೆ ಸಂಪಾದಿಸಿ ತನ್ನ ಗಂಡನಿಗೆ ಉಣ್ಣುವ ಅನ್ನದಲ್ಲಿ ವಿಷ ಬೆರಸಿ ಇಟ್ಟಳು– ಅನಂತ ಮೃತಿಯನ್ನೈದಿದನಂತರ, ಇನ್ನು ಹೆಚ್ಚು ಗಲಾಟೆ ಮಾಡಿ ಮಾನ ಕಳೆದುಕೊಳ್ಳುವುದರಲ್ಲಿ ಅರ್ಥವಿಲ್ಲವೆಂದೂ, ಅವಳ ಪಾಪಕ್ಕೆ ಅವಳನ್ನು ಬಿಡುವುದು ಸೂಕ್ತವೆಂದೂ ನಿರ್ಧರಿಸಿದ ಯಶೋದಮ್ಮ–ನಂಜುಂಡಸ್ವಾಮಿಯವರು ತಮ್ಮ ದುಃಖವನ್ನು ತಾವು ನುಂಗಿಕೊಂಡು ವಿಶಾಲಿಯನ್ನು ಕರೆದುಕೊಂಡು ಹೋಗಿ ಚಿನ್ನಸ್ವಾಮಿಗೂ ಆದಿಲಕ್ಷ್ಮಿಗೂ ಒಪ್ಪಿಸಿ ಬಂದಿದ್ದರು–

ಈ ಕತೆಯನ್ನು ಕೇಳಿದ ನಟರಾಜನಿಗೆ ಕೆಲಕಾಲ ಪ್ರಜ್ಞೆಯೇ ತಪ್ಪಿದಂತಾಯಿತು. ಅವನಿಗೆ ಜ್ಞಾನ ಮರಳಿದಾಗ ಮಂಗಳೆಯ ಕುತ್ತಿಗೆ ತಬ್ಬಿಕೊಂಡು, "ಅಜ್ಜಿ ಹೋದಳು, ಅಕ್ಕ ಹೋದಳು, ಈ ಅನಂತೂ ಹೊರಟುಹೋದನೇ...." ಎಂದು ಗಟ್ಟಿಯಾಗೇ ಪ್ರಲಾಪ ಮಾಡತೊಡಗಿದನು. ಆಗ ಅದೇ ವಾರ್ಡಿನಲ್ಲಿ ಇನ್ನೊಬ್ಬ ರೋಗಿಗೆ ಔಷಧ ಕೊಡುತ್ತಿದ್ದ ನರ್ಸ್ ಥಾಮಸ್ "ಏನು ಮಂಗಳಾ ಇದು?.... ನೀನೇ ಹೀಗೆ ಆತನ್ನ ಅಳೋಕೆ ಬಿಡಬಾರದು" ಎಂದು ಕೋಪಿಸಿಕೊಂಡಳು. ತನ್ನ ಮಂಗಳೆಗೆ ಕೆಟ್ಟ ಹೆಸರು ಬರಬಾರದೆಂದು ನಟರಾಜ ತನ್ನ ಅಪಾರ ಶೋಕವನ್ನು ಬಿಗಿ ಹಿಡಿಯುತ್ತಾ ಒಳಗೇ ಕೊರಗಲಾರಂಭಿಸಿದನು.

ಅದೇ ಸಂಜೆ ನಂಜುಂಡಸ್ವಾಮಿಯೂ ಯಶೋದಮ್ಮನೂ ಎಂದಿನಂತೆ ನಟರಾಜನನ್ನು ನೋಡುವುದಕ್ಕೆ ಬಂದರು. ಆಗ ಅವರಿಬ್ಬರ ಕೈಗಳನ್ನೂ ಹಿಡಿದುಕೊಂಡು ನಟರಾಜ ಮಗುವಿನಂತೆ ಅಳುತ್ತಾ, "ನೀವು ಈ ವಿಷಯವನ್ನು ಇಷ್ಟು ದಿನವೂ ನನ್ನಿಂದ ಬಚ್ಚಿಡಬಾರದಾಗಿತ್ತು" ಎಂದನು.

ನಂಜುಂಡಸ್ವಾಮಿಗೂ, ಯಶೋದಮ್ಮನಿಗೂ ಅವನು ಯಾವ ವಿಷಯ ಕುರಿತು ಆಡುತ್ತಿರುವನೆಂದು ಅಭಿಪ್ರಾಯವಾಯಿತು. ಅವರ ಕಣ್ಣುಗಳಿಂದಲೂ ಕಂಬನಿಯ ಧಾರೆ ಹೊರಟಿತು. ದುಃಖ ಸ್ಥಿಮಿತಕ್ಕೆ ಬರಲು ಸ್ವಲ್ಪಕಾಲ ಹಿಡಿಯಿತು. ನರ್ಸ್ ಥಾಮಸ್ ದೂರದಲ್ಲಿ ಬರುತ್ತಿರುವುದನ್ನು ಕಂಡು ಮಂಗಳೆ ಸನ್ನೆ ಮಾಡಿದಳು. ನಟರಾಜ ಕೂಡಲೇ ಕಣ್ಣೀರೊರೆಸಿಕೊಂಡು. "ಆ ರಾಕ್ಷಸಿಗೆ ಏನೂ ಶಿಕ್ಷೆ ಮಾಡದೆ ಬಿಟ್ಟುಬಿಟ್ಟಿರಲ್ಲಾ?" ಎಂದು ಕೋಪಾವಿಷ್ಟನಾಗಿ ಹಲ್ಲು ಕಡಿದನು.

ಅದಕ್ಕೆ ನಂಜುಂಡಸ್ವಾಮಿ, "ಶಿಕ್ಷೆ ಕೊಡುವ ದೇವರು ಮೇಲೆ ಇದ್ದಾನೆ. ನಮಗೆ ಯಾಕಪ್ಪ ಅದೆಲ್ಲಾ? ಇದು ಸರಿ, ಇದು ತಪ್ಪು ಅಂತ ನಿರ್ಧರಿಸೋದಕ್ಕೆ ನಾವು ಯಾರು? ಆ ಸರ್ವಾಂತರ್ಯಾಮಿಗೆ ಎಲ್ಲ ತಿಳಿದಿದೆ. ಎಲ್ಲ ಅವನ ಮೇಲೆ ಭಾರ ಹಾಕಿ ನಮ್ಮ ಕರ್ತವ್ಯ ನಾವು ಪಾಲಿಸಿಕೊಂಡು ಹೋಗಬೇಕು" ಎಂದು ಸಮಾಧಾನದಿಂದಲೇ ಉತ್ತರಕೊಟ್ಟನು.

"ಯಶೋದಮ್ಮನೂ, ಅವರವರ ಪಾಪಕ್ಕೆ ಅವರು ಹೋಗ್ತಾರೆ...ಆ ಪರಮಾತ್ಮನನ್ನೇ ನಂಬಿ ನಾವು ಕಾಲ ಹಾಕ್ತಾ ಇದ್ದೀವಿ" ಎಂದು ಬಿಟ್ಟಳು.

ಚಿಕ್ಕಪ್ಪ, ಚಿಕ್ಕಮ್ಮ ಇಬ್ಬರೂ ಆಡಿದ ಮಾತಿಗೆ ನಟರಾಜ ಚಕಿತನಾದ. ಅವರಿಬ್ಬರಿಗೂ ಅದೆಂತಹ ಘೋರ ವಿಪತ್ತು ಒದಗಿತ್ತು. ಕೊನೆಗಾಲದಲ್ಲಿ ಇದ್ದ ಒಬ್ಬನೇ ಮಗ ಅಕಾಲಮೃತ್ಯುವಿಗೆ ತುತ್ತಾಗಿದ್ದ. ಇನ್ನೇನು ನೆಲೆ ಪಡೆಯುವುದರಲ್ಲಿದ್ದ ಅವರ ಬಾಳವೃಕ್ಷ ಅನ್ಯಾಯವಾಗಿ ಮುರಿದುಬಿದ್ದಿತ್ತು. ಆದರೂ ತಮ್ಮ ದುಃಖದ ಉರಿಯನ್ನು ಅವರಿಬ್ಬರೂ ಅದೆಷ್ಟು ತಾಳ್ಮೆಯಿಂದ ಸಹಿಸಿಕೊಂಡಿದ್ದರು ! ಆ ಮುಪ್ಪಿನ ದಂಪತಿಗಳಿಗೆ ದೈವ ಅಪಚಾರ ಮಾಡಿದ್ದರೂ ಆ ದೈವದಲ್ಲವರಿಗೆ ಅದೇನು ನಂಬುಗೆ !.... ನಟರಾಜನಿಗೆ ತನ್ನ ಇಡೀ ಬಾಳುವೆಯಲ್ಲಿ ಹೊಸಪಾಠ ಕಲಿತಂತಾಯಿತು. ವಿಶಾಲಿಯ ಮೇಲೆ ತಾನು ಕುಪಿತನಾದುದಕ್ಕೆ ತಾನೇ ನಾಚಿಕೊಂಡನು. ತನ್ನ ಬಂಧುಗಳ ಹಿರಿಯ ಸಂಸ್ಕಾರಕ್ಕೆ, ಅವರ ಮನೋವೈಶಾಲ್ಯಕ್ಕೆ ಅವನ ಚಿತ್ತ ಮಾರುಹೋಯಿತು.

ಎಂಟು ಗಂಟೆಯಾಗುತ್ತಲೂ ನಂಜುಂಡಸ್ವಾಮಿ ಮತ್ತು ಯಶೋದಮ್ಮ ಮನೆಗೆ ಹೊರಟು ನಿಂತರು. ನಟರಾಜ ಏನೋ ನೆನಸಿಕೊಂಡವನಂತೆ, "ಲೀಲಾ ಯಾಕೆ ಕರೆದುಕೊಂಡು ಬರಲಿಲ್ಲ?" ಎಂದು ಕೇಳಿದನು.

"ಆ ಬಜಾರಿ ಕಳಿಸಿದರೆ ತಾನೆಯಪ್ಪ ನಾವು ಕರೆದುಕೊಂಡು ಬರೋದು?" ಎಂದು ನಂಜುಂಡಸ್ವಾಮಿ ನಿಟ್ಟುಸಿರ್ಗರೆದ.

"ಹಾಗಾದರೆ ಲೀಲಾ ನಿಮ್ಮ ಹತ್ತಿರ ಇಲ್ಲ?"

"ಇಲ್ಲ."

"ಯಾಕೆ, ಅವಳ್ನ ನಿಮ್ಮ ಹತ್ತಿರಲೇ ಇರಿಸಿಕೊಳ್ಳಬಹುದಾಗಿತ್ತಲ್ಲಾ?"

"ಬಹುದಾಗಿತ್ತು. ಆದರೆ ಅವಳು ಬಿಡಬೇಕಲ್ಲ."

"ಮಗನ್ನೇನೋ ನುಂಗಿಕೊಂಡಳು. ಮೊಮ್ಮಗಳನ್ನಾದರೂ ನಿಮ್ಮ ಬಳಿ ಬಿಡಬಾರದೇ?"

"ನಾವೂ ಎಷ್ಟೆಷ್ಟೋ ಬೇಡಿಕೊಂಡ್ರೊ. ಸ್ವಲ್ಪದಿನ ನಮ್ಮಲ್ಲಿರಲಿ. ಅನಂತೂ ಇಲ್ಲದ ಮನೆ ಬಿಕೊ ಅನ್ನುತ್ತೆ ಅಂತ. ಆದರೆ ಆ ಪುಣ್ಯಾತ್ಗಿತ್ತೀಗೆ ಕರುಣೆ ಅನ್ನೋದೆ ಹುಟ್ಟಲಿಲ್ಲ. 'ನನ್ನ ಮೇಲೆ ಸುಳ್ಳು ದೂರು ಹೊರಿಸಿದ್ದೀರಿ. ನನ್ನ ಮಗು ನಿಮ್ಮಂಥವರ ಮನೇಲಿ ಬಿಟ್ಟರಲೇ? ನಿಮ್ಮ ಮುಖದರ್ಶನ ಕೂಡ ಮಾಡಬಾರದು' ಅಂತ ಹೇಳುತ್ತಾ ನನ್ನ ಕೈಲಿದ್ದ ಶಿಶೂನ ನಿರ್ದಯವಾಗಿ ಕಿತ್ತುಕೊಂಡು ಹೊರಟೇಹೋದಳು. ಮುಖ್ಯ ನಮಗೆ ಅದೃಷ್ಟವಿಲ್ಲ" ಎಂದು ಯಶೋದಮ್ಮ ವಿವರಿಸುವಾಗ ಅವಳ ಕಣ್ಣು ತುಂಬ ನೀರು ತುಂಬಿತು. ಅವರಿಬ್ಬರೂ ತೆರಳಿದ ಬಳಿಕ ನಟರಾಜನೂ ಮಂಗಳೆಯೂ ವೃದ್ಧಾಪ್ಯದಲ್ಲಿ ಆದ ಅಪಘಾತಕ್ಕೂ ಧೃತಿಗೆಡದೆ ಅವರು ತೋರುತ್ತಿದ್ದ ಸ್ಥೈರ್ಯವನ್ನು ಮೆಚ್ಚಿ ಬಹಳ ಕಾಲ ಪರಸ್ಪರ ಸಂಭಾಷಿಸುತ್ತಿದ್ದರು.

೫೦

ದಿನೇ ದಿನೇ ನಟರಾಜನ ಆರೋಗ್ಯ ಕೆಡುತ್ತ ಹೋಯಿತು. ದೇಹ ಸವೆದು ಕಡ್ಡಿಯಾಯಿತು. ಸ್ವಯಂ ಮೆಡಿಕಲ್ ಆಫೀಸರೇ ಒಂದು ಬಾರಿ ಆಪರೇಷನ್ ಮಾಡಿ ನೋಡಿದರು. ದಿನಕ್ಕೆರಡು ಬಾರಿ ಇನ್‌ಜೆಕ್ಷನ್ ಚುಚ್ಚಿದರು. ಯಾವುದಕ್ಕೂ ಆ ಪ್ರಬಲ ವ್ಯಾಧಿ ಬಗ್ಗಲಿಲ್ಲ.

ಒದು ದಿನ ಡಾಕ್ಟರು ಇನ್‌ಜೆಕ್ಷನ್ ಕೊಟ್ಟು ರೋಗಿಯ ಕೋಣೆಯಿಂದ ಹೊರಬಿದ್ದರು. ಅವರೊಡನೆ ಮಂಗಳೆಯೂ ಹೊರಬಿದ್ದು ವಾರ್ಡಿನ ವರಾಂಡದಲ್ಲಿ ಸ್ವಲ್ಪ ದೂರದವರೆಗೆ ಅವರನ್ನು ಹಿಂಬಾಲಿಸಿದಳು. ಅದನ್ನು ಕಂಡ 'ಚಿಕ್ಕ ಡಾಕ್ಟರು' ಮೆಡಿಕಲ್ ಆಫೀಸರನ್ನುದ್ದೇಶಿಸಿ "ಆ ಪೇಶಂಟ್ ಕಡೆ ಹೆಂಗಸು ನಮ್ಮ ಹಿಂದೆ ಹಿಂದೆಯೇ ಹಿಂಬಾಲಿಸಿ ಬರುತ್ತಾ ಇದ್ದಾಳೆ. ಬಹುಶಃ ನಿಮ್ಮೊಡನೆ ಮಾತಾಡುವ ಅಪೇಕ್ಷೆ ಇರಬಹುದು" ಎಂದರು. ಮೆಡಿಕಲ್ ಆಫೀಸರು ಅಲ್ಲೇ ನಿಂತರು. ಮಂಗಳೆಯೆಡೆ ತಿರುಗಿ "ಏನಮ್ಮಾ–" ಎಂದು ಕನಿಕರ ತುಂಬಿದ ಸ್ವರದಲ್ಲಿ ಪ್ರಶ್ನಿಸಿದರು.

"ರೋಗಿಗೆ ಹೇಗಿದೆ?" ಎಂದು ಮಂಗಳೆ ಮೆಲ್ಲನೆ ಕೇಳಿದಳು.

ಡಾಕ್ಟರು ಬೇಗ ಉತ್ತರ ಕೊಡಲಿಲ್ಲ. ಏನು ಹೇಳಬೇಕೊ ತಿಳಿಯದೆ ಅವರ ಚಿತ್ತ ವಿಕ್ಷುಬ್ಧಗೊಂಡಿತು. ನಟರಾಜನಿಗಾಗಿ ಮಂಗಳೆ ಪಡುತ್ತಿದ್ದ ಪಾಡನ್ನು ಅವರು ಚೆನ್ನಾಗಿ.

ಅರಿತವರಾಗಿದ್ದರು. ತನ್ನ ಊಟ ಉಪಚಾರಗಳನ್ನು ಅನುಲಕ್ಷಿಸಿ ಹಗಲೆನ್ನದೆ ರಾತ್ರಿಯೆನ್ನದೆ ಅವಳು ಮಾಡುತ್ತಿದ್ದ ಶುಶ್ರೂಷೆ ಆ ಆಸ್ಪತ್ರೆಯ ಡಾಕ್ಟರುಗಳು, ನರ್ಸುಗಳನ್ನೆಲ್ಲಾ ವಿಸ್ಮಯಗೊಳಿಸಿತ್ತು. ಒಂದು ಬಾರಿ ಒಬ್ಬಳು ನರ್ಸ್ ರೋಗಿಗಳನ್ನು ಸರಿಯಾಗಿ ನೋಡಿಕೊಳ್ಳದೆ ಅವಳ ವಿರುದ್ಧ ಒಬ್ಬಿಬ್ಬರು ರೋಗಿಗಳು ದೂರು ಹೇಳಿದಾಗ ಇದೇ ಮೆಡಿಕಲ್ ಆಫೀಸರು ಆ ನರ್ಸಿಗೆ ಹೇಳಿದ್ದರು. 'ನಿನ್ನ ನಡತೆ ತೀರ ಹೇಯವಾದುದು. ನರ್ಸ್ ಆದವಳು ಹೇಗೆ ನಡೆದುಕೊಳ್ಳಬೇಕು–ಮೃದುವಾಗಿ, ತಾಳ್ಮೆಯಿಂದ ಸಹಾನುಭೂತಿಯಿಂದ. ತಾಯಿ ತನ್ನ ಮಕ್ಕಳನ್ನು ಆದರಿಸುವಂತೆ ರೋಗಿಗಳನ್ನು ಆದರಿಸಬೇಕು.... ಆ ಸೀರಿಯಸ್ ಕೇಸ್ ಇದೆಯಲ್ಲಾ–ನಟರಾಜ–ಆತನನ್ನು ಆ ಹೆಂಗಸು ಮಂಗಳ ನೋಡಿಕೊಳ್ಳುವಂತೆ ನೋಡದಿದ್ದ ಮೇಲೆ ನರ್ಸ್ ಎಂಬ ಹೆಸರಿಗೇ ಅವಮಾನ'. ಡಾಕ್ಟರು ತನ್ನ ಪ್ರಶ್ನೆಗೆ ಉತ್ತರವೀಯದೆ ನಿಂತುದು ಮಂಗಳೆಗೆ ಕಳವಳವನ್ನುಂಟುಮಾಡಿತು. ಅವಳ ಹೃದಯ ಭೀತಿಯಿಂದ ಹಾರುತ್ತಿತ್ತು. ಉದ್ವಿಗ್ನಳಾಗಿ, "ಏನು ಡಾಕ್ಟರ್?" ಎಂದು ಆತುರದಿಂದ ಕೇಳಿದಳು.

ಡಾಕ್ಟರಿಗೆ ಉಭಯಸಂಕಟಕಿಟ್ಟುಕೊಂಡಿತು. ಹೇಳುವುದೇ ಬೇಡವೆ ಎಂದು ಅವರ ಚಿತ್ತ ಉಯ್ಯಾಲೆಯಾಡಿತು. ಈಗ ಸುಳ್ಳನ್ನಾದರೂ ಆಡಿ ಕ್ಷತವಿಕ್ಷಿತವಾಗಿರುವ ಆ ತರಳೆಯ ಮನಸ್ಸಿಗೆ ಶಾಂತಿಯೀಯಬೇಕೆಂದು ಅವರ ದಯಾರ್ದ್ರ ಹೃದಯ ಒತ್ತಾಯಪಡಿಸಿತು. ಆದರೆ, ಹಾಗೆ ಹೇಳಿ ಆಕೆಯಲ್ಲಿ ನಂಬಿಕೆ ಹುಟ್ಟಿಸಿದರೆ ಆಗುವ ಪ್ರಯೋಜನವೇನು ? ಅದರಿಂದಾಗುವ ಪರಿಣಾಮ ಇನ್ನೂ ಭಯಂಕರವಾದುದಲ್ಲವೆ? ನಾಳೆ ಅವಳಿಗೆ ಕಾದಿರುವ ಕಠೋರ ಸತ್ಯವನ್ನೆದುರಿಸಲು ಅವಳಲ್ಲಿರುವ ಅಲ್ಪ ಸ್ವಲ್ಪ ಶಕ್ತಿಯನ್ನೂ ಇದರಿಂದ ಕಸಿದುಕೊಂಡಂತಾಗಲಿಲ್ಲವೇ? ಈಗ ನಟರಾಜನಿಗೆ ಗುಣವಾಗುತ್ತಿದೆ ಎಂದು ನಾವು ಆಕೆಗೆ ನಂಬಿಕೆ ಹುಟ್ಟಿಸಿದರೆ ನಾಳೆ ಆತ ಹಠಾತ್ತನೆ ತೀರಿಕೊಂಡಾಗ ಅವಳ ಸರಳ ಮನಸ್ಸಿನ ಮೇಲೆ ಎಂತಹ ಆಘಾತವಾಗುವುದಿಲ್ಲ? ಡಾಕ್ಟರರ ವೈಜ್ಞಾನಿಕ ಮನಸ್ಸು ವಿಚಾರ ಮಾಡಿತು. ಕೊನೆಗೆ, ಏನಾದರೂ ಸತ್ಯ ನುಡಿಯುವುದೆ ಒಳಿತು ಎಂಬ ಇತ್ಯರ್ಥಕ್ಕೆ ಬಂದು, "ನಿನಗೆ ನಾನು ಸುಳ್ಳು ಹೇಳಲಾರೆ ಮಂಗಳೆ. ನಾವೂ ನಮ್ಮ ಕೈಲಾದುದನ್ನೆಲ್ಲ ಮಾಡಿ ನೋಡಿದೆವು, ಪ್ರಯೋಜನವಾಗಲಿಲ್ಲ. ಆತ ಉಳಿಯುವುದು ಅಸಂಭವ" ಎಂದು ನುಡಿದು ಅವಳನ್ನೇ ಕರುಣಾಪೂರಿತ ದೃಷ್ಟಿಯಿಂದ ನೋಡತೊಡಗಿದರು. ಅವರ ಅನುಕಂಪಕ್ಕೆ ಅದೇ ವಯಸ್ಸಿನ ತಮ್ಮ ಹೆಣ್ಣು ಮಗಳಿಗೆ ಪ್ರಾಪ್ತಿಯಾದ ವೈಧವ್ಯ ಬಹುಮಟ್ಟಿಗೆ ಕಾರಣವಾಗಿತ್ತು.

ಮಂಗಳೆ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಕಂಪಿಸತೊಡಗಿದಳು. ಅವಳ ಕಣ್ಣೆದುರಿಗೆ ಶೂನ್ಯ ತೆರೆತೆರೆಯಾಗಿ ಏಳತೊಡಗಿತು. ಕೋಟಿ ಭೀತಿಗಳು ಒಮ್ಮೆಲೇ ಅವಳ ಹೃದಯದೊಳನುಗ್ಗಲು ತವಕಪಡುತ್ತಿದ್ದವು. 'ಮುಂದೆ ಗತಿಯೇನು ?' ಎಂದು ಅವಳ ಅಂತರಂಗ ಮೊರೆಯಿಟಿತು.

೩೧

ಮುಂದೆರಡು ದಿನಗಳಲ್ಲಿ ಕೊತ್ತೇಗಾಲದಿಂದ ನರಸಮ್ಮನ ಸವಾರಿ ಚಿತ್ತೈಸಿತು. ಅವಳ ಜೊತೆಯಲ್ಲಿ ಸುಬ್ಬರಾಯಿಯೂ ಚೆಲುವಮ್ಮನೂ ಬಂದಿದ್ದರು. ಹೊರಡುವಾಗ ಚೆಲುವಮ್ಮನೆದುರಿಗೆ "ಪಾಪ, ಆ ಕಂದ ನಟ್ರಾಜ ಹೆಂಗವನೊ ?– ನೋಡಿಕೊಂಡು ಬರೂನ ನಡೀರಿ" ಎಂದಿದ್ದರೂ ಸುಬ್ಬರಾಯಿಯೊಡನೆ "ಯೆಂತಾ ಗಂಡಸ ನೀನು ?... ಮದುವ್ಯಾದ ಹೆಡತೀಯ ಪರಪುರುಷನ ಹಟ್ಟೀಲಿ ಬುಟ್ಟು ಬುಟ್ಟು ಕುಂತಿದ್ದೀ. ಅದರಲ್ಲೂ ಆ ನಟ್ರಾಜ ಅವಳಮ್ಯಾಗೆ ಮೊದಲಿಂದ್ಲೂವೆ ಮಾಯದ ಬಲೆ ಬೀಸವ್ನೆ. ನಡಿ ನಿನ್ನ ಲಗ್ನದ ನೆಪ ಹೂಡಿ ಅವಳ್ನ ಕರಕೊಂಬಂದುಬುಡಾನೆ. ಅಲ್ಲೇ ಬುಟ್ಟಿದ್ರೆ ನೋಡಿದೋರು ಏನನ್ನಾಕಿಲ್ಲ" ಎಂದು ತನ್ನ ಮೈಸೂರು ಪ್ರಯಾಣದ ನೈಜ ಕಾರಣವನ್ನು ಪ್ರಕಟಪಡಿಸಿದ್ದಳು. ಅವಳಿಗೆ ಗೋಳುಹೊಯ್ದುಕೊಳ್ಳಲು ಕೊತ್ತೇಗಾಲದಲ್ಲಿ ಮಂಗಳೆಯಿಲ್ಲದಿದ್ದುದು ಹೇಗೆ ಹೇಗೋ ಆಗಿತ್ತು.

ಅವರೆಲ್ಲ ನಟರಾಜನ ಮನೆಗೆ ಬಂದಾಗ ಮನೆಯಲ್ಲಿ ದುರ್ಗಿಯೊಬ್ಬಳೇ ಇದ್ದಳು. ಮಂಗಳೆಗೆ ಊಟ ತೆಗೆದುಕೊಂಡು ಹೋಗುವುದಕ್ಕಾಗಿ ಬೇಗ ಬೇಗ ಅಡುಗೆ ಮಾಡುತ್ತಿದ್ದಳು. ಚೆಲುವಮ್ಮ ಒಳಗೆ ಬಂದವಳೇ ಮಗಳನ್ನು ತಬ್ಬಿಕೊಂಡು ಅಳತೊಡಗಿದಳು. ಚೆನ್ನಾಗಿ ಅತ್ತು ಕಣ್ಣೊರಸಿಕೊಳ್ಳುತ್ತಾ "ನಂಜುಂಡ ಮಾವ ಕಾಗದ ಹಾಕಿದ್ದರು, ಸಖತ್ ಕಾಯಿಲೆ ಅಂತಾವ. ನಿಂತನಿಲೀನೆಲ್ಲೇ ಹೊಂಟು ಬಂದೊ. ಈಗ ಹೇಗಿದ್ದದವ್ವ?" ಎಂದಳು. ದುರ್ಗಿ ಕಣ್ಣೀರು ಮಿಡಿಯುತ್ತ ಗದ್ಗದ ಸ್ವರದಲ್ಲಿ "ಏನು ಹೇಳಲಿ ? ಮೂರು ದಿವಸದಿಂದ ಉಬ್ಬಸ ಜಾಸ್ತಿಯಾಗಿದೆ. ಗಟ್ಟಿ ಪದಾರ್ಥವೇ ಹೊಟ್ಟೇಗೆ ಇಳೀತಾ ಇಲ್ಲ. ಬರೀ ಹಾಲು, ಕಿತ್ತಲೆ ಹಣ್ಣಿನ ರಸ ಇಷ್ಟರಲ್ಲಿ ಜೀವ ಹೊತ್ತುಕೊಂಡು ಇದ್ದಾರೆ ನೋಡು" ಎಂದಳು.

"ಮಂಗಳೆ ಆಸ್ಪತ್ರೇಲೆ ಇದ್ದಾಳೆ ?"

"ಹೌದು ಮಂಗಳಕ್ಕ ಆಸ್ಪತ್ರೇಲೆ ಇದ್ದುಬಿಟ್ಟಿದ್ದಾಳೆ. ಒಂದಿಷ್ಟೂ ಅಸಹ್ಯಪಟ್ಟುಕೊಳ್ಳದೆ, ತನಗೆ ಕಾಯಿಲೆ ಅಂಟಿಬಿಟ್ಟೀತು ಅಂತ ಹೆದರಿಕೊಳ್ಳದೆ ಸದಾ ಅವರ ಶುಶ್ರೂಷೇಲೆ ಕಳೀತಾ ಇದ್ದಾಳೆ... ಅವ್ವ, ಈ ಕಷ್ಟದಲ್ಲಿ ಪಾರ್ವತಜ್ಜಿ ಅವಳೊಬ್ಬಳ್ನ ಬಿಟ್ಟುಬಿಟ್ಟು ಹೋಗದೆ ಇದ್ದರೆ, ನಾವೇನು ಗತಿ ಆಗ್ತಾ ಇದ್ದೆವೋ ? ಆ ಪುಣ್ಯಾತ್ಗಿತ್ತಿ ಅಷ್ಟು ಚೆನ್ನಾಗಿ ನೋಡಿಕೊಳ್ತಾ ಇದಾಳೆ. ನನಗೆ 'ನೀನು ಬಸುರಿ ಇನ್ನೊಂದು ಜೀವ ನಿನ್ನ ಹೊಟ್ಟೆ ಒಳಗೆ ಇದೆ. ಅದಕ್ಕೆ ಅಪಾಯ ಆಗಬಾರದು. ನಿನ್ನ ಗಂಡನ ಹತ್ತಿರ ಹೆಚ್ಚಾಗಿ ಬರಬೇಡ' ಅಂತ ಹೇಳಿ ಅಲ್ಲೀ ಕೆಲಸಾನೆಲ್ಲ ತನ್ನೊಬ್ಬಳ ಕೈ ಮೇಲೆ ತೆಗೆದುಕೊಂಡು, ನಿಭಾಯಿಸಿಕೊಂಡು ಹೋಗ್ತಾ ಇದಾಳೆ. ಹಿಂದಿನ ಜನ್ಮದಲ್ಲಿ ಅವಳು ನನಗೆಲ್ಲೊ ಅಕ್ಕ ಆಗಿದ್ದಳು ಅಂತ ಕಾಣ್ತದೆ" ಎಂದು ಕೃತಜ್ಞತಾ ಪೂರ್ವಕ ನುಡಿದಳು.

"ಹಿಂದಿನ ಜನುಮದಲ್ಲಿ ಆವ್ಳು ನಿಂಗೆ ಅಕ್ಕ ಆಗಿರ್ನಿಲ್ಲ–ಸವತಿ, ಸವತಿ ಆಗಿದ್ಲು. ಲಗ್ನಾದ ಹೆಂಡತೀಗೆ ಮಂತ್ರ ಹಾಕಿ ಮನೇಲಿ ಕುಂಡರಿಸಿಬುಟ್ಟು ಯೆಲ್ಲಾನು ತಾನೇ ಅಕ್ಕರ್ಮಿಸಿಕೊಂಡುಬುಟ್ಟವಳೆ. ಅವಳ್ನೇನು ಆಟೊಂದು ಹೊಗಳಿ ಬುಡು. ಮಹಾ ಮಾಯಾಂಗಿಣಿ ಅವಳು..." ಎಂದು ನರಸಮ್ಮ ಗಟ್ಟಿಯಾಗಿ ಒದರಾಡಿದಳು. ಅನಂತರ ಸುಬ್ಬರಾಯಿಯನ್ನೇ ಕುಹಕವಾಗಿ ನೋಡುತ್ತ "ತನ್ನ ಗಂಡನಿಗೆ ಅನ್ನ ಬೇಯಿಸಿ ಆಕೋರು ಇಲ್ಲದೇ ಇದ್ರೂವೇ ಇಲ್ಲಿ ಕುಂತುಗೊಂಡು ಪರಪುರಸನಿಗೆ ಅದೇನೋ ಸುಸ್ರೂಸೆ ಮಾಡಾಳಂತೆ–ಸುಸ್ರೂಸೇಯಾ !" ಎಂದಳು. ಸುಬ್ಬರಾಯಿಯ ಗಂಡು ಹೃದಯಕ್ಕೆ ಅಕ್ಕನ ಈ ಮಾತುಗಳು ಸೂಜಿಯ ಮೊನೆಯಂತೆ ತೀವ್ರವಾಗಿ ಚುಚ್ಚಿದವು. ಅಕ್ಕನ ಆ ಕಠೋರ ನುಡಿಗಳನ್ನು ಕೇಳಲಾರದೆ "ಕೂತುಗೊಳ್ಳಿ ಅಕ್ಕಿ ಎಸರು ಎತ್ತಿಬಿಟ್ಟು ಬರ್ತೀನೆ" ಎನ್ನುತ್ತಾ ಮೆಲ್ಲನೆ ಅಡುಗೆ ಮನೆಗೆ ಜಾರಿಕೊಂಡಳು.

ಸಾಯಂಕಾಲದ ಹೊತ್ತಿಗೆ ಎಲ್ಲರೂ ಆಸ್ಪತ್ರೆಗೆ ಹೊರಟು ಬಂದರು. ದುರ್ಗಿ, ನರಸಮ್ಮನಿಗೂ ಸುಬ್ಬರಾಯಿಗೂ ಊಟಕ್ಕೆ ಬಡಿಸಿ ಮಂಗಳೆಯ ಊಟವನ್ನು ಕ್ಯಾರಿಯರ್‌ನಲ್ಲಿ ತಂದಿದ್ದಳು. ಚೆಲುವಮ್ಮ ಮಾತ್ರ 'ಆಟು ಆತ್ರಯೇನಾ ಬಂದೇ ಉಣತೀನೇಳು' ಎಂದು ನಿರಾಕರಿಸಿದ್ದಳು.

ನಟರಾಜನಿದ್ದ ವಾರ್ಡಿಗೆ ಅವರು ಬಂದಾಗ ನಟರಾಜ ಭೀಕರವಾಗಿ ಕೆಮ್ಮುತ್ತಿದ್ದ. ಮಂಗಳೆ ಅವನ ಭುಜವನ್ನು ಒಂದು ಕೈಯಲ್ಲಿ, ಹಣೆಯನ್ನು ಒಂದು ಕೈಯಲ್ಲಿ ಹಿಡಿದು ನಿಂತಿದ್ದಳು. ಒಮ್ಮೆ ಹಠಾತ್ತನೆ ಅವನು ಕಾರಿದಾಗ ರಕ್ತ ಬೆರೆತ ತೊಂಟೆಯ ಒಂದು ಹೆಪ್ಪು ಅವಳ ಎದೆಗೆ ಹಾರಿತು. ಮಂಗಳೆ ಉಗುಳುವ ಪಾತ್ರೆಯನ್ನು ಹಿಡಿಯಲು ಅವಕಾಶವೇ ದೊರೆಯದೆ ಹೋಗಿತ್ತು. ಆದರೂ ಮಂಗಳೆ ಅಸಹ್ಯಪಡಲಿಲ್ಲ. ಅವನಿಗೆ ಕೆಮ್ಮು ಕಡಿಮೆಯಾಗಿ, ಹಾಸಿಗೆಯ ಮೇಲೆ ಮಲಗಿಕೊಳ್ಳುವಂತಾಗುವವರೆಗೂ ಅವಳು ಆ ಜಾಗ ಬಿಟ್ಟು ಕದಲಲಿಲ್ಲ. ಅವನನ್ನು ಉಪಾಯವಾಗಿ ಮಲಗಿಸಿ, ಶಾಲು ಹೊದೆಸಿ ಅನಂತರ ತೊಂಟೆ ಬಿದ್ದ ಸೀರೆಯ ಭಾಗವನ್ನು ನೀರಿನಲ್ಲಿ ತೊಳೆದು ಬಂದಳು. ಆ ಬಳಿಕ ಬಂದವರನ್ನುದ್ದೇಶಿಸಿ "ಎಷ್ಟೊತ್ತಿಗೆ ಬಂದಿರಿ ?" ಎಂದಳು. ನರಸಮ್ಮ ಏನೊಂದು ಉತ್ತರ ಕೊಡದೆ ಬಿಗುಮಾನದಿಂದ ನಿಂತಿದ್ದಳು. ಅಸೂಯೆಯಿಂದ ಆವೃತ್ತನಾಗಿ ಸುಬ್ಬರಾಯಿಯು ಮೌನ ತಾಳಿದನು. ಚೆಲುವಮ್ಮನೇ "ಇದೇ ಐದು ಗಂಟೆ ಬಸ್ಸಿಗೆ ಬಂದೊ" ಎಂದವಳು ಕಣ್ಣೀರು ತುಂಬಿಕೊಂಡು "ಜೀನಾ ಹಿಂಗೇ ರಕ್ತ ಕಾರಾನಾವ್ವ ?" ಎಂದು ಕೇಳಿದಳು. ಮಂಗಳೆ 'ಹೂ' ಎನ್ನುವಂತೆ ತಲೆಯಲ್ಲಾಡಿಸಿ, ಅಳುತ್ತಾ "ಈಗ ಎರಡು ದಿನದಿಂದ ಹೀಗಾಗಿದೆ" ಎಂದಳು. ಅಷ್ಟರಲ್ಲಿ ದುರ್ಗಿ ನಟರಾಜನ ಹಾಸಿಗೆಯ ಪಕ್ಕಕ್ಕೆ ಒಬ್ಬಳೆ ಹೋಗಿ ನಿಂತಿದ್ದಳು. ನಟರಾಜ ಅವಳ ಕಡೆ ತಿರುಗಿ ಅವರೆಲ್ಲರ ಕಡೆ ಕೈತೋರಿ 'ಅವರಿಗೆಲ್ಲ ಊಟ ಆಯಿತಾ?' ಎಂದು ಕೈ ಸನ್ನೆ ಮಾಡಿ ಕೇಳಿದನು. ದುರ್ಗಿ ಆಯಿತು ಎನ್ನುವಂತೆ ತಲೆಯಲ್ಲಾಡಿಸಿದಳು.

ನಟರಾಜ ಮಲಗಿದ್ದುದು ಬಾಗಿಲೇ ಇಲ್ಲದ ಕೋಣೆ. ಆ ವಾರ್ಡಿನಲ್ಲಿ ಒಂದರ ಪಕ್ಕದಲ್ಲೊಂದು ಅಂಥವೇ ಕೋಣೆಗಳಿದ್ದವು, ಆ ಕೋಣೆಗಳ ಮುಂದೆ ಉದ್ದಕ್ಕೆ ಒಂದು ವರಾಂಡವಿತ್ತು. ರಭಸವಾಗಿ, ಸದ್ದು ಮಾಡಿ ಬೀಸುತ್ತಿದ್ದ ಗಾಳಿ ತೆಳುವಾದ ಸೀರೆಯುಟ್ಟಿದ್ದ ಚೆಲುವಮ್ಮನಿಗೆ ಚಳಿ ಹುಟ್ಟಿಸಿತ್ತು. ಗಡಗಡನೆ ನಡುಗುತ್ತಾ "ಅವ್ವೀ, ಯೇನು ಚಳಿಯವ್ವಾ ಇಲ್ಲೀ?... ಈ ಗಾಳಿಯಲ್ಲೇ ಕಾಯಿಲೆಯೋರ್ನ ಮನಗಿಸವ್ರಲ್ಲಾ–ಯೇನ ಗತಿ ಆಗಬೇಕು?" ಎಂದಳು. ಅದಕ್ಕೆ ಮಂಗಳೆ "ಈ ಕಾಯಿಲೆಯವರಿಗೆ ಗಾಳಿ ಹೆಚ್ಚಾಗಿ ಬೇಕಂತೆ, ಅದು ಇಲ್ಲದೆ ಇದ್ದರೆ ಅಪಾಯ, ಎಂದು ಹೇಳ್ತಾರೆ ಡಾಕ್ಟರುಗಳು" ಎಂದು ವಿವರಿಸಿದಳು.

ಹೀಗೆ ಇವರು ಸಂಭಾಷಿಸುತ್ತಿರುವಾಗ ನರ್ಸ್ ಬಂದು ನಟರಾಜನ ಉಷ್ಣಾಧಿಕ್ಯವನ್ನು ಪರೀಕ್ಷಿಸಿ, ಅದನ್ನು ಮಂಚದ ಪಕ್ಕದಲ್ಲಿದ್ದ ಛಾರ್ಟಿನಲ್ಲಿ ಗುರುತಿಸಿ ಹೋಗುತ್ತಿದ್ದಳು. ಮಂಗಳೆ ಅವಳನ್ನು ಸಂಭೋದಿಸಿ "ಈಗ ಜ್ವರ ಎಷ್ಟಿದೆ" ಎಂದು ಕೇಳಿದಳು. "ನೂರು ಮೂರು ಡಿಗ್ರಿ" ಎಂದುತ್ತರವಿತ್ತು ನರ್ಸ್ ಹೊರಟುಹೋದಳು.

ಮುಂದೆ ಸುಮಾರು ಒಂದು ಗಂಟೆಯ ಕಾಲ ಆ ವಿಚಾರ ಈ ವಿಚಾರ ಮಾತನಾಡುತ್ತ ಅವರೆಲ್ಲ ಕಾಲ ಕಳೆದರು. ಎಂಟು ಗಂಟೆಯ ವೇಳೆಗೆ ನರ್ಸ್ ಮತ್ತೊಮ್ಮೆ ಬಂದು "ಮಂಗಳಾ, ಟೈಂ ಆಯಿತು. ಅವರನ್ನ ಕಳಿಸಿಬಿಡು" ಎಂದು ಹೇಳಿ ಹೋದಳು. ಅದರಂತೆ ಎಲ್ಲರೂ ಹೊರಡಲನುವಾದರು. ಹೊರಡುವಾಗ ನರಸಮ್ಮ ನಟರಾಜನ ಬಳಿಗೆ ಬಂದು "ಈ ಕೆಟ್ಟ ರೋಗ ನಿಂಗೆ ಹೆಂಗಪ್ಪಾ ಬಂತೂ?" ಎಂದು ಕೇಳಿದಳು. ನಟರಾಜನಿಗೆ ನಿಶ್ಶಕ್ತಿಯಿಂದ ಉತ್ತರವೀಯಲಾಗದೆ ಇರಲು "ದೇವರ ಮ್ಯಾಗೆ ಬಾರ ಹಾಕು ವಾಸಿಯಾಗ್ತದೆ. ಹೆದರಿಕೋ ಬ್ಯಾಡ" ಎಂದು 'ಮೆತ್ತು ಮಣ್ಣಿನ' ಮಾತಾಡಿದಳು.

* * *

ನಾಲ್ಕು ದಿನ ನಟರಾಜನ ಕಾಯಿಲೆ ಉಗ್ರವಾಗೇ ಇತ್ತು. ಅವನ ಪ್ರಾಣ ಈಗಲೊ ಆಗಲೊ ಹೋಗಿಬಿಡುವುದೆಂದು ಆಸ್ಪತ್ರೆಯವರು ನಿಷ್ಕರ್ಷೆ ಮಾಡಿಬಿಟ್ಟಿದ್ದರು. ಆದರೆ ಐದನೆಯ ದಿನ ನಟರಾಜನ ದೇಹಸ್ಥಿತಿಯಲ್ಲಿ ಸ್ವಲ್ಪ ಗುಣ ಕಂಡಿತು. ಆಹಾರವನ್ನೇ ಮುಟ್ಟದಿದ್ದವನು ತಾನೇ ಕೇಳಿ ಮಂಗಳೆಯ ಕಯ್ಯಲ್ಲಿ ಕೊಂಚ ಹಾಲು ಕುಡಿದ. ಎಲ್ಲರಿಗೂ ಸ್ವಲ್ಪ ಧೈರ್ಯ ಬಂದಿತು.

ಮುಂದೆ ಮೂರು ದಿನ ಅವನಿಗೆ ಗುಣವಾಗುತ್ತಿರುವಂತೆಯೇ ಕಂಡಿತು. ನರಸಮ್ಮನಿಗೆ ಕೊಂಚ ಜೀವ ಬಂದಂತಾಯಿತು. ಇನ್ನೆರಡು ವಾರದಲ್ಲಿ ಸುಬ್ಬರಾಯಿಯ ವಿವಾಹ ಜರುಗುವುದಿತ್ತು. ಅಷ್ಟರಲ್ಲಿ ತನ್ನ ಮೊಮ್ಮಗಳ ಪತಿಗೆ ಏನಾದರೂ ಆಪತ್ತು ಒದಗಿದಲ್ಲಿ ಆ ಮಂಗಳ ಕಾರ್ಯಕ್ಕೆ ವಿಘ್ನವುಂಟಾಗುವುದೆಂದು ಆಕೆ ಹೆದರಿದಳು. ಈಗ ಮಿಾನ ಮೇಷ ಎಣಿಸುತ್ತ ಇನ್ನೂ ಇಲ್ಲೇ ಕೂರುವುದರಲ್ಲಿ ಅರ್ಥವಿಲ್ಲವೆಂದು ಬಗೆದು ನಂಜುಂಡಸ್ವಾಮಿ

ಯೊಡನೆ ತಮ್ಮ ಪ್ರಯಾಣದ ವಿಚಾರವಾಗಿ ಪ್ರಸ್ತಾಪ ಮಾಡಿದಳು : "ಹಂಗಿದ್ದರೆ ನಾವು ನಾಳೀಕೆ ಹೊಂಟು ಬಿಡ್ತೀವಿ. ನಟ್ರಾಜನಿಗೆ ವಾಸಿಯಾಗ್ತಿರೊ ಕೈಲ್ಲೇ ಲಗ್ನಾನು ನಡೆಸಿಬುಡೋದು ಒಳ್ಳೇದು." ಅದಕ್ಕೆ ನಂಜುಂಡಸ್ವಾಮಿ "ಈ ಕಾಯಿಲೆ ವಿಚಾರ ಹೀಗೇ ಅಂತ ಹೇಳೋದಕ್ಕೆ ಬರೋದಿಲ್ಲ. ಈವತ್ತು ಗುಣ ಆಯ್ತು ಅನ್ನೊ ಹಾಗಿರ್ತದೆ. ಅದೇ ನಾಳೆ ಆ ಪೇಶೆಂಟು ಕಣ್ಣುಮುಚ್ಚಿ ಬಿಟ್ಟಿರ್ತಾನೆ" ಎಂದು ಕ್ಷಯರೋಗದ ವೈಪರೀತ್ಯವನ್ನು ವರ್ಣಿಸಿದನು.

ನರಸಮ್ಮ ನಂಜುಂಡಸ್ವಾಮಿಯ ಮಾತಿಗೆ ಲಕ್ಷ್ಯ ಕೊಡಲಿಲ್ಲ. ಅವಳ ಮನಸ್ಸೆಲ್ಲ ಕೊತ್ತೇಗಾಲದಲ್ಲಿತ್ತು. ಅಷ್ಟು ಅವಕಾಶ ಸಿಕ್ಕೀತೆ ಎಂದು ಅವಳು ಕಾದಿದ್ದಳು. ಅದನ್ನು ಅನುಲಕ್ಷಿಸಿಯೇ ಅವಳು ನುಡಿದಳು : "ಅಯ್ಯೋ ಯೋನಿಲ್ಲ. ನಾನೇ ನೆನ್ನೀ ಜಿನ ಮಾತಾಡಿಸ್ದೆ. ಚೆಂದಾಗೇ ಮಾತಾಡಿದನಲ್ಲಾ ನನ್ನ ಕುಟ್ಟಿ?" ಮುಂದೆ ಮಾತು ಬೆಳೆಸಲು ನಂಜುಂಡಸ್ವಾಮಿ ಇಚ್ಛಿಸಲಿಲ್ಲ. ನರಸಮ್ಮನ ಬಾಯಿಗೆ ಅವನೂ ಹೆದರುತ್ತಿದ್ದ.

ಮಾರನೆಯ ದಿನ ಸುಬ್ಬರಾಯಿಯೊಡನೆ ಕೊತ್ತೇಗಾಲಕ್ಕೆ ಹೊರಟು ನಿಂತಳು ನರಸಮ್ಮ. ಚೆಲುವಮ್ಮ ಬಸುರಿ ಮಗಳೊಬ್ಬಳನ್ನೇ ಬಿಟ್ಟು ಹೋಗಲು ಮನಸ್ಸಿಲ್ಲದಿದ್ದರೂ ನರಸಮ್ಮನ ಆಟಾಟೋಪಕ್ಕೆ ಬೆದರಿ ತಾನೂ ಹೊರಡಲನುವಾದಳು. ಅವರೆಲ್ಲ ಹೊರಟಿರುವರೆಂದು ಅವರನ್ನು ಕಳುಹಿಸಿಕೊಡಲು ಮಂಗಳೆಯೂ ಆ ದಿನ ಒಂದು ಗಂಟೆಯ ಮಟ್ಟಿಗೆ ಮನೆಗೆ ಬಂದಿದ್ದಳು. ಸುಬ್ಬರಾಯಿ ಅವಳ ಕೈ ಹಿಡಿದುಕೊಂಡು "ನೀ ಯಿಲ್ಲಿರೋದು ಚೆಂದಾಗಿಲ್ಲ. ನಟರಾಜ್ನ ನೋಡಿಕೊಳಕ್ಕೆ ಅವ್ನ ಹೆಡತಿ ದುರ್ಗಿ ಇಲ್ಲವಾ. ನೀನು ನನ್ನ ಕುಟ್ಟೆ ಬಂದು ಬುಡು. ಲಗ್ನ ಬರೋ ಬೇಸ್ತವಾರ ಅಲ್ಲ, ಅದರಾಚೆ ಬೇಸ್ತವಾರಕ್ಕೆ ಇಡಸವಿ, ಆಗ ಹಟ್ಟೀಲಿ ನೀ ಯಿಲ್ಲದೆ ಇದ್ರೆ ಹೆಂಗಾ?" ಎಂದನು. ಅದಕ್ಕೆ ಮಂಗಳೆ "ನಾನು ಇಲ್ಲದೆ ಇದ್ದರೆ ಲಗ್ನ ಏನೂ ನಿಲ್ಲುವುದಿಲ್ಲ. ದೊಡ್ಡವ್ವ ಇದಾಳೆ. ಅಕ್ಕ ಇದಾಳೆ. ನಿಮ್ಮಲ್ಲಿ ಹಣ ಇರುವುದರಿಂದ ಹಳ್ಳಿಯೇ ನಿಮ್ಮ ಸಹಾಯಕ್ಕೆ ಬರ್ತದೆ, ಆದರೆ ಪಾಪ ನಮ್ಮ ನಟರಾಜ ಮಾವನ್ನ ಕೇಳುವವರು ಯಾರಿದ್ದಾರೆ? ದುರ್ಗಿ ಒಬ್ಬಳೇ ಏನು ಮಾಡಿಯಾಳು? ನಾನು ಒಂದು ಗಳಿಗೆ ಇಲ್ಲಿ ಇಲ್ಲದೆ ಹೋದರೆ ನಡೆಯುವುದೇ ಇಲ್ಲ. ಕ್ಷಮಿಸಿ, ನಾನು ಖಂಡಿತ ಬರಲಾರೆ" ಎಂದು ಖಚಿತವಾಗಿ ನುಡಿದುಬಿಟ್ಟಳು. ಇದರಿಂದ ಸುಬ್ಬರಾಯಿ ಖೇದಗೊಂಡರೆ ನರಸಮ್ಮ ಕೆರಳಿದ ಸರ್ಪಿಣಿಯೇ ಆದಳು. ಬಸ್ಸಿನಲ್ಲಿ ಸಾಗುತ್ತಿರುವಂತೆ ಉದ್ದಕ್ಕೂ ಇದೇ ಮಾತೇ! "ಈಗ್ಯಾಕೆ ಮಾತು. ಲಗ್ಗಣದ ಕಾರ್ಯ ಯೆಲ್ಲ ಮುಗೀಲಿ. ಅದು ಯಾತಾವಿಕೆ ಓದಾಳು ನೋಡಿ ಕೊತ್ತೀನಿ" ಎಂದು ಸುಬ್ಬರಾಯಿಯೊಡನೆ ಹೇಳುತ್ತಿದ್ದಳು.

೩೨

ಅವರೆಲ್ಲ ತೆರಳಿ ಸುಮಾರು ಒಂದು ತಿಂಗಳು ಕಳೆದಿತ್ತು. ಈ ಒಂದು ತಿಂಗಳಲ್ಲಿ ವಿಷಕಂಠಯ್ಯ ಕಲ್ಲಹಳ್ಳಿಯಿಂದ ಎರಡು ಬಾರಿ ಬಂದುಹೋಗಿದ್ದ. ಈಗ ಮನ ತಡೆಯದೆ

ಮೂರನೆಯ ಸಲ ಬಂದಿದ್ದ. ತಂದೆ ಮತ್ತೆ ಬಂದುದು ತತ್ತರಿಸುತ್ತಿದ್ದ ಮಂಗಳೆಯ ಹೃದಯಕ್ಕೆ ಒಂದು ಆಧಾರ ಸಿಕ್ಕಿದಂತಾಯಿತು. "ನೀನು ಹಳ್ಳೀಗೆ ಮತ್ತೆ ಹೋಗಬೇಡ ಅಯ್ಯ, ಇಲ್ಲೇ ಇದ್ದು ಬಿಡು. ನಟರಾಜ ದಿನೇ ದಿನೇ ಕ್ಷಯಿಸುತ್ತಾ ಇದಾನೆ, ನೀನು ಇಲ್ಲಿದ್ದರೆ ನನಗೆ ಸ್ವಲ್ಪ ಧೈರ್ಯ" ಎಂದು ಅವನನ್ನು ಬೇಡಿಕೊಂಡಳು. ಮಗಳ ಮಾತನ್ನು ಪುರಸ್ಕರಿಸಿ ವಿಷಕಂಠಯ್ಯ ಮೈಸೂರಿನಲ್ಲೇ ಒಂದು ವಾರ ಇದ್ದುಬಿಟ್ಟ. ಆದರೆ ಆಗಲೆ ಮಳೆ ಬೀಳಲು ಆರಂಭವಾದುದರಿಂದ ಹೊಲಗಳತ್ತ ಅವನ ಯೋಚನೆ ಹರಿಯತೊಡಗಿತು. ಬಿತ್ತನೆಯ ಕಾಲ; ಇನ್ನೆಷ್ಟು ದಿನ ಇಲ್ಲೇ ಕುಳಿತಿರುವುದು ಎಂದು ಅವನ ಮನಸ್ಸು ಪರಿತಪಿಸತೊಡಗಿತು. ಒಂದು ದಿನ ಮನಸ್ಸು ತಡೆಯದೆ ಮಂಗಳೆಯೊಡನೆ ಇದೇ ವಿಚಾರ ಪ್ರಸ್ತಾಪ ಮಾಡಿದ. ಮಂಗಳೆ ವಿಷಾದದಿಂದ ಅವನು ಹೋಗಲೊಪ್ಪಿಗೆಯಿತ್ತಳು. ಅವನನ್ನು ಕಳುಹುವ ಮುನ್ನ ಐದಾರು ದಿನದೊಳಗೆ ಹಿಂದಿರುಗುವೆನೆಂದು, ಅವನಿಂದ ಮಾತು ತೆಗೆದುಕೊಂಡಳು.

ಬೆಳಗಿನ ಬಸ್ಸು ಹತ್ತಲು ಹೋದ ವಿಷಕಂಠಯ್ಯ ಕೊನೆಯ ಗಳಿಗೆಯಲ್ಲಿ ಮನಸ್ಸು ಬದಲಿಸಿ ಆಸ್ಪತ್ರೆಗೆ ಬಂದ. ಅದು ಮಂಗಳೆಯನ್ನು ಚಕಿತಗೊಳಿಸಿತು. ವಿಷಕಂಠಯ್ಯ ನೇರವಾಗಿ ನಟರಾಜನಲ್ಲಿಗೆ ಹೋಗಿ, ಅವನ ಕೈ ಹಿಡಿದುಕೊಂಡು "ಏಳು ನಟ್ರಾಜ, ಹೋಗಾವ. ಸಾಯೋದಿದ್ರೆ ನಮ್ಮ ಕಲ್ಲಹಳ್ಳೀಲೆ ಸಾಯೋವಂತೆ" ಎಂದು ತ್ವರೆಗೊಳಿಸತೊಡಗಿದ. ಆಗ ನಟರಾಜ ಕ್ಷೀಣ ಸ್ವರದಲ್ಲಿ "ಡಾಕ್ಟರ್‌ಗೆ ಕೇಳಬೇಕು ಭಾವ. ಅವರ ಅನುಮತಿಯಿಲ್ಲದೆ ನಾನು ಇಲ್ಲಿಂದ ಹೊರಟು ಬರುವಂತಿಲ್ಲ" ಎಂದನು. "ಅಷ್ಟೇಯಾ?– ಕೇಳ್ತೀನಿ ತಾಳು" ಎಂದು ವಿಷಕಂಠಯ್ಯ ಮೆಡಿಕಲ್ ಆಫೀಸರನ್ನೇ ಹೋಗಿ ಕೇಳಿದನು. ಆದರೆ ಅವರು ನಟರಾಜನ ಆಗಿನ ಸ್ಥಿತಿಯಲ್ಲಿ ಪ್ರಯಾಣ ತೀರ ಅಪಾಯಕರವಾದದ್ದು, ಎಂದು ಹೇಳಿಬಿಟ್ಟರು. ವಿಷಕಂಠಯ್ಯ ವಿಧಿಯಿಲ್ಲದೆ ಒಬ್ಬನೇ ಕಲ್ಲಹಳ್ಳಿ ಕಡೆಗೆ ಹೋಗುವ ಸಂಜೆಯ ಬಸ್ಸಿನಲ್ಲಿ ಕೂರಬೇಕಾಯಿತು.

ಮಾರನೆಯ ದಿನ ನಟರಾಜನಿಗೆ ಕೊಂಚ ಹುಷಾರಾದಂತೆ ತೋರಿತು. ಮಂಗಳೆ ಸಡಗರದಿಂದ ಓಡಾಡಿಕೊಂಡು ಅವನಿಗೆ ಹಣ್ಣು, ಹಾಲು ಕೊಟ್ಟಳು. ಉಷ್ಣಮಾಪಕ ಯಂತ್ರ ಹಿಡಿದು ಒಳಗೆ ಬಂದ ನರ್ಸ್ ಥಾಮಸ್ ಮಂಗಳೆಯ ಸಡಗರವನ್ನು ನೋಡಿ ತೀರಾ ವ್ಯಾಕುಲಗೊಂಡಳು. "ಮೋಡ ಕವಿಯು ಮುನ್ನ ಸ್ವಲ್ಪ ಬಿಸಿಲು ಕಾಣಿಸಿಕೊಂಡಿದೆ. ಅಷ್ಟಕ್ಕೇ ಈ ಹುಚ್ಚು ಹುಡುಗಿ ಅವನು ಬದುಕಿ ಬಿಡುವನೆಂದು ಭ್ರಮೆಗೊಂಡಂತಿದೆ. ಅಯ್ಯೋ ಪಾಪ" ಎಂದು ತನ್ನಲ್ಲೇ ಅವಳಿಗಾಗಿ ಸಂಕಟಪಟ್ಟಳು.

ಮಧ್ಯಾಹ್ನದ ವೇಳೆಗೆ ಹೊರಗಡೆ ಮೇಘಗಳು ದಟ್ಟೈಸಿ ಮಳೆಗರೆಯಲಾರಂಭಿಸಿದವು. ಅದೇ ಸಮಯಕ್ಕೆ ನಟರಾಜನ ಕೋಣೆಯೊಳಗೂ ಮೋಡ ಕವಿದಂತೆ ಕತ್ತಲಾಗಲಾರಂಭಿಸಿತ್ತು.

ನಟರಾಜನ ದೇಹಸ್ಥಿತಿ ಈಗರ್ಧ ಗಂಟೆಯಿಂದ ಹಠಾತ್ತನೆ ಇಳಿಮುಖವಾಗಿ ವಿಷಮಿಸಹತ್ತಿತ್ತು. ಅರಿಯದ ಮಂಗಳೆಯಡೊನೆ ದೈವ 'ಆಸೆ-ಮೋಸ'ದ ಆಟವಾಡುತ್ತಿರುವಂತಿತ್ತು ಆ ದೃಶ್ಯ. ಈಗರ್ಧ ಗಂಟೆಯ ಹಿಂದೆ ನಟರಾಜ ಉಳಿಯಬಹುದೆಂಬ ಆಸೆಯ ಹೂವು ಅವಳ ಹೃದಯದಲ್ಲಿ ಅರಳಲಾರಂಭಿಸಿತ್ತು. ಆದರೆ ಅದೇ ಈಗ-ಅರ್ಧ ಗಂಟೆ ಕಳೆಯುವುದರಲ್ಲಿ -ಪಾಪಿ ಆ ದೈವ ಆ ಪುಷ್ಪವನ್ನು ನಿಷ್ಕರುಣೆಯಿಂದ ಕಿತ್ತು ಬಿಸಾಡಿತ್ತು!... ಮಂಗಳೆ ನಿಟ್ಟುಸಿರಿಡುತ್ತ ನಟರಾಜನ ಶುಶ್ರೂಷೆಯಲ್ಲಿ ನಿರತಳಾದಳು.

ಕ್ಷಣ ಕ್ಷಣಕ್ಕೆ ನಟರಾಜನ ರೋಗ ಉಲ್ಬಣಗೊಳ್ಳುತ್ತ ಹೋಯಿತು. ಉಬ್ಬಸ ಹೆಚ್ಚಿತು. ಬರಬರುತ್ತ ಅವನು ಉಸಿರಾಡುವುದೇ ಪ್ರಯಾಸವಾಯಿತು. ಕ್ಷೀಣವಾಗಿ ಹೊರಡುತ್ತಿದ್ದ ಮಾತೂ ಪೂರ್ಣವಾಗಿ ನಿಂತು ಹೋಯಿತು. ಶೀರ್ಣವಾಗಿ ಆ ಮಂಚದ ಮೇಲೆ ಪುಟ್ಟದಾಗಿ ಮಲಗಿದ ಅವನ ಶರೀರ ಅವಳಿಗೆ ಆಗತಾನೆ ಹುಟ್ಟಿದ ಹಸುಕಂದನಂತೆ ಕಂಡಿತು. ಅವನ ಮುಖವೂ ಹಸುಳೆಯಂತೆ ನಿರ್ಮಲವಾಗಿ, ಶಾಂತಿಯುತವಾಗಿ ತೋರಿತು. ಮಂಗಳೆ ಗಳಗಳನೆ ಕಣ್ಣೀರು ಸುರಿಸುತ್ತ ಅವನನ್ನೇ ನಿಸ್ಸಹಾಯಕವಾಗಿ ನಿಟ್ಟಿಸುತ್ತ ನಿಂತಳು.

ಕೊಂಚ ಹೊತ್ತಿನಲ್ಲಿ ನರ್ಸ್‌ಗಳು, ಡಾಕ್ಟರುಗಳು ಎಲ್ಲ ಬಂದರು. ಇನ್‌ಜೆಕ್ಷನ್ ಕೊಟ್ಟರು. ಔಷಧ ಕುಡಿಸಿದರು. ನಾಡಿ, ಹೃದಯುಗಳನ್ನು ಪರೀಕ್ಷಿಸಿ ಇನ್ನು ಯಾವ ಔಷಧೋಪಚಾರದಿಂದಲೂ ಉಪಯೋಗವಿಲ್ಲವೆನ್ನುವಂತೆ ಒಬ್ಬರನ್ನೊಬ್ಬರು ನೋಡಿಕೊಂಡು ತಲೆಯಲ್ಲಾಡಿಸುತ್ತ ಹೊರಟುಹೋದರು. ಮಂಗಳೆಯೊಬ್ಬಳೆ ಏಕಾಕಿನಿಯಾಗಿ ದಿಕ್ಕೇ ತೋಚದೆ ನಿಂತಿದ್ದಳು. ಕಂಬನಿಗೂ ಮಿಾರಿದ ದುಃಖ ಅವಳ ಅಂತಃಕರಣವನ್ನು ಕಲಕುತ್ತಿತ್ತು.

ಅವಳು ನೋಡುತ್ತಿದ್ದಂತೆಯೇ ಐದು ನಿಮಿಷಗಳಲ್ಲಿ ಅವನ ದೇಹ ನಿಶ್ಚೇಷ್ಟಿತವಾಯಿತು. ಅದನ್ನು ಕಂಡು ಮಂಗಳೆಗೆ ಹೌಹಾರಿದಂತಾಯಿತು. ದೊಪ್ಪನೆ ನಟರಾಜನ ಮೃತ ಶರೀರದ ಮೇಲೆ ಕುಸಿದು ಬಿದ್ದಳು.

* * *

ಮಂಗಳೆಗೆ ಪ್ರಜ್ಞೆ ಮರಳಿದಾಗ ದುರ್ಗಿ, ನಂಜುಂಡಸ್ವಾಮಿ, ಯಶೋದಮ್ಮ, ಚಿನ್ನಸ್ವಾಮಿ, ಆದಿಲಕ್ಷ್ಮಿ ಎಲ್ಲರೂ ಅಲ್ಲಿ ಬಂದು ನೆರೆದಿದ್ದರು.

ಯಶೋದಮ್ಮ ಸೂಕ್ಷ್ಮವಾಗಿ ಮಂಗಳೆಯ ಮುಖವನ್ನೂ ಕೈಗಳನ್ನೂ ನೋಡಿದಳು. ಅವಳ ಹಣೆಯಲ್ಲಿ ಕುಂಕುಮವಾಗಲಿ, ಕೈಯಲ್ಲಿ ಬಳೆಗಳಾಗಲಿ ಇರಲಿಲ್ಲ. ಅವಳು ನಟರಾಜನ ಮೃತ ದೇಹದ ಮೇಲೆ ಬಿದ್ದು ಹೊರಳಾಡಿದಾಗ ಬಳೆಯೊಡೆದಿತ್ತು; ಹಣೆಯ ಕುಂಕುಮ ಅಳಿಸಿಹೋಗಿತ್ತು. ಯಶೋದಮ್ಮ ತನ್ನ ಕಣ್ಣು ತುಂಬ ನೀರು ತಂದು, ಅವಳ ಗಲ್ಲವನ್ನು

ಹಿಡಿದು "ಈವತ್ತೀಗ ನಿನಗೆ ವೈಧವ್ಯ ಪ್ರಾಪ್ತಿಯಾಯಿತು. ಸರ್ವಮಂಗಳಾ" ಎಂದು ಮಮ್ಮಲ ಮರುಗಿದಳು. ಮಂಗಳೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ನಂಜುಂಡಸ್ವಾಮಿ "ನನ್ನ ಎರಡನೇ ಮಗನನ್ನ ಕಳೆದುಕೊಂಡೆ" ಎಂದು ಗಟ್ಟಿಯಾಗಿ ರೋದಿಸಲಾರಂಭಿಸಿದ. ದುರ್ಗಿಯ ಶೋಕಕ್ಕಂತೂ ಕೊನೆಯೇ ಇರಲಿಲ್ಲ.

ಮುಂದಿನ ಕಾರ್ಯಗಳು ಯಾಂತ್ರಿಕವಾಗಿ ನಡೆದುಹೋದವು. ನಟರಾಜನನ್ನು ಮಣ್ಣು ಮಾಡಿ ಬಂದ ಬಳಿಕ ಆ ರಾತ್ರಿ ಮಂಗಳೆಗೆ ಬದುಕು ಅರ್ಥಹೀನವಾಗಿ ತೋರಿತು. ನಟರಾಜನನ್ನು ಕಳೆದುಕೊಂಡು ತಾನು ಏಕೆ ವೃಥಾ ಬದುಕಿರಬೇಕೆಂಬ ತರ್ಕ ಅವಳಲ್ಲಿ ಮೂಡಿತು. 'ನೀನು ಬದುಕಬೇಕು. ನಟರಾಜನ ಪ್ರತಿರೂಪ ದುರ್ಗಿಯ ದೇಹದೊಳಗೆ ಪ್ರವರ್ಧಮಾನಗೊಳ್ಳುತ್ತಿದೆ, ಅದಕ್ಕಾಗಿ ಆ ಶಿಶುವನ್ನು ಸಾಕಿ ಸಲಹಲೋಸುಗ ನೀನು ಜನ್ಮಧಾರಣ ಮಾಡಬೇಕು' ಎಂದು ಅದಕ್ಕುತ್ತರವಾಗಿ ಅವಳ ವಿವೇಚನೆ ಸಲಹೆ ಹೇಳಿತು. ಹೌದು, ಆ ಶಿಶುವಿಗಾಗಿ ತನ್ನ ನಟರಾಜನಿಗಾಗಿ ಅವಳು ಎಲ್ಲ ಸಂಕಷ್ಟಗಳನ್ನೂ ಸೈರಿಸಿಕೊಂಡು ಜನ್ಮಧಾರಣ ಮಾಡಲೇಬೇಕಾಗಿತ್ತು. ನಟರಾಜನ ಶಿಶುವೆಂದ ಬಳಿಕ ಅದು ತನ್ನ ಶಿಶುವಾದಂತೆಯೇ ಆಯಿತಲ್ಲವೇ? ಅದರ ಶ್ರೇಯಸ್ಸಿಗಾಗಿ, ಏಳಿಗೆಗಾಗಿ ಬದುಕುವುದು ತನ್ನ ಧರ್ಮವಲ್ಲವೇ? ಒಬ್ಬನೇ ಮಗನಾದ ಅನಂತನನ್ನು ವೃದ್ಧಾಪ್ಯದಲ್ಲಿ ಕಳೆದುಕೊಂಡ ನಂಜುಂಡಸ್ವಾಮಿ, ಯಶೋದಮ್ಮ ತೋರುತ್ತಿದ್ದ ಮನೋಸ್ಥೈರ್ಯವಾದರೂ ಎಂಥ ಅನುಕರಣೀಯವಾದುದು! ಅವರ ಸ್ಥೈರ್ಯ ಮೆಚ್ಚಿ ನಟರಾಜನಾಡಿದ್ದ ಮಾತುಗಳು ಮತ್ತೊಮ್ಮೆ ಮಂಗಳೆಯ ನೆನಪಿನಲ್ಲಿ ಸುಳಿದವು : "ಸಾಯುವುದು ಸುಲಭ ಮಂಗಳೆ. ಚಿಕ್ಕಯ್ಯ, ಚಿಕ್ಕಮ್ಮನಂತೆ ಎಲ್ಲವನ್ನೂ ನುಂಗಿಕೊಂಡು ಬದುಕುವುದು ಹೆಚ್ಚುಗಾರಿಕೆ, ಅದನ್ನೇ ನಮ್ಮ ಹಿರಿಯರು ಸಂಸ್ಕೃತಿ, ಸಂಸ್ಕಾರ ಎಂದು ಎತ್ತಿ ಹಿಡಿದಿರುವುದು. ನಮ್ಮ ದುಃಖವನ್ನು ಪರರ ದುಃಖದಲ್ಲಿ ಮರೆಯಬೇಕು. ನಮ್ಮ ಕಷ್ಟಕ್ಕಿಂತ ನೂರು ಪಾಲು ಹೆಚ್ಚಿನ ಕಷ್ಟವನ್ನು ಇತರರು ಅನುಭವಿಸುತ್ತಿರುವುದನ್ನು ಗಮನಿಸಿ ನಮ್ಮ ತಾಪವನ್ನು ಸಹಿಸಿಕೊಳ್ಳಬೇಕು. ಹೃದಯ ಆ ಬೇಗೆಯಲ್ಲಿ ನುಚ್ಚು ನೂರಾಗುತ್ತಿದ್ದರೂ ಸಹಿಸಿಕೊಳ್ಳಲೇಬೇಕು"... ಮಂಗಳೆಯ ನಯನಗಳಿಂದ ಸುರಿಯುತ್ತಿದ್ದ ನೀರು ನಿಂತಿತು. "ಹೃದಯ ನುಚ್ಚು ನೂರಾಗುತ್ತಿದ್ದರೂ ಸಹಿಸಿಕೊಳ್ಳಲೇಬೇಕು" ಎಂಬ ನಿರ್ಧಾರ ಅವಳ ಅಂತರ್ಯದಲ್ಲಿ ಮೂಡಿ ನಿಂತಿತು... ಮಂಗಳೆಯ ಯೋಚನೆ ಇನ್ನೊಂದು ದಿಸೆಯಲ್ಲಿ ಹರಿಯತೊಡಗಿತು. ಹೌದು, ಬದುಕಬೇಕು. ಆದರೆ ಇರುವುದಾದರೂ ಎಲ್ಲಿ? ಕಲ್ಲಹಳ್ಳಿಗೆ ಹೋಗುವುದೇ... ಇಲ್ಲ, ಅದಕ್ಕೆ ಅಯ್ಯ ಒಪ್ಪುವುದಿಲ್ಲ. ಆತ ಹಳೆಯ ಕಾಲದವನು, ಗಂಡನ ಮನೆಯನ್ನು ತಪ್ಪಿಸಿ ತನ್ನನ್ನು ತನ್ನ ಮನೆಯಲ್ಲಿ ಇರಿಸಿಕೊಳ್ಳಲು ಅವನೆಂದಿಗೂ ಒಪ್ಪುವುದಿಲ್ಲ... ನಂಜುಂಡಜ್ಜನೂ ಯಶೋದಜ್ಜಿಯೂ ಮೈಸೂರಿನಲ್ಲೇ ಇದ್ದುಬಿಡು ಎಂದು ಒತ್ತಾಯಪಡಿಸುತ್ತಿದ್ದಾರಲ್ಲಾ? 'ಇಲ್ಲೇ ಇದ್ದುಬಿಡುವುದೇ...?...ಥೆ, ಥೆ ಅದು ಹೇಗೆ ತಾನೆ ಸಾಧ್ಯ?–ಇದೇ ಪುತ್ರನನ್ನು ಕಳೆದುಕೊಂಡು ಅಪಾರ ಶೋಕದಲ್ಲಿ

ಮುಳುಗಿರುವ ಅವರ ಬಾಳಿಗೆ ಹೊರೆಯಾಗಿ ತಾನು ಹೋಗುವುದು ಧರ್ಮವೇ ಅದು ಖಂಡಿತ ಕೂಡದು... ಹಾಗಾದರೆ ಮಾಡುವುದಾದರೂ ಏನು? ಪುನಃ ತನ್ನ ಗಂಡನ ಮನೆಗೆ ಹೋಗಬೇಕೆ?... ತಾನು ಜೀವಧಾರಣ ಮಾಡಬೇಕಾದರೆ ಅವಳಿಗುಳಿದುದು ಅದೊಂದೇ ಜಾಗ. ನಟರಾಜನನ್ನು ಮಣ್ಣು ಮಾಡಿ ಮನೆಗೆ ಬಂದೊಡನೆ ದುರ್ಗಿ ಅವಳ ಕಾಲು ಹಿಡಿದು ಪ್ರಾರ್ಥಿಸಿದ್ದಳು : "ಅಕ್ಕಾ, ನಿನ್ನನ್ನು ನೋಡಿದರೆ ನನಗೆ ಹೆದರಿಕೆಯಾಗುತ್ತದೆ. ನೀನೇ ಹೀಗೆ ಶೋಕ ಮಾಡಿ ಒಂದು ಪಕ್ಷ ತೀರಿಕೊಂಡರೆ ನನ್ನ ಹೊಟ್ಟೆಯಲ್ಲಿರುವ ಶಿಶುವನ್ನು ನೋಡಿಕೊಳ್ಳುವವರು ಯಾರು? ನೀನು ಹೇಗೆ ವ್ಯಥೆ ಮಾಡಬಾರದು ಅಕ್ಕಾ. ನೀನು ನನಗೆ ಧೈರ್ಯ ಹೇಳಬೇಕಾದವಳು. ನೀನೇ ಹೀಗೆ ದಿಕ್ಕು ತೋಚದೆ ಕುಳಿತರೆ ನಮ್ಮ ಗತಿ ಏನು?..." ಮಂಗಳೆ ಎಲ್ಲವನ್ನೂ ಕೂಲಂಕಷವಾಗಿ ಆಲೋಚಿಸಿದಳು. ಕೊನೆಯಲ್ಲಿ ತಾನು ಆ ಶಿಶುವಿಗಾಗಿ ಬದುಕಬೇಕು, ಅದಕ್ಕಾಗಿ ಕೊತ್ತೇಗಾಲಕ್ಕೆ ಹೋಗಬೇಕು, ನಟರಾಜನ ಮಾತಿನಂತೆ ಇತರರ ದುಃಖವನ್ನು ಗಮನಿಸಿ ತನ್ನ ದುಃಖವನ್ನು ಮರೆಯಬೇಕು ಎಂಬ ನಿರ್ಧಾರವನ್ನು ಮುಟ್ಟಿದಳು.

* * *

ಸಂಜೆಯ ಬಸ್ಸು ಮಂಗಳೆಯನ್ನೂ ದುರ್ಗಿಯನ್ನೂ ಮೈಸೂರು ಮಂಗಳೂರು ಹೆದ್ದಾರಿಯಲ್ಲಿ ಕೊತ್ತೇಗಾಲಕ್ಕೆ ಹೋಗುತ್ತಿದ್ದ ಅಡ್ಡ ಹಾದಿಯಲ್ಲಿ ಇಳಿಸಿ ಹೋಯಿತು. ಇಬ್ಬರೂ ಎರಡೂವರೆ ಮೈಲಿ ನಡೆದೇ ಊರು ಸೇರಿದರು. ದುರ್ಗಿಯನ್ನು ಅವರ ಮನೆಯ ಬಳಿ ಬಿಟ್ಟು ಸುಬ್ಬರಾಯಿಯ ಹಟ್ಟಿಯ ಕಡೆ ಹೊರಟಳು, ಮಂಗಳೆ. ದಾರಿಯುದ್ದಕ್ಕೂ ಅವಳಿಗೆ ನಾನಾ ಯೋಚನೆ–ಆ ಹಟ್ಟಿಯಲ್ಲಿ ಈಗ ಇನ್ನೊಬ್ಬಳು ಬಂದು ನೆಲೆಸಿದ್ದಾಳೆ. ಅವಳು ಎಂಥ ಸ್ವಭಾವದವಳೋ ? ಬಸವಾಚಾರಿಯ ಹೆಂಡತಿ ಪುಟ್ಟತಾಯಿಯ ತಂಗಿಯಿವಳು ! ಪುಟ್ಟತಾಯಿಯದೇನೋ ಅತಿ ಕೋಮಲ ಸ್ವಭಾವ. ಏನೊಂದೂ ಅರಿಯದ ತರಳೆ. ಅವಳ ತಂಗಿಯಾದ ಗಿರಿಜೆಯೂ ಒಳ್ಳೆಯವಳಾಗೇ ಇರಬೇಕು...

ಹೀಗೆ ಅವಳು ಯೋಚಿಸುವಷ್ಟರಲ್ಲಿ ಸುಬ್ಬರಾಯಿಯ ಮನೆ ಸಿಕ್ಕಿತು. ಅಂಜುತ್ತಳುಕುತ್ತ ಹೊರೆ ಹೊಸ್ತಿಲು ದಾಟಿ ತೊಟ್ಟಿಯೊಳಗೆ ಅಡಿಯಿಟ್ಟಳು. ಹೊಸ ಮುಖವನ್ನು ಕಂಡ ಗಿರಿಜೆ 'ಯಾರು ಇವ್ರು ?' ಎಂದು ಸೋಜಿಗಗೊಂಡಳು. ಹಿಂದೆ ಯಾವಾಗಲೂ ಮಂಗಳೆಯ ಮುಖವನ್ನವಳು ನೋಡಿದುದೇ ಇಲ್ಲ. ಅವಳ ಅಕ್ಕನ ವಿವಾಹಕ್ಕೂ ಮಂಗಳೆ ಹುಷಾರು ತಪ್ಪಿ ಬಾರದೇ ಹೋದದ್ದರಿಂದ ಮಂಗಳೆಯ ಮುಖ ನೋಡುವ ಅವಕಾಶವೇ ಅವಳಿಗೆ ದೊರೆತಿರಲಿಲ್ಲ. ಆದರೆ ಸರ್ವಮಂಗಳ ತನ್ನ ಯಜಮಾನರ ಪತ್ನಿ, ಆಕೆ ಮೈಸೂರಿನಲ್ಲಿ ನಟರಾಜನ ಶುಶ್ರೂಷೆಯಲ್ಲಿದ್ದಳು ಎನ್ನುವ ವಿಚಾರವೆಲ್ಲ ಅವಳು ತಿಳಿದಿದ್ದಳು. ಮಂಗಳೆ ಕೆಟ್ಟವಳೆಂದೂ ಮುತ್ತಿನಂತಹ ಪತಿಯೊಡನೆ ಬಾಳಾಟ ಮಾಡಲಾರದೆ ಮೈಸೂರಿಗೆ ಓಡಿಹೋಗಿ

ಕಾಯಿಲೆ ಬಿದ್ದಿದ್ದ ನಟರಾಜನನ್ನು 'ಮಡಗಿ'ಕೊಂಡ 'ಹರಾಮಿ'ಯೆಂದೂ ದುರ್ಗಿಯ ಬಾಳು ಮುರಿದ 'ತಾಟಗಿತ್ತಿ'ಯೆಂದೂ ನರಸಮ್ಮನಿಂದ ಬೋಧಿಸಲ್ಪಟ್ಟಿದ್ದಳು. ಆದ್ದರಿಂದ, ಸರ್ವಮಂಗಳ ತನ್ನ ದುರದೃಷ್ಟವಶಾತ್ ಮೈಸೂರಿನಿಂದ ಈ ಮನೆಗೆ ಬರಲು ನಿರ್ಧರಿಸಿದರೆ ತನ್ನ ಗತಿಯೇನೆಂಬುದೇ ಈಗೆರಡು ದಿನಗಳಿಂದ ಗಿರಿಜಳಿಗೆ ಬಗೆಹರಿಯದ ಸಮಸ್ಯೆಯಾಗಿತ್ತು–

ಆದರೆ ಹಟ್ಟಿಯ ಒಳಗೆ ಪ್ರವೇಶಿಸಿದ ಆಗುಂತಕಳು ಸರ್ವಮಂಗಳೆ ಎಂದು ಗಿರಿಜಳಿಗೆ ಆ ಗಳಿಗೆಯಲ್ಲಿ ಹೊಳೆಯಲೇ ಇಲ್ಲ. ಯಾರೊ ಅಪರಿಚಿತರು ಬಂದಿರುವರೆಂದು ಹೆಸರುಕಾಳು ಕೇರುತ್ತಿದ್ದ ಮೊರವನ್ನು ಹಾಗೇ ಇಟ್ಟು "ಯಾರವ್ವ ನೀನು ?" ಎಂದು ಎದ್ದುಬಂದಳು. ಮಂಗಳೆ "ನಾನೂ..." ಎಂದು ಮುಂದೆ ಏನೂ ನುಡಿಯಲಾರದೆ ತಟಸ್ಥಳಾದಳು. "ಅದ್ಯಾಕೆ ಹಂಗೆ ನಾಚಿಕೊಂಡಿ ಹೇಳವ್ವ..." ಎಂದು ಗಿರಿಜೆ ಪ್ರೋತ್ಸಾಹಿಸಿದಳು. ಮೆಲ್ಲನೆ, ಬಹುಮೆಲ್ಲನೆ– ಮಂಗಳೆ ಬಾಯಿ ಬಿಟ್ಟಳು "ನಾನು ಈ ಮನೆಯವಳೇ–!" ಗಿರಿಜೆ ದಿಗ್ಭ್ರಮೆಗೊಂಡಳು. "ಅಂದ್ರೆ?... ಸರ್ವಮಂಗ್ಳೆ ಅನ್ನೋಳು ನೀನೇಯಾ ?" ಎಂದು ಪ್ರಶ್ನಿಸಿದಳು. ಮಂಗಳೆ "ಹೌದು" ಎನ್ನುತ್ತಲೂ ಅವಳ ಎದೆ ಧಸಕ್ಕೆಂದಿತು.

ಮುಂದೆರಡು ತಾಸಿನಲ್ಲಿ ತೋಟದಿಂದ ಸುಬ್ಬರಾಯಿ ಬಂದನು. ಮನೆಗೆ ಬಂದ ಕೂಡಲೇ ಮಂಗಳೆಯನ್ನು ಕಂಡ ಅವನಲ್ಲಿ ಎರಡು ವಿರುದ್ಧ ಭಾವಗಳು ಹೆಡೆಯಾಡತೊಡಗಿದವು. ತಾನು ಕರೆದ ಕೂಡಲೆ ತನ್ನೊಡನೆ ಮೈಸೂರಿನಿಂದ ಅವಳು ಹೊರಡದಿದ್ದುದು ಅವನನ್ನು ಕೆರಳಿಸಿತ್ತು. ಜೊತೆಗೆ ನರಸಮ್ಮ ಇಲ್ಲದ ಸಲ್ಲದ ಚಾಡಿ ಹೇಳಿ ಅವನ ಮನಸ್ಸನ್ನು ಕೆಡಿಸಿದ್ದಳು. "ನಿಂಗೊಂದು ಮೊಗಾನು ಹೆತ್ತು ಕೊಡ್ನಿಲ್ಲ. ಓಗ್ಲಿ ಅಂದ್ರೆ, ಈಟೊಂದು ಆಟಾನೂ ಆಡಿಬುಟ್ಲು ಮನೆಹಾಳಿ, ಅವ್ಳು. ನೀ ಯೆಂದಿಗೂ ಅವಳ್ನ ತಿರುಗ ಅಟ್ಟೀಗೆ ಸೇರಿಸಬ್ಯಾಡ" ಎಂದೆಲ್ಲ ಎಚ್ಚರಿಸಿದ್ದಳು. ಆದರೆ ಮಂಗಳೆಯನ್ನು ನೋಡಿದ ತಕ್ಷಣ ಮಂಗಳೆಯನ್ನು ಮನೆಗೆ ಸೇರಿಸಲೇಕೂಡದು, ಎಂದು ಸುಬ್ಬರಾಯಿ ಮಾಡಿಕೊಂಡಿದ್ದ ನಿರ್ಧಾರ ಗಾಳಿಗೆ ಚದುರಿ ಹೋಗುವ ಮೋಡಗಳಂತೆ ದಿಕ್ಕುಪಾಲಾಯಿತು. ಹಿಂದಿನಂತೆಯೇ ಮಂಗಳೆಯೊಡನೆ ಸರಸವಾಗಿ ವರ್ತಿಸತೊಡಗಿದನು.

೫೩

ಸರ್ವಮಂಗಳೆ ಸುಬ್ಬರಾಯಿಯ ಮನೆಯಲ್ಲಿ ಪುನಃ ಪ್ರತಿಷ್ಠಿತಳಾದುದು ನರಸಮ್ಮನ ಎದೆಯಲ್ಲಿ ಬೆಂಕಿ ಸುರಿದಂತಾಯಿತು. ತನ್ನ ಮಾತಿಗೆ ಸುಬ್ಬರಾಯಿ ಬೆಲೆ ಕೊಡದೇ ಹೋದರೂ ಗಿರಿಜೆಯ ಎಳೆಯ ಮನಸ್ಸಿನಲ್ಲಿ ಅದಕ್ಕೆ ಸಾಕಷ್ಟು ಪುರಸ್ಕಾರವಿದೆ, ಎಂದು ನರಸಮ್ಮ ಅನುಭವದಿಂದ ಅರಿತಿದ್ದಳು. ಆ ಕಾರಣದಿಂದ ತನ್ನ ಕುಟಿಲತೆಯನ್ನೆಲ್ಲ ಆ ಮುಗ್ಧ ಮನಸ್ಸಿನೊಳಗೆ ತುಂಬಲು ಹವಣಿಸಿದಳು. ಸಮಯ ಸಿಕ್ಕಿದಾಗಲೆಲ್ಲ "ಇನ್ನೂವೆ ಹಟ್ಟೀಯಿಂದಾಚೇಗೆ ಆ ತಾಟಕೀಯ ಹೊರಡಿಸದೆ ಕುಂತಿದ್ದೀಯಾ?" ಎಂದು ಗಿರಿಜೆಯ

ಕಿವಿ ನುಲಿಯುತ್ತಿದ್ದಳು. ಇದರಿಂದಾಗಿ ಗಿರಿಜೆ ಮಾತುಮಾತಿಗೆ ಮಂಗಳೆಯೊಡನೆ ಜಗಳ ತೆಗೆಯುತ್ತಿದ್ದಳು. ದುರ್ಗಿಯ ಮನೆಗೆ ಮಂಗಳೆ ಹೋಗುತ್ತಿದ್ದುದು, ಅವಳು ತಮ್ಮ ಹಟ್ಟಿಗೆ ಬಂದು ಮಂಗಳೆಯೊಡನೆ ಸಲ್ಲಾಪಿಸುತ್ತ ಕೂರುತ್ತಿದ್ದುದು ಗಿರಿಜೆಗೆ ಮುಳ್ಳು ಚುಚ್ಚಿದಂತಾಗುತ್ತಿತ್ತು.

ಒಂದು ದಿನ ಮಂಗಳೆ ದುರ್ಗಿಯ ಮನೆಗೆ ಹೋಗಿ ಬರುತ್ತಿದ್ದಳು. ಗಿರಿಜೆ ಬೀದಿಯ ಬಾಗಿಲಿನಲ್ಲೇ ಅವಳಿಗೆದಿರಾಗಿ "ನಾಯಿಲ್ಲಿ ಕತ್ತೇ ಹಂಗೆ ಚಾಕರಿ ಮಾಡಿಕೊಂಬಿದ್ದಿವ್ನಿ, ನೀನು ಬೀದಿ ಬಸವಿ ಹಂಗೆ ಮನೆ ಮನೆ ತಿರುಗಿಕೊಂಡು ನಿಂತಿರು" ಎಂದು ಸಿಡಿಮಿಡಿಗುಟ್ಟಿದಳು. ಈ ಅನ್ಯಾಯದ ನುಡಿಗಳನ್ನಾಲಿಸಿ ಮಂಗಳೆಯ ನೇತ್ರಗಳಲ್ಲಿ ನೀರೂರಿತು. ಬೆಳಗಿನ ಐದು ಗಂಟೆಯ ಸುಮಾರಿಗೇ ಎದ್ದವಳು ಮನೆಗೆಲಸಗಳನ್ನೆಲ್ಲ ಮುಗಿಸಿ ರಾತ್ರಿ ಅವಳು ಮಲಗುವಾಗ ಗಿರಿಜೆಯೂ ಸುಬ್ಬರಾಯಿಯೂ 'ಒಂದು ನಿದ್ರೆ' ಮುಗಿಸಿರುತ್ತಿದ್ದರು. ಗಿರಿಜೆ ಸಕಲ ಕಾರ್ಯಗಳನ್ನೂ ಅವಳ ಮೇಲೇ ತಳ್ಳಿ ನೆರೆಮನೆಯವರ ಸಂಗಡ ಚಕ್ಕಂದವಾಡುತ್ತಿದ್ದಳು. ಹೀಗಿದ್ದರೂ ಗಿರಿಜೆ ಆ ಮಾತುಗಳನ್ನು ಹೇಳಬಹುದೇ, ಎಂದು ಮಂಗಳೆಯ ಹೃದಯ ನೊಂದುಕೊಂಡಿತು.

ದಿನ ಬೆಳಗಾದರೆ ಜಗಳ, ನಿಷ್ಕಾರಣವಾಗಿ ಕಲಹ. ಮಂಗಳೆಗೂ ರೋಸಿ ಹೋಗಿತ್ತು. ಆದರೂ ನಟರಾಜನನ್ನು ಸ್ಮರಿಸಿಕೊಂಡು ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಳು.

ಒಂದು ಮಧ್ಯಾಹ್ನ ಮಂಗಳೆ ತೋಟಕ್ಕೆ ಹೋಗಿ ಆಳುಗಳಿಗೆ ಹಿಟ್ಟು ಹಂಚಿ ಬಂದಳು. ಬೆಳಗಿನಿಂದ ಮೊರ ಹಿಡಿದು ರಾಗಿ ಮಾಡುತ್ತೇನೆಂದು ತೊಟ್ಟಿಯಲ್ಲಿ ಸೋಗು ಹಾಕಿ ಕುಳಿತಿದ್ದ ಗಿರಿಜೆ ನೆರೆಮನೆಯ ಚೆನ್ನವ್ವೆಯೊಂದಿಗೆ ಹರಟುತ್ತಿದ್ದಳು. ತೊಟ್ಟಿಯೊಳಗೆ ಕಾಲಿಟ್ಟಂತೆ "ಲಗ್ಣ ಆಗಕ್ಕೆ ಮುಂಚೇನೆ ಅವ್ಳ ಮಾವನೊಂದಿಗೆ ಯೆಲ್ಲಾನು ಮುಗಿಸಿಬುಟ್ಟಿದ್ದಲಂತೆ ಕನ್ನವ್ವ...ಅವ್ಳ ಅವ್ವ ಶರೀಕತ್ತಾಗಿದ್ಲಂತೆ... ಈಗ ಮಹಾ ಪತಿವರ್ತೆ ಹಂಗೆ ಬಂದು ನನ್ನ ಹಟ್ಟಿಹೊಕ್ಕೊಂಡು ಅವ್ಳೆ. ನನ್ನ ಬಾಳ ಮುರಿಯಕ್ಕೆ..." ಎಂಬ ಗಿರಿಜೆಯ ನುಡಿಗಳು ಕಠೋರವಾಗಿ, ಕಾಸಿದ ಸೀಸದಂತೆ ಮಂಗಳೆಯ ಕಿವಿಗಳನ್ನು ಹೊಕ್ಕವು. ಈಗಲೀಗ ಮಂಗಳೆಯ ತಾಳ್ಮೆ ತಪ್ಪಿತು. ಆದರೂ ಚೆನ್ನವ್ವೆ ಆಚೆ ಹೋಗುವವರೆಗೂ ಪ್ರಯಾಸದಿಂದ ಸುಮ್ಮನಿದ್ದು, ಅವಳು ತೆರಳಿದ ಕೂಡಲೆ "ಯಾಕೆ ಹೀಗೆ ಅವರಿವರ ಮಾತು ಕೇಳಿಕೊಂಡು ಅನ್ಯಾಯ ಆಡ್ತೀಯೆ? ನಿನಗೆ ವಿವೇಕವೇ ಹೋಗಿಬಿಟ್ಟಿರೋ ಹಾಗಿದೆ" ಎಂದಳು. ತಕ್ಷಣವೇ ಗಿರಿಜೆ ಮೊರ ಹಿಡಿದಂತೆಯೇ ಅವಳ ಮುಂದೆ ಬಂದು ನಿಂತು "ಯಿವೇಕ ಹೇಳಿಕೊಡಕ್ಕೆ ಬಂದಿದ್ದೀಯಾ, ಮಾಡೋದ್ನೆಲ್ಲ ಮಾಡಿಬುಟ್ಟು?" ಎಂದು ಬಿರುಸಾಗಿ ಮೊರದಿಂದ ಅವಳ ಮುಖಕ್ಕೆ ತಿವಿದಳು. ಆಗ ಮಂಗಳೆ ಸ್ವಲ್ಪ ಅಜಾಗರೂಕಳಾಗಿದ್ದರೆ, ಆ ಸಮಯಕ್ಕೆ ಸರಿಯಾಗಿ ತನ್ನ ಕುತ್ತಿಗೆ ಬಾಗಿಸದಿದ್ದರೆ ಅವಳ ಕಣ್ಣೇ ಮಾಟಿ ಹೋಗಬೇಕು. ಸದ್ಯ, ಅವಳ ಪುಣ್ಯಕ್ಕೆ ಆ ಅನರ್ಥ ತಪ್ಪಿ ಹಣೆಗೆ ಮಾತ್ರ ಪೆಟ್ಟು ಬಿದ್ದು ನೆತ್ತರು ಬಸಿಯತೊಡಗಿತು.

ಅದೇ ಸಮಯಕ್ಕೆ ಹಟ್ಟಿಯೊಳಗೆ ಬಂದ ಸುಬ್ಬರಾಯಿ ಎಲ್ಲವನ್ನೂ ನೋಡಿ ಕುದಿದುಹೋದ. ಗಿರಿಜೆಯನ್ನು ಹಿಡಿದು ಚೆನ್ನಾಗಿ ಪ್ರಹರಿಸುತ್ತ "ಮಂಗಳೇನ ಹೊಡೆಯಕ್ಕೆ ನೀನ್ಯಾರೆ? ಅವಳ್ನ ಮುಟ್ಟಕ್ಕೆ ನೀನ್ಯಾರೆ?... ಯಾಕೇ ಮೂಗಿಗೆ ಕವಡೆ ಕಟ್ಟಿಕೊಂಡು ಯಾವತ್ತು ಒಳ್ಳಿ ಮೂಗೆತ್ತಿನಂಗೆ ನಿಂಗೆ ಹಿಟ್ಟು ಉಡಿದು ಆಕ್ತಾಳಲ್ಲಾ–ಅದಕ್ಕೆ ಅವ್ಳ ಮ್ಯಾಗೆ ಬೀಳಕ್ಕೆ ಓಗಿದ್ದೆಯಾ?... ಹುಸಾರ್, ಹುಸಾರ್, ಅವ್ಳು ನಿಂಗೆ ಅಕ್ಕನ ಸಮಾನ. ಅವ್ಳಮ್ಯಾಗೆ ಇನ್ನೊಂದು ಜಿನ ಹಿಂಗೆ ಕೈ ಮಾಡಿದ್ದ ಕಂಡರೆ ನಿನ್ನ ನಡ ಮುರಿದುಬುಟ್ಟೇನು" ಎಂದು ಆರ್ಭಟಿಸಿದನು.

ಅನಂತರ ಅವನು ಊಟಕ್ಕೆ ಕುಳಿತಾಗ ಮಂಗಳೆಯೊಬ್ಬಳೆ ಅವನಿಗೆ ಉಣಬಡಿಸುತ್ತಿದ್ದಳು. ಗಿರಿಜೆ ತಲೆ ಕೆದರಿಕೊಂಡು ಹಿತ್ತಲ ಬಾಗಿಲು ಸೇರಿ ಗೋಳೋ ಎಂದು ಅಳುತ್ತಿದ್ದಳು. ಅನ್ನ ಬಡಿಸಲು ಬಂದ ಮಂಗಳೆಯನ್ನು ಸುಬ್ಬರಾಯಿ ಮರುಕದಿಂದ ನೋಡುತ್ತ, "ಈಗ ರಕ್ತ ಸುರಿಯೋದು ನಿಂತ ಹಂಗೆ ಅದಲ್ಲಾ?" ಎಂದು ಕೇಳಿದ.

"ಹೂ."

"ಅದೇನು ನೀ ಹಣೇಗೆ ಮೆತ್ತಿರೋದು?"

"ಕೆಂಪು ಬೂರಾ ಸಕ್ಕರೆ ಮೆತ್ತೀದ್ದೀನಿ" ಎಂದು ಕಂಚಿನ ಹರಿವಾಣಕ್ಕೆ ಅನ್ನ ಬಡಿಸಿದಳು.

ಸುಬ್ಬರಾಯಿ ಕನಿಕರದಿಂದ ಮಂಗಳೆಯ ಕೈಹಿಡಿದುಕೊಂಡು ಮೃದುವಾಗಿ, "ನೋಡಿದ್ಯಾ, ಬ್ಯಾಡ ಬ್ಯಾಡ ಅಂದರೂವೆ ನಂಗೆ ಆಗ ಲಗ್ಣಕ್ಕೆ ಒಪ್ಪಿಸಿಬುಟ್ಟೆಯಲ್ಲಾ?..." ಎಂದು ಅವಳ ಹಸ್ತದ ಮೇಲೆ ಕಯ್ಯಾಡಿಸುತ್ತ "ಎರಡೊತ್ತುs ನೀ ಯಿಂಗೆ ಆ ಮಾರಿ ಕಯ್ನಲ್ಲಿ ಸಿಕ್ಕೊಂಡು ನರಳೋದು ನೋಡನಾರೆನಲ್ಲಾ!... ನೀನೊಬ್ಬಳು ನಗ್ತಾ ನುಡೀತಾ ಇದ್ದದ್ದು ನಂಗೆ ಮಕ್ಕಳು ಮರಿಯೆಲ್ಲ ಆದಂಗಾಗಿತ್ತಲ್ಲಾ!..." ಎಂದು ಅತ್ಯಂತ ಅನುಕಂಪ ತೋರಿ ನುಡಿದನು.

ಮಂಗಳೆ ಮೆಲ್ಲನೆ ಕೈ ಬಿಡಿಸಿಕೊಂಡು, "ಗಿರಿಜೆಯೂ ಅರೀದ ಹುಡುಗಿ. ನಾಕು ದಿನ ಅನುಭವ ಆದಮೇಲೆ ಕಷ್ಟ ಸುಖ ಎಲ್ಲ ತಾನಾಗೇ ತಿಳೀತದೆ" ಎಂದಳು.

ಹೆಂಡತಿಯ ಉದಾರ ಬುದ್ಧಿ ಸುಬ್ಬರಾಯಿಯ ಅಸಂಸ್ಕೃತ ಹೃದಯವೂ ಮೆಚ್ಚಿ ತಲೆದೂಗುವಂತೆ ಮಾಡಿತು.

ಅದೇ ಸಂಜೆ ಇಳಿಹೊತ್ತಿನಲ್ಲಿ ಪದ್ಧತಿಯಂತೆ ನರಸಮ್ಮ ಹಾಜರಾದಳು. ಗಿರಿಜೆ ಅವಳೊಡನೆ, ಮಧ್ಯಾಹ್ನ ನಡೆದ ವಿಚಾರವನ್ನು ಒಂದಕ್ಕೆ ಹತ್ತು ಮಾಡಿ ಹೇಳಿಕೊಂಡಳು. "ಓಟು ದೂರ ಬೆಳದುಬುಡ್ತಾ ಅವ್ಳ ಕೋಡು!" ಎಂದು ನರಸಮ್ಮ ಸಿಟ್ಟಾದಳು. ಅನಂತರ "ಯೆಲ್ಲಾ–ಆ ತಾಟಗಿತ್ತಿ ತಾರಾದೇವಿ–?" ಎಂದು ಮಂಗಳೆಯನ್ನು ಹುಡುಕಿಕೊಂಡು

ಕೊಟ್ಟಿಗೆಗೆ ಹೋದಳು. ಅಲ್ಲಿ ಮಂಗಳೆ ದನಕರುಗಳಿಗೆ ಕಲಗಚ್ಚು ಇಡುತ್ತಿದ್ದಳು. "ಏನೇs...ಈಟೊಂದು ಪಾರುಪತ್ಯ ಮಾಡಕ್ಕೆ ಸುರುಮಾಡಿ ಬುಟ್ಟೆಯೇನೆ?... ಗಂಡಯ್ಯನಿಗೆ ಚಾಡಿ ಚುಚ್ಚಿ ಆ ತಬ್ಬಲಿ ಕಂದನ್ನ ಚೆಚ್ಚಿಸಿದ್ದೀಯಾ? ನಿನ್ನ ಮಾವನ್ನ ಮಡಗಿಕೊಂಡಿದ್ದೆ ಅಂತಾವ ಆ ಹೆಣ್ಣು ಯೇಳಿದ್ದು ತೆಪ್ಪಾಯ್ತಾ? ನಾನೆ ಕಣ್ಣಾರ ಕಂಡಿವ್ನಲ್ಲೇ ನೀವಿಬ್ಬರೂ ಆಡ್ತಾ ಇದ್ದದ್ದಾ... ಹರಾಮಿ. ಮಾಡೋದ್ನೆಲ್ಲ ಮಾಡಿ ಬುಟ್ಟುs ಈ ಹಟ್ಟೀನು ಒಡೆಯಕ್ಕೆ ಬಂದಿದ್ದೀಯಾ?" ಎಂದು ಗುಡುಗುತ್ತಾ ನರಸಮ್ಮ ಮಂಗಳೆಯ ಮೇಲೆ ಹರಿಹಾಯ್ದು ಅವಳ ಕೆನ್ನೆ ತಿವಿದಳು. ಮಂಗಳೆಯ ನೇತ್ರಗಳಲ್ಲಿ ಕಂಬನಿ ಚಿಲ್ಲನೆ ಚಿಮ್ಮಿತು. ಅವಳ ಹೃದಯದಲ್ಲಿ ನೋವು, ಕೋಪ ಎರಡೂ ಉಂಟಾದವು. ಆದರೆ ನರಸಮ್ಮನಂತಹ ಕೀಳು ಸ್ವಭಾವದವಳೊಂದಿಗೆ ಎದಿರಾಗಿ ನಿಲ್ಲುವುದು ಕೊಚ್ಚೆಗೆ ಕಲ್ಲೆಸೆದಂತೆ ಇನ್ನೂ ಹೊಲಸು ಎಂದು ಬಗೆದು ತನ್ನಲ್ಲುದ್ಭುವಿಸಿದ ರೋಷವನ್ನು ತಾನೇ ನುಂಗಿಕೊಂಡಳು.

ಆ ರಾತ್ರಿ ಮಂಗಳೆಯ ನಯನಗಳು ನಿದ್ರಿಸುವುದನ್ನು ಮರೆತು ಕಣ್ಣೀರು ಸುರಿಸುವುದರಲ್ಲಿ ಕಾಲಕ್ಷೇಪ ಮಾಡಿದುವು.

೫೪

ಆದರೆ ಮಾರನೆಯ ಮುಂಜಾವಿನಲ್ಲಿ ಕೋಳಿಯ ಕೂಗಿನೊಡನೆ ಪ್ರಿಯವಾರ್ತೆಯೊಂದು ಮೃದುಗೀತದಂತೆ ಬಂದು ಮಂಗಳೆಯನ್ನು ಎಚ್ಚರಗೊಳಿಸಿತು. ತನಗೆ ಮಧ್ಯರಾತ್ರಿಯ ಸಮಯದಲ್ಲಿ ಪ್ರಸವವಾದ ಶುಭಸಮಾಚಾರವನ್ನು ಮಂಗ್ಳಕ್ಕನಿಗೆ ತಿಳಿಸಿ ಬಾ, ಎಂದು ದುರ್ಗಿ ಅಷ್ಟು ಹೊತ್ತಿಗೆ ಮುಂಚೆಯೇ ಪುಟ್ಟತಾಯಿಯನ್ನು ಸುಬ್ಬರಾಯಿಯ ಮನೆಗೆ ಅಟ್ಟಿದ್ದಳು. ಪುಟ್ಟತಾಯಿ ಆ ಸುದ್ದಿ ಮುಟ್ಟಿಸಿದ ಕೂಡಲೆ ಮಂಗಳೆ ತನ್ನ ನೋವನ್ನೆಲ್ಲವನ್ನೂ ಆ ಗಳಿಗೆಗೆ ಮರೆತುಬಿಟ್ಟಳು. ಇನ್ನು ಬಾಳು ಸಹ್ಯ, ಎಂದು ಅವಳ ಹೃದಯ ಸಂಭ್ರಮದ, ಸಂತಸದ ಕಡಲಾಯಿತು. ಎದ್ದು ಕುಳಿತು ಆತುರವಾಗಿ "ಗಂಡೊ ?–ಹೆಣ್ಣೊ ?" ಎಂದು ಕೇಳಿದಳು. ಪುಟ್ಟತಾಯಿ "ಗಂಡು" ಎಂದಳು. ಮಂಗಳೆಯ ಹೃದಯ ಇನ್ನೂ ಅರಳಿತು. ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ಪುಟ್ಟತಾಯಿಯ ಮುಖವನ್ನು ತನ್ನೆರಡೂ ಕೈಗಳಲ್ಲಿ ಹಿಡಿದುಕೊಂಡು ಪ್ರೀತಿಯಿಂದ "ನೀನು ಈ ಬೆಳಿಗ್ಗೆ ಎಂಥಾ ಒಳ್ಳೆ ಸುದ್ದಿ ತಂದೆಯೇ ತಾಯಿ. ಇದಕ್ಕೆ ಪ್ರತಿಯಾಗಿ ನಾನೇನು ಕೊಡಬಲ್ಲೆ ?" ಎಂದು ಕೊಂಚ ಹೊತ್ತು ಯೋಚಿಸಿ "ತಾಳು" ಎಂದು ಅಟ್ಟಕ್ಕೆ ಹತ್ತಿ ಹೋಗಿ ಒಂದಷ್ಟು ಕೊಬರಿ ಚೂರನ್ನೂ ಬೆಲ್ಲವನ್ನೂ ಮುರಿದು ತಂದು ಪುಟ್ಟತಾಯಿಯ ಬಾಯಿಗಿಟ್ಟಳು.

ಅದನ್ನು ನೋಡಿದ ಗಿರಿಜೆ "ಇನ್ನೊಬ್ಬರಿಗೆ ಮೊಗ ಹುಟ್ಟಿದ್ರೆ ಹಿಂಗೆ ಆಡ್ತಾಳಲ್ಲಾ, ಇನ್ನು ಇವಳಿಗೇ ಯೇನಾರ ಮೊಗ ಹುಟ್ಟಿದ್ರೆ ಇನ್ನೇಟು ಬೀಗಿರೋಳೋ?... ಅದಕೇಯ

ಮಂತೆ ದೇವರು ಹದವಾಗಿ ಇಟ್ಟಿರೋದು" ಎಂದು ಮೂದಲಿಸಿದಳು. ಆ ಮಾತಿಗೆ ಮಂಗಳೆ ಕಿಲಕಿಲನೆ ನಕ್ಕಳು. ಅವಳ ಹೃದಯದಲ್ಲೀಗ ಕೋಪ, ತಾಪಗಳಿಗೆ ರವೆಯಷ್ಟೂ ಎಡೆಯಿರಲಿಲ್ಲ. ಗಿರಿಜೆಯ ಬೈಗುಳ ಅವಳಲ್ಲಿ ಕೋಪ ಹುಟ್ಟಿಸುವ ಬದಲು ನಗುವನ್ನು ತಂದಿತ್ತು. ಅವಳು ಈಗ ಅಷ್ಟು ಸುಖಿ. ಈಗ ಅವಳ ಕಣ್ಣಿಗೆ ಎಲ್ಲರೂ ಒಳ್ಳೆಯವರೇ! ಅವಳ ಆತ್ಮವೀಗ ಹಿಗ್ಗಿ ಹಿಗ್ಗಿ ನಲಿಯುತ್ತಿದೆ. ಹರ್ಷ, ಆನಂದಗಳು ಅಲ್ಲಿ ಬುಗ್ಗೆ ಬುಗ್ಗೆಯಾಗಿ ಏಳುತ್ತಿವೆ...

ಮಂಗಳೆ ಹೇಗೊ ಮುಖ ತೊಳೆದಳು. ಒಲೆ ಹಚ್ಚಿ ಸುಬ್ಬರಾಯಿಗೆ ಹೇಗೊ ಕಾಫಿ ಮಾಡಿಕೊಟ್ಟಳು. ಅನಂತರ ಒಂದೇ ಓಟದಲ್ಲಿ ದುರ್ಗಿಯ ಮನೆಗೆ ಬಂದಳು. ದುರ್ಗಿಯ ಪಕ್ಕದಲ್ಲಿ ಮೊರದೊಳಗೆ ಶಿಶು ಕಣ್ಣು ತೆರೆದು ಮಲಗಿತ್ತು. ಬಾಣಂತಿ ಕೋಣೆಗೆ ಕಾಲಿಟ್ಟಂತೆ ಮಂಗಳೆಯ ಹೃದಯ ಹಠಾತ್ತನೆ ಬದಲಿಸಿತು. ಅವಳ ಅಂತರಂಗದಲ್ಲಿ ಅಸೂಯೆಯ ವಿಷಸರ್ಪ ಹೆಡೆ ಬಿಚ್ಚಿ ಆಡತೊಡಗಿತು. 'ನಾನು ಇಲ್ಲಿಗೇಕೆ ಬಂದೆ?– ಈ ದುರ್ಗಿ ನನ್ನ ಸವತಿಯಲ್ಲವೇ? ಸವತಿಯ ಶಿಶುವಿಗಾಗಿ ನನಗಿಷ್ಟು ಆನಂದವೇ?– ಇದು ಹುಚ್ಚು. ನನಗೆ ಸಹಜವಾಗಿ ಮರುಳು ಹಿಡಿದಿದೆ. ನನಗೂ ಈ ಶಿಶುವಿಗೂ ಯಾವ ಸಂಬಂಧವೂ ಇಲ್ಲ...' ಎಂದುಕೊಳ್ಳುತ್ತಿರುವಂತೆಯೇ ಅವಳ ಹೃದಯದ ಒಂದು ಮೂಲೆಯಿಂದ ಮಹತ್ತರವಾದ ಧ್ವನಿಯೊಂದು ಗುಡುಗುತ್ತಾ ಕೇಳಿತು. "ನಿನಗೂ ಈ ಶಿಶುವಿಗೂ ದಿಟವಾಗಿ ಯಾವ ಸಂಬಂಧವೂ ಇಲ್ಲವೇ?" ಮಂಗಳೆಗೆ ನಾಚಿಕೆಯಾಯಿತು. "ಇಲ್ಲ" ಎನ್ನುವುದು ಹೇಗೆ? ಅದು ನಟರಾಜನ ಶಿಶುವಲ್ಲವೇ? ಅವನ ಅರ್ಧ ರಕ್ತವನ್ನು ಹಂಚಿಕೊಂಡು ಅದು ಹುಟ್ಟಿಲ್ಲವೇ? ನಟರಾಜ ತನ್ನವನಾದ ಬಳಿಕ ಶಿಶುವೂ ತನ್ನದೇ ಅಲ್ಲವೇ? ಎಂದು ವಿವೇಕ ಬುದ್ಧಿ ಹೇಳಿತು. ಮಂಗಳೆ ತನ್ನೊಳಗೆ ಇಣಕಿದ ಅಸೂಯೆಗಾಗಿ ತುಂಬ ವಿಷಾದಪಟ್ಟಳು.

ಕೋಣೆಯೊಳಗೆ ಬಂದರೂ ತಡೆದು ನಿಂತ ಮಂಗಳೆಯನ್ನು ಕಂಡು ಚಕಿತಳಾಗಿ, "ಯಾಕಕ್ಕೆ ಅಲ್ಲೇ ಹಾಗೆ ನಿಂತು ಬುಟ್ಟೆ?" ಎಂದು ದುರ್ಗಿ ಕೇಳಿದಳು.

ದುರ್ಗಿಯ ಮಾತಿನ ಆತ್ಮೀಯತೆ, ನಿಷ್ಕಳಂಕ ಪ್ರೇಮ ಮಂಗಳೆಯ ಹೃದಯವನ್ನು ಸೂರೆಗೊಂಡವು. ಮಂಗಳೆ ಕ್ಷಣಾರ್ಧದಲ್ಲಿ ಹಿಂದಿನ ಮಂಗಳೆಯಾಗಿ ಬಿಟ್ಟಿದ್ದಳು. ಅವಳ ಹೃದಯ ಮತ್ತೊಮ್ಮೆ ಹಾಡಿನ ಸಾಗರವಾಯಿತು. ಸಂತೋಷದಿಂದ ಕುಲುಕುತ್ತ ಮೊರದ ಬಳಿಗೆ ಸಾಗಿ ಶಿಶುವನ್ನು ನಯವಾಗಿ ಕೈಗೆತ್ತಿಕೊಂಡಳು. ದುರ್ಗಿ ಮಂಗಳೆಯನ್ನುದ್ದೇಶಿಸಿ, "ಯಾರ ಹಾಗೆ ಇದೆ ಯಕ್ಕಾ ಮಗು?" ಎಂದಳು.

ಮಂಗಳೆ ಶಿಶುವನ್ನೇ ಕೆಲ ನಿಮಿಷ ಕುತೂಹಲದಿಂದ ನೋಡಿದಳು. ಅನಂತರ ಕಣ್ಣರಳಿಸಿ "ನಟ್ರಾಜ ಮಾವನ ರೂಪನ್ನೇ ಹರಿದು ಹತ್ತಿಸಿಕೊಂಡು ಬಂದ ಹಾಗಿದೆಯಲ್ಲಾ ಈ ಶಿಶು!" ಎಂದು ಅಭಿಮಾನಪೂರ್ವಕ ನುಡಿದಳು.

ಮುಂದಿನ ದಿನಗಳಲ್ಲಿ ನರಸಮ್ಮ, ಗಿರಿಜೆಯರ ಕಟುನುಡಿಗಳನ್ನೂ ಲಕ್ಷಿಸದೆ ಮಂಗಳೆ ಆ ಶಿಶುವಿನ ಲಾಲನೆ, ಪಾಲನೆಯಲ್ಲಿಯೇ ಹೆಚ್ಚು ಕಾಲಹರಣ ಮಾಡತೊಡಗಿದಳು. ಅದಕ್ಕೆ ಸ್ನಾನ ಮಾಡಿಸುವುದು, ಅರಿವೆ ತೊಡಿಸುವುದು ಎಲ್ಲವನ್ನೂ ತಾನೇ ವಹಿಸಿಕೊಂಡಿದ್ದಳು... ಈ ದಿನಗಳು ಮಂಗಳೆಯ ಬಾಳಿನಲ್ಲಿ ಅತ್ಯಂತ ಸುಖದ ದಿನಗಳಾಗಿದ್ದುವು.

ಹೀಗಿರುವಾಗ ಶಿಶುವಿಗೆ ಹೆಸರಿಡುವ ದಿನ ಹತ್ತಿರ ಬಂದಿತು. ದುರ್ಗಿ ಮಂಗಳೆಯನ್ನು ಕೇಳಿದಳು.

"ಮಗೂಗೆ ಏನಂತ ಹೆಸರಿಡೋಣ ಅಕ್ಕಾ?"

"ನಿನಗೆ ಇಷ್ಟ ಬಂದ ಹೆಸರಿಡು ದುರ್ಗಿ."

ದುರ್ಗಿ ನಾಚುತ್ತ ನಾಚುತ್ತ, "ನಟರಾಜ ಅಂತ ಇಡೋಣವಾ ?" ಎನ್ನುವಾಗ ಅವಳ ಕಿವಿಗಳು ಕೆಂಪಾದವು.

ಮಂಗಳೆಯ ಕರ್ಣಗಳಲ್ಲಿ 'ನಟರಾಜ' ಎನ್ನುವ ಪದ ಅಮೃತದಂತೆ ಇಳಿಯಿತು. ಅವಳ ಮನಸ್ಸಿನಲ್ಲಿದ್ದುದಾದರೂ ಅದೇ ! ತನ್ನ ಇಂಗಿತವನ್ನರಿತವಳಂತೆ ದುರ್ಗಿ ಮಾತಾಡಿದುದು ಅವಳಿಗೆ ಅಚ್ಚರಿಯಾಯಿತು.

"ನನ್ನ ಮನಸ್ಸಿನಲ್ಲಿದ್ದುದನ್ನೇ ಹೇಳಿಬಿಟ್ಟೆಯಲ್ಲೇ ದುರ್ಗಿ !... ನಾನೂ ಹಾಗಂತ ಶಿಶುವನ್ನು ಕರೆದರೆ ಎಷ್ಟು ಚೆನ್ನಾಗಿರುತ್ತೆ ಅಂತ ಯೋಚ್ನೆ ಮಾಡ್ತಾ ಇದ್ದೆ, ಈಗ ಕೆಲವು ದಿನದಿಂದ !... ಆಗಲಿ. ಧಾರಾಳವಾಗಿ ಆ ಹೆಸರಿಡು. ಆ ಹೆಸರಿಗಿನ್ನ ಮುದ್ದಾದ ಹೆಸರು, ಸುಂದರವಾದ ಹೆಸರು ಇನ್ನೊಂದಿದೆಯೇ?" ಎಂದು ತನಗೆ ಆ ಹೆಸರಿನಲ್ಲಿದ್ದ ವ್ಯಾಮೋಹವನ್ನು ಸ್ಪಷ್ಟವಾಗಿ ಆಡಿ ತೋರಿಸಿದಳು.

ಮಂಗಳಕ್ಕ ತನ್ನ ಸಲಹೆಯೊಪ್ಪಿದಳೆಂದು ದುರ್ಗಿ ಹರ್ಷಿತಳಾದಳು. ಶಿಶುವಿಗೆ 'ನಟರಾಜ'ನೆಂದೇ ಹೆಸರಿಡುವುದು ಸೂಕ್ತವೆಂಬ ನಿರ್ಧಾರಕ್ಕೆ ಬಂದಳು.

ಆದರೆ ದುರ್ಗಿಯ ನಿರ್ಣಯ ನರಸಮ್ಮನಿಗೆ ಒಪ್ಪಿತವಾಗಲಿಲ್ಲ. ನಾಮಕರಣದ ದಿನ ಶಿಶುವಿಗೆ 'ಕಾಳಯ್ಯ'ನೆಂದೇ ಹೆಸರಿಡಬೇಕೆಂದು ಅವಳು ಹಟಹಿಡಿದು ಕುಳಿತಳು. "ಯೇನೇ? ನಟ್ರಾಜ ಅಂತ ಹೆಸರು ಇಟ್ಟುಬುಡೋವ ಅಂತ ಆ ಮಾಯಾಂಗಿಣಿ ಮರಿಬಸವಿ ಹೇಳಿಕೊಟ್ಟಳೇನೇ, ನಿಂಗೇ?... ಇಲ್ಲದೇ ವೋಗಿದ್ರೆ ಇದೆಲ್ಲ ನಿನಗೆ ಹೊಳೆಯೂನ ಅಂದ್ರೇನಾ !... ಆ ಮಂಗಳೀದೆ ಈ ಕುಚಾಷ್ಟ್ಯ !– ನಾ ಎಂದಿಗೂ ಇದಕೊಪ್ಪನಾರಿ" ಎಂದು ರಾದ್ಧಾಂತ ಮಾಡಿದಳು. ದುರ್ಗಿ ಊಟ ಬಿಟ್ಟು ಕಣ್ಣೀರು ಸುರಿಸಿದ ಬಳಿಕ, ಕಾಳಯ್ಯನೂ ಚೆಲುವಮ್ಮನೂ "ಚಿಕ್ಕ ಹೆಣ್ಣಿನೊಂದಿಗೆ ನಿನಗೆ ಎಂತಾ ಹಟ? ಓಗಲಿ ಅದರ

ಮಾತೇ ಗೆಲ್ಲಲೇಳು. ಅವ್ಳು ತಾನೇ ಯಾರು? ಏಟೇ ಆದ್ರೂ ನಿನ್ನ ಮೊಮ್ಮಗಳೇ ಅಲ್ಲವಾ?... ಅವ್ಳು ತನ್ನ ಗಂಡನ ಹೆಸರು ಇಟ್ಟುಕೊತ್ತೀನಿ ಮೋಗೀಗೆ ಅಂದರೆ ನೀನ್ಯಾಕೆ ಅದಕ್ಕೆ ಅಡ್ಡ ಓಗಬೇಕು? ಈಗಿನ ಕಾಲದ ಮಕ್ಕಳು, ಅವು ನಮ್ಮ ಮಾತು ಕೇಳಾವಾ?" ಎಂದು ಪರಿಪರಿಯಲ್ಲಿ ಹೇಳಿದ ನಂತರ ಮಂಜುಗಡ್ಡೆಯಂತೆ ಕಠಿಣವಾದ ನರಸಮ್ಮನ ಹೃದಯ ಸ್ವಲ್ಪ ಕರಗಿ "ಈಗೇನು ಅವಳೇ ಗೆಲ್ಲಲಿ ಓಗು... ನನ್ನಿಷ್ಟ ಯಾಕೆ ಕೇಳಬೇಕವಳು? ಮಂಗಳಿ ಮಾತೇ ಅವಳ ಕಿವೀಗೆ ನೊಚ್ಚಗೆ" ಎಂದುಬಿಟ್ಟಳು.

ಅಷ್ಟೇ ಸಾಕೆಂದು ದುರ್ಗಿ ಶಿಶುವಿಗೆ 'ನಟರಾಜ' ಎಂದು ಶುಭಮುಹೂರ್ತದಲ್ಲಿ ನಾಮಕರಣ ಮಾಡಿಸಿಯೇ ಬಿಟ್ಟಳು. ಅನಂತರ ಶಿಶುವನ್ನವಳು ನರಸಮ್ಮನ ಪಾದ ಮುಟ್ಟಿಸಲು ತಂದಾಗ "ನನ್ನ ಕಾಲು ಮ್ಯಾಗೆ ಯಾಕವ್ವಾ ಕೆಡವೀ ಅದ್ನಾ?... ಮಾಡೋ ಕಿತ್ತುಮಿಣಿಯೆಲ್ಲ ಮಾಡಿಬುಟ್ಟು ಮಳ್ಳಿ ಹಂಗೆ ನಿಂತುಕೊಂಡವ್ಳಲ್ಲಾ ನಿನ್ನ ಮಂಗಳಕ್ಕ, ಅವ್ಳ ಕಾಲ ಮ್ಯಾಗೆ ತಕ್ಕೊಂಡೋಗಿ ಕೆಡವು" ಎಂದು ನರಸಮ್ಮ ತನ್ನನ್ನು ಎಲ್ಲರೆದುರೂ ದೂಷಣೆ ಮಾಡಿದುದನ್ನು ಮಂಗಳೆ ಸಹಿಸಲಾಗಲಿಲ್ಲ. ದುಃಖ ಒತ್ತರಿಸಿ ಬಂತು. ಕಣ್ಣು ತುಂಬ ನೀರು ತುಂಬಿಕೊಂಡಳು. ತಕ್ಷಣ ದುರ್ಗಿ "ಯಾಕಜ್ಜಿ ಮಂಗಳಕ್ಕನ್ನ ಅನ್ಯಾಯವಾಗಿ ದೂರೀಯೇ? 'ನಟರಾಜ' ಅಂತ ಹೆಸರಿಡೋಣ ಅಂತ ಸಲಹೆ ಮಾಡಿದೋಳು ನಾನೇ" ಎಂದಳು. "ಊ, ಮೀಡಿದಿ ಮೀಡಿದಿ. ನೀನು ಮೀಡಾದು ಕಂಡಿಲ್ಲವಾ ನಾನು?–ಮೊಗೀನಿಂದ್ಲು ನಿನ್ನ ಎತ್ತಿಕೊಂಡು ಗೊಜ್ಜೆ ಪಾವುಡೇನೆಲ್ಲ ತೊಳೆದು ಸಾಕಿ ಸಲಯಿ ದಪ್ಪದು ಮಾಡಿದೋಳು ನಾ ಯೆಲ್ಲೇ ಹೋದಿ !–ಇವ್ಳಿಗೆ ಬ್ಯಾರೆಯೋರ ಮಾತೇ ಪರ್ದಾನವಾಗೋಯ್ತು– ಅಯ್ಯೋ ನನ್ನ ಬಾಳೇ ! ಚೋಟುದ್ದ ಹುಡುಗೀನೂವೆ ನನ್ನ ತರಾಟಿಗೆ ತಕ್ಕೊಳ್ಳೊಕ್ಕೆ ಮುಟ್ಟಿಕೊಂಡ್ಲಲ್ಲಾ ? ನನ್ನ ಗತಿಯೇನಾ ಇನ್ನೂ ?" ಎಂದು ನರಸಮ್ಮ ರಾಗ ದೊಡ್ಡದುಮಾಡಿ ಅಳತೊಡಗಿದಳು.

ಇದನ್ನು ಹೀಗೆ ಬಿಟ್ಟರೆ ಸಂದರ್ಭ ಪ್ರಕೋಪಕ್ಕೆ ತಿರುಗೀತೆಂದು ಮಂಗಳೆ ಭೀತಳಾದಳು. ನರಸಮ್ಮ ಜಗಳಕ್ಕೆ ನಿಂತಳೆಂದರೆ ಸಮಾರಂಭಕ್ಕೆ ಬಂದ ಜನ ಹೇಸಿಕೊಳ್ಳುತ್ತಾರೆ. ದುರ್ಗಿಯ ಮನೆಯ ಮಾನ ಹೋಗುತ್ತದೆ ಎಂದು ಚಿಂತಿಸಿದಳು. ದುರ್ಗಿಯ ಕೈಹಿಡಿದು ಉಪಾಯವಾಗಿ ಅವಳನ್ನು ಒಳಗೆ ಕರೆದುಕೊಂಡು ಹೋಗುತ್ತಾ "ಸಂಸಾರ ಗುಟ್ಟು, ವ್ಯಾಧಿ ರಟ್ಟು ಅಂತ ಹಿರಿಯರು ಗಾದೆ ಮಾಡಿಲ್ಲವೆ ದುರ್ಗೀ–ಹಾಗೆ ಸಂಸಾರದ ಗುಟ್ಟು ನಮ್ಮ ಮನೇಲೆ ಇರಬೇಕು. ಹೊರಗಿನವರ ಎದಿರು ನಾವು ನಾವು ಜಗಳ ಆಡ್ತಾ ನಿಂತರೆ ಏನು ಚೆಂದ ನೀನೆ ಹೇಳು?... ದೊಡ್ಡವ್ವನಿಗೇನೊ ವಯಸ್ಸಾಯ್ತು. ಅರಳು ಮರಳಿನ ಕಾಲ. ಅವಳು ಹಾಗೆ ಆಡ್ತಾಳೆ ಅಂತ ನಾವು ಅವಳ ಸರಿಸಮ ನಿಂತರೆ ನಗೆಪಾಟಲಲ್ಲವೇ?" ಎಂದು ವಿವೇಕ ಹೇಳಿದಳು. ತನ್ನನ್ನು ದೂರುತ್ತಿದ್ದರೂ ನರಸಮ್ಮನ ಮೇಲೆ ವಿಷಕಾರದ ಮಂಗಳೆಯ ಹೃದಯ ವೈಶಾಲ್ಯ ಕಂಡು ದುರ್ಗಿ ಬೆರಗಾದಳು.

೪೫

ಮಂಗಳೆಯ ಆರೈಕೆಯಲ್ಲಿ ಶಿಶು ಎರಡು ವರ್ಷ ದಾಟಿತ್ತು. ಮೈ ಕೈ ತುಂಬಿ ಸುಂದರವಾಗಿ ಬೆಳೆದಿದ್ದ ಆ ಪುಟ್ಟ ಬಾಲನನ್ನು ನೋಡಿದವರು ದುರ್ಗಿಯೊಡನೆ, "ಯೇನು ಚೆಂದಾಗಿ ಸಾಕಿದ್ದೀಯವ್ವ ಮೊಗಾನ–ದ್ರಿಷ್ಟಿ ಬಡಿಯೊ ಹಂಗೆ" ಎಂದು ಪ್ರಶಂಸಿಸಿದರೆ, "ನಾನಲ್ಲ ಕಣವ್ವ ಅದನ್ನು ಸಾಕಿದೋಳು. ನಾನು ಅದನ್ನ ಹೆತ್ತೆ ಅಷ್ಟೆ. ಅದರ ಊಟ ಉಪಚಾರ ನೋಡಿಕೊಂಡು, ಎಂಟೆಂಟು ದಿನಕೂ ಅದಕ್ಕೆ ಎಣ್ಣೆ ಮಿಾಣ ಮಾಡಿಸಿ, ಆ ಕಂದನ್ನ ಸಾಕಿ ಸಲಹಿದೋಳು ಮಂಗಳಕ್ಕ !....ಮಂಗಳಕ್ಕನೆ ಅದರ ತಾಯಿ ತಂದೆ ಎಲ್ಲ" ಎಂದು ಕಳಕಳಿಯಿಂದ ಹೇಳುವಳು.

ಆದರೆ ಶಿಶುವಿನ ಪೋಷಣೆಯಲ್ಲಿ ಮಂಗಳೆ ಸುಬ್ಬರಾಯಿಯ ಮನೆಗೆಲಸವನ್ನು ಮರೆತಿರಲಿಲ್ಲ. ಮರೆಯದಂತೆ ಮಾಡಲು ನರಸಮ್ಮ–ಗಿರಿಜೆಯರ ನಾಲಿಗೆಗಳು ಸಾಕಷ್ಟು ಕೆಲಸ ಮಾಡುತ್ತಿದ್ದವು.

ಒಂದು ಸಂಜೆ ಮಂಗಳೆ ಮನೆಗೆಲಸಗಳನ್ನು ಮುಗಿಸಿ ದುರ್ಗಿಯ ಮನೆಗೆ ಹೋದಾಗ ಒಳಗಿನಿಂದ ರೋದನದ ಧ್ವನಿಗಳೇಳುತ್ತಿದ್ದವು. ಕೋಲಾಹಲ ಬೊಬ್ಬೆ ಓಡಾಟದ ಸದ್ದುಗಳನ್ನು ಕೇಳಿ ಮಂಗಳೆ ಭಯಭ್ರಾಂತಳಾದಳು. ಹಾರುವ ಹೃದಯದಿಂದಲೇ ತೊಟ್ಟಿಯೊಳಗೆ ಅಡಿಯಿಟ್ಟಳು. ಅಲ್ಲಿ ಕಂಡ ದೃಶ್ಯ ಮತ್ತೂ ಅವಳನ್ನು ಚಕಿತಗೊಳಿಸಿತು. ಶಿಶುವಿಗೆ ಅತ್ತು ಅತ್ತು ಉಸಿರು ಸಿಕ್ಕಿದಂತಿದೆ. ನರಸಮ್ಮ ಅದನ್ನೆತ್ತಿಕೊಂಡು ಸಮಾಧಾನಪಡಿಸಲೆತ್ನಿಸುತ್ತಿದ್ದಾಳೆ... ಆದರೆ ಶಿಶು ಕಣ್ಣು ಮುಚ್ಚಿ ಪ್ರಾಣವೇ ಹೋಗುವಂತಿದೆ. ದುರ್ಗಿ ದಿಕ್ಕುತೋಚದೆ ಕಂಬನಿ ಸುರಿಸುತ್ತ ನಿಂತಿದಾಳೆ. ಅದನ್ನೆಲ್ಲಾ ವೀಕ್ಷಿಸಿದಂತೆ ಮಂಗಳೆಗೆ ಏನೊ ಆ ಗಳಿಗೆಗೆ ಹೊಳೆದಂತಾಯಿತು. ಕೂಡಲೇ ಧಾವಿಸಿ ನರಸಮ್ಮನ ಕಯ್ಯಿಂದ ಮಗುವನ್ನು ಕಸಿದುಕೊಂಡು ಬೀದಿಗೆ ಎತ್ತಿ ತಂದಳು. ಎರಡು ನಿಮಿಷ ಗಾಳಿಯಲ್ಲಿ ತಿರುಗಾಡುವುದರೊಳಗೆ ಶಿಶು ಚೆನ್ನಾಗಿ ಉಸಿರಾಡಲಾರಂಭಿಸಿ ಮೆಲ್ಲನೆ ಸಣ್ಣ ದನಿಯಲ್ಲಿ ರೋದಿಸಲುಪಕ್ರಮಿಸಿತು. ಶಿಶುವಿನ ಧ್ವನಿ ಕೇಳಿ ಎಲ್ಲರಿಗೂ ಜೀವ ಬಂದಿತು... ಅನಂತರ ಶಿಶುವಿಗೆ ಏಕೆ ಹಾಗಾಗಿತ್ತೆಂದು ಮಂಗಳೆ ವಿಚಾರಿಸಿದಾಗ ದುರ್ಗಿ ನಡೆದ ಸಂಗತಿಯನ್ನೆಲ್ಲ ವಿವರಿಸಿದಳು– ನರಸಮ್ಮ ಪ್ರೀತಿಯಿಂದ ಮಗುವನ್ನು ತನ್ನ ಮುಂದೆ ಕೂರಿಸಿಕೊಂಡು ಅದರೊಡನೆ ಆಡುತ್ತಿದ್ದಳು. ಅವಳು ಹುಡುಗಾಟಿಕೆಗಾಗಿ ಅದು ಹಿಡಿದುಕೊಂಡಿದ್ದ ಕುಡಿಕೆಯನ್ನು ಕಿತ್ತುಕೊಂಡಳು. ಶಿಶುವಿಗೆ ಕೋಪ ಬಂದು ಅವಳ ಮುಖದ ಮೇಲೆ ಹೊಡೆಯಿತು. ನರಸಮ್ಮ ಅಷ್ಟಕ್ಕೆ ತಾಳ್ಮೆ ತಪ್ಪಿದಳು. "ಹಾ, ನನ್ನ ಹೊಡೆದೀಯಾ?" ಎಂದು ಸಿಟ್ಟಿನಿಂದ ಅದನ್ನು ತಳ್ಳಿದಳು. ಶಿಶು ಹಿಮ್ಮುಖವಾಗಿ ಬಿದ್ದುಬಿಟ್ಟಿತು. ಬಿದ್ದ ರಭಸಕ್ಕೆ ಅದರ ಹಿಂದಲೆ ಬುರಬುರನೆ ಉಬ್ಬಿ ಕೊಂಡಿತು. ಶಿಶುವಿಗೆ ತುಂಬ ನೋವಾಗಿರಬೇಕು. ಅದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿತು.

ಏನು ಮಾಡಿದರೂ ಯಾರು ಎತ್ತಿಕೊಂಡರೂ ಅದರ 'ಚಂಡಿ' ನಿಲ್ಲಿಸಲಿಲ್ಲ. ಕಡೆಗೆ ಅದು ಅತ್ತು ಅತ್ತು ಸಾಕಾಗಿ ಉಸಿರು ಸಿಕ್ಕಿದಂತಾಯಿತು....

ಮಂಗಳೆ ಎಲ್ಲವನ್ನೂ ಸಾಂಗವಾಗಿ ಆಲಿಸಿ, "ಪುಣ್ಯಾತ್ಗಿತ್ತಿ! ಆ ಹಸುಗೂಸಿನ ಮೇಲೂ ತನ್ನ ಆಕ್ರೋಶ ತೋರಿಸಬೇಕಾ?" ಎಂದಳು.

ಮಂಗಳೆ ಹೊರಗೆ ಹೋಗುತ್ತಿದ್ದಂತೆ ನರಸಮ್ಮ "ಈ ಮಾಯಾಂಗಣ ಇದ್ಯ ಯಾರಿಗೆ ತಿಳಿದಾತವ್ವs....? ಈ ಇದ್ಯ ಕಲಿತಿರೋ ಒತ್ತಿಗೇ ಮಂತೆ ಯೆಲ್ಲರ್ನೂವೆ ತನ್ನ ಕಯ್ನಲ್ಲಿ ಆಕಿಕೊಂಡಿರೋದು–!" ಎಂದು ಕುಹಕವಾಗಿ ದುರ್ಗಿಯ ಕಡೆ ದೃಷ್ಟಿ ಬೀರಿದಳು.

ಒಂದು ಬೃಹಸ್ಪತಿವಾರ. ಹುಣಸೂರಿನ ಟೂರಿಂಗ್ ಟಾಕೀಸ್‌ನಲ್ಲಿ ಕನ್ನಡ 'ವಸಂತಸೇನ' ಪ್ರದರ್ಶಿಸಲ್ಪಡುವುದೆಂದು ಸುತ್ತಿನ ಗ್ರಾಮಗಳಲ್ಲೆಲ್ಲ ಪ್ರಚಾರವಾಗಿತ್ತು. ಬಸವಾಚಾರಿ "ನಮ್ಮ ಕನ್ನಡ ಚಿತ್ರ ನೋಡದೆ ಹೆಂಗೆ?" ಎಂದು ಹಟ ಮಾಡಿ ತಮ್ಮೆರಡು ಮನೆಯವರನ್ನೂ ಹುಣಸೂರಿಗೆ ಹೊರಡಿಸಿದ. ಆ ದಿನ ಹುಣಸೂರಿನಲ್ಲಿ ಸಂತೆಯಾದ್ದರಿಂದ ಅವರು ಗಾಡಿಗಳನ್ನು ದೌಡಾಯಿಸಿಕೊಂಡು ಮಧ್ಯಾಹ್ನದ ವೇಳೆಗೇ ಸಂತೆಯ ಮಾಳವನ್ನು ಸೇರಿದ್ದರು. ಸಂತೆಯಲ್ಲಿ ತಮಗೆ ಬೇಕಾದ ಪದಾರ್ಥಗಳನ್ನು ಕೊಂಡರು. ಮಂಗಳೆ ಪುಟ್ಟ ನಟರಾಜನಿಗೆ ಪೆಪ್ಪರ್‌ಮೆಂಟ್ ತೆಗೆದುಕೊಟ್ಟಳು. ಬಸವಾಚಾರಿ ಆ ಬಾಲಕನ ಮುಂದೆ ಕಯ್ಯೊಡ್ಡಿ "ನಂಗೆ ಕೊಡೋದಿಲ್ಲವೇನೋ ಅಟಾಜಾ?" ಎಂದ. 'ಅಟಾಜಾ' ಎನ್ನುವ ಶಬ್ದ ಮಂಗಳೆಯ ಚಿತ್ತವನ್ನು ಗತಕಾಲಕ್ಕೆ ಸೆಳೆದೊಯ್ದಿತು. ಹಿಂದೆ ಚಿಕ್ಕವರಾಗಿದ್ದಾಗ ತಾನೂ ನಟರಾಜನೂ ಇದೇ ಸಂತೆಗೆ ಕಲ್ಲಹಳ್ಳಿಯಿಂದ ಅಜ್ಜಿ, ತಾಯಿಯರೊಡಗೂಡಿ ಬರುತ್ತಿದ್ದುದು ನೆನಪಾಯಿತು... ಮಗು 'ಉಹ್ಞು, ಕೊಡಕ್ಕಿಲ್ಲ' ಎಂದು ಬಸವಾಚಾರಿಗೆ ಪೆಪ್ಪರ್‌ಮೆಂಟ್ ಕೊಡಲು ನಿರಾಕರಿಸಿತು. ತಾನೂ ಹಾಗೇ ನಟರಾಜನಿಗೆ ತಿನಿಸು ಕೊಡಲು ಒಪ್ಪದಿದ್ದ ಪ್ರಸಂಗ ಮಂಗಳೆಯ ನೆನಪಿಗೆ ಬಂದಿತು. ಆ ಕಂದನನ್ನು ಮುದ್ದಿಸುತ್ತ "ಮಕ್ಕಳೆಲ್ಲ ಹಾಗೇ" ಎಂದುಕೊಂಡಳು.

ಅವರು ಅತ್ತಿತ್ತ ಅಲೆದಾಡುವುದರಲ್ಲಿ ಬಸವಾಚಾರಿ ಅವರ ಗುಂಪಿನಿಂದ ತಪ್ಪಿಸಿಕೊಂಡಿದ್ದ. ಅವರೆಲ್ಲರ ಸಹವಾಸಕ್ಕಿಂತ ಹೆಚ್ಚು ಆಕರ್ಷಣೀಯ ವಸ್ತು ಅವನ ಮನ ಸೆಳೆದಿತ್ತು. ಸಂತೆಯ ಮಾಳದ ಒಂದು ಕೊನೆಗೆ ಬಹು ದಿನಗಳ ನಂತರ ದೊಂಬರ ಚೆನ್ನಿ ತನ್ನ ಆಟ ಹೂಡಿದ್ದಳು. ಚೆನ್ನಿಯೆಂದರೆ ಬಸವಾಚಾರಿಯ ಹೃದಯ, ದೀಪದ ಕುಡಿಗೆ ಆಕರ್ಷಿತವಾಗುವ ಪತಂಗದಂತೆ ಕುಣಿದಾಡುವುದು. ಅವಳಿಗಾಗಿ ಅವನು ತಾಯಿ ಚೆಲುವಮ್ಮ ತನ್ನ ವೆಚ್ಚಕ್ಕೆ ಕೊಡುತ್ತಿದ್ದ ಹಣವನ್ನೆಲ್ಲ ಸುರಿಯುತ್ತಿದ್ದ. ಆ ಹಣ ತೀರಿದಾಗ ನರಸಮ್ಮನ ಕೊರಳಿಗೆ ಗಂಟು ಬೀಳುತ್ತಿದ್ದ. ಅದೂ ಸಾಲದೆ ಆಗಾಗ ಪುಟ್ಟತಾಯಿಯನ್ನು ಪೀಡಿಸಿದ್ದೂ ಉಂಟು. ಬಹಳ ದಿನಗಳಿಂದ ಚೆನ್ನಿ ಈ ಸುತ್ತಿಗೆ ಬಂದಿರಲಿಲ್ಲ. ಮಂಗಳೂರು, ಉಡುಪಿ, ಧರ್ಮಸ್ಥಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಊರುಗಳಲ್ಲಿ ಅಲೆದಾಡುತ್ತಿದ್ದಳು. ಅವಳು ಮತ್ತೆ ಹುಣಸೂರಿನಲ್ಲಿ ಕಾಣಿಸಿಕೊಂಡುದು ಬಸವಾಚಾರಿಗೆ ಕಳೆದುಹೋದ ದ್ರವ್ಯ ಪುನಃ ಸಿಕ್ಕಿದಂತಾಗಿತ್ತು. ಚೆನ್ನಿಯ ಅಜ್ಜಿ ಗತಿಸಿ, ತಾಯಿ ತಿಮ್ಮಿ ಸಿಡುಬಿನಿಂದ ಕುರುಡಿಯಾಗಿದ್ದಳು. ಈಚೆಗೆ ಸಿನಿಮಾ ನಾಟಕಗಳ ಭರಾಟೆಯಲ್ಲಿ ದೊಂಬರಾಟ ಜನರಿಗೆ ಅಪ್ರಿಯವಾಗುತ್ತಿದ್ದುದು ಚೆನ್ನಿಗೆ ವಿಶೇಷ ಚಿಂತೆಯಾಗಿತ್ತು....

ಕೊತ್ತೇಗಾಲದ ಗುಂಪು ಸಂತೆಯ ಮಾಳದಲ್ಲೆಲ್ಲಾ ಸುತ್ತಾಡಿ, ಮಾಳದ ಮೂಲೆಗೆ ಬಂದಾಗ ದೊಂಬರಾಟ ಭರದಿಂದ ಸಾಗುತ್ತಿತ್ತು. ಅಲ್ಲಿ ಸ್ವಯಂ ಬಸವಾಚಾರಿಯೇ ಡೋಲು ಬಡಿಯುತ್ತಿದ್ದುದನ್ನು ಕಂಡು ಎಲ್ಲರೂ ಬೆರಗಾದರು. ಆಗ "ನಾಗಯ್ಯನ್ನ ಚಿಕ್ಕಿ ಕೆಡಿಸಿದ್ಲು. ಈಗ ಅವಳ ಮೊಮ್ಮಗಳು ನಮ್ಮ ಬಸವಾಚಾರೀನ ಕೆಡಿಸ್ತಾ ಅವ್ಳೆ" ಎಂದು ಮಂಗಳೆ ಹೇಳಿದಾಗ ಬಸವಾಚಾರಿಯ ಹೆಂಡತಿ ಪುಟ್ಟತಾಯಿ ಕಣ್ಣೀರು ತಂದುಕೊಂಡಳು. ಮಂಗಳೆ ತನ್ನ ನಾಗಜ್ಜಿ ಹೇಳುತ್ತಿದ್ದ ನಾಗಯ್ಯನ ಕಥೆಯನ್ನು ಸ್ಮರಿಸಿಕೊಂಡು ನಿಟ್ಟುಸಿರಿಟ್ಟುಕೊಂಡಳು.

ಆ ರಾತ್ರಿ ಸಿನೆಮಾ ನೋಡಲು ಎಲ್ಲರೊಡನೆ ಬಸವಾಚಾರಿ ಬರಲೇ ಇಲ್ಲ. ಇವರೆಲ್ಲ ಊರಿಗೆ ಹಿಂದಿರುಗಿದ ಮೇಲೂ ಮೂರು ದಿನ ಬಸವಾಚಾರಿ ಬರಲೇ ಇಲ್ಲ. ನಾಲ್ಕನೆಯ ದಿನ ಚೋರನಂತೆ ಕೊಟ್ಟಿಗೆಗೆ ಬಂದು ಹಾಲು ಕರೆಯುತ್ತಿದ್ದ ಪುಟ್ಟತಾಯಿಯನ್ನು ಬಲಾತ್ಕರಿಸಿ ಆವಳು ಕೊರಳಿನಲ್ಲಿ ಹಾಕಿದ್ದ ಬಂಗಾರದ ಒಂಟೆಳೆ ಸರವನ್ನು ತೆಗೆದುಕೊಂಡು ನಡೆದಿದ್ದ. ಪುಟ್ಟತಾಯಿ ಆ ವಿಷಯವನ್ನು ಮತ್ತಾರಲ್ಲೂ ಪ್ರಸ್ತಾಪಿಸದೆ ನೇರವಾಗಿ ಮಂಗಳೆಯ ಬಳಿಗೆ ಓಡಿಬಂದು ಕಣ್ಣೀರ್ಗರೆಯುತ್ತಾ ಹೇಳಿಕೊಂಡಳು. ಆ ಹುಡುಗಿಯ ಗೋಳಾಟವನ್ನು ನೋಡಲಾರದ ಮಂಗಳೆ ತನ್ನ ಕತ್ತಿನಲ್ಲಿದ್ದ ಸುಬ್ಬರಾಯಿ ಮಾಡಿಸಿದ ಜೋಡೆಳೆ ಚಿನ್ನದ ಸರವನ್ನು ತೆಗೆದು ಅವಳ ಕೊರಳಿಗೆ ಹಾಕಿಬಿಟ್ಟಳು. ಪುಟ್ಟತಾಯಿ ವಿಸ್ಮಿತಳಾಗಿ, "ಇ–ದು ಯಾ–ಕಕ್ಕಾ ಹಿಂಗೆ ಮಾಡಿದೆ?" ಎಂದು ತಡವರಿಸಿದಳು.

"ಏನು ಮಾಡಿದೆ?"

"ನಿನ್ನ ಕುತ್ತಿಗೆ ಚೈನು ತಗದು ನಂಗೆ ಆಕಿಬುಟ್ಟೆಯಲ್ಲಾ?"

"ಹೋಗುವಾಗ ಏನೂ ಈ ಬಂಗಾರದ ಚೈನುಗಳು ನಮ್ಮ ಜೊತೆ ಬರೋದಿಲ್ಲ ಪುಟ್ಟತಾಯಿ. ಯಾರ ಕುತ್ತಿಗೆಯಲ್ಲಿ ಇದ್ದರೆ ಏನಂತೆ?" ಎಂದು ಬಿಟ್ಟಳು.

ಪುಟ್ಟತಾಯಿಯ ಕಣ್ಣು ತುಂಬ ಕೃತಜ್ಞತೆಯ ನೀರು ತುಂಬಿತು. ಗರ ಬಡಿದವಳಂತೆ ಅಷ್ಟು ದೂರ ಸಾಗಿ ಮತ್ತೆ ವಾಪಸು ಬಂದಳು.

"ಇಷ್ಟೇ ಅಲ್ಲ ಕನಕ್ಕ. ನಿನ್ನ ತಾವು ಇನ್ನೂ ಒಂದು ಇಸಯ ಹೇಳಿಕೊ ಬೇಕು ಽ..."

"ಅದೇ ಹೇಳು ಪುಟ್ಟತಾಯಿ."

ಪುಟ್ಟತಾಯಿ ಹೇಗೆ ಹೇಳುವುದೆಂದು ಚಿಂತಿಸುತ್ತ ಮೌನವಾಗಿ ನಿಂತಿದ್ದಳು. ಮಂಗಳೆ ಅವಳನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಆದರದಿಂದ ಮೈದಡವುತ್ತ "ಸಂಕೋಚಪಡಬೇಡ. ಹೇಳು" ಎಂದು ಪ್ರೋತ್ಸಾಹಿಸಿದಳು.

"ನಮ್ಮೆಜಮಾನರು...."

"ಹೂ...?"

"ನಂಗೆ...ನ"

"ಹೂ...?"

"ಕೆಟ್ಟ ಕಾಯಿಲೆ ಅಂಟಿಸಿಬುಟ್ಟವ್ರೆ..." ಎಂದು ಅಳತೊಡಗಿದಳು.

ಮಂಗಳೆ ಕೆಲಹೊತ್ತು ಅವಾಕ್ಕಾಗಿ ಸುಮ್ಮನೆ ಕುಳಿತುಬಿಟ್ಟಳು. ಅನಂತರ, "ಇದು ನಿಮ್ಮ ಮನೇಲಿ ಯಾರಿಗೂ ಗೊತ್ತಿಲ್ಲವಾ ?" ಎಂದು ಕೇಳಿದಳು.

"ಇಲ್ಲ, ನಾನು ಯಾರ ತಾವೂ ಹೇಳ್ನಿಲ್ಲ. ಅವರ ಯೆದರಿಕೆಯೇ ನಂಗೆ ಬಾಳ. ಅವರಿವರಕುಟ್ಟೆ ಹೇಳಿದ್ರೆ ಎಲ್ಲಿ ನನ್ನ ಹಿಡಿಕೊಂಡು ಚಚ್ಚಾರೊ ಅಂತಾಂವ ಸುಮ್ಮಕಿದ್ದೆ."

ಮಂಗಳೆ ಹಾಗೆಯೇ ಯೋಚನೆಯಲ್ಲಿ ಮಗ್ನಳಾದಳು. ಹಿಂದೆ ಅವಳಿಗೆ ವಿವಾಹವಾಗದೆ ಕಲ್ಲಹಳ್ಳಿಯಲ್ಲಿದ್ದಾಗ ಅವಳ ಗೆಳತಿಯಾದ ಆಯರಹಳ್ಳಿ ಅಯ್ಯನ ಮಗಳು, ತನಗೆ ತನ್ನ ಗಂಡ ಗುಪ್ತರೋಗ ಹತ್ತಿಸಿದ್ದನೆಂದೂ ಅದಕ್ಕೆ ಮರಿನಿಂಗಿ ಔಷಧ ಕೊಟ್ಟು ಗುಣಪಡಿಸಿದಳೆಂದೂ ಹೇಳಿದುದು ನೆನಪಿಗೆ ಬಂದಿತು. ಇನ್ನೊಂದು ಬಾರಿ ಕಲ್ಲಹಳ್ಳಿಗೆ ಹೋದಾಗ ಖಂಡಿತ ಅಯ್ಯನ ಮಗಳನ್ನು ಕೇಳಿ ಪುಟ್ಟತಾಯಿಗೆ ಔಷಧ ಕೊಡಿಸಬೇಕೆಂದು ನಿರ್ಧಾರ ಮಾಡಿದಳು. ಅನಂತರ ಪುಟ್ಟತಾಯಿಯ ಬೆನ್ನು ಸವರುತ್ತ, "ಚಿಂತೆಯಿಲ್ಲ. ನೀನೇನು ಹೆದರಿಕೊಳ್ಳಬೇಡ. ಕಲ್ಲಹಳ್ಳೀಲಿ ಒಬ್ಬರ ಹತ್ತಿರ ಇದಕ್ಕೆ ಔಷಧ ಇದೆ. ನಾನು ಅಲ್ಲಿಗೆ ಹೋದಾಗ ಅದನ್ನ ನಿನಗೆ ತಂದುಕೊಡುತ್ತೇನೆ" ಎಂದು ಭರವಸೆಯಿತ್ತಳು.

ಕಲ್ಲಹಳ್ಳಿಗೆ ಹೋಗುವ ಅವಕಾಶವಾದರೂ ಮಂಗಳೆಗೆ ಬಹು ಬೇಗ ಸಿಕ್ಕಿತು. ನರಸಮ್ಮನ ಮೆಹನತ್ತಿನಿಂದ ವಿಷಕಂಠಯ್ಯನ ಪುನರ್ವಿವಾಹ ಶೀಘ್ರವಾಗೇ ಆಗುವದಿತ್ತು. ಅವನು ಕೊತ್ತೇಗಾಲಕ್ಕೆ ಬಂದಾಗಲೆಲ್ಲ "ಒಂಟಿ ಮರದ ಹಂಗೆ ಏಟು ಜಿನ ಹಿಂಗೆ ಕಾಲ ತಳ್ಳೋದು? ಸುಮ್ಮಕೆ ಇನ್ನೊಂದು ಲಗ್ಣ ಆಗಿಬುಡು. ಹಿಟ್ಟು ಬೇಯಿಸಿ ಹಾಕಕ್ಕೆ ಆಯ್ತದೆ" ಎಂದು ಪ್ರೋತ್ಸಾಹಿಸಿ ಅವನು ಎಷ್ಟೇ ಬೇಡವೆಂದರೂ ಬಿಡದೆ ಪುನರ್ವಿವಾಹಕ್ಕೆ ಒಪ್ಪಿಸಿಯೇ ಬಿಟ್ಟಿದ್ದಳು.

ವಿವಾಹಕ್ಕೆ ಎಲ್ಲರ ಜೊತೆಯಲ್ಲಿ ಕೊತ್ತೇಗಾಲದಿಂದ ಮಂಗಳೆಯೂ ಹೋದಳು, ಮದುವೆ ಸುಲಭ ಖರ್ಚಿನಲ್ಲಿಯೇ ನಡೆದುಹೋಯಿತು. ವಧು ನರಸಮ್ಮನ ದೂರದ ಸಂಬಂಧ. 'ಮುಳ್ಳು ಮುಖ'ದ ಆ ಹುಡುಗಿಯನ್ನು ಮೂವತ್ತು ವಯಸ್ಸಿನವರೆಗೂ ಸರಿಯಾದವರಾರೂ ಮದುವೆಯಾಗಲು ಮುಂದೆ ಬಂದಿರಲಿಲ್ಲ.

ಸರ್ವಮಂಗಳೆ ದೊಡ್ಡವ್ವನ ಕೃತ್ರಿಮಕ್ಕೆ ತೀರ ಅಸಹ್ಯಪಟ್ಟುಕೊಂಡಳು. ಮದುವೆ ಮುಕ್ತಾಯವಾದ ಎರಡು ದಿನದಲ್ಲಿ ಬಂದ ನೆಂಟರೆಲ್ಲ ತಮ್ಮ ತಮ್ಮ ಊರುಗಳಿಗೆ ಪ್ರಯಾಣ ಮಾಡಿದರು. ಮಂಗಳೆಯನ್ನು ಮಾತ್ರ ವಿಷಕಂಠಯ್ಯ "ಇವಳೊಂದು ನಾಕು ದಿನ ಇಲ್ಲೆ ಇರಲಿ" ಎಂದು ಕಲ್ಲಹಳ್ಳಿಯಲ್ಲೇ ಉಳಿಸಿಕೊಂಡ. ಪುಟ್ಟತಾಯಿ ಹೋಗುವ ಮುನ್ನ ಅಯ್ಯನ ಮಗಳಿಂದ ಮಂಗಳೆ ಗೋಪ್ಯವಾಗಿ ಔಷಧ ತರಿಸಿದಳು.

ಕಲ್ಲಹಳ್ಳಿಯಲ್ಲಿ ನಾಲ್ಕು ದಿನ ಕಳೆಯುವುದು ಮಂಗಳೆಗೆ ನಾಲ್ಕು ಯುಗ ಕಳೆದಷ್ಟು ಹಿಂಸೆಯಾಯಿತು. ಆ ಹಳ್ಳಿ, ಆ ಮನೆ, ನಟರಾಜ, ಅಜ್ಜಿ ತಾಯಂದಿರ ಸ್ಮರಣೆಯನ್ನೇ ತರುತ್ತಿದ್ದವು. ಸುಖದ ದಿನಗಳ ಸಾವಿರ ಚಿತ್ರಗಳನ್ನು ಬಂಗಾರದ ಎಳೆಗಳಲ್ಲಿ ನೇಯ್ದು ಅವಳ ಮನದ ಮುಂದೆ ನಿಲ್ಲಿಸುತ್ತಿದ್ದವು. ತನ್ನ ನಾಗಜ್ಜಿ, ತನ್ನ ತಾಯಿ ತನ್ನ ವಿಷಯದಲ್ಲಿ ಎಂಥ ಸವಿಗನಸುಗಳನ್ನು ಕಟ್ಟಿಕೊಂಡಿದ್ದರು? ನಟರಾಜನನ್ನೂ ಗಂಡ-ಹೆಂಡತಿ ಎಂದು ನಾಗಜ್ಜಿ ಎಷ್ಟು ಬಾರಿ ಅವಳಿಚ್ಛೆಯನ್ನು ವ್ಯಕ್ತಪಡಿಸಿರಲಿಲ್ಲ! ನಟರಾಜ ಸೆರೆಮನೆಯಲ್ಲಿರುವಾಗಲೇ ತನ್ನ ತಾಯಿ ಸಖಿತ್ಕಾಯಿಲೆ ಮಲಗದಿದ್ದರೆ, ದುರ್ವಿಧಿ ನರಸಮ್ಮನ ರೂಪದಲ್ಲಿ ತನ್ನ ಕೈವಾಡ ನಡೆಸದಿದ್ದರೆ, ತನ್ನ ಬಾಳುವೆ ಎಂದಿಗೂ ಒಡೆದ ಕನ್ನಡಿಯಂತೆ ಹೀಗೆ ಚೂರು ಚೂರಾಗುತ್ತಿರಲಿಲ್ಲ.....

ಚಿಂತಿಸಿದಷ್ಟೂ ಮಂಗಳೆಯ ವಿದಗ್ಧ ಹೃದಯ ದುಃಖದ ಬೇಗೆಯನ್ನು ತಾಳಿಕೊಳ್ಳಲಾರದೆ ಸಂಕಟಪಡುತ್ತಿತ್ತು. ಕಾಡಿನಲ್ಲಾದರೂ ಶಾಂತಿ ಸಿಗಬಹುದೆಂದು ಊಹಿಸಿ ಮಂಗಳೆ ಕಾಡಿಗೆ ಹೋದಳು. ಅಲ್ಲಿಗೂ ಅವಳ ಹಿಂದಿನ ನೆನಪುಗಳು, ಬೇಡ ಬೇಡವೆಂದು ಹೊಡೆದೋಡಿಸಿದರೂ ಬೆನ್ನಟ್ಟಿ ಬರುವ ವಿಶ್ವಾಸದ ಶ್ವಾನದಂತೆ ಬೆನ್ನಟ್ಟಿ ಬಂದವು. ಆ ವಿಪಿನದಲ್ಲಿ ತಾನೂ ನಟರಾಜನೂ ಕಂಡ ದೃಶ್ಯಗಳು, ಆಡಿದ ಆಟಗಳು, ಕಟ್ಟಿದ ಕನಸುಗಳು ಬಣ್ಣ ಬಣ್ಣವಾಗಿ ಮತ್ತೊಮ್ಮೆ ಇದಿರಾದವು. ಮಾರ್ದನಿ ಕೊಡುತ್ತಿದ್ದ ಜಾಗಕ್ಕೆ ತೆರಳಿ ಗಟ್ಟಿಯಾಗಿ "ಅಟಾಜಾ...." ಎಂದು ಅರಚಿಕೊಂಡಳು. ಅರಣ್ಯದ ಗರ್ಭದಿಂದ ಎಲ್ಲೊ "....ಟಾಜಾ" ಎಂದು ಮೊಳಗಿದಂತಾಯಿತು. ಇನ್ನೊಮ್ಮೆ ಹೃದಯವೇ ಕಿತ್ತು ಬರುವಂತೆ "ಅಟಾಜಾ...." ಎಂದು ಕೂಗಿ ಗಟ್ಟಿಯಾಗಿ ರೋದಿಸಲಾರಂಭಿಸಿದಳು. "ಮಂಗ್ಲೀ..." ಎಂದು ಕೂಗಲು ನಟರಾಜ ಈಗ ತನ್ನ ಪಕ್ಕದಲ್ಲಿಲ್ಲದಿದ್ದುದು ಅವಳ ದುಃಖಕ್ಕೆ ಕಾರಣವಾಗಿತ್ತು. ಇನ್ನು ತಾನೇಕೆ ಬದುಕಬೇಕೆಂದು ಅಪಾರ ಶೋಕಕ್ಕೀಡಾದ ಅವಳ ಹೃದಯ ಮೊರೆಯಿತು.

ಕೂಡಲೇ ಎದ್ದು ಹೋಗಿ ಹತ್ತಿರದಲ್ಲೇ ಬೆಳೆದು ನಿಂತಿದ್ದ ಹುತ್ತವೊಂದರೊಳಗೆ ಕೈಯಿಟ್ಟಳು. ಆದರೆ ಎಷ್ಟು ಹೊತ್ತು ಅವಳು ಕೈಯಿಟ್ಟುಕೊಂಡಿದ್ದರೂ ಹುತ್ತದೊಳಗಿಂದ ಹಾವು ಹೆಡೆಯೆತ್ತಿ ತನ್ನ ವಿಷದಂಷ್ಟ್ರದಿಂದ ಕೈಕಚ್ಚದಿದ್ದುದು ಅವಳಿಗೆ ಮತ್ತೂ ವ್ಯಥೆಯಾಯಿತು. "ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು" ಎಂದು ಗೊಣಗಿಕೊಳ್ಳುತ್ತ ಅಲ್ಲಿಂದ ಸರಕ್ಕನೆದ್ದು ಮನೆಯ ಕಡೆ ಹೊರಟಳು.

ಸರ್ವಮಂಗಳೆ ಕೊತ್ತೇಗಾಲಕ್ಕೆ ಬಂದು ಆರು ತಿಂಗಳಾಗಿತು. ಒಂದು ಮಧ್ಯಾಹ್ನ ತೋಟದ ಆಳುಗಳಿಗೆ ಹಿಟ್ಟು ಕೊಟ್ಟು ಮಂಗಳೆ ಒಬ್ಬಳೇ ಮನೆ ಕಡೆ ಹೊರಟಿದ್ದಳು. ಇದ್ದಕ್ಕಿದ್ದಂತೆಯೇ ಎಲ್ಲಿಂದಲೋ ಪ್ರತ್ಯಕ್ಷವಾಗಿ ಬಸವಾಚಾರಿ ಅವಳಿಗೆ ಅಡ್ಡಲಾದನು. ಮಂಗಳೆ ಭೀತಳಾದಳು. "ಈ ಪಿಶಾಚಿ ಮರಳಿ ಬಂದಿದೆಯಲ್ಲಾ ?....ಪುನಃ ಹಿಂದಿನಂತೆ ಅಸಹ್ಯವಾಗಿ ವರ್ತಿಸಿದರೆ ಗತಿಯೇನು?" ಎಂದು ಅವಳು ಕಳವಳಗೊಂಡಳು. ಆದರೆ ಬಸವಾಚಾರಿ ಬಂದವನೇ ಮಂಗಳೆಯ ಎರಡೂ ಪಾದಗಳನ್ನು ಹಿಡಿದು ಅಳತೊಡಗಿದನು: "ಅಕ್ಕಾ ನಾನು ನಿಂಗೆ ತುಂಬ ತಪ್ಪು ಮಾಡಿದೆ. ಆದರೂ ದಯಾರಸದಿಂದ ನನ್ನ ಹೆಂಡತೀನೂ ನನ್ನೂ ಕಾಪಾಡಿದ್ದೀ. ನೀನು ಕಲ್ಲಹಳ್ಳಿಯಲ್ಲಿ ಕೊಡಿಸಿದ ಔಷಧಿಯಿಂದ ಅವಳ ಕಾಯಿಲೆ ನನ್ನ ಕಾಯಿಲೆ ಎಲ್ಲ ವಾಸಿ ಆಯ್ತು. ನಾನು ಆ ದೊಂಬರ ಚೆನ್ನಿ ಸಹವಾಸ ಮಾಡಿ ಕೆಟ್ಟ ಗತಿ, ಕೀಳು ಗತಿ ಕಂಡಿದ್ದೆ. ನಾನು ನರಳಾಡ್ತ ಹಟ್ಟೀಗೆ ಬಂದು ಬಿದ್ದಾಗ ನರಸಜ್ಜಿ 'ಮುಂಡೇದು ತಿರುಗ ನಮ್ಮತ್ರ ದುಡ್ಡು ಕಿತ್ತುಕಳೂ ಸಲುವಾಗಿ ಆಟ ಹೂಡದೆ ಚೆಲುವೇ....ನಾ ಕಾಣನ್ಯಾ? ನರಳಲಿ, ನರಳಲಿ. ಅವನಿಗೊಂದು ಚಿಟ್ಟೆ ಕಾಸನೂ ಹತ್ತಿಸಬ್ಯಾಡ' ಅಂದಳು ಕಣಕ್ಕ..... ಆಗಲೀಗ ನಾನು ಮುಗಿದೆ ಅಂದುಕೊಂಡೆ. ನನ್ನ ಹೆಡತಿ ಬುಟ್ಟು ಹಟ್ಟೀಲೊಬ್ಬರೂ ನನ್ನ ಮಾತಾಡಿಸೋರೆ ಇರನಿಲ್ಲ. ಅವ್ವ ಕೂಡ ನರಸಜ್ಜಿ ರೇಗಿ ಕಂಡೋಳು ಅಂತ ನನ್ನ ಕಡೀಕೆ ಸುಳೀತಿರನಿಲ್ಲ. ಆಗ ನೀನು ಕೊಟ್ಟಿದ್ದ ಔಸದೀಯ ತಗೊಂಡು ಬಂದು ನನ್ನ ಹೆಡತಿ 'ತಗೊನ್ನ. ಇದು ಬೋ ಒಳ್ಳೆ ಔಸದಿ. ಮಂಗಳಕ್ಕ ಇದ್ನ ಕಲ್ಲಹಳ್ಳೀಲಿ ನಂಗೆ ಕೊಡಿಸಿದ್ಲು. ಇದು ತಗೊಂಡು ನನ್ನ ಕಾಯಿಲೆಪೂರ್ತಾವಾಸಿಯಾಗದೆ' ಎಂದಳು. ಅದು ಕೇಳಿ ಔಸದ ಕುಡಿಯಕ್ಕೆ ನಾನೂ ಒಪ್ಪಿಕೊಂಡೆ. ನಲವತ್ತೆಂಟು ದಿನ ಅದು ಕುಡಿಯೋದರೊಳಗೆ ರೋಗ ಎಲ್ಲ ಹೊಂಟೋಗಿ ಮತ್ತೆ ಟಗರಾಗಿ ಹೋದೆ" ಎಂದು ತಡೆದು ಕಣ್ಣೀರೊರೆಸಿಕೊಂಡು "ಮಂಗಳಕ್ಕ ನೀನು ಈ ಪಾಪೀಯ ಉಳಿಸಿಕೊಂಡೆ. ನಾನು ನಿಂಗೆ ಎಷ್ಟು ತಪ್ಪು ಮಾಡಿದರೂ ಎಲ್ಲಾನೂ ಒಳ ಹಾಕಿಕೊಂಡು ನನ್ನ ಕಾಪಾಡಿದೆ, ನೀನೆ ನನ್ನ ತಾಯಿ" ಎಂದು ಪುನಹ ಕೃತಜ್ಞತೆಯ ಕಂಬನಿ ಸುರಿಸತೊಡಗಿದನು. ಮಂಗಳೆಯ ಕಣ್ಣಿನಲ್ಲೂ ಹರ್ಷದ ನೀರು ತುಳಕಾಡಿತು. ವಾತ್ಸಲ್ಯದಿಂದ ಬಸವಾಚಾರಿಯ ಕೈ ಹಿಡಿದು "ಹೋಗಲಿ ಆದದ್ದು ಆಗಿ ಹೋಯ್ತು. ಈಗಲಾದರೂ ಅಂಥ ಕೆಟ್ಟ ಸಹವಾಸಗಳನ್ನ ಮಾಡದೆ ಮುತ್ತಿನ ಹಾಗಿರುವ ನಿನ್ನ ಹೆಂಡತಿ ಸಂಗಡ ಬಾಳಾಡು" ಎಂದು ವಿವೇಕ ಹೇಳಿದಳು. ಅದಕ್ಕೆ ಬಸವಾಚಾರಿ

"ನನ್ನವ್ವ, ನನ್ನ ತಿರುಗ ಒಬ್ಬ ಮನುಷ್ಯ ಅಂತ ಮಾಡಿದ್ದೀ...ಇನ್ನು ಈ ಜನ್ಮ ಇರೋವರೆಗೂ ಅಂತ ಕೆಲಸ ಮಾಡೋಕ್ಕಿಲ್ಲ" ಎಂದು ವಚನವಿತ್ತನು.

ಮಂಗಳಿ ಬಸವಾಚಾರಿಯ ಕೈಹಿಡಿದು ಆದರದಿಂದ ಮಾತಾಡುತ್ತಿದ್ದುದನ್ನು ಕೆರೆಯಿಂದ ಬಟ್ಟೆಯೊಗೆದು ಬರುತ್ತಿದ್ದ ಗಿರಿಜೆ ಕಂಡಳು. ಕೂಡಲೆ ಓಡಿ ಹೋಗಿ ನರಸಮ್ಮನಿಗೆ ಸುದ್ದಿ ಮುಟ್ಟಿಸಿದಳು. ನರಸಮ್ಮನ ಕುಹಕಿ ಹೃದಯ ಗಿರಿಜೆಯ ಮಾತಿಗೆ ಬಣ್ಣ ಕಟ್ಟಿ 'ಮಂಗಳಿ ನಮ್ಮ ಬಸವಾಚಾರೀನ ಮಡಗಿಕೊಂಡವ್ಳೆ' ಎಂದು ಊರಲ್ಲೆಲ್ಲ ಡಂಗುರ ಹೊಡೆಯಿತು.

೫೬

ಮೈಸೂರಿನಲ್ಲಿ ವಿಶ್ವಕರ್ಮ (ಅಕ್ಕಸಾಲಿಗ)ರದೊಂದು ಸಂಘವಿತ್ತು. ಅದಕ್ಕೆ ಈ ಸಾಲಿನಲ್ಲಿ ಅನಂತನ ಮಾವ ಚೆನ್ನಸ್ವಾಮಿ ಅಧ್ಯಕ್ಷನಾಗಿ ಚುನಾಯಿತನಾಗಿದ್ದ. ಆರಂಭದ ಉತ್ಸಾಹದಲ್ಲಿ ಎಲ್ಲಾ ಊರುಗಳಲ್ಲಿ ಆಚಾರಿಗಳ ಸಂಘಗಳನ್ನು ಸ್ಥಾಪಿಸಬೇಕೆಂದು ಆತ ನಿರ್ಧರಿಸಿದ. ಸಂಘವೂ ಅವನ ಮಾತಿಗೆ ಬೆಂಬಲವಿತ್ತಿತ್ತು. ಪ್ರಥಮವಾಗಿ ತನ್ನ ಬಂಧುಗಳು ಹೆಚ್ಚಾಗಿದ್ದ, ಹುಣಸೂರಿನ ನೆರೆಯ ಗ್ರಾಮಗಳಿಗೆ ಭೇಟಿ ಕೊಡುವುದೆಂದು ಆತ ನಿರ್ಣಯಿಸಿದ. ಅದರಂತೆ ಹತ್ತಾರು ಹಳ್ಳಿಗಳನ್ನು ಸುತ್ತಿಕೊಂಡು ಒಂದು ದಿನ ಕೊತ್ತೇಗಾಲಕ್ಕೂ ಬಂದ ಅವನ ಜೊತೆಯಲ್ಲಿದ್ದ ಏಳೆಂಟು ಜನರಲ್ಲಿ ನಂಜುಂಡಸ್ವಾಮಿಯೂ ಒಬ್ಬ !... ಅವರೆಲ್ಲ ಆ ಹಳ್ಳಿಯ ಇತರ ಆಚಾರಿಗಳ ಮನೆಗಳಿಗಿಂತ ವಿಶಾಲವಾಗಿದ್ದ ಸುಬ್ಬರಾಯಿಯ ಮನೆಯಲ್ಲೇ ಬಿಡಾರ ಬಿಟ್ಟರು. ಆ ಹಳ್ಳಿಯ ಮುಖ್ಯಸ್ಥರೊಡನೆ ಮಾತುಕತೆಯಾದನಂತರ ಆ ಸುತ್ತಿನ ಆಚಾರಿಗಳನ್ನೆಲ್ಲ ಒಂದು ಕಡೆ ಸೇರಿಸುವುದು ಅಗತ್ಯ ಎಂದು ಚೆನ್ನಸ್ವಾಮಿಗೆ ಮನವರಿಕೆಯಾಯಿತು. ಅದರಂತೆ ಇನ್ನೆಂಟು ದಿನಗಳಲ್ಲಿ ಆ ಜನರೆಲ್ಲ ಸುಬ್ಬರಾಯಿಯ ಮನೆಯಲ್ಲಿ ಸೇರುವುದು, ಎಂದು ಎಲ್ಲ ಕಡೆಗೂ ಹೇಳಿಕಳುಹಿಸಿದ.

ಎಂಟು ದಿನಗಳು ಕಳೆಯಿತು. ಸುತ್ತಮುತ್ತಿನ ಹಳ್ಳಿಗಳ ಆಚಾರಿಗಳೆಲ್ಲ ಸುಬ್ಬರಾಯಿಯ ಮನೆಯಲ್ಲಿ ಸೇರಿದ್ದರು. ಅವರಿಗೆಲ್ಲ ಮಂಗಳೆಯೇ ಅಡುಗೆ ಮನೆಯಿಂದ ಪಾನಕ ಪಣ್ಯಾರಗಳನ್ನು ಒದಗಿಸಿದಳು. ಅನಂತರ ಚೆನ್ನಸ್ವಾಮಿ ಎದ್ದು ನಿಂತು ಅವರೆಲ್ಲ ಏಕೆ ಒಟ್ಟುಗೂಡಿ ಸಂಘ ಸ್ಥಾಪಿಸಿಕೊಳ್ಳಬೇಕೆಂದು ವಿವರಿಸಿ ಮುಂದುವರಿಯುತ್ತಾ, "ನಮ್ಮ ಹಿರಿಯರು ಕುಶಲಕಲೆಗಳಲ್ಲಿ ಪ್ರಸಿದ್ಧರು. ಬೇಲೂರು, ಹಳೇಬೀಡು, ಸೋಮನಾಥಪುರಗಳಲ್ಲಿ ಸುಂದರ ದೇವಾಲಯಗಳನ್ನು ನಿರ್ಮಿಸಿದವರು. ಶ್ರವಣಬೆಳಗೊಳದಲ್ಲಿ ಆಕಾಶವನ್ನೇ ಮುಟ್ಟಿ ನಿಂತಿರುವ ಗೊಮ್ಮಟನ ಮಹಾಮೂರ್ತಿಯನ್ನು ಕಡೆದು ನಿಲ್ಲಿಸಿದ ನಿಸ್ಸೀಮರು. ಅದೆಲ್ಲ ಈಗ ವೈಭವ. ಜಕಣಾಚಾರಿ, ವಾಸಾಚಾರಿಯಂಥ ಅದ್ಭುತ ಶಿಲ್ಪಿಗಳ, ಕಲಾಚತುರರ ಉನ್ನತ ಪರಂಪರೆಯುಳ್ಳ ನಮ್ಮ ಕಲೆ ಇಂದು ನಶಿಸಿ ಅಧೋಗತಿಗಿಳಿದಿದೆ. ನಮ್ಮ ಜನ

ಕಲಾರಾಧನೆಯನ್ನು ತ್ಯಜಿಸಿ ರೈತಾಪಿ ಕೆಲಸ, ಸರ್ಕಾರಿ ಹುದ್ದೆಗಳಲ್ಲಿ ಮೈಮರೆತಿದ್ದಾರೆ. ಹಿಂದೆ ಒಂದು ಹಳ್ಳಿಯಲ್ಲಿ ಆಚಾರಿಗಳು ಕಲ್ಲು ಕೆಲಸ, ಚಿನ್ನದ ಕೆಲಸ, ಗ್ರಾಮಸ್ಥರ ಜಿರಾಯಿತಿಗೆ ಉಪಯುಕ್ತವಾದ ಉಪಕರಣಗಳನ್ನು ಮಾಡುತ್ತಿದ್ದರು. ಭಾಗವತರಾಗಿ ಯಕ್ಷಗಾನ ಕಲಿಸುತ್ತಿದ್ದರು. ಓಕುಳಿ ಮುಂತಾದ ವಿಶೇಷ ಸಂದರ್ಭಗಳಿಗಾಗಿ ಸಾಮೂಹಿಕ ನೃತ್ಯ ಅಭ್ಯಾಸ ಮಾಡಿಸುತ್ತಿದ್ದರು....ಹಿಂದೆ ಆಚಾರಿಗಳು ಒಂದು ಗ್ರಾಮದ ಕಲಾ ಭಂಡಾರವಾಗಿದ್ದರು. ಅದೇ ಈಗ ನಾವು ನಮ್ಮ ಕಸಬುಗಳನ್ನೆಲ್ಲ ಮರೆತು ಅಧೋಗತಿಗಿಳಿಯುತ್ತಿದ್ದೇವೆ. ಇದಕ್ಕೆ ಅವಕಾಶವೀಯಬಾರದು. ಪವಿತ್ರರಾದ ನಮ್ಮ ಹಿರಿಯರ ಪಥದಲ್ಲಿ ನಾವು ಧೈರ್ಯವಾಗಿ ಮುನ್ನಡೆಯಬೇಕು. ನಮ್ಮ ಕಲೆಯನ್ನು, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು, ಬೆಳಸಿಕೊಳ್ಳಬೇಕು" ಎಂದು ಸ್ಫೂರ್ತಿಯುತವಾಗಿ ಭಾಷಣ ಮಾಡಿದ. ಅದನ್ನಾಲಿಸುತ್ತಿದ್ದಂತೆ ಮಂಗಳೆಯ ಅಂತರಂಗ ಇದೇ ರೀತಿ ನಟರಾಜನಾಡುತ್ತಿದ್ದ ಮಾತುಗಳನ್ನು ನೆನೆಯಿತು. "ಪುಟ್ಟ ನಟರಾಜ ವಾಸಾಚಾರಿಯ ಹೆಸರುಳಿಸುವುದೇ ?" ಎಂದು ಚಿಂತಿಸಿದಳು. "ಆದರೆ ಅದರ ತಂದೆ ನಟರಾಜನ ಕಲಾ ಪ್ರತಿಭೆ ತೋರಲಿಲ್ಲವಲ್ಲಾ?" ಎಂದು ಅವಳ ಮನ ಮುದುಡಿಕೊಂಡಿತು. "ಅನಂತ ಒಳ್ಳೆ ಕಲೆಗಾರ, ಅವನ ಮಗಳು ಲೀಲಾ ಒಳ್ಳೆಯ ಕಲೆಗಾರ್ತಿ ಆದರೂ ಆಗಬಹುದು" ಎನಿಸಿತು. ಮರುಕ್ಷಣವೇ ನಟರಾಜ ಹೇಳುತ್ತಿದ್ದ ಮಾತುಗಳು ಸ್ಮರಣೆಗೆ ಬಂದವು. "ಕಲೆ ಏರಿಳಿತವಿಲ್ಲದೆ ಒಂದೇಸಮ ಹರಿಯುವುದಿಲ್ಲ ಮಂಗಳೆ. ಒಂದು ತಲೆಮಾರಿನಲ್ಲಿದ್ದ ಕಲೆ ಎರಡನೆಯ ತಲೆಮಾರಿನಲ್ಲಿ ಗುಪ್ತಗಾಮಿನಿಯಾಗಿ, ಮೂರನೆಯ ತಲೆಮಾರಿನಲ್ಲೊ ನಾಲ್ಕನೆಯ ತಲೆಮಾರಿನಲ್ಲೊ ಹಠಾತ್ತನೆ ಅವತರಿಸಬಹುದು. ಈಗ ನಮ್ಮ ಪೀಳಿಗೆಯನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. ವಾಸಾಚಾರಿಯಲ್ಲಿದ್ದ ಕಲಾವೈಭವ ಎಷ್ಟೋಕಾಲ ಸುಪ್ತವಾಗಿ ಹರಿದು ನಮ್ಮ ವಂಶವೃಕ್ಷದ ಯಾವುದೊ ರೆಂಬೆಯ ಯಾವುದೊ ಕವಲಾದ ಅನಂತನಲ್ಲಿ ಮತ್ತೊಮ್ಮೆ ಅದೇ ವೈಭವದಿಂದ ಕಾಣಿಸಿಕೊಂಡಿತ್ತು"....

"ಹಾಗಿದ್ದಲ್ಲಿ ನಮ್ಮ ಪುಟ್ಟ ನಟರಾಜನಲ್ಲಿ ಆ ಕಲೆ ಕಾಣಿಸಿಕೊಳ್ಳಬಾರದೇಕೆ?" ಎಂದು ಮಂಗಳೆ ಚಿಂತಿಸಿದಳು. ಅನಂತರ ತನ್ನ ಕನಸು ನನಸಾಗಲೆಂದು ಭಗವಂತನನ್ನು ಅನನ್ಯ ಭಕ್ತಿಯಿಂದ ಬೇಡಿಕೊಂಡಳು.

೫೭

"ಧಿಂಗಲವ್ವ ಧಿಂಗಾಲೇ... ಧಿಂಗಲವ್ವ ಧಿಂಗಾಲೇ

ಹೋಯೀ

ಧಿಂಗಲವ್ವ ಧಿಂಗಾಲೇ....

ಹಕ್ಕಿಪಿಕ್ಕಿ ಹೆಂಗಸರು ಸುಬ್ಬರಾಯಿಯ ಮನೆಯ ಮುಂದೆ ಹಾಡಿ ಕುಣಿಯುತ್ತಿದ್ದರು. ಆಗ ಮನೆಯಲ್ಲಿ ಮಂಗಳೆ ಇರಲಿಲ್ಲ. ಪುಟ್ಟ ನಟರಾಜನನ್ನಾಡಿಸಲು ದುರ್ಗಿಯ ಮನೆಗೆ

ತೆರಳುತ್ತಿದ್ದಳು. ಅದೇ ತಾನೆ ಮನೆಗೆ ಬಂದ ನರಸಮ್ಮ ಗಿರಿಜೆಯ ಜೊತೆಗೆ ಹರಟುತ್ತ ಕುಳಿತಿದ್ದಳು. ಅವಳಿಗೆ ಮಂಗಳೆಯ ಮೇಲೆ ವಿಪರೀತ ಕೋಪವುಂಟಾಯಿತು. ಮಂಗಳೆ ಹಿಂದಿನ ದಿನ ದೊಡ್ಡಮ್ಮ ತನಗೆ ಕೊಡುತ್ತಿದ್ದ ಹಿಂಸೆಯನ್ನು ಸಹಿಸಲಾರದೆ "ಯಾಕೆ ಹೀಗೆ ಹುರಿದು ಮುಕ್ಕುತ್ತಿದ್ದೀಯೆ ದೊಡ್ಡವ್ವ? ನನಗೆ ಹೀಗೆ ಗೋಳುಕಿಚ್ಚು ಹುಯ್ದುಕೊಂಡರೆ ನಿನಗೆ ಖಂಡಿತ ಒಳ್ಳೆಯದಾಗೊಲ್ಲ" ಎಂದು ನಿಷ್ಠುರವಾಗಿ ನುಡಿದಿದ್ದಳು. ಅದನ್ನೀಗ ನರಸಮ್ಮ ಗಿರಿಜೆಯೊಡನೆ ಪ್ರಸ್ತಾಪಿಸುತ್ತ "ಸರಣೆ....ಸರಣೆ ಇವಳು ಯೇಳಿದಂಗೆ ಆಗೋಗಿಬುಡ್ತದೆ ನಂಗೆ 'ಒಳ್ಳೆದಾಗಾಕಿಲ್ಲ' ಅಂತಾವ ಕಾಲಗ್ಯಾನ ಹೇಳಿದ್ಲು" ಎಂದಳು. ಗಿರಿಜೆಯೂ ಹಲ್ಲು ಕಡಿಯುತ್ತಾ "ನಾತ್ರೆ ಅವಳಾಟ ತಡೀನಾರದೆ ಮುಂದಲೆ ಹಿಡಕೊಂಡು ಅವ್ಳ ಬೆನ್ನಿನ ಮ್ಯಾಗೆ ಗುದ್ದಿದೆ, ಓಟರಾಗೆ ನಮ್ಮೆಜಮಾನರು ಬಂದು ನನ್ನ ಒದ್ದು, ಹೊಡದು ಹೀನಾಮಾನ ಬೈದು ಪಜೀತಿ ಪಾರಿಜಾತ ಮಾಡಿಬುಟ್ಟರು. ಆಗ ಆ ಮಾಯಾಂಗಣಿ ನಂಗೂ ಅವರಿಗೂ ಅಡ್ಡ ನಿಂತುಕೊಂಡು 'ಅವ್ಳ ಇನ್ನೊಂದೇಟು ಒಡೆದರೆ ನಾನು ಹಟ್ಟಿ ಬುಟ್ಟು ಓಯ್ತಿನಿ. ನನ್ನಿಂದ ಯಾಕೆ ಈ ಹಟ್ಟೀಲಿ ಜಗಳ ಬವರ?' ಅಂತ ಮಳ್ಳಿ ಹಂಗೆ ಮಾತಾಡಿದ್ಲು .... ಅವ್ವೀ ಇಂತಾ ಮಾಯಕಾರ ಹೆಂಗಸನಾ ನೋಡೇ ಇರ್‍ನಿಲ್ಲ ಕನಜ್ಜಿ. ತೊಟ್ಟಿಲ್ನೂ ತೂಗೋದು ಮೊಗಾನು ಜಿಗಟೋದು .... ಆ ಕಡೀಕೆ ಗಂಡಯ್ಯನಿಗೂ ಚಾಡಿ ಚಂದ್ರ ಚುಚ್ಚಿಬುಡೋದು. ನನ್ನ ತಾವು ಬಂದು ಮೆಕ್ಕನ ಹಂಗೆ ಬುಡಸಿಕೊಳೋಳ ಹಂಗೆ ಬರೋದು ..... ಅವಳೇ ಈ ಹಟ್ಟಿ ಯಜಮೋಣಿ, ಅವಳು ಹೇಳಿದಂಗೆ ಇಲ್ಲಿ ಎಲ್ಲ ನಡಿಯೋದು ! ಅವಳು ಉಗಿದುಬುಟ್ಟರೆ ನಮ್ಮೆಜಮಾನರು ಅದ್ನ ದಾಟಾಕೆ ಅಷ್ಣೆ ಉಂಟಾ?" ಎಂದು ಪರಿಪರಿಯಲ್ಲಿ ಮಂಗಳೆಯನ್ನು ದೂರಿದಳು ....

ಅವರಿಬ್ಬರಲ್ಲೂ ಹೀಗೆ ಮಂಗಳೆಯ ವಿರುದ್ಧ ಕಿಚ್ಚು ಉರಿಯುತ್ತಿದ್ದಾಗ ಮನೆಯ ಮುಂದೆ ಹಕ್ಕಿಪಿಕ್ಕಿ ಹೆಂಗಸರು ಕಾಣಿಸಿಕೊಂಡಿದ್ದರು. ಅವರನ್ನು ಕಂಡ ನರಸಮ್ಮನಿಗೆ ಏನೊ ಹೊಳೆದಂತಾಯಿತು. "ಅವ್ಳಿಗೆ ಇದೆಲ್ಲ ಮಾಡಿದ್ರೆ ಸರಿಯಾಗಕ್ಕಿಲ್ಲ. ನಾವೇಟೇ ಇಂಸೆ ಕೊಟ್ಟರೂ ಅವಳು ಅಟ್ಟಿಬುಟ್ಟು ತೊಲಗಾಕಿಲ್ಲ. ಅವ್ಳಿಗೆ ಒಂದು ಕೆಲಸ ಮಾಡಬೇಕು–" ಎನ್ನುತ್ತಿರುವಂತೆ ಗಿರಿಜೆ "ಯೇನು ಅಜ್ಜಿ?" ಎನ್ನುತ್ತ ಮಯ್ಯೆಲ್ಲ ಕಿವಿಯಾಗಿ ಹತ್ತಿರ ಸರಿದು ಕುಳಿತಳು. ನರಸಮ್ಮ ಹೊರಗೆ ನಿಂತ ಹಕ್ಕಿಪಿಕ್ಕಿಯವರನ್ನು ಆಕೆಗೆ ತೋರುತ್ತ "ಈ ಜನ 'ಮದ್ದು' ಕೊಡ್ತಾರೆ ಕನ ಗಿರಿಜೆ .... ಒಂದೀಟು ರಾಗಿ ಸುರಿದುಽ ಆಟು ಮದ್ದು ಈಸುಕೊ. ಯಾತರಾಗಾರ ಅದ್ನ ಬೆರಸಿ ಕೊಟ್ಟುಬುಟ್ಟರೆ ಸವದೂ ಸವದೂ ಯಾರಿಗೂ ಗೊತ್ತಾಗದಂತೆ ನೆಗೆದು ಬೀಳ್ತಾಳೆ" ಎಂದು ಹೇಳಿ, ಚಪ್ಪಾಳೆ ತಟ್ಟಿ ನಗಲಾರಂಭಿಸಿದಳು.

* * * * *

ಮಂಗಳೆ ದಿನದಿಂದ ದಿನಕ್ಕೆ ಕೃಶವಾಗುತ್ತಿದ್ದಳು. ಅವಳನ್ನೀಗ ಯಾರು ನೋಡಿದರೂ 'ಅಯ್ಯೋ' ಎನ್ನುವಂತಾಗುತ್ತಿತ್ತು. ದುರ್ಗಿ, "ಇದು ಯಾಕಕ್ಕಾ ಹೀಗಾಗಿದ್ದೀ?.... ನೀನಾಗಿರೋ

ಸ್ಥಿತಿ ನೋಡಿದರೆ ಭಯ ಆಗ್ತದೆ. ಯಾವತ್ತೂ ಕಲಕಲ ಅಂತಿದ್ದೋಳು ಒಳ್ಳಿ ಬಟ್ಟೆ ಹಾಗಾಗಿದ್ದೀಯಲ್ಲಾ?.... ಅವರು ಹೋದ ಮೇಲೆ ನೀನೇ ನನಗೆ ಸರ್ವಸ್ವ ಆಗಿದ್ದೆ; ನೀನೂ ಈ ಗತಿಗೆ ಬಂದ ಮೇಲೆ ನನಗೂ ನಮ್ಮ ಪುಟ್ಟ ನಟರಾಜನಿಗೂ ಯಾರಕ್ಕ ಗತಿ?" ಎಂದು ಅಳುವಳು. ಚೆಲುವಮ್ಮನೂ ಕೃಶವಾದ ಅವಳ ಶರೀರವನ್ನಪ್ಪಿಕೊಂಡು "ಐರಾವತದಂಗೆ ಇದ್ದೋಳು ನೀನು. ಈ ಗತಿ ಆಗಿಬುಟ್ಟೆಯಲ್ಲಾ!.... ಅಯ್ಯೋ, ನಮ್ಮ ಪಾರತಿ ಚಿಕ್ಕವ್ವ ಇದ್ದಿದ್ರೆ ನಿಂಗೀ ಗತಿ ಬರೂನ ಅಂದ್ರೇನಾ!" ಎಂದು ಕಂಬನಿದುಂಬಿ ಮರುಗುವಳು.

ಮಂಗಳೆ ಕಾಯಿಲೆ ಮಲಗಿದುದು ಸುಬ್ಬರಾಯಿಗೆ ತನಗೇ ಕಾಯಿಲೆ ಬಂದಷ್ಟು ಸಂಕಟವಾಯಿತು. ಕಂಡ ಕಂಡವರು ಹೇಳಿದ ವೈದ್ಯ ಮಾಡಿಸಿದನು. ಆದರೆ ಅದೊಂದಕ್ಕೂ ಮಂಗಳೆಯ ರೋಗ ಮಣಿಯಲಿಲ್ಲ. ಕಡಗೆ ಚಿಲಕುಂದಕ್ಕೆ ಗಾಡಿ ಕಟ್ಟಿಸಿಕೊಂಡು ಹೋಗಿ ಅಲ್ಲಿಯ ಡಾಕ್ಟರಿಗೆ ಅವಳನ್ನು ತೋರಿಸಿದನು. ಆದರೆ ಅವರು ಕೊಟ್ಟ ಔಷಧದಿಂದಲೂ ಯಾವ ಗುಣವೂ ಕಾಣಲಿಲ್ಲ. ಹೀಗಿರುವಾಗ ಮರಿನಿಂಗಿಯ ಸೊಸೆ ಆಕಸ್ಮಿಕವಾಗಿ ಕೊತ್ತೇಗಾಲದ ತನ್ನ ನೆಂಟರ ಮನೆಗೆ ಬಂದಿದ್ದವಳು, ಮಂಗಳೆಗೆ ಕಾಯಿಲೆಯಾಗಿದೆಯೆಂದು ಕೇಳಿ ಅವಳನ್ನು ನೋಡಲು ಬಂದಳು. ಮಂಗಳೆಯನ್ನು ನೋಡಿದ ಕೂಡಲೆ ತಲೆದೂಗುತ್ತ "ಯೇನವ್ವ ಇದುಃ?.... ಯಾರೋ ನಿಂಗೆ ಇಕ್ಕಮದ್ದು ಇಟ್ಟುಬುಟ್ಟವರಲ್ಲಾ? ಕಣ್ಣು ಮೊಕ ಯಲ್ಲ ಯಾವತ್ತು ಒಳ್ಳಿ ಅರಿಶಿನ ಪಾವುಡ ಹಂಗಾಗದಲ್ಲಾ?" ಎನ್ನುತ್ತಾ "ಹುಣಸೂರಿನಲ್ಲಿ ಒಬ್ಬಳು ಬೂಬಿ ಅವ್ಳೆ ಅವ್ಳು, ಇದಕೆ ಔಷಧ ಕೊಡ್ತಾಳೆ ನಡಿ. ನಿಮ್ಮೆಜಮಾನರಿಗೆ ಹೇಳಬುಟ್ಟು, ಈಗಲೇ ಗಾಡಿ ಕಟ್ಟಿಸು. ಅವಳ ತಾವಿಕೆ ಹೋಗಿದ್ದು ಬರೂನ" ಎಂದು ಒತ್ತಾಯ ಮಾಡಿದಳು.

ಮದ್ದು ಹಾಕಿರುವರೆಂದು ಕೇಳಿ ಸುಬ್ಬರಾಯಿ ಗಾಬರಿಯಾದನು. ತಾನೇ ಗಾಡಿ ಕಟ್ಟಿಕೊಂಡು ಮಂಗಳೆಯನ್ನೂ ಮರಿನಿಂಗಿಯ ಸೊಸೆಯನ್ನೂ ಕರೆದುಕೊಂಡು ಹುಣಸೂರಿನ ಆ ಬೂಬಿಯ ಮನೆಗೆ ಹೋದನು. ಬೂಬಿ ನಿಂಬೆರಸದಲ್ಲಿ ಯಾವುದೋ ಹಸಿರು ಔಷಧ ಕುಡಿಸಿದಳು. ಅದನ್ನು ತೆಗೆದುಕೊಂಡ ಅರ್ಧಗಂಟೆಯೊಳಗಾಗಿ ಮಂಗಳೆ ವಾಂತಿ ಮಾಡಿಕೊಂಡಳು. ಆ ವಾಂತಿಯಲ್ಲಿ ಅವಳ ಹೊಟ್ಟೆ ಸೇರಿದ್ದ 'ಮದ್ದೂ' ಹೊರಬಂದಿತ್ತು. ಬೂಬಿ ಅದನ್ನೆತ್ತಿ ತೋರುತ್ತ "ಇನ್ನೊಂದು ಹತ್ತು ದಿನ ಕಳೆದಿದ್ದರೆ ಐತಲ್ಲಾ ಇದಕೆ ಕೂದಲು ಬೆಳೆದುಬುಟ್ಟಿರೋದು. ಆಗ ನಾನಲ್ಲ, ಫಲಾತನ್ ಬಂದಿದ್ದರೂ ಏನೂ ಮಾಡಕ್ಕಾಗ್ತಾ ಇರ್‍ನಿಲ್ಲ–" ಎಂದು ವಿವರಿಸಿದಳು.

ಮಂಗಳೆ ಹುಷಾರಾಗಿ ಮನೆಗೆ ಬಂದ ಸುದ್ದಿ ನರಸಮ್ಮನಿಗೆ ಕೈಗೆ ಸಿಕ್ಕಿದ ಶತ್ರು ತಪ್ಪಿಸಿಕೊಂಡು ಹೋದಂತೆ ವ್ಯಾಕುಲಗೊಳಿಸಿತು. ಆದರೆ ಬೆನ್ನಿಗೆ ಇನ್ನೊಂದು ಸುದ್ದಿ

ಮೊದಲಿನದಕ್ಕಿಂತಲೂ ಭೀಕರವಾಗಿ ಬರಸಿಡಿಲಿನಂತೆ ಅವಳ ಮೇಲೆರಗಿತ್ತು–ಅತ್ತಿಗುಪ್ಪೆಗೆ ಕಾರ್ಯಾರ್ಥವಾಗಿ ಹೋಗಿದ್ದ ಕಾಳಯ್ಯ ಅಲ್ಲೆ ಹೃದಯಸ್ತಂಭನದಿಂದ ಹಠಾತ್ತನೆ ಮೃತನಾಗಿದ್ದ !

೩೮

ಗಿರಿಜೆ ಈಗ ಅಂತರಿಕ್ಷದಲ್ಲೇ ನಡೆಯುತ್ತಿದ್ದಳು. ಪ್ರಥಮ ಬಾರಿಗೆ ಗರ್ಭಿಣಿಯಾಗಿದ್ದುದು ಅವಳ ಗರ್ವಕ್ಕೆ ಕಿರೀಟವಿಟ್ಟಂತಾಗಿತ್ತು. "ನಾನೇನು ಬಂಜೆಯಾ? ಬಿಕನಾಸಿಯಾ?" ಎಂದು ಮಂಗಳೆಗೆ ಕೇಳುವಂತೆಯೇ ನೆರೆಯ ಚೆನ್ನವ್ವೆಯೊಡನೆ ಆಡಿಕೊಳ್ಳುವಳು. ಮಂಗಳೆ ಕೇಳಿದರೂ ಕೇಳದಂತೆ ಇದ್ದು ಬಿಡುತ್ತಿದ್ದಳು. ಮದ್ದು ತೆಗೆಸಿದ್ದರೂ ಅವಳಿಗಿನ್ನೂ ನಿಶ್ಶಕ್ತಿ. ಅದರಲ್ಲೇ ಗಿರಿಜೆಯ ಬಾಯಿಗೆ ಹೆದರಿ ಏನಾದರೂ ಕೆಲಸ ಹಚ್ಚಿಕೊಂಡು ಮಾಡುತ್ತಲೇ ಇದ್ದಳು.

ಕಾಳಯ್ಯ ಗತಿಸಿದ ಬಳಿಕ ನರಸಮ್ಮನಿಗೆ ತನ್ನ ಮನೆ ಬೇಸರವೆನಿಸಿತು. ಅವನನ್ನು ಮಾತುಮಾತಿಗೆ ಹರಿದು ತಿನ್ನುತ್ತಿದ್ದರೂ ನರಸಮ್ಮ ತನ್ನದೇ ಆದ ರೀತಿಯಲ್ಲಿ ಆತನನ್ನು ಪ್ರೀತಿ ಮಾಡುತ್ತಿದ್ದಳು. ಅವನಿಲ್ಲದ ಬಾಳು ಅವಳಿಗೆ ಬರಿದಂತಾಗಿತ್ತು. ಅವನಿಲ್ಲದ ಮನೆ ಅವಳಿಗೆ ಮಸಣದಂತೆ ಭಣ ಭಣಗುಡುತ್ತಿತ್ತು.

ಹೀಗಿರುವಾಗ ಗಿರಿಜೆ ಬಸುರಿಯಾಗಿರುವಳೆಂದು ಕೇಳಿ ಕತ್ತಲಾಗುತ್ತಿದ್ದ ಅವಳ ಬಾಳಿನಲ್ಲಿ ಆಶಾಕಿರಣವೊಂದು ಜ್ವಲಿಸಿದಂತಾಯಿತು. ತನ್ನ ತಮ್ಮನ ಮನೆ ಬೆಳಕಾಯಿತಲ್ಲಾ, ತನ್ನ ತೌರು ಉಳಿಯಿತಲ್ಲಾ ಎಂದು ಅವಳು ಹಿಗ್ಗಿದಳು. "ಕಾಲಕೀಲಕೆ ಗಿರಿಜೆ ಬೊಸರಾಗದೆ, ಆ ತಬ್ಬಲಿ ಕಂದ್ನ ನೋಡಿಕಳೋರು ಯಾರು? ನಾನೇ ಆದ್ರೂವೆ ವಸಿ ಓಗಿ ನೋಡಿಕೊತ್ತೀನಿ" ಎಂದು ಹೇಳಿ ತಾನೇ ಬಂದು ಸುಬ್ಬರಾಯಿಯ ಮನೆಯಲ್ಲಿ 'ಝುಂಡಾ' ಊರಿದಳು.

ಮಂಗಳೆಗೆ ಗಿರಿಜೆಯೊಬ್ಬಳ ಕಾಟ ಸಹಿಸುವುದೇ ಸಾಕಾಗಿಹೋಗಿತ್ತು. ಈಗ ಸಾಕ್ಷಾತ್ ನರಸಮ್ಮನೇ ಪ್ರತ್ಯಕ್ಷವಾದುದು ಅವಳ ಜಂಘಾಬಲವನ್ನೇ ಉಡುಗಿಸಿತು. ಅಕ್ಕನ ವಿರುದ್ಧ ನಿಲ್ಲಲು ಸುಬ್ಬರಾಯಿಯೂ ಹೆದರುತ್ತಿದ್ದನಾದುದರಿಂದ ಮಂಗಳೆಯ ನೆರವಿಗೆ ಬರುವವರೇ ಇಲ್ಲದಂತಾದರು. ದಿನೇ ದಿನೇ ನರಸಮ್ಮ ಗಿರಿಜೆಯರ ಕಿರುಕುಳ ಪ್ರಬಲವಾಯಿತು. ಮಂಗಳೆ ಏನಾದರೂ ಬಳಲಿಕೆಯಾಗಿ ಕುಳಿತರೆ "ಈಗತಾನೆ ಮೊಗ ಹೆತ್ತ ಬಾಣಂತಿ ಹಂಗೆ ಕುಂತು ಕೊಂಡಿದ್ದೀಯಲ್ಲೇ?.... ಎದ್ದು ಬದುಕುಮಾಡೇ ಭೋಸಡಿ" ಎಂದು ನರಸಮ್ಮ ಒದರಾಡುತ್ತಿದ್ದಳು.

ಮದ್ದು ತೆಗೆಸಿದ ಮೇಲೆ ಬಾಣಂತಿಯನ್ನುಪಚರಿಸಿದಂತೆ ಉಪಚರಿಸಬೇಕಂತೆ ! ಮಂಗಳೆಗೆ ಉಪಚಾರ ಮಾಡುವುದು ಹೋಗಲಿ, ನರಸಮ್ಮನೂ ಗಿರಿಜೆಯೂ ಸೇರಿಕೊಂಡು ಅವಳ ಮೇಲೆ ಕೆಲಸದ ಹೊರೆಯನ್ನೇ ಹೇರಿದರು. ಅವಳು ಒಂದು ಗಳಿಗೆ ಕೂರುವುದಕ್ಕೂ

ಬಿಡುವು ಕೊಡುತ್ತಿರಲಿಲ್ಲ. ಆದಕಾರಣದಿಂದ ಮತ್ತೊಮ್ಮೆ ಮಂಗಳೆಯ ದೇಹಸ್ಥಿತಿ ಹದಗೆಡಲು ಆರಂಭಿಸಿತು.

ಇಷ್ಟರಲ್ಲಿ ಸುಬ್ಬರಾಯಿಯ ಆರ್ಥಿಕ ಸ್ಥಿತಿಯೂ ತೀರ ಹದಗೆಟ್ಟಿತ್ತು. ಈಗೆರಡು ವರ್ಷದಿಂದಲೂ ಹೊಗೆಸೊಪ್ಪಿನ ವ್ಯಾಪಾರದಲ್ಲಿ ಭಾರಿ ನಷ್ಟವಾಗಿ ಅವನು ಕಂಗಾಲಾಗಿದ್ದ. ಸಾಲ ಮೊದಲಬಾರಿಗೆ ಅವನ ಮೇಲೆ ಹೇರಿಕೊಂಡು ಅವನನ್ನು ಜರ್ಝರಿತಗೊಳಿಸಿತ್ತು. ಆದ್ದರಿಂದ ಮಂಗಳೆ ಆಳುಗಳಿಗೆ ನೆರವಾಗಿ ಹೊಲದಲ್ಲೂ ದುಡಿಯಲಾರಂಭಿಸಿದಳು. ಅವಳ ದುಡಿತ ಹೆಚ್ಚಿದಷ್ಟೂ, ಅವಳು ಸವೆದು ಕಡ್ಡಿಯಾದಷ್ಟೂ, ನರಸಮ್ಮನ ಕಿರುಕುಳ ಅಷ್ಟು ಅಧಿಕವಾಯಿತು.

ಮಂಗಳೆಯೊಂದು ದಿನ ಹೋರಿಗರುವಿಗೆ ಹುರುಳಿ ಆಡುತ್ತಿದ್ದಳು. ಅದು ಅವಳ ಅತ್ಯಂತ ಪ್ರೀತಿಯ ಹೋರಿಗರು. ಮಂಗಳೆಯ ಮದುವೆಯ ಸಂದರ್ಭದಲ್ಲಿ ಅದರ ತಾಯಿಯನ್ನು ಪಾರ್ವತಮ್ಮ ಮಗಳೊಡನೆ ಕೊತ್ತೇಗಾಲಕ್ಕೆ ಹೊಡೆದಿದ್ದಳು. ಆ ಹೋರಿಗರು ಹೆತ್ತು ಅದರ ತಾಯಿ ತೀರಿಕೊಂಡಿತ್ತು. ಈಗ ಅದು ತನ್ನಂತೆ ತಾಯಿಯಿಲ್ಲದ ತಬ್ಬಲಿ. ಆದರೂ ಉಲ್ಲಾಸ ಬಂದಾಗ ಅದು ಬಾಲವೆತ್ತಿ ನೆಗೆದಾಡುವುದೇ ಒಂದು ಚೆಂದ ! ಅದನ್ನು ನೋಡಿದಾಗಲೆಲ್ಲ ಸುಬ್ಬರಾಯಿ "ಇನ್ನೊಂದು ವರುಷ ಹಿಂಗೇಯೆ ಕಷ್ಟ ಬಿದ್ದು ಸಾಕಿಬಿಡು ಮಂಗಳಿ. ಆಮ್ಯಾಗೆ ಒಂದು ಸಾವಿರ ರೂಪಾಯಿಗೆ ಅದು ಹೋಗದೆ ಹೋದರೆ ನಾ ಹೇಳಿಕೊಟ್ಟೇನು !" ಎಂದು ಪ್ರಶಂಸೆಯ ನುಡಿಗಳನ್ನಾಡುತ್ತಿದ್ದನು .... ಅದನ್ನು ನೆನೆದಂತೆ ಆ ದುಃಸ್ಥಿತಿಯಲ್ಲಿಯೂ ಸಹ ಮಂಗಳೆಯ ಹೃದಯ ಪುಲಕಗೊಂಡಿತು. ಬೇಗ ಬೇಗ ಹುರುಳಿಯಾಡಿ ಅದನ್ನು ಅರೆಕನಚಟ್ಟಿಯಲ್ಲಿ ಎತ್ತಿಕೊಂಡು ಕರುವಿಗೆ ತಿನ್ನಿಸಲು ಕೊಟ್ಟಿಗೆಗೆ ಹೋದಳು. ಅಲ್ಲಿ ಅವಳು ಕಂಡ ದೃಶ್ಯ ಅವಳನ್ನು ಬೆಚ್ಚಿಸಿತು. ಗೂಟಕ್ಕೆ ಬಿಗಿಯಾಗಿ ಕಟ್ಟದಿದ್ದ ಕಾರಣ ಧಾರವಾಡದ ಕಡೆಯ ಕೋಣ ಜಗ್ಗಿಸಿ ತನ್ನ ಬಂಧನ ಬಿಡಿಸಿಕೊಂಡಿತ್ತು. ಕರುವಿನ ಮುಂದೆ ಮಂಗಳೆ ಆಗಲೇ ಇಟ್ಟ ಗರಿಕೆ ಹುಲ್ಲು ಹಸುರಾಗಿ ಕೋಣನ ದೃಷ್ಟಿ ಹಾಕಿತು. ಹೋರಿಗರು ತನ್ನ ಪಾಲನ್ನು ತಿನ್ನಲು ಬಂದ ಕೋಣನನ್ನು ಹಾಯಹೋಯಿತು. ಆಗ ಕೋಣ ಹೂಂಕಾರಮಾಡುತ್ತಾ ತನ್ನ ಬಲಿಷ್ಠವಾದ ಕೊಂಬುಗಳಿಂದ ಕರುವಿನ ಹೊಟ್ಟೆ ತಿವಿದ ರಭಸಕ್ಕೆ ಕರು ಹೃದಯವಿದ್ರಾವಕವಾಗಿ ಅರಚುತ್ತ ಕೆಳಗೆ ಬಿದ್ದುಬಿಟ್ಟಿತು. ಕೋಣನ ಕೊಂಬು ಅದರ ಹೊಟ್ಟೆಯೊಳಗೆ ತೂರಿ ಹೋಗಿ ಕರುಳು ಹೊರಗೆ ಬಂದುಬಿಟ್ಟಿತ್ತು. ರಕ್ತ ಕೋಡಿ ಕೋಡಿಯಾಗಿ ಹರಿಯತೊಡಗಿತು ....

ಮಂಗಳೆ ಆ ಭಯಂಕರ ದೃಶ್ಯವನ್ನು ನೋಡಲಾರದೇ ಗದಗದನೆ ದೇಹಾದ್ಯಂತ ಕಂಪಿಸುತ್ತ ಕಯ್ಯಲ್ಲಿ ಹಿಡಿದಿದ್ದ ಅರಕನಚಟ್ಟಿಯನ್ನು ಕೆಳಗೆ ಹಾಕಿಬಿಟ್ಟಳು. ಹಿತ್ತಾಳೆಯ ಚಟ್ಟಿ ಖಣಲ್ ಖಣಲ್ ಎಂದು ಸದ್ದುಮಾಡುತ್ತ ಹಿತ್ತಲಿನ ಚಪ್ಪಡಿ ಕಲ್ಲಿನ ಮೇಲೆ ಉರುಳಾಡಿತು.

* * * * *

ತನ್ನ ಪ್ರೀತಿಯ ಕರುವನ್ನು ಕಳೆದುಕೊಂಡು ಮಂಗಳೆಯ ಹೃದಯ ಸಂತಾಪದ ಜ್ವಾಲಾಮುಖಿಯೇ ಆಯಿತು. ಕರುವನ್ನು ನೆನೆಯುತ್ತಲೇ ಒಂದು ಸಂಜೆ ಅವಳು ತೋಟದಿಂದ ಹಿಂತಿರುಗುತ್ತಿದ್ದಳು. ಸುಬ್ಬರಾಯಿ ಹೊಗೆಯಲ್ಲಿ ತನಗಾದ ನಷ್ಟದಿಂದ ಬೆಪ್ಪನಂತೆ ಕೈಕಟ್ಟಿ ಕುಳಿತಾಗ, ಆಳುಗಳೊಡನೆ ತಾನೂ ನಿಂತು ಮಂಗಳೆ ನೆಟ್ಟ ಬಾಳೆಗಳು ಈಗ ಯಥೇಚ್ಛವಾಗಿ ಫಲ ಕಚ್ಚಿವೆ. ಆ ಬಾಳೆಗೊನೆಗಳನ್ನು ಮಾರಿ ಬರುವ ದುಡ್ಡಿನಿಂದ ಸುಬ್ಬರಾಯಿ ತನ್ನ ಸಾಲದ ಒಂದು ಭಾಗವನ್ನಾದರೂ ತೀರಿಸಿಕೊಳ್ಳಬಹುದು?.... ಕರುವಿನ ನೆನಪು ಮಂಗಳಿಯ ಹೃದಯವನ್ನು ಕಿತ್ತು ತಿನ್ನುತ್ತಿದ್ದರೂ ಬಾಳೆಯಿಂದ ಸುಬ್ಬರಾಯಿಗಾಗಬಹುದಾದ ಆದಾಯದ ಎಣಿಕೆ ಅವಳ ಆಂತರ್ಯಕ್ಕೆ ಒಂದು ವಿಧವಾದ ತೃಪ್ತಿ ತಂದಿತ್ತು.

ಮಂಗಳೆ ಮನೆಗೆ ಬಂದಾಗ ನರಸಮ್ಮ ಎಂದೂ ಇಲ್ಲದ ಆದರದಿಂದ ಅವಳನ್ನು ಕಂಡಳು. "ಬಾವ್ವ, ಬೋ ಸಾಕಾಗಿದ್ದಿ. ಬಿಸಿ ಬಿಸಿ ಬೋಂಡ ಕರದಿವಿ .... ಹೀರೆಕಾಯಿ ಬೋಂಡ ನಿಂಗೆ ಬೋ ಪ್ರೀತಿ ಅಂತ ಪಾರತಿ ಹೇಳುತ್ತಾ ಇದ್ದಳು" ಎಂದು ಬಲಾತ್ಕಾರವಾಗಿ ಅವಳನ್ನೆಳೆದುಕೊಂಡು ಹೋಗಿ ಒಂದು ತಟ್ಟೆಯಲ್ಲಿ ಅಷ್ಟು ಬೋಂಡ ಹಾಕಿ ಅದನ್ನು ಮಂಗಳೆಯ ಮುಂದಿಟ್ಟಳು. ನರಸಮ್ಮ ಇದ್ದಕ್ಕಿದ್ದಂತೆ ತೋರುತ್ತಿದ್ದ ಆದರ ನಿಜವಾದುದೇ? ಎಂದು ಶಂಕಿಸುತ್ತಲೇ ಒಂದು ಬೋಂಡವನ್ನು ಕೈಗೆತ್ತಿಕೊಂಡು ಮುರಿದಳು. ಅದರೊಳಗೆ ಹೀರೇಕಾಯಿ ಬದಲು ಒಂದು ಜಿರಲೆ ಸತ್ತು ಮಲಗಿತ್ತು: ಎಲ್ಲೊ ಕಾಣದೆ ಜಿರಲೆ ಬಿದ್ದು ಬಿಟ್ಟಿದೆ, ಎಂದುಕೊಳ್ಳುತ್ತ ಅದನ್ನೆಸೆದು ಇನ್ನೊಂದು ಬೋಂಡ ತೆಗೆದು ಮುರಿದಳು. ಅದರೊಳಗೂ ಒಂದು ಜಿರಲೆಯಿತ್ತು! ಮತ್ತೊಂದು ಬೋಂಡ ಹಿಸಿದಳು. ಇದರೊಳಗೂ ಒಂದು ಜಿರಲೆಯಿತ್ತು. ಹೀಗೆ ಅವಳ ಮುಂದಿಟ್ಟ ಪ್ರತಿಯೊಂದು ಬೋಂಡದಲ್ಲಿಯೂ ಒಂದು ಜಿರಲೆ ಇದ್ದೇ ಇದ್ದಿತು. ಇದು ಬೇಕೆಂದು ತನ್ನನ್ನು ಲೇವಡಿಮಾಡಲು ನರಸಮ್ಮನೂ ಗಿರಿಜೆಯೂ ಹೂಡಿದ ಹೂಟವೆಂದು ಮಂಗಳೆಗೆ ಹೊಳೆಯಿತು. ಅವರಿಬ್ಬರ ವರ್ತನೆಗೂ ಅವಳ ಮನ ಹೇಸಿತು. ತನ್ನ ಮನಸ್ಸಿನ ಕಹಿಯನ್ನು ತೊಳೆದುಕೊಳ್ಳಲು ದುರ್ಗಿಯ ಮನೆಗೆ ತೆರಳಿ ಪುಟ್ಟ ನಟರಾಜನೊಡನೆ ಆಡಲುಪಕ್ರಮಿಸಿದಳು...

* * * * *

ಒಂದು ಅಪರಾಹ್ಣ ಆಳುಗಳ ಸಮ ಹೊಲದಲ್ಲಿ ಕಳೆ ಕಿತ್ತು ಸಾಕಾಗಿ ಬಂದು ಮಂಗಳೆ ತೋಟದ ಕೊಳದ ನೀರಿನಲ್ಲಿ ಕೈಕಾಲು ತೊಳೆದುಕೊಳ್ಳುತ್ತಿದ್ದಳು, ಸ್ವಲ್ಪ ಹೊತ್ತಿಗೆ ಮುಂಚೆ ಮಂಗಳೆ ಬೆಳೆದಿದ್ದ ಬಾಳೆಯನ್ನು ನೋಡಿ ಹೋಗಲು ಬಂದಿದ್ದ ಸುಬ್ಬರಾಯಿ ತೋಟವನ್ನೆಲ್ಲ ಸುತ್ತಾಡಿ ಸಂತೋಷದಿಂದ ಸಾಗುತ್ತಿರುವ ಕೊಳದ ಬಳಿ ಮಂಗಳೆಯನ್ನು ಕಂಡು ಅಲ್ಲಿಗೆ ಬಂದ. "ನನ್ನ ಬದುಕಿಸ್ದೆ ಮಂಗಳೀ.... ಈ ಗೊನೆಗಳ್ನ ಮಾರಿಕೊಂಡರೆ ಸಾವಿರದ್ಯೆನೂರು ರೂಪಾಯಿಯಾದರೂ ಗಿಟ್ಟತದೆ" ಎಂದು ಹರ್ಷದಿಂದ ನುಡಿದ. ಮಂಗಳೆ

ಅವನತ್ತ ಒಮ್ಮೆ ದೃಷ್ಟಿ ಹರಿಸಿ, ದುರ್ಬಲವಾಗಿ ನಕ್ಕು ತನ್ನ ಪಾಡಿಗೆ ತಾನು ಕೈಕಾಲು ತೊಳೆಯತೊಡಗಿದಳು. ಸುಬ್ಬರಾಯಿ ಮಂಗಳೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ. ಅವಳ ಶೀರ್ಣಗೊಂಡ ದೇಹವನ್ನೂ ಅದಕ್ಕೆ ಬೇಸರದಿಂದ ಸುತ್ತಿದಂತಿದ್ದ ಹರಕಲು ಸೀರೆಯನ್ನೂ ಸುಬ್ಬರಾಯಿ ಹೊಸದಾಗಿ ಕಂಡಂತೆ ನೋಡಿದ. ಅವನ ಮನ ಮರುಗಿತು. ಕೊಳದ ಹಂತಗಳನ್ನಿಳಿದು ಹೋಗಿ ಅವಳ ಪಕ್ಕದಲ್ಲಿ ಕುಳಿತು ನೀರನ್ನು ಕೈಬೆರಳುಗಳಿಂದ ಕೆದಕುತ್ತ, "ಇದು ಯಾಕೆ ಹಳೆ ಸೀರೇನೆ ಸುತ್ತಿಕೊಂಡಿದ್ದೀ ....?" ಎಂದು ಅತ್ಯಂತ ಅನುಕಂಪದಿಂದ ಕೇಳಿದ.

ಮಂಗಳೆ ಕತ್ತೆತ್ತದೆ, "ಇದು ಏನಾಗಿದೆ?" ಎಂದಳು.

"ನಾನು ಹೋದ ಯುಗಾದೀಲಿ ತಂದುಕೊಟ್ಟೆನಲ್ಲಾ ಧರ್ಮಾವರದ ಸೀರೆ, ಅದೆಲ್ಲಾ ಉಟ್ಟುಕೊತ್ತಾನೇ ಇಲ್ಲವಲ್ಲ ನೀನು?"

"ಅದರ ಸುದ್ದಿ ಯಾಕೆ ಬಿಡಿ."

"ಹಂಗಂದರೇನು?.... ನನ್ನ ಕುಟ್ಟೆ ಹೇಳಕ್ಕಿಲ್ಲವಾ?"

ಮಂಗಳೆ ಒಲ್ಲದ ಮನಸ್ಸಿನಿಂದ ಸುಬ್ಬರಾಯಿಯ ಬಲತ್ಕಾರಕ್ಕೆ "ನೀವು ಹುಚ್ಚು ಹುಚ್ಚಾಗಿ ಆಡುವುದಿಲ್ಲ ಅಂದರೆ ಹೇಳ್ತೀನಿ" ಎಂದಳು.

ಸುಬ್ಬರಾಯಿ ಹುಬ್ಬು ಗಂಟಿಕ್ಕಿ ಚಿಂತಿಸಿದ : "ನಾನು ಯಾಕೆ ಹುಚ್ಚುಚ್ಚಾಗಿ ಆಡಬೇಕು?....."

ಮಂಗಳೆ ಅವನನ್ನೇ ದುರುದುರನೆ ನೋಡುತ್ತ, "ನೀವು ಗಿರಿಜೇನ ಹೊಡೆಯೋದಿಲ್ಲ ಅಂದರೆ ಹೇಳ್ತೀನಿ."

ಸುಬ್ಬರಾಯಿಗೆ ಏನೊಂದೂ ಅರ್ಥವಾಗಲಿಲ್ಲ.

"ಆಗ್ಲಿ, ಹೇಳು."

"ನಾನು ಮನೆಯಲ್ಲಿ ಇಲ್ಲದೇ ಇದ್ದಾಗ ಗಿರಿಜೆ ಅದನ್ನು ಮೂರು ನಾಲ್ಕು ಕಡೆ ಹರಿದು ಹಾಕಿದ್ದಳು. ಅದು ಈಗ ಉಟ್ಟುಕೊಳ್ಳುವದಕ್ಕೆ ಉಪಯೋಗವಿಲ್ಲ. ಆದ್ದರಿಂದ ಹಾಗೇ ಮಡಿಸಿ ಪೆಟ್ಟಿಗೆಯಲ್ಲಿಟ್ಟಿದ್ದೇನೆ" ಎಂದವಳು ಸುಬ್ಬರಾಯಿಯ ಕೈಹಿಡಿದುಕೊಂಡು "ಗಿರಿಜೆ ಅರಿಯದ ಹುಡುಗಿ, ಅವಳನ್ನ ಇದಕ್ಕಾಗಿ ದಂಡಿಸುವುದಿಲ್ಲ ಎಂದು ಭಾಷೆ ಕೊಡಿ" ಎಂದು ಬೇಡಿದಳು.

"ಹೊಡೆಯೋದಲ್ಲ. ಅವಳ್ನ ಸಿಗದು ಆಕಿಬುಡ್ತಿದ್ದೆ. ಆದ್ರೆ ಯಕ್ಷಗಾನದ ತೊಂಡನೂರು ರಕ್ಕಸಿ ಹಂಗೆ ಆ ನಮ್ಮಕ್ಕ ಒಬ್ಬಳು ಬಂದು ಮನೆ ಸೇರಿಬುಟ್ಟು ಗಿರಿಜೆಯ ಯೆಚ್ಚಿಸಿ

ಕುಂಡರಿಸವ್ವೆ.... ಅವರಿಬ್ಬರೂ ಸೇರಿಕೊಂಡು ನಿನ್ನ ಗೋಳು ಕಿಚ್ಚು ಹುಯ್ಯಿಕತ್ತಾ ಇದ್ದರೂ ನೋಡಿಕೊಂಡು ನಾನು ಸುಮ್ಮಕೆ ಕುಂತುಕೊಂಡಿರಬೇಕಾಗದೆ..." ಸುಬ್ಬರಾಯಿ ಹೀಗೆ ನುಡಿಯುತ್ತಿರುವಂತೆ ಅವನ ಕಣ್ಣು ತೇವವಾಯಿತು. "ನಾನು ಒರಟು ಮುಕ್ಕ, ನಿನ್ನ ಸರಿಯಾಗಿ ಬಳಸ್ತಾ ಇಲ್ಲ. ಇನ್ನು ಯಾರಾರ ಆಗಿದ್ರೆ ಏಟು ಚೆಂದಾಗಿ ನೋಡಿಕೊತ್ತಿದ್ದರೊ?" ಎಂದ.

ಸುಬ್ಬರಾಯಿಯ ಆ ಮಾತು ನಟರಾಜನ ಚಿತ್ರವನ್ನು ಮಂಗಳೆಯ ಮುಂದೆ ತಂದು ನಿಲ್ಲಿಸಿತು.

೫೮

ಮಂಗಳೆ ದುಡಿದು ದುಡಿದು ಸಾಕಾಗುವಳು. ಸಾಕಾದಷ್ಟೂ ಮತ್ತೆ ಮತ್ತೆ ದುಡಿಯುವಳು. ಮೈ ಮುರಿಯುವ ದುಡಿಮೆಯ ಮಧ್ಯೆ ಪುಟ್ಟನಟರಾಜನ ಲಾಲನೆ, ಪಾಲನೆಯಷ್ಟೇ ಅವಳಿಗಿದ್ದ ಮನರಂಜನೆ. ಆ ಬಾಲಕ ಈಗ ಮುದ್ದು ಮುದ್ದಾಗಿ ಗಳಹುತ್ತಿದ್ದ. 'ಅದೇನು?- ಇದೇನು?' ಎಂದು ಎಲ್ಲ ವಿಷಯವಾಗಿಯೂ ಅವನು ತಿಳಿಯಬೇಕು. ಎಲ್ಲ ವಿಚಾರಗಳನ್ನೂ ವಿಚಾರಿಸಬೇಕು. ಅವನ ನಿರಂತರ ಪ್ರಶ್ನೆಗಳಿಗೆ ಉತ್ತರವೀಯಲು ಒಮ್ಮೊಮ್ಮೆ ದುರ್ಗಿಗೇ ಬೇಸರವಾಗುತ್ತಿತ್ತು. ನರಸಮ್ಮನಂತೂ ಅವನಿಗೆ 'ಸಿಡಿಪುಟ್ಟಿ' ಎಂದೇ ಹೆಸರಿಟ್ಟಳು. ಆ ಬಾಲಕನೊಡನೆ ಬೇಸರವಿಲ್ಲದೆ ಹರಟುವ ಒಬ್ಬಳೇ ಒಬ್ಬಳು- ಮಂಗಳೆ!.... ಅಪಾರ ಸಹನೆಯಿಂದ ಅವನು ಕೇಳಿದ ಪ್ರಶ್ನೆಗೆ ಉತ್ತರಕೊಡುತ್ತಾ, ಅವನು ಆಡಿದಂತೆ ಆಡುತ್ತಿದ್ದಳು. ಅದರಿಂದಲೇ ಆ ಬಾಲ ತನ್ನ ತಾಯಿ ದುರ್ಗಿಗಿಂತ ಹೆಚ್ಚಾಗಿ ಮಂಗಳೆಯನ್ನೇ ಹೊಂದಿಕೊಂಡು ಓಡಾಡುವುದನ್ನು ನೋಡಿದವರು "ಹೆತ್ತ ತಾಯನ್ನೂ ಬುಟ್ಟು ಅವಳ ಒಗ್ಗಿಕಂಡಿರೋದು ನೋಡವ್ವಾ....?" ಎಂದು ಅಚ್ಚರಿಗೊಂಡು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಆ ಪುಟ್ಟ ಬಾಲನನ್ನು ಯಾರಾದರೂ "ನಿಮ್ಮ ಅವ್ವ ಯಾರೊ ಮೊಗಾ?" ಎಂದು ಕೇಳಿದರೆ ಒಡನೆಯೇ ಅವನು "ಇವ್ವ" ಎಂದು ಮಂಗಳೆಯನ್ನು ತೋರುತ್ತಿದ್ದನು. ಮಂಗಳೆ ಅವನನ್ನು ನೋಡಿಕೊಂಡು ತನ್ನ ವ್ಯಥೆಯನ್ನು ಆ ಗಳಿಗೆಗೆ ಮರೆಯುತ್ತಿದ್ದಳು. ಅವಳ ಬಾಳ ಕಾರಿರುಳಿನಲ್ಲಿ ಪುಟ್ಟ ನಟರಾಜ 'ಬೆಳ್ಳಿ'ಯಂತೆ ಬೆಳಕು ನೀಡಿದ್ದ.

ಒಂದು ಇಳಿ ಹೊತ್ತಿನಲ್ಲಿ ತೋಟದಿಂದ ಒಬ್ಬಳೇ ಹಿಂದಿರುಗುತ್ತಿದ್ದಳು ಮಂಗಳೆ. ತೋಟದ ಅಷ್ಟು ದೂರಕ್ಕೇ ಸುಬ್ಬರಾಯಿಯ ಹೊಲ. ಅಲ್ಲಿ ಆಳುಗಳು ರಾಗಿಯ ಬೆಳಸನ್ನು ಕಟಾವುಮಾಡಿ ಹೊಲದಲ್ಲೇ ಎರಡು ದಿನ ಆರಲೆಂದು ಬಿಟ್ಟು ಹೋಗಿದ್ದರು. ಮಂಗಳೆ ಅದನ್ನೇ ನಿಟ್ಟಿಸುತ್ತ "ಈ ಸಾರಿ ರಾಗಿ ಪಸಲೂ ಪರವಾಗಿಲ್ಲ" ಎಂದುಕೊಳ್ಳುತ್ತಾ ಅಡಿ ಇಡುತ್ತಿದ್ದಳು. ಸ್ವಲ್ಪ ದೂರ ಅವಳು ಸಾಗುವದರೊಳಗೆ ಮೇಲೆ ಅಂತರಿಕ್ಷದಲ್ಲಿ ಗಾಡಿ ಕಟ್ಟಿ

ಬಂದಿರುವ ನೆಂಟರಂತೆ ಮೇಘಾಳಿ ಈಶಾನ್ಯದ ಮೂಲೆಯಿಂದ ಗುಡುಗಿ ಅಬ್ಬರಿಸುತ್ತ ಅತ್ತ ಕಡೆಯೇ ಉರುಳಿ ಬರುತ್ತಿದ್ದವು. ಅವನ್ನು ದೃಷ್ಟಿಸಿದೊಡನೆಯೇ ಮಂಗಳೆಗೆ "ಈ ಸ್ನಾನದಲ್ಲಿ ಮೋಡ ಕಟ್ಟಿತೂ ಅಂದ್ರೆ ನಾಳೆ ಕುರ್ತೇಟು" ಎನ್ನುತ್ತಿದ್ದ ನಾಗಜ್ಜಿಯ ಮಾತುಗಳು ಸ್ಮರಣೆಗೆ ಬಂದವು. ಭೀತಿಯಿಂದ ಹೊಲದಲ್ಲಿ ಸಾಲಾಗಿ ಬಿದ್ದಿದ್ದ ರಾಗಿಯ ಸಣ್ಣ ಸಣ್ಣ ಕಂತೆಗಳತ್ತ ದೃಷ್ಟಿ ಹೊರಳಿಸಿದಳು. "ಮಳೆ ಹುಯ್ದರೆ ಈ ಬೆಳಸೆಲ್ಲ ಒದ್ದೆಯಾಗುತ್ತೆ, ರಾಗಿ ಕೆಟ್ಟು ಹೋಗಿ ಕೈಗೆ ಬಂದ ತುತ್ತು ಬಾಯಿಗಿಲ್ಲದಂತಾಗುತ್ತದೆ..... ಆ ಕೂಲಿಯಾಳುಗಳು ಈ ಮಳೆಯನ್ನು ನಿರೀಕ್ಷಿಸಿಲ್ಲ. ಎರಡು ದಿನ ಒಣಗಲೆಂದು ಬೆಳಸನ್ನು ಕಂತೆ ಕಟ್ಟಿ ಹಾಕಿ ಹೊರಟು ಹೋಗಿದ್ದಾರೆ. ಈಗೇನು ಮಾಡುವದು?" ಎಂಬ ಚಿಂತೆ ಅವಳನ್ನು ಕೊರೆಯತೊಡಗಿತು.

ದೂರದಲ್ಲಿ ಮಳೆಯಿಂದ ಭಾರವಾದ ಕರಾಳ ಮೇಘಗಳು ಅವಳು ನಿಂತ ನೆಲ ನಡುಗುವಂತೆ ಗುಡುಗುತ್ತ ಬರುತ್ತಿದ್ದವು. ಈಗಲೀಗ ಮಂಗಳೆ ಯೋಚಿಸುತ್ತ ಸುಮ್ಮನೆ ನಿಲ್ಲುವಂತಿರಲಿಲ್ಲ. ಆ ರಾಗಿಯ ಕಂತೆಗಳನ್ನುಳಿಸಲು ಏನಾದರೂ ಮಾಡಬೇಕು .... ತ್ವರೆಯಾಗಿ ಮಾಡಬೇಕು !

ಹಠಾತ್ತನೇ ಏನೋ ಹೊಳೆಯಿತು. ತನ್ನ ಸೆರಗನ್ನೆಳೆದು ನಡುವಿಗೆ ಸಿಕ್ಕಿಸಿದಳು. ಅನಂತರ ಒಂದೇ ಓಟದಲ್ಲಿ ಹೊಲವನ್ನು ಸೇರಿ ಅಷ್ಟಷ್ಟು ರಾಗಿ ಕಂತೆಗಳನ್ನು ಅಲ್ಲಲ್ಲಿ ಗುಡ್ಡೆ ಮಾಡಲಾರಂಭಿಸಿದಳು. ಆ ಗುಡ್ಡೆಯಮೇಲೆ ಮಳೆ ಹುಯ್ದರೂ ನೀರು ನಿಲ್ಲದೆ ನೆಲಕ್ಕೆ ಉರುಳಿಹೋಗುವಂತೆ ಚತುರತೆಯಿಂದ ಅವಳು ಕಂತೆಗಳನ್ನು ಒಟ್ಟಾಗಿ ನಿಲ್ಲಿಸುತ್ತಿದ್ದಳು. ಉರುಳಿಬರುತ್ತಿದ್ದ ಮಳೆಯ ಮುಗಿಲಿಗೂ ಅವಳಿಗೂ ಒಂದು ಭಾರಿ ಸ್ಪರ್ಧೆಯೇ ನಡೆಯುತ್ತಲಿತ್ತು. ಭೀಕರವಾಗಿ ಆರ್ಭಟಿಸುತ್ತ ಮುಗಿಲು ಹತ್ತಿರ ಬರುತ್ತಿತ್ತು. ಮಂಗಳೆ ತನ್ನ ಶಕ್ತಿಮೀರಿ ಹೊಲದಲ್ಲೆಲ್ಲ ಓಡಾಡಿಕೊಂಡು ಕಂತೆಗಳನ್ನು ಗುಡ್ಡೆ ಮಾಡುತ್ತಿದ್ದಳು. ಆತುರಾತುರವಾಗಿ ಅವಳು ಹೀಗೆ ಕಟಾವು ಮಾಡಿದ ಹೊಲದಲ್ಲಿ ಅಲೆದಾಡುವಾಗ ರಾಗಿಯ ಕೂಳೆ ಅವಳ ಅಂಗಾಲಿಗೆ ಚುಚ್ಚಿತು. ಒಡನೆಯೇ ಅಂಗಾಲಿನಿಂದ ರಕ್ತ ಬಸಿಯತೊಡಗಿತು. ಮಂಗಳೆ ಅದನ್ನು ಲಕ್ಷಿಸದೇ ಭರದಿಂದ ಗುಡ್ಡೆ ಮಾಡುತ್ತಲೇ ಸಾಗಿದಳು. ಸುಮಾರು ಮುಕ್ಕಾಲು ಕಂತೆಗಳನ್ನು ಗುಡ್ಡೆ ಮಾಡಿದಳು ಎನ್ನುವುದರಲ್ಲಿ 'ಮೊಸ್' ಎಂದು ಮೊರೆಯುತ್ತ ಬಂದ ಮಳೆ ಹೊಲದಗಲಕ್ಕೂ ದಪ್ಪ ದಪ್ಪ ಹನಿಗರೆಯಲಾರಂಭಿಸಿತು. ಮಂಗಳೆ ನೆನೆದು ಹೋಗುತ್ತಿರುವದನ್ನೂ ಗಮನಿಸಿದೆ ಕಂತೆಗಳನ್ನು ಮತ್ತಷ್ಟು ಹುರುಪಿನಿಂದ ಗುಡ್ಡೆ ಮಾಡುತ್ತಿದ್ದಳು. ಬರಬರುತ್ತ ಮಳೆ ಹೆಚ್ಚಿತು. ಮಂಗಳೆಯೂ ಉನ್ಮತ್ತಳಂತೆ ಕೆಲಸ ಮಾಡುತ್ತಿದ್ದಳು. ಆದರೆ ಇನ್ನೂ ಕೆಲವೇ ಕಂತೆಗಳಿರುವಂತೆ ಮಂಗಳೆಯ ಕಾಲುಗಳಲ್ಲಿ ಚೈತನ್ಯವುಡುಗಿ ನಿಲ್ಲಲಾರದೆ ತೂರಾಡುತ್ತ ಹೋಗಿ ದೊಪ್ಪೆಂದು ಕಂತೆಗಳ ಗುಡ್ಡೆಯೊಂದರ ಮೇಲೆ ಬಿದ್ದುಬಿಟ್ಟಳು ....

ಮಳೆ ಅರ್ಧಗಂಟೆ ಹೊಯ್ದು, 'ಇನ್ನು ನನ್ನ ಕೆಲಸವಾಯಿತು' ಎನ್ನುವಂತೆ ಹಠಾತ್ತನೆ ನಿಂತುಹೋಯಿತು. ಮನೆಯ ಜಗುಲಿಯ ಮೇಲೆ ಬೀಡಿ ಸೇದುತ್ತ ಕುಳಿತಿದ್ದ ಸುಬ್ಬರಾಯಿ ಮಳೆ ನಿಂತ ಕೂಡಲೆ "ಇದ್ದಕ್ಕಿದ್ದಂಗೆ ಮಳೆಕುಟ್ಟಿ ಕೆಡವಿಬುಡ್ತು. ರಾಗಿ ಕಂತೆಗಳು ಯೇನಾಗಿದ್ದಾವೂ ನೋಡಿಕಂದು ಬತ್ತೀನಿ ಕನಕ್ಕ" ಎಂದು ನರಸಮ್ಮನೊಡನೆ ಹೇಳಿ, ಎದ್ದು ಹೊಲದ ಕಡೆ ಹೊರಟನು. ದಾರಿಯುದ್ದಕ್ಕೂ "ಮಂಗಳೆ ಇನ್ನೂ ಹಟ್ಟೀಗೆ ಬಂದಿಲ್ಲ! .... ಮಳೇಲಿ ಯೆಲ್ಲಿ ನೆನಕೊಂಡು ಕುಂತಿದ್ದದೊ?" ಎಂದು ತನಗೆ ತಾನೇ ಹೇಳಿಕೊಳ್ಳುತ್ತಿದ್ದನು.

ತನ್ನ ಹೊಲವನ್ನು ಅವನು ಸಮೀಪಿಸಿದಂತೆ ಸೋಜಿಗ ಅವನಿಗೆ ವೀಳ್ಯ ಹಿಡಿದು ಕಾದಿತ್ತು. ಆಳುಗಳು ಸಿಕ್ಕಾಪಟ್ಟೆ ಹಾಕಿ ಹೋಗಿದ್ದ ಕಂತೆಗಳನ್ನು ನೆನೆಯದಂತೆ ಹೊಲದಗಲಕ್ಕೂ ಯಾರೋ ಪುಟ್ಟ ಪುಟ್ಟ ಗುಡ್ಡೆ ಮಾಡಿದ್ದರು! ಸುಬ್ಬರಾಯಿ "ಸದ್ಯ ಬದುಕಿಕೊಂಡೆ" ಎಂದು ತೃಪ್ತಿಯ ನಿಟ್ಟುಸಿರುಬಿಡುತ್ತಾ ಆ ಗುಡ್ಡೆಗಳನ್ನು ಹಾಕಿರುವ ಅಚ್ಚುಕಟ್ಟಿಗೆ ಮನದಲ್ಲೇ ಮೆಚ್ಚುತ್ತ ಮುಂದೆ ಮುಂದೆ ಸಾಗಿದ. ಹೊಲದ ಒಂದು ಕೊನೆಗೆ ಒಂದು ಗುಡ್ಡೆಯ ಮೇಲೆ ಯಾರೊ ಹೆಂಗಸು ಮಲಗಿರುವುದು ಅವನಿಗೆ ಕಾಣಿಸಿತು! ಯಾರೊ ಕೂಲಿ ಹೆಂಗಸು ಮಲಗಿರಬೇಕೆಂದೂಹಿಸಿ "ಯಾರಮ್ಮಿ ಅದು?.... ಯೇಳು, ಯೇಳು, ವಿಸ್ವಾನೆ ಕೊಚ್ಚಿ ಓಗಾವಷ್ಟು ಮಳೆ ಹೂದದೆ, ಎಮ್ಮೆ ಹಂಗೆ ಅಲ್ಲಿ ನೆನಕೊಂಡು ಬಿದ್ದಿದ್ದೀಯಲ್ಲಾ?" ಎಂದು ದೂರದಿಂದಲೇ ಕೂಗಿದನು. ಆದರೆ ಆ ಹೆಂಗಸು ಮಾರುತ್ತರ ಕೊಡಲಿಲ್ಲ. ಬೆದರಿ ಏಳಲಿಲ್ಲ. ಅವಳ ದಾಷ್ಟ್ಯಕ್ಕೆ ತಲೆದೂಗುತ್ತ ಸುಬ್ಬರಾಯಿ "ಏಯ್! ಜರ ಗಿರ ಬಂದು ಸತ್ತೋದೀಯೆ. ಎದ್ದೋಗು" ಎನ್ನುತ್ತಾ ಅವಳು ಮಲಗಿದ ಗುಡ್ಡೆಯನ್ನು ಸಮೀಪಿಸಿದ. ಆ ಹೆಂಗಸಿನ ಮುಖ ಕಾಣಿಸಿದೊಡನೆಯೇ ಅವನ ಎದೆಯೊಡೆಯಿತು. "ಮಂಗಳಿ!" ಎಂದು ಚೀರಿ ಅವಳನ್ನೆತ್ತಿ ಎದೆಗೊರಗಿಸಿಕೊಂಡನು. ಮೂರ್ಛಿತಳಾಗಿದ್ದ ಮಂಗಳೆಗೆ ಪ್ರಜ್ಞೆ ಮರಳಲು ಸುಬ್ಬರಾಯಿ ಬಹಳ ಸಾಹಸಮಾಡಿದನು. ತಾನು ಹೊದೆದ ರೇಶ್ಮೆ ವಸ್ತ್ರದ ತುದಿಯಿಂದ ಅವಳ ಮುಖವೊರಸಿ, ಅದರಿಂದಲೇ ಗಾಳಿ ಹಾಕತೊಡಗಿದನು. ಮುಂದೆ ಮೂರು ನಿಮಿಷದಲ್ಲಿ ಮಂಗಳೆ ಮೆಲ್ಲನೆ ಕಣ್ಣು ತೆರೆದಳು. ತನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅವಳಿಗೆ ಸ್ವಲ್ಪ ಕಾಲವೇ ಹಿಡಿಯಿತು. ತಾನು ಸುಬ್ಬರಾಯಿಯ ತೊಡೆಯಮೇಲೆ ಮಲಗಿರುವುದನ್ನು ಕಂಡು ನಾಚಿ ಮೆಲ್ಲನೆ ಎದ್ದು ಕುಳಿತಳು. ಸುಬ್ಬರಾಯಿ ಕಾತರ ಸ್ವರದಲ್ಲಿ "ಇದ್ಯಾಕೇ ಹಿಂಗಾಯ್ತು?" ಎಂದು ಪ್ರಶ್ನಿಸಿದ. ನಡೆದ ಸಂಗತಿಯನ್ನು ಮಂಗಳೆ ಮೆಲ್ಲಮೆಲ್ಲನೆ ಉಸುರಿದಳು. ಸುಬ್ಬರಾಯಿ ಬೆರಗು ಬಡಿದವನಂತೆ ಕಣ್ಣಗಲಿಸಿಕೊಂಡು "ಆ? ಈಟು ರಾಗಿ ಕಂತೇನೆಲ್ಲ ನೀನೊಬ್ಬಳೇ ಆಕಿದ್ಯಾ .... ಅಬ್ಬಾ! ಹತ್ತು ಜನ ಮಾಡೋ ಕೆಲ್ಸ ಒಬ್ಬಳೇ ಮಾಡಿಬುಟ್ಟಿದ್ದೀಯಲ್ಲಾ?" ಎಂದನು. ಅನಂತರ "ಹೂ.... ಯೇಳು, ಯೇಳು, ಒದ್ದೆ ಸೀರೇಲೆ ಇದ್ದರೆ ಸೀತ ಹುಟ್ಟಿಬುಟ್ಟಾತು" ಎಂದು ಅವಳನ್ನೆಳಿಸಿಕೊಂಡು ನಿಧಾನವಾಗಿ ತಮ್ಮ ಮನೆಗೆ ನಡೆಸಿಕೊಂಡು ಬಂದ.

೬೦

ಮಳೆಯಲ್ಲಿ ನೆನೆದುದೇ ನೆವವಾಗಿ ಶಿಥಿಲಗೊಂಡಿದ್ದ ಮಂಗಳೆಯ ದೇಹ ಜ್ವರದಿಂದ ಕಾಯತೊಡಗಿತು. ಹಾಸಿಗೆ ಹಿಡಿದು ಮಲಗಿದ ಮಂಗಳೆಯ ಶುಶ್ರೂಷೆಗೆ ಸುಬ್ಬರಾಯಿಯೇ ನಿಂತುಕೊಂಡನು. ಅದನ್ನು ಕಂಡು ನರಸಮ್ಮನು "ನಿನ್ನುಪಚಾರ ಸಾಕಂತೇ.... ನೀಯೊಬ್ಬನೇ ಅಲ್ಲ ಹೆಂಡತಿ ಕಂಡಿರೋನು, ಓಗಿ ಆಸ್ಪತ್ರೆ ಔಸದ ತಂದು ಹೂಯಿ" ಎಂದಳು. ಅದರಂತೆ ಸುಬ್ಬರಾಯಿ ಮಂಗಳೆಯನ್ನು ಅಕ್ಕನ ಮತ್ತು ಗಿರಿಜೆಯ ಸ್ವಾಧೀನಕ್ಕೊಪ್ಪಿಸಿ ತೆಪ್ಪಗಾಗಬೇಕಾಯಿತು. ಮುಂದೆ ಇಪ್ಪತ್ತು ದಿನ ಸುಬ್ಬರಾಯಿ ಪ್ರತಿದಿನವೂ ಚಿಲಕುಂದಕ್ಕೆ ಹೋಗಿ ಅಲ್ಲಿಯ ಡಾಕ್ಟರಿಂದ ಔಷಧಿ ತಂದು ಮಂಗಳೆಗೆ ಕುಡಿಸಿದನು. ಆದರೆ ಅದರಿಂದೇನೂ ಗುಣ ಕಂಡುಬರಲಿಲ್ಲ. ಜ್ವರ ಹಾಗೇ ಕಾಯುತ್ತಿತ್ತು. ಇಪ್ಪತ್ತೊಂದು, ಇಪ್ಪತ್ತೆರಡು, ಇಪ್ಪತ್ತು ಮೂರು ದಿನ ಕಳೆಯಿತು. ಜ್ವರ ಬಿಡಲೇ ಇಲ್ಲ. ಇಪ್ಪತ್ತ ನಾಲ್ಕನೆಯ ದಿನ ಚಿಲಕುಂದದ ಡಾಕ್ಟರು "ನಾನು ನ್ಯುಮೋನಿಯ ಅಂತ ತಿಳಿದು ಔಷಧಿ ಕೊಟ್ಟೆ ಕಾಣ್ರಿ. ಆಂಟಿ ಫ್ಲಾಜಸ್ಟಿನ್ ಹಾಕಿ ಅಂತ ಹೇಳಿದ್ದು ಆ ಕಾರಣದಿಂದಲೇ !.... ಆದರೆ ಹೀಗೆ ಜ್ವರ ಬಿಡದೆ ಇರುವುದನ್ನು ನೋಡಿದರೆ ಅವಳಿಗೆಲ್ಲೋ ಟೈಫಾಯಿಡ್ಡೇ ಆಗಿರಬೇಕು ಅನ್ನಿಸುತ್ತೆ, ನೀವು ಅವಳನ್ನು ಹುಣಸೂರು ಆಸ್ಪತ್ರೆಗೆ ಕೂಡಲೆ ಕರೆದುಕೊಂಡು ಹೋಗಿ ತೋರಿಸಿ" ಎಂದು ಸಲಹೆ ಮಾಡಿದರು.

ಅದರಂತೆ ಮನೆಗೆ ಬಂದೊಡನೆಯೇ ಸುಬ್ಬರಾಯ ಗಾಡಿ ಕಟ್ಟಿ ಸಿದ್ಧಪಡಿಸಿದ. ಒಳಗೆ ಮಂಗಳೆ ಮಲಗಿದಾಗ ಒತ್ತದಿರಲೆಂದು ಅಡಿಯಲ್ಲಿ ಮಂದವಾಗಿ ನೆಲ್ಲಹುಲ್ಲು ಹಾಕಿ, ಅದರ ಮೇಲೆ ಚಾಪೆ, ಹಾಸಿಗೆಗಳನ್ನು ಹಾಸಿದ. ಅನಂತರ ತಾನೇ ಸೂಕ್ಷ್ಮವಾಗಿ ಎತ್ತಿ ತಂದು ಮಂಗಳೆಯನ್ನು ಹಾಸಿಗೆಯ ಮೇಲೆ ಮಲಗಿಸಿದ. ಗಾಡಿಯ ಸುತ್ತ ಕಣ್ಣೀರು ಸುರಿಸುತ್ತ ದುರ್ಗಿ, ಚೆಲುವಮ್ಮ, ಪುಟ್ಟತಾಯಿ, ಬಸವಾಚಾರಿ ಎಲ್ಲರೂ ಬಂದು ನೆರೆದರು. ನರಸಮ್ಮನೂ ಗಿರಿಜೆಯೂ ಬೀದಿ ಬಾಗಿಲಿಗೆ ಬಂದು ನಿಂತಿದ್ದರು. ಪುಟ್ಟ ನಟರಾಜನಂತೂ ದುರ್ಗಿಯೊಡನೆ "ಅಮ್ಮ ಗಾಡಿ ಮೇಲೆ ಕೂತುಕೊಂಡು ಎಲ್ಲಿಗೋಯ್ತಾವ್ಳೆ?" ಎಂದು ಕೇಳಿಬಿಟ್ಟನು. ದುರ್ಗಿ ಬಿಕ್ಕಿ ಬಿಕ್ಕಿ ಅಳುತ್ತ "ಹುಣಸೂರಿಗೆ ಹೋಗ್ತಾ ಇದಾಳೆ. ಬೇಗ ಬಂದು ಬಿಡುತ್ತಾಳೆ" ಎಂದಳು. ಆ ಬಾಲ "ಹಾಗಿದ್ರೆ ನಾನೂ ಅಮ್ಮನ ಜೊತೇಲಿ ಹೋಗ್ತೀನಿ" ಎಂದು ಚಂಡಿ ಮಾಡತೊಡಗಿದ. ದುರ್ಗಿ ಅವನನ್ನೆತ್ತಿ ಗಾಡಿಯೊಳಗೆ ಮಂಗಳೆಯ ಪಕ್ಕದಲ್ಲಿ ಕೂರಿಸುವವರೆಗೂ ಅವನಿಗೆ ಸಮಾಧಾನವೇ ಆಗಲಿಲ್ಲ !....

ಆ ಜ್ವರದ ತಾಪದಲ್ಲಿಯೂ ಪುಟ್ಟ ನಟರಾಜನನ್ನು ನೋಡಿ ಮಂಗಳೆಯ ಕಣ್ಣು ಬೆಳಕಾಯಿತು. ಅದರ ಕೈಗೆ ಹಾಕಿದ್ದ ಬಂಗಾರದ ಕಾಪಿನ ಮೇಲೆ ಆದರದಿಂದ ಕೈಯಿಟ್ಟಳು.

ಸುಬ್ಬರಾಯಿ ಅಷ್ಟರಲ್ಲಿ ಹತ್ತಿ ಕುಳಿತ. ಅನಂತರ ಹೊತ್ತಾಯಿತೆಂದು ಬಲಾತ್ಕಾರದಿಂದ ಆ ಬಾಲನನ್ನೆತ್ತಿ ಬಸವಾಚಾರಿಯ ಕೈಗಿತ್ತ. ಅದರಿಂದ ಮಂಗಳೆಯ ಮನಸ್ಸಿಗೆ ತೀರ ಘಾಸಿಯಾಯಿತು. ಮಗು ತನ್ನೊಡನೆಯೇ ಬರುವದೆಂದು ಅವಳು ಸಂತುಷ್ಟಳಾಗಿದ್ದಳು. ಈಗ ಸುಬ್ಬರಾಯಿ ಅದನ್ನು ಅವಳಿಂದ ಬಲಾತ್ಕಾರವಾಗಿ ಪ್ರತ್ಯೇಕಗೊಳಿಸಿದುದು ಮಂಗಳೆಗೆ ತುಂಬ ದುಃಖವನ್ನುಂಟು ಮಾಡಿತು. ಕರುಳು ಕಿತ್ತು ಬರುವಂತಾಯಿತು. ಹಿಂದೆ ತನ್ನ ನಟರಾಜ ತನ್ನಿಂದ ಪ್ರತ್ಯೇಕವಾದದ್ದು ಈತನಿಂದಲೇ ಅಲ್ಲವೇ? ತನ್ನ ಮತ್ತು ನಟರಾಜನ ಅನುರಾಗವನ್ನು ಅರಿತೂ ತನ್ನನ್ನು ವರಿಸಲು ಈತ ಮುಂದೆ ಬಂದನೇಕೆ?– ಎಂದು ಅವಳ ಚಿತ್ತ ವಿಹ್ವಲವಾಯಿತು ....

ಗಾಡಿ ಹೊರಟಿತು. ಅದರ ಗಾಲಿಗಳು ಮುಂದೆ ಉರುಳಿದಂತೆ ಮಗುವಿನ "ನಾನೂ ಅಮ್ಮನ ಜೊತೆ ಹೋಗ್ತೀನಿ" ಚಂಡಿಯ ಸದ್ದು, ಎದೆ–ಎದೆ ಬಡಿದುಕೊಳ್ಳುತ್ತ "ನನ್ನ ಅಕ್ಕ ಹೊರಟುಹೋದಳು" ಎಂದು ಚೀರಿಡುವ ದುರ್ಗಿಯ ರೋದನ, ಅದರ ಬೆನ್ನಿಗೇ "ಈಗ ಅವ್ವ ಯೆಲ್ಲೀಗೆ ಹೊಂಟೋದಲೂ? ಬತ್ತಾಳಂತೆ ಸುಮ್ಕಿರು" ಎಂಬ ನರಸಮ್ಮನ ಅಬ್ಬರ– ಎಲ್ಲ ಸ್ವಲ್ಪ ಕಾಲ ಕೇಳುತ್ತಿದ್ದು, ಕ್ರಮೇಣ ಅಸ್ಪಷ್ಟವಾದವು ....

ಗಾಡಿ ನಿಧಾನವಾಗಿ ಹೋಗುತ್ತಿತ್ತು. ಆ ಕಲ್ಲು ದಾರಿಯಲ್ಲಿ ಗಾಡಿಯೆಲ್ಲಾದರೂ ಕುಲುಕಿ ಮಂಗಳೆಗೆ ತೊಂದರೆಯಾದೀತೆಂದು ಸುಬ್ಬರಾಯಿ ಎತ್ತುಗಳನ್ನು ದೌಡಾಯಿಸದೆ ನಡೆಸಿಕೊಂಡೇ ಹೋಗುತ್ತಿದ್ದ ....

ಆಗಲೇ ಹತ್ತು ಗಂಟೆಯ ಸಮಯವಾಗಿತ್ತು. ಆದರೂ ಸೂರ್ಯನನ್ನು ಮೋಡಗಳು ಮುಚ್ಚಿಕೊಂಡಿದ್ದುದರಿಂದ ನಿಸರ್ಗದ ಗಿಡ ಮರಗಳೆಲ್ಲ ಆ ಬೆಳಗಿನಲ್ಲಿ ಸುಬ್ಬರಾಯಿಯ ಕಣ್ಣಿಗೆ ಕಳೇ ಬರದಂತೆ ಮೌನವಾಗಿ, ಕಳಾಹೀನವಾಗಿ ನಿರ್ಜೀವವಸ್ತುಗಳಂತೆ ತೋರಿದವು.

ಮಂಗಳೆಗೆ ಅತ್ಯಂತ ಆಯಾಸವಾಗಿತ್ತು. ಜ್ವರದ ತಾಪದಲ್ಲಿ ಅವಳ ದೇಹ ಬೆಂದರೆ ಅವಳ ಆತ್ಮ ದುಃಖದ ಉರಿಬೆಂಕಿಯಲ್ಲಿ ಸುಟ್ಟು ಸುಟ್ಟು ಹೋಗಿತ್ತು. ಬದುಕುವ ಛಲವೇ ಅವಳಲ್ಲೀಗ ಇಲ್ಲವಾಗಿತ್ತು. ತನ್ನ ಕಾರ್ಯವನ್ನವಳು ಮಾಡಿ ಮುಗಿಸಿದ್ದಳು. ನಟರಾಜನ ಶಿಶುವೀಗ ನೋಡಿದವರ ಕಣ್ಣು ತಣಿಯುವಂತೆ, ಮನ ಕುಣಿಯುವಂತೆ ಬೆಳೆದು ನಿಂತಿದೆ. ಇನ್ನು ತಾನಿಲ್ಲದಿದ್ದರೂ ಭಯವಿಲ್ಲ. ದುರ್ಗಿಗೆ ತಾಯಿಯ ಹಣದ ಬಲವಿರುವುದರಿಂದ ಹುಡುಗನಿಗೆ ವಿದ್ಯೆ ಕಲಿಸಿ ಒಬ್ಬ ಗಣ್ಯವ್ಯಕ್ತಿಯಾಗಿ ಮಾಡುತ್ತಾಳೆ. ಭೂಮಿಯಲ್ಲಿ ಕಂಡ ಮೊಳಕೆ ಸಸಿಯಾಗಿ ನಿಲ್ಲುವುದೇ ಪ್ರಯಾಸ. ಸಸಿ ನಿಂತಿತೆಂದರೆ ಮರವಾಗಿ ಬೆಳೆಸುವುದು ಸುಲಭ !..."

ಮಂಗಳೆ ಹೀಗೆ ಚಿಂತಿಸುತ್ತ, ಕಣ್ಣು ಮುಚ್ಚಿದಳು. ಅವಳ ಮುಖದ ಮೇಲೆ ತೃಪ್ತಿಯ, ಸಮಾಧಾನದ ಛಾಯೆ ಬೀಸಿತ್ತು. ಅವಳ ಆತ್ಮಕ್ಕೆ ಗರಿ ಮೂಡಿ ಅದು ಗತಕಾಲಕ್ಕೆ ಹಾರಿ

ನಿಂತಿತ್ತು. ಒಂದೊಂದಾಗಿ ಬಾಲ್ಯದ ದಿನಗಳು ಅವಳ ಹೃತ್ಪಟಲದ ಮುಂದೆ ಮೃದುವಾಗಿ ಆಡತೊಡಗಿದವು. ನಟರಾಜನೂ ತಾನೂ ಕಾಡಿನಲ್ಲಿ ಸುಖವಾಗಿ ಮರಿ ಹುಲ್ಲೆಗಳಂತೆ ನಿಶ್ಚಿಂತೆಯಿಂದ ಕಳೆದ ದಿನಗಳ ನೆನಪಾಯಿತು. ಆ ಕಾಡು, ಅಲ್ಲಿಯ ಜಿಂಕೆಗಳು, ಕಣ್ಮನಗಳನ್ನು ಸೆಳೆಯುವ ಆ ನವಿಲುಗಳು, ಅಡವಿಯ ಗರ್ಭದೊಳಗಿಂದ ಮೊಳಗುತ್ತಿದ್ದ ಆ ಮಾರ್ದನಿ...ಅವುಗಳನ್ನು ನೆನೆದಂತೆ ಮಂಗಳೆಯ ಮುಖ ಪ್ರಫುಲ್ಲವಾಯಿತು .... ಒಂದು ದಿನ ನಟರಾಜನಿಗೂ ತನಗೂ ಆದ ಜಗಳ – ನಟರಾಜ ತನ್ನನ್ನು 'ಮಂಗೀ' ಎಂದು ಕೂಗಿ ಅಣಕಿಸಿದ್ದು; ತಾನೂ ಪ್ರತಿಯಾಗಿ 'ಹುಚ್ಚಾ' ಎಂದು ಕನಲಿ ಅಬ್ಬರಿಸಿದ್ದು; ಅದರಿಂದ ತಮ್ಮಿಬ್ಬರಲ್ಲೂ ಉದ್ಭವಿಸುವುದರಲ್ಲಿದ್ದ ಕಲಹ, ಪಕ್ಕದಲ್ಲೇ ಚಿಮ್ಮುತ್ತ ಹೊರಟ ಜಿಂಕೆಗಳ ಗುಂಪು ನೋಡುವ ಸಂಭ್ರಮದಲ್ಲಿ ಮರೆತು ಹೋದದ್ದು ... ಇದೆಲ್ಲ ಮಂಗಳೆಯ ಗಲ್ಲದಲ್ಲಿ ಹುಸಿನಗುವಿನ ಸುಳಿಗಳನ್ನು ಸೃಜಿಸಿತು. ಓಹ್! ಎಂಥ ಹರ್ಷದ ಕಾಲ! – ಜೊತೆಗೇ ನಾಗಜ್ಜಿ ಹೇಳುತ್ತಿದ್ದ ಸ್ವಾರಸ್ಯವಾದ ಕಥೆಗಳು .... ನಾಗಜ್ಜಿ! ಎಂಥ ಅಪೂರ್ವ ಮುದುಕಿ ಅವಳು! ನಾಗಜ್ಜಿ ಕಳಿತ ಸೀತಾಫಲದಂತೆ .... ಅವಳ ಸ್ಮರಣೆ ಅಷ್ಟು ಸವಿ. ಆ ಮುದುಕಿಯ ಸುಕ್ಕಲು ಮುಖ. ಸದಾ ಕುಚೇಷ್ಟೆ ಮಾಡುವಂತೆ ಹೊಳೆಯುವ ಆ ನಗೆಗಣ್ಣುಗಳು... ಮಂಗಳೆಯ ಆತ್ಮ ಸುಖದಿಂದ ಹಿಗ್ಗಿತು. ಆ ಮುದುಕಿಯ ಪ್ರೇಮದ ಪನ್ನೀರಿನಲ್ಲಿ ತನ್ನ ಮತ್ತು ನಟರಾಜನ ಬಾಳುಗಳು ಒಂದಾಗತೊಡಗಿದವು .... ಅನಂತರ ಆ ಸಾಬಿಹುಸೇನ್! ತನ್ನ ಸ್ವಂತ ಪಿತನಿಗಿಂತಲೂ ಅತಿಶಯವಾಗಿ ಅವನನ್ನು ಪ್ರೀತಿಸುತ್ತಿದ್ದಳು ಮಂಗಳೆ...ಆ ಬಳಿಕ ತಾವು ಬೆಳೆದು ದೊಡ್ಡವರಾದುದು–ಮೈಸೂರಿನ ನಂಜುಂಡಸ್ವಾಮಿ... ಅನಂತ....ಓಹ್ ಎಂಥ ಕಲೆಗಾರ ಆ ಅನಂತ! ತಮ್ಮ ಮನೆತನಗಳಲ್ಲಿ ವಾಸಾಚಾರಿಯ ಹೆಸರುಳಿಸಿದವನು ಅವನೊಬ್ಬನೇ!.... ಆಮೇಲೆ ಚಾಮುಂಡಿ ಬೆಟ್ಟ, ಅಲ್ಲಿ ನಟರಾಜನ ದೇಹಸ್ಪರ್ಶದಿಂದ ತನ್ನಲ್ಲಾದ ಮಾರ್ಪಾಟು... ತಮ್ಮಿಬ್ಬರಲ್ಲೂ ಉದ್ಭವಿಸಿದ ಪ್ರೇಮ....ವಿಶಾಲಿ....ಅಸೂಯೆ. ಮತ್ತು ಅದು ನಟರಾಜನಿಂದ ನಿವೃತ್ತಿಯಾದದ್ದು–ಆನಂದದ ತೆಪ್ಪದಲ್ಲಿ ತಾನು ತೇಲುತ್ತಿದ್ದ ಕಾಲ! .... ಆನಂತರ ನರಸಮ್ಮ! ಅವಳ ಕೃತ್ರಿಮದಿಂದ ನೆರವೇರಿದ ಆ ಮದುವೆ !.... ಸರಾಗವಾಗಿ, ಸುಲಲಿತವಾಗಿ, ಸಾಗುತ್ತಿದ್ದ ತನ್ನ ಬಾಳನೌಕೆಗೆ ನರಸಮ್ಮ ಸುಬ್ಬರಾಯ ಎಂಬ ಸಿಡಿಮದ್ದಿನ ಗುಂಡಿಟ್ಟಳು !!! ಅಂದಿಗೇ ತನ್ನ ಕಥೆ ಮುಗಿಯಿತು, ಅಯ್ಯೋ !!...

ಮಂಗಳೆ ಸಣ್ಣದಾಗಿ ನರಳಿದ್ದು ಸುಬ್ಬರಾಯಿಗೆ ಕನಸಿನಲ್ಲಿ ತನ್ನ ಬಾಳಿನ ಹೊರಗೆ ತನಗೆ ಸಂಬಂಧಿಸಿದ ಯಾವುದೊ ಧ್ವನಿಯಂತೆ ಕೇಳಿತು. ರಾತ್ರಿಯಲ್ಲಿ ಮಂಗಳೆಯ ಶುಶ್ರೂಷೆಯಲ್ಲಿ ನಿದ್ದೆಯಿಲ್ಲದ್ದರಿಂದ ಅಡಿಗಡಿಗೆ ತೂಕಡಿಕೆ ಅವನನ್ನು ಬಾಧಿಸುತ್ತಿತ್ತು.

ಮಂಗಳೆಯ ಚಿತ್ತ ಚಿಂತೆಯಲ್ಲಿ ತೂಗುತ್ತಲೇ ಸಾಗಿತ್ತು .... ಕೊತ್ತೇಗಾಲದಲ್ಲಿ ನರಸಮ್ಮನ ಕಾಟ, ತತ್ಪರಿಣಾಮವಾಗಿ ತಾನು ಅನುಭವಿಸಿದ ಕಠೋರ ಯಾತನೆ.... ನಟರಾಜನಿಗೆ

ತನ್ನಂತೆಯೇ ಆದ ಬಲಾತ್ಕಾರ ವಿವಾಹ. ಅದನ್ನು ಸಹಿಸಲಾರದೇ ಅವನು ದುರ್ಗಿಗೆ ಕೊಡುತ್ತಿದ್ದ ಹಿಂಸೆ. ಅವನ ಕಾಯಿಲೆ. ತಾಯಿ ಪಾರ್ವತಮ್ಮನ ಸಾವು....ಆಸ್ಪತ್ರೆಯಲ್ಲಿ ನಟರಾಜ. ಅಲ್ಲಿ ಅವನ ಕೈ ಹಿಡಿದ ಹೆಂಡತಿಗಿಂತಲೂ ಹೆಚ್ಚಾಗಿ ತಾನು ದುಡಿದು ಸೇವೆ ಸಲ್ಲಿಸಿದುದು...ಹೆಂಡತಿ ! ಲೋಕ ಹಾಗೆನ್ನದಿದ್ದರೂ ತಾನು ಸಹಜವಾಗಿ ನಟರಾಜನ ಹೆಂಡತಿಯೇ !.... ಈ ಭಾವ ಉದಯಿಸಿದಾಗ ಮಂಗಳೆಯ ಮೈಯಲ್ಲಿ ನೆತ್ತರು ಬಿಸಿಯೇರಿತು. ಅವಳ ನಯನಗಳಲ್ಲಿ ಹೊಸ ತೇಜ ಕಾಣಿಸಿಕೊಂಡಿತು.

ಗಾಡಿ ಒಂದು ದಿಬ್ಬವನ್ನು ಏರಿ, ಇಳುಕಿನಲ್ಲಿ ಗಡಲ್-ಗಡಕ್ ಎಂಬ ಪಲ್ಲವಿಹಾಡುತ್ತ ಮೆಲ್ಲನೆ ಸಾಗುತ್ತಿತ್ತು. ಸುಬ್ಬರಾಯಿ ಆರಾಮವಾಗಿ ಒರಗಿಕೊಂಡು ಅರೆತೆರೆದ ಕಣ್ಣುಗಳಿಂದ ಸುತ್ತಿನ ನಿಸರ್ಗವನ್ನು ನೋಡುತ್ತಿದ್ದ, ಹಠಾತ್ತನೆ ಅವನೆದುರಿಗೆ ಗಾಡಿಯ ಮುಂಭಾಗದಲ್ಲೇ ಸುಂಟರಗಾಳಿ ಎಲೆಗಳು ತರಗುಗಳನ್ನು ಮೇಲೆತ್ತಿಕೊಂಡು ಭೀಕರವಾಗಿ ಸುತ್ತತೊಡಗಿತು.

ಮಂಗಳೆಯ ಹೃದಯದಲ್ಲೂ ಪ್ರಚಂಡ ಬಿರುಗಾಳಿ ಎದ್ದಿತ್ತು!... ನಟರಾಜ, ತನ್ನ ನಟರಾಜ ತೀರಿಕೊಂಡ ದೃಶ್ಯ ನೆನಪಾಗಿ ಮಂಗಳೆಯ ಅಂತರಂಗದಲ್ಲಿ ದುಃಖದ ಚಿತೆ ಉರಿಯಲಾರಂಭಿಸಿತ್ತು. ಆ ಬಳಿಕ, ಪುಟ್ಟ ನಟರಾಜನಿಗಾಗಿ ತಾನು ಸಾಯದೆ ಉಳಿದುಕೊಂಡದ್ದು, ಕೊತ್ತೇಗಾಲದಲ್ಲಿ 'ಕೇಡಿಗಿ' ನರಸಮ್ಮ ಮತ್ತು ಸವತಿ ಗಿರಿಜೆಯರ ಕತ್ತರಿಯಲ್ಲಿ ಸಿಲುಕಿ ರೌರವ ನರಕವನ್ನು ಅನುಭವಿಸಿದ್ದು, ನರಳಿ ಕಡೆಗೊಮ್ಮೆ ಮಳೆಯಲ್ಲಿ ನೆನೆದುದೇ ಕಾರಣವಾಗಿ ಜ್ವರ ಕಾಣಿಸಿಕೊಂಡದ್ದು... ಮಂಗಳ ಭಾರವಾಗಿ ನಿಟ್ಟುಸಿರು ಬಿಟ್ಟಳು. ಆ ನಿಶ್ವಾಸದಲ್ಲಿ ಶೋಕಕ್ಕಿಂತ ಮಿಗಿಲಾಗಿ ಸಮಾಧಾನವೇ ಎದ್ದು ಕಾಣುತ್ತಿತ್ತು. ಸಾವು ಅವಳಿಗೀಗ ಅತ್ಯಂತ ಪ್ರಿಯವೆನಿಸಿತು.... ತನಗೆ ಈಗ ಮರಣ ಸಂಭವಿಸಿದರೆ ಎಷ್ಟು ಚೆನ್ನ? ಸ್ವರ್ಗದಲ್ಲಿ ತನಗಾಗಿ ಕಾಯುತ್ತಿರುವ ಪ್ರಿಯತಮ ನಟರಾಜನನ್ನು ಕ್ಷಿಪ್ರದಲ್ಲಿಯೇ ಕೂಡಿಕೊಳ್ಳಬಹುದು ! "ಅಗೊ! ಅಗೊ ! ನಟರಾಜ ನನ್ನನ್ನು ಕರೆಯುತ್ತಿದ್ದಾನೆ.... ಬಂದೆ ಇದೊ ಬಂದೆ ...." ಮಂಗಳೆಯ ದೇಹ ಸುಖದ ಕನಸು ಕಂಡಂತೆ ಒಂದರೆಕ್ಷಣ ವಿಚಿತ್ರವಾಗಿ ಅಲುಗಾಡಿ, ಅನಂತರ ಪೂರ್ಣವಾಗಿ ನಿಶ್ಚೇಷ್ಟಿತವಾಯಿತು.

* * * * *

ಸಣ್ಣದಾಗಿ ಹನಿಯಿಡಲು ಆರಂಭವಾದುದರಿಂದ ಗಾಡಿಯನ್ನು ನಿಲ್ಲಿಸಿ ಸುಬ್ಬರಾಯಿ "ಹಿಂಚೋರೀ ನೆನೀತದ ಮಂಗಳೆ?" ಎಂದನು. ಮಂಗಳೆ ಮಾತಾಡಲಿಲ್ಲ. ದಿಗಿಲಿನಿಂದ ಸುಬ್ಬರಾಯಿ ಒಳಗೆ ಸರಿದು ಮಂಗಳೆಯ ಹಣೆ ಮುಟ್ಟಿ ನೋಡಿದನು. ಜ್ವರದ ತಾಪವಿಲ್ಲದೆ ಈಗ ಹಣೆ ತಣ್ಣಗಾಗಿತ್ತು. ಬಿಕ್ಕಿ ಬಿಕ್ಕಿ ಅಳುತ್ತ "ಓಗಿಬುಟ್ಟೆಯಾ?.... ನನ್ನ ಭಾಗ್ಯದ ಲಕ್ಕಸ್ಮಿ ನನ್ನ ಬುಟ್ಟು ಬುಟ್ಟು ಒಂಟೋಗಿಬುಟ್ಟೆಯಾ" ಎಂದು ಸುತ್ತಲಿನ ಕಾಡೂ ಕರಗುವಂತೆ ಪ್ರಲಾಪಿಸತೊಡಗಿದನು.

ಗಾಡಿ ಹಿಂದೆ ಬಂದಾಗ ಪುಟ್ಟ ನಟರಾಜ ತಮ್ಮ ಮನೆಯ ಮುಂದೆ ಮಣ್ಣಿನಲ್ಲಿ ಒಬ್ಬನೇ ಆಡುತ್ತಿದ್ದನು. ಗಾಡಿಯನ್ನು ಕಂಡೊಡನೆಯೆ "ಓ ! ಗಾಡಿ ಬಂದುಬುಡ್ತು. ಅಮ್ಮ ಬಂದುಬುಟ್ಟಳು" ಎಂದು ಕೇಕೆ ಹಾಕಿ ಕುಣಿಯಲಾರಂಭಿಸಿದನು. ಇಷ್ಟು ಬೇಗ ಗಾಡಿ ಹಿಂತಿರುಗಿತೆಂದು ಕೇಳಿ ಅಚ್ಚರಿಪಡುತ್ತಾ ಮನೆಯಿಂದ ಎಲ್ಲರೂ ಹೊರಗೆ ಬಂದರು. ಸುಬ್ಬರಾಯಿ ಅವರ ಮನೆಯ ಮುಂದೆ ಗಾಡಿ ನಿಲ್ಲಿಸಿ ಒಂದೇ ಸಮನೆ ಕಣ್ಣೀರ್ಗರೆಯುತ್ತಾ ಕುಳಿತಿದ್ದ. ಎಲ್ಲರೂ ಗಾಬರಿಯಾಗಿ ಗಾಡಿಯ ಹಿಂಭಾಗಕ್ಕೆ ಹೋದರು. ದುರ್ಗಿ ಅಳುತ್ತಳುತ್ತ ಗಾಡಿ ಹತ್ತಿ ಹೋಗಿ ಸುಬ್ಬರಾಯಿ ಹೊದಿಸಿದ್ದ ವಸ್ತ್ರವನ್ನು ಮಂಗಳೆಯ ಮುಖದಿಂದ ತೆಗೆದಳು. ಮಂಗಳೆಯ ಮುಖ ನಿದ್ರಿಸುತ್ತಿರುವಳಂತೆ ನಿಶ್ಚಿಂತಭಾವವನ್ನು ತಳೆದಿತ್ತು ....

ಹಿಂದಿನಿಂದ ಪುಟ್ಟ ನಟರಾಜ "ನನ್ನೂ ಗಾಡಿ ಹತ್ತಿಸಿ, ನಾನೂ ಅಮ್ಮನ ಸಂಗಡ ಮಾತಾಡಬೇಕು" ಎನ್ನುತ್ತಲೇ ಇದ್ದನು.

ಸರ್ವಮಂಗಳೆ ಗತಿಸಿ ಹನ್ನೊಂದು ದಿನಗಳಾಗಿವೆ. ಈ ದಿನ ಸುಬ್ಬರಾಯಿ ಮನೆಯಲ್ಲಿ ಪದ್ಧತಿಯಂತೆ ಕಳಶವಿಟ್ಟು, ಅದಕ್ಕೆ ಹೊಸ ಸೀರೆ ಉಡಿಸಿ "ಮುತ್ತೈದೆ ಪೂಜೆ"ಗೆ ಅಣಿಗೊಳಿಸಿದ್ದಾರೆ. ಬಂಧು ಬಳಗವೆಲ್ಲಾ ನೆರೆದಿದೆ. ಮೈಸೂರಿನಿಂದ ನಂಜುಂಡಸ್ವಾಮಿ, ಯಶೋದಮ್ಮನೂ ಬಂದಿದ್ದಾರೆ.

ಕಳಶಪೂಜೆ ಮಾಡುತ್ತಾ "ಮುತ್ತೈದೆಯಾಗೇ ಕಣ್ಣುಮುಚ್ಚಿಕೊಂಡಿತು. ಮಂಗಳಿ...ತುಂಬ ಪುಣ್ಯವಂತೆ" ಎಂದು ಉದ್ಗಾರ ತೆಗೆದಳು ಯಶೋದಮ್ಮ. ಮಂಗಳೆಯ ಗುಣಗಾನ ಎಲ್ಲರ ಬಾಯಿಂದಲೂ ಹೊರಟಿತು. ನರಸಮ್ಮನೂ– "ಜಂಗಳಗಂಟಿ ಆದರೂವೆ ಬೊ ದಾಷ್ಟೀಕ ಯೆಣ್ಣು" ಎಂದು ಮೆಚ್ಚಿದಳು.

ಪುಟ್ಟ ನಟರಾಜ ತಾಯಿಯ ಪಕ್ಕದಲ್ಲಿ ಮೌನವಾಗಿ ನಿಂತಿದ್ದವನು ದುರ್ಗಿಯ ಸೆರಗನ್ನು ಹಿಡಿದು ಜಗ್ಗಿಸುತ್ತಾ "ಅದು ಏನಮ್ಮಾ?" ಎಂದನು. ಹಿತ್ತಾಳೆಯ ಚೆಂಬಿನ ಮೇಲೆ ತೆಂಗಿನಕಾಯಿ ಕೂರಿಸಿದ್ದುದು, ಅದನ್ನು ಎಲ್ಲರೂ ಪೂಜೆ ಮಾಡುತ್ತಿದ್ದುದು, ಅವನ ಪುಟ್ಟ ಮನಸ್ಸಿಗೆ ವಿಸ್ಮಯಕಾರಿಯಾಗಿತ್ತು. ಅವನ ತಲೆ ದಡಹುತ್ತ "ಅದುಃ.... ಅಮ್ಮ ಸತ್ತು ಹೋದಳಲ್ಲ, ಆ ನಿಮ್ಮಮ್ಮ ..." ಎಂದು ಹೇಳುತ್ತಿರುವಂತೆಯೇ ದುರ್ಗಿಯ ಕಣ್ಣು ಒದ್ದೆಯಾಯಿತು.

ಆದರೆ ತಾಯಿಯ ಮಾತು ಪುಟ್ಟ ನಟರಾಜನಿಗೆ ಒಪ್ಪಿಗೆಯಾಗಲಿಲ್ಲ. ಅವನು ಅಸಮ್ಮತಿ ಸೂಚಕವಾಗಿ ತಲೆಯೊಗೆಯುತ್ತ "ಉಹ್ಞು....ಅದೂ–ನಮ್ಮಮ್ಮ ಅಲ್ಲ, ನಮ್ಮಮ್ಮ ಇನ್ನೂ ಚೆಂದಾಗಿದ್ದಲು" ಎಂದು ನಿಷ್ಠುರವಾಗಿ ನುಡಿದು, ಅಲ್ಲಿ ನಿಲ್ಲದೆ ಹೊರಗೆ ಓಡಿಬಿಟ್ಟನು. ಪುಟ್ಟ ನಟರಾಜನ ನುಡಿಗಳು ಸುಬ್ಬರಾಯಿಯ ಕಣ್ಮುಂದೆ ಮಂಗಳೆಯ ಸ್ವರೂಪವನ್ನು ಆ

ಗಳಿಗೆಗೆ ತಂದು ನಿಲ್ಲಿಸಿದವು. ತಾನು ಕಳೆದುಕೊಂಡ ಸೌಭಾಗ್ಯವನ್ನು ನೆನೆ ನೆನೆದು ಅವನ ಕರುಳು ಬಾಧಿಸತೊಡಗಿತು. ಕಣ್ಣೀರು ಎಷ್ಟೇ ಪ್ರಯತ್ನಪಟ್ಟರೂ ನಿಲ್ಲದೆ, ಧಾರೆ ಧಾರೆಯಾಗಿ ಉಕ್ಕಿತು. ಚಿಕ್ಕ ಬಾಲಕನಂತೆ ಬಿಕ್ಕಿ ಬಿಕ್ಕಿ ಅಳುತ್ತಾ ಕುಸಿದು ದೊಪ್ಪನೆ ಕುಳಿತುಬಿಟ್ಟ....

ಊಟದ ವೇಳೆಯಾಗಿತ್ತು. ಎಲ್ಲರೂ ಪ್ರಯಾಸದಿಂದ ದುಃಖ ನುಂಗಿಕೊಳ್ಳುತ್ತ ಹೇಗೋ ಎದ್ದರು. ಆದರೆ ಪುಟ್ಟ ನಟರಾಜನೆಲ್ಲೂ ಕಾಣದಿರಲು ದುರ್ಗಿ ಅವನನ್ನರಸುತ್ತ ಹೊರಟಳು. ಜಗಲಿಯಲ್ಲಿ, ಬೀದಿಯಲ್ಲಿ, ನೆರೆಮನೆಗಳಲ್ಲಿ ಒಂದರಲ್ಲೂ ಅವನ ಸುಳಿವಿಲ್ಲ! ಚಕಿತಗೊಂಡು ದುರ್ಗಿ ಕಡೆಯದಾಗಿ ಕೊಟ್ಟಿಗೆಯನ್ನೂ ನೋಡಿಬಿಡುವದೆಂದು ಅಲ್ಲಿಗೂ ಹೋದಳು. ಅಲ್ಲಿ ಕಂಡ ದೃಶ್ಯ ಅವಳನ್ನು ಅರೆಮೂಕಳನ್ನಾಗಿಸಿತು.... ಪುಟ್ಟ ನಟರಾಜ ಕೊಟ್ಟಿಗೆಯ ಒಂದು ಮೂಲೆಯಲ್ಲಿ ತದೇಕಚಿತ್ತನಾಗಿ ಮಂಡಿಸಿದ್ದಾನೆ. ಅವನ ಮುಂದೆ ಅವನೇ ಮಣ್ಣಿನಲ್ಲಿ ಮಾಡಿದ ಮನುಷ್ಯಾಕೃತಿ ಕುಳಿತಿದೆ!... ದುರ್ಗಿ ಅವಾಕ್ಕಾದಳು. ಆ ಬಾಲ ಮಣ್ಣಿನಲ್ಲಿ ಆಟಕ್ಕಾಗಿ ಆನೆ, ಕುದುರೆ, ಹಸು, ಹಕ್ಕಿಗಳನ್ನು ಮಾಡುತ್ತಿದ್ದುದನ್ನವಳು ಕಂಡಿದ್ದಳು. ಆದರೆ ಮನುಷ್ಯಾಕೃತಿಯನ್ನು ಅವನು ಹಿಂದೆಂದೂ ಮಾಡಿದ್ದಿಲ್ಲ. ದುರ್ಗಿ ಮೆಲ್ಲನೆ ನಟರಾಜನ ಬಳಿ ಸಾರಿ "ಇದು ಯಾರು ಕಂದಾ?" ಎಂದು ಪ್ರಶ್ನಿಸಿದಳು. ಮಂಗಳೆ ಉಡುತ್ತಿದ್ದ ಒಂದು ಸೀರೆಯನ್ನು ಆ ಆಕೃತಿಗೆ ಸುತ್ತಿ, ಅರಸಿನ ಕುಂಕುಮವನ್ನು ಇಟ್ಟು, ಹಿತ್ತಲಿನಿಂದ ತಾನು ಕಿತ್ತು ತಂದ ತುಂಬೆ ಹೂಗಳಿಂದ ಅಲಂಕರಿಸುತ್ತಿದ್ದ ಪುಟ್ಟ ನಟರಾಜ. ಹಾಗೆಯೆ ತಾಯಿಯೆಡೆಗೊಮ್ಮೆ ಓರೆನೋಟ ಬೀರಿ. "ಇದುಃ–ನಮ್ಮಮ್ಮ–" ಎಂದು ಲಲ್ಲೆಗರೆದನು. ತನ್ನ ಮಗನ ಕೃತಿಯನ್ನು ನೋಡಿ ನೋಡಿದಂತೆ ದುರ್ಗಿಯ ಹೃದಯ ಆಶ್ಚರ್ಯದಿಂದಲೂ ಅಭಿಮಾನದಿಂದಲೂ ಅರಳಿತು. ದಪ್ಪ ದಪ್ಪವಾಗಿ ಒರಟೊರಟಾಗಿದ್ದರೂ ಅವನ ಕೃತಿಯಲ್ಲಿ ಮನುಷ್ಯಾಕಾರ ಸ್ಪಷ್ಟವಾಗಿ ಒಡೆದು ಮೂಡಿದಂತಿತ್ತು. ತನ್ನ ಪತಿ ನಟರಾಜ ಆಗಾಗ್ಗೆ ಆಡುತ್ತಿದ್ದ ಮಾತು ಆಗ ಅವಳ ಸ್ಮೃತಿಯಲ್ಲೂ ಸುಳಿಯಿತು; ವಾಸಾಚಾರಿಯ ಕಲೆ ಒಂದೆರಡು ತಲೆಮಾರಿನಲ್ಲಿ ಗುಪ್ತಗಾಮಿಯಾಗಿ ಹರಿದು, ಅನಂತರ ಅನಂತನಲ್ಲಿ ಅರಳಿ, ಪುನಹ ಯಾವುದೋ ರೆಂಬೆಯ ಯಾವುದೋ ಕವಲಾದ ತನ್ನ ಶಿಶುವಿನಲ್ಲಿ ಉದ್ಭವಿಸಿದಂತಿತ್ತು!....

ದುರ್ಗಿ ಶೋಕ ಸಂತಪ್ತಳಾಗಿ ಚಿಂತಿಸಿದಳು;

"ಮಂಗಳಕ್ಕ ಈಗ ಇದ್ದಿದ್ದರೆ?"–

ಅಷ್ಟರಲ್ಲಿ ಮಂಗಳೆಯ ಆಕಾರಕ್ಕೆ ಪುಷ್ಪಾಲಂಕಾರ ಮುಗಿಸಿದ ಬಾಲ, ಅದನ್ನು ತನ್ನ ತಾಯಿಗೆ ತೋರುತ್ತ "ನೋಡು ನಮ್ಮಮ್ಮ ಎಷ್ಟು ಚೆಂದಾಗಿ ಇದ್ದಾಳೆ, ನೀವು ಮಾಡಿದ್ದು ಚೆಂದಾಗೇ ಇರಲಿಲ್ಲ" ಎಂದು ಚಪ್ಪಾಳೆ ತಟ್ಟಿ ನಗಲಾರಂಭಿಸಿದ.

❑

ಗ್ರಾಮ್ಯ ಪದಗಳ ವಿವರಣೆ

ಅಟ : ಹಟ
ಅಡುತ್ತಾ : ಅಡಿಗೆ ಮಾಡುತ್ತಾ
ಅತ್ತಿ : ಹತ್ತಿ
ಅಪೇಕ್ಸೆ : ಅಪೇಕ್ಷೆ
ಆಟು : ಅಷ್ಟು, ಹಾಗೆ
ಆಯಕ್ಕಿಲ್ಲ : ಆಗುವುದಿಲ್ಲ
ಆಯಾರ : ಆಹಾರ
ಇಂಕರನಾರೂ : ಸ್ವಲ್ಪವಾದರೂ
ಇದಕೊಪ್ಪನಾರಿ : ಇದಕೊಪ್ಪಲಾರೆ
ಇಸ : ವಿಷ
ಇಸ್ಮಯ : ವಿಸ್ಮಯ, ಆಶ್ಚರ್ಯ
ಇರಾಗಂಟ : ಇರುವವರೆಗೆ
ಈಪಾಟಿ : ಇಷ್ಟೊಂದು
ಈಸಾಲಿದುಳೀತದ : ಈ ಸಲದ್ದು ಉಳಿಯುತ್ತದೆ.
ಈಳೇದೆಲೆ : ವೀಳೆಯದಲೆ
ಉಚ್ಚು : ಹುಚ್ಚು
ಉಡಿ : ತಿರುವು
ಉಸಾರು : ಹುಶಾರು
ಎಂಗಾಗದೆ? : ಹೇಗಾಗಿದೆ?
ಏಟು : ಎಷ್ಟು
ಐಕಳು, (ಹೈಕಳು) : ಹುಡುಗರು
ಒಂದಿಸಿಯಾ : ಒಂದು ವಿಷಯ
ಒಳ್ಳಿ : ಒಳ್ಳೆಯ
ಓಟೇಯಾ? : ಅಷ್ಟೇಯೇನು?
ಕಡಿಕಾದ್ರೂ : ಕಡೆಗಾದರೂ
ಕುಚಾಷ್ಟ್ಯ : ಕುಚೇಷ್ಟೆ
ಕುಟ್ಟೆ : ಒಡನೆ, ಕೂಟ, ಸಂಗಡ
ಕುಂದರಿಸಿಬುಟ್ಟು : ಕೂರಿಸಿಬಿಟ್ಟು
ಕೇಮೆ : ಗೆಯ್ಮೆ, ಕೆಲಸ
ಕೊನೇಯ : ಕೊನೆಯನ್ನು, ಶಿಶುವನ್ನು
ಕ್ಯಾಳಿದ್ರೀ : ಕೇಳಿದಿರೇನು?
ಕ್ವಾಪ : ಕೋಪ
ಗೆಪ್ತೀಲಿ : ಜ್ಞಾಪಕದಲ್ಲಿ
ಗೇರುಕೊಮ್ಮೆ : ಬಿದಿರುಕುಕ್ಕೆಗೆ ಗೇರು ಬಳಿದಿರುವುದು
ಚೋಜಿಗ : ಸೋಜಿಗ
ಚೋರೀಕೆ : ಕಡೆಗೆ
ಚೌರಿಗೆ : ಬಿಂದಿಗೆ
ಜರೆದು ಹೋಗಿದ್ದ : ಇಳಿದುಹೋಗಿದ್ದ
ಜಿನ : ದಿನ
ಜ್ವಾಕೆ : ಜೋಪಾನ
ತಗನ್ನಿ : ತೆಗೆದುಕೊಳ್ಳಿ
ತರ್ದೂದಾಗೆ : ಆತುರವಾಗಿ
ತಡಕನ್ನಿ ಸಟೀಗೆ : ತಡೆದುಕೊಳ್ಳಿ ಸ್ವಲ್ಪ
ತಾನ : ಸ್ನಾನ
ತಾವು : ಸ್ಥಳ
ತೃಷ್ಣೆ : ಸೃಷ್ಟಿ
ತೀರನ್‌ದೇಯ : ತೀರಿನದೇ, ರೀತಿಯದೆ
ಕಿತ್ತುಮಿಣಿ : ಒಬ್ಬರಿಗೊಬ್ಬರಿಗೆ ತಂದು ಹಾಕುವುದು

ದಾಕ್ತಾರು : ಡಾಕ್ಟರು
ದ್ಯಾವರು : ದೇವರು
ದ್ರಿಷ್ಟಿ : ದೃಷ್ಟಿ
ನಿಸ್ಸಕ್ತಿ : ನಿಶ್ಶಕ್ತಿ
ನಿರಿಕ್ಷ್ಣೆ : ನಿರೀಕ್ಷಣೆ
ನೆಪ್ಪು : ನೆನಪು
ಪಸಕ್ಕನೆ : ಬೇಗ, ಜಾಗ್ರತೆ
ಪರ್ಸಂಗ : ಕಥೆ, ಪ್ರಸಂಗ
ಪಕ್ಕಸಿ : ಪಕ್ಷಿ
ಪರ್ದಾನ : ಪ್ರಧಾನ
ಪಾವುಡೆ : ಬಟ್ಟೆ
ಪ್ರಾತ್ನೆ : ಪ್ರಾರ್ಥನೆ
ಬಳಸುವುದು : ನೋಡಿಕೊಳ್ಳುವುದು
ಬಾವಣಿಸು : ಗೌರವಿಸು
ಬಿರಬಿರನೆ : ಬೇಗ ಬೇಗ
ಬೊಸರು : ಬಸಿರು
ಮರ್ವಾದೆ : ಮರ್ಯಾದೆ
ಮದ್ದಿನದಿಂದ : (ಮಜ್ಜಿನದಿಂದ)
ಮಧ್ಯಾಹ್ನದಿಂದ
ಮಂತೆ : ಮತ್ತೆ
ಮೀಣ : ಅಭ್ಯಂಜನ ಸ್ನಾನ
ಮುಂಚೋರಿ : ಮುಂದುಗಡೆ
ಮೊಗೀನ : ಮಗುವಿನ
ಮ್ಯಾಗೆ : ಮೇಲೆ
ತ್ರವಿಸಿಕಂಡಿದ್ದೆ : ತಪಸ್ಸು ಮಾಡುತ್ತಿದ್ದೆ
ಮಾರ್ವೆ : ಮೋರೆ, ಮುಖ
ಯಾನಂದ್ಲು : ಏನೆಂದಳು?
ಯಾಪಾರ : ವ್ಯಾಪಾರ
ಯೇಳಿ : ಏಳಿ
ರಬ್ಬಗಾಲೆ : ರಂಪು
ವೈನಾಗಿ : ಚೆನ್ನಾಗಿ
ಶೆರೀಕತ್ತು : ನೆರವು, ಸಹಾಯ
ಸತುವಾ, ಸಕುತಿ : ಶಕ್ತಿ
ಸಂದಾಕಿ : ಚೆನ್ನಾಗಿ
ಸಾಯ : ಸಹಾಯ
ಸಾಪಳ : ಶಾಪ
ಸಿವನೆ : ಶಿವನೆ
ಸುಸ್ರೂಸೆ : ಶುಶ್ರೂಷೆ
ಸೂರೋದದ್ದು : ಆಗಿಹೋದದ್ದು
ಸ್ವಸ್ತಾಗಿ : ಸ್ವಸ್ಥವಾಗಿ
ಸ್ಯಾಲೆ : ಸೀರೆ
ಹಳ್ಳು : ಅರಳು
ಹರಿದು ಹತ್ತಿಸಿಕೊಂಡು : ತದ್ರೂಪು ಕಿತ್ತು ಅಂಟಿಸಿಕೊಂಡಂತೆ
ಹ್ಯಾಳಾದು : ಹೇಳುವುದು
ಹಿಂಗತ್ತೀ? : ಹೀಗೆ ಅಳುತ್ತೀಯೆ?
ಹಿಗ್ಗಿಲ್ವಾ? : ಕುಡಿದಿಲ್ವಾ?
ಹೆಡತಿ : ಹೆಂಡತಿ

ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮